
ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೧ - ಭಾಗ ೨



ಗುರುಗೋವಿಂದವಿಠಲದಾಸರ ಕೀರ್ತನೆಗಳು

ಭಾಗ ೨

ಸಮಗ್ರ ದಾಸಸಾಹಿತ್ಯ

ಸಂಪುಟ : ೩೧-ಭಾಗ ೨

ಶ್ರೀಗುರುಗೋವಿಂದ ವಿಠಲದಾಸರ ಕೀರ್ತನೆಗಳು

ಸಂಪಾದಕರು :

ವರಾಹ ಹರಿವಿಠಲದಾಸರು

(ಕೆ.ಎಸ್. ವೆಂಕಟೇಶ್)

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA VOLUME - 31 Part 2 :
Shree Gurugovinda Vitaladasara Keertanegalu Edited by Varaha Harivittaladasaru, K.S. Venkatesh and published by Sri. Y.K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 83 + ೪೭೩

ಪ್ರಥಮ ಮುದ್ರಣ : ೨೦೦೩
ಪ್ರತಿಗಳು : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಂ ರಸ್ತೆ
ಬೆಂಗಳೂರು – ೫೬೦ ೦೫೨

ಮುದ್ರಕರು :
ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು ; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿಡಿ ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ, ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿಡಿ ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮುವ್ವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು), ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ಸುಬ್ರಮಣ್ಯಂ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ ಪಾಮರರನ್ನು ಏಕ ಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಓದಲಾರದ ಕನ್ನಡ ಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ–ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ), ನಾಲ್ಕುನೂರಕ್ಕೂ ಮಿಕ್ಕಿದ ದಾಸರ ಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ' ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯವು ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿದ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರ ಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದು ಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದ ವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದು, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು*, ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿ ಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿ ಕೊಡಬೇಕು – ಎಂಬುದಾಗಿ ನಿರ್ಧರಿಸಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ ಎಂದು ಘೋಷಿಸಿದರು. ಅದರಂತೆ ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಶ್ರೀ ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿದೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಶ್ರೀಗುರುಗೋವಿಂದವಿಠಲದಾಸರು

ಸಂಕ್ಷಿಪ್ತ ಜೀವನ ಚರಿತ್ರೆ

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ॥

ಪರಮಾತ್ಮ ತ್ರಿಯುಗಮೂತಿ ಎಂದು ಪ್ರಸಿದ್ಧನಾದವನು. ಕೃತ ತ್ರೇತಾ ದ್ವಾಪರ ಯುಗಗಳಲ್ಲಿ ಮಾತ್ರ ತನ್ನ ಅವತಾರ ಎಂದವನು. ಕಲಿಯುಗದಲ್ಲಿ ಇರುವ ಅಲ್ಪ ಸ್ವಲ್ಪ ಸಜ್ಜನರ ಉದ್ಧಾರಕ್ಕಾಗಿ ತನ್ನ ಪರಿವಾರ ದೇವತೆಗಳಿಗೆ ಭುವಿಯಲ್ಲಿ ಅವತರಿಸುವಂತೆ ಆಜ್ಞೆ ಮಾಡಿದ. ಅಂತೆಯೇ ವಾಯುದೇವರ ಅಂಶ ಸಂಭೂತರಾಗಿ ಶ್ರೀಮಧ್ವಾಚಾರ್ಯರು, ಇಂದ್ರಾಂಶ ಸಂಭೂತರಾಗಿ ಜಯತೀರ್ಥರು ಧೃವಾಂಶ ಸಂಭೂತರಾಗಿ ಶ್ರೀಪಾದರಾಜರು ಪ್ರಹ್ಲಾದಾಂಶ ಸಂಭೂತರಾಗಿ ಶ್ರೀವ್ಯಾಸರಾಜರು ಲಾತವ್ಯಾಂಶ ಸಂಭೂತರಾಗಿ ಶ್ರೀವಾದಿರಾಜರು ಧಾರುಣಿಯ ಮೇಲೆ ಅವತರಿಸಿ ವೇದ ವಾಙ್ಮಯವೆನಿಸಿದ ವೇದವ್ಯಾಸರ ಬ್ರಹ್ಮಸೂತ್ರಗಳಿಗೆ, ಪುರಾಣಗಳಿಗೆ ಭಾಷ್ಯ ಟೀಕೆ ಟಿಪ್ಪಣಿಗಳನ್ನು ರಚಿಸಿ ವ್ಯಾಸವಾಙ್ಮಯದ ಗ್ರಂಥರತ್ನಗಳನ್ನು ಸಾಹಿತ್ಯ ಸರಸ್ವತಿಯ ಸಿರಿಮುಡಿಗೆ ಮುಡಿಸಿದರು. ಆದರೆ ಇವೆಲ್ಲವೂ ಸಂಸ್ಕೃತ ಭಾಷೆಯಲ್ಲಿದ್ದು ಪಂಡಿತರಿಗಷ್ಟೇ ನಿಲುಕುವಂತಿದ್ದು ಪಾಮರರಿಗೆ ಗಗನ ಕುಸುಮವಾಗಿತ್ತು. ಅದಕ್ಕಾಗಿ ಅಪ್ರಾಕೃತ ರೂಪಿಯಾದ ಪರಮಾತ್ಮನನ್ನು ಪ್ರಾಕೃತ ಭಾಷೆಯಲ್ಲಿ ಸ್ತುತಿಸಿ ಕೊಂಡಾಡಿ ತತ್ವಜ್ಞಾನವನ್ನು ದೊರಕಿಸಲು, ನಾರದಾಂಶ ಸಂಭೂತರಾದ ಶ್ರೀಪುರಂದರ ದಾಸರು ಧಾರುಣಿಯ ಮೇಲೆ ಅವತರಿಸಿದರು. ನಾರಾಯಣನೆಂಬ ನಾಮದ ಬೀಜವ ನಾರದ ಬಿತ್ತಿದ ಧರೆಯೊಳಗೆ. ಯಮಧರ್ಮ ಅಂಶ ಸಂಭೂತರಾಗಿ ಕನಕದಾಸರು ಅವತರಿಸಿ ಗ್ರಾಮ್ಯ ಭಾಷೆಯಲ್ಲೂ ತತ್ವಜ್ಞಾನದ ಮುತ್ತುಗಳನ್ನು ತಿಳಿಸಿದರು. ದೇವಾಲಯದಲ್ಲಿ ಪ್ರತಿಷ್ಠಾಪಿಸಿರುವ ಮೂಲ ಮೂರುತಿ ವ್ಯಾಸ ಸಾಹಿತ್ಯವಾದರೆ ಜನರ ನಾಲಿಗೆಯ

ಮೇಲೆ ನಲಿದಾಡುವ ಉತ್ಸವಮೂರುತಿ ದಾಸಸಾಹಿತ್ಯವಾಯಿತು. ರಾಮಾಯಣ, ಮಹಾಭಾರತ, ಭಾಗವತ ಗ್ರಂಥಗಳೆಲ್ಲಾ ಹರಿದಾಸರ ಕೀರ್ತನೆಗಳಲ್ಲಿ ತೇಲಿ ಬಂದವು. ನೀತಿಬೋಧಕ ಪದಗಳು, ಮುಂಡಿಗೆಗಳು, ನಿಂದಾಸ್ತುತಿಗಳು ಹೀಗೆ ತನ್ನ ವ್ಯಾಪ್ತಿಯನ್ನು ವಿಸ್ತಾರಗೊಳಿಸಿದ ಸಾಹಿತ್ಯ ಹರಿದಾಸ ಸಾಹಿತ್ಯ. ಅಲ್ಲದೆ ಕನ್ನಡದಲ್ಲಿ ಬಂದ ಅನೇಕ ಕೀರ್ತನೆಗಳು ಗ್ರಂಥಗಳೆನಿಸಿದವು. ಶ್ರೀ ಶ್ರೀಪಾದರಾಜರ ಲಕ್ಷ್ಮೀನರಸಿಂಹ ದಂಡಕ ಹಳೆಗನ್ನಡ ಶೈಲಿಯಲ್ಲಿದ್ದು ಆಳ್ವಾರರ ಪ್ರಬಂಧಗಳನ್ನು ಹೋಲುವಂತಿದೆ. ಭ್ರಮರಗೀತೆ ವೇಣುಗೀತೆ, ವಾದಿರಾಜರ ವೈಕುಂಠ ವರ್ಣನೆ, ಗುಂಡಕ್ರಿಯೆ, ಲಕ್ಷ್ಮೀ ಶೋಭಾನೆ, ಹರಿ ಸರ್ವೋತ್ತಮಸಾರ, ಸ್ವಪ್ನಪದ, ಕನಕದಾಸರ ಹರಿಭಕ್ತಿಸಾರ, ಮೋಹನ ತರಂಗಿಣಿ, ನಳ ದಮಯಂತಿ ಚರಿತ್ರೆ, ಜಗನ್ನಾಥದಾಸರ ಶ್ರೀಮದ್ಧರಿಕಥಾಮೃತ ಸಾರ, ಉದ್ಗ್ರಂಥಗಳಾದವು.

ಇಂತಹ ಸಾಹಿತ್ಯಕ್ಕೆ ಮೂಲ ಪ್ರೇರಕ ಶಕ್ತಿ ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರ ದ್ವಾದಶಸ್ತೋತ್ರ. ನರಹರಿ ತೀರ್ಥರ ಕಾಲದಲ್ಲಿ ಸುಪ್ತವಾಗಿದ್ದ ಈ ಸಾಹಿತ್ಯಕ್ಕೆ ಒಂದು ಆಯಾಮ ನೀಡಿ ಶ್ರೀಕಾರ ಹಾಕಿದವರು ಶ್ರೀ ಶ್ರೀಪಾದರಾಜರು. ಸಂಸ್ಥಾನ ಪೂಜೆಯ ಕಾಲದಲ್ಲಿ ಕನ್ನಡ ಕೀರ್ತನೆಗಳನ್ನು ಹಾಡಿ ನರ್ತನ ಗೈದು ಪರಮಾತ್ಮ ಜ್ಞಾನ ಗಮ್ಯನೇ ಹೊರತು ಭಾಷಾ ಗಮ್ಯನಲ್ಲ ಎಂಬುದನ್ನು ಅರುಹಿದವರು. ತಮ್ಮ ಉಪಾಸ್ಯ ಮೂರುತಿ ಗೋಪಿನಾಥ ಮುದ್ರಿಕೆಯಿಂದ ಕೆಲವು ದೇವರನಾಮ ರಚಿಸಿದ್ದಾರಾದರೂ ನಂತರ ರಂಗವಿಠಲ ಅಂಕಿತದಲ್ಲಿ ಹಾಡಿರುವ ಹಾಡುಗಳು ಜನಪ್ರಿಯವಾಗಿವೆ. ಈ ಪದ್ಧತಿ ವ್ಯಾಸರಾಜರ ಕಾಲದಲ್ಲಿ ದಾಸಕೂಟವಾಗಿ ಮಾರ್ಪಟ್ಟಿತು. ವ್ಯಾಸರಾಯರು ಶ್ರೀಕೃಷ್ಣ ಎಂಬ ಅಂಕಿತದಲ್ಲಿ ದೇವರ ನಾಮ ರಚಿಸಿದವರಾದರೆ ಶ್ರೀವಾದಿರಾಜರು ಹಯವದನ ಮುದ್ರಿಕೆಯಿಂದ ತಮ್ಮ ಕೃತಿಗಳನ್ನು ಶ್ರೀಹರಿಗೆ ಅರ್ಪಿಸಿದ್ದಾರೆ. ವ್ಯಾಸರಾಜರು ಶ್ರೀ ಶ್ರೀನಿವಾಸ ನಾಯಕರಿಗೆ ಪುರಂದರ ವಿಠಲ ಎಂಬ ಅಂಕಿತ ನೀಡುವ ಮೂಲಕ ದಾಸಕೂಟದ ಉದ್ಘಾಟನೆಯನ್ನೇ ಮಾಡಿದರು.

ಅಂಕಿತವನ್ನು ತೆಗೆದುಕೊಳ್ಳುವುದು ಒಂದು ಸಂಪ್ರದಾಯದ ಪರಿಪಾಠ. ಯತ್ಯಾಶ್ರಮ ನೀಡುವಾಗ ಗುರುಗಳು ಶಿಷ್ಯರಿಗೆ ಮತ್ತೊಂದು ನಾಮಕರಣ ಮಾಡಿದಂತೆ ದಾಸ ದೀಕ್ಷೆ ಕೊಡುವಾಗ ಗುರುಗಳು ಶಿಷ್ಯನ ಉದ್ಧಾರಕ್ಕಾಗಿ ಪ್ರಾರ್ಥಿಸುವ ದೇವರ ನಾಮವೇ ಅಂಕಿತನಾಮ ಎನಿಸುತ್ತದೆ. ಸಾಮಾನ್ಯವಾಗಿ ವಿಠ್ಠಲ ಎಂಬ ನಾಮ ಕೊನೆಗೆ ಸೇರಿರುತ್ತದೆ. ಕಾಲಿಗೆ ಗೆಜ್ಜೆಕಟ್ಟಿ, ಕೈಯಲ್ಲಿ

ತಂಬೂರಿ ಪಿಡಿದು, ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡು ಚಿಟಿಕೆಯನ್ನು ಅಥವಾ ತಾಳವನ್ನು ಬಾರಿಸುತ್ತಾ ಬಿಳಿಯ ವಸ್ತ್ರ ಉಟ್ಟು ಕಾವಿವಸ್ತ್ರ ತಲೆಗೆ ಸುತ್ತಿ ಭಗವಂತನ ಗುಣಗಾನ ಮಾಡುತ್ತಾ ಲೋಕದ ಜನರ ಡೊಂಕುಗಳನ್ನು ತಿದ್ದುವವರು ನಿಜವಾದ ಹರಿದಾಸರು. ನಮ್ಮ ಶರೀರದ ಎಲ್ಲ ಅಂಗಗಳೂ ಭಗವಂತನ ಸೇವೆಗಾಗಿ ಆಗಬೇಕು ಎಂಬುದು ಇದರ ಭಾವ. ಬಿಳಿಯ ವಸ್ತ್ರ ಉಡುವುದು, ಕಾವಿವಸ್ತ್ರದ ಪೇಟ, ಕಾವಿ ವೈರಾಗ್ಯದ ಸಂಕೇತ. ವಿಷಯಾ ಸಕ್ತನಾಗದೆ ಅವುಗಳಲ್ಲಿ ವೈರಾಗ್ಯವನ್ನು ತಾಳಿ ಭಗವಂತನಲ್ಲಿ ಭಕ್ತಿ ಮಾಡಬೇಕು. ಕಾರಣ ಸಂಸಾರದಲ್ಲಿದ್ದು ಕಂಸಾರಿಯನ್ನು ಕಾಣಲು ಯತ್ನಿಸುತ್ತಿರುವವನೀತ, ನರಲೋಕದ ಚಿಂತೆ ಬಿಟ್ಟು ನರಸಿಂಹನನ್ನು ಚಿಂತಿಸುವವನಾಗಬೇಕು. ಅನ್ನಪಾನಗಳಿಗವಸರಿಸದೆ ಅನ್ನಬ್ರಹ್ಮನನ್ನು ಕಾಣಲು ಯತ್ನಿಸಬೇಕು. ಇಂದು ನಾಳೆಗೆಯೆಂಬ ಯೋಚನೆ ಬಿಟ್ಟು, ಇಂದಿರೇಶನ ವ್ಯಾಪಾರವನ್ನು ನೆನೆಯಬೇಕು. ಮೂಕರಂತೆ, ಬಧಿರರಂತೆ ಇದ್ದು, ಕಾಕು ಯುಕುತಿಗಳನ್ನು ಮನಸ್ಸಿಗೆ ತಾರದೆ, ಭಗವಂತನಿಗೆ ಅರ್ಪಿತವಾಗದಿದ್ದುದನ್ನು ಎಂದೂ ಸ್ವೀಕರಿಸದೆ, ಇರುವವರು ಹರಿದಾಸರು. ಸ್ವಧರ್ಮನಿರತರಾಗಿ, ಕಂಡ ಕಂಡಲ್ಲಿ ವಿಶ್ವರೂಪವನ್ನು ಕಂಡು, ಉಂಡು ಉಟ್ಟಿದ್ದೆಲ್ಲಾ ಯಜ್ಞವೆಂದು ಅನುಸಂಧಾನ ಮಾಡಿಕೊಂಡು, ಭಗವಂತನ ಕಥೆಯಲ್ಲಿ ಮೈಮರೆತು ನಗುತ್ತಾ, ನಲಿಯುತ್ತಾ ಆನಂದ ಪರವಶರಾಗುವವರು ಹರಿದಾಸರು. ಲಜ್ಜೆಯನ್ನು ಬಿಟ್ಟು ಗೆಜ್ಜೆಯನ್ನು ಕಟ್ಟಿ ಮೂರ್ಜಗದೊಡೆಯನನ್ನು ಹೆಜ್ಜೆ ಹೆಜ್ಜೆಗೆ ಸ್ಮರಣೆ ಮಾಡುವವರು ಹರಿದಾಸರು. "ವೇದಶಾಸ್ತ್ರಗಳ ಮೋದದಿಂದೋದದೆ ಬಾದರಾಯಣ ಕೃತ ಭಾಗವತ ಕೇಳದಲೆ ಹ್ಯಾಂಗೆ ನೀ ದಾಸನಾದೆ" ಎಂದು ಕನಕದಾಸರು ಪ್ರಶ್ನಿಸುತ್ತಾರೆ. ಅಂದರೆ ದಾಸನಾಗಲು ಇದು ಅತ್ಯಂತ ಪ್ರಮುಖ ಅರ್ಹತೆ ಎಂದು ಅರಿವಾಗುತ್ತದೆ.

"ಮಾರಿಯ ಕೈಯಿಂದ ನೀರ ಹೊರಿಸುವರು
ಮಸಣಿಯ ಕೈಯಿಂದ ಕಸವ ಬಳಿಸುವರು
ಮೃತ್ಯುವಿನ ಕೈಯಿಂದ ಬತ್ತವ ಕುಟ್ಟಿಸುವರು"

ಇಂತಹ ನರಹರಿಯನ್ನು ನಂಬಿದ ಹರಿದಾಸರಿಗೆ ಎಂದೂ ಅಪಜಯವಿಲ್ಲ 'ದಾಸನಾಗಲುಬೇಕು ಏಸು ಜನ್ಮದ ಪುಣ್ಯ' ಎಂದು ಪುರಂದರದಾಸರು ಉದ್ಗಾರ ತೆಗೆದಿದ್ದಾರೆ.

"ದಾಸರೊಡನೆ ಆಡದವನ
ದಾಸರೊಡನೆ ಪಾಡದವನ ಹರಿ"
ದಾಸನಾಗದವನ ಜನ್ಮ ವ್ಯರ್ಥವಲ್ಲವೇ,

ಎಂದು ದಾಸರು ಹರಿದಾಸನಾಗು ಎಂದು ಮಾರ್ಮಿಕವಾಗಿ ತಿಳಿಸುತ್ತಾರೆ. "ದಾಸನ ಮಾಡಿಕೊ ಎನ್ನ ಸ್ವಾಮಿ ಸಾಸಿರ ನಾಮದ ವೆಂಕಟರಮಣ" ಎಂದು ಬೇಡುತ್ತಾರೆ.

ಶ್ರೀಹರಿ ಸರ್ವೋತ್ತಮ ವಾಯು ಜೀವೋತ್ತಮ ತಾರತಮ್ಯ ಪಂಚಭೇದ ಎಲ್ಲ ಪ್ರಮೇಯಗಳನ್ನು ಪುಂಖಾನುಪುಂಖವಾಗಿ ತಿಳಿಸುವವರು ಹರಿದಾಸರು. ನೀತಿ ಬೋಧನೆಯನ್ನೂ ಸಹ ದಾಸರು ಮಾಡಿದ್ದಾರೆ. ಅದಕ್ಕೆಂದೇ ಆಡುಮುಟ್ಟದ ಸೊಪ್ಪಿಲ್ಲ ದಾಸರು ಹಾಡದ ವಿಷಯವಿಲ್ಲ ಎಂಬ ನಾಣ್ನುಡಿ ಅರ್ಥವತ್ತಾಗಿದೆ.

ಇಂತಹ ಹರಿದಾಸರ ಪರಂಪರೆ ವಿಧ್ಯುಕ್ತವಾಗಿ ಶ್ರೀಪುರಂದರ ದಾಸರಿಂದ ಮುಂದುವರಿಯಿತು. ಮೊದಲಿಗೆ ನವಕೋಟಿ ನಾರಾಯಣನೆಂದು ಶ್ರೀಮಂತ ಕುಟುಂಬದಲ್ಲಿ ಬಂದವರು ನಂತರದ ದಿನಗಳಲ್ಲಿ ದಾಸರಾಗಿ ವ್ಯಾಸ ತೀರ್ಥರ ಶಿಷ್ಯರಾಗಿ ನಿಂತವರು. ಇವರ ಸಮಕಾಲೀನರಾಗಿ ಶ್ರೀಹರಿಯಿಂದಲೇ ದಾಸನಾಗು ದಾಸನಾಗು ಎಂಬ ಆದೇಶ ಪಡೆದು ದಾಸರಾದವರೇ ಕನಕದಾಸರು. ಜಲಜನಾಭನ ಭಜಿಸಲು ಕುಲವು ಪ್ರಾಧಾನ್ಯವಲ್ಲವೆಂದು, ಗ್ರಾಮ್ಯ ಭಾಷೆಯಲ್ಲಿ ನೀತಿ ಬೋಧೆ ಮಾಡಿ, ಮಡಿ ಮಾಡುವ ಬಗೆ ತಿಳಿಸಿ ಹರಿಭಕ್ತಿಸಾರವನ್ನು ಅರುಹಿದವರು. ಬೇಲೂರು ಕ್ಷೇತ್ರ ನಿವಾಸಿ ರಾಮಾನುಜೀಯ ಪಂಥದ ವೈಕುಂಠದಾಸರು ಚೆನ್ನಕೇಶವನನ್ನು ಚೆನ್ನಾಗಿ ಆಡಿಸಿದವರು. ಇಲ್ಲಿಗೆ ಹರಿದಾಸರ ಪರಂಪರೆಯ ಮೊದಲನೆಯ ಘಟ್ಟ ಮುಗಿಯುತ್ತದೆ. ನಂತರದ ನೂರು ವರುಷಗಳ ಮೇಲೆ ಬಂದ ಬಾಗಲಕೋಟೆಯ ಸಮೀಪದ ಕಾಖಂಡಕಿ ಗ್ರಾಮದ ವೆಂಕಪ್ಪ, ಪ್ರಸನ್ನ ವೆಂಕಟದಾಸರು, ಎಂದು ಪ್ರಖ್ಯಾತರಾದರು. ವೆಂಕಟೇಶನೆ ಇವರ ನಾಲಗೆಯಲ್ಲಿ ಪ್ರಸನ್ನ ವೆಂಕಟ ಎಂದು ಬರೆದ, ಅಂದೇ ಇವರಿಗೆ ಅಪರೋಕ್ಷ ಜ್ಞಾನವಾಯಿತು.

ಕ್ರಿ.ಶ. ೧೬೮೨ ರಲ್ಲಿ ಚೀಕಲ ಪರಿವಿಯಲ್ಲಿ ಜನ್ಮ ತಾಳಿ ಬಂದ ಮಹಾನು ಭಾವರೇ ವಿಜಯದಾಸರು. ಇವರು ಅಜ್ಞಾನ ತಿಮಿರ ಛೇದಕರು, ಬುದ್ಧಿ ಸಂಪತ್ಪ್ರದಾಯಕರು. ಇವರ ದರ್ಶನ, ಸ್ಪರ್ಶನ, ಸಂಭಾಷಣೆಗಳಿಂದ ಉದ್ಧೃತ ರಾದ ಹಲವಾರು ಮಂದಿ ಅಪರೋಕ್ಷ ಜ್ಞಾನಿಗಳ ಸರಮಾಲೆಯಲ್ಲಿ ಸೇರಿದವ

ರಾದರು. ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು, ಶ್ರೀಮೋಹನದಾಸರು, ಹೆಳವನ ಕಟ್ಟೆ ಗಿರಿಯಮ್ಮ, ವಾಸುದೇವವಿಠಲದಾಸರು, ಪ್ರಾಣೇಶವಿಠಲರು, ಶ್ರೀದವಿಠಲದಾಸರು, ಶ್ರೀಶವಿಠಲದಾಸರು ಹೀಗೆ ದಾಸವೃಕ್ಷದ ವಿವಿಧ ಕೊಂಬೆಗಳು ಚಿಗುರಿದವು, ಹೂವರಳಿ ಕಾಯಾಗಿ ಹಣ್ಣು ದೊರೆತವು.

ಇಂತಹ ಶ್ರೇಷ್ಠವಾದ ಹರಿದಾಸ ಪರಂಪರೆಯಲ್ಲಿ ಬಂದು ತಮ್ಮ ಅಪಾರ ಗ್ರಂಥ ಸಮುದಾಯದಿಂದ ಸಾಹಿತ್ಯ ಸರಸ್ವತಿಯ ಆರಾಧನೆಯನ್ನು ಮಾಡಿ ತಮ್ಮ ಬಾಳನ್ನು ಬೆಳಗಿಸಿಕೊಂಡು ಪ್ರಾತಃಸ್ಮರಣೀಯರಾದವರು ಶ್ರೀಗುರುಗೋವಿಂದ ವಿಠಲದಾಸರು. ಅಂದು ಶ್ರೀವಿಜಯದಾಸರು ಶ್ರೀಗೋಪಾಲದಾಸರು ಶ್ರೀಜಗನ್ನಾಥದಾಸರು ಮಾಡಿದ ಸಮಾಜೋದ್ಧಾರದ ಕಾರ್ಯವನ್ನು ೨೦ನೇ ಶತಮಾನದ ಈ ರಾಕ್ಷಸೀ ಯುಗದಲ್ಲಿ ಕಲಿಯ ಪ್ರಭಾವದ ಈ ಅಧರ್ಮ, ರಾಜಕೀಯ ಜಂಜಾಟ ; ಸಂಸಾರ ತಾಪತ್ರಯಗಳು ; ಇಂತಹ ಪರಿಸರದಲ್ಲೂ ಜನರ ಮನಸ್ಸನ್ನು ಭಗವಂತನೆಡೆಗೆ ತಿರುಗಿಸಿದವರು. ತಾವು ಉದ್ಧಾರವಾಗುವುದಲ್ಲದೆ ಸುಮಾರು ೨೫೭ ಜನರಿಗೆ ಅಂಕಿತೋಪದೇಶ ಮಾಡಿ ದಾಸಕೂಟ ಪರಂಪರೆ ಅವಿಚ್ಛಿನ್ನವಾಗಿ ಮುಂದುವರೆಯುವಂತೆ ಮಾಡಿರುವವರು. ಮನೆಯಲ್ಲೆ ವಿಠಲನನ್ನು ಸ್ಥಾಪಿಸಿ ಮಂದಿರವನ್ನಾಗಿಸಿ ಶಿಷ್ಯರೆಲ್ಲರ ಆಧ್ಯಾತ್ಮಿಕ ಉನ್ನತಿಗೆ ಕೇಂದ್ರವೊಂದನ್ನು ಮಾಡಿದವರು, ಶ್ರೀಗುರುಗೋವಿಂದವಿಠಲ ದಾಸರು. ಸುಮಾರು ೪೦ ಕ್ಕೂ ಹೆಚ್ಚು ಸಂಪುಟಗಳನ್ನು ಪ್ರಕಟಿಸಿ ಅಪೂರ್ವ ಹರಿದಾಸರ ಜೀವನ ಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ಇವರ ಜೀವನ ಧನ್ಯ. ನಮಗೆಲ್ಲರಿಗೂ ಮಾನ್ಯ.

ಜನನ – ಬಾಲ್ಯ

ಶ್ರೀಪುರಂದರದಾಸರು ಪೂನಾದ ಬಳಿಯಲ್ಲಿ ಪುರಂದರ ಘಡ ಎಂಬಲ್ಲಿ ಶ್ರೀನಿವಾಸನಾಯಕನಾಗಿದ್ದರು ಎಂಬಂತೆ ಪೂನಾಗೆ ಸಮೀಪದ ಹಳ್ಳಿಯಲ್ಲಿ ಗುರು ಗೋವಿಂದವಿಠಲದಾಸರ ಪೂರ್ವಜರು ಇದ್ದರು. ಅಂದರೆ ದಾಸರು ಅಡ್ಡಾಡಿದ ಕ್ಷೇತ್ರಗಳಲ್ಲಿ ಇವರ ಪೂರ್ವಜರು ಅಡ್ಡಾಡಿದ್ದಾರೆ, ಧಾರ್ಮಿಕ ಚಟುವಟಿಕೆಗಳಿಗೆ ಹೆಸರಾದ ಕೋಡುಬಳೆ ಗೋವಿಂದರಾಯರು ಈ ವಂಶದ ಮೂಲ ಪುರುಷರು. ತಮ್ಮ ಕಿವಿಗಳಿಗೆ ಕೋಡು ಬಳೆ ಗಾತ್ರದ ಬಂಗಾರದ ಖಡಕನ್ನು ಹಾಕಿಕೊಂಡಿದ್ದರಿಂದ ಇವರಿಗೆ ಈ ಹೆಸರು ಬಂದಿತ್ತು. ಈ ವಂಶಜರು

ಕೆಲವು ಕಾಲದ ನಂತರ ಆಂಧ್ರಪ್ರದೇಶದ ಚಿತ್ತೂರನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡರು. ಮೈಸೂರಿನ ಕಡೆ ಸಂಬಂಧ ಬೆಳೆಸಿದವರಾಗಿ ಮೈಸೂರನ್ನು ಸೇರಿದರು. ಈ ಸದ್ವಂಶದಲ್ಲಿ ಬಂದವರು ರಘುನಾಥರಾವ್ ಮತ್ತು ಲಕ್ಷ್ಮೀಬಾಯಿ ದಂಪತಿಗಳು. ಆಗ ಇವರ ವಾಸಸ್ಥಳ ಚಿಕ್ಕಮಗಳೂರು. ಒಮ್ಮೆ ಲಕ್ಷ್ಮೀಬಾಯಿ ಗರ್ಭಿಣಿಯಾಗಿದ್ದಾಗ ಇಭಾರಾಮಪುರದ ಅಪ್ಪಾವರ ಮಗ ಓಬಳಾಚಾರ್ಯರು ಬಂದರು. ಒಳ್ಳೆಯ ತೇಜಸ್ವಿ ಪುತ್ರ ಗರ್ಭದಲ್ಲಿ ಅಡಗಿರುವನೆಂಬ ವಿಚಾರ ಸಾಧ್ವೀಮಣಿಯ ತೇಜಸ್ಸಿನಿಂದಲೇ ವ್ಯಕ್ತವಾಗುತ್ತಿತ್ತು. ಓಬಳಾಚಾರ್ಯರು ಲಕ್ಷ್ಮೀಬಾಯಿಗೆ ಆಶೀರ್ವಾದ ಮಾಡಿ ಒಳ್ಳೇ ತೇಜಸ್ವೀ ಪುತ್ರನಾಗುತ್ತಾನೆ ಎಂದು ಹೇಳಿದರು. ಈ ವಿಚಾರಗಳನ್ನು ಶ್ರೀಗುರು ಗೋವಿಂದದಾಸರು ತಮ್ಮ ತಾಯಿಯನ್ನು ಸ್ತುತಿಸಿರುವ ಕೃತಿಯೊಂದರಲ್ಲಿ ತಿಳಿಸಿದ್ದಾರೆ.

ಶಿರಿರಂಗನಾಥಾಖ್ಯ । ವರಕುವರಗೀಯುತ್ತವರಲಗ್ನ
ಜರುಗಿಸಿರೆ । ದಾಂಪತ್ಯ ಸುಖದೊಳಗೆ
ಇರುತಿರಲು ಇಭರಾಮ । ಪುರದಮುನಿಸುತರ
ಬರವಾಯ್ತು ಚಿಕ್ಕಮಗಳೂರಿಗೆ ॥
ವರಮುನಿಯನುಗ್ರಹದ । ಲೋರ್ವಸುತನುದಯಿವನೆ
ನೆರೆತಿಳುಪಿ ಪೊರಮಡಲು । ಸತಿಯು ಲಕ್ಷ್ಮೀಬಾಯಿ ವರಕುವರಂ
ಪ್ರಸವಿಸುತ । ಸತಿಯೊಡನೆ ಸಂತಸದಿ ಕಾಲಕಳೆಯುತಿರಲು ॥

ದೊಡ್ಡವರ ಆಶೀರ್ವಾದದ ಫಲವಾಗಿ ದಾಸರು ಜನಿಸಿದ್ದು ಶಾ.ಶ. ೧೮೧೬ ಜಯ ನಾಮಸಂವತ್ಸರ ಶ್ರಾವಣ ಬಹುಳದ್ವಾದಶಿಯಂದು, ಅಂದರೆ ಕ್ರಿ.ಶ. ೨೮.೮.೧೮೮೪ ರಲ್ಲಿ ಜನಿಸಿದರು. ತಮ್ಮ ವಂಶದ ಮೂಲ ಪುರುಷರು ಗೋವಿಂದರಾಯರು ; ಅವರ ಸ್ಮರಣೆ ನಿರುತ ಬರಲಿ ಎಂದು ಮಗುವಿಗೆ 'ಗೋವಿಂದ' ಎಂದೇ ನಾಮ ಕರಣ ಮಾಡಿದರು.

'ಯಸ್ಯಾನುಗ್ರಹ ಇಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ' ಯಾರಿಗೆ ನಾನು ಅನುಗ್ರಹಮಾಡಲು ಇಚ್ಛಿಸುತ್ತೇನೋ ಅವರ ವಿತ್ತ ಅಂದರೆ ಸಂಪತ್ತನ್ನು ಅಪಹರಿಸುತ್ತೇನೆ ಎಂಬುದು ಶ್ರೀಹರಿಯ ವಾಣಿ. ಅದಕ್ಕೆ ಅನುಸಾರವಾಗಿ ಬಡತನ ಇವರ ಬೆನ್ನುಹತ್ತಿತು. 'ಬಡತನ ಎಂಬುದು ಕಡೆತನಕ ಇರಲಿ' ಎಂದು ಹರಿದಾಸರು ಕೇಳುವಂತೆ ಪ್ರಾರಂಭದಿಂದಲೇ ಬಡತನದ ಬವಣೆಯಲ್ಲಿ

ಬಳಲಿದವರಿವರು. ಮೇಲಿಂದ ಮೇಲೆ ದುಃಖದ ಪರಂಪರೆಯೆ ಬಂದೊದಗಿತು. ಗೋವಿಂದ ನಾಲ್ಕು ವರುಷದವನಾಗಿದ್ದಾಗಲೇ ತಂದೆ ರಘುನಾಥರಾಯರು ವಿಧಿವಶರಾದರು. ಲಕ್ಷ್ಮೀಬಾಯಿಗೆ ಇದು ದೊಡ್ಡ ಆಘಾತ. ಒಂದು ಕಡೆ ಪತಿ ವಿಯೋಗ ಮತ್ತೊಂದು ಕಡೆ ಸುತನ ಆರೈಕೆ. ದಾಯಾದಿಗಳ ಮನೆಯಲ್ಲಿ ದುಡಿಯುವ ಪ್ರಸಂಗ ಬಂದಿತು. ಆ ಕಾಲದಲ್ಲಿ ಮಾರಿಕಣಿವೆಯಲ್ಲಿ ಇರಬೇಕಾದ ಪ್ರಸಂಗ ಬಂತು. ಆಗ ಲಕ್ಷ್ಮೀಬಾಯಿ ಬಹಳ ಕಷ್ಟಪಟ್ಟಿದ್ದಾಳೆ ಎಂಬ ವಿಚಾರ ದಾಸರ ಕೃತಿಯಿಂದಲೇ ತಿಳಿದು ಬರುತ್ತದೆ.

ನಾಲ್ಕಾರು ವರುಷಗಳು । ದಾಯಾದ್ಯರೊಳುದುಡಿದು
ನಾಲ್ಕೆಂಟು ಕಡುಕ್ರೂರ । ವಾಕ್ಕುಗಳ ಸಹಿಸುತ್ತ
ಪ್ರಾಕ್ಕುಕರ್ಮದ ಫಲವ । ಮುಕ್ಕಲೇ ಬೇಕೆಂಬ
ವಾಕ್ಕುಗಳ ಮನ್ನಿಸುತಲೀ

ನಾಲ್ಕಾರುವರ್ಷಗಳ ಕಾಲ ದಾಯಾದಿಗಳ ಮನೆಯಲ್ಲಿ ಜೀವನ ನಿರ್ವಹಣೆಗಾಗಿ ದುಡಿದು ಹೀನಾಯವಾದ ಮಾತುಗಳಿಗೆ ಕಿವುಡಿಯಂತಿದ್ದು, ಮಗನ ಪುರೋಭಿವೃದ್ಧಿಗೆ ಮುಂದಾದವಳೀಕೆ. ಗೋವಿಂದನ ದೊಡ್ಡಪ್ಪನ ಮನೆ ಹೆಗ್ಗಡದೇವನಕೋಟೆಯಲ್ಲಿತ್ತು. ಅಲ್ಲಿರುವ ಕಾಲದಲ್ಲಿ ಗೋವಿಂದನಿಗೆ ಹನ್ನೊಂದು ವರುಷ ತುಂಬಿತ್ತು. ಆ ಕಾಲದಲ್ಲಿ ಉಪನಯನ ಸಂಸ್ಕಾರವಾಗಿ ಗಾಯತ್ರಿ ಮಂತ್ರೋಪದೇಶವಾಯಿತು. ಗಾಯತ್ರಿಯ ಜಪದಿಂದ ಗೋವಿಂದನ ತೇಜಸ್ಸು ವೃದ್ಧಿಸಿತು. ಆದರೆ ಕುಲ ಬಂಧುಗಳ ಕಠೋರವಾದ ನುಡಿಗಳಿಂದ ಮನೆ ಬಿಡಬೇಕಾದ ಪ್ರಸಂಗ ಬಂದಿತು. ದಾರಿ ತೋರದಾಯಿತು. ನೊಂದ ಲಕ್ಷ್ಮೀಬಾಯಿ ಮಗನನ್ನು ಕರೆದುಕೊಂಡು ಧ್ರುವವರದನನ್ನು ಸ್ಮರಿಸುತ್ತಾ ಬರುತ್ತಿರಲು ಅಪರಿಚಿತರೊಬ್ಬರು ಸಹಾಯಕ್ಕೆ ಕೈಚಾಚಿದರು. ಬಂಧುಗಳು ಆದವರು ಬಂದುಂಡು ಹೋಗುವರು ಬಂಧನವ ಕಳೆಯಲರಿವರೇ 'ಎಂಬಂತೆ ನಿಜವಾದ ಬಂಧು ಆಪದ್ಬಂಧು' "ಉಂಟಾದ ಕಾಲಕ್ಕೆ ನೆಂಟರು ಇಷ್ಟರು. ಉಂಟು ತಪ್ಪಿದ ಬಳಿಕ ಒಣಹೆಂಟೆಯಲಿ ಮುಚ್ಚುವರು" ಎಂಬಂತೆ ತನ್ನವರೆಲ್ಲಾ ಇವರನ್ನು ಕೈಬಿಟ್ಟರೂ ಇವರನ್ನು ಸಾಕುವ ಪುಣ್ಯ ಮತ್ತೊಬ್ಬರಿಗೆ ಕರುಣಿಸಿದ ಶ್ರೀಹರಿ. ನವರತ್ನ ರಾಮರಾಯರು ಎಂಬ ಇಂಜಿನಿಯರರ ಪತ್ನಿ ತಾಯಿ ಮಗನಿಗೆ ಒದಗಿದ ದುಸ್ಥಿತಿಗಾಗಿ ಮರುಗಿ ತಮ್ಮ ಮನೆಯಲ್ಲಿ ಆಶ್ರಯ ನೀಡಿದರು. ಇದನ್ನು ಸಹ ಗುರುಗೋವಿಂದದಾಸರು ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ.

ನೂಕುತಿರೆ ಕೆಲಕಾಲ । ತೋಕಗಾಯ್ತುಪನಯನ
ಕಾಕು ಮಾತುಗಳಾಡಿ । ನೂಕಲೂ ಗೃಹದಿಂದ ಆ ಕುಮಾರನ
ಧ್ರುವನ ನೂಕಿದಾ ಪರಿಯಾಯ್ತು ಎಂದೆನುತ ಹೊರ ಹೊರಡಲು

ಧ್ರುವವರದನನಂಘ್ರಿಯನೆ । ಪವಿತರದಮನದಿ ಸುಸ್ತವನ ಗೈಯುತೆ ಬರಲು ।
ದಿನದಲ್ಲಿ ಪೊಳಲೊಳಗೆ ನವರತುನದ ಕುಲ ಬಂಧು । ನವವೆರಡು ವಯಸ್ಸಿನ
ಕುವರನು ಮಾತೆಯೊಡನೆ ಸವಿನುಡಿಯಲಾದರಿಸಿ ತವಕದಲಿ ಸಲಹುತಿರೆ ।

ಇದು ಶ್ರೀಹರಿಯ ವ್ಯಾಪಾರ ಎಂದು ಅರಿತರು. ಆಗ ಗೋವಿಂದನಿಗೆ ೧೮ ವರ್ಷ ವಯಸ್ಸು. ನವರತ್ನ ರಾಮರಾಯರದು ಸಂಪ್ರದಾಯಬದ್ಧ ಮನೆತನ. ಆರಾಧನೆ, ಪ್ರವಚನ, ಭಜನೆ ಮುಂತಾದ ಧಾರ್ಮಿಕ ಚಟುವಟಿಕೆಗಳು ಸದಾ ಅವರ ಮನೆಯಲ್ಲಿ ನಡೆಯುತ್ತಿದ್ದವು. ಈ ಧಾರ್ಮಿಕ ಪರಿಸರ ಗೋವಿಂದನ ಮನೋವಿಕಾಸಕ್ಕೆ ತುಂಬ ಪುಷ್ಟಿ ನೀಡಿತು. ಕಷ್ಟ ಸಹಿಷ್ಣುತೆ, ನಿಯಮ ಪಾಲನೆ ಸಾತ್ವಿಕ ನಿಷ್ಠೆ ಇವೆಲ್ಲಕ್ಕೂ ಗೋವಿಂದನೇ ಆಶ್ರಯನೆನಿಸಿದನು.

ಬಾಲ್ಯದಲ್ಲಿ ತುಂಬ ಚಟುವಟಿಕೆ, ಆಟಪಾಟಗಳಲ್ಲಿ ಆಸಕ್ತಿ, ಓಡುವುದು, ಜಿಗಿಯುವುದು ಮುಂತಾದ ಸ್ಪರ್ಧೆಗಳಲ್ಲಿ ಉತ್ತಮ ಆಟವಾಡಿ ಬಹುಮಾನಿತ ನಾಗುತ್ತಿದ್ದ. ನಾಟಕಾಭಿನಯ, ಕಂಠಪಾಠಗಳಲ್ಲೂ ಮುಂದು. ಗೋವಿಂದ ಓದಿನಲ್ಲೂ ಮುಂದು, ಕ್ರಮಬದ್ಧ ವ್ಯಾಸಂಗ. ಎಲ್ಲ ತರಗತಿಗಳಲ್ಲೂ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದುತ್ತಿದ್ದ. ಎಸ್.ಎಸ್.ಎಲ್.ಸಿ. ಆದನಂತರ ನಾಲ್ಕಾರು ಜನರ ಸಲಹೆಯಂತೆ ಇಂಜಿನಿಯರ್ ಆಗುವ ಬಯಕೆ. ಮದರಾಸಿ ನಲ್ಲಿ ಇರುವ ಇಂಜಿನಿಯರಿಂಗ್ ಕಾಲೇಜಿಗೆ ಅರ್ಜಿಯನ್ನು ಹಾಕಿದ. ಸೀಟೂ ದೊರೆಯಿತು. ಆದರೆ ಕಣ್ಣಲ್ಲಿ ಕಣ್ಣಿಟ್ಟು ಸಾಕಿದ ಕಣ್ಮಣಿಯನ್ನು ಕಂಡರಿಯದ ಊರಿಗೆ ಏಕಾಂಗಿಯಾಗಿ ಕಳಿಸಲು ಲಕ್ಷ್ಮೀಬಾಯಿ ಒಪ್ಪಲಿಲ್ಲ. ತಾಯಿಯ ಕಣ್ಣೀರನ್ನು ಕಂಡು ಸಹಿಸದೆ ತನ್ನ ಆಸೆಯನ್ನೇ ಚಿವುಟಿ ಹಾಕಿದ ಗೋವಿಂದ.

ಮುಂದೆ ಸಬ್ ಓವರ್ಸಿಯರ್ ಹುದ್ದೆಗಾಗಿ ತರಬೇತಿ ಪಡೆದ ಲೋಕೋಪಯೋಗಿ ಇಲಾಖೆಯಲ್ಲಿ ಉದ್ಯೋಗವೂ ದೊರೆಕಿತು. ಸಬ್ ಓವರ್ಸಿಯರ್ ಆಗಿ ನೇಮಕಗೊಂಡ. ಗೋವಿಂದನ ತಾಯಿ ಲಕ್ಷ್ಮೀಬಾಯಿ ತೃಪ್ತಿಯ ನಗೆ ನಕ್ಕಳು. ಇದುವರೆಗೆ ಪಟ್ಟ ಕಷ್ಟಗಳನ್ನೆಲ್ಲ ಮರೆತಳು. ದೈವ ಕೃಪೆಯಿಂದ ಮುಂದೆ ಬಂದ ಮಗನನ್ನು ಕಣ್ತುಂಬ ನೋಡುತ್ತ ಆ ಮಾತೃಹೃದಯ ಆನಂದಪಟ್ಟಿತು. "ತಂದೆಯಿಲ್ಲದ ಭಾವ ತಿಳಿಸದೆ ಇಂದು

ಎನ್ನನು ಪೋಷಿಸಿದ ನೀತಂದೆತಾಯಿಯು ಬಂಧು ಬಳಗವು ಸರ್ವ ಕಾಲದಲೀ''
ಎಂದು ತಾಯಿಯ ಸೇವೆಯನ್ನು ಮನಮುಟ್ಟಿ ಮಾಡುತ್ತಾ ಮಾತೃದೇವೋಭವ ಎಂಬ ನಮನದ ನುಡಿಯನ್ನು ಅನ್ವರ್ಥಗೊಳಿಸಿದ ಗೋವಿಂದ.

ಗೃಹಸ್ಥ ಜೀವನ

ಲೋಕೋಪಯೋಗಿ ಇಲಾಖೆ ಲೌಕಿಕವಾಗಿ ಒಂದಾದರೆ ಲೋಕೋಪಯೋಗಕ್ಕಾಗಿಯೇ ಇವರನ್ನು ಶ್ರೀಹರಿ ನಿಯಮಿಸಿದನೆಂಬಂತೆ ಕೆಲಸವು ಒಂದೇ ಕಡೆ ಖಾಯಂ ಆಗಿರದೆ ಆಗಾಗ ವರ್ಗಾವಣೆಯಾಗುತ್ತಿತ್ತು. "ದೇಶ ಸುತ್ತು ಕೋಶ ಓದು" ಎಂಬಂತೆ ಸರ್ಕಾರದವರು ನಾಲ್ಕಾರು ಊರುಗಳನ್ನು ಸುತ್ತಲು ಅವಕಾಶ ಕೊಟ್ಟಿರುವಾಗ ಸುತ್ತೋಣವಮ್ಮಾ ಎಂದು ಕಾರ್ಯ ನಿರ್ವಹಣೆ ಮಾಡುತ್ತಿದ್ದರು. ಇನ್ನು ಇವನಿಗೆ ಮದುವೆ ಮಾಡಬೇಕೆಂಬ ಬಯಕೆ ಲಕ್ಷ್ಮೀಬಾಯಿಗೆ ಸಹಜವಾಗಿ ಮೂಡಿತು.

ತಾಯಿಯು ಮಗನಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದರು. ತಾಯಿಯ ಬಯಕೆಗೆ ಒಪ್ಪಿಗೆ ಸೂಚಿಸಿದರು. ಮೈಸೂರಿನಲ್ಲಿ ವಾಸವಾಗಿದ್ದ ಯಾದವ ಮೂರುತಿರಾಯರ ಮಗಳಾದ ಕೃಷ್ಣವೇಣಿ ಎಂಬ ಕನ್ಯಾಮಣಿಯನ್ನು ತಂದು ಲಗ್ನ ಮಾಡಿದರು ; ಅತ್ತೆಯ ಮನೆಯಲ್ಲಿ ಆಕೆಯನ್ನು ತುಳಸಮ್ಮ ಎಂಬುದಾಗಿ ಕರೆದರು. ತಂದೆಯಿಲ್ಲದ ಬಾಲಕನಿಗೆ ಆ ಕೊರತೆಯ ಅರಿವಾಗದಂತೆ ನವರತ್ನ ರಾಮರಾಯರು ವಿದ್ಯಾ ಬುದ್ಧಿ ಕಲಿಸಿ ಪೋಷಣೆಮಾಡಿ ಮದುವೆಯನ್ನೂ ಮಾಡಿಸಿದರು. ದಂಪತಿಗಳು ರಾಮರಾಯರ ಮನೆಯನ್ನು ಬಿಟ್ಟು ತಮಗೆ ಕೆಲಸವಿದ್ದ ಕಡೆ ಮನೆಮಾಡಿ ಜೀವನ ನಡೆಸುತ್ತಿದ್ದರು.

ಕನ್ನಂಬಾಡಿಯಲ್ಲಿ ನಾಲ್ಕು ವರ್ಷಗಳ ಕಾಲ ಇರುವ ಸಮಯದಲ್ಲಿ ಇವರ ಗೃಹಸ್ಥ ಜೀವನದ ಆದಿಭಾಗ. ಸರಸಿಜಾಕ್ಷಿಯ ಕೂಡಿ ಸರಸವಾಡುತ ಸಂಸಾರ ಸಾಗರವನ್ನು ಆನಂದದಿಂದ ನಿರ್ವಹಿಸುತ್ತಾ, ಇದ್ದರು. ಮನೆಯಲ್ಲಿ ನಿತ್ಯ ದೇವರ ಪೂಜೆ ವೈಶ್ವದೇವ, ಅತಿಥಿಸೇವಾ ಎಲ್ಲ ಕಾರ್ಯಗಳಲ್ಲಿ ಸಹಧರ್ಮಿಣಿ ಎನಿಸಿ ತುಳಸಮ್ಮ ಪತಿವ್ರತಾ ಶಿರೋಮಣಿಯರಿಗೆ ಆದರ್ಶಪ್ರಾಯಳಾಗಿದ್ದಳು. ಗೋವಿಂದರಾಯರ ಮನೆ ತುಂಬಿದ ತುಳಸಮ್ಮವರ ನಡೆ ನುಡಿ ಅವರ ಮನವನ್ನೂ ತುಂಬಿಸಿತು. ಒಬ್ಬರ ನಂತರ ಒಬ್ಬರಂತೆ ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರು. ಇವರ ಕಾರ್ಯವ್ಯಾಪ್ತಿ

ಕನ್ನಂಬಾಡಿಯಿಂದ ನಾಗಮಂಗಲದ ಬಳಿ ಇರುವ ಬೆಳ್ಳೂರು, ಚಿಕ್ಕಬಳ್ಳಾಪುರ, ಕೋಲಾರ ಇಲ್ಲೆಲ್ಲ ಪಸರಿಸಿತು.

ನಾಗಮಂಗಲದ ಬಳಿ ಬೆಳ್ಳೂರಿನಲ್ಲಿದ್ದಾಗ ಅವರಿಗೆ ಇಬ್ಬರು ಗಂಡು ಮಕ್ಕಳ ಜನನ. ಮಂತ್ರಾಲಯಕ್ಕೆ ಹೋಗಿ ಅಲ್ಲಿ ಗುರುರಾಜರ ಸೇವೆ ಭಕ್ತಿಯಲಿ ಮಾಡಿ ಅನುಗ್ರಹೀತರಾಗಿದ್ದ ಕಾರಣ ಒಬ್ಬನಿಗೆ ಗುರುರಾಜನೆಂದೂ, ಮತ್ತೊಬ್ಬನಿಗೆ ಕ್ಷೇತ್ರ ಮೂರುತಿ ಮಾಧವರಂಗನ ಹೆಸರನ್ನಿಡಲು ಯೋಚಿಸಿ ಮಾಧವ ಎಂಬ ಹೆಸರನ್ನೇ ಕರೆದರು.

ಅಲ್ಲಿ ವೈಷ್ಣವರು ಹೆಚ್ಚು ಜನ ಇಲ್ಲದ ಕಾರಣ ಶ್ರಾದ್ಧ ಮಂತ್ರಗಳನ್ನು ಅರಿತು ಬ್ರಾಹ್ಮಣರಲ್ಲಿ ಪಿತೃಕಾರ್ಯಗಳನ್ನೂ ಮಾಡಿಸಿದರು. ಜೊತೆಗೆ ಸಣ್ಣ ಪುಟ್ಟ ಶುಭಕಾರ್ಯಗಳನ್ನೂ ಮಾಡಿಸುತ್ತಿದ್ದರು.

ಈ ಮಧ್ಯೆ ಶಾಸ್ತ್ರ ಗ್ರಂಥಗಳನ್ನು ಆದರದಿಂದ ಕಂಡು ವೈಷ್ಣವನಾಗಿ ಜನಿಸಿದ ಮೇಲೆ ಸರ್ವಮೂಲ ಗ್ರಂಥಗಳನ್ನು ಅಭ್ಯಾಸ ಮಾಡಬೇಕೆಂಬ ಆಸೆ ಬಲವತ್ತರವಾಯಿತು. ೧೯೩೮ ರಲ್ಲಿ ಮೊಳಕಾಲ್ಮೂರು ಚಿಕ್ಕೇರಹಳ್ಳಿ ಮಧ್ವೇಶದಾಸರಲ್ಲಿ ಶಾಂತಿ ಪಾಠದಿಂದಲೇ ಪ್ರಾರಂಭಿಸಿ ಅಧ್ಯಯನ ನಡೆಸಿದರು. ನಂತರ ಮೈಸೂರು ನಂದಗುಡಿ ನರಸಿಂಹಮೂರ್ತಿರಾಯರಲ್ಲಿ ಸೂತ್ರಭಾಷ್ಯಗಳ ಅಭ್ಯಾಸವನ್ನು ಮಾಡಿದರು. ಗೋವಿಂದರಾಯರು ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ ಹೊತ್ತು ಹೋದರೆ ಮತ್ತೆ ಬಾರದು ಎಂಬ ನುಡಿ ಅವರಲ್ಲಿ ಜಾಗೃತವಾಗಿತ್ತು ಯಾವಾಗಲೂ ಧಾರ್ಮಿಕ ಗ್ರಂಥಗಳ ಅವಲೋಕನ, ಆಧ್ಯಾತ್ಮ ಚಿಂತನೆ ಅವರ ಜೀವನದ ಉಸಿರಾಗಿತ್ತು. ಮನೆಯಿಂದ ಕಛೇರಿಗೆ ಕೆಲಸಕ್ಕೆ ತೆರಳುವಾಗಲೂ ಒಂದು ದೊಡ್ಡ ರೊಟ್ಟನ್ನು ಹ್ಯಾಂಡಲ್ಲಿಗೆ ಸಿಕ್ಕಿಸಿ ಅದಕ್ಕೆ ಹರಿ ಕಥಾಮೃತಸಾರದ ಪದ್ಯಗಳನ್ನು ಬರೆದು ಅಂಟು ಹಾಕಿಕೊಂಡು ಎಲ್ಲ ಸಂಧಿಗಳನ್ನೂ ಕಂಠಪಾಠ ಮಾಡಿದ ಮಹಾನ್ ವ್ಯಕ್ತಿ ಗೋವಿಂದರಾಯರು.

ನಾಲ್ಕು ಹೆಣ್ಣು ಮತ್ತು ಐದುಗಂಡು ಮಕ್ಕಳ ತುಂಬಿದ ಕುಟುಂಬದವರಾದರು. ತುಂಬಿದ ಸಂಸಾರದಲ್ಲಿದ್ದರೂ ಅವರು ಇರುತ್ತಿದ್ದ ಎಲ್ಲ ಊರುಗಳಲ್ಲಿಯೂ ಅಲ್ಲಿಯ ವೈಷ್ಣವರನ್ನೆಲ್ಲಾ ಕಲೆಹಾಕಿ ಮಧ್ವನವಮಿ, ರಾಯರ ಆರಾಧನೆ ಮುಂತಾದ ಉತ್ಸವಗಳನ್ನು ಮಾಡುತ್ತಿದ್ದರು. ತಾವೇ ಪುರಾಣ ಪುಣ್ಯ ಕಥೆಗಳನ್ನು ಶ್ರವಣ ಮಾಡಿಸುತ್ತಿದ್ದರು.

೧೯೩೭ ರಲ್ಲಿ ಗೋವಿಂದರಾಯರಿಗೆ ಹಾಸನಕ್ಕೆ ವರ್ಗವಾಯಿತು. ಹಾಸನದ ಜೀವನ ಗೋವಿಂದರಾಯರನ್ನು ಸಂಪೂರ್ಣ ಹರಿದಾಸರನ್ನಾಗಿ ಮಾಡಿತು. ಕಾರಣ ಇವರ ಸಮಕಾಲೀನ ಹರಿದಾಸರ ಸಂಪರ್ಕ ಇವರಿಗಾಯಿತು.

ಸಮಕಾಲೀನ ಹರಿದಾಸರು

ಉರಗಾದ್ರಿ ವಿಠಲದಾಸರು : ಇವರ ಸ್ಥಳ ಚಿತ್ರದುರ್ಗ. ಜನ್ಮನಾಮ ಶ್ರೀನಿವಾಸರಾಯರು. ಉತ್ತಮ ವೈಷ್ಣವ ದೀಕ್ಷೆ ಉಳ್ಳವರಾಗಿದ್ದು ಶಾಲೆಯ ಶಿಕ್ಷಕರಾಗಿ ಗುಡಿಸಿಲಿನಲ್ಲಿ ವಾಸ ಮಾಡುತ್ತಿದ್ದರು. ಪ್ರಾಣದೇವರ ಅರ್ಚಕರಾಗಿ ಏಕಾದಶೀ ಜಾಗರ ಹರಿಭಜನೆಗಳಲ್ಲಿ ಪ್ರಸಿದ್ಧರಾಗಿದ್ದು ಭಜನೆ ಶ್ರೀನಿವಾಸರಾಯರು ಎಂದೇ ಜನಪ್ರಿಯರಾಗಿ ಇದ್ದರು. ವೆಂಕಟೇಶನ ಭಕ್ತರಾಗಿ ವೆಂಕಟೇಶ ಎಂಬ ಸ್ವಪ್ರೇರಿತವಾದ ಅಂಕಿತದಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಪರಮಪ್ರಿಯ ಸುಬ್ಬರಾಯದಾಸರು ಇವರ ಯೋಗ್ಯತೆ ತಿಳಿದಿದ್ದು ಇವರಿದ್ದೆಡೆಗೇ ಬಂದು ಮಾತನ್ನಾಡಿ ತಮ್ಮ ವಾದ ಸರಣಿಯಿಂದ ಇವರ ಒಲವನ್ನು ದಾಸದೀಕ್ಷೆಯ ಕಡೆ ತಿರುಗಿಸಿ 'ಉರಗಾದ್ರಿವಾಸ ವಿಠಲ' ಎಂಬ ಅಂಕಿತ ನೀಡಿದರು. ಪರಮಪ್ರಿಯರ ಉತ್ತರಾಧಿಕಾರಿಗಳೇನೋ ಎಂಬಂತೆ ಅವರಿದ್ದಾಗಲೇ ಅವರ ಅನುಮತಿಯಿಂದ ಹತ್ತಾರು ಜನರಿಗೆ ಅಂಕಿತೋಪದೇಶ ಮಾಡಿದವರು. ಅಪೂರ್ವವಾದ ಇವರ ಕೃತಿಗಳಲ್ಲಿ ತತ್ವಪೂರ್ಣ ವಿಚಾರಗಳು ತುಂಬಿ ತುಳುಕುತ್ತಿವೆ. ತತ್ವನ್ಯಾಸ, ಮಾತೃಕಾನ್ಯಾಸ, ಪಂಚಮುದ್ರಾಧಾರಣೆಯಂತಹ ಕ್ಲಿಷ್ಟ ವಿಚಾರಗಳನ್ನು ಸಹ ಸುಲಭವಾಗಿ ತಮ್ಮ ಪದ್ಯಗಳಲ್ಲಿ ರಚಿಸಿ ಹರಿದಾಸ ಸಾಹಿತ್ಯದ ಅಪೂರ್ವ ಕೊಡುಗೆ ನೀಡಿದ್ದಾರೆ. ದಾಸರು ಚಿತ್ರಕಲೆಯಲ್ಲೂ ನುರಿತವರಾಗಿದ್ದರು. ಇವರು ಬರೆದ ದೇವರ ಚಿತ್ರಗಳು ಇಂದಿಗೂ ಅಲ್ಲಲ್ಲಿ ಇವೆ.

ತಂದೆ ವೆಂಕಟೇಶವಿಠಲದಾಸರು

ಮೂಲತಃ ರಾಯದುರ್ಗದವರಾದರೂ ಚಿತ್ರದುರ್ಗದವರೆಂದು ಖ್ಯಾತರಾದ ಆರ್. ರಾಮಚಂದ್ರರಾಯರ ತಂದೆ ವೆಂಕಟೇಶವಿಠಲ ದಾಸರೆಂದು ಖ್ಯಾತಿ ಹೊಂದಿದವರು. ಉನ್ನತ ಪದವೀಧರರೂ, ವೃತ್ತಿಯಲ್ಲಿ ಅಧ್ಯಾಪಕರೂ ಆಗಿದ್ದರು. ಈ ದಾಸರಿಗೆ ಅಂಕಿತ ಪ್ರಾಪ್ತಿ ದೈವೀ ಪ್ರಸಾದದಿಂದ ಸ್ವಪ್ನ ದ್ವಾರಾ ಆದುದು ಎಂದಿದೆ. ಆದರೂ ಉರಗಾದ್ರಿವಿಠಲದಾಸರಲ್ಲಿ ತಂದೆ

ಮುದ್ದುಮೋಹನ ವಿಠಲದಾಸರಲ್ಲಿ ಇವರಿಗೆ ಗುರು ಭಾವನೆ ಇತ್ತು. ಅನೇಕ ಅಭಿಮಾನಿಗಳು ಇವರ ಶಿಷ್ಯರಾಗಬಯಸಿದರೂ ಸಹ ಅಂಕಿತ ನೀಡಲಿಲ್ಲ. ಇದು ಇವರ ಗುಪ್ತ ಸಾಧನೆಯ ಸಾಕ್ಷಿ. ಸುಮಾರು ೭೫ ವರ್ಷ ಸಾರ್ಥಕ ಜೀವನ ನಡೆಸಿ ೧೪.೭.೧೯೮೨ ರಲ್ಲಿ ಹರಿಪಾದ ಸೇರಿದವರು.

ಶ್ರೀಜಯೇಶವಿಠಲದಾಸರು

ಕಟ್ಟೆಮನೆ ಎಂದೇ ಪ್ರಸಿದ್ಧವಾಗಿರುವ ಮೈಸೂರಿನಲ್ಲಿರುವ ಹರಿದಾಸರ ಕೇಂದ್ರ ಸ್ಥಾಪನೆ ಮಾಡಿದ ಅಟ್ಟಾಜಿ ವೆಂಕಟರಾಯರೇ ಜಯೇಶ ವಿಠಲದಾಸರು. ಒಂದು ಕಾಲದಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿ ಮೆರೆದವರು. ಮೋಹನದಾಸರ ಪೀಳಿಗೆಯಲ್ಲಿ ಬಂದು ವಿಜಯರಾಮಚಂದ್ರದಾಸರ ಶಿಷ್ಯರಾಗಿ ಜಯೇಶ ವಿಠಲದಾಸರಾಗಿ ದಾಸಕೂಟವನ್ನು ರೂಪಿಸಿ ಹಲವಾರು ಕೀರ್ತನೆಗಳನ್ನು ಹಾಡಿ ಸೇವೆ ಮಾಡಿರುವವರು. ದಾಸರ ನಿಕಟ ವರ್ತಿಗಳಿಗೆ ಮಾತ್ರ ಇವರ ಕೃತಿಗಳು ಲಭ್ಯವಾಗಿವೆ. ದಾಸರು ಸುಮಾರು ಇಪ್ಪತ್ತೈದು ಜನರಿಗೆ ಅಂಕಿತ ಪ್ರದಾನ ಮಾಡಿದ್ದಾರೆ. ಈ ದಾಸರ ಕಟ್ಟೆಮನೆಯೇ ಈಗ ವೇಣುಗೋಪಾಲ ಸ್ವಾಮಿಯ ಕೃಷ್ಣನ ದಿವ್ಯ ದೇವಾಲಯವಾಗಿದೆ. ಸಂಪ್ರದಾಯಾನುಸಾರವಾಗಿ ಮಧ್ವನವಮಿ ಟೀಕಾರಾಯರ ಆರಾಧನೆ, ಅಪ್ಪಾವರ ಆರಾಧನೆ ನಡೆಯುತ್ತಿದೆ. ಈ ದಾಸರು ಎಂಭತ್ತೆರಡು ವರುಷಗಳ ತುಂಬು ಜೀವನ ನಡೆಸಿ ಕ್ರಿ.ಶ. ೨೧.೫.೧೯೩೨ ರಲ್ಲಿ ಹರಿಪಾದ ಸೇರಿದರು.

ಇನ್ನು ಈ ಕಾಲದಲ್ಲಿದ್ದ ತಂದೆ ಮುದ್ದುಮೋಹನ ದಾಸರ ವಿಚಾರವನ್ನು ಈಗಾಗಲೇ ತಿಳಿಸಿದೆ. ಇವರೆಲ್ಲರ ಪ್ರಭಾವದಿಂದ ಗೋವಿಂದರಾಯರಿಗೆ ದೀಕ್ಷೆ ಹೊಂದಬೇಕೆಂಬ ಹಂಬಲ ಹೆಚ್ಚಾಯಿತು. ಜಗನ್ನಾಥ ದಾಸರಿಂದ ಅನುಗ್ರಹೀತ ರಾಗಿ ಸ್ವಪ್ನ ದ್ವಾರಾ ಶ್ಯಾಮಸುಂದರ ವಿಠಲ ಎಂಬ ಅಂಕಿತ ಪಡೆದು, ಸರಳ ವಾದ ಶೈಲಿಯಲ್ಲಿ ಅನೇಕ ಕೃತಿಗಳನ್ನು ರಚಿಸಿದ ಮಾನ್ವಿ ಗುಂಡಾಚಾರ್ಯರ ಸ್ನೇಹವೂ ದಾಸರಿಗೆ ಇತ್ತು. ಇವರ ಪ್ರಭಾವವೂ ಗೋವಿಂದರಾಯರ ಮೇಲೆ ಆಗದಿರಲಿಲ್ಲ.

ಅಂಕಿತ ಸ್ವೀಕಾರ

ಅಂಕಿತೋಪದೇಶವನ್ನು ಹೊಂದಿ ಜನ್ಮವನ್ನು ಸಾರ್ಥಕ ಮಾಡಿ ಕೊಳ್ಳಬೇಕೆಂಬ ಬಯಕೆ ಗೋವಿಂದರಾಯರಿಗೆ ಬಲವತ್ತರವಾಯಿತು.

ರಾಮಚಂದ್ರರಾಯರ ಸಲಹೆಯಂತೆ ಹರಿಪ್ರೇರಣೆಯಂತೆ ದೇವರಾಯನ ದುರ್ಗದ ಪರಮಪ್ರಿಯ ಸುಬ್ಬರಾಯ ದಾಸರಿಂದ ಅಂಕಿತೋಪದೇಶ ಪಡೆಯಲು ನಿಶ್ಚಯಿಸಿದರು.

ಪರಮಪ್ರಿಯ ಸುಬ್ಬರಾಯದಾಸರು ದೇವರಾಯನ ದುರ್ಗದ ಶ್ರೀ ನರಸಿಂಹ ದೇವರ ಸನ್ನಿಧಿಯಲ್ಲಿ ದಾಸಕೂಟ ಸಭೆಯನ್ನು ಸ್ಥಾಪಿಸಿ ಸಾವಿರಕ್ಕೂ ಮೀರಿದ ಸಾತ್ವಿಕರಿಗೆ ಅಂಕಿತೋಪದೇಶ ನೀಡಿ ಸಾಧನೆಯ ಮಾರ್ಗತೋರಿದ್ದರು. 'ಪರಮಾರ್ಥ ಚಂದ್ರೋದಯ' ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು.

೧೯೪೦ ರಲ್ಲಿ ಗೋವಿಂದರಾಯರು ದೇವರಾಯನದುರ್ಗಕ್ಕೆ ಹೊರಟು ನಿಂತರು. ರಾಮಚಂದ್ರರಾಯರಿಂದ ದಾಸರ ಭವ್ಯ ವ್ಯಕ್ತಿತ್ವವನ್ನು ತಿಳಿದ ಗೋವಿಂದರಾಯರಿಗೆ ದಾಸರನ್ನು ಪ್ರತ್ಯಕ್ಷ ನೋಡುವ ಕಾತುರತೆ ಇಮ್ಮಡಿಸಿತು. ಅವರಿಗೆ ಎಂದು ಶರಣಾದೇನೋ ಎಂಬುವ ಮನದ ಮಿಡಿತ ; ಬಂದರು. ದೇವರಾಯನ ದುರ್ಗದಲ್ಲಿ ರಥೋತ್ಸವ ಸಂದರ್ಭ, ದಾಸಕೂಟ ಸಭಾದಲ್ಲಿ ಸುಂದರೇಶ ಪ್ರಾಣ ದೇವರ ಪ್ರತಿಷ್ಠಾಪನೆಯ ಸಿದ್ಧತೆ ಬೇರೆ. ಇಂತಹ ಸಂದರ್ಭದಲ್ಲಿ ದಾಸರನ್ನು ಕಂಡರು.

ದಾಸರು ಆಜಾನುಬಾಹುಗಳು, ಉದ್ದನೆಯ ನಿಲುವು, ನಿಲುವಂಗಿ, ಅಂತರಂಗದ ವ್ಯಾಪಾರವನ್ನು ಅರಿಯಬಲ್ಲ ಅವರ ದೃಷ್ಟಿ, ತೇಜಸ್ವೀವದನ, ಮಂದಹಾಸದ ನಗೆ ಇವರೇ ನಿನ್ನ ಗುರು ಎಂದು ಸಾರಿ ಸಾರಿ ಹೇಳಿತು. ಸಾಷ್ಟಾಂಗ ನಮಸ್ಕಾರ ಮಾಡಿದರು. ಎರಡೂ ಭುಜಗಳನ್ನು ಹಿಡಿದು ದಾಸರು ಗೋವಿಂದರಾಯರನ್ನು ಎಬ್ಬಿಸಿದರು. ಕುಶಲ ಪ್ರಶ್ನೆಗಳಾದವು. ಎಷ್ಟೋ ದಿನಗಳ ಪರಿಚಯವಿರುವವರಂತೆ ಇವರೊಡನೆ ಮಾತನ್ನಾಡಿದರು. ಆ ಮಾತುಗಳೇ ಇವರನ್ನು ಸೆರೆ ಹಿಡಿದವು. ಗೋವಿಂದರಾಯರ ಮನೋದಾರ್ಢ್ಯವನ್ನು ಕಂಡು ಆನಂದಿಸಿದರು. ಅಂದು ಇಬ್ಬರು ಶಿಷ್ಯರಿಗೆ ಮೊದಲು ಉಪದೇಶವನ್ನು ಮಾಡಿದರು. ನಂತರ ಪ್ರಮಾಧಿ ನಾಮ ಸಂವತ್ಸರ ಫಾಲ್ಗುಣ ಬಹುಳ ಪ್ರತಿಪದೆಯಂದು ೨೪.೩.೧೯೪೦ ಪ್ರಾಣದೇವರ ಗುಡಿಯ ಕಟ್ಟೆಯ ಮೇಲೆ ಕೂಡಿಸಿ, ಶಿರದ ಮೇಲೆ ಹಸ್ತವನಿಟ್ಟು ತಮ್ಮ ಬಿಂಬಮೂರ್ತಿಯನ್ನು ಧ್ಯಾನಿಸುತ್ತಾ ಅಂಕಿತನಾಮವನ್ನು ನೀಡಿದರು.

ಗುರುಗೋವಿಂದವಿಠಲನೆ ನೀನಿವರ
ಕರುಣಾ ಕಟಾಕ್ಷದಿಂದೀಕ್ಷಿಸುತನ ಕಾಪಾಡೋ ಹರಿಯೇ ಪ.

ಗರುಡ ಗಮನನೆ ದೇವಗರ್ವಗಳ ಪರಿಹರಿಸಿ
ಸರ್ವಾಂತರಾತ್ಮಕನೆ ಕಾಪಾಡೋ ಹರಿಯೇ ಅ.ಪ.

ಸೃಷ್ಟ್ಯಾದಿ ಕರ್ತನೇ ಸುಗುಣ ಮೂರುತಿ ದೇವ
ಕಷ್ಟಗಳ ಪರಿಹರಿಸಿ ಕಾಪಾಡೊ ಹರಿಯೇ
ಕೃಷ್ಣ ಮೂರುತಿ ಹೃದಯ ಅಷ್ಟದಳಮಧ್ಯದಲಿ
ದೃಷ್ಟಿ ಗೋಚರನಾಗಿ ಕಾಪಾಡೋ ಹರಿಯೇ ೧

ಅಪಾರ ಮಹಿಮನೆ, ಆಪದ್ಬಾಂಧವನಾಗಿ
ತಾಪತ್ರಯಗಳ ಕಡಿದು ಕಾಪಾಡೋ ಹರಿಯೇ
ಕೋಪತಾಪದಿ ಭವ ದುರ್ಗಗಳನೆ ಪರಿಹಿಸಿಭವ
ಕೂಪದಿಂದೆತ್ತಿ ನೀ ಕಾಪಾಡೋ ಹರಿಯೇ ೨

ಹರಿಯೆ ಸರ್ವೋತ್ತಮನು । ಸಿರಿವಾಯು
ಮೊದಲಾದ ಸುರರೆಲ್ಲ ಕಿಂಕರರೆಂಬ
ವರಮಧ್ವ ಶಾಸ್ತ್ರವನೆ ತಿಳಿಸಿ ಕಾಪಾಡೋ ಹರಿಯೇ
ಪರಮಪುರುಷನೆ ತಂದೆ ಮುದ್ದುಮೋಹನವಿಠಲನೇ ನಿನ್ನ
ಪರತರಾತ್ಮಕವಾದ ದಿವ್ಯರೂಪವ ತೋರಿ ಕಾಪಾಡೋ ಹರಿಯೇ ೩

ಎಂಬುದಾಗಿ ಅಂಕಿತ ನಾಮ ಉಪದೇಶವಾಯಿತು. ಈ ಕೂಡಲೇ ದಾಸರ ಸ್ಪರ್ಶದಿಂದ ಗೋವಿಂದರಾಯರ

ಕಾಯವದು ರೋಮಾಂಚವಾಯಿತು
ಹಾಯವೆನಿಸಿತು ಜ್ಞಾನಸತ್ಸುಖ
ವಾಯುವಿನ ವೇಗದಲಿ ಓಡಿತು ದುಃಖದಜ್ಞಾನ
ಶ್ರೇಯವೆನಿಸಿತು ಹರಿಯಚಿಂತನೆ
ಮಾಯವೆನಿಸಿತು ಲೌಕಿಕವು ಪೂ
ರ್ಣಾಯುರಾರೋಗ್ಯಗಳ ಕೊಡುವುದು ಗುರುಕೃಪಾಬಲವು ॥

ಎಂಬಂತೆ ಗೋವಿಂದರಾಯರು ಗುರುಗೋವಿಂದವಿಠಲ ದಾಸರೆನಿಸಿದರು. ಮನಸ್ಸಿನಲ್ಲಿ ನವಚೈತನ್ಯ ಅಂಕುರಿಸಿತು. ಅಂತರಂಗದ ಕದವು ತೆರೆಯಿತೆಂದು ಎಂದು ಆನಂದಪಟ್ಟರು. ಸುಬ್ಬರಾಯ ದಾಸರು ಕೊಟ್ಟ ಕೊನೆಯ ಅಂಕಿತವಿದು,

ನೀನೇ ಕಡೆ ಇನ್ನಾರಿಗೂ ನಾ ಅಂಕಿತ ಕೊಡುವುದಿಲ್ಲ ಎಂದರು ಆದ್ದರಿಂದ ದಾಸರೇ ಕಡೆಯ ಶಿಷ್ಯರಾದರು. ಇದಾದ ಇಪ್ಪತ್ತು ದಿನಗಳೆಯುತಿರಲು ಸುಬ್ಬರಾಯ ದಾಸರು ಹರಿಪಾದ ಸೇರಿದರು.

"ವರಚೈತ್ರ ಪಂಚಮಿ ವರುಷವು ವಿಕ್ರಮ
ಶರಣರ ಪೊರೆಯಲು ಕರಿಗಿರಿಯಲ್ಲೀ
ಗುರುಮುಖ್ಯಪ್ರಾಣ ಪ್ರತೀಕವ ನಿಲಿಸುತ
ಆರು ಮೂರನೇದಿನ ಹರಿಯಸೇರುವೆನೆನುತಾ

ತೆರಳಿದರು ಮುದ್ದುಮೋಹನರು ಮರಳಿ ಬಾರದಾಪುರ ನರಹರಿಪುರಕೇ" ಎಂದು ಗುರುಗೋವಿಂದದಾಸರು ತಮ್ಮ ಗುರುಗಳನ್ನು ಕೊಂಡಾಡಿದ್ದಾರೆ.

ತೀರ್ಥಯಾತ್ರೆ

ಗುರುಗೋವಿಂದದಾಸರು ದಾಸರಾಗುವ ಮುನ್ನ ಅನೇಕ ತೀರ್ಥಕ್ಷೇತ್ರಗಳ ಸಂದರ್ಶನ ಮಾಡಿದ್ದವರಾಗಿದ್ದರೂ ದಾಸರಾದ ಮೇಲೆ ಮಾಡಿದ ಯಾತ್ರೆಯ ರೀತಿಯೇ ಬೇರೆ. ಕೆಲವು ಕಡೆ ತಂದೆ ವೆಂಕಟೇಶ ವಿಠಲ ಜೊತೆಯಲ್ಲಿ ಮತ್ತೆ ಕೆಲವು ಕಡೆ ಉರಗಾದ್ರಿ ವಾಸ ವಿಠಲದಾಸರ ಜೊತೆಯಲ್ಲಿ ಯಾತ್ರೆ ಮಾಡಿದರು.

ಪಾತ್ರರ ಸಂಗಡ ಯಾತ್ರೆಯ ಚರಿಸಿ ವಿ–
ಧಾತೃ ಪಿತನಗುಣಸ್ತೋತ್ರಗಳ
ಶ್ರೋತ್ರದಿ ಸವಿದು ವಿಚಿತ್ರಾನಂದದಿ
ಗಾತ್ರದ ಮರೆವುದೆ । ಫಲವಿದು ಬಾಳ್ವದಕೆ

ಎಂಬಂತೆ ಯಾತ್ರೆ ಮಾಡಿದವರಿವರು. ಅವರು ಯಾತ್ರೆ ಮಾಡುತ್ತಾ ತೀರ್ಥಕ್ಷೇತ್ರಗಳ ಸಂದರುಶನ ಮಾಡಿ ಮಹಿಮೆಗಳನ್ನು ವರ್ಣನೆ ಮಾಡಿರುವುದು ತೀರ್ಥಕ್ಷೇತ್ರಮಾಲಾ ಎಂಬುದಾಗಿ ದೀರ್ಘಕಾವ್ಯವಾಗಿದೆ.

ತಂಬೂರಿ ಪ್ರಾಪ್ತಿ

೧೯೪೧ ರಲ್ಲಿ ಅಬ್ಬೂರಿನ ಬ್ರಹ್ಮಣ್ಯ ತೀರ್ಥರದರ್ಶನ ಮಾಡಿ ತೀರ್ಥ ಪ್ರಸಾದ ಸ್ವೀಕರಿಸಿ ಕ್ಲೋಸ್‌ಪೇಟೆ (ಈಗಿನ ಚನ್ನಪಟ್ಟಣ)ಗೆ ಬಂದರು. ಅಲ್ಲಿ ಓವರ್‌ಸಿಯರ್ ಕೆ.ಟಿ. ಅನಂತಮೂರ್ತಿ ಎನ್ನುವವರ ಮನೆಯಲ್ಲಿ

ಶ್ರೀಗುರುಗಳು ತರಿಸಿ ಇಟ್ಟಿದ್ದ ತಂಬೂರಿಯನ್ನು ೬.೧.೧೯೪೧ ರಂದು ಪಡೆದು ಕೊಂಡರು. ದಾಸದೀಕ್ಷೆ ವಹಿಸಿದ ನಂತರ ದಾಸರಿಗೆ ಭೂಷಣವೆನಿಸಿದ ತಂಬೂರಿ ಪ್ರಾಪ್ತವಾಯಿತು. "ತಂಬೂರಿ ಮೀಟಿದವ ಭವಾಬ್ಧಿ ದಾಟಿದವ" ಎಂಬಂತೆ ಅಂದಿನಿಂದ ಮೈಸೂರು ವಾಸ ಮಾಡುತ್ತಾ, ಮುಂದೆ ಚಿಪ್ಪಗಿರಿಯಾತ್ರೆ ಯನ್ನು ಮಾಡಿ ವಿಜಯರಾಯರ ಸೇವಾಮಾಡಿ, ಎಲ್ಲಾ ಹರಿದಾಸರ ಕ್ಷೇತ್ರ ನೋಡುವ ಬಯಕೆಯಿಂದ ಮಾನ್ವಿಗೆ ತೆರಳಿದರು. ೨೮.೧೦.೪೧ ರಲ್ಲಿ ಮಾನ್ವಿಯಲ್ಲಿ ಆಸನ್ನಿಧಾನದಲ್ಲಿ ಶ್ರೀಮದ್ಧರಿಕಥಾಮೃತಸಾರ ಪಾರಾಯಣ ಮಾಡಿದರು.

ಅನಂತರ ವಿಜಯದಾಸರ ಜನ್ಮಸ್ಥಳ ಚೀಕಲಪರವಿಗೆ ಪ್ರಯಾಣ, ಕಾರ್ತೀಕ ಶುದ್ಧ ದಶಮಿ ೨೬.೧೦.೧೯೪೧ ರಲ್ಲಿ ವಿಜಯರಾಯರ ಆರಾಧನೆಯನ್ನು ಅಲ್ಲಿಯೇ ನಡೆಸಿ ಸಾಯಂಕಾಲ ಪಲ್ಲಕ್ಕಿ ಉತ್ಸವ ನರ್ತನ ಸೇವಾದಿಗಳನ್ನು ಮಾಡಿದರು.

೧೯೪೨ ರಲ್ಲಿ ದಾಸರು ಕರಿಗಿರಿಕ್ಷೇತ್ರದಲ್ಲಿ ಗುರುಗಳ ಆರಾಧನೆ ಮಾಡಿ ದೊಡ್ಡ ಬಳ್ಳಾಪುರಕ್ಕೆ ಬಂದರು. ಅಲ್ಲಿ ಮುದ್ದುಮೋಹನ ವಿಠಲದಾಸರಿಂದ ಸ್ಥಾಪಿತವಾದ ವಿಜಯವಿಠಲದೇವರ ದರ್ಶನವನ್ನು ಮಾಡಿದರು. ಮುದ್ದುಮೋಹನದಾಸರ ಶಿಷ್ಯರು ೬೦ ವರುಷದ ವೃದ್ಧರ ಭೇಟಿಯಾಯಿತು. ಅವರಿಂದ ಪರಮಗುರುಗಳ ವಿಚಾರವನ್ನು ಆದಷ್ಟು ಸಂಗ್ರಹಿಸಿದರು. ನಂತರ ಮುದ್ದುಮೋಹನದಾಸರ ತಂಬೂರಿ ಶಿಥಿಲವಾಗಿದ್ದುದನ್ನು ಕಂಡರು. ಹೀಗೆ ಅವರ ಯಾತ್ರೆ ಮಾಡುವ ಕಡೆಗಳಲ್ಲೆಲ್ಲಾ ಒಂದಲ್ಲ ಒಂದು ಅನುಭವವಾಗುತ್ತಿತ್ತು.

"ಮುದ್ದುಮೋಹನದಾಸರೇ ನಿಮ್ಮ ಶುದ್ಧಪಾದವನಂಬಿದೇ ತಿದ್ದಿ ಎನ್ನಯ ನಾದ್ಯ ವಿದ್ಯೆಯ ಬುದ್ಧಿ ನಿಲಿಸಿರಿ ಹರಿಯಲೀ"ಎಂಬ ದೇವರ ನಾಮ ಹಾಡಿಗುರುಗಳಿಗೆ ಸಮರ್ಪಿಸಿದರು. ಬಂಡುಣಿಯಂದದಲಿ ಹರಿ ನಾಮಸ್ಮರಿಸುತ್ತ ತಮ್ಮಧರ್ಮವನ್ನು ಎಂತಹ ಸಂದರ್ಭ ಬಂದರೂ ಬಿಡದೆ ಆಚರಣೆಗೆ ತಂದು ಇರುವ ಪೂತಾತ್ಮರಿವರು. ಸಾಧನ ಶರೀರದಿಂದ ನಿಜವಾದ ಸಾಧನ ಮಾಡಿ, ಈ ಶರೀರವು ಸಾಧನದ ರಥ ಎಂದವರು. "ಗಾತ್ರವೇ ಮಂದಿರ ನೇತ್ರವೇ ಮಹಾದೀಪ ಹಸ್ತಚಾಮರವು ಯಾತ್ರೆ ಪ್ರದಕ್ಷಿಣೆ" ಎಂಬ ಅನುಸಂಧಾನ ದಾಸರದು.

ಇವರು ತಮ್ಮ ಧರ್ಮವನ್ನು ಎಂದಿಗೂ ಬಿಡುತ್ತಿರಲಿಲ್ಲ ಎಂಬುದಕ್ಕೆ ಒಂದು

ದೃಷ್ಟಾಂತವೆಂದರೆ ೧೯೪೫ರಲ್ಲಿ ಪ್ರಾರಬ್ಧ ಕರ್ಮವಶಾತ್ ಮೂತ್ರಕೋಶದ ಖಾಯಿಲೆ ಆಯಿತು. ಆಗ ಆಸ್ಪತ್ರೆಗೆ ಸೇರಿ ಕೆಲವು ದಿನಗಳು ಅಲ್ಲಿ ಇರಬೇಕಾದ ಪ್ರಸಂಗ ಬಂದಿತ್ತು. ಆಕಾಲದಲ್ಲಿ ಸಹ ಪ್ರತಿನಿತ್ಯ ಸ್ನಾನಮಾಡಿ ಊರ್ಧ್ವ ಪುಂಡ್ರಧಾರಣೆ ಮಾಡಿಕೊಂಡು ಉದಯ ರಾಗದಿಂದ ಪ್ರಾರಂಭಿಸಿ ತಾರತಮ್ಯ ಭಜನೆ ಮಾಡುತ್ತಿದ್ದರು. ವಿಜಯಧ್ವಜತೀರ್ಥರ ವ್ಯಾಖ್ಯಾನ ಸಹಿತ ಭಾಗವತವನ್ನು ಸಂಪೂರ್ಣ ಅಧ್ಯಯನ ಮಾಡಿದರು. ಇತರೆ ರೋಗಿಗಳು ಆಕ್ಷೇಪಮಾಡಿದರೆ ವಾರ್ಡಿನಿಂದ ಹೊರಗೆ ಬಂದು ಹೇಳಿಕೊಂಡು ವೈದ್ಯರು ಬರುವ ವೇಳೆಗೆ ಹಾಸಿಗೆಯ ಬಳಿ ಇರುತ್ತಿದ್ದರು. ಆಸ್ಪತ್ರೆಯ ಹೊರ ಆವರಣಕ್ಕೆ ಬಂದು ಮರದ ಕೆಳಗೆ ಮಡಿಯುಟ್ಟು ಕುಳಿತು, ಮನೆಯಿಂದ ತಂದ ಊಟಮಾಡುತ್ತಿದ್ದರು. ಹೀಗೆ ಎರಡು ತಿಂಗಳು ಕಾಲ ಕಳೆದ ಮಂಗಳಾತ್ಮರು ಇವರು.

ಮಾತೃ ವಿಯೋಗ

ಗುರುಗೋವಿಂದದಾಸರಿಗೆ ತಮ್ಮ ತಾಯಿಯವರಲ್ಲಿ ಅಸದೃಶ ಭಕ್ತಿ : ಮಾತೃ ದೇವೋಭವ ಎಂಬ ನುಡಿ ಅನ್ವರ್ಥ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದು ಕೊಂಡ ಅವರಿಗೆ ತಂದೆಯ ಸ್ಥಾನವನ್ನೂ ತಾಯಿಯವರೇ ಅಲಂಕರಿಸಿದ್ದರು. ಬಂಧುಗಳೆಲ್ಲರೂ ಕೈ ಬಿಟ್ಟರೂ ಆಪದ್ಬಂಧುವನ್ನು ನಂಬಿ ತಮ್ಮನ್ನು ಸಾಕಿ ಸಲಹಿ ಒಬ್ಬ ಹರಿಭಕ್ತನನ್ನಾಗಿ ಮಾಡಲು ಆಕೆ ಪಟ್ಟ ಬವಣೆಗಳು ಇವರ ಕಣ್ಮುಂದೆ ಸುಳಿದಾಡುತ್ತಿದ್ದವು. ೧೯೫೦ ರಲ್ಲಿ ತಾಯಿಯವರಿಗೆ ದೇಹಾಲಸ್ಯವಾಗಿ ಹಾಸಿಗೆ ಹಿಡಿದರು. ವೈದ್ಯರು ತಪಾಸಣೆ ನಡೆಸಿ ಮರಣ ಸೂಚನೆಯನ್ನೂ ಕೊಟ್ಟರು. ಆಗ ದಾಸರು ಮನೆಯಲ್ಲಿಯೇ ಶ್ರೀಮದ್ಭಾಗವತ ಸಪ್ತಾಹ ನಡೆಸಿ ತಾಯಿಯವರಿಗೆ ಭಾಗವತ ಶ್ರವಣ ಮಾಡಿಸಿದರು. ತಾಯಿಯವರ ಮುಂದೆ ಹರಿಭಕ್ತಿಸಾರ ಹರಿಕಥಾಮೃತಸಾರ ಮುಂತಾದ ಸದ್ಗ್ರಂಥಗಳ ಪಾರಾಯಣವನ್ನು ಸ್ವತಃ ಮಾಡುತ್ತಿದ್ದರು. ವಿಕೃತಿ ನಾಮಸಂವತ್ಸರದ ಜ್ಯೇಷ್ಠ ಬಹುಳ ತೃತೀಯಾದಿನ ದಾಸರ ತಾಯಿ ಲಕ್ಷ್ಮೀಬಾಯಿಯವರು ದೇಹತ್ಯಾಗ ಮಾಡಿದರು. ಅವರ ಪ್ರಾಣೋತ್ಕ್ರಮಣ ಬಲಗಣ್ಣಿನ ಮೂಲಕ ಆಯಿತು ಎನ್ನುತ್ತಾರೆ. ಕಾರಣ ಬಲಗಣ್ಣಿನಲ್ಲ ಪ್ರಾಣ ಹೋದರೆ ಪುನರ್ಜನ್ಮವಿಲ್ಲ ಎಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿದೆ. ತಮ್ಮ ತಾಯಿಯ ದೇಹವನ್ನು ಸಂಸ್ಕಾರ ಮಾಡಿ ಇಟ್ಟ ಬಲಿಯನ್ನವನ್ನು ಕಾಗೆ ಮುಟ್ಟಲಿಲ್ಲ. ಗರುಡ ಪಕ್ಷಿ ಬಂದು ತೆಗೆದುಕೊಂಡು ಹೋಗಿದ್ದನ್ನು ಅಂದು ದಾಸರೊಡನಿದ್ದ ಪುರೋಹಿತರು ಒಡನಾಡಿಗಳು

ಹೇಳುತ್ತಾರೆ. ತಮ್ಮ ತಾಯಿಯ ಸಾಧನವನ್ನು ದಾಸರು ತಮ್ಮ ಒಂದು ಕೀರ್ತನೆಯಲ್ಲಿ ತಿಳಿಸುತ್ತಾರೆ.

ಮೋದಮುನಿಮತನಿಷ್ಠೆ । ಆದರದೊಳನುಷ್ಠಾತೆ
ಸಾದರದಿ ಭಾಗವತ । ಮೊದಲಾದ ಶಾಸ್ತ್ರಶ್ರುತೆ
ಖೇದಮೋದಾದಿಎನ್ನೆ । ದ್ವಂದ್ವಗಳ ಸಹಿಷ್ಣುತೆ
ಸಾಧನೋತ್ತಮ ಗೈದೆ । ಈ ದೇಹದಾತೇ ॥೧॥

ವಿಷ್ಣುಪಂಚಕದ್ವಯವು । ಕೃಷ್ಣದರ್ಶನವಷ್ಟೆ
ಕೃಷ್ಣಕಾವೇರ್ಯಾದಿ । ನಿಷ್ಟೆಯಲಿಮಜ್ಜನವ
ಕೃಷ್ಣಸಿರಿವೆಂಕಟನ । ಬೆಟ್ಟಕ್ಕೆ ತ್ರೈ ಬಾರಿ
ಕಷ್ಟದಲಿ ಸಾಧನೆ ಸ । ಹಿಷ್ಣುತೆಯು ಎಷ್ಟಮ್ಮಾ ॥೨॥

ಸೇತು ರಾಮೇಶ್ವರದ । ಯಾತ್ರೆಗಳಗೈದು ಸ
ತ್ಪಾತ್ರರನ್ನಾದರಿಸಿ । ಕಾತುರರತೆಯಲ್ಲೀ
ವಾತಾಂತರಾತ್ಮ ಗುರುಗೋವಿಂದ ವಿಠಲನ
ಕೀರ್ತನೆಯ ಚತುರೇ । ತವ ಪಾದಕಾನಮಿಪೇ ॥೩॥

ನಮಿಸುವೆನುಮನ್ಮಾತೆ ಪದಯುಗಳಕೇ
ಅಮಮ ಎನ್ನಲ್ಲಿ ನಿಮ್ಮ । ಮಮತೆ ಎಷ್ಟಮ್ಮಾ

ಎಂದು ತಾಯಿಯವರ ಅಂತರ್ಯಾಮಿಗೆ ಅವರು ಸಮರ್ಪಿಸಿದ್ದಾರೆ. ಸುಮಾರು ೫೦ ಕ್ಕೂ ಹೆಚ್ಚು ವರ್ಷ ಮಗನ ಶ್ರೇಯಸ್ಸಿಗಾಗಿ ಜೀವನ ತೇಯ್ದು ಕೊಂಡಿದ್ದ ಮಹಾನ್ ಮಾತೃ ಚೇತನ ಕಣ್ಮರೆಯಾಯಿತು. ತಾಯಿಯವರ ಅಗಲಿಕೆಯ ನಂತರ ಅಂತರ್ಮುಖಿಗಳಾದ ದಾಸರು ಧಾರ್ಮಿಕ ಚಟುವಟಿಕೆಗಳನ್ನು ಮುಂದುವರೆಸುತ್ತಾ ಪುಣ್ಯಕ್ಷೇತ್ರ ಯಾತ್ರೆಗಳನ್ನು ಮುಂದುವರೆಸಿದರು. ಕ್ರಿ.ಶ. ೧೯೫೧ ರಲ್ಲಿ ತಾಯಿಯವರ ಕಾರ್ಯವನ್ನು ಘಟಿಕಾಚಲದಲ್ಲಿ ಮಾಡಲು ನಿರ್ಧರಿಸಿದ ದಾಸರು ತಮ್ಮ ಆತ್ಮೀಯರಾದ ತಂದೆ ವೆಂಕಟೇಶವಿಠಲ ದಾಸರೊಂದಿಗೆ ಅನೇಕ ದಾಸಬಂಧುಗಳನ್ನು ಕೂಡಿಕೊಂಡು ಬಂದರು. ಪ್ರಾತರಾಹ್ನೀಕದ ನಂತರ ಎಲ್ಲರೂ ಹರಿದಾಸರ ವೇಷದಲ್ಲಿ ಬೆಟ್ಟವನ್ನು

ಏರಿದರು. ಬೆಟ್ಟದಲ್ಲಿ ಶ್ರೀನರಸಿಂಹ ದೇವಾಲಯದ ಹೊರಬಾಗಿಲಿಗೆ ಬೀಗ ಹಾಕಿತ್ತು. ಎಲ್ಲರಿಗೂ ನಿರಾಸೆಯಾಯಿತು. ಅರ್ಚಕರು ಬರುವವರೆಗೂ ಎಲ್ಲರೂ ಭಜನೆ ಮಾಡಬೇಕೆಂದು ಸಂಕಲ್ಪ ಮಾಡಿಸಿ ಬಿಚ್ಚುಮನದಿಂದ ಮುಚ್ಚಿದ ಬಾಗಿಲ ಮುಂದೆ, ತಮ್ಮನ್ನು ತಾವು ಮರೆತು ಭಜನೆ ಮಾಡಲು ತೊಡಗಿದರು ಸುಳಾದಿಗಳು ಉಗಾಭೋಗಗಳು ದೇವರ ನಾಮಗಳು ಗಾತ್ರವ ಮರೆದು ವಿಚಿತ್ರಾನಂದವನ್ನು ಅನುಭವಿಸುತ್ತಿರುವ ಕ್ಷಣಗಳಲ್ಲಿ ಅರ್ಚಕರು ಬಂದು ಕೂಗಿದಾಗ ಎಲ್ಲರಿಗೂ ಎಚ್ಚರ ಆಶ್ಚರ್ಯ ಬೇರೆ, ಕಾರಣ ಹಾಕಿದ ಬೀಗ ತೆಗೆದಿತ್ತು. 'ಮಹಾದ್ವಾರದ ಬೀಗವನ್ನು ತೆಗೆದವರು ಯಾರು' ಅರ್ಚಕರ ಪ್ರಶ್ನೆಗೆ ಮೌನವೇ ಉತ್ತರ, ಹೀಗಾಗಿ ಪುರಂದರದಾಸರು ವಿಜಯದಾಸರಿಗೆ ಅದ್ಭುತ ಮಹಿಮೆ ತೋರಿದವ ಗುರುಗೋವಿಂದ ದಾಸರಿಗೂ ತೋರಿದ. ದಾಸರು ನರಸಿಂಹನನ್ನ ನೋಡಿ ಕೊಂಡಾಡಿದರು. ಮುಂದೆ ಮುಖ್ಯಪ್ರಾಣದೇವರ ದರ್ಶನ ಮಾಡಿದರು. ಇಲ್ಲಿ ಪ್ರಾಣದೇವರು ಪದ್ಮಾಸನದಲ್ಲಿ ಕುಳಿತಿರುತ್ತಾರೆ. ಕೈಯಲ್ಲಿ ಜಪಮಾಲೆ ಹಿಡಿದಿದ್ದಾರೆ. ಇಂತಹ ಪ್ರಾಣದೇವರ ದರ್ಶನ ಮಾಡಿ ಪುನೀತರಾದರು, ನಂತರ ತಿರುಪತಿಗೆ ದಾಸರ ಪ್ರಯಾಣ ೬.೨.೫೧ ರಂದು ಪ್ರಾತಃಕಾಲ ಮೂರುವರೆ ಗಂಟೆಗೇ ಎದ್ದು ಆಹ್ನಿಕ ತೀರಿಸಿಕೊಂಡು ಐದು ಗಂಟೆಗೆ ಎದ್ದು ಕಾಲಿಗೆ ಗೆಜ್ಜೆ ಕಟ್ಟಿ ತಂಬೂರಿ ಮೀಟುತ್ತ ನೀಲವರ್ಣನ ಗಾನಪಾಡುತ್ತ ಬೆಟ್ಟ ಹತ್ತಲು ಪ್ರಾರಂಭಿಸಿ ಎಂಟು ಗಂಟೆಗೆ ಗಾಳಿ ಗೋಪುರದ ಬಳಿಬಂದು ಧೂಳಿದರ್ಶನ ಪಡೆದರು. ನಂತರ ಸ್ವಾಮಿಪುಷ್ಕರಣೀ ಸ್ನಾನ ವರಾಹ ದೇವರ ದರ್ಶನ ಮಾಡಿ ಶ್ರೀನಿವಾಸನ ದರ್ಶನಕ್ಕೆ ಒಂದೂವರೆ ಗಂಟೆಯಾಯಿತು ಎಂದು ಅಂದೇ ಅವರ ಪುಸ್ತಕದಲ್ಲಿ ಬರೆದಿಟ್ಟಿದ್ದಾರೆ. ನಾರಾಯಣದಾಸರ ಛತ್ರದಲ್ಲಿ ಊಟ ವಸತಿ ಏರ್ಪಾಟು ಆಯಿತು.

ನಾರಾಯಣದಾಸರು ಒಳ್ಳೆ ಕಲಾವಿದರು ಕೀರ್ತನೆ ಹೇಳುವುದರಲ್ಲಿ, ಮೃದಂಗ ನಿಡಿಸುವುದರಲ್ಲಿ, ನರ್ತನ ಸೇವೆಯಲ್ಲಿ ಸಹಚತುರರಾಗಿದ್ದರು ನರ್ತನ ಸೇವೆಯ ವಿಶೇಷವೆಂದರೆ ತಲೆಯ ಮೇಲೆ ನೀರು ತುಂಬಿದ ದೊಡ್ಡ ತಂಬಿಗೆ ಅದರ ಮೇಲೆ ಒಂದು ಥಾಲಿ ಅದರ ಮೇಲೆ ಒಂದು ಗಿಂಡಿ ಅದರಲ್ಲಿ ಒಂದು ದೀಪ ಇಟ್ಟುಕೊಂಡು ಕೈಯಲ್ಲಿ ತಂಬೂರಿ ಚಿಟಕಿ ಹಿಡಿದು ನರ್ತನ ಸೇವೆ ಮಾಡಿದರು. ದಾಸರು ಇದನ್ನು ಕಂಡು ತುಂಬ ಆನಂದಪಟ್ಟರು.

ಶ್ರೀನಿವಾಸನನ್ನು ಕಂಡು "ಆನಂದಗಿರಿರಾಯನೆ ಪಿಡಿಕೈಯ – ನಾ ನಿನ್ನ ಪಾದಕ್ಕಾನಮಿಸುವೆ ಸಂತತ ಶರಣರ ಪ್ರೀಯ"

ಎಂಬ ಕೀರ್ತನೆಯನ್ನು ಮಾಡಿದ್ದಾರೆ ನಂತರ ಪದುಮಾ ಸರೋವರದಲ್ಲಿ ಪ್ರೋಕ್ಷಣೆ, ಪದ್ಮಾವತಿ ದರ್ಶನ ಮಾಡಿದೆ ಎಂದು ಹೇಳುತ್ತಾರೆ. ದಾಸರು ಬೆಟ್ಟವನ್ನು ನಡೆದುಕೊಂಡು ಹತ್ತಿದ್ದಾರೆ. ಅವರ ಅನುಭವ ಅವರ ವಾಣಿ ಯಲ್ಲೇ ಹೇಳುವುದಾದರೆ

ಮೆಟ್ಟಲು ಮೆಟ್ಟಲುಗಳನೇರುತ್ತಾ । ತಾಳಂಗಳನು
ತಟ್ಟಿ ಹರಿ ಹರಿ ಎಂದೊದರುತ್ತಾ । ಪಾಪಂಗಳತಲೆ
ಮೆಟ್ಟಿ ತಂಬೂರಿಯ ಮೀಟುತ್ತಾ । ಕಾಲೊಳು ಗೆಜ್ಜೆಗಳ
ಕಟ್ಟುತ್ತಾ ಘಲು ಘಲು ಘಲುಕೆನ್ನುತ್ತಾ । ಜಗ
ಜಟ್ಟಿ ಹನುಮನನೀ ನೆನೆಯಲೋ ಮನವೆ ॥

ಹೀಗೆ ದಾಸರು ಅಂದು ತಿರುಪತಿ ಯಾತ್ರೆ ಮಾಡಿದ ನಂತರ ಹಲವಾರು ಬಾರಿ ಮುಂದೆ ತಿರುಪತಿಗೆ ಹೋಗಿ ಬಂದರು, ದಾಸರ ಮೇಲಿನ ಕಾರುಣ್ಯದಿಂದ ಶ್ರೀಹರಿದಾಸರ ಮೂಲಕವಾಗಿ ಪ್ರತೀ ಪುರಂದರದಾಸರ ಆರಾಧನೆಯನ್ನು ಅಖಿಲ ಭಾರತ ಹರಿದಾಸ ಸಮ್ಮೇಳನವನ್ನು ೨೩.೧.೧೯೭೬ ರಿಂದ ೨೯.೧.೧೯೭೬ ರವರೆಗೆ ವಿಜೃಂಭಣೆಯಿಂದ ಅಲ್ಲಿಯೇ ನಡೆಸಿದನು. ಅದು ದಾಸರು ನೀಡಿದ್ದ ಪ್ರವಚನ ದೇವಾಲಯದ ಹಿರಿಯ ಅಧಿಕಾರಿಗಳಾಗಿದ್ದ ಪಿ.ವಿ.ಆರ್.ಕೆ. ಪ್ರಸಾದರ ಮನಸ್ಸಿಗೆ ಬಂದು ದಾಸಸಾಹಿತ್ಯ ಪ್ರಾಜೆಕ್ಟ್‌ಗೆ ಅಂಕುರಾರ್ಪಣವಾಯಿತು. ಅದು ಇಂದು ಬೃಹದಾಕಾರವಾಗಿ ಬೆಳೆದು. ದೇಶದಾದ್ಯಂತ ವ್ಯಾಪಿಸಿ ನಿಂತಿರುವುದು ದಾಸರ ಪರಿಶ್ರಮದ ಫಲವಲ್ಲದೆ ಮತ್ತೇನು ಹೀಗೆ ದಾಸರ ಮೇಲೆ ಶ್ರೀನಿವಾಸ ಪರಮಾನುಗ್ರಹ ಮಾಡಿದ್ದಾನೆ. ತಾಯಿಯವರ ಇಹಲೋಕ ಸಂಬಂಧ ತೊರೆದ ನಂತರ ಪಿತೃ ಕಾರ್ಯಾತ್ಮಕ ಭಗವತ್ಸೇವಾಕ್ಕಾಗಿ ದಾಸರು ಐದು ತಿಂಗಳ ಕಾಲ ಉತ್ತರ ಯಾತ್ರೆ ಮಾಡಿದರು. ಖರನಾಮ ಸಂವತ್ಸರ ಫಾಲ್ಗುಣ ಬಹುಳ ಸಪ್ತಮಿ ಮಂಗಳವಾರ ಪ್ರಾತಃಕಾಲ ಮೈಸೂರಿನಿಂದ ಹೊರಟು ಶ್ರೀರಂಗಪಟ್ಟಣ, ತುಮಕೂರು, ದೇವರಾಯನ ದುರ್ಗ ಹರಿಹರ, ಕೊಲ್ಹಾ ಪುರ, ಪಂಢರಾಪುರ, ಪೂನ, ಬೊಂಬಾಯಿ, ನಾಶಿಕ, ತ್ರಿಯಂಬಕ, ಭೂಸಾವಲ್, ಉಜ್ಜಯನಿ, ಭೂಪಾಲ, ಹೋಷಂಗಾಬಾದ್, ಮಣಿಪುರ್, ಚಿತ್ರಕೂಟ, ಪ್ರಯಾಗ, ಕಾಶಿ, ಗಯಾ, ಕುರುಕ್ಷೇತ್ರ, ಹರಿದ್ವಾರ, ಹೃಷಿಕೇಶ, ದೇವಪ್ರಯಾಗ, ಕೀರ್ತಿನಗರ, ರುದ್ರ ಪ್ರಯಾಗ, ಕರ್ಣಪ್ರಯಾಗ, ಚಮೂಲಿ, ಪಿಪ್ಪಲುಕೋಟೆ, ಗುಲಾಬ್ ಜೆಟ್ಟಿ, ಜೋಡಿಮಠ, ಪಾಂಡುಕೇಶ್ವರ,

ಹನುಮಾನ್ ಜೆಟ್ಟಿ, ಶ್ರೀಬದರಿ ಕ್ಷೇತ್ರ ನೈಮಿನಾಥಧಾಮ ಸಿಂಧ್ರಿ (ದಾಮೋದರ ನದಿ) ಕಲ್ಕತ್ತ ಜಗನ್ನಾಥ ಪೂರಿ, ಸಿಂಹಾಜಲ ರಾಜಮಹೇಂದ್ರಿ, ಬೆಜವಾಡ, ಮಂಗಳಗಿರಿ, ಗದ್ವಾಲ್, ದರೂರ್ ಮೊದಲಾ ಕಲ್ಲು ಐಜಿ, ವೇಣಿ ಸೋಮಪುರ ರಾಯಚೂರು, ಮಂತ್ರಾಲಯ, ಆದವಾನಿ, ತಾಡಪತ್ರಿ, ಪ್ರೊದಟೂರು ತಿರುಪತಿ ಚಿತ್ತಾನೂರು, ಕಾಳಹಸ್ತಿ, ಕಪಿಲತೀರ್ಥ, ತಿರುಮಲ, ಅರ್ಕೋಣ, ಕಂಚಿ, ತಿರುವಣ್ಣಾಮಲೈ, ತಿರುಕೊಯಿಲೂರು, ಚಿದಂಬರಂ, ಶ್ರೀಮುಷ್ಟ ಕುಂಭಕೋಣ, ಶ್ರೀರಂಗ, ಮಾನಾ ಮಧುರಿ ರಾಮನಾಡು ನವಪಾಷಾಣ ದರ್ಭಶಯನ ರಾಮೇಶ್ವರ ಧನುಷ್ಕೋಟಿ, ಮಧುರೆ ತಿನ್ನವೆಲ್ಲಿ, ಶ್ರೀವೈಕುಂಠ, ತೋತ್ತಾದ್ರಿ, ಶುಚೀಂದ್ರ ಅನಂತಶಯನ ವಲ್ಲಲ ಎರ್ನಾಕುಲು ಕೊಜಿ ಕಲ್ಲಿಕೋಟೆ ಕ್ಷೇತ್ರಗಳಿಗೆ ಯಾತ್ರೆ ಮಾಡಿಬಂದು ೨೬–೮–೧೯೫೨ ರಲ್ಲಿ ಬದರಿ ಸಮಾರಾಧನೆ ಮಾಡಿದರು. ಈ ಎಲ್ಲ ಕ್ಷೇತ್ರಗಳ ಮಹಿಮೆಯನ್ನು ತಮ್ಮ ತೀರ್ಥಕ್ಷೇತ್ರ ಮಾಲಾ ಎಂಬ ಕೃತಿಯಲ್ಲಿ ಭಾಮಿನೀಷಟ್ಪದಿಯಲ್ಲಿ ಸೆರೆಹಿಡಿದಿಟ್ಟಿದ್ದಾರೆ.

ಈ ಯಾತ್ರೆಯಲ್ಲಿ ಉಡುಪಿಯಾತ್ರೆ ಆಗಲಿಲ್ಲವಾದ ಕಾರಣ ೧೯೫೪ರಲ್ಲಿ ಧರ್ಮಸ್ಥಳ ಯಾತ್ರೆ ಮಾಡಿಕೊಂಡು ೧೦.೭.೫೪ ರಂದು ಷಷ್ಠಿಪೂರ್ಣ ಶಾಂತಿಯನ್ನು ಉಡುಪಿಯಲ್ಲಿ ನಡೆಸಿದರು. ಅಂದು ೧೦೦೮ ಎಳನೀರಿನಿಂದ ಶ್ರೀಕೃಷ್ಣನಿಗೆ ಮಹಾಭಿಷೇಕವಾಗಿತ್ತು. ಅಷ್ಟ ಮಠದ ಯತಿಗಳು ಸೇರಿದ್ದರು. ಹಾಗಿಯೇ ಸಮುದ್ರ ಸ್ನಾನ ಒಡ ಭಾಂಡೇಶ್ವರ ದರ್ಶನ ಪಾಜಕ ಕ್ಷೇತ್ರ ಎಲ್ಲ ದರ್ಶನ ಮಾಡಿದರು ೧೩.೭.೫೪ ರಂದು ಸೋದೆಮಠದಲ್ಲಿ ಶ್ರೀಗಳವರು ಕಾಣಿಯೂರು ಶ್ರೀಗಳವರಲ್ಲಿ ಸುಧಾವ್ಯಾಸಂಗ ಮಾಡುತ್ತಿದ್ದು ಅದರ ಮಂಗಳ ಮಹೋತ್ಸವದಲ್ಲಿ ಪಾಲ್ಗೊಂಡು ತುಂಬ ಹರ್ಷಿತರಾದರು. ಕುಂಜಿ ಬೆಟ್ಟದಿಂದ ಎರಡು ಮೈಲಿ ದೂರದಲ್ಲಿ ಇಂದ್ರಾಣಿ ಕ್ಷೇತ್ರ ಎಂಬ ಸ್ಥಳಕ್ಕೆ ಕಾಲು ನಡಿಗೆಯಲ್ಲಿ ಹೋಗಿ ಅಲ್ಲಿ ಉದ್ಭವವಾಗಿರುವ ನಾರಾಯಣ ವಾಸುದೇವ ಪ್ರದ್ಯುಮ್ನ ಸಂಕರ್ಷಣ ಅನಿರುದ್ಧ ಮೂರ್ತಿಗಳು ಎದುರಿಗೆ ಶಚಿದೇವಿ ಅಲ್ಲಿ ಪುಲೋಮಜ ಎನ್ನುತ್ತಾರೆ ಇವಳೇ ಇಂದ್ರಾಣಿ ನಾಲ್ಕು ಭುಜ ಮೇಲಿನ ಎರಡು ಕೈಯಲ್ಲಿ ಪದ್ಮ ಕೆಳಗೆ ಒಂದು ಕೈಯಲ್ಲಿ ಈ ಅಭಯಹಸ್ತ ಮತ್ತೊಂದು ಕೈಯಲ್ಲಿ ವರದ ಹಸ್ತ ಇದೆ. ಇದು ಚ್ಯವನ ಋಷಿಗಳ ತಪಃಸ್ಥಾನ ಅವರ ತಪಸ್ಸಿನ ಫಲವಾಗಿ ಮೂರ್ತಿಗಳು ಉದ್ಭವಿಸಿವೆಯೆನ್ನುವರು. ಅಲ್ಲದೆ ಲಕ್ಷ್ಮೀ – ಮಾಯಾ ಜಯಾ ಕೃತಿ – ಶಾಂತಿ ರೂಪಗಳಿಂದ ಒಡ ಮೂಡಿರುತ್ತಾಳೆ. ಇಂದ್ರ ಇಲ್ಲಿ ಬಂದು ಈ ಪಂಚರೂಪಿ ಹರಿಯನ್ನು ಸೇವೆ ಮಾಡಿದನೆಂತಲೂ ಆಗ ಶ್ರೀಹರಿಯ ಆಜ್ಞೆ

ಯಂತೆ ಲಕ್ಷ್ಮೀದೇವಿ ಪ್ರತ್ಯಕ್ಷಳಾದಳು. ದೇವೇಂದ್ರನು ಶಚಿಯನ್ನು ಪ್ರೀತಿಸುವಂತೆ ವರದಾನ ಮಾಡಿದಳು ಲಕ್ಷ್ಮೀನಾರಾಯಣರ ಅನುಗ್ರಹ ಪಡೆದು ಪತ್ನಿ ಸಮೇತನಾಗಿ ಅಮರಾವತಿಗೆ ತೆರಳಿದ, ಇಂದ್ರ ಆಗ ಶಚೀವರಪ್ರದಳಾದ ಲಕ್ಷ್ಮೀದೇವಿಯ ಪ್ರತಿಷ್ಠೆ ಅಲ್ಲಿಯೇ ಮಾಡಿದರು ಅವಳೇ ಇಂದ್ರಾಣಿ ಅವಳು ಮಾಡಿದ ಯಜ್ಞಕುಂಡವೇ ಇಂದ್ರಾಣಿ ತೀರ್ಥ. ಇಲ್ಲಿ ಸ್ನಾನ ಮಾಡಿದರೆ ಬ್ರಹ್ಮಹತ್ಯಾದಿ ಪಾಪ ಪರಿಹಾರವಾಗುವುದು. ಈ ಕ್ಷೇತ್ರಕ್ಕೆ ವೇದಾಚಲ ಎಂದು ಹೆಸರು ಈ ಪರ್ವತ ಚಕ್ಷುಷ್ಮತಿ ಮತ್ತು ವಿನತಾನದಿ ಮಧ್ವದಲ್ಲಿರುತ್ತದೆ ನಾಲ್ಕು ಮೂಲೆಗಳ ಚತುರ್ವೇದೋಕ್ತ ತೀರ್ಥಗಳು ಇವೆ ಎಂಬಷ್ಟು ವಿಚಾರವನ್ನು ಗುರು ಗೋವಿಂದ ದಾಸರು ತಮ್ಮ ದಿನಚರಿಯಲ್ಲಿ ಉಲ್ಲೇಖಿಸಿದ್ದಾರೆ ಅಲ್ಲದೆ ದಾಸರು ಪಾಜಕ ಕ್ಷೇತ್ರದ ವಿಚಾರವನ್ನು ತಿಳಿಸುತ್ತಾ ಉಡುಪಿಯಿಂದ ಏಳು ಮೈಲು ದೂರದಲ್ಲಿರವ ಇದು ಆಚಾರ್ಯರ ಜನ್ಮಸ್ಥಳ. ವಾಸುದೇವ ತೀರ್ಥಸ್ನಾನ ಮಾಡಿ ಆಚಾರ್ಯರು. ಹುಟ್ಟಿದ ಮೆಟ್ಟಿದ ಉಪಯೋಗಿಸಿದ ಸ್ಥಳ ವಸ್ತುಗಳ ದಿವ್ಯ ದರ್ಶನ ಮಾಡಿದರು, ಗುರುಗೋವಿಂದದಾಸರು.

ಉಡುಪಿಯಾ ಯಾತ್ರೆಯ ಮಾಡಿ । ಉಡುಪಿಯಾ ||ಪ||

ಉಡುಪಿಯ ಯಾತ್ರೆಯನ್ನೇ ಮಾಡಿ । ಭಕ್ತಿ
ಮುಡುಪಿತ್ತು ಪ್ರಮೋದ ಬೇಡಿ । ಅಹ
ನಡುದೇಹದೋಳೀಹ । ನಡುನಾಡಿ ಕಮಲದಿ
ಒಡೆಯ ಶ್ರೀ ಕೃಷ್ಣನ । ಧೃಡಭಕ್ತಿಯಿಂದಭಜಿಸಿ ||ಅ.ಪ||

ಎಂಬ ಆಧ್ಯಾತ್ಮ ಬೋಧಕ ಕೀರ್ತನೆಯನ್ನು ರಚಿಸಿದ್ದಾರೆ.

ನಂತರ ದಾಸರು ಉಡುಪಿಯಿಂದ ಹೊರಟು ವಾದಿರಾಜರು ತೀರ್ಥ ಪ್ರಬಂಧದಲ್ಲಿ ವರ್ಣನೆಯನ್ನು ಮಾಡಿದ "ಸಪ್ತೈತೇ ಮೋಕ್ಷ ದಾಯಕಾಃ" ಎಂಬ ರಜತ ಪೀಠ, ಕುಮಾರಾದ್ರಿ ಕುಂಭಾಸಿ, ಕೋಟೀಶ್ವರ ಕ್ರೋಢ ಶಂಕರನಾರಾಯಣ ಕ್ಷೇತ್ರ, ಗೋಕರ್ಣ, ಕೊಲ್ಲೂರು, ಮೂಕಾಂಬಿಕೆಯ ಸಂದರ್ಶನ ಮಾಡಿದರು. ಕುಂಭಾಸಿ ಕ್ಷೇತ್ರದ ಮಹಿಮೆಯನ್ನು ತಿಳಿಸುತ್ತಾರೆ. ತ್ರೇತೆಯಲ್ಲಿ ಇದು ಮಧುಕಾನನ ದ್ವಾಪರದಲ್ಲಿ ಗೌತಮಕ್ಷೇತ್ರ ಕಲಿಯುಗದಲ್ಲಿ ಕುಂಭಾಸಿ ಎಂದು ಹೆಸರು. ಇದು ಸುವರ್ಣಮಯವಾದ ದೇವಾಲಯವಾಗಿತ್ತು. ಕಲಿಯುಗದಲ್ಲಿ ಅದನ್ನು ಮರೆಮಾಡಬೇಕೆಂದು ಒಂದು ಗುಡ್ಡವನ್ನು ಅದರ ಮೇಲೆ ತಂದಿಟ್ಟರು. ಅದಕ್ಕೆ ಆನೆಗುಡ್ಡ ಎಂಬ ಹೆಸರು ಬಂದಿದೆ ಗೌತಮರ

ಪ್ರಾರ್ಥನೆಯಂತೆ ಧರ್ಮರಾಜ ಈ ಕುಂಭಾಸುರನ ಸಂಹಾರ ಮಾಡಲು ಭೀಮಸೇನನ್ನು ನಿಯೋಜನೆ ಮಾಡಿದ. ಅಶರೀರ ವಾಣಿಯ ಪ್ರಕಾರ ಭೀಮಸೇನ ನನು ಗಣಪತಿಯ ಆವಿರ್ಭಾವಕ್ಕೆ ಕಾರಣನಾದನು. ಗಣಪತ್ಯಂತರ್ಗತ ಶ್ರೀ ವಿಶ್ವಂಭರಮೂರ್ತಿಯಿಂದ ಕೊಡಲ್ಪಟ್ಟ ಖಡ್ಗದಿಂದ ದೈತ್ಯನು ಸಂಹೃತ ನಾದನು. ಇಲ್ಲಿಯ ಗಣಪತಿಗೆ ಕಡುಬು ನೈವೇದ್ಯ. ವಿಚಿತ್ರವೆಂದರೆ ಈ ಕಡುಬು ಮಾಡಬೇಕಾದರೆ ತಾಳೆವಾಲೆಯಗರಿಯಲ್ಲಿ ದುಂಡಗೆ ಕೊಳವೆ ಮಾಡಿ ಅದರಲ್ಲಿಟ್ಟು ಬೇಯಿಸುತ್ತಾರೆ ಎಂಬ ಅತ್ಯಂತ ಸೂಕ್ಷ್ಮವಾದ ವಿಚಾರಗಳನ್ನು ದಾಸರು ಬರೆದಿದ್ದಾರೆ.

ದಾಸರು ನಡೆದುಕೊಂಡು ಹೂವಿನ ಕೆರೆಗೆ ಪ್ರಯಾಣ ಮಾಡಿದರು. ಇದು ವಾದಿರಾಜರಜನ್ಮಸ್ಥಳ ; ಅವರು ಗೌರಿಗದ್ದೆಯಲ್ಲಿ ಜನಿಸಿದ ವಿಚಾರ ಮಠದ ಮುಂದೆ ಇರುವ ಕೊಳದಲ್ಲಿ ಅನೇಕ ಹೂ ಬೆಳೆಸುತ್ತಿದ್ದ ಕಾರಣ ಹೂವಿನ ಕೆರೆ ಎಂದು ಪ್ರತೀತಿಯಿರುವುದು. ಅಲ್ಲಿರುವ ವಾದಿರಾಜರ ತಂದೆ ಯವರ ಕಾಲದ ದೇವರ ಪ್ರತಿಮೆಗಳು ; ಅನೇಕ ತಿಂಗಳಗಳಿಂದ ಹಯಗ್ರೀವ ನೈವೇದ್ಯವಾಗಿರದೆ ಇದ್ದದ್ದು, ದಾಸರು ಭೇಟಿ ಮಾಡಿದ ದಿನ ಹೆಸರುಬೇಳೆ ಹಯಗ್ರೀವ ನೈವೇದ್ಯವಾದದ್ದು ಇತ್ಯಾದಿ ವಿಚಾರಗಳನ್ನು ದಾಸರು ತಿಳಿಸುತ್ತಾರೆ.

ನಂತರ ಕೋಟೇಶ್ವರ ಕೊಲ್ಲೂರು ಸಂದರ್ಶನ ಮಾಡಿದ ದಾಸರು (ಮೂಕಾಂಬಿಕೆ ಮಹಾಲಕ್ಷ್ಮೀದೇವಿ ಲಿಂಗಾಕಾರವಾಗಿ ಉದ್ಭವಿಸಿದ್ದಾಳೆ). ಪ್ರತಿಯೊಂದು ಕ್ಷೇತ್ರದ ಮಹಾತ್ಮೆಯನ್ನೂ ತಿಳಿಸಿರುವುದನ್ನು ಸಂಗ್ರಹ ಮಾಡಿದರೆ ಮತ್ತೊಂದು ದೊಡ್ಡ ಸಂಪುಟವೇ ಆಗಬಹುದು ಅಷ್ಟು ವಿಚಾರಗಳನ್ನು ತಮ್ಮ ದಿನಚರಿಯಲ್ಲಿ ಬರೆದಿಟ್ಟಿದ್ದಾರೆ.

ದಾಸರು ಕ್ರೋಢ ಶಂಕರ ನಾರಾಯಣ ಕ್ಷೇತ್ರ, ಆನೆಗುಡ್ಡ ಈ ಕ್ಷೇತ್ರ ದರ್ಶನ ಮಾಡಿ ಮುಂದೆ ಮಹಿಷಿ ಕಡೆ ಪ್ರಯಾಣ ಬೆಳೆಸಿದ್ದಾರೆ. ಅಲ್ಲಿ ಸತ್ಯ ಸಂಧರ ದರ್ಶನ ಮಾಡಿದರು. ಇಲ್ಲಿ ಒಂಭತ್ತು ಜನಯತಿಗಳಿಗೆ ಹಸ್ತೋದಕ ಕೊಡುವ ಸಂಪ್ರದಾಯವಿದೆ ಎನ್ನುತ್ತಾರೆ. ಅವರುಗಳೆಂದರೆ ಟೀಕಾರಾಯರು. ರಘೂ ತ್ತಮರು, ಸತ್ಯನಾಥರು, ರಾಘವೇಂದ್ರರು ಸತ್ಯಬೋಧರು, ಸತ್ಯಸಂಧರು ಸತ್ಯವ್ರತರು ಸತ್ಯಪರಾಯಣರು ಸತ್ಯಕಾಮರು. ಅಶ್ವತ್ಥನಾರಾಯಣನ ದರ್ಶನ ಮಾಡಿದನಂತರ ಶಿಕಾರಿಪುರದ ಹುಚ್ಚೂರಾಯನ ದರ್ಶನ ಮಾಡಿ ಕೊಂಡು ಮರಳಿದ್ದಾರೆ.

ದಾಸರು ಸಂಚರಿಸಿದ ಸ್ಥಳಗಳಲ್ಲೆಲ್ಲಾ ಅಲ್ಲಿಯ ಮಾಹಿತಿ ಸಂಗ್ರಹಿಸಿ ಅದನ್ನು ಪ್ರಕಟಿಸಿಯೂ ಇದ್ದಾರೆ. ೧೯೬೧ರಲ್ಲಿ ಎರಡನೆಯ ಬಾರಿ ದಾಸರು ಕಾಲಿಗೆ ಗೆಜ್ಜೆಕಟ್ಟಿ ಕೈಯಲ್ಲಿ ಚಿಟಿಕೆ ಹಿಡಿದು, ಹರಿನಾಮ ಸಂಕೀರ್ತನೆ ಮಾಡುತ್ತಾ ಸಾರ್ಥಕ ಯಾತ್ರೆ ಮಾಡಿದರು. ಎಲ್ಲ ತೀರ್ಥಯಾತ್ರೆಯ ಪುಣ್ಯಫಲವನ್ನೂ ತಮ್ಮ ಮಾತೋಶ್ರೀಯವರಿಗೆ ಧಾರೆ ಎರೆದರು.

ದಾಸರು ಪೂಜಿಸುತ್ತಿದ್ದ ದೇವತಾ ಪ್ರತಿಮೆಗಳು

೧೯೭೦ರಲ್ಲಿ ದಾಸರಿಗೆ ಸ್ವಪ್ನ ಸೂಚನೆ : ಹಯಗ್ರೀವ ದೇವರು ಮನೆಗೆ ಬಂದಂತೆ, ಭಾಸವಾಗಿದೆ. ದಾಸರ ನೆಚ್ಚಿನ ಆರಾಧ್ಯ ಗುರುಗಳು ವಾದಿರಾಜರು. ಅವರ ಉಪಾಸ್ಯ ಮೂರುತಿಯ ಆಗಮನದ ಸೂಚನೆ ಸಂತಸವನ್ನುಂಟು ಮಾಡಿತ್ತು. ದಾಸರು ಈರೋಡಿಗೆ ಹೋಗಿದ್ದಾಗ ಈ ವಿಚಾರವನ್ನು ತಮ್ಮ ಸ್ನೇಹಿತರಾದ ಕರುಣಾರಸ ಪೂರ್ಣ ವಿಠಲ ದಾಸರಿಗೆ ತಿಳಿಸಿದರು. ಆಪ್ರಾಂತ ದಲ್ಲಿಯೇ ವಾಸವಾಗಿದ್ದ ಜಗನ್ನಾಥದಾಸರ ಶಿಷ್ಯರಲ್ಲಿ ಒಬ್ಬರಾದ ಮಾನಾಮಧುರ್ರೈ ದಾಸರ ವಂಶೀಕರು ಪಾಂಡುರಂಗ ದಾಸರ ಪರಿಚಯ ಮಾಡಿಸಿ ಜಗನ್ನಾಥದಾಸರ ಕರಾರ್ಚಿತವಾದ ಹಯಗ್ರೀವ ದೇವರನ್ನಿತ್ತರು. ಶಂಖಚಕ್ರ ಕಿರೀಟ ಅಭಯಹಸ್ತಗಳಿಂದ ಶೋಭಾಯಮಾನವಾದ ವಿಗ್ರಹ ಅದು. ಇದರೊಂದಿಗೆ ರುಕ್ಮಿಣೀ ಸತ್ಯಭಾಮಾಸಹಿತ ನವನೀತ ಕೃಷ್ಣ ಎರಡೂ ಕೈಯಲ್ಲಿ ಬೆಣ್ಣೆ ಮುದ್ದೆ ಹಿಡಿದು ಕೊಂಡಿದ್ದಾನೆ ಮತ್ತು ವೇದವ್ಯಾಸ ದೇವರು ಇದ್ದಾರೆ. ಈ ಎಲ್ಲ ವಿಗ್ರಹಗಳನ್ನೂ ದಾಸರಿಗೆ ಪಾಂಡುರಂಗದಾಸರು ತುಳಸೀ ದಳವಿಟ್ಟು ಶ್ರೀಕೃಷ್ಣಾರ್ಪಣವೆಂದರು. ಜಗನ್ನಾಥದಾಸರ ಕರಾರ್ಚಿತ ಪ್ರತಿಮೆಗಳು ಅನಾಯಾಸವಾಗಿ ತಮ್ಮಲ್ಲಿಗೆ ಬಂದಿದ್ದು ದಾಸರಿಗೆ ಆನಂದವಾಯಿತು. ಆ ಮೂರ್ತಿ ಪೂಜೆಗೆಂದು ಬೇಕಾದ ಸಲಕರಣೆಗಳನ್ನು ಮಾಡಿಸಿ ನಿತ್ಯ ಅರ್ಚನೆ ಮಾಡುತ್ತಿದ್ದರು. ಅಂತೆಯೇ ದಾಸರು ಮಳಖೇಡದಲ್ಲಿ ೧೫ ದಿನ ಪಯೋವ್ರತ ಮಾಡಿದರು. ಟೀಕಾರಾಯರ ಸೇವೆ ಮಾಡಿದರು. ಅಲ್ಲಿಯ ಅರ್ಚಕರಿಗೆ ಸ್ವಪ್ನ ಸೂಚಿತವಾಗಿ ಟೀಕಾರಾಯರ ವೃಂದಾವನದ ಮೇಲೆ ಬಹಳ ಕಾಲದಿಂದ ಪೂಜೆಗೊಳ್ಳುತ್ತಿದ್ದ ಲಕ್ಷ್ಮೀನಾರಾಯಣ ವಿಗ್ರಹ ದಾಸರಿಗೆ ಲಭ್ಯವಾಯಿತು. ಪಂಚ ಬೃಂದಾವನಗಳನ್ನು ಒಂದು ತಟ್ಟೆಗೆ ಸೇರಿಸಿ, ನಿತ್ಯ ರಾಜರಪೂಜಾ ಮಾಡುತ್ತಿದ್ದರು ಇವರ ಬಳಿ ಇದ್ದ ಇತರ ಮೃತ್ತಿಕಾ ಬೃಂದಾವನಗಳೆಂದರೆ ಶ್ರೀಬ್ರಹ್ಮಣ್ಯತೀರ್ಥರು ಶ್ರೀಶ್ರೀಪಾದರಾಜರು, ಶ್ರೀವ್ಯಾಸತೀರ್ಥರು, ಶ್ರೀರಾಘವೇಂದ್ರತೀರ್ಥರು, ಶ್ರೀವೇದೇಶ

ತೀರ್ಥರು ಇತ್ಯಾದಿ. ಕಂಕಣಾಕಾರ ಸುಳಾದಿಗೆ ಅನುಗುಣವಾಗಿ ತಾಮ್ರದ ದೊಡ್ಡ ಚಕ್ರಾಬ್ಜ ಮಂಡಲ ಮಾಡಿಸಿ ಅದರ ಮೇಲೆ ಎಲ್ಲ ದೇವರುಗಳನ್ನಿಟ್ಟು ನಿತ್ಯ ಪೂಜೆ ಮಾಡುತ್ತಿದ್ದರು. ದಾಸರ ದೇವರ ಪೂಜೆ ಅದೊಂದು ಸಂಸ್ಥಾನ ಪೂಜೆಯೇ ಆಗಿತ್ತು.

ಮನೆಯನ್ನೇ ಮಂದಿರ ಮಾಡಿದವರು

ದಾಸರು ಮೈಸೂರಿನ ಕೃಷ್ಣಮೂರ್ತಿ ಪುರದಲ್ಲಿದ್ದ ತಮ್ಮ ಮನೆಯನ್ನೇ ಮಂದಿರ ಮಾಡಲು ನಿರ್ಧರಿಸಿದರು. ಹರಿದಾಸರ ಮನ ದೈವ ವಿಠಲನ ಸ್ಥಾಪನೆ ಮತ್ತು ಪ್ರತಿಷ್ಠಾಪನೆಗೆ ಸಂಕಲ್ಪ ಕೈಗೊಂಡರು. ದೇವಸ್ಥಾನದ ಅಗತ್ಯಕ್ಕೆ ತಕ್ಕಂತೆ ಮನೆ ಮಾರ್ಪಾಟಾಯಿತು. ಗದುಗಿನ ಪ್ರಸಿದ್ಧ ಶಿಲ್ಪಿ ಸೋಮಣ್ಣ ಎಂಬುವರು ಕಪ್ಪು ಶಿಲೆಯಲ್ಲಿ ಪಾಂಡುರಂಗ ವಿಠಲನ ಸುಂದರಮೂರ್ತಿಯನ್ನು ಕೆತ್ತಿದರೆ ಸಿಕಂದರಾಬಾದಿನಲ್ಲಿ ಶ್ರೀರಂಗನಾಥರಾಯರ ಮನೆಯಲ್ಲಿ ಪೂಜೆಗೊಳ್ಳುತ್ತಿದ್ದ ಪುರಾತನವಾದ ಪ್ರಾಣದೇವರ ಪ್ರತೀಕ ದೈವೀದತ್ತವಾಗಿ ಪ್ರಾಪ್ತವಾಯಿತು. ಮನೆ ಗುರುಗೋವಿಂದ ನಿವಾಸ ಎಂದು ಕರೆಯಲ್ಪಟ್ಟಿತು.

ಮೈಸೂರಿನ ಕೃಷ್ಣಮೂರ್ತಿ ಪುರಂನ ಭಾಗದಲ್ಲಿರುವ ನಗರ ಮಧ್ಯ ಪ್ರದೇಶ ಸುಮಾರು ೧೦ ಲಕ್ಷಕ್ಕೂ ಮೀರಿದ ಆಸ್ತಿಯನ್ನು ತ್ಯಾಗಮಾಡಿ ಟ್ರಸ್ಟ್ ಹೆಸರಿಗೆ ರಿಜಿಸ್ಟರ್ ಮಾಡಿ ಶಿಷ್ಯರಿಗಾಗಿ, ಧಾರ್ಮಿಕ ಕಾರ್ಯಗಳಿಗಾಗಿ ಬಿಟ್ಟುಕೊಟ್ಟ ಮಹನೀಯರು ತ್ಯಾಗಿಗಳು ಇವರು. ಮಕ್ಕಳಾದವರು ಸಹ ಶಿಷ್ಯರಾಗಿ ಬಂದರೆ ಮಾತ್ರ ಇಲ್ಲಿ ಅವಕಾಶ ಎಂದ ಹರಿದಾಸರು. ಪ್ರಮಾದೀಚ ನಾಮಸಂವತ್ಸರ ವೈಶಾಖ ಬಹುಳ ಸಪ್ತಮಿ ೨೪.೫.೧೯೭೩ ಗುರುವಾರ ಪ್ರಾತಃಕಾಲ ಸಿಂಹ ಲಗ್ನದಲ್ಲಿ ಅಭಿಜನ್ಮುಹೂರ್ತದಲ್ಲಿ ಸಾಗರ ಕಟ್ಟೆ ಮಠಾಧೀಶರಾದ ಶ್ರೀ ಶ್ರೀಪ್ರದ್ಯುಮ್ನ ತೀರ್ಥ ಶ್ರೀ ಪಾದಂಗಳವರ ಅಮೃತ ಹಸ್ತದಿಂದ ವಿಠಲ ದೇವರ ಹಾಗೂ ಮುಖ್ಯ ಪ್ರಾಣದೇವರ ಪ್ರತಿಷ್ಠಾಪನಾ ಕಾರ್ಯ ವೈಭವದಿಂದ ನಡೆಯಿತು. ನವಕೋಟಿ ನಾರಾಯಣನಾಗಿದ್ದ ಶ್ರೀನಿವಾಸನಾಯಕ ಸಮಗ್ರ ಆಸ್ತಿಯನ್ನು ದಾನ ಮಾಡಿ ದಾಸರಾದರೆ ದಾಸರಾಗಿ ಸಮಗ್ರ ಆಸ್ತಿಯನ್ನು ವಿಠಲನಿಗೆ ಅರ್ಪಣೆ ಮಾಡಿದರು ಗುರು ಗೋವಿಂದ ದಾಸರು. ಸಹಸ್ರಾರು ಭಗವದ್ಭಕ್ತರು, ಹರಿದಾಸರು, ವಿದ್ವಾಂಸರು ಈ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು. ಹರ್ಷ ಪುಳಕಿತರಾದ ದಾಸರಿಂದ ಕೀರ್ತನೆ ಹೊರಹೊಮ್ಮಿತು.

ಬಂದಾನೋಡೇ – ವಿಠಲ ಮನೆಗೇ

ಬಂದಾ ನೋಡೇ ವಿಠಲಾ ||ಪ||

ನಂದನ ಕಂದ ಯಶೋದೆಯಾನಂದ ಅರವಿಂದ ನಯನ ಗೋವಿಂದ, ಇಂದುಭಾಗನಿವಾಸ ಗುರುಗೋವಿಂದ ವಿಠಲದಾಸರ ಕರೆಗೆ ಬಂದು ನಿಂತಿದ್ದಾನೆ : ಇಂದಿಗೂ ಭಕ್ತರಿಗೆ ಅನುಗ್ರಹ ಮಾಡುತ್ತಾ, ಜ್ಞಾನಕಾರ್ಯ ಗಳನ್ನು ನಡೆಸುತ್ತಾ, ಗುರುಗೋವಿಂದದಾಸರ ಕೀರ್ತಿ ಪತಾಕೆ ದಿಗ್ದಿಗಂತಗಳಿಗೆ ಹರಿಸುತ್ತಾ ನೆಲೆಸಿದ್ದಾನೆ.

ಸದ್ಗ್ರಂಥಗಳ ರಚನೆ

ಸಾಹಿತ್ಯ ಸರಸ್ವತಿಯ ಸಿರಿ ಮುಡಿಗೆ ದಾಸರು ಮುಡಿಸಿರುವ ಕುಸುಮಗಳು ಹಲವಾರು. ಅವರಿಗೆ ಗ್ರಂಥರಚನೆ, ಪ್ರಕಟಣೆ ಒಂದು ಪವಿತ್ರದೀಕ್ಷೆ. ಅದಕ್ಕಾಗಿಯೇ ಗುರುಕೃಪಾ ಗ್ರಂಥಮಾಲಾ ಎಂಬ ಶೀರ್ಷಿಕೆಯಲ್ಲಿ ವಿಠಲನಿಗೆ ಸಮರ್ಪಿಸಿದ ಮಾಲೆಗಳು ಹತ್ತಾರು. ಹರಿದಾಸ ಸಾಹಿತ್ಯ ಪ್ರಚಾರದಲ್ಲಿ ಗೋರೆಬಾಳು ಹನುಮಂತರಾಯರು ದಾವಣಗೆರೆ ಭೀಮರಾಯರು ಇವರಿಬ್ಬರ ನಂತರ ಸಿಕ್ಕುವ ಹೆಸರು ಗುರು ಗೋವಿಂದದಾಸರದು.

ಸಾಹಿತ್ಯ ಜೀವನದ ಪ್ರಾರಂಭದಲ್ಲಿ ತಮಗೆ ಅಂಕಿತ ನೀಡಿ ಉದ್ಧಾರ ಮಾಡಿದ ತಂದೆ ಮುದ್ದುಮೋಹನದಾಸರ ಚರಿತ್ರೆ ಬರೆಯುವುದರೊಂದಿಗೆ ಚಾಲನೆ ಗೊಳಿಸಿದರು.

೧೯೬೫ ರಲ್ಲಿಯೇ ತಂದೆ ಮುದ್ದುಮೋಹನದಾಸರ ಜನ್ಮ ಶತ ಮಾನೋತ್ಸವದ ಸಂಸ್ಮರಣೆಗಾಗಿ ಪ್ರಕಟಿಸಿದರಾದರೂ ೧೯೭೮ರಲ್ಲಿ ಪುನ ರ್ಮುದ್ರಣಗೊಂಡಿತು. ಗುರುಗಳಿಗೆ ಸಂಬಂಧಿಸಿದ ವಿಚಾರಗಳು ಶಿಷ್ಯರ ಅನುಭವಗಳು ಎಲ್ಲ ತಿಳಿಸುವ ಮೂಲಕ ದಾಸರ ಮಹಿಮೆಯನ್ನು ತಿಳಿಸಿ ಭಕ್ತ್ಯುದ್ರೇಕವಾಗುವಂತೆ ಮಾಡಿದ್ದಾರೆ.

ನಂತರ ಪರಮಗುರುಗಳಾದ ಮುದ್ದುಮೋಹನದಾಸರ ಚರಿತ್ರೆ ಬರೆದರು. ಅನೇಕ ಊರುಗಳ ಸಂಚಾರ ಮಾಡಿ ಅನೇಕ ವ್ಯಕ್ತಿಗಳ ಭೇಟಿಮಾಡಿ ಅನೇಕ ವಿಚಾರಗಳನ್ನು ಸಂಗ್ರಹ ಮಾಡಿ ಪ್ರಕಟ ಮಾಡಿದ ದಿಟ್ಟರು ಗುರುಗೋವಿಂದ ದಾಸರು. ಗುರುಗಳ ಪರಮ ಗುರುಗಳ ಚರಿತ್ರೆಯ ಅನುವಾದ ಮಾಡುವುದರ ಮೂಲಕ ಅವರ ವಿಶೇಷಾನುಗ್ರಹದಕ್ಕೆ ಪಾತ್ರರಾಗಿ, ಹಿರಿಯರಾದ ಹರಿದಾಸರ

ಚರಿತ್ರೆಗಳನ್ನ ಪ್ರಕಟಿಸುವ ಸಂಕಲ್ಪ ಕೈಗೊಂಡು ಹರಿಭಕ್ತ ವಿಜಯ ಮಾಲೆ ಪ್ರಾರಂಭಿಸಿದರು.

ಹರಿಭಕ್ತವಿಜಯ

ಈ ಮಾಲೆ ಎಂಟು ಸಂಪುಟಗಳಲ್ಲಿ ಹೊರಬಂದಿದೆ. ರಾಜರಲ್ಲಿ ಅಪಾರ ಶ್ರದ್ಧೆ ಭಕ್ತಿ ಇಟ್ಟಿದ್ದ ದಾಸರ ಪ್ರತೀಕವೊ ಎಂಬಂತೆ ಮೊದಲ ಸಂಪುಟ ಭಾವೀ ಸಮೀರವಾದಿರಾಜರ ಚರಿತ್ರೆಗೆ ಮೀಸಲಾಗಿದೆ. ಈ ಪುಸ್ತಕದಲ್ಲಿ ಸೋದಾಕ್ಷೇತ್ರದ ದರ್ಶನವನ್ನೇ ನಮಗೆ ಮಾಡಿಸಿದ್ದಾರೆ. ಅಲ್ಲದೆ ವೃಂದಾವನಾಚಾರ್ಯರೆಂದೇ ಖ್ಯಾತರಾದವರಾದ ಶ್ರೀವಿಶ್ವಪ್ರಿಯ ತೀರ್ಥರ ಚರಿತ್ರೆಯನ್ನೂ ದಾಸರು ರಚಿಸಿದ್ದಾರೆ. ವಾದಿರಾಜರ ಪರಮಭಕ್ತರಾದ ಜಂಬುಖಂಡಿ ವಾದಿರಾಜಾಚಾರ್ಯರ ಚರಿತ್ರೆ, ತಂದೆ ವರದ ಗೋಪಾಲವಿಠಲದಾಸರ ಚರಿತ್ರೆ ಈ ಸಂಪುಟದಲ್ಲಿ ಪ್ರಕಟವಾಗಿವೆ.

ಎರಡನೆಯ ಸಂಪುಟದಲ್ಲಿ ದಾಸರ ಪೀಳಿಗೆಯ ಏಳು ಜನ ಹರಿದಾಸರ ಚರಿತ್ರೆಗಳು ಅರಳಿವೆ. ವ್ಯಾಸವಿಠಲ ದಾಸರು, ರಘುಪತಿ ವಿಠಲ ದಾಸರು, ಭೂವರಾಹ ರಘುಪತಿ ವಿಠಲದಾಸರು, ಶ್ರೀಪತಿ ವಿಠಲದಾಸರು, ತಂದೆ ಶ್ರೀಪತಿವಿಠಲದಾಸರು, ಶ್ರೀನಿಧಿ ವಿಠಲದಾಸರು, ಶ್ರೀವರವಿಠಲದಾಸರು, ಇವನ್ನು ಬೆಳಕಿಗೆ ತಂದ ಕೀರ್ತಿ ಗುರುಗೋವಿಂದದಾಸರಿಗೆ ಸಲ್ಲುತ್ತದೆ.

ಹರಿಭಕ್ತವಿಜಯನ ತೃತೀಯ ಭಾಗದಲ್ಲಿ ದಾಸರು ಚಿತ್ರಿಸಿರುವ ಹರಿದಾಸರ ಚರಿತ್ರೆಗಳೆಂದರೆ ವಿಜಯದಾಸರ ಸಾಕು ಮಕ್ಕಳಾದ ಮೋಹನದಾಸರು, ವಿಜಯದಾಸರ ಪೂರ್ವ ಜನ್ಮ ಹಾಗೂ ಪುರಂದರದಾಸರ ಮಕ್ಕಳಾಗಿದ್ದ ಮಧ್ವಪತಿ ವಿಠಲದಾಸರು, ಶ್ರೀನಿವಾಸನ ಕಾರುಣ್ಯ ಪಾತ್ರರಾಗಿ ಅವನಿಂದಲೇ ಅಂಕಿತ ಪ್ರದಾನ ಮಾಡಿಸಿಕೊಂಡ ಪ್ರಸನ್ನ ವೆಂಕಟದಾಸರು, ಜಯೇಶ ವಿಠಲ ದಾಸರು ಹಾಗೂ ವಿಜಯ ರಾಮಚಂದ್ರವಿಠಲ ದಾಸರ ಜೀವನ ಚರಿತ್ರೆಗಳು.

ಮಣೂರು ಹನುಮಂತದಾಸರು ಹಾಗೂ ಹರಪನ ಹಳ್ಳಿ ಭೀಮವ್ವನ ಚರಿತ್ರೆಯನ್ನು ಆಕರ್ಷಣೀಯವಾಗಿ ಹರಿಭಕ್ತ ವಿಜಯ ಭಾಗ ೪ ರಲ್ಲಿ ಚಿತ್ರಿಸಿದ್ದಾರೆ. ದಾಸರ ಶೈಲಿಯ ಸೊಬಗು ಈ ಕೃತಿಯಲ್ಲಿ ಕಾಣಬಹುದಾಗಿದೆ. ಓದಲು ಪ್ರಾರಂಭಿಸಿದರೆ ಮುಗಿಸುವವರೆಗೆ ಕೆಳಗಿಡಲು ಸಾಧ್ಯವಾಗದು.

ಹರಿಭಕ್ತ ವಿಜಯ ಭಾಗ – ೫ ರಲ್ಲಿ ಭಾಗವತ ಸಾರೋದ್ಧಾರ ಕರ್ತರಾದ, ರುದ್ರಾಂಶ ಸಂಭಾತರಾದ ಅರಣ್ಯಕಾಚಾರ್ಯರಾದ ಶ್ರೀವಿಷ್ಣುತೀರ್ಥ ಚರಿತ್ರೆ ಅವರ

ಕೃತಿಗಳ ಪರಿಚಯದೊಂದಿಗೆ ಚಿತ್ರಿಸಿದ್ದಾರೆ. ಶ್ರೀನಿವಾಸನ ಪರಮಾನುಗ್ರಹಕ್ಕೆ ಪಾತ್ರರಾಗಿ ಶ್ರೀನಿವಾಸ ಕಲ್ಯಾಣವನ್ನು ಕನ್ನಡದಲ್ಲಿ ಛಟ್ಟಿ ಇಳಿಸಿರುವ ಏರಿ ಶೇಷಾಚಾರ್ಯರ ಚರಿತ್ರೆ ಇದರಲ್ಲುಂಟು.

ತಮ್ಮ ಶಿಷ್ಯರಿಂದಲೂ ದಾಸರಾಯರ ಚರಿತ್ರೆಗಳನ್ನು ಅನುವಾದ ಮಾಡಿಸಿ ಪ್ರಕಟಿಸುವ ಕಾರ್ಯ ಪ್ರವೃತ್ತಿ ದಾಸರದು. ಶ್ರೀಮುರಳೀವಿನೋದವಿಠಲ ದಾಸರಿಂದ ರಚಿತವಾದ ಶ್ರೀ ರಾಘವಾರ್ಯ ಒಡೆಯರ ಚರಿತ್ರೆಯನ್ನು ಹರಿ ಭಕ್ತಿವಿಜಯ ಭಾಗ – ೬ ರಲ್ಲಿ ಪ್ರಕಟಿಸಿ, ಶಿಷ್ಯರಿಗೆ ಉತ್ತೇಜನ ನೀಡಿದ್ದಾರೆ.

ಪಾಂಡುರಂಗೀ ಹುಚ್ಚಾಚಾರ್ಯರ ಚರಿತ್ರೆಯನ್ನೂ ಹೃದಯಂಗಮವಾಗಿ ವರ್ಣನೆ ಮಾಡಿದ್ದಾರೆ. ತಮ್ಮ ಕಣ್ಣೆದುರಿಗೆ ಇದ್ದ ಮಹಾತ್ಮರನ್ನು ಗುರುತಿಸುವ ಶಕ್ತಿ ಅವರಲ್ಲಿತ್ತು.

ಎಂಟು ಉಪನಿಷತ್ತುಗಳ ಮೂಲ, ಆಚಾರ್ಯರ ಭಾಷ್ಯ – ಕನ್ನಡ ತಾತ್ಪರ್ಯ, ಭಾಮಿನಿಷಟ್ಪದಿಯಲ್ಲಿ ಪದ್ಯ ರಚನೆ ಮಾಡಿ ಅಪೂರ್ವ ದಾಖಲೆ ನಿರ್ಮಾಣ ಮಾಡಿದ್ದಾರೆ. ಸಾಮಾನ್ಯವಾಗಿ ಉಪನಿಷತ್ತುಗಳನ್ನು ಪ್ರತಿ ಶ್ಲೋಕ ಕ್ಕೊಂದು ಪದ್ಯದಂತೆ ಬರೆದಿರುವ ಕೀರ್ತಿ ಗುರುಗೋವಿಂದ ದಾಸರದು. ಇವುಗಳಲ್ಲಿ ಅವರು ಮಾಡಿರುವ ಮಂಗಳಾಚರಣೆ ಪದ್ಯಗಳೇ ಬಹು ಸೊಗಸಾಗಿವೆ.

ಉತ್ತಮರು ಬೊಮ್ಮಾದಿ ಜೀವರು
ಮತ್ತೆ ಲಕ್ಷ್ಮೀಗು ನಿತ್ಯಜ್ಞಾನ
ಸ್ಫೂರ್ತಿದಾಯಕ ಹರಿಗೆ ಮಧ್ವರು ನಮನಗೈದಿಹರು.

ಯಜ್ಞಪತಿ ಯಜ್ಞಾಂಗ ಯಜ್ಞನೆ
ಯಜ್ಞವಾಹನ ಯಜ್ಞನಾಮನೆ
ಯಜ್ಞ ಭೃದ್ಯಜ್ಞಗಳಕೃದ್ಯಜ್ಞಭುಗ್ಯಜ್ಞೀ
ಯಜ್ಞಸಾಧನ ಯಜ್ಞಗುಹ್ಯನೆ
ಯಜ್ಞ ಯಜ್ಞಾಂತ ಕ್ರತುವೆನಿಪನೆ
ಯಜ್ಞಭುಜಿಸರ್ವಜ್ಞ ವಿಘ್ನಹಹರಿಯೆ ನಮಿಸುವೆನು

ಎಂದು ಈಶಾವ್ಯಾಸ ಉಪನಿಷತ್ತಿನ ಮಂಗಳಾಚರಣೆಯಲ್ಲಿ ತಿಳಿಸಿದರೆ ಮತ್ತೊಂದು ಕಡೆಯಲ್ಲಿ "ಬರೆದವನು ನಾನಲ್ಲ ಬರೆಸಿದವರು ಬೇರೊಬ್ಬರುಂಟು"

ಅವರಿಗೂ ನಿಯಾಮಕನುಂಟು ಅವನೊಬ್ಬನೇ ಸರ್ವತಂತ್ರ ಸ್ವತಂತ್ರ ನಾವೆಲ್ಲ ಅವನ ಅಧೀನರು ಎನ್ನುತ್ತಾರೆ.

ಅರ್ಥ ಕನ್ನಡದಲ್ಲಿ । ವಿಸ್ತರಿಪಕಾರ್ಯದಲ್ಲಿ
ತತ್ವಮಾನಿಗಳೂ ಎನ್ನಲ್ಲಿ ನಿಂತು ಪರ
ಮಾರ್ಥಗಳನ್ನೇ ನುಡಿಸಾಲಿ ।

ಮಧ್ವಶಾಸ್ತ್ರದಜ್ಞಾನ । ಶುದ್ಧಮಂದನಿಗೆಂತು
ಮುದ್ದುಮೋಹನರಾ ಶಿಷ್ಯರು ಶಿಷ್ಯಮಮಗುರುತಂದೆ
ಮುದ್ದುಮೋಹನರೇ ನುಡಿಸಾಲಿ

ಗುರುಗಳಲಿ ತಾ ನಿಂತು । ಪರಮಾರ್ಥ ಬೋಧಿಸುವ
ಗುರುವಂತರಂತ್ಮಾ ಬೇಡುವೆ । ಬೇಡ್ವೆ ತವಪಾದಾಬ್ಜ
ಗುರುಗೋವಿಂದ ವಿಠಲಾ ಪಾಲೀಸೋ ॥

ಹೀಗೆ ಉಪನಿಷತ್ತುಗಳ ಮಾಲೆಯನ್ನೇ ವಿಠಲನಿಗೆ ಅರ್ಪಣೆ ಮಾಡಿದ್ದಾರೆ.

ದಾಸರ ಕರಕುಂಜದಿಂದ ಅರಳಿರುವ ಇತರ ಕೃತಿಕುಸುಮಗಳೆಂದರೆ,

೧. ಶ್ರೀ ವಾದಿರಾಜರ ಋಜುತ್ವಪ್ರಕಾಶಿಕಾ

೨. ಶ್ರೀಸ್ವಾಪ್ನ ವೃಂದವನಾಖ್ಯಾನ ಮೂಲ ಪ್ರಕಟಣ –೨೭ ಅಧ್ಯಾಯ ಗಳನ್ನು ೨ ಭಾಗಗಳ ಕನ್ನಡಲಿಪಿಯಲ್ಲಿ

೩. ಶ್ರೀ ವಿಷ್ಣು ತೀರ್ಥವಿರಚಿತ 'ಷೋಡಶಿ ಚತುರ್ದಶಿ' ಮೂಲ ಕನ್ನಡ ಅನುವಾದ

೪. 'ಆಧ್ಯಾತ್ಮ ರಸರಂಜನಿ' ಜಂಬುಖಂಡೀ ಆಚಾರ್ಯರ ವ್ಯಾಖ್ಯಾನ ಸಹಿತ

೫. ಸುಂದರ ಕಾಂಡ ರಾಮಾಯಣ ಮತ್ತು ಮಾನಸ ಸ್ಮೃತಿ ಮೂಲ ತಾತ್ಪರ್ಯ ಮತ್ತು ಷಟ್ಪದಿ ಅನುವಾದ

೬. ಶ್ರೀ ವಾದಿರಾಜ ವಿರಚಿತ ಪಂಚೀಕರಣ

೭. ಶ್ರೀ ಮನ್ಮಧ್ವಸಹಸ್ರ ನಾಮಾವಳಿ

೮. ದಾಸರಿಂದ ರಚಿತ ದೇವರ ನಾಮಗಳು ದಾಸಕಕ್ಷೆ – ಯತಿಕಕ್ಷೆ ದೇವತಾಕಕ್ಷೆ

೯. ಸತ್ಸಂಪ್ರದಾಯ ಭಜನಾ ಪದ್ಧತಿ

ಹೀಗೆ ಹಲವಾರು ಕೃತಿಗಳ ಪ್ರಕಟಣೆ ಮಾಡಿ ಒಂದು ವಿಶ್ವವಿದ್ಯಾನಿಲಯ ಮಾಡಬಹುದಾದ ಕಾರ್ಯವನ್ನು ಏಕೈಕ ವ್ಯಕ್ತಿ ಮಾಡಿದ್ದಾರೆ.

ದಾಸರಿಂದ ರಚಿತ ದೇವರ ನಾಮಗಳನ್ನು ಪ್ರತ್ಯೇಕವಾಗಿ ಮುದ್ರಿಸಿರುವ ಕಾರಣ ಅವುಗಳ ಸಮೀಕ್ಷೆಯನ್ನು ಅನುಬಂಧದಲ್ಲಿ ಮಾಡಿರುತ್ತೇನೆ.

ಈ ಕೃತಿಗಳಲ್ಲದೇ ಹಸ್ತಪ್ರತಿಯಾಗಿ ಉಳಿದಿರುವ ಅವರ ಕೃತಿಗಳು ಹಲವಾರು. ಸಾಲಿಗ್ರಾಮ ಮಹಾತ್ಮೆ – ಯೋಗ ವಿಚಾರ, ಅನ್ನ ಬ್ರಹ್ಮ, ಆಧ್ಯಾತ್ಮಿಕ ಶ್ರೀನಿವಾಸ ಕಲ್ಯಾಣ ಹೀಗೆ ಹಲವಾರಿವೆ. ಇದರಲ್ಲಿ ಅನ್ನ ಬ್ರಹ್ಮ ಒಂದು ಮಾತ್ರ ಇತ್ತೀಚಿಗೆ ಪ್ರಕಟಣೆಗೊಂಡಿದೆ. ಆಧ್ಯಾತ್ಮ ಶ್ರೀನಿವಾಸ ಕಲ್ಯಾಣ ಸಹ ಬೆಳಕಿಗೆ ಬಂದಿದೆ.

ಅಂಕಿತಮಾಲಾ ಎಂಬ ಪುಸ್ತಕ ಈಚೆಗೆ ಪ್ರಕಟವಾಗಿದ್ದು ಗುರುಗೋವಿಂದ ದಾಸರು ಅವರ ಗುರುಗಳಿತ್ತ ಅಂಕಿತನಾಮಗಳನ್ನು ಉಪಯೋಗಿಸಿಕೊಂಡು ರಚಿಸಿರವ ತ್ರಿಪದಿಗಳು. ಅಲ್ಲದೆ ತಾವೇ ನೀಡಿರುವ ೧೦೮ ಅಂಕಿತನಾಮಗಳ ತ್ರಿಪದಿಯೂ ಇದರಲ್ಲಿದೆ. ಇದರಲ್ಲಿ ವಿಠಲ ಸಹಸ್ರ ನಾಮಾವಳಿ ಅಡಗಿರುವುದು ವಿಶೇಷ.

ಹರಿದಾಸ ದೀಪಿಕಾ

ಗುರುಗಳಾದ ತಂದೆ ಮುದ್ದುಮೋಹನದಾಸರ ಮಾರ್ಗದರ್ಶನದಲ್ಲಿ ಹೆಜ್ಜೆಯನ್ನಿಡುವ ಸತ್ಸಂಪ್ರದಾಯ ದಾಸರದು. ಅವರು ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಸಲುವಾಗಿ ಪರಮಾರ್ಥ ಚಂದ್ರೋದಯ ಎಂಬ ಪತ್ರಿಕೆ ನಡೆಸುತ್ತಿದ್ದರು. ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ವಿವಿಧ ಲೇಖನಗಳನ್ನು ಹರಿ ಕೀರ್ತನೆಗಳನ್ನು ಪ್ರಕಟಿಸುತ್ತಿದ್ದರು. ಈ ದಿಶೆಯಲ್ಲಿ ದಾಸರು ತಮ್ಮ ಇಳಿ ವಯಸ್ಸಿನಲ್ಲಿ ಬಂದು ಮಾಸಪತ್ರಿಕೆ 'ಹರಿದಾಸ ದೀಪಿಕಾ' ಪ್ರಾರಂಭಿಸಿದರು. ಪರಮಾತ್ಮನ ಷೋಡಶೋಪಚಾರದ ಪೂಜೆಯ ಪ್ರತೀಕವಾಗಿ ೧೬ ಪುಟಗಳ ಮಾಸಪತ್ರಿಕೆ ಇದಾಗಿತ್ತು. ಇದರಲ್ಲಿ ಅನೇಕ ಮಹನೀಯರಿಂದ ಬರುವ ಲೇಖನಗಳನ್ನಷ್ಟೇ ಅಲ್ಲದೆ ತಾವೂ ಹರಿದಾಸರ ಅಂತರಂಗದ ಭಾವವನ್ನು ತಿಳಿಸುವವರಾದರು ; ಶಿಷ್ಯರಿಗೆ ಸದ್ಬೋಧನೆ ಮಾಡಿಸುವವರಾದರು. ಯಾವುದೇ

ಪ್ರತಿಷ್ಠೆ ಬಯಸಲಿಲ್ಲ, ಲಾಭಕ್ಕಾಗಿ ಆಸೆಪಟ್ಟವರಲ್ಲ, ಶ್ರೀಹರಿ ವಾಯುಗಳ ಸೇವೆ ಎಂದು ತಿಳಿದು ಮಾಡಿದೆ ಅದ್ಭುತ ಸೇವೆ ಇದು.

ಶ್ರೀ ಪುರಂದರದಾಸರ ಆರಾಧನೆ

ದಾಸರು ಎಲ್ಲ ಯತಿಗಳ, ಹರಿದಾಸರ ಆರಾಧನೆಗಳನ್ನು ತಪ್ಪದೆ ಮಾಡುತ್ತಿದ್ದರು. ಹರಿದಾಸರ ವೇಷದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ ತಂಬೂರಿ ಮೀಟುತ್ತ ಹೆಗಲಿಗೆ ಜೋಳಿಗೆ ಹಾಕಿಕೊಂಡು ಯಾಯಾವಾರಕ್ಕೆ ಹೋಗುತ್ತಿದ್ದರು ಜೊತೆಗೆ 'ಶ್ರೀಪುರಂದರ ದಾಸರ ಆರಾಧನೆಗಾಗಿ ಯಾಯಿವಾರ' ಎಂದು ? ಬರೆದು ತಂಬೂರಿಗೆ ಅಂಟಿಸಿಕೊಂಡು ಒಬ್ಬರೇ ಹಲವಾರು ಮನೆಗೆ ಯಾಯಿವಾರಕ್ಕೆ ಹೋಗುವರು. ಜೋಳಿಗೆ ಭರ್ತಿಯಾದರೆ ಭಾರವೆನೆಸಿದರೆ ಒಂದು ಮನೆಯಲ್ಲಿ ಸುರಿದು ಮುಂದೆ ಹೋಗುವುದು ನಂತರ ಸೈಕಲ್ ಮೇಲೆ ಒಂದು ಚೀಲದಲ್ಲಿ ಎಲ್ಲರ ಮನೆಯಲ್ಲಿ ಸಮರ್ಪಿಸಿದ ಧನ ಧಾನ್ಯ ಸಂಗ್ರಹಣೆ ಮಾಡಿಕೊಂಡು ಬರುವುದು, ಎಲ್ಲರನ್ನು ಆಹ್ವಾನಿಸಿ ವಿಜೃಂಭಣೆಯಿಂದ ಆರಾಧನೆ ಪ್ರಾರಂಭಿಸಿದರು. ಕ್ರಮೇಣ ಇದರ ವ್ಯಾಪ್ತಿ ಹರಡಿ, ಹಿರಿದಾಗುತ್ತಾ ಬಂತು. ದೇಶದ ವಿವಿಧ ಭಾಗಗಳಲ್ಲಿ ನಡೆಸಲು ಮುಂದಾಗಿ ಪಂಢರಾಪುರ, ತಿರುಪತಿ, ಹೈದ್ರಾಬಾದ್, ವಿಶಾಖಪಟ್ಟಣದಂತಹ ಪಟ್ಟಣಗಳಲ್ಲಿ ಸಹ ನಡೆಯಿತು. ಒಂದು ದಿನವಲ್ಲ ಎಂಟುದಿನ ಒಂಭತ್ತು ದಿನ ಹದಿನೈದು ದಿನಗಳ ಕಾಲ ಅನ್ನದಾನ ಜ್ಞಾನದಾನ, ನಡೆದ ಇತಿಹಾಸಗಳಿವೆ.

ಈ ಆರಾಧನೆಯನ್ನು 'ಅಖಿಲ ಭಾರತ ಹರಿದಾಸ ಸಮ್ಮೇಳನ' ಎಂಬ ಹೆಸರಿನಿಂದ ಕರೆಯಲಾಯಿತು. ಬೃಹತೀ ಸಹಸ್ರಹೋಮ, ಸ್ವಾಪ್ನ ವೃಂದಾವನಾಖ್ಯಾನ ಹೋಮ, ಹರಿಕಥಾಮೃತಸಾರ ಹೋಮ ಮುಂತಾದ ಅಪೂರ್ವ ಹೋಮಗಳನ್ನು ಸಹ ಆಚರಿಸಿ ಒಂದು ಶುಭ ಸಂಪ್ರದಾಯಕ್ಕೆ ನಾಂದಿಹಾಡಿದರು. ಶಿಷ್ಯರ ಸಮ್ಮೇಳನ ಕಮ್ಮಟಗಳನ್ನು ನಡೆಸಿ ಮುಂದಿನ ಕಾರ್ಯಗಳ ಬಗ್ಗೆ ಯೋಜನೆ ಮಾಡುತ್ತಿದ್ದರು.

ಏಕಾದಶಿ ದಿನದಲ್ಲಿ ಏಕಾಂಗಿಯಾಗಿ ಸಂಪೂರ್ಣ ಜಾಗರಣೆ ಮಾಡಿ, ಹರಿವಾಣ ಸೇವಾ ನಡೆಸಿದ ದಿನಗಳು ಎಷ್ಟೋಇವೆ. ದೇಹದ ಆಯಾಸವನ್ನು ಪರಿಗಣಿಸದೆ, ನಂದೇನಿಲ್ಲವೋ ಸ್ವಾಮಿ ನಿಂದೇ ಇದೆಲ್ಲಾ ಎಂಬ ಭಾವನೆಯಿಂದ ಸರ್ವಸಮರ್ಪಣೆ ಮಾಡಿ, ನರ್ತನ ಸೇವೆ ಮಾಡುವ ವೃದ್ಧದಾಸರ ಆದರ್ಶ, ಯುವಕರನ್ನು ಪ್ರೋತ್ಸಾಹಿಸುವಂತಿತ್ತು.

ಶಿಷ್ಯ ಕೋಟಿ

ಗುರುಗೋವಿಂದದಾಸರು ಶ್ರೀವಿಜಯದಾಸರ ಪರಂಪರೆಯಲ್ಲಿ ಅವಿಚ್ಛಿನ್ನ ವಾಗಿ ಬಂದಿರುವವರು. ತಂದೆ ಮುದ್ದುಮೋಹನ ದಾಸರ ಕೊನೆಯ ಶಿಷ್ಯರು. ಆದರೆ ಶ್ರೀಹರಿಯ ಪ್ರೇರಣೆಯಂತೆ ದಾಸ ಬಳಗ, ದಾಸವಂಶ ಬೆಳೆಸುವ ಸಲುವಾಗಿ ಅಂಕಿತೋಪದೇಶ ಮಾಡಲು ಪ್ರಾರಂಭಿಸಿದರು. ಯಾರಾದರೂ ಬಂದು ಅಂಕಿತ ಕೇಳಿದರೆ ಇಲ್ಲವೆನ್ನದೆ 'ದೇವರನ್ನು ಪ್ರಾರ್ಥಿಸಿಕೊಳ್ಳಿ ನಿಮಗಾದ ಸ್ವಪ್ನ ಸೂಚನೆ ನನಗೆ ತಿಳಿಸಿ' ಎನ್ನುತ್ತಿದ್ದರು. ಅದೇ ಕಾಲದಲ್ಲಿ ತಾವೂ ವಿಠಲನನ್ನು ಪ್ರಾರ್ಥಿಸಿ ಅಂಕಿತ ನೀಡಲು ಅಪ್ಪಣೆ ಕೇಳುತ್ತಿದ್ದರು. ಒಂದು ದೇವರ ನಾಮದ ರೂಪದಲ್ಲಿ ಅಂಕಿತನಾಮ ರೂಪುಗೊಳ್ಳುತ್ತಿತು. ಹೀಗೆ ರೂಪುಗೊಂಡಿರುವ ಅಂಕಿತನಾಮಗಳು ಸುಮಾರು ೨೫೦ನ್ನು ಮೀರಿದೆ. ದಾಸರ ಶಿಷ್ಯರ ವ್ಯಾಪ್ತಿ, ಹಳ್ಳಿಯಿಂದ ದಿಲ್ಲಿಯವರೆಗೂ ಹಬ್ಬಿದೆ. ಮೈಸೂರು, ಮಂಡ್ಯ, ಬೆಂಗಳೂರು, ಹೈದ್ರಾಬಾದ್ ಮುಂತಾದ ಕಡೆಗಳಲ್ಲಿ ಹೆಚ್ಚು ಜನರು ಇದ್ದಾರೆ. ಬಳ್ಳಾರಿ, ಹುಬ್ಬಳ್ಳಿ, ವಿಜಾಪುರ ಮುಂತಾದ ಕಡೆಗಳಲ್ಲಿ ಸಹ ದಾಸರಿಗೆ ವಿಪುಲವಾದ ಶಿಷ್ಯ ಸಂಪತ್ತಿದೆ.

ದಾಸರ ಮೇಲ್ಪಂಕ್ತಿಯನ್ನು ಅನುಸರಿಸಿ ಧಾರ್ಮಿಕ ಸಂಘಟನೆಗಳನ್ನು ನಡೆಸುತ್ತಾ ಅಖಿಲಭಾರತ ಹರಿದಾಸ ಸಮ್ಮೇಳನದಂತಹ ಕಾರ್ಯಕ್ರಮಗಳನ್ನು ಇಂದಿಗೂ ಆಚರಿಸುವ ಸಂಘಟನೆ ಇದೆ. ದಾಸರ ಶಿಷ್ಯರಲ್ಲಿ ಒಳ್ಳೆಯ ಸಾಧಕರಿದ್ದಾರೆ, ಭಾವುಕರೂ ಇದ್ದಾರೆ, ಪ್ರವಚನಕಾರರಿದ್ದಾರೆ, ಚಿತ್ರಕಲಾಕಾರರು, ಸಂಗೀತಗಾರರು ಇದ್ದಾರೆ, ಧಾರ್ಮಿಕಮಾರ್ಗದಲ್ಲಿ ಮುನ್ನಡೆಯಲು ಅಂಕಿತ ಒಂದು ಸಾಧನ ಎಂದು ದಾಸರು ಹೇಳುತ್ತಿದ್ದರು. ದಾಸರ ಶಿಷ್ಯರಾದ ಶ್ರೀ ಹರಿನಾರಾಯಣವಿಠಲ ದಾಸರು, ಲೌಕಿಕ ವೃತ್ತಿಯನ್ನು ತೊರೆದು, ಲೋಕೈಕನಾಥನ ಸೇವೆಗಾಗಿ ತಮ್ಮ ಜೀವನವನ್ನೇ ಇಟ್ಟಿರುವಂತಹ ವೈರಾಗ್ಯ ಮನೋಭಾವುಳ್ಳವರಾಗಿದ್ದಾರೆ 'ಪರಿಮಳ ಗೆಳೆಯರ ಬಳಗ' ಎಂಬ ಹೆಸರಿನಲ್ಲಿ ಹಲವಾರು ಶಿಷ್ಯರನ್ನು ಹೊಂದಿ, ಶ್ರೀರಾಯರ ಆರಾಧನೆ ನಡೆಸುತ್ತಾ, ಹರಿದಾಸರ ಕೃತಿಗಳನ್ನು ಪ್ರಕಟಿಸುತ್ತಿರುವ ಬೆಂಗಳೂರಿನ ತಿರುಮಲೇಶ ಹರಿವಿಠಲದಾಸರ ಕಾರ್ಯ ಸ್ಮರಣೀಯವಾದುದು. ಅಖಿಲ ಕರ್ನಾಟಕ ತತ್ವಜ್ಞಾನ ಸಮ್ಮೇಳನದ ಮೂಲಕ ಶ್ರೀ ವಾದಿರಾಜರ, ಶ್ರೀವ್ಯಾಸರಾಜರ ಆರಾಧನೆ ನಡೆಸಿ, ದಾಸ ಸಾಹಿತ್ಯ ಪ್ರಚಾರಕ್ಕಾಗಿ, ಪರೀಕ್ಷೆಗಳನ್ನು ನಡೆಸುತ್ತಿರುವ ಬೆಂಗಳೂರಿನ ಜಾಂಬವತಿ ಪ್ರಿಯ ವಿಠಲ ದಾಸರು, ಸಂಗೀತದಿಂದ ದಾಸರ ಕೀರ್ತನೆಗಳನ್ನು ಹಾಡಿ ಪ್ರಚಾರ

ಕಾರ್ಯದಲ್ಲಿ ನಿರತರಾಗಿದ್ದಾರೆ. ದಾಸರ ಪುತ್ರರುಗಳಾದ ಶ್ರೀ ಎಂ.ಜಿ.ಗುರುರಾಜ ರಾವ್ ಶ್ರೀ ಎಂ.ಜಿ.ಮಾಧವರಾವ್ ಮತ್ತು ಶ್ರೀ ಎಂ.ಜಿ.ನಾಗರಾಜರಾವ್ ಮತ್ತು ಇವರ ಕುಟುಂಬವರ್ಗದವರು ಸಹ ತಮ್ಮ ಹಿರಿಯರನ್ನು ತಂದೆಯ ಸ್ಥಾನದಲ್ಲಷ್ಟೇ ಅಲ್ಲದೆ ಗುರುಗಳು ಎಂಬ ಭಾವನೆಯನ್ನು ತಾಳಿ, ದಾಸರು ಮುಟ್ಟಿದ ಪದಾರ್ಥಗಳನ್ನು ಮೆಟ್ಟಿದ ನೆಲವನ್ನು ಉಳಿಸಿ ಬೆಳಗಿಸಲು ಸತತ ಶ್ರಮಿಸುತ್ತಿದ್ದಾರೆ. ಅವರು ಸ್ಥಾಪಿಸಿದ ವಿಠಲ ಮಂದಿರದಲ್ಲಿ ಇಂದು ನಿತ್ಯೋತ್ಸವ ನಿತ್ಯ ಮಂಗಳ ಎಂಬಂತೆ ಕಾರ್ಯಕ್ರಮಗಳು ನಡೆಯುತ್ತಿವೆ.

ದಾಸರ ಬಲಗೈ ಎನಿಸಿದ್ದ, ದಾಸರ ಸೇವೆಯನ್ನು ಅಪಾರವಾಗಿ ಮಾಡಿದ ಖಗವರಧ್ವಜ ವಿಠಲದಾಸರು ಇಂದಿಗೂ, ಶ್ರೀಮದ್ಭಾಗವತಾದಿ ಪ್ರವಚನಗಳ ಮೂಲಕ ಎಲ್ಲೆಡೆ ಧಾರ್ಮಿಕ ಜಾಗೃತಿಯನ್ನು ಉಂಟುಮಾಡುತ್ತಿದ್ದಾರೆ.

ಇನ್ನು ದಾಸರ ಶಿಷ್ಯರಲ್ಲಿ ಹಿರಿಯರಾದ ಶ್ರೀ ಮುದ್ದುವೆಂಕಟ ವಿಠಲದಾಸರು, ಉದಾಯಾದ್ರೀಶವಿಠಲ ದಾಸರು, ವಾಸಿಷ್ಠ ಕೃಷ್ಣ ವಿಠಲ ದಾಸರು ಹೀಗೆ ಹತ್ತು ಹಲವರು ಜನ ಗುಪ್ತ ಸಾಧನೆ ಮಾಡುವವರಿದ್ದಾರೆ, ಶ್ರೀಹರಿಪ್ರೇರಣೆಯಂತೆ ಕೃತಿ ರಚನೆಗಳನ್ನು ಮಾಡಿ, ಹಾಡಿ ಆನಂದವನ್ನು ಅನುಭವಿಸುತ್ತಿರುವವರು ಇವರು.

ದಾಸರ ಮೊಟ್ಟ ಮೊದಲನೆಯ ಶಿಷ್ಯರೆನಿಸಿರುವ ವೈಕುಂಠ ವಿಠಲ ದಾಸರು ಶ್ರೀ ಬಿ.ಎನ್. ರಾಮಶೇಷರಾವ್, ಶ್ರೀಸ್ವಾಪ್ನವೃಂದಾವನಾಖ್ಯಾನವನ್ನು ೧೫೦೦ ಕ್ಕೂ ಹೆಚ್ಚು ಸಲ ಪಾರಾಯಣ ಮಾಡಿ ಅದರ ಅರ್ಥಗಳನ್ನು ಶಿಷ್ಯರಿಗೆ ಬೋಧಿಸುತ್ತಾ ರಾಜರ ಅನುಗ್ರಹಕ್ಕೆ ಪಾತ್ರರಾಗಿರುವವರು.

ಇನ್ನು ಶ್ರೀ ಹರಿವಾಯುಗಳ ಪ್ರೇರಣೆಯಂತೆ ದಾಸಕೂಟ ಬೆಳೆಸಲು ದಾಸರಿಂದ ಅನುಜ್ಞೆ ಪಡೆದು, ಅಂಕಿತನಾಮ ರಚನೆಗಳನ್ನು ಮಾಡಿ ಉಪದೇಶಿಸಿ, ಅಲ್ಲದೆ ದಾಸರ ದೇವರ ನಾಮಗಳನ್ನ ಹಾಡಿ, ನಲಿಯುತ್ತಿರುವ ಶಿಷ್ಯರನ್ನು ಶ್ರೀಪಂಢರಿನಾಥ ವಿಠಲದಾಸರು ದಾಸರ ಶಿಷ್ಯ ಪ್ರಮುಖರಲ್ಲಿ ಒಬ್ಬರು.

ಪೂರ್ವ ಜನ್ಮದ ಪುಣ್ಯ ವಿಶೇಷದಿಂದ ದಾಸರಾಯರ ಅನುಗ್ರಹ ಹೊಂದಿ ಪ್ರಸ್ತುತ ಲೇಖನ ಮಾಡಿರುವ ಲೇಖಕ ವರಾಹ ಹರಿವಿಠಲ ದಾಸರು ದಾಸರ ಶಿಷ್ಯರು.

ದಾಸರ ಶಿಷ್ಯರಲ್ಲಿ ಹೆಣ್ಣು ಮಕ್ಕಳೂ ಇದ್ದಾರೆ. ಅವರುಗಳು ಮಾಡುತ್ತಿರುವ ಸೇವೆ ಎಲೆ ಮರೆಕಾಯಿಯಂತೆ ಅಪೂರ್ವವಾದದ್ದು ಸತ್ಸಾಧನೆಯನ್ನು

ತಾವು ಮಾಡಿಕೊಳ್ಳುವುದಷ್ಟೇ ಅಲ್ಲದೆ ತಮ್ಮ ಕುಟುಂಬ ವರ್ಗದವರಿಂದ ಮಾಡಿಸುತ್ತಿದ್ದಾರೆ. ಒಂದು ಮನೆಯಲ್ಲಿ ಅಂಕಿತೋಪದೇಶ ಪಡೆದ ಒಬ್ಬ ಗೃಹಿಣಿ ಯಿದ್ದರೆ ಆ ಮನೆ ಮಂದಿರಕ್ಕೆ ಸಮಾನವೆನಿಸಿ, ಧರ್ಮಜಾಗೃತಿ ಕೇಂದ್ರವಾಗುತ್ತದೆ.

ದಾಸರು ಬಿತ್ತಿದ ಭಕ್ತಿಯ ಬೀಜ ಇಂದು ಹೆಮ್ಮರವಾಗಿ ಬೆಳೆದು ತನ್ನ ಶಾಖೋಪಶಾಖೆಗಳಿಂದ ಹರಿದಾಸ ಸಾಹಿತ್ಯದ ಸೇವೆ ಮಾಡುತ್ತಿದೆ.

ದಾಸರು ಕೇವಲ ಬ್ರಾಹ್ಮಣರಿಗೆ, ಮಾಧ್ವರಿಗೆ ಅಂಕಿತ ನೀಡಿದವರಲ್ಲ. ಸ್ವಧರ್ಮದಲ್ಲಿ ನಿಷ್ಠೆಯಿದ್ದವರಾದರೂ ಪರಧರ್ಮ ದವರನ್ನು ಆತ್ಮೀಯ ಮನೋಭಾವನೆಯಿಂದ ಕಾಣುತ್ತಿದ್ದವರು. ಮಧ್ವಮತದ ಅನುಯಾಯಿ ಎನಿಸಿರುವ ಬ್ರಾಹ್ಮಣೇತರರಿಗೂ ಅಂಕಿತೋಪದೇಶ ಮಾಡಿದ್ದಾರೆ. ತುಮಕೂರಿನ ದೊಡ್ಡ ತಿಮ್ಮಯ್ಯ ನಿಗೆ ಅಂಕಿತ ನೀದಲು ತಮ್ಮ ಬಿಂಬ ಮೂರುತಿಯಲ್ಲಿ ಪ್ರಾರ್ಥನೆ ಸಲ್ಲಿಸಿದಾಗ ಗುರುಗೋವಿಂದ ವಿಠಲ ಎಂಬುದಾಗಿಯೇ ಸೂಚನೆಯಾಯಿತು. ಹೇಗೆ ಕೊಡುವುದು ಎಂದು ಯೋಚಿಸುತ್ತಾ ಮಲಗಿದರೆ ತೈಜಸನಾಮಕ ಹರಿ ಒಂದು ರೂಪದಿಂದ ಬಂದು 'ಸ್ವಾಮಿ' ಎಂದ ಇದರಿಂದ ಪುಳಕಿತರಾಗಿ ಸ್ವಾಮಿ ಗುರುಗೋವಿಂದ ವಿಠಲ ಎಂಬುದಾಗಿ ಅಂಕಿತ ನೀಡಿದರು. ಅವರ ಅನುಭವವನ್ನು ದೊಡ್ಡತಿಮ್ಮಯ್ಯ ಈ ರೀತಿ ಹೇಳಿಕೊಂಡಿದ್ದಾರೆ.

"ಜನ್ಮತಃ ಶೂದ್ರನಾದ ನಾನು ಅಂದರೆ ಅಗ್ನಿವಂಶದವನು ಶ್ರೀಗುರು ಗೋವಿಂದವಿಠಲದಾಸರ ಅನುಗ್ರಹವಾದ ಮೇಲೆ ನನ್ನಲ್ಲಿ ಪರಿವರ್ತನೆಗಳು ಆಗಿರುವುದನ್ನು ಕಾಣುತ್ತಿದ್ದೇನೆ. ಮೊದಲಿಗೆ ಈ ಗುರುಗಳ ಉಪದೇಶ ಬಯಸಿ ಬೇಡಿದಾಗ ಶ್ರೀರಾಘವೇಂದ್ರ ಸ್ವಾಮಿಗಳು ಬಂದು, ಓಡಿಹೋಗುತ್ತಿದ್ದ ಬಸ್ಸನ್ನು ತಡೆದು ನಿಲ್ಲಿಸಿದ ಸ್ವಪ್ನವಾಯಿತು. ಮುಂದೊಂದು ದಿನ ಶ್ರೀವಾದಿರಾಜ ಸ್ವಾಮಿಗಳ ಬೃಂದಾವನ ದರ್ಶನವಾದ ಮೇಲೆ ಅಂಕಿತೋಪದೇಶಕ್ಕೆ ಅನುಗ್ರಹವಾಗಿ ಸ್ವಾದಿಕ್ಷೇತ್ರದಲ್ಲಿ ಶ್ರೀಪ್ರಾಣ ದೇವರ ಸನ್ನಿಧಿಯಲ್ಲಿ ಗುರುಗಳಿಂದ ಉಪದೇಶ ವಾಯಿತು. ಹಿಂದೆ ಚಿಕ್ಕಂದಿನಲ್ಲಿ ೩ನೇ ತರಗತಿಯವರೆಗೆ ಓದಿದ್ದು ಸರಿಯಾಗಿ ಅಕ್ಷರಗಳನ್ನು ಕೂಡಿಸಿಕೊಂಡು ಓದಲು ಬಾರದೇ ಇದ್ದ ನನಗೆ ಈ ಗುರುಗಳ ದಯದಿಂದ ಪತ್ರ ಬರೆಯುವುದು ಸ್ವಲ್ಪ ಸರಾಗವಾಗಿ ಓದುವುದು ಕೂಡಾ ಮನನವಾಯಿತು". ಇಷ್ಟೇ ಅಲ್ಲದೆ ಸ್ವಾಮಿ ಗುರುಗೋವಿಂದ ವಿಠಲದಾಸರು ಗುರುಗಳ ಮೇಲೆ ಲಕ್ಷ್ಮೀದೇವಿಯ ಮೇಲೆ ಪರಮಾತ್ಮನ ಮೇಲೆ ದೇವರ ನಾಮಗಳನ್ನು ಸಹ ರಚನೆ ಮಾಡಿದ್ದಾರೆ. ಅಲ್ಲದೆ ಮಾಧ್ವ ಪದ್ಧತಿಯಂತೆ

ಜೀವನ ನಡೆಸುತ್ತ ಶ್ರೀಪುರಂದರದಾಸರ ಆರಾಧನೆ ಇತ್ಯಾದಿಗಳನ್ನು ಮಾಡುತ್ತಿದ್ದಾರೆ.

ದಾಸರ ಅಪೂರ್ವ ಗುಣಗಳು

ದಾಸರು ಎಂದೂ ಬೂಟಾಟಿಕೆಯ ಡಂಭ ಪ್ರದರ್ಶನಕ್ಕೆ ಒಲಿದ ವರಲ್ಲ. ಪ್ರತಿಷ್ಠೆ ಪ್ರಚಾರಗಳಿಗೆ ಬಲು ದೂರ. 'ಸಾಧನ ಶರೀರವಿದು ನೀದಯದಿ ಕೊಟ್ಟದ್ದು ಸಾಧಾರಣವಲ್ಲ' ಎಂಬ ದಾಸರ ವಾಣಿ ಅವರಿಗೆ ಎಚ್ಚರಿಕೆ ನುಡಿಯಾಗಿತ್ತು. ನಿತ್ಯ ಕರ್ಮಗಳನ್ನು ಎಂದೂ ಬಿಟ್ಟವರಲ್ಲ. ದೇವರ ಪೂಜೆ ತೀರ್ಥ ಆಗುವತನಕ ಯಾವ ಪಾನೀಯವನ್ನೂ ಎಂತಹ ಸಂದರ್ಭದಲ್ಲೂ, ಸ್ವೀಕರಿಸುತ್ತಿರಲಿಲ್ಲ ನುಡಿದಂತೆ ನಡೆದವರು ಅವರು.

ದಿನಚರಿ ಪುಸ್ತಕ ಬರೆಯುವುದರಲ್ಲಿ, ಬಂದ ಪತ್ರಗಳಿಗೆ ಉತ್ತರಿಸುವುದರಲ್ಲಿ ಎಂದೂ ತಡಮಾಡುತ್ತಿದ್ದವರಲ್ಲ. ದಾಸರ ಶಿಷ್ಯ ವಾತ್ಸಲ್ಯ ಅಪಾರವಾದದ್ದು ಶಿಷ್ಯರು ತಮ್ಮ ಜೀವನದ ಸುಖ ದುಃಖಗಳನ್ನು ದಾಸರಲ್ಲಿ ತೋಡಿಕೊಂಡಾಗ ಸೂಕ್ತ ಸಮಾಧಾನ ನೀಡುತ್ತಿದ್ದರು. ದಾಸರು ಬರೆಯುವ ಪತ್ರಗಳಲ್ಲಿ ಅಗತ್ಯ ವಿಲ್ಲದ ಯಾವ ಪದವನ್ನು ಬಳಸಿದವರಲ್ಲ. ಚಿಕ್ಕದಾಗಿ ಚೊಕ್ಕವಾಗಿ ಸರಳ ವಾಗಿತ್ತು ಅವರ ಶೈಲಿ.

ದಾಸರ ಪತ್ನಿ ದೇಹ ಬಿಟ್ಟಾಗ ಸಹ ಧೃತಿಗೆಡದೆ 'ಕಾಲ ಕಾಲಕೆ ಹರಿಯು ಮಾಡುವ ಮರಿಯಾದೆಯೆಂದು ಸ್ವೀಕರಿಸಬೇಕು' ಎಂಬುದಾಗಿ ದಾಸವಾಣಿ ಸ್ಮರಿಸಿ ಮುಂದಿನ ಕಾರ್ಯ ಮಾಡಿದವರು.

ದಾಸರು ಸಂಕಲ್ಪ ಮಾಡಿದರೆ ಸಾಕು ಅದು ನಡೆಯಲೇಬೇಕು. ಹಿಡಿದ ಕಾರ್ಯ ಬಿಡದೆ ಮಾಡುವ ಛಲ ಅವರಲ್ಲಿತ್ತು. 'ದಾಸರ ಜೋಳಿಗೆ ಎಂದೂ ಬರಿದಾಗದು' 'ಹರಿದಾಸರಿಗುಂಟೇ ಅಪಜಯ' ಎಂದು ಎಲ್ಲರನ್ನೂ ಪ್ರೋತ್ಸಾಹಿಸುತ್ತಿದ್ದವರು.

ಯಾವ ಶಿಷ್ಯರು ಎಂತಹ ಮುಗ್ಧ ಪ್ರಶ್ನೆ ಮಾಡಲಿ ದಾಸರು ಸಿಟ್ಟಾಗುತ್ತಿರಲಿಲ್ಲ. ಸೂಕ್ತ ಸಮಾಧಾನ ನೀಡುತ್ತಿದ್ದರು. ತಾವು ಪ್ರಕಟಿಸಿರುವ ಪುಸ್ತಕಗಳಲ್ಲಿ ಯಾವುದಾದರೊಂದನ್ನು ಆಶೀರ್ವಾದ ಪೂರ್ವಕ ಎಂದು ಬರೆದು ಶಿಷ್ಯರಿಗೆ ನೀಡುತ್ತಿದ್ದರು.

ಸಮಾಜದಿಂದ ಸಂದ ಗೌರವಗಳು

ಶ್ರೀಗುರುಗೋವಿಂದ ವಿಠಲದಾಸರು, ಎಲೆಮರೆ ಕಾಯಿಯಂತೆ ಇದ್ದು ಹಣ್ಣಾದವರು, ಭಕ್ತಿಯ ರಸವನ್ನು ಎಲ್ಲರಿಗೆ ಕುಡಿಸಿದವರು. ವೈದ್ಯರ ಆದೇಶದಂತೆ ಹೆಚ್ಚು ಮಾತನ್ನಾಡಬಾರದಾಗಿತ್ತು. ಕಾರಣ ಪ್ರವಚನ ಉಪನ್ಯಾಸದ ಗೋಜಿಗೆ ಹೆಚ್ಚು ಹೋದವರಲ್ಲ. ಅವರ ಸ್ಮೃತಿಗೆ ಗೋಚರವಾದದ್ದೆಲ್ಲಾ ಲೇಖನ ರೂಪದಲ್ಲಿ ಹೊರಬಂತು. ಬರೆಯುವ ವಿಚಾರದಲ್ಲಿ ಅವರು ಒಂದು ಕಂಪ್ಯೂಟರ್ ಇದ್ದ ಹಾಗೆ. ಅವರು ಮಲಗುತ್ತಿದ್ದುದು ಮಧ್ಯರಾತ್ರಿಯ ನಂತರವೇ. ಕಣ್ಣು ಮಂಜು ಬರುವವರೆಗೂ ಬರೆಯುತ್ತಿದ್ದರು. ಈ ತೆರನಾಗಿ ಅವರು ಅಕ್ಷರ ಬ್ರಹ್ಮನ ಉಪಾಸನೆ ಮಾಡಿದ ಕಾರಣವೇ ೪೮ ಕೃತಿ ಕುಸುಮಗಳು ಅರಳಲು ಕಾರಣವಾಗಿರುವುದು. ಹಲವಾರು ಶ್ರೀಪಾದಂಗಳವರು ದಾಸರನ್ನು ಆಶೀರ್ವದಿಸಿದ್ದಾರೆ. ಹರಿದಾಸರು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಬಿರುದು ಬಿನ್ನವತ್ತಳೆಗಳನ್ನು ನೀಡಿದ್ದಾರೆ. ೧೯೭೮ ರಲ್ಲಿ ಶ್ರೀ ಶ್ರೀರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಸಂದರ್ಭದಲ್ಲಿ ಪರಮ ಪೂಜ್ಯ ಪೇಜಾವರ ಮಠದ ಶ್ರೀಪಾದಂಗಳವರು 'ಹರಿದಾಸ ಕುಲತಿಲಕ' ಎಂಬ ಬಿರುದನ್ನಿತ್ತು ಗೌರವಿಸಿದರು. ಅಖಿಲ ಭಾರತ ಹರಿದಾಸ ಸಮ್ಮೇಳನ ಶ್ರೀ ಪುರಂದರದಾಸರ ಆರಾಧನೆ ಉತ್ಸವ ಸಂದರ್ಭದಲ್ಲಿ ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು, 'ದಾಸ ಧರ್ಮ ಪ್ರವರ್ತಕ' ಎಂಬ ಬಿರುದು ನೀಡಿ ಗೌರವಿಸಿದರು. ಅವರು ಈ ಸನ್ಮಾನಗಳನ್ನೆಲ್ಲ ತಮ್ಮ ಗುರುಗಳ ದ್ವಾರ ಬಿಂಬಮೂರುತಿಗೆ ಅರ್ಪಣೆ ಮಾಡಿದರು. 'ಅಪಮಾನ ವಾದರೆ ಒಳಿತು' ಎಂದು ದಾಸರ ವಾಣಿ. ಆದರೆ ವ್ಯತಿರಿಕ್ತವಾಗಿ ಸನ್ಮಾನಗಳಾಗುತ್ತಿವೆ ಇದೆಲ್ಲವೂ 'ನಿನ್ನ ಒಲುಮೆಯಿಂದ ಬಂದದ್ದು ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೋ ಮಹರಾಯ ನನ್ನದೇನುಂಟೋ ನಿನ್ನದೇ ಸಕಲ ಸಂಪತ್ತು' ಎಂಬ ವಿಜಯದಾಸರ ವಾಣಿ ಗುರುಗೋವಿಂದದಾಸರ ತಾರಕ ಮಂತ್ರವಾಗಿತ್ತು.

ದಾಸರ ಕೊನೆಯ ದಿನಗಳು

ಪ್ರಸ್ತುತ ಲೇಖಕನ ಅನುಭವ ಹೀಗಿದೆ. ೧೯೮೨ ರಲ್ಲಿ ದಾಸರಿಂದ ಅಂಕಿತ ಪಡೆಯಲು ಆಶಿಸಿ ಸ್ವಪ್ನ ಸೂಚನೆಯನ್ನು ಪತ್ರಮುಖೇನ ದಾಸರಿಗೆ ತಿಳಿಸಿದೆ. ಕೂಡಲೇ ಉತ್ತರವೂ ಬಂತು. ೨೧ ದಿನಗಳಲ್ಲಿ ಮತ್ತೊಂದು ಪತ್ರ : ಅಂಕಿತ

ಸಿದ್ಧವಾಗಿದೆ, ಬಾ ಎಂದು ತಿಳಿಸಿದರು. ೧೦.೧೧.೧೯೮೨ ರಂದು ನಾನು ನಮ್ಮ ತಾಯಿ ಮತ್ತು ನನ್ನ ಪತ್ನಿ ದಾಸರು ವಾಸಿಸುತ್ತಿದ್ದ ಅವರ ಸುಪುತ್ರ ಮಾಧವರಾಯರ ಮನೆಗೆ ಮಧ್ಯಾಹ್ನ ೧೨.೦೦ ಗಂಟೆಗೆ ಹೋದೆವು. ದಾಸರು ಆದರದಿಂದ ಬರಮಾಡಿಕೊಂಡರು. ದಾಸರ ಊಟ ಮುಗಿದಿತ್ತು. ಪೂರ್ವ ಭಾವಿಯಾಗಿ ನಾನು ಆ ದಿನ ಬರುತ್ತೇನೆಂದು ತಿಳಿಸಿರಲಿಲ್ಲ. 'ಊಟ ಆಗಿ ಹೋಯಿತಲ್ಲೋ ಹೋಗಲಿ ಕುಳಿತುಕೋ' ಎಂದರು. ತಮ್ಮ ದಿನಚರಿ ಪುಸ್ತಕ ತೆರೆದು ನನ್ನ ಅಂಕಿತನಾಮ ಹುಡುಕಿದರು. 'ನನಗೆ ಬರೆಯಲು ಆಗುವುದಿಲ್ಲ ನೀನೇ ಬರಿ' ಎಂದರು. ಅವರು ಹೇಳಿದರು, ನಾನೇ ಬರೆದೆ. ಕಾಗುಣಿತದ ತಪ್ಪುಗಳನ್ನು ಸಹ ನೋಡಿ ತಿದ್ದಿದವರು. ನಂತರ 'ಕಾಲಿಗೆ ನೀರು ಹಾಕು ಒರೆಸು' ಎಂದು ಈ ಪಾಮರನ ಕೈಲಿ ಸೇವೆ ಮಾಡಿಸಿಕೊಂಡು ಆಶೀರ್ವಾದಿಸಿದ ಮಹನೀಯರು, ಲಿಖಿತ ಅಂಕಿತ ನಾಮವನ್ನು ದೇವರ ಮನೆಯಲ್ಲಿಟ್ಟು ಚಕ್ರಾಂಕಿತವಿಟ್ಟು ಪೂಜೆಮಾಡಿ ತತ್ವನ್ಯಾಸ ಮಾತೃಕಾನ್ಯಾಸ ಬೋಧನೆ ಮಾಡಿ ಎರಡು ಬಾರಿ ಅಂಕಿತ ದೇವರ ನಾಮ ಉಪದೇಶಿಸಿದರು. ಆಗ ದಾಸರಿಗೆ ೮೮ ವರ್ಷ ವಯಸ್ಸು. ಕಾಲುಗಳು ಊದಿದ್ದವು. ದಾಸರೇ ಖುದ್ದಾಗಿ ಉಪದೇಶಿಸಿದ ಕೊನೆಯ ಅಂಕಿತನಾಮ ಇದಾಗಿತ್ತು. ತದನಂತರದಲ್ಲಿ ಅನಂತಪುರಕ್ಕೆ ಮಗನ ಮನೆಗೆ ತೆರಳಿದರು. ಅಲ್ಲಿ ಅವರು ಹಾಸಿಗೆಯ ಮೇಲೆ ಮಲಗಿ ಹರಿಸ್ಮರಣೇ ಮಾಡುತ್ತಿರುವಾಗ ಅವರ ಅನುಮತಿಯಿಂದ ಅವರ ಸನ್ನಿಧಾನದಲ್ಲಿ ಅವರ ಮಕ್ಕಳಿಂದ, ಅವರ ಅಳಿಯಂದಿರಿಂದ ಕೆಲವರಿಗೆ ಅಂಕಿತೋಪದೇಶ ವಾಗಿರುವುದೂ ಉಂಟು. ಅವರು ೮೯ ವರ್ಷಗಳ ತುಂಬು ಜೀವನ ನಡೆಸಿದರು. ೧೧.೧.೧೯೮೩ ರಂದು ಮಾರ್ಗಶೀರ್ಷ ಬಹುಳ ದ್ವಾದಶಿ ಇಹಲೋಕ ತ್ಯಜಿಸಿ ಅನಂತಪುರವನ್ನು ಸೇರಿದರು. ಅಂದು ಮಂಡ್ಯದಲ್ಲಿದ್ದ ಮುದ್ದು ವೆಂಕಟ ವಿಠಲದಾಸರಿಗೆ ಸ್ವಪ್ನ ಸೂಚನೆಯಿಂದ ಕರೆಸಿಕೊಂಡು ತಮ್ಮ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿರುವುದು ವಿಶೇಷ. ಜೀವಿತದ ಕಟ್ಟ ಕಡೆಯ ಕ್ಷಣದವರೆಗೂ ಹರಿದಾಸ ಕೈಂಕರ್ಯ ಬಿಡಲಿಲ್ಲ : ಹರಿಸ್ಮರಣೆ ಮರೆಯಲಿಲ್ಲ 'ಸಂತತಂ ಚಿಂತಯೇಽನಂತಂ ಅಂತಕಾಲೇ ವಿಶೇಷತಃ'.

ನಿವೇದನೆ

ಶ್ರೀಗುರುಗೋವಿಂದದಾಸರ ಜೀವನ ನಂದಾದೀಪವಿದ್ದಂತೆ. ದೀಪ ತಾನು ಉರಿದು ಅನ್ಯರಿಗೆ ಬೆಳಕುತೋರುವಂತೆ ತಾವು ಜೀವನದಲ್ಲಿ ಕಷ್ಟಗಳನ್ನು

ಅನುಭವಿಸಿ ಮುಂದಿನವರಿಗೆ ಆದರ್ಶಪ್ರಾಯರಾದ ಮಾರ್ಗದರ್ಶಿಗಳು. ಅವರು ತಂದೆ ಮುದ್ದುಮೋಹನದಾಸರ ಕಡೆಯ ಶಿಷ್ಯರಾಗಿ ವಿಜಯದಾಸರ ಪರಂಪರೆಯನ್ನು ಮುಂದುವರೆಸುವ ಸಲುವಾಗಿ ೨೫೬ ಜನಕ್ಕೆ ಅಂಕಿತೋಪದೇಶ ಮಾಡುವ ಮೂಲಕ ಸಾಧನದ ಮಾರ್ಗ ತೋರಿದವರು. ಸನಾತನ ಧರ್ಮದಲ್ಲಿ ವಿಶೇಷ ಗೌರವ ಉಳ್ಳವರಾಗಿ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಆಚರಿಸಿ ಧಾರ್ಮಿಕ ವಿಧಿ ವಿಧಾನಗಳನ್ನು ಅರ್ಥ ಪೂರ್ಣವಾಗಿ ಅರುಹಿದ ಮಹಾವ್ಯಕ್ತಿ. ಹರಿದಾಸ ಸಾಹಿತ್ಯ ಭಂಡಾರಕ್ಕೆ ದಾಸರು ನೀಡಿದ ಕೊಡುಗೆ ಅಮೂಲ್ಯವಾದದ್ದು. ದಾಸರು ಇಂದಿಗೂ ತಮ್ಮ ಶಿಷ್ಯರಿಗೆ ಸ್ವಪ್ನ ಮುಖೇನ ಮಾರ್ಗದರ್ಶನ ಮಾಡುತ್ತಿರುವುದು ಹಲವರ ಅನುಭವ. ದಾಸರು ತಮ್ಮ ಪಾರ್ಥಿವ ಶರೀರದಿಂದ ಕಣ್ಮರೆಯಾಗಿದ್ದರೂ ಅವರು ಕಟ್ಟಿದ ವಿಠಲನ ಮಂದಿರ, ರಚಿಸಿದ ಅಪಾರ ಕೃತಿಗಳು, ಅವರು ಬರೆದಿಟ್ಟಿರುವ ದಿನಚರಿ ಇವು ನಮ್ಮೆಲ್ಲರಿಗೆ ಸ್ಫೂರ್ತಿಯನ್ನು ನೀಡುವಂಥದ್ದಾಗಿವೆ. ಇಪ್ಪತ್ತನೆಯ ಶತಮಾನವನ್ನು ಗುರುಗೋವಿಂದವಿಠಲ ದಾಸರ ಸಾಧನ ಯುಗ ಎಂದು ಮುಂದಿನ ಇತಿಹಾಸ ತಿಳಿಸುತ್ತದೆ.

ಅವರು ಪ್ರಾರಂಭಿಸಿದ ಹರಿದಾಸ ಸಮ್ಮೇಳನ ಇಂದು ಬೃಹದಾಕಾರವಾಗಿ ಬೆಳೆದು ಎಲ್ಲೋ ಒಂದು ಮೂಲೆಯಲ್ಲಿ ಹುಟ್ಟಿ ವಿಸ್ತಾರವಾಗಿ ಹರಿಯುವ ನದಿಯಂತೆ ಧಾವಿಸುತ್ತದೆ. ಸಮ್ಮೇಳನ ವ್ಯಾಪ್ತಿ ದೇಶದುದ್ದಗಲಕ್ಕೂ ಹರಡುತ್ತಿದೆ. ತಿರುಪತಿಯಲ್ಲಿ ದಾಸರು ನಡೆಸಿದ ಸಮ್ಮೇಳನ ದಾಸ ಸಾಹಿತ ಪ್ರಾಜೆಕ್ಟ್‌ಗೆ ನಾಂದಿಯಾಗಿ ಎಲ್ಲ ಹರಿದಾಸ ದಾಸಿಯರಿಗೆ ಶ್ರೀನಿವಾಸನ ಪರಮಾನುಗ್ರಹ ದೊರಕುವಂತೆ ಮಾಡಿರುವುದನ್ನು ಮತ್ತೊಮ್ಮೆ ಸ್ಮರಿಸಬಹುದು.

ದಾಸ ಸಾಹಿತ್ಯ ವಾಙ್ಮಯ ಯೋಜನೆಯಲ್ಲಿ ಎಲ್ಲ ಹರಿದಾಸರ ಜೀವನ, ಕೃತಿಗಳನ್ನು ಪ್ರಕಟಿಸುತ್ತಿರುವುದು ಸಂತಸದ ಸಂಗತಿ. ಇದು ಹರಿದಾಸರ ಸೇವೆ ಶ್ರೀಹರಿಗೆ ಪ್ರೀತಿಕರ. ಅಮೂಲ್ಯವಾದ ದಾಸ ಸಾಹಿತ್ಯದ ರಕ್ಷಣೆ. ಈ ಯೋಜನೆಯಲ್ಲಿ ನಮ್ಮ ಗುರುಗಳಾದ ಗುರುಗೋವಿಂದ ವಿಠಲದಾಸರ ಜೀವನ ಚರಿತ್ರೆ ಮತ್ತು ಕೃತಿಗಳನ್ನು ಪ್ರಕಟಿಸಲು ತೀರ್ಮಾನಿಸಿ ಈ ಕಾರ್ಯವನ್ನು ನನ್ನ ಪಾಲಿಗೆ ಕೊಟ್ಟಿದ್ದಕ್ಕಾಗಿ ಯೋಜನೆಯ ಪದಾಧಿಕಾರಿಗಳಿಗೆ ನನ್ನ ಕೃತಜ್ಞತೆಗಳು. ಸಂಪುಟದಲ್ಲಿ ಗಣಪತಿಯಿಂದ ಆರಂಭಿಸಿ ದೇವತಾ ಕಕ್ಷೆಗೆ ಸಂಬಂಧಪಟ್ಟ ಎಲ್ಲ ಕೃತಿಗಳನ್ನು ಸೇರಿಸಿದೆ. ದಾಸರು ಬರೆದಿರುವ ಉಪನಿಷತ್ತುಗಳ ಕನ್ನಡ ಅನುವಾದ, ಗದ್ಯ ಸಾಹಿತ್ಯ, ಅಪರೋಕ್ಷ ಜ್ಞಾನಿಗಳ ಚರಿತ್ರೆಗಳು ಇದರಲ್ಲಿ ಸೇರಿಸಿಲ್ಲ. ಅವೆಲ್ಲವನ್ನೂ ದಾಸರೇ ಪ್ರಕಟಿಸಿದ್ದಾರೆ. ದಾಸರ

ಜೀವನ ಚರಿತ್ರೆ, ದಾಸಕಕ್ಷೆ, ಯತಿಕಕ್ಷೆಯಲ್ಲಿ ಬರುವ ಸ್ತುತಿಗಳೂ, ಅಂಕಿತ ನಾಮಗಳು ಎರಡನೆಯ ಸಂಪುಟವಾಗಿ ಪ್ರಕಟಗೊಳ್ಳುತ್ತಿವೆ.

ಈ ಗ್ರಂಥ ಪ್ರಕಟಣೆಯ ಕಾರ್ಯದಲ್ಲಿ ಹಸ್ತಪ್ರತಿಗಳನ್ನು ಬರೆದು ಕೊಟ್ಟು ಸಹಕರಿಸಿದ ನನ್ನ ಎಲ್ಲ ಶಿಷ್ಯರಿಗೂ, ಈ ಗ್ರಂಥಕ್ಕೆ ಅವಶ್ಯಕವೆನಿಸಿದ ಹಸ್ತಪ್ರತಿಗಳನ್ನು, ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದ ಗುರುಪುತ್ರ ಶ್ರೀ ಎಂ.ಜಿ. ಮಾಧವರಾವ್ ಹಾಗೂ ಅವರ ಪತ್ನಿ ಉಮಾ ಅವರಿಗೂ ನನ್ನ ಅನಂತ ಧನ್ಯವಾದಗಳು. ಈ ಕಾರ್ಯದಲ್ಲಿ ಸೂಕ್ತ ಮಾರ್ಗ ದರ್ಶನ ಮಾಡಿದ ಯೋಜನೆಯ ಪದಾಧಿಕಾರಿಗಳಲ್ಲಿ ಒಬ್ಬರಾದ ಡಾ. ಶ್ರೀಮತಿ ಟಿ.ಎನ್. ನಾಗರತ್ನ ಅವರಿಗೆ ನನ್ನ ವಂದನೆಗಳು.

ಗೋವಿಂದದಾಸರ ಪಾದವ ನೆನೆಯಲು ಗೋವಿಂದನೊಲುಮೆಯು ಆಗುವುದು.

ವರಾಹ ಹರಿ ವಿಠಲದಾಸರು
(ಕೆ.ಎಸ್. ವೆಂಕಟೇಶ್)

ಕೀರ್ತನೆಗಳ ಕ್ರಮಸೂಚಿ

ದಾಸಕಕ್ಷೆ

ಶ್ರೀ ಗುರುಗೋವಿಂದವಿಠಲದಾಸರ

ಕೀರ್ತನೆಗಳು : ಭಾಗ - ೨

ಯತಿಗಳು (೩೩೮-೭೪೮)

ವೇದವ್ಯಾಸರು

೩೩೮

ಅನಿಲ ಹೃತ್ಕುಮುದೇಂದು । ವೇದ ವ್ಯಾಸಾ
ಎನಗಿನ್ನು ತವ ಧ್ಯಾನ । ಸುಖವೀಯೊ ಶ್ರೀಶಾ ಪ

ಚಿದ ಚಿದ್ವಿಲಕ್ಷಣನೆ । ಚಿತ್ರ ಚಾರಿತ್ರನೇ
ಚತುರಾಸ್ಯ ಪಿತ ನೀನು । ಸುರ ಚಕ್ರವರ್ತೀ ।

ಚತುರ ರೂಪವ ಧರಿಸಿ । ಚತುರ ವ್ಯೂಹವ ರಚಿಸಿ
ಚತುರ ವಿಧ ಸೃಷ್ಟಿಯನು । ಚತುರ ವಿರಚಿಸಿದೇ ೧

ಮುನಿ ಪರಾಶರ ತನುಜ । ಶ್ರೀನಿಕೇತನ ಹರಿಯ
ಎನಗರುಹು ವೇದಾರ್ಥ । ವೇದ ವೇದ್ಯಾ ।
ಘನ ಮಹಿಮಕೋಟಿ । ನಿಖಿಲಾಂಡ ನಾಯಕನೆ
ಅನಘ ನೀ ಸಲಹಯ್ಯ । ಕಪಿಲ ರೂಪಾತ್ಮಾ ೨

ಸಚ್ಛಾಸ್ತ್ರ ಕರ್ತೃಸತ್ । ಸೂತ್ರಗಳ ನಿರ್ಮಾತೃ
ಸಚ್ಛಾಸ್ತ್ರ ಭಾವವರುಹೆ । ಬುಧ ಜನರಿಗೇ ।
ಮತ್ಸ್ಯಾದಿ ರೂಪ ನಿ । ನ್ನಿಚ್ಛೆಯಿಂದಲಿ ಪೊಂದಿ
ವತ್ಸರ್ಗೆ ಬೋಧಿಸಿದೆ । ಸಚ್ಚಿದಾನಂದಾ ೩

ಮೂಲ ಪ್ರಕೃತಿಯ ಮಾನಿ । ಮಹಲಕ್ಷ್ಮೀ ನಿನ್ನಯ
ಶೀಲಗಳನನುಸರಿಸಿ । ಸೇವಿಸುವಳೂ ।
ಪ್ರಳಯ ಕಾಲದಿ ನಿನ್ನ । ಒಲುಮೆಗೋಸುಗ ವಟದ
ಎಲೆಯ ರೂಪದಿ ಮಲ । ಗಲನುವಾದಳಯ್ಯ ೪

ಬಾದರಾಯಣ ಮೂರ್ತಿ । ಬದರಿ ಕ್ಷೇತ್ರದಿ ಪೂರ್ಣ
ಬೋಧರ ಸುಸೇವೆಯನು । ಸ್ವೀಕರಿಸುವೇ ।

ಮೋದಗುಣ ಪೂರ್ಣ ಗುರು । ಗೋವಿಂದ ವಿಠಲನೇ
ಹೇ ದಯಾಂಬುಧೇ ನಿನ್ನ । ಪಾದಾಬ್ಜ ತೋರೋ ೫

೩೩೯

ಶ್ರೀವೇದವ್ಯಾಸ ಪಾರಿಜಾತ

ರಕ್ಷಿಸೋ ಶ್ರೀ ವೇದವ್ಯಾಸ । ಬದರಿನಿವಾಸ । ಆಶ್ರಿತ ಜನತೋಷ ಪ

ಶುದ್ಧಾನಂದನೆ ವಿದ್ಯುತಾಭಲಸಿತಾ । ಸಿದ್ಧ್ಯಾದಿ ಸಂಪತ್ಪ್ರದಾ ।
ಕೃದ್ಧೋಲ್ಕಾದಿಯ ರೂಪದಿಂದ ಸತತಾ । ಬುದ್ಧ್ಯಾದಿಗಳ್ಪ್ರೇರಿತಾ ।
ಭೌದ್ಧಾದ್ಯಾಗಮ ದುಷ್ಟವಾದ ತಿಮಿರಾ । ಮಾರ್ತಾಂಡನಂತ ಪ್ರಭಾ ।
ಬುದ್ಧ್ಯಾರೂಢಿಸು ನಿನ್ನವೀರ್ಯ ಮಹಿಮಾ । ಸೌಂದರ್ಯ ವೌದಾರ್ಯವಾ
ಅತ್ಯಂತ ಭಕುತಿಯಿಂದ್ಯುಕ್ತ । ಮುನಿಪಶಾಕ್ತ । ಶ್ರೀ ಹರಿಯ ಭಕ್ತ ।
ಮತ್ತೆ ತಪಸುಗಳಿಂದ ಸತ್ಯಾ । ವಲ್ಲಭನೆ ಭೃತ್ಯ । ನಿಂತೋಷಿತನತ್ಯಂತ ।
ಸತ್ಯ ಸಂಕಲ್ಪನ ಚಿತ್ತ । ದಂತೆ ಶಾಕ್ತ । ಕೂಡಿದ ಗಂಧಿ ಮತ್ಸ್ಯ ।
ವ್ಯಕ್ತನಾದನು ಹರಿ ಅವ್ಯಕ್ತ । ಕರೆಸಿದ ಸತ್ಯ । ವತಿಯಸುತ ಗೋಪ್ತ ೧

ಸ್ವಾತಂತ್ರಾದಿ ಗುಣಾತಿ ಪೂರ್ಣರೂಪ । ಸೌಂದರ್ಯ ಸಾರಾತ್ಮಕಾ ।
ವೀತಾಽಖಿಲ ಪಾರತಂತ್ರ್ಯ ದೋಷಾ । ಸ್ವಾ ಅಭಿನ್ನ ರೂಪಕ್ರಿಯಾ ।
ತ್ರಾತಾಽಖಿಲ ಭಕ್ತ ಆರ್ತಿ ನಾಶಾ । ಮೋಕ್ಷಾದಿ ಪುರುಷಾರ್ಥದ ।
ಪ್ರೀತಾನಾಗೆನ್ನೊಳತೀತ ಕಾಲ ಅನಘಾ । ದೋಷಂಗಳಂ ತಿದ್ದುತಾ ।
ದ್ವಾಪರದಲಿ ಒಬ್ಬ ಮುನಿಪ । ತನ್ನ ಕೋಪ । ದಿಂದಲಿ ಕೊಟ್ಟ ಶಾಪ ।
ಶಾಪಿಸಲು ಜ್ಞಾನಲೋಪ । ವಾಗಲು ತಾಪ । ಬಟ್ಟರು ಜನ ಪ್ರಲಾಪ ।
ಶ್ರೀಪತಿ ತಾಳ್ದನು ರೂಪ । ವ್ಯಾಸ ರೂಪ । ದೋಷ ನಿರ್ಲೇಪ ।
ದ್ವೀಪದೊಳುದಿಸಿತೀರೂಪ । ಯಮುನಾ ಸಮೀಪ । ಪರಾಶರ ಜನೆನಿಪ ೨

ತನ್ನಿಂದ ಭಿನ್ನ ಶಕ್ತಿ ಗುಣದಿಂ ಶೋಭಿಪ । ತನ್ನಿಂದಲೇ ವ್ಯವಹೃತ
ತನ್ನಿಂ ಭಿನ್ನ ರಮಾದಿ ಸರ್ವಜಗಕೇ । ಸೃಷ್ಟ್ಯಾದಿ ಮೋಕ್ಷಪ್ರದ

ಇನ್ನುಂಟೇ ನಿನಗೀಡು ತ್ರೈಭುವನದೀ । ಲೀಲಾ ಮನೋರೂಪಕ ।
ಪನ್ನಂಗೇಶ ಮಹಾ ಸುಶಯ್ಯ ಹರಿಯೇ । ನಿನ್ನನ್ನೆ ಕೊಂಡಾಡುವೆ ।
ಮೂಲ ರಾಮಾಯಣ ಸೂತ್ರ । ಮಹಾಭಾರತ । ಶ್ರೀ ಮದ್ಭಾಗವತ ।
ಮೂಲ ವೇದಗಳ್ಪಾಂಚರಾತ್ರ । ಪ್ರತಿ ಪಾದಿತ । ರೂಪನಾದ್ಯನಂತ ।
ನಾಲಕು ದೇಹ ಬಾಹ್ಯವು ಅಂತ । ಸರ್ವವು ವ್ಯಾಪ್ತ । ಸತ್ತಾದಿ ಪ್ರದಾತ ।
ಮಾಲೋಲ ಬೇಡುವೆ ದಾತ । ಎನ್ನೊಳು ಪ್ರೀತ । ನಾಗು ಭಕ್ತಿ ಪ್ರದಾತ ೩

ವೇದಾದೌ ಉಕ್ತಾನೂಕ್ತ ಭಾರತೋಕ್ತ । ಪ್ರಕರದಿಂ ಬ್ರಹ್ಮೋಪಾಸ್ಯ ।
ಶ್ರೀದ ನಿನ್ನ ಗುಣ ಕ್ರಿಯಾದ್ಯನಂತ । ರೂಪಂಗಳಂ ಸೇವಿಪ ।
ಮೋದದಿಂದ ಗುಣ ಕ್ರಿಯಾದ್ಯನಂತ । ವೇದಾತ್ಮಿಕೆಯಿಂ ಸೇವಿತ ।
ವೈದೇಹಿ ಪ್ರಿಯ ತಾತ್ವಿಕಾದಿ ಬುಧರಿಂ । ತಾರತಮ್ಯದಿಂ ಸೇವಿತ ।
ಬ್ರಹ್ಮಾದಿ ಮನುಜೋತ್ತಮಾಂತ । ಅವರ ಯೋಗ್ಯತ । ದನುಸಾರು ಪಾಸಿತ ।
ಅಮ್ಮಹ ಜ್ಞಾನ ಸಂಜಾತ । ಬಲುಚಿತ್ರ ಚಿತ್ರ । ಜ್ಞಾನ ವಿಷಯಾತ ।
ನಿಮ್ಮುಪಾಸಕರೀಗೆ ಅತ್ಯರ್ಥ । ಪ್ರಸಾದಕರ್ತ್ರ । ಸುಜ್ಞಾನಿ ಪ್ರೀತ
ನಿರ್ಮಮರಿಂದನು ಭಾವಿತ । ಪ್ರಾರಬ್ಧ ಜನಿತ । ಸಕಲ ಭಸ್ಮೀಭೂತ ೪

ಭೋಗಾದಿಂ ಪ್ರಾರಬ್ಧ ಪೋಗಾಡಿದಂಥ । ಕಾರ್ಯಾಖ್ಯ ಬ್ರಹ್ಮಪ್ರಾಪ್ತ ।
ಯೋಗೀಜನ ಪ್ರಳಯೇಪಿ ಅಜನ ಪ್ರಾಪ್ತ । ಇತ್ಯಾದ್ಯವಸ್ಥಾದಿಯೊಳ್ಗತ ।
ಮಾರ್ಗಗಳು ಶೇಷ ಗರುಡಾದಿಯೋಳ್ಗತ । ಈ ಪರೀಯಿಂ ಸಮಸ್ತ ।
ಯೋಗೀ ಜನಂಗಳಿಗೆ ಆ ಅಜಸಮೇತ । ವಿರಜಾ ಸ್ನಾನ ಪ್ರಾಪ್ತ ॥
ಸ್ನಾನದಿಂದಲಿ ಲಿಂಗನಾಶ । ಮಾಡುವೆ ಶ್ರೀಶ । ಆದರವರು ನಿರ್ದೋಷ ।
ಅನಂತರ್ಹರಿ ಉದರ ಪ್ರವೇಶ । ಕೆಲವರು ಶ್ರೀಶ । ಆನಂದವೇ ವಪುಷ ।
ಜ್ಞಾನಿ ಇನ್ನಿತರರು ತದ್ದೇಶ । ದಲ್ಲಿವಾಸ । ಆನಂದಾನುಭವ ಶ್ರೀಶ ।
ನಾನಾ ಪರಿಯೋಗ್ಯರ ಶ್ರೀಶ । ಪ್ರಳಯದಲ್ಲೀಶ । ಧರಿಸುವಸರ್ವೇಶ ೫

ಸೃಷ್ಟೀ ಕಾಲದಿ ಉದರದೊಳಗೆ ಬಂದೂ । ಶ್ವೇತದ್ವೀಪವಂ ನೋಳ್ಪರ ।
ವಿಷ್ಣು ಈ ಪರಿ ಕಾರಣಂಗಳಿಂದ ನಿನ್ನ । ಇಚ್ಛಾಖ್ಯ ಆವರಣವಪಸಾರಿಸೀ ।
ತುಷ್ಟೀಯಿಂದಲಿ ಸ್ವಸ್ತಯೋಗ್ಯಸುಖವ । ಅಭಿವ್ಯಕ್ತಿಂಗಳಂ ಗೈಯ್ಯುವಾ ।
ಲಕ್ಷ್ಣ ಮುಕ್ತಿದ ಮಾಯೆ ಪತಿಯು ಆದ । ಶ್ರೀವಾಸುದೇವನ ದರ್ಶನ ॥
ವಾಸುದೇವನ ಕಂಡನಂತರ । ಮತಿವಂತರ । ಪೊಗಿಸುವಾಗಾರ ।

ಶ್ರೀಸಿತ ದ್ವೀಪಾದಿ ಆಗಾರ । ವರ ಮಂದಿರ । ವೈಕುಂಠಾಗಾರ । ಲೇಸಾಗಿ
ಸ್ವಯೋಗ್ಯ ಸುಖಸಾರ । ಅತಿಪರತರ । ಅನುಭವಿಪ ವಿಸ್ತಾರ । ಆಶಾಮಾತ್ರದಿ
ಸರ್ವ ಸುಖಸಾರ । ಸೃಷ್ಟ್ಯಾದಿ ಇತರ । ಇತ್ತು ತೋಷಿಪೆ ಅವರ ೬

ಅರುಣಾಭ್ಜೋಪಮ ಚಾರು ಚರಣ ನಿನ್ನ । ಧ್ವಜವಜ್ರಾಂಕುಶ ಚಿಹ್ನಿತ ।
ವರಜಾನು ಜಂಘೆ ವಿಕ್ರಮೋತ್ಕರದೋರು । ಸುರಚಿರೋದರ ನಾಭಿ ತ್ರಿವಳೀ ।
ಸಿರಿವಕ್ಷ ಕೌಸ್ತುಭವು ಉಪವೀತವೂ । ಕೌಪೀನ ಮೇಖಲಾಜಿನ ವಾಸವೂ ।
ವರಾಭಯಕರ ಪ್ರಬೋಧ ಮುದ್ರಾಯುತ । ಸುಂದರ ವರ ಕಮಂಡಲು ಧೃತ
ಚಂದ್ರನ್ನ ನಾಚಿಪ ವದನ । ಜಿತ ಮದನ । ಶ್ರೀಲಕ್ಷ್ಮೀಸದನ ।
ಇಂದಿರೇಶನ ಜಟೀವರ್ಣ । ಕಾಂಚನವರ್ಣ । ತಿಲಕ ಮೋಹನ್ನ ।
ಕಂಧರ ದರ ಪೋಲ್ವಧದನ । ತುಳಸಿಯ ವನ । ಮಾಲೆಗಳ್ಹಸನ ।
ನಂದನಂದನ ನಿನ್ನ ಕರುಣ । ಗುಣಾಭರಣ । ತೊಡಿಸಯ್ಯ ಪ್ರಧನ ೬

ಪ್ರೀಯಾ ಪ್ರೀಯ ಸರ್ವ ವಿಷಯಕೆಲ್ಲ । ನೀನೇ ಮೂಲನೆಂದು ತಿಳಿಸೋ ।
ಕಾಯಾ ವಾಚಕ ಮಾನಸೀಕ ಸರ್ವಾ । ಕರ್ಮಾದಿಗಳೆಲ್ಲವಾ ॥
ಜೀಯಾ ನಿನ್ನಯ ಚರಣಕಿತ್ತು ನಮಿಪ । ಬಿಂಬಕ್ರಿಯಾಜ್ಞಾನವಾ ॥
ರಾಯಾ ನೀನೆನಗಿತ್ತು ಪಾಲಿಸಯ್ಯ ಮುದದೀ । ನಿನ್ನನ್ನು ನಾ ಬೇಡುವೆ ॥
ತುತಿಪ ಜನರ ಸುರಧೇನು । ಕಾಮಿತವನೆ । ಕರುಣಿಪ ಕಲ್ಪದ್ರುಮನೆ ।
ಮತಿಗೆಟ್ಟ ಮನುಜನು ನಾನೆ । ನಿನ್ನ ಪಾದವನೆ । ನಂಬಿ ಬಂದಿಹೆ ನಾನೇ ।
ಹಿತದಿಂದ ನೀನೆನ್ನ ಕರವನೆ । ಪಿಡಿ ಎಂಬೆನೆ । ನಾ ಬೇಡುವೆ ನಿದನೆ ।
ಅತುಳ ಮಹಿಮ ಜಗದೀಶನೆ । ಮಧ್ವೇಶನೆ । ಗುರು ಗೋವಿಂದ ವಿಠಲನೆ ೮

೩೪೦

ವೇದವ್ಯಾಸಾ ಶ್ರೀ ಹರೇ । ನಿನ್ನ ಶ್ರೀಪಾದ
ಉದಕೇಜ – ತೋರಿಸೋ ಪ

ವೇದೋದ್ಧರಣ ಪ್ರಭೇದ ರಚನ – ವಿ
ವಾದ ಹರಣ ಪ್ರಬೋಧ ಮುದ್ರಾಂಕನ ಅ.ಪ.

ಹೇಮಲೋಚನ ಕಾಲ । ಸಕಲ ಸದ್ಗುಣ
ಧಾಮ – ಶ್ರೀ ಭೂಮಿ ದುರ್ಗೆ ಲೋಲ ॥
ಧೃತ – ಕಾಮ ಜನಕ ನಿಸ್ಸೀಮ ಮಹಿಮ – ತ್ರಿ
ಧಾಮದಲಿ ಭಕ್ತಸ್ತೋಮ ವಿರಿಸಿದೆ – ಶ್ರೀ
ರಾಮಾ – ಸುಧಾಮ – ರಿಪು ಭೀಮಾ । ಸುರಸಾರ್ವಭೌಮ ೧

ಅತ್ರಿಜ ದತ್ತಾತ್ರೇಯ । ಕೈಲಾಸ ವಾಸ
ಮಿತ್ರ ಸುಮನ ಮುಖಗೇಯ ॥
ಧೃತ – ಅತ್ರಿ ಪ್ರಮುಖ ವಿಧಿ ಪುತ್ರಾನ್ವಿತ
ಗೋತ್ರಾರಿ ಪ್ರಿಯ ಸತ್ಯಾವಲ್ಲಭ
ಚಿತ್ರಾ – ಸುವಿಚಿತ್ರಾ – ಸಮಗಾತ್ರಾ । ತೋರಿಸುತವಗಾತ್ರ ೨

ಚಿನುಮಯಗುಣ ವಪುಷಾ । ಅನಂತ ಶೀರ್ಷಾ
ಅನಿಲ ಹೃದಯಾಂತರ್ಗತ ॥
ಧೃತ – ಮನಸಿಜ ಪಿತ ಗುರುಗೋವಿಂದ ವಿಠಲನೆ
ತನುಮನಧನವೆಲ್ಲ ನಿನದಾಗಿರುವುದೊ
ಮುನಿವಂದ್ಯಾ – ಮುಕುಂದ – ಗೋವಿಂದ । ಕೊಡು ಎನಗಾನಂದ ೩

೩೪೧

ಕಂಡೆಯಾ – ಮನವೇ – ನೀನಿಂದು – ಕಂಡೆಯಾ ಪ

ಕಂಡೆಯ ಮನವೆ ನೀನಿಂದು – ತನ್ನ
ತೊಂಡರ ಸಲಹುವ ಬಂಧು – ಆಹ
ಮಂಡೆಯ ಬೋಳಿಸಿ । ಪುಂಡರೀಕಾಕ್ಷನೆ
ಹಿಂಡು ದೈವಂಗಳ । ಗಂಡನೆಂದೇಳ್ವರ ಅ.ಪ.

ಅರುಣ ಪಲ್ಲವ ಪಾದ ಸೊಬಗು – ವೇಗ
ತೆರಳುತ್ತಿದ್ದರದು ಮೆಲ್ಲಗು – ನಖ
ವರರತ್ನ ಕೆಂಪಿನ ಬೆಡಗು – ಊರು
ಕರಿಯ ಸೊಂಡಿಲಿನಂತೆ ಬೆಳಗು _ ಆಹ

ಪರಿಶುದ್ಧ ಕಟಿಯಲ್ಲಿ । ಸುರಚಿರಾಂಬರನುಟ್ಟು
ವರಕಂಠ ಫಣೆಯುದರ । ತ್ರಿವಳಿಯಂ ಮೆರೆವರ ೧

ಮೃದುರೋಮ ಶಾಲು ಪ್ರಾವರಣ - ನೋಡ
ಲದು ಭಾಸ ಉದಯಾರ್ಕ ವರಣ - ಪೋಲ್ವ
ದದು ಮೇರು ಗಿರಿಯಂತೆ - ವರ್ಣ ನೋಡು
ಎದೆಯ ವಿಸ್ತರಾ ಭರಣ - ಆಹ
ಸದಮಲುನ್ನತಾಂಸ । ಉರುಟು ನೀಳದ ತೋಳು
ಪದುಮ ರಾಗದ ಭಾಸ । ಧ್ವಜರೇಖೆ ಹಸ್ತವ ೨

ಮಂದ ಹಾಸದಿ ಬಪ್ಪ ಮಧ್ವಾ - ಚಾರ್ಯ
ರಂದ ನೋಡಲು ಬಲು ಪೊಳೆವಾ - ಪೂರ್ಣ
ಚಂದ್ರನಂತೆ ಮೋದ ಪೋಲ್ವ - ಮತ್ತೆ
ಮಂದ ದೂರನು ಅತಿ ಚೆಲ್ವಾ - ಆಹ
ಕುಂದಾಭ ರದನವು । ಸುಂದರಾರುಣ ಓಷ್ಠ
ಮಂದಜೇಕ್ಷಣ ನೋಟ । ದಿಂದ ಬೀರುವ ಮುದ ೩

ಕಿವಿಗಳಲೊಪ್ಪುವ ತುಳಸೀ - ಮೂರು
ಭುವನ ಭೂತಿ ಭ್ರೂವಿಲಾಸಿ - ಮತ್ತೆ
ಅವನೆ ಅಭೂತಿದನೆನಿಸೀ - ಚೆಲ್ವ
ದವಡೆಯಿಂದೊಪ್ಪುವ ಶಿರಸಿ - ಆಹ
ಅವಯವ ಲಕ್ಷಣ । ಪ್ರತಿ ಪ್ರತಿ ಜನ್ಮದಿ
ವಿವರವೀತೆರವೆಂದು । ವಿಭುದರು ತಿಳಿದರು ೪

ಈ ವಿಶ್ವವೆಲ್ಲವೂ ಸತ್ಯ - ಮತ್ತೆ
ಸಾರ್ವ ಭೇದವು ತಾರತಮ್ಯ - ವಿಧಿ
ಪೂರ್ವಕಲ್ವೊರೆಯುತ್ತ ದಿವ್ಯ - ತತ್ವ
ಸಾರ್ವವ ಪೇಳುತ್ತ ಭವ್ಯ - ಆಹ
ಕಾವ ಕೊಲ್ಲುವ ಗುರು ಗೋವಿಂದ ವಿಠಲನೆ
ಸರ್ವೋತ್ತುಮಾನೆಂದು । ಈ ವಿಧ ಮೆರೆವರ ೫

ಶ್ರೀ ಸುಮಧ್ವ ವಿಜಯಸ್ಥ ಅಷ್ಟೋತ್ತರ ಶತನಾಮಾವಳಿ

೩೪೨

ನಮಿಸುವೆ ಜಗದ್ಗುರುಗಳೇ ಪ

ನಮಿಸಿ ನಿಮ್ಮಡಿಗಳಿಗೆ ನಿರ್ಮಮದಿ
ಬೇಡುವೆನು ಭ್ರಮ ಮೂರು ಪರಿಹರಿಸಿ ।
ಸಮಾ ಸಮ ಪೂಜ್ಯಹೃತ್ ಧಾಮದೊಳಗಿರುವಂಥ ।
ಅಮಿತ ಮಹಿಮನ ವಿಮಲ ಪದಪದ್ಮ ತೋರ್ವುದೆಮಗೇ ಅ.ಪ.

ನಮೊ ಪೂರ್ಣ ಬೋಧರೇ । ನಮೊ ಪೂರ್ಣ ಬುದ್ಧಿಯೇ
ನಮೊ ನಮೋ ಪೂರ್ಣಧೀ । ರ್ಯಮಿತ ಪ್ರಮಿತಾತ್ಮರೇ
ನಮೊ ಪೂರ್ಣ ಚೇತರೇ । ನಮೊ ನಮೊ ಸಮ್ಮೋದ
ತೀರ್ಥಾರ್ಯ ಗುರುವರ್ಯರೆ । ನಮೊ ಭೂರಿ ಭಕ್ತಿಯೇ ।
ಪ್ರಮ್ಮೋದ ತೀರ್ಥರೇ ನಮೊ ಪೂರ್ಣ ಸಂಖ್ಯರೇ ।
ನಮೊ ನಮೋ ದಶ ಹೃದಯ ನಮೊವೀತ ಭೂಷರೇ ।
ನಮೊ ನಮೋ ವಿಶ್ವ ಭೂಷಣರೇ ಪಾಹಿಮಾಂ ಪಾಹಿ ೧

ಪರಿಪೂರ್ಣ ಪ್ರಮತಿಯೇ । ಪುರುಸಂಖ್ಯ ಪೂರ್ಣೇಕ್ಷ
ಅರವಿಂದ ಲೋಚನರೆ । ಗುರುಮತ್ಯಮಿತ ಬುದ್ಧಿ
ಮರುದಂಶ ಪ್ರಚುರಧೀ । ಪುರು ಕರುಣ ಅಂಬುಧಿಯ
ಮೇರೆಯನು ಮೀರಿದವರೆ ॥ ಸರುವಿತ್ ಪೂರ್ಣದೃಕ್ ।
ಉರುಮತಿಯೆ ಸಕಲಜ್ಞ ಸರುಧೀ ಪೃಥು ಹೃದಾ ।
ಪುರುಧೀ ಪ್ರಭೂತಧೀಃ ಪರಮ ಆನಂದ ಸತ್ತೀರ್ಥ
ಸೂರಿರಾಜಾಧಿ ರಾಜರೆ ಪಾಹಿ ಪಾಹಿ ೨

ಬಹುಲ ಧೀರ್ದಶಮತಿಯೆ । ಮಹಮತಿಯೆ ಉಗ್ರಧೀಃ
ಮಹಿಯೋಮತಿ ಚಾರುಧೀ । ಬೃಹನ್ಮತಿ ಪೃಥು ಬುದ್ಧಿ

ಮಹಬೋಧ ಅಖಿಲಜ್ಞ । ಮಹಿಷ್ಠಧಿಯರ್ನಿಶಾತಧಿ
ಯೆನಿಸಿ ಸುರ ಜ್ಞಾನದ ॥ ಬಹು ಮತಿಯೆ ಫುಲ್ಲ ದೃಕ್ ।
ಬಹುಲ ಹೃದಲವ ಬೋಧ ಬಹುಲ ಪ್ರಬೋಧರೇ ।
ಮಹೀಷ್ಟ ಸುಹೃದಯರೇ ಬಹುಲ ಬೋಧಾಖ್ಯರೇ ।
ಮಹಾ ಪುರುಷೋತ್ತಮನ ದಾಸರೊಳಧಿಕನೆ ಪಾಹಿ ೩

ನಮೊ ನಮೋ ಧೀರಮತಿ । ನಮೊ ಪೃಥೂ ದರ್ಶನರೆ
ನಮೊ ನಮೋ ಸುಖ ತೀರ್ಥ । ನಮೊ ಪೃಥುಲ ಚೇತಾತ್ಮ
ನಮೊ ನಮೋ ಪೃಥುಮತಿಯೆ । ನಮೊ
ನಮೊ ಸಮಗ್ರ ಧೀರ್ಸುಸ್ಮಿತೇಂದುಗಳೆ ಪಾಹಿ ॥ ನಮೊ ವಿಪುಲ ಹೃದಯರೇ ।
ಅಮಂದಧಿಯೆ ಶುದ್ಧಧೀಃ ನಮೊ ನಮೋ ಸುವಿಚಾರ ।
ನಮೊ ದಾನವರ್ಭೀಮ ನಮೊ ಪುಷ್ಟ ಬುದ್ಧಿಯೇ ।
ನಮೊ ಪೃಥುಲ ಹರಿ ನಿಗೂಢ ಮೂರ್ತಿಯೆ ಪಾಹಿ ಪಾಹಿ ೪

ಅನಂತ ಬೋಧಾಖ್ಯ । ಅನೂನ ಬೋಧರು ಎನಿಪ
ಆನಂದ ತೀರ್ಥಾಖ್ಯ । ಅನುಮಾನ ತೀರ್ಥರೇ
ಸ್ವರ್ಣವರ್ಣಾಭಿಧರೆ । ಧನ್ಯ
ಪ್ರವರರು ಎನಿಪ ಆದೀನ ಸತುವಾಭಿಧರೆ ॥
ಅನಂತಧಿಯ ಮಧ್ವ ಸು । ಪೂರ್ಣ ಸಂಖ್ಯ ಧೀರದಿ
ಹನುಮಂತ ಕೃಷ್ಣೇಷ್ಟ । ಪ್ರಾಣೇತ ಪ್ರಾಜ್ಯೇಕ್ಷ
ಆನಮಿಸಿ ಬೇಡ್ವೆ ಸಂ । ಪೂರ್ಣ ಪ್ರಮತಿಯೆ ತವ
ಚರಣ ತೋರಿಸಿ ಸಲಹುವುದೂ ೫

ಪಾಹ್ಯದ ಭ್ರಮನೀಷ । ಪಾಹಿ ಪ್ರಚುರ ಪ್ರಜ್ಞ
ಪಾಹಿ ವಿಪುಲ ಪ್ರಮತಿ । ಪಾಹಿ ಆಯುತ ಚೇತ
ಪಾಹಿ ಪೃಥು ಪ್ರಬೋಧಾ ।
ಪಾಹಿ ಪ್ರಬರ್ಹ ಬೋಧಾಖ್ಯರೇ ಪಾಹಿ ಪಾಹಿ ॥
ಪಾಹ್ಯ ಮಂದಮನೀಷ । ಪಾಹ್ಯದ ಭ್ರಸುಸಂಖ್ಯ
ಪಾಹಿ ಬೃಹತು ಪ್ರಬೋಧ । ಪಾಹ್ಯತಿ ಭದ್ರ ಭಾಷಣ
ಪಾಹ್ಯ ಪೂರ್ವ ಪುರುಷ ।
ಪಾಹಿ ದಶಧಿಷಣಾರ್ಯಾ ವರ್ಯ ಚರ್ಯರೇ ಪಾಹಿ ೬

ಪಾಹಿ ವಿಸ್ಮೃತ ಚಿತ್ತ । ಪ್ರೀತಿ ತೀರ್ಥಾಭಿಧನೆ
ಪಾಹ್ವಿ ಶುದ್ಧ ಬುದ್ಧಿಯೆ । ಸಕಲ ಮತಿ ಅಲೇಶಧಿ
ಪಾಹ್ಯಧಿಕ ಬೋಧಭಿಧ ।
ಪಾಹಿ ಪ್ರಮೋದ ತೀರ್ಥಾಖ್ಯರೇ ಪಾಹಿ ಪಾಹಿ ॥
ಪಾಹಿ ಸು ಸಮೀರಾಖ್ಯ । ಪಾಹಿ ಬೃಹತ್‌ಧಿಯ ಭಿಧ
ಪಾಹಿ ಮಧುಮಥನಾಂಘ್ರಿ । ಭಕ್ತಿ ಭಾಗ್ಯಾಭಿಧನೆ ಪಾಹಿ ಸಿರಿ ಮಾಧವನ ।
ಗುಣ ಸಾಧಕಾಗ್ರಣಿಯೆ ಪಾಹಿಮಾಂ ಪಾಹಿ ಪಾಹಿ ೭

ಜಯ ರಾಜ ಸೂಯ ಮುಖ । ಸನ್ಮುಖವೃತ್ತಜಯ
ಜಯ ವಾಸುದೇವ ಗುಣ ।
ನಿಶ್ಚಿತ ಹೃದಯ ಜಯತು ಜಯ ಸರ್ವಧರ್ಮ ಪರಿ ।
ಶಿಕ್ಷಣದಿ ದಕ್ಷನೆನಿಸುವನಿಗೇ ಜಯವಾಗಲಿ ॥
ಜಯ ಹರಿಗಧಿಷ್ಠಾನ । ಜಯ ಮುಖ್ಯ ಪ್ರತಿ ಬಿಂಬ
ಜಯ ಜಯತುದಾರಮತಿ । ಜಯ ಹರಿದಯಿತ ವರನೆ
ಜಯ ಶ್ರೀ ಮದಾನಂದ ।
ತೀರ್ಥಾರ್ಯವರ್ಯ ಜಯ ಜಯತು ನಿಮ್ಮ ಪದಗಳಿಗೇ ೮

ಮಧ್ವಾಖ್ಯ ಶೃತಿಪ್ರತೀ । ಪಾದ್ಯರೆಂದೆನಿಸುತಲಿ
ಮಧ್ವ ವಿಜಯಾಖ್ಯ ಪ್ರ । ಸಿದ್ಧ ಗ್ರಂಥದಿ ಪೊಳೆವ
ಮಧ್ವಗುರು ತವನಾಮ ।
ಶಬ್ದಾಖ್ಯ ಮಣಿಗಳಷ್ಟೋತ್ತರದ ಮಾಲೆಯನ್ನೂ ॥
ಮುದ್ದು ಮೋಹಜ ತಂದೆ । ಮುದ್ದು ಮೋಹರಲಿರುವ
ಮಧ್ವಗುರುವೇ ನಿಮ್ಮ । ಹೃದ್ಗುಹದಲಿರುವಂಥ
ಮುದ್ದು ಗುರುಗೋವಿಂದ ।
ವಿಠ್ಠಲನಿಗರ್ಪಿಸುವೆ ಉದ್ಧರಿಪುದೆಮ್ಮ ಸತತ ೯

೩೪೩

ನಿನ್ನ ನಾನೇನೆಂದೆನೋ । ಗುರುವೆ ಜಗದ್ಗುರು
ನಿನ್ನ ನಾನೇನೆಂದೆನೋ ಪ

ನಿನ್ನ ನಾನೇನೆಂದೆ ನಿಖಿಲ ಜೀವರ ಒಡೆಯ
ಪನ್ನಗ ನಗಧೀಶ ಪತಿತೋದ್ಧಾರನದೂತ ಅ.ಪ.

ವಾರಿಧಿಯನೆ ದಾಟಿ । ನಾರಿ ಚೋರನ ಜರೆದು
ನಾರಿ ಗೋಸುಗ ಕೌರವರ ಸವರೀ ॥
ಮಾರಮಣನೆ ಸಾರತಮನೆಂಬ ವೇದಾಂತ
ಸಾರ ಪೇಳ್ವಗೆ ಶರಣೆಂದೆನು ಅಲ್ಲದೇ ।
ಭಾರಿ ಕೋತಿಯು ಎಂದೆನೆ - ಕುಪ್ಪಸ ತೊಟ್ಟು
ನಾರಿಯಾದವನೆಂದನೆ - ಕಾವಿಯನುಟ್ಟು
ಪೋರ ಯತಿಯು ಎಂದೆನೆ - ಕುಭಾಷ್ಯಗ
ಳಾರು ಮೂರೆರಡೊಂದರರಿ ಎಂದೆನಲ್ಲದೆ ೧

ನೆರಹಿ ಕಪಿಸೈನ್ಯವ ಶರಧಿಯ ಬಂಧಿಸಿ
ದುರುಳ ರಕ್ಕಸರ ಸಂಹರಸೀ ॥
ಜರೆಯ ಸುತನ ಸೀಳಿ ಬದರೀಗೆ
ತೆರಳೀದವಗೆ ನಮೊ ಎಂದೆನು ಅಲ್ಲದೇ ॥
ಗಿರಿಯ ಪೊತ್ತವನೆಂದನೆ - ರಕ್ಕಸಿಯ
ಬೆರೆದನೆಂದವ ನೆಂದೆನೆ - ಕೌಪೀನವ
ಧರಿಸಿದವನು ಎಂದೆನೆ - ಸುಜನರ್ಗೆ
ಪರತತ್ವ ಪೇಳ್ದವನೆಂದೆನು ಅಲ್ಲದೇ ೨

ಕಾಚವಧರಿಸಿ ನಿಶಾಚರ ಸಂಹಾರಿ
ಯಾಚಕನಾಗಿ ಭಿಕ್ಷಾನ್ನವ ಮೆಲ್ಲುತ
ಈ ಚರಾಚರಕೆಲ್ಲ ಕರ್ತು ಹರಿಯೆ ಎಂದು
ನಿಚೋಚ್ಚ ತರತಮ ಪೇಳ್ದೆ ಎಂದಲ್ಲದೆ ॥
ಖೇಚರ ನೀನೆಂದನೆ - ವಿರಾಟನೊಳ್
ಪಾಚಕ ನೀನೆಂದನೆ - ಭವಾಟವಿ
ಮೋಚಕನೇ ಗುರು ಗೋವಿಂದ ವಿಠ್ಠ
ಲಾರ್ಚಕನೆಂದು ಸ್ತುತಿ ಗೈದನಲ್ಲದೆ ೩

೩೪೪

ಮಧ್ವಾರ್ಯ - ಮಧ್ವಾರ್ಯ ಪ

ಅದ್ವೈತಾರಣ್ಯ । ಪ್ರಧ್ವಂಸಾನಲ ಅ.ಪ.

ಬಡವರು ಎನಿಸಿದ । ನಡುಮನೆ ದ್ವಿಜನಲಿ
ಸಡಗರದಲಿ ಜನ । ಮೃಡನುತ ಗುರುವೇ ೧

ಬಾಲನೆ ವೃಷಭನ । ಬಾಲ ಪಿಡಿದು ದೇ
ವಾಲಯ ವನದಲಿ । ಲೀಲೆಯ ತೋರ್ದೆ ೨

ಹಸು ಕೂಸಾಗಿಯೆ । ಬಿಸಿ ಹುರುಳಿ ಮೆದ್ದೆ
ವೃಷ ವಿಕ್ರಯಿ ಋಣ । ತಿದ್ದಿದೆ ಬೀಜದಿ ೩

ಅಚ್ಯುತ ಪ್ರೇಕ್ಷರಿಂ । ತಚ್ಚತುರಾಶ್ರಮ
ಸ್ವೇಚ್ಛೆಲಿ ಸ್ವೀಕರ । ಕೃಛ್ರಾದ್ಯಾಚರ ೪

ಇಷ್ಟ ಸಿದ್ಧಿಗತ । ಭ್ರಷ್ಟ ವಿಷಯಗಳ
ಎಷ್ಟೊ ತೋರಿ ಸುವಿ । ಶಿಷ್ಟನು ಎನಿಸಿದೆ ೫

ವೇದವ್ಯಾಸರಿಂ । ಬೋಧ ಬದರಿಯಲಿ
ಸಾದರ ಸ್ವೀಕೃತ । ಽಗಾಧ ಭಾಷ್ಯಕೃತ ೬

ಮೂಲ ಮೂರು ಹತ್ತು । ಏಳು ಗ್ರಂಥಗಳು
ಲೀಲೆಯಿಂದ ಕೃತ । ಶೀಲ ಸುಜನರಿಗೆ ೭

ನಾನೆ ದೇವನೆಂ । ಧ್ಹೀನ ಮಾಯಿಗಳ
ಗೋಣು ಮುರಿದು ಸು । ಜ್ಞಾನವನಿತ್ತೆಯೊ ೮

ಏಕ ವಾಕ್ಯದಿಂ । ದೈತ್ಯವನಳಿಯುತ
ಏಕ ಮೇವ ಹರಿ । ಏಕಾತ್ಮನೆಂದೇ ೯

ಬುದ್ಧಾಬ್ಧಿಯು ಬರೆ ಗೆದ್ದು । ವಾದದಲಿ
ಅದ್ವೈತವ ಮುರಿ । ದದ್ವಿತೀಯ ಗುರು ೧೦

ಸೂಕ್ತವ ಜಪಿಸುತ । ಹಸ್ತಗ ಧಾನ್ಯದಿ
ಸತ್ಯ ಕುಸುಮ ಫಲ । ನಿತ್ತು ತೋರ್ದೆ ನಿಜ ೧೧

ಗೋಪಿ ಚಂದನದಿ । ಶ್ರೀಪ ಗೋಪ ಬರೆ
ಶ್ರೀಪತಿ ಸ್ಥಾಪಿತ । ಆಪುರಿ ಉಡುಪಲಿ ೧೨

ಅಷ್ಟಯತಿಗಳಿಂ । ಕೃಷ್ಣ ಪೂಜೆಗಳ
ಸುಷ್ಠು ಗೈಯ್ಯಲೇ । ರ್ಪಟ್ಟಿತು ನಿನ್ನಿಂ ೧೩

ಐತರೇಯ ಸುವಿ । ನೀತರೆನಿಪ ತವ
ಛಾತ್ರರಿಗಾಗಿಯೆ । ಕೂತು ಪೇಳ್ದೆ ಗುರು ೧೪

ಶೇಷ ಮುಖ್ಯರಾ । ಕಾಶದಿ ನಿಂತುಪ
ದೇಶವ ಕೇಳುತ । ತೋಷವ ಪಟ್ಟರು ೧೫

ತಕಿಟ ತಕಿಟವೆಂ । ದುತ್ಕಟ ನಾಟ್ಯದಿ
ಪ್ರಕಟ ಹರ್ಷ ಸ್ತ್ರೀ । ನಿಕರಾವಳಿಯಿಂ ೧೬

ದೇವ ತತಿಯು ತಮ । ದೇವ ವಾದ್ಯದಿಂ
ಪೂವ ಮಳೆಯ ಗರೆ । ಆವೃತನದರಿಂ ೧೭

ಕೃತ ಕಾರ್ಯನೆ ತವ । ಸ್ತುತಿಯಗೈಯ್ಯ ಸುರ
ತತಿಯ ಬದರಿ ಪುರ । ಗತ ನೆಂದೆವಿಸಿದೆ ೧೮

ವ್ಯಾಸಾತ್ಮನು ಗುರು । ಗೋವಿಂದ ವಿಠಲನ
ದಾಸ ಹೃದಯದವ । ಕಾಶದಿ ಭಾಸಿಸು ೧೯

೩೪೫

ಶ್ರೀಮಾಧವ ತೀರ್ಥರ ಸ್ತೋತ್ರ

ಮಾಧವ ಸುತೀರ್ಥ ಗುರು । ಭಕ್ತಜನಕಲ್ಪತರು
ಆದಿ ಗುರುಗಳ ಕರಜ । ಮಾಡೆನ್ನ ವಿರಜ ಪ

ಭೀಮ ಸತ್ತಟವಾಸ । ಕೈಮುಗಿದೆ ಮೌನೀಶ
ಸಾಮ ಸನ್ನುತ ಚರಣ । ಮೌನದಿಂ ಭಜನ
ನೀ ಮಾಡಿ ಆನಂದ ವಾರಿಧೀಯಲಿ ಮಿಂದು
ಆ ಮಹಿಮೆ ಪೊಗಳಲೂ । ಎನಗಾವ ಅಳಲೂ ೧

ಜ್ಞಾನಾಯು ರೂಪಕನೆ । ಪ್ರಾಣಪತಿ ಎನಿಪನ್ನ
ನೀನಾಗಿ ತೋರುವಲಿ । ನಿನ್ನ ದಯವಿರಲಿ ।
ಮೌನೀಶ ಇದ ಹೊರತು । ಅನ್ಯಬೇಡೆನು ಒಳಿತು
ಪ್ರಾಣ ಮುಖ ತತ್ವೇಶ । ರೊಲಿಮೆ ಸಹ ಆಶ ೨

ಆನಂದ ತೀರ್ಥ ಮತ । ಶಿಷ್ಟರಲಿ ಭೋಧಿಸುತ
ದೀನಜನ ಪರಿಪಾಲ । ಹರಿಭಕ್ತ ಲೋಲಾ ।
ಜಾಣ ಗುರುಗೋವಿಂದ । ವಿಠಲ ಮಹಿಮಾನಂದ
ನೀನಾಗಿ ಕೊಟ್ಟೆನ್ನ ಉದ್ಧರಿಸೊ ಘನ್ನ ೩

೩೪೬

ಜಯತೀರ್ಥರು

ಕಂಡೆ ಕಂಡೇ ಗುರುಗಳ – ಕಂಡೆ ಕಂಡೇ ಪ

ಕಂಡೆ ಕಂಡೆನು ಕರುಣ ನಿಧಿಯನು
ತೊಂಡರನು ಬೆಂಬಿಡದೆ ಕಾಯ್ವರ ಅ.ಪ.

ತಂದೆ ವೆಂಕಟೇಶ ವಿಠಲ ದಾಸರ ।
ಮಂದಿರದಿ ವಾತದ್ವಿತಿಯ ಪೆಸರಿನ
ವಂದನೀಯರು ಗೈಯ್ಯುತಿರ್ಪುದ ।
ಅಂದ ಪುಜೆಯ ಛಂದದಿಂದಲಿ ೧

ಕಾಗಿನೀ ಸರಿತ್ತಟದಿ ಮೆರೆಯುವ ।
ರಾಗರಹಿತಕ್ಷೋಭ್ಯ ಕರಜರ
ಖಗವರ ಧ್ವಜನಂಘ್ರಿ ಭಕುತರ ।
ಯೋಗಿ ಕುಲಮಣಿ ಟೀಕಾಚಾರ್ಯರ ೨

ಕಾಯಜನ ಶರ ಭಯವಿದೂರನ ।
ಮಾಯಿಮತ ಮಹತಿಮಿರ ಸೂರ್ಯನ
ಪಾವಮಾನಿ ಮತಾಬ್ಧಿ ಚಂದ್ರನ ।
ಜಯ ಮುನೀಂದ್ರನ ವೀತ ಶೋಕನ ೩

ತೊಂಡಜನಕತಿ ಪ್ರೀಯ ದೇವನ ।
ತಾಂಡವ ಶಿರಿ ಕೃಷ್ಣ ದೂತನ
ಥಂಡ ಥಂಡದಿ ಸೇವೆಗೊಳ್ಳುವ ।
ಹಿಂಡು ಮಾಯ್ಗಜ ಗಂಡು ಸಿಂಹನ ೪

ಭೂತಪತಿಗತಿ ಅಧಿಕನೆನಿಸಿದ ।
ವಾತ ಸುತನಲಿ ಸೀತೆ ಪತಿಯನು
ಪ್ರೀತಿಯಿಂದಲಿ ಭಜಿಪ ಯತಿಗಳ ।
ದೂತ ಗುರು ಗೋವಿಂದ ವಿಠಲನ ೫

३४८

ಕಾಗಿಣಿ ತೀರದ ಯೋಗಿವರ್ಯ ಗುರುವೇ ।
ನಿನ್ನಲಿ ಮೊರೆಯಿಡುವೆ ಪ

ಭೋಗಿಶಯನ ಗುಣ ಯೋಗದಿಂದ ಭಜಿಪಾ ।
ಹರಿ ಪದಾಬ್ಜ ಮಧುಪಾ ಅ.ಪ.

ಸಿಂಗರವೆನಿಸಿದ ಮಂಗಳವೇಡಿಯಲಿ ।ನೀನುದಿಸುತಲಲ್ಲೀ
ಸಿಂಗರಿಸಿಹ ಬಲು ರಂಗ ಕುದುರೆ ನೇರಿ । ರಾವುತರೊಡಸೇರೀ ॥
ಕಂಗೆಡುತಲಿ ಬಲು ತುಂಗೆ ಕಾಗಿಣೀಯಾ । ಸಾರುತ ತನಹಯಾ
ಹಿಂಗದೆ ನದಿಯಲಿ ಮಂಗಳ ಹಯವೇರಿ । ನೀರ್ಗುಡಿದ ಬಾಯಾರಿ ೧

ಆಚೆ ತಟದಿ ಅಕ್ಷೋಭ್ಯಮುನಿಪ ನೋಡಿ । ಸ್ವಪ್ನದರ್ಥ ಮಾಡೀ
ಸೂಚಿಸಿದನು ತವ ಶಿಷ್ಯನ ಕೈಯಲ್ಲೀ । ಬಂದ ಸಾದಿ ಅಲ್ಲೀ ॥
ಯಾಚಿಸಿದನು ಮುನಿ ಪದಕೇ ಬಾಗೀ । ತುರ್ಯಾಶ್ರಮಕಾಗೀ
ಖೇಚರ ವಹನಾಜ್ಞೆಯೆಂದು ತ್ವರ್ಯಾ । ಮಾಡ್ದ ಸಾದಿ ಯತಿಯಾ ೨

ತಂದೆ ಬಹು ಕೋಪದಿಂದ ಬಂದೂ । ಯತಿಯ ನಿಂದಿಸ್ಯಂದೂ
ತಂದು ಮಗನ ಏಕಾಂತ ಗೃಹಕೆ ಆಗ । ಸತಿಯನು ಕೂಡಿಸಿ ವೇಗ ॥
ಅಂದು ಕಂಡು ಸರ್ಪಾಕೃತಿ ಪತಿಯಾ । ಚೀರಿದಳ್ ಬಲ್ಪರಿಯಾ
ತಂದೆ ಕೊಂಡು ಮಗನರ್ಪಿಸಿದನುಯತಿಗೇ । ಕ್ಷಮೆ ಬೇಡಿದನಾಗೇ ೩

ತ್ರ್ಯಕ್ಷನಂಶ ಅಕ್ಷೋಭ್ಯ ಮುನಿಪ ಆಗ । ಸನ್ಯಾಸ ವೇಗ
ಭಿಕ್ಷುಕ ಮಧ್ವರ ಗ್ರಂಥ ಪೊತ್ತ ವೃಷಭ । ಎನುತೀತನ ಪ್ರಭಾ ॥
ಲಕ್ಷಿಸಿವರ ಕರೆದನೂ ನಾಮಾನ್ವರ್ಥ । ಯತಿಯನೆ ಜಯತೀರ್ಥ
ಕುಕ್ಷಿಲಿ ಮೆರೆವರಗೋಳ ಗುಹೆಯು ಅಲ್ಲೀ । ರಚಿಸಿದ ಟೀಕೆಗಳಲ್ಲೀ ೪

ಮಧ್ವಭಾಷ್ಯಕೇ ರಚಿತ ಟೀಕಾ ಗ್ರಂಥಾ । ನೋಡಿದ ಮುನಿ ಮತ್ತ
ವಿದ್ಯಾರಣ್ಯರ ಗೆದ್ದ ಆರ್ಯ ಧೀರಾ । ಅಕ್ಷೋಭ್ಯರ ಕುವರ ॥

ಅದ್ವೈತಾದಿಗಳೇಕವಿಂಶ ಪಂಥ । ಗೆಲ್ದುತ ಸುಧೆ ಗ್ರಂಥ
ಅದ್ವಿತೀಯ ಗುರುಗೋವಿಂದ ವಿಠ್ಠಲಗೇ । ಅರ್ಪಿಸಿದನು ಆಗೇ ೫

೩೪೮

ಜಯತೀರಥ ಭವ ವನಧಿಗೆ ನವಪೋತ । ಪಾಲಿಸು ವಿಖ್ಯಾತ ಪ

ವಿಯದಧಿಪನೆ ಎನ್ನ ಕೈಯ್ಯನು ಪಿಡಿಯೋ । ಜ್ಞಾನ ಭಿಕ್ಷ ಈಯೋ ಅ.ಪ.

ಮಾಯಾಪತಿ ಪದ ಪದ್ಮಯುಗಳ ಭಜಿಪಾ । ಉತ್ತಮ ಪಥತೋರ್ಪಾ
ಶ್ರೇಯಸು ಸಾಧನ ವೆನಿಸಿ ಮೆರೆಯುರ್ತಿರ್ಪಾ । ಹರಿಪರಮನು ಎನಿಪಾ ॥
ಮಾಯಾಮತ ತಮ ಸೂರ್ಯನೆನಿಸಿ ಮೆರೆವಾ । ಸುಜನಸುರದ್ರುಮವಾ
ನ್ಯಾಯ ಸುಧೆಯನೇ ತಾರಚಿಸಿರುವಾ । ಮುಕುತಿ ಮಾರ್ಗ ತೋರ್ವಾ ೧

ಕಾಕು ವೃತ್ರನಿಂದಾವೃತ ಜಗವಿರಲೂ । ಜ್ಞಾನರಹಿತ ವಿರಲೂ
ಲೋಕ ಮಹಿತ ಮಂತ್ರವು ನಿನಗಿರಲೂ । ಜಪಿಸುತಾಸ್ತ್ರ ಬಿಡಲೂ ॥
ಆ ಕುಯೋನಿಗತ ಚಿತ್ರಕೇತು ಮೋಕ್ಷ । ಆಯಿತು ಸುರರಾಧ್ಯಕ್ಷ
ಲೋಕಾಮಯವನು ಹರಿಸಿ ಜಗದಿ ಮೆರೆದೇ । ಮಹಾನ್ನು ಎನಿಸೀದೇ ೨

ತ್ರ್ಯಕ್ಷಾಂಶರು ಅಕ್ಷೋಭ್ಯರ ಕರಜಾತಾ । ಇಕ್ಷು ಚಾಪ ಜೇತಾ
ಕುಕ್ಷಿಯೊಳಗೆ ಬಲು ಬಲು ವಿಖ್ಯಾತಾ । ಕಾಗಿನಿ ತಟದಿಸ್ಥಿತ ॥
ಅಕ್ಷರೇಡ್ಯ ಗುರುಗೊವಿಂದ ವಿಠ್ಠಲನಾ ತನ ಹೃದ್ಗನಾಗಿರುವವನ ॥
ಅಕ್ಷಿಯೊಳಗೆ ಕಂಡು ಮೋಕ್ಷ ಪಥವ ಸೇರ್ದ । ಆನಂದವ ಬೀರ್ದ ೩

೩೪೯

ಟೀಕಾರ್ಯ – ಟೀಕಾರ್ಯ ಪ

ಕಾಕು ಮತಗಳ ವಿ । ವೇಕದಿ ಖಂಡನ ಅ.ಪ.

ಎತ್ತಾಗಿರುತಿರೆ । ಶಾಸ್ತ್ರಬೋಧ ಶ್ರುತ
ಉತ್ತಮ ಸಂಸ್ಕೃತಿ । ಪೊತ್ತು ಜನಿಸಿದೆ ೧

ಲಕ್ಷವಿತ್ತನೀ । ಲಕ್ಷಿಸದಲೆ ಮುನಿ
ತ್ರ್ಯಕ್ಷನಂಶರಿಂ । ಭಿಕ್ಷುಕನಾದವ ೨

ಮಧ್ವಶಾಸ್ತ್ರ ದು । ಗ್ಧಾಬ್ಧಿ ಮಥಿಸಿ ಬಹು
ಶುದ್ಧ ಸುಧೆಯ ನೀ । ಮೆದ್ದು ಉಣಿಸಿದೆ ೩

ಮೌನಿ ಮಧ್ವಕೃತ । ಮಾನ ಲಕ್ಷಣಕೆ
ಗಾನ ಮಾಡ್ದೆ ಪ್ರ । ಮಾಣ ಪದ್ಧತಿಯ ೪

ಪದ್ಧತಿಯಿಂದಲಿ । ವಿದ್ಯಾರಣ್ಯರ
ಸದ್ದಡಗಿಸಿದೆಯೊ । ಬುದ್ಧಿ ಚಾತುರ್ಯ ೫

ನಾಗಾವೇಶಿತ । ಯೋಗಿ ವರೇಣ್ಯನೆ
ಕಾಗಿನಿ ತೀರಗ ಭಾಗವತರ ಪ್ರಿಯ ೬

ಮಾವಿನೋದಿ ಗುರು । ಗೋವಿಂದ ವಿಠಲನ
ಭಾವ ಕುಸುಮದಿಂ । ದೋವಿ ಪೂಜಿಸುವ ೭

೩೫೦

ತ್ರ್ಯಕ್ಷಾಂಶ ಸಂಭೂತ । ಅಕ್ಷೋಭ್ಯ ಕರಜಾತ
ಕುಕ್ಷಿಯೊಳಗೆ ಖ್ಯಾತ । ಟೀಕಾರ್ಯರೆಂಬಾತ ಪ

ಮರುತ ಮತಾಬ್ಧಿ ಸೋಮ । ಹರಿಗುಣ ಗಣಸ್ತೋಮ
ಬರೆದು ವಿಬುಧಸ್ತೋಮ । ಪೊರೆದ ನಿಸ್ಸೀಮಾ ಅ.ಪ.

ಎರಗೋಳ ಗುಹೆಯಲ್ಲಿ । ಮರುತ ಮತ ಗ್ರಂಥದಲಿ
ನಿರುತ ಬಹು ಆಸಕ್ತ । ಟೀಕೆಗಳ ಕರ್ತಾ ೧

ವೃಷಭದಾಕೃತಿ ಧರಿಸಿ । ಅಸುಪತಿಯ ಸೇವಿಸೀ
ಎಸೆವ ಗ್ರಂಥಗಳ್ಹೊತ್ತು । ಜನ್ಮ ಸ್ಮೃತಿ ಪೊತ್ತೂ ೨

ಕಾಗಿಣಿಯ ತೀರಗನೆ । ಭೋಗಿ ಆವೇಶಿತನೆ
ಯೋಗಿ ಕುಲ ಕಮಲಾಪ್ತ । ಮಾಯಿ ಮತ ಹರ್ತಾ ೩

ವೇನ ಮತ ದುರ್ಧ್ವಾಂತ । ಕಳೆಯಲ್ಕೆ ಸುಧೆ ಗ್ರಂಥ
ಜ್ಞಾನ ಸೂರ್ಯನೆ ಇತ್ತೂ । ಕಳೆದೆ ಆಪತ್ತೂ ೪

ಗೋವುಗಳ ಪಾಲ ಗುರು । ಗೋವಿಂದ ವಿಠಲ
ದೇವ ಗುಣಗಳ ಜಾತ । ಬರೆದ ವಿಖ್ಯಾತಾ ೫

೩೫೧

ದಯದಿ ಎಮ್ಮನು ಸಲಹ ಬೇಕಯ್ಯ । ಮಳಖೇಡ
ನಿಲಯ ದಯದಿ ಎಮ್ಮನು ಸಲಹ ಬೇಕಯ್ಯ ಪ

ದಯದಿ ಎಮ್ಮನು ಸಲಹ ಬೇಕೈ । ವಿಯದಧಿಪ ಸದ್ದಂಶ ಸಂಭವ ಭಯ
ವಿದೂರನ ತೋರು ಎನುತಲಿ । ಜಯ ಮುನೀಂದ್ರನೆ ಬೇಡ್ವೆ ನಿನ್ನನು ಅ.ಪ.

'ಇಂದ್ರಸ್ಯನು ವೀರ್ಯಾಣಿ' ಎಂದೆನುತ । ಇತ್ಯಾದಿ
ಋಕ್ಕುಗಳಿಂದ ಬಹುತೆರೆ ನೀನು ಪ್ರತಿಪಾದ್ಯ ॥
ಅಂದು ಮೇಘದ ಜಲವು ಬೀಳದೆ । ಬಂಧಗೈದಹಿನಾಮ ದೈತ್ಯನ
ಕೊಂದು ಉದ್ಧರಿಸಿರುವ ಪರಿಯಲಿ । ಮುಂದೆ ದುರ್ವಾದಿಗಳ ಖಂಡಿಪೆ ೧

ವಾಲಿಯಂದದಿ ದೃಷ್ಟಿಮಾತ್ರದಲಿ । ಶತೃಗತಬಲ
ಲೀಲೆಯಿಂದಪಹರಿಪೆ ನಿಮಿಷದಲಿ ॥
ಕಾಲ ತ್ರೇತೆಯಲಂದು ದುಷ್ಟರ । ವಾಲಿರೂಪದಿ ವಾರಿಸಿದ ಪರಿ
ಕಾಲ ದ್ವಾಪರದಲ್ಲಿ ಪ್ರಾರ್ಥನೆ । ಲೀಲೆ ರೂಪಿಯು ಕೃಷ್ಣಸೇವಕ ೨

ದೃಷ್ಟಿ ಮಾತ್ರದಿ ಕರ್ಣಗತ ಬಲವ । ಅಪಹರಿಸಿ ನೀನು
ಕ್ಲಿಷ್ಟ ಯುದ್ಧದಿ ಗಳಿಸಿ ನೀ ಜಯವ ॥
ಶ್ರೇಷ್ಠ ಕರ್ಣನ ಅಸುವ ಕೊಳ್ಳುತ । ಸುಷ್ಠು ಅರಿಬಲ ನಾಶಮಾಡುತ
ಭ್ರಷ್ಟ ಕೌರವನೀಗೆ ದುಃಖದ । ಕೃಷ್ಣಗರ್ಪಿಸಿ ಕೈಯ್ಯ ಮುಗಿದೆಯೊ ೩

ಕಾಲ ಕಲಿಯುಗದಲ್ಲಿ ಬಲ ಭೀಮ । ಮಧ್ವಾಭಿಧಾನದಿ
ಮೂಲ ಮೂವತ್ತೇಳು ಸೂನಾಮ ॥
ಭಾಳ ಗ್ರಂಥಗಳನ್ನೆರಚಿಸೀ । ಕಾಲಟಿಜಕೃತಮಾಯಿ ಮತವನು
ಲೀಲೆಯಿಂದಲಿ ಖಂಡಿಸುತ್ತ । ಪಾಲಿಸುತ್ತಿರೆ ಸುಜನರನ್ನು ೪

'ವೃಷಾಯ ಮಾಣೆಂಬ' ಋಕ್ಕಿನಲಿ ದೇವ ಇಂದ್ರಗೆ
ವೃಷಭದಾಕೃತಿ ಪೇಳಿಹುದು ಅಲ್ಲಿ ॥
ವೃಷಭ ನೀನಾಗಂತೆ ಕಲಿಯಲಿ । ಎಸೆವ ಶ್ರೀ ಮನ್ಮಧ್ವ ಗ್ರಂಥದ
ಹಸಿಬೆ ಚೀಲವ ಹೊತ್ತು ತಿರುಗುತ ।
ಅಸುಪತಿಯ ಸೇವಿಸಿದ ಮಹಿಮ ೫

ಅಗಸ್ತ್ಯ ಮುನಿ ಸಕಲ ತೀರ್ಥಗಳ । ಸಂಗ್ರಹಿಸಿ ಕರದಿ
ಸಾಗಿ ಗಿರ್ಯಾನಂತ ಕಮಂಡೂಲ ॥
ವೇಗ ಕೆಳಗಿಟ್ಟಾಚಮನ ಅಲ್ಪ । ಕಾಗಿ ಸ್ವಲ್ಪವುದೂರ ಪೋಗಲು
ಕಾಗೆ ರೂಪದಿ ಬಂದು ಇಂದ್ರನು । ವೇಗ ಉರುಳಿಸೆ ಜಲವು ಹರಿಯಿತು ೬

ದೆವರಾಜನು ಕಾಣಿಸಿ ಕೊಳಲು । ಮುನಿಯು ಆಕ್ಷಣ
ದೇವ ಕಾರ್ಯದ ಭಾವ ತಿಳಿಯಲು ॥
ಓವಿ ತತ್ಕಾಗಿಣಿಯ ನಾಮದಿ । ಭೂವಲಯದೊಳ್ಖಾತಿಸಲಿ ಎನೆ
ತೀವರಾಶೀರ್ವಾದ ದಿಂದಲಿ । ಪಾವನವು ತತ್ ಕ್ಷೇತ್ರ ವಾಯಿತು ೭

ಪಾಂಡು ಮಧ್ಯಮನಾದ ಅರ್ಜುನನು । ಇಲ್ಲುದಿಸಿ ಪೊತ್ತ
ಧೋಂಡು ರಘುನಾಥ ಪೆಸರನ್ನು ॥ ಗೊಂಡು ನಾಯಕ
ತನವ ಅಶ್ವಕೆ । ಅಂಡಲೆದು ಬರುತಿಲ್ಲಿ ಬಿಸಿಲಲಿ ಉಂಡು
ಉಂಬುದ ಜಲವ ಪಶುಪರಿ । ಕಂಡು ಮುನಿ ಅಕ್ಷೋಭ್ಯ ಬೆಸಸಿದ ೮

ಸ್ವಪ್ನ ಸೂಚಿಸಿದಂತೆ ಮುನಿಶ್ರೇಷ್ಠ । ನೀರ್ಗುಡಿದವ ನರೆ
ಬಪ್ಪುವನು ತಮ ಪೀಠಕೆನ್ನುತ್ತ ॥ ಸ್ವಲ್ಪ ಹಾಸ್ಯದಿ ಪಶುವು
ಪೂರ್ವದಿ । ಒಪ್ಪುವೆಯಾ ನೀನೆನ್ನ ಸಾದಿಗೆ
ನೆಪ್ಪು ಬಂದುದು ವೃಷಭ ಜನ್ಮದಿ । ಕೃಪ್ಟೆಗೈದಿಹ ಮಧ್ವರನುಗ್ರಹ ೯

ಸಾದಿ ಭೂಪನು ಕಳುಹಿ ತನ್ನ ಸೈನ್ಯ । ಅಕ್ಷೋಭ್ಯ ಮುನಿಪರ
ಪಾದಕೆರಗುತ ಆಶ್ರಮವು ತುರ್ಯ ॥
ಮೋದದಿಂದ್ಯಾಚಿಸಲು ಮುನಿವರ । ಆದಿಯಿಂದಲಿ ಬಂದ ಪೀಠಕೆ
ಸಾದರದಿ ಪಟ್ಟಾಭಿಷಕ್ತನ ಗೈದು ಆಶೀರ್ವಾದ ಮಾಡಿದ ೧೦

ಸುತನು ತುರ್ಯಾಶ್ರಮವ ಪೊತ್ತುದನ । ಕೇಳುತ್ತ ತಂದೆ
ಅತುಳ ಕೋಪದಿ ನಿಂದಿಸಿದ ಮುನಿವರನ ।
ಸುತನ ಗೃಹ ಕೆಳತಂದು ಪತ್ನಿಯ । ಜೊತೆಯಲಿಡೆ ಏಕಾಂತ ಗೃಹದಲಿ
ಅತುಳ ಸರ್ಪಾ ಕೃತಿಯ ಕಾಣುತ । ಭೀತಿಯಲಿ ಚೀರಿದಳು ಕನ್ಯೆಯು ೧೧

ಸೋಜಿಗದ ತನಯನ್ನ ಕೊಳ್ಳುತ್ತ । ಮುನಿವರರ ಬಳಿಗೆ
ಯೋಜಿಸೀದನು ಕ್ಷಮೆಯ ಬೇಡುತ್ತ ॥
ಆರ್ಜವದ ಮುನಿ ಕ್ಷಮಿಸಿ ತಂದೆಯ । ಮಾಜದಲೆ ತಮ್ಮ ಶಿಷ್ಯಭೂಪಗೆ
ಯೋಜಿಸಿದರನ್ವರ್ಥನಾಮವ । ಶ್ರೀ ಜಯಾಭಿಧ ತೀರ್ಥರೆನ್ನುತ ೧೨

ತ್ರ್ಯಕ್ಷನಂಶದಿ ಜಾತರೆನಿಸುತ್ತ । ಸನ್ಯಾಸ ಕೋವಿದ
ಅಕ್ಷೋಭ್ಯ ಕರಜಾತರೆನಿಸುತ್ತ ॥
ಶಿಕ್ಷಿತರು ಶುಕನಂತೆ ಅವರಿಂ । ದಕ್ಷರಾಗುತ ವಾದಿಜಯದಲಿ
ಕುಕ್ಷಿಯನೆ ಚರಿಸುತ್ತ ಬಹು ಪರ । ಪಕ್ಷ ಕರಿ ಹರ್ಯಕ್ಷರಾದಿರಿ ೧೩

ಮಧ್ವಭಾಷ್ಯಕೆ ಟೀಕೆ ರಚಿಸುತ್ತ । ಯರಗೋಳ ಗುಹೆಯಲಿ
ಶುದ್ಧ ಭಾವದಿ ಇರಲು ಮದಮತ್ತ ॥
ವಿದ್ಯ ಅರಣ್ಯಭಿಧ ನೋಡೀ । ಮಧ್ವಕೃತ ಸನ್ಮಾನ ಲಕ್ಷಣ
ಬುದ್ಧಿಗೇ ನಿಲುಕದಲೆ ಟೀಕೆಯ । ಪದ್ಧತಿಯ ಕಂಡರ್ಷಪಟ್ಟನು ೧೪

ಮಾಧ್ವಭಾಷ್ಯವ ನೇರಿಸಿ ಗಜವ । ತಟ್ಟೀಕೆ ಅಂತೆಯೆ
ಅದ್ಧುರೀಯಲಿ ಗೈದು ಉತ್ಸವವ ॥
ವಿದ್ಯವನ ಮುನಿಪೋತ್ತುಮನು ಬಹು । ಶುದ್ಧಭಾವದಿ ಗೈದು ಸಂತಸ
ಬುದ್ಧಿಯಲಿ ಪರಿವಾರ ಸಹಿತದಿ । ಸದ್ದುಯಿಲ್ಲದೆ ಪೋದನಂದಿನ ೧೫

ಹತ್ತೆರಡು ಮತ್ತೊಂದು ಕುಭಾಷ್ಯ । ವಿಸ್ತರದಿ ಖಂಡಿಸೆ
ಕೃತ್ಯವೂ ಮಧ್ವಕೃತವನುವ್ಯಾಖ್ಯಾ ॥
ಮತ್ತಿದಕೆ ಸೂಧಾಖ್ಯ ಟೀಕವ । ವಿಸ್ತೃತವು ನಿಮ್ಮಿಂದ ಜಯಮುನಿ
ಮೊತ್ತದಿಂದ್ಧತ್ತೆಂಟು ಗ್ರಂಥಕೆ । ಕೃತ್ಯವಾಯಿತು ನಿಮ್ಮ ಟೀಕೆಯು ೧೬

ಚಂದ್ರಸಮ ಮಧ್ವಾಗಮಾಬ್ಧೀಗೆ । ಆರ್ತಜನ
ಮಂದಾರ ಸುರಧೇನು ಎನಿಪರಿಗೆ ॥
ವಂದಿಸುವ ಸಧ್ಭಕ್ತಿ ಪೂರ್ವಕ । ದ್ವಂದ್ವ ನಿಮ್ಮಯ ಪಾದ ವನಜಕೆ
ನಂದಮುನಿ ಸದ್ವಂದ್ಯ ಗುರುಗೋ । ವಿಂದ ವಿಠಲನ ಪಾದ ತೋರ್ವುದು ॥

೩೫೨

ಮುನಿಯು ನೀನಾದದ್ದು ಮನದೊಳು ನಾಬಲ್ಲೆ
ಮುನಿ ಜನ ಮನ ಮಂದಿರಾ – ಸುರೇಂದ್ರಾ ಪ

ಅನುಮಾನ ತೀರ್ಥರ ಮಾನ ಮೇಯದ ಸಾರ
ಘನವಾಗಿ ತಿಳಿಸಿದುದಾರಾ – ಸುರೇಂದ್ರಾ ಅ.ಪ.

ವ್ರಜದ ಜನರು ತಮ್ಮ – ಗಜ ವೈರಿ ಮಧ್ಯದ
ಭುಜಗ ವೇಣಿಯರ ಕೂಡೀ – ಸುರೇಂದ್ರಾ ॥
ಅಜನೀನೇ ಎನ್ನುತ । ಭುಜಿಸೆ ಅನ್ನವ ನೀಡಿ
ಯಜನಾದಿಗಳ ಮಾಡಲೂ – ಸುರೇಂದ್ರಾ ॥
ಗಜ ವರದನು ಬಂದು । ಭುಜಿಸಲು ಅನ್ನವ
ತ್ಯಜಿಸಿ ಬಂದೆಯೊ ಸುರಪುರವಾ – ಸುರೇಂದ್ರಾ ೧

ಭರದಿ ಕೋಪಾದಿಂದ । ಗರೆದ್ಯೊ ವೃಷ್ಟಿಯನ್ನು
ಕರಿಯ ಸೊಂಡಿಲನಂದದೀ । ಸುರೇಂದ್ರಾ ॥
ವರವ್ರಜ ಜನರೆಲ್ಲ । ತುರುಗಾಹಿ ಕೃಷ್ಣನ
ಮೊರೆಯಿಡಲಾಗವನು – ಸುರೇಂದ್ರಾ ॥
ಗಿರಿಯ ನೆಗಹಿ ವ್ರಜ ॥ ಸುರರನೆಲ್ಲರ ಕಾಯ್ದ
ಹರಿಯ ಮೊಗವ ನೋಡೆ ನಾಚುತಲೀ – ಸುರೇಂದ್ರಾ ೨

ಅಂದು ಸುರಾಸುರರೆಲ್ಲರೊಂದಾಗುತ
ಮಂದಾರಗಿರಿಯ ತಂದೂ – ಸುರೇಂದ್ರಾ ॥
ಛಂದದಿ ವಾಸುಕಿ । ಅಂದ ನೇಣನ ಮಾಡಿ
ಮಂಥಿಸಿ ಶರಧಿಯನ್ನಾ – ಸುರೇಂದ್ರಾ ॥
ಅಂದು ನೀನಮೃತವ ನುಂಡ ಕಾರಣದಿಂದ
ಇಂದಿಲ್ಲಿ ಸುರರಿಗುಣಿಸೆ ಬಂದ್ಯೋ – ಸುರೇಂದ್ರಾ ೩

ಮಧ್ವ ಶಾಸ್ತ್ರವೆಂಬ । ದುಗ್ಧಾಬ್ಧಿಯನೆ ನೀನು
ಶ್ರದ್ಧೆಯಿಂದಲಿ ಮಥಿಸೇ – ಸುರೇಂದ್ರಾ ॥
ಉದುಭವಿಸಿದ ನ್ಯಾಯ । ಸುಧೆ ಎಂಬ ಅಮೃತವ
ವಿದ್ವಜ್ಜನಕೆ ಉಣಿಸೇ – ಸುರೇಂದ್ರಾ ॥
ತ್ರಿದಶ ಲೋಕವ ತ್ಯಜಿಸಿ । ಉದಿಸಿದೆ ಧರೆಯೊಳು
ಸಾಧು ವೇಷವನ್ನೆ ಧರಿಸೀ – ಸುರೇಂದ್ರಾ ೪

ನಾಕಪತಿಯೆ ನಿನ್ನಾ । ನೇಕ ಚರಿತೆಯಲ್ಲಿ
ನಾಕೇಳಿ ಪೊಗಳಲಳವೇ – ಸುರೇಂದ್ರಾ ॥
ಲೋಕಾ ಲೋಕದೊಳು । ಟೀಕಾರ್ಯರೆಂಬ
ವಾಕು ಕೇಳೀ ಬಲ್ಲೆನೋ – ಸುರೇಂದ್ರಾ ॥
ನಾಕಜ ಪಿತ ಗುರು ಗೋವಿಂದ ವಿಠಲನ
ನೇಕ ಬಗೆಯಿಂದ ಸ್ತುತಿಸಿದೆಯೋ – ಸುರೇಂದ್ರಾ ೫

೩೫೩

ಶ್ರೀಪುರುಷೋತ್ತಮತೀರ್ಥರು

ಯೋಗಿಗಳರಸ ಟೀಕಾಚಾರ್ಯರೆ ನಿಮ್ಮ ಪಾದ
ಬಾಗಿ ಭಜಿಸುವನರಗೆ ಪಾಪ ನಿರ್ಲೇಪ ಪ

ಧೃತ : ಬೇಗದಿ ತೋರಿಸೊ ಖಗವರ ವಹನನ
ಕಾಗಿನಿ ತೀರಗ ವರ ಜಯಗುರುವೇ ಅ.ಪ.

ಅಕ್ಷೋಭ್ಯ ಕರಕಮಲ । ಜಾತ ಜಯತೀರ್ಥಾ
ಇಕ್ಷುಚಾಪನಗೆಲಿದ । ತ್ರ್ಯಕ್ಷಗೆ ಅತಿ ಪ್ರೀತಾ ।
ಪಕ್ಷಿವಾಹನ ನಮ್ಮಾ । ಅಕ್ಷಯ ಫಲವೀವಾ ।
ಲಕ್ಷುಮಿ ನಾರಾಯಣನ । ಕುಕ್ಷಿಯೊಳೀಕ್ಷಿಸುವ ।
ಧೃತ – ಲಕ್ಷ್ಯವಿಲ್ಲದೆ ಗಿರಿ ಪಕ್ಷ ತರಿವ ಪರ
ಪಕ್ಷಕೆ ಕರ್ಕಶ ಕುಲಿಶಾ ೧

ದಶಮತಿ ಗ್ರಂಥಗಳಾ । ವೃಷಭ ಜನ್ಮದಿ ಪೊತ್ತು
ಅಸುವ ನೀಗುತ ಭೂಸುರ ಕುಲದಿ ಉದ್ಭವಿಸಿ
ವಿಷಯ ಮೋಹವ ತ್ಯಜಿಸೀ । ಅಸಮ ಮಹಿಮ ಹರಿಯಾ
ಒಸೆದು ಸೇವಿಸೆ ತುರಿಯಾ । ಆಶ್ರಮ ವಹಿಸೀ ।
ಧೃತ – ಬಸುರಲಿ ಬೊಮ್ಮನ ಪ್ರಸವಿಸಿದವನನು
ಸರ್ವೇಶ ನೆನುತಲಿ ಸಾರಿದ ಮಹಿಮಾ ೨

ಜವನನ ಭಯನಾಶಾ । ಭುವನ ಪಾವನ ಸುಧೆಯಾ
ಅವನಿ ಸುರರಿಗುಣಿಸೀ । ಕ್ಲೇಶವ ಹರಿಸೀ ।
ಅವನಿಜಾವಲ್ಲಭನಾ । ಮಾವನ ಕೊಂದವನಾ
ಶಿವನ ಮೋಹಿಸಿ ಕೆಡಿಸಿ ಉಳಿಸೀದನಾ ।
ಧೃತ – ಪವನನ ಪ್ರಿಯ ಗುರು ಗೋವಿಂದ ವಿಠಲನ
ನವ ನವ ಗ್ರಂಥದಿ ನುತಿಸಿದ ಮಹಿಮಾ ೩

೩೫೪

ವಾದಿ ವದನ ಕುಮುದ ಸೂರ್ಯ । ತತ್ವ
ವಾದಿ ವದನ ಕುಮುದ ಚಂದ್ರಾ ಪ

ಧೃತ - ಬಾದರಾಯಣ ವೇದ ಸೂತ್ರವ ।
ಮೋದದಲಿ ಪ್ರಕಾಶ ಗೊಳಿಸುತ
ಸಾಧುಜನ ಸಂತೋಷ ಕಾರಣ ।
ಸಾಧು ಟೀಕಾಚಾರ್ಯ ನಮಿಸುವೆ ಅ.ಪ.

ದೇಶಪಾಂಡ್ಯರ ಶಿಶುವೆನಿಸೀ । ಸೈನ್ಯ । ದೇಶ ದೇಶದಿ ಸಂಚರಿಸೀ ।
ಭಾಸುರ ಕೀರ್ತಿಯ ಗಳಿಸೀ । ಒಂದು । ವಾಸರ ತಾನು ನೀರಡಿಸೀ ॥
ಆಶುಗತಿ ಅಶ್ವವನು ಏರಿರ । ಲಾಸರಿತು ಕಾಗಿನಿಯ ಜಲವನು

ಲೇಸು ಪಶುವಂದದಲಿ ಕುಡಿದು ಪಿ । ಪಾಸೆ ಕಳೆದ ಸುಯೋಧ ಕಾಯೋ ೧

ಈಕ್ಷಿಸುತೀ ಚರ್ಯದವನಾ । ಮುನಿ । ಅಕ್ಷೋಭ್ಯ ತೀರ್ಥ ಶ್ರೀಚರಣಾ
ಪಕ್ಷಿವಾಹನನಾ ತೈಜಸನಾ । ಮಾತ । ಲಕ್ಷಿಸಿ ತಾನೋರ್ವ ಶಿಷ್ಯನಾ
ತಕ್ಷಣದಿ ಕಳಿಸ್ಯವನನಲ್ಲಿಗೆ । ಪ್ರೇಕ್ಷಿಸಲು ಬರ ಬಂದು ಇಲ್ಲಿಗೆ
ದೀಕ್ಷೆಯನು ಕೈಕೊಂಡು ದಶಮತಿ । ಪಕ್ಷ ಸಾಧಿಸಿ ಗತಿಯ ತೋರ್ದರೆ ೨

ತೀರ್ಥಕ್ಷೇತ್ರಗಳ ಸಂಚರಿಸೀ । ಮಧ್ವ । ತೀರ್ಥದಲ್ಲವ ಗಾಹಿಸೀ ।
ಪಾರ್ಥ ಸಾರಥಿ ಕೃಷ್ಣನೊಲಿಸೀ । ಜಯ । ತೀರ್ಥ ಕಾಗಿನಿ ತಟದಿ ನೆಲಿಸೀ।
ಕಾರ್ತ ಸ್ವರವದು ಲೋಷ್ಟಸಮವೆನು । ತಾರ್ತ ಸಜ್ಜನ ಕ್ಕೊರೆದು ಪ್ರೀತಿಲಿ
ಮೂರ್ತಿ ಗುರುಗೋವಿಂದ ವಿಠಲನ । ವಾರ್ತೆ ಸಚ್ಚರಿತೆ ಯನು ಪೇಳಿದ ೩

೩೫೫

ಪುರುಷೋತ್ತಮ ತೀರ್ಥರೇ । ಪಾಲಿಸಿ ಎನ್ನ
ಪುರುಷೋತ್ತಮ ತೀರ್ಥರೆ ಪ

ಧೃತ – ಸಾರಿ ಬಂದೆನು ನಿಮ್ಮ ನೋಡಲು
ಭೂರಿ ಕರುಣವ ಮಾಡಿ ಪಾಲಿಸಿ ಅ.ಪ.

ಅಲವ ಬೋಧರ ಮತವಾ । ಪೊಂದಿದರ
ಆಲಸಾದೆ ಭಜಿಸುವರ್ಗೇ ।
ಧೃತ – ಶೀಲ ಮಾರ್ಗವ ತೋರಿ ಸಲಹುತ
ಕೀಳು ಕರ್ಮವ ಕಳೆವ ಮೌನಿಯೆ ೧

ದ್ವಿಜ ಮೌಳಿ ರಾಮಾಚಾರ್ಯ । ತವದಯದಿ
ತೇಜೋ ತನಯನ ಪಡೆಯಲು ।
ಧೃತ – ದ್ವಿಜನ ಗೈದಾವಿಪ್ರಸುತನನು
ನಿಜ ಸುಪೀಠದಿ ನಿಲಿಸಿ ಮೆರೆದ ೨

ಜಯ ಧ್ವಜ ಕರಜಾತಾ । ವಾತಗೆ ಪ್ರೀತ
ಕಣ್ವ ತಟದಿ ವಿಖ್ಯಾತಾ ।
ಧೃತ – ತೋಯ ಜಾಕ್ಷನಾದ ಗುರು
ಗೋವಿಂದ ವಿಠಲನ ಧ್ಯಾನರತನೆ ೩

೩೫೬

ಶ್ರೀ ಬ್ರಹ್ಮಣ್ಯ ತೀರ್ಥರು

ಪಾಲಿಸೊ ಗುರುವೆ ಬ್ರಹ್ಮಣ್ಯ । ತೀರ್ಥ
ಕೇಳುವೆ ವರ ಸುರ ಮಾನ್ಯ ಪ

ಕಾಳೀಯ ರಮಣನ । ಲೀಲ ವಿನೋದವ
ಕಾಲ ಕಾಲಕೆ ಸ್ಮರಿಪ । ಶೀಲಸನ್ಮನವ ಅ.ಪ.

ಜ್ಞಾನ ದಾಯಕನಾಗಿ ಮೆರೆವಾ । ಸ್ಥಾನ
ಜ್ಞಾನ ಮಂಟಪದೊಳು ಇರುವಾ ।

ಮೌನಿ ವರೇಣ್ಯರೆ ಆನತ ಸುರತರು
ದಾನವಾರಣ್ಯ ಕೃ । ಶಾನುವೆ ಪಾಲಿಸೊ ೧

ಇಷ್ಟ ಜನರ ಪರಿಪಾಲಾ । ದಯ
ದೃಷ್ಟಿಲಿ ಜನರಘ ಜಾಲಾ ।
ಸುಟ್ಟು ಭಸ್ಮೀ ಭೂತ । ಅಷ್ಟ ಸೌಭಾಗ್ಯದ
ವಿಠ್ಠಲ ಚರಣೇಷ್ಟ । ಹೃಷ್ಟನ್ನ ಮಾಡೆನ್ನ ೨

ರವ್ಯಂಶ ಸಂಭೂತ ನೆನಿಸೀ । ಸರಿ
ತ್ಕಣ್ವ ತಟದಿ ನೀನು ನೆಲೆಸೀ ।
ಪವನಾಂತಸ್ಥ ಗುರು । ಗೋವಿಂದ ವಿಠಲನ
ಸ್ತವನ ಮಾಳ್ಪರ ಕಾವ । ಭುವನ ಪಾವನ ದೇವ ೩

೩೫೭

ಬ್ರಹ್ಮಣ್ಯ ತೀರ್ಥ ಗುರು ರಾಜಾ । ನಿನ್ನ
ನಮ್ಮಿದೆನೊ ಭಾಸ್ಕರ ಸುತೇಜಾ । ಭಾವಿ
ಬೊಮ್ಮ ಮತವರುಹಿ ಮಹೋಜಾ । ಸಲಹೊ
ಪ್ರಮ್ಮೇಯಂಗಳ ನಿಧಿಯ ಸಹೋಜಾ ಪ

ಓದ್ದಾಡುತಿಹೆನೊ ಈ ಭವದೀ । ಸುಖ
ಗದ್ದುಗೆಯನೇರ್ವಂಥ ಹಾದೀ । ತೋರಿ
ಉದ್ಧರಿಸೊ ಬಲು ಕೃಪಾಜಲಧೀ । ಗುರುವೆ
ಶುದ್ಧ ಬುದ್ಧಿಯ ನೀಯೊ ಮುದದೀ ೧

ಯಾತ್ರೆಗಳ ಮಾಡ್ದೆನೆಂಬ । ಬಿಂಕ
ದ್ವಾರ್ತೆಯೊಂದಲ್ಲದಲೆ ಇಂಬ । ಕಾಣೆ
ಕ್ಷೇತ್ರ ಮೂರ್ತಿಯ ಕಾಂಬನೆಂಬ । ಆಶೆ
ಪೂರ್ತಿ ಮಾಡೆನ್ನ ಗುರು ಬಿಂಬ ೨

ಧನವನಿತೆ ವಿಷಯದಲ್ಲೀ । ಬಹಳ
ಮನ ಮಾಡಿ ನೊಂದೆನಲ್ಲೀ । ಹರಿಯ
ಮನ ಮುಟ್ಟೊ ಭಜಿಸು ಎಂಬಲ್ಲೀ । ಇನ್ನು
ಘನ ಜ್ಞಾನ ಭಕುತಿ ಇಲ್ಲಲ್ಲೀ ೩

ಜೀವಗೆಲ್ಲಿಯ ಸ್ವತಂತ್ರಾ । ಹರಿಗುರು
ತಾವಲ್ಲಿ ಮಾಡುತಿಹ ತಂತ್ರ । ದಿಟವಿದು
ಜೀವನೇ ಮಾಳ್ಪನೆಂಬುದೆ ಕುತಂತ್ರ । ತಿಳಿಸೊ
ಭಾವ ಜಾನಯ್ಯನ ಸ್ವತಂತ್ರ ೪

ನಾನು ನನ್ನದು ಎಂಬ ಮಾತ । ಕಳೆದು
ನೀನು ನೀನೇ ಎಂಬ ಮಂತ್ರ । ಕೊಟ್ಟು
ಮಾನ ಮೇಯದ ಸಾರ ವ್ರಾತ । ತಿಳಿಸೊ
ಜ್ಞಾನ ನಿಧಿ ಪುರುಷೋತ್ಮ ತಂತ್ರ ೫

ಕಾರಕ ಕ್ರಿಯ ದ್ರವ್ಯವೆನಿಪ । ಭ್ರಮವು
ಮೂರರಿಂದಲಿ ದೂರ ಮಾಳ್ಪ । ಮಾರ್ಗ
ತೋರಿಸಲಹುವುದು ಯತಿ ಭೂಪ । ತವಪದ
ವಾರಿ ಜತೆ ಈ ನೀಚ ಬೀಳ್ವ ೬

ತ್ರ್ಯಕ್ಷಾಂಶ ಭೂತರಾದ । ಸನ್ಯಾಸಿ
ಅಕ್ಷೋಭ್ಯ ಕರಜರಾದ । ಅಜೇಯ
ಇಕ್ಷುಚಾಪನ್ನ ಗೆಲಿದ । ಜಯಾರ್ಯ
ಭಿಕ್ಷುವಿನ ಮಾರ್ಗರಾದ ೭

ನ್ಯಾಯ ಸುಧೆ ಕೇಳಿ ಮೋದ । ಪಡೆವ
ದಾಯ ತೋರಿದಿ ನಿರ್ವಿವಾದ । ಇನ್ನು
ಗಾಯನದಿ ಮಹಿಮೆ ಅಗಾಧ । ಪೇಳ್ವ
ಆಯತವ ನೀಯೋ ಸುಭೋಧ ೮

ಬೃಹತೀ ಸಹಸ್ರ ಮಂತ್ರ । ಜಪಿಪ
ಮಹಯೋಗದಾತ ಮಹಾಂತ । ಬೇಡ್ವೆ
ಬೃಹತಿನಾಮಕನು ಎಂಬಂಥ । ಹರಿಯ
ಮಹ ಮಹಿಮೆ ಕಂಡು ಹಿಗ್ವಂಥ ೯

ಸೃಷ್ಟ್ಯಾದಿ ಅಷ್ಟಕಗಳ । ಗೈವ
ಕೃಷ್ಣನ್ನ ಮಹಿಮೆಗಳ । ಕೇಳಿ
ಹೃಷ್ಟರಾಗುವ ಜನಗಳ । ಸಂಗ
ಕೊಟ್ಟುದ್ಧರಿಸೊ ನಮ್ಮಗಳ ೧೦

ಭಾವ ಜಾರಿಯ ತಾತನ । ಗುರು
ಗೋವಿಂದ ವಿಠಲನ । ಮನದಿ
ಓವಿ ಕಾಂಬ ಸುಹದನಾ । ತೋರಿ
ಕಾವುದೆನ್ನನು ಕೃಪೆಯ ಸದನ ೧೧

೩೫೮

ವೃಂದಾವನವ ನೋಡಿರೊ - ನೀವೆಲ್ಲಾ
ನಂದವನ್ನೇ ಪೊಂದಿರೊ ಪ

ರಾಮಾಚಾರ್ಯರ ಪುತ್ರರೊ - ಅವರು
ಮಾಮನೋಹರ ನೃಹರಿ ದಾತರೋ ।
ಜನ್ಮ ಅಷ್ಟಕೆ ಬ್ರಹ್ಮಚರ್ಯ - ಪೊಂದಿ
ಬ್ರಹ್ಮ ವಿದ್ಯೆಯ ಪಡೆದರೋ ।
ಧೃತ - ಪ್ರೇಮದಿಂದಲಿ ಬಂದು ತಾವ್ ಪುರು
ಷೋತ್ತಮ ತೀರ್ಥರ ಸಾರ್ದರಾ ೧

ಕಾಯಜ ಪಿತನ ತಾನ್ವಲಿಸೀ - ದೇಶಂಗಳ
ಪ್ರೀಯದಿಂದಲಿ ಸಂಚರಿಸೀ ।
ಮಾಯಾರಮಣನು ಜೀವನೂ - ಒಂದೆಂಬ

ಮಾಯಾವಾದೀಗಳ ತರಿದೂ ।
ಧೃತ – ವಾಯುಮತ ಪ್ರೀತಿಯಲಿ ಅರುಹುತ
ಪ್ರೀಯ ಅಬ್ಬೂರಲ್ಲಿ ನೆಲೆಸಿದ ೨

ವಿಠಲ ನೃಹರಿ ಪೂಜೆಗೇ – ನೇಮಿಸಿತಮ್ಮ
ಪಟ್ಟ ಶಿಷ್ಯರು ವ್ಯಾಸತೀರ್ಥರ ।
ಅಟ್ಟ ಹಾಸದಿ ಸರ್ವಜಿತೂ – ಸಂವತ್ಸರ
ಕೃಷ್ಣೈಕಾದಶಿ ವೈಶಾಖ ।
ದಿಟ್ಟ ಗುರುಗೋವಿಂದ ವಿಠಲನ
ದೃಷ್ಟಿಸೀ ತನು ಬಿಟ್ಟು ಪೊರಟನ ೩

೩೫೯

ಶರಣು ಗುರು ಬ್ರಹ್ಮಣ್ಯ । ಶರಣು ಶಿರಿ ಸುರಮಾನ್ಯ
ಪರಿಹರಿಸು ಭವತಾಪ । ಬಿನ್ನವಿಪೆ ಮುನಿಪ ಪ

ಪುರುಷೋತ್ತ ಕರಜಾತ । ಕಣ್ವತಟದಲಿ ಖ್ಯಾತ
ನರಹರಿಯ ಪದಕಮಲ । ಭಜಕಶೀಲ
ಶರಣ ಜನ ಸುರಕಲ್ಪ । ತರುವೆ ಎನ್ನಯ ಪಾಪ
ಪರಿಹರಿಸೊ ಮುನಿಮೌಳಿ । ನಾನು ಪದಧೂಳಿ ೧

ಯೋನಿ ಅನೇಕದಲಿ । ಬಂದಿರುವೆ ನಾಬಳಲಿ
ಮಾನ ನಿಧಿ ನೀಯನ್ನ । ಕಾಯೊ ದಯ ಪೂರ್ಣ ।
ಜ್ಞಾನಾರ್ಕನೆನಿಸಿರುವ । ಮೌನಿ ತವ ಸದ್ಭಾವ
ಪೂರ್ಣ ಹರಿ ಸುಜ್ಞಾನ । ಪಾಲಿಸೈ ನಿಪುಣ ೨

ವಿಕಳ ಮತಿಯನು ಹರಿಸು । ಅಕಳಂಕನೆಂದೆನಿಸು
ಸುಖತೀರ್ಥ ಮತ ಸುಧೆಯ । ಉಣುವ ಪರಿಯ ।
ಸುಖದಿಂದ ಕರುಣಿಸುತ । ಸುಖ ಹರಿಯ ನೋಳ್ಪಂಥ
ಪ್ರಕರಣದಲಿರಿಸೆನ್ನ । ಮೌನಿ ಕುಲರನ್ನ ೩

ವ್ಯಾಸರಾಯರ ಗುರುವೆ । ಕೈಗಳನು ನಾ ಮುಗಿವೆ
ಲೇಸು ಹೊಲ್ಲೆಗಳೆಂಬ । ದ್ವಂದ್ವಗಳ ಉಂಬ
ಮೀಸಲದ ಮನವಿತ್ತು । ವೈರಿಗಳನೆಗ್ಗೊತ್ತು
ಈ ಸುಕೃತ ಒಂದಿರಲಿ । ನಿನ್ನ ದಯವಿರಲಿ ೪

ವಿಠ್ಠಲ ಸುಪೂಜಕನೆ । ಕಷ್ಟಗಳ ಕಳೆಯುವನೆ
ಶಿಷ್ಟ ಸಜ್ಜನ ಪಾಲ । ಹರಿಪದ ವಿಲೋಲ
ಕೃಷ್ಣ ಗುರು ಗೋವಿಂದ । ವಿಠ್ಠಲನ ಪದದ್ವಂದ್ವ
ಸುಷ್ಠು ಹೃದ್ಗುಹದಲ್ಲಿ । ಕಾಣಿಪುದು ಅಲ್ಲಿ ೫

೩೬೦

ಶ್ರೀ ಶ್ರೀಪಾದರಾಜರು

ಕಾಪಾಡು - ಕಾಪಾಡು ಶ್ರೀ ಪಾದರಾಯ ಪ

ಪಾಪೌಘಗಳನಳಿದು ಶ್ರೀಪತಿಯ ತೋರೀ ಅ.ಪ.

ನಾಡಿನೊಳು ಪೆಸರಾದ ಮೂಡಲಾದ್ರಿಗೆ ಪೋಪ
ಮೂಡಬಾಗಿಲ ಕಾಯ್ವ ಪ್ರಾಣನಾಶ್ರಯಿಸೀ ।
ಮೂಡಬಾಗಿಲ ಪುರದಿ ನರಸಿಂಹ ಕ್ಷೇತ್ರದಲಿ ।
ಈಡು ಇಲ್ಲದೆ ಮೆರೆವ ಯತಿ _ ಸಾರ್ವಭೌಮಾ ೧

ಹತ್ತಾರು ನಾಲ್ಕಾದ ಶಾಕಪ್ರತಿ ದಿನದಲ್ಲಿ
ಉತ್ತಮೋತ್ತಮಗಿತ್ತು ಉಂಬ ಮಹಿಮಾ ।
ಕೃತ್ರಿಮ ಸ್ವಭಾವ ನೃಪ ಪರಿಕಿಸಲು ಪೋಗೆ ಹರಿ
ಮತ್ತೊದಗಿಸಿದ ವ್ಯಾಳ್ಯಕ್ಕೆ ಹರಿಕೃಪಾ ಪಾತ್ರ ೨

ವಿಪ್ರ ಬ್ರಹ್ಮತ್ಯವನು ಶಂಖದುದಕದಿ ಕಳೆಯೆ
ಅಪ್ರಬುದ್ಧರು ನಗಲು ಗೆರೇಣ್ಣೆ ವಸನಾ ।

ಕ್ಷಿಪ್ರ ಶುದ್ದಿಯಗೈದೆ ಪ್ರೋಕ್ಷಿಸುತ ಶಂಖದಲಿ
ಅಪ್ರಮೇಯನ ಕರುಣ ನಿನ್ನೊಳೆಂತುಂಟೋ ೩।

ಅಹವು ರಾತ್ರಿಗಳಭಿಧ ಆದಿತ್ಯ ಸಂಸ್ಥಿತನು
ಅಹರ್ನಿಶೀ ನರನಾಡಿ ಸ್ಥಿತನಾಗಿಹಾ ।
ಬೃಹತಿ ನಾಮಕಗನ್ನ ಋಗ್ರಹಸ್ಯವನರುಪಿ
ಬೃಹತಿ ಸಾಸಿರಗಳಿಪ ಸಂಧಾನವಿತ್ತೂ ೪

ವಾದಿಗಳ ಎದೆಶೂಲ ವಾದ ಗ್ರಂಥದಿ ಪೂರ್ಣ
ಬೋಧ ಶಿಷ್ಯರ ಹಿತವ ಕಾದು ಜಗದೀ ।
ವೇದ ವೇದ್ಯನು ಗುರು ಗೋವಿಂದ ವಿಠ್ಠಲನ
ಪಾದ ಧೃವ ಧ್ಯಾನದಲಿ ಮೆರೆಯುತಿಹ ಗುರುವೇ ೫

೩೬೧

ಶ್ರೀಪಾದ ರಾಜರ ಸ್ಮರಣೇ । ಭವ
ತಾಪ ಪರಿಹರ ವೆಂದು ಗಣನೆ ಪ

ಧೃತ – ಶ್ರೀಪತಿ ಶ್ರೀರಂಗವಿಠಲನ ।
ಅಪರೋಕ್ಷದಿ ಕಂಡು ಕುಣಿಯುವ
ತಾಪಸೀಗಳ ದಯದಿ ದುರಿತವು ।
ಪೋಪುದೇನಿದು ನಮಗೆ ಅಚ್ಚರ ಅ.ಪ.

ಲಕ್ಷ್ಮೀನಾರಾಯಣ ದಿವಿಜ । ಮುನಿ ।
ಹೇಮವರ್ಣ ತೀರ್ಥ ಕರಜ
ಕಾಮಾದಿ ದೋಷದಿಂ ವಿರಜ । ಯತಿ ।
ನೇಮ ಸಾಧಿಸಿದರು ಸಹಜ ।
ಧೃತ – ಈ ಮಹಿಮ ಸಂಚರಿಸಿ ಯೋಗ್ಯರ ।
ರಾಮಾಪಾದಾಶ್ರಿತರ ಗೈಸುತ

ಸಾಮ ಸನ್ನುತ ಹರಿಯ ಕೀರ್ತನೆ
ಸ್ತೋಮ ವಿರಚಿಸಿ ತತ್ವನೊರೆದ ೧

ಷಷ್ಠುತ್ತರ ನಾಲ್ಕು ಶಾಖ । ದಿನ್ನ ।
ಸುಷ್ಠು ಹರಿಗರ್ಪಿಪ ಪಾಕ
ಕಷ್ಟ ಕ್ಲೇಶ ರಹಿತ ಸುಖ । ಭೋಗ ।
ಶ್ರೇಷ್ಠಾನುಭವವು ಆಲೋಕ ।
ಧೃತ – ನಿಷ್ಠೆಯಲಿ ಪೂಜಾದಿ ಗೈಯ್ಯುತ ।
ವಿಠ್ಠಲನ ಉತ್ಕರ್ಷ ತಿಳಿಸುತ
ನೆಟ್ಟಮನ ಹರಿಯಲ್ಲಿ ಇರುವರ ।
ದಿಟ್ಟ ಭಕುತರ ಗೈವ ಸುಕೃತ ೨

ತೀರ್ಥಕ್ಕೆ ಗಂಗೆಯ ತಂದ । ವಿಪ್ರ ।
ಹತ್ಯದಘ ನೃಪಗಿಲ್ಲೆಂದ
ಮತ್ತೆ ತೋರ್ದ ಮಹಿಮೆ ವೃಂದ ।
ಧ್ರುವ । ಕೃತ್ಯ ಹರಿಗರ್ಪಿಸಿನಿಂದ ।
ಧೃತ – ಭೃತ್ಯರಿಗೆ ತತ್ವಾರ್ಥ ನೊರೆಯುತ ।
ಸತ್ಯ ಗುರುಗೋವಿಂದ ವಿಠಲನ
ನಿತ್ಯಸಂಕೀರ್ತನದಿ ನೃತ್ಯದಿ ।
ತೃಪ್ತಿ ಬಡಿಸಿದ ಯತಿ ವರೇಣ್ಯಾ ೩

೩೬೨

ಶ್ರೀಪಾದರಾಯ ನಿಮ್ಮ । ಆಪಾದ ಮೌಳಿ ಭಜಿಪಾ
ಪಾಪಿಯಾದರು ಅವ । ಪಾಪವನೆಲ್ಲ ಕಳೆವಾ ಪ

ಧೃತ – ಶ್ರೀಪತಿಯೊಲಿಮೆಯ । ಪ್ರಾಪಿಸುತೆನ್ನನು
ವ್ಯಾಪುತ ದರ್ಶಿಯ ಮಾಡೊ ಮಹಾತ್ಮಾ ಅ.ಪ.

ಗುರುರಾಯ ನಿಮ್ಮ ಚರಣ । ವಿರಲಿ ಮಸ್ತಕಾಭರಣ
ಕೋರುವ ತವ ಕರುಣ । ವಾರಿಧಿ ಭವ ತರಣ ॥

ಕೀರುತಿ ತವ ಸ್ಮರಣ । ಬಾರಿಬಾರಿಗೆ ಶ್ರವಣ
ಸೂರೆಗೊಂಬುವ ನರನ । ಸಾರಿ ಉದ್ಧರಿಪೆ ಅವನಾ ॥
ಧೃತ – ವಾರವಾರಕೆ ನಿನ ಪರಿವಾರದಲಿಡು
ಸೂರಿ ಸುವರ್ಣರ ಕರಜ ಉದಾರಾ ೧

ವಾದಿಗಳೆದೆ ಶೂಲಾ । ಮೋದ ಮುನಿ ಪದದಿ ಲೋಲ
ಅದ್ವೈತ ಕಾಲಾನಳಾ । ಬುಧಜನ ಕೋಲಾಹಲಾ ॥
ಉದರ ಪಾದಾದ ಶೈಲಾ । ಸದನಕ್ಕೆ ಪುರಿ ಮೂಡಲ
ಕದವಾಗಿ ಮೆರೆವ ವಿಮಲ । ಅದುಭುತ ಪುರಿಲೋಲಾ ॥
ಧೃತ –ಆದರಿಸುವುದಯ್ಯ । ಮಾಧವ ಪ್ರಿಯ ನಿನ
ಪಾದವ ನಂಬಿದೆ । ಬುಧ ಜನ ವಂದ್ಯಾ ೨

ವರರಂಗ ವಿಠಲನಾ । ಚಾರು ಚರಿತೆಯ ನಾನಾ
ಪರಿಪರಿಯಲಿ ಗಾನಾ । ವಿರಚಿಸಿ ಜನರ ಅಜ್ಞಾನಾ ॥
ಹರಿಸಿ ಅವರಿಗೆ ಜ್ಞಾನಾ ।ಭರಣ ಪಾಲಿಸಿ ಕರುಣ
ಬೀರಿದೆ ಸುಸಾಧನ । ಗುರು ಪರಮ ಪಾವನಾ ॥
ಧೃತ – ಗುರುಗೋವಿಂದ ವಿಠಲನ । ಚರಣವ ಭಜಿಸುವ
ವರಧ್ರುವ ಮೂರುತಿ । ನಿರುತದಿ ಕೀರ್ತಿ ೩

೩೬೩

ಶ್ರೀ ವ್ಯಾಸರಾಜರು

ಏಸು ಮಹಿಮ ನೋಡೋ ।
ಶ್ರೀ ವ್ಯಾಸಮುನಿಯು ತಾನೂ ಪ

ದಾಸಜನರ ಹೃದ್ದೊದ್ದೋಷ ಕಳೆದು ಸಂ ।
ತೋಷ ಕೊಡುವ ದೊರೆ ಅ.ಪ.

ರಾಮಾಚಾರ್ಯರ ಗೃಹದಿ । ಭೂಮಿ ಸೋಕದೆ ಪುಟ್ಟಿ
ಪ್ರೇಮದಿಂದಲಿ ಪುರು । ಷೋತ್ತ ತೀರ್ಥರ ಗುಹದಿ
ಯಾಮ ಯಾಮಕೆ ಪಾಲು । ಆಮಹಾಮುನಿ ಕೂಡೆ
ಸೀಮೆ ಮೀರಿದ ತೇಜ । ಕೋಮಲ ಕಾಯನು ೧

ಪೂರ್ಣ ಬೋಧರ ಪೀಠ । ಬ್ರಹ್ಮಣ್ಯರಿಂಗೊಂಡು
ಭವಾರ್ಣ ತಾರಿಸುವಂಥ । ನ್ಯಾಯ ಗ್ರಂಥವ ಮಾಡಿ
ಕರ್ಣ ರಹಿತನ ಸುಶಯ್ಯನ ಮಾಡಿಕೊಂಡ
ಅರ್ಣ ಸಂಪ್ರತಿಪಾದ್ಯ । ಕೃಷ್ಣನ್ನ ಮೆರೆಸೀದ ೨

ಸುಜನ ಕುಮುದ ಚಂದ್ರ । ನಿಜಭಕ್ತ ಪರಿಪಾಲ ಪರಿ
ವ್ರಾಜಾಕಾಚಾರ್ಯ । ವಿಜಯ ನಗರಿಲಿ ನೆಲೆಸೀ
ಅಜನನಯ್ಯನ ನಾಮ । ಭಜನೆ ಪ್ರಾಕೃತದೊಳು
ನಿಜಜನ ಕೊರೆಯುತ । ಅಜೇಯನೆನಿಸಿದಂಥ ೩

ಮಿಥ್ಯಾಮತವಗೆದ್ದು । ತಥ್ಯಾವು ಜಗವೆಂದು
ಸ್ತುತ ಶ್ರೀಹರಿಯ ಸರ್ವೋತ್ತುಮನೆನುತ
ಸತ್ಯವು ಪಂಚ ಭೇದ । ನಿತ್ಯವು ತಾರತಮ್ಯ
ಭೃತ್ಯರು ಬ್ರಹ್ಮ ದೇವತೆಗಳೆಂದೊರೆದ ೪

ಶೇಷಾವೇಶದಿ ಪುಟ್ಟಿ । ದೇಶ ದೇಶವ ತಿರುಗಿ
ಭೂಸುರರಿಗೆ ಜ್ಞಾನ । ಸೂಸಿ ಪೇಳುತಲೀ
ದಾಸ ಪೀಠದಿ ಶ್ರೀನಿ । ವಾಸ ನಾಮಕಗುಪ
ದೇಶಿಸಿ ಪುರಂದರ । ದಾಸರೆಂದೆನಿಸೀದ ೫

ಅಹಿಪರ್ವತಾಧೀಶ । ಅಹಿತಲ್ಪನ್ನಾಸೇವೆ
ವಿಹಿತದಿ ದ್ವಿಷಡಾಬ್ದ । ಬಹುಗೈದು ಅರಸಿನ
ಕುಹುಯೋಗವಾರಿಸಿ । ಮಹಿಯ ಸುರರಿಗೆಲ್ಲ
ಸಹಸ್ರಾರು ಗ್ರಾಮಗಳ್ । ಜಹಗೀರುಗಳನಿತ್ತ ೬

ಛಂದದಿಂದಲಿ ನವ । ವೃಂದಾವನಕೆ ಬಂದು
ವೃಂದಾವನದಿ ನಿಂದು । ಇಂದೀವರಾಕ್ಷನು
ನಂದ ಕಂದ ಗುರು ಗೋ । ವಿಂದ ವಿಠಲನ ಹೃನ್
ಮಂದಿರದಲಿ ನೋಡಿ । ನಂದವ ಪಡುತಿರ್ಪ ೭

೩೬೪

ನಮಿಸುವೆನು ವ್ಯಾಸಾರ್ಯ । ಸುಮನಸರಿಗತಿ ಪ್ರೀಯ
ವಿಮಲಕೀರ್ತಿ ಸುಶಯ್ಯ ಯತಿವರಾರ್ಯ ಪ

ಅಮಮ ನಿಮ್ಮಯ ಕೀರ್ತಿ ಪೊಗಳಲಳವೇ ಎನಗೆ
ಸುಮನಸ ಮುನಿಯನುಗ್ರಹೀತಾ – ಖ್ಯಾತಾ ಅ.ಪ.

ಕನಕ ಕಶ್ಯಿಪು ಸುತನೆ । ಧನಕನಕ ತೃಣಗಣನೆ
ಅಣು ಘನನ ಶ್ರೀ ಚರಣ । ವನಜ ಭ್ರಮರಾ ।
ಮನುಜಮೃಗ ವೇಷ । ಶ್ರೀ ನರಹರಿಯ ಮೂರ್ತಿಯನು
ಘನವಾದ ಸ್ತಂಭದೊಳು । ಕರೆದು ತೋರಿಸಿದೇ ೧

ಮತ್ತೆ ನೀ ತ್ರೇತೆಯಲಿ । ಹತ್ತು ತಲೆ ರಾವಣನ
ಭ್ರಾತೃವಾಗವತರಿಸಿ । ಕೀರ್ತಿಯಲಿ ಮೆರೆದೇ ।
ಭೃತ್ಯ ಭಾವದಿ ನಮಿಸಿ । ಸತ್ಯಾತ್ಮ ಶ್ರೀಹರಿಯ
ವಿಸ್ತರದ ಕೀರ್ತಿಯಲಿ । ಲಂಕ ಪತ್ತನವಾಳ್ದ ೨

ನಗಪ ಪ್ರತೀಪನಾ । ಪರಸೂನು ವೆಂದೆನಿಸಿ
ಕುರುಪತಿಯ ಋಣಸೇವೆ । ಸರಿಯಾಗಿ ಸಲಿಸೀ ।
ಮರುತಾತ್ಮ ಭೀಮನಿಂ । ವರವನೇ ಪಡೆಯುತ್ತ
ವರ ಕಲೀಯಲಿಯತಿ । ವರನೆನಿಸಿ ಮೆರೆದೇ ೩

ಬ್ರಹ್ಮಣ್ಯಯತಿ ಕರಜ । ಬ್ರಹ್ಮ ಬ್ರಾಹ್ಮಣ ಪ್ರೀಯ
ಬ್ರಹ್ಮಣ್ಯ ಪ್ರೀಯ ಸು । ಬ್ರಹ್ಮಣ್ಯನಾವೇಶನೇ ।

ಬ್ರಹ್ಮಾಸ್ಮಿ ಎಂದೆನಿಪ । ಬ್ರಹ್ಮದ್ವೇಷಿಯ ನಿಕರ
ಬ್ರಹ್ಮಾಂಡದಲಿ ತರಿದೇ । ಬ್ರಾಹ್ಮಣರ ಪೊರೆದೇ ೪

ಬಾಗಿ ಭಜಿಸುವ ಭಕ್ತ । ಭಾಗ್ಯ ನಿಧಿಯೇ ಶಕ್ತ
ರೋಗ ರುಜಿನವ ಹರ್ತ । ಭಾಗ್ಯದಾತಾ ।
ರೋಗ ವರ್ಜಿತ ಗುರೂ । ಗೋವಿಂದ ವಿಠಲನ
ರಾಗದಲಿ ಭಜಿಪಂಥ । ಭಾಗವತ ಪ್ರೀಯ ೫

೩೬೫

ಯತಿವರ ರಾಜ ಶ್ರೀ ವ್ಯಾಸಗುರೋ ।
ಭಕ್ತರ ಸುರದ್ರುಮವ್ಯೆರಾಜ ॥
ಗತಿಯ ನೀರಜ ಭೃಂಗ । ಪೊರೆ ರಾಜಾಧೀರಾಜಾ ಪ

ದುರ್ಮತಮತ್ತೇಭ । ಸಿಂಹನೆನಿಸಿಮಾಯಿ । ಹಮ್ಮು ಕಳೆದ ಈರ ।
ಸಮ್ಮತಿ ಗೊಪ್ಪುವ । ಅಮ್ಮಹ ಭಾಷ್ಯದ । ಮರ್ಮವರಿತು ಹರ ।
ಬೊಮ್ಮ ಮುಖರು ಪರ । ಬೊಮ್ಮ ಸೇವಕರೆಂಬ । ಮರ್ಮವೆನಿಪ ತಾರ ।
ತಮ್ಮುವ ನೊರೆದಂಥ । ಬ್ರಹ್ಮಣ್ಯ ಮುನಿಪೋ । ತ್ತುಮ್ಮರ ಕುವರ ೧

ಸಕಲ ಶಕ್ತಿ ಧರ ಅಕಳಂಕಚರ್ಯ ನರ । ಸಖನೆನಿಸುತ ಮೆರೆದ ।
ಅಖಿಲ ಲೋಕ ಮಾ । ರಕ ತಾನೆಂಬುದ । ಸಖನಿಗೆ ತಾ ತೋರ್ದ ।
ಅಖಿಲಾಗಮರಸ । ವ್ಯಕುತವ ಗೈಯ್ಯಲು । ಯುಕುತಿ ಗೀತೆ ಪೇಳ್ದ ।
ರುಕುಮಿಣಿ ಪತಿ ಸೇ । ವಕ ನೆನಿಸುತ ವಿ । ರಕುತನಾಗಿ ಮೆರೆದ ೨

ಶ್ರೀ ವರಹಜೆ ತೀರ । ಆವಾಸನೆ ಯತಿ । ಕೋವಿದ ಸಂಪೂಜ್ಯ ।
ಭಾವಿ ಬೊಮ್ಮ ಪ್ರತಿ । ಆ ವಾನರ ಯುತ । ಆವರಣದಲಿಟ್ಯಾ
ಪಾವನಗಾತ್ರ ಸು । ದೇವವರನೆ ಭವ । ನೋವು ಕಳೆವುದಯ್ಯ
ನೀವೊಲಿಯದೆ ಗುರು । ಗೋವಿಂದ ವಿಠ್ಠಲ । ತಾವೊಲಿಯನು ಖರೆಯ ೩

೩೬೬

ವೃಂದಾವನದಲಿ ನಿಂದಿಹನ್ಯಾರೆ ಪೇಳಮ್ಮಯ್ಯ ಪ

ಕುಂದು ರಹಿತ ಬಹು ಸುಂದರ ಹರಿಪದ
ದ್ವಂದ್ವ ಭಜಕ ಯತಿ ಪುಂಗ ಕಾಣಮ್ಮ ಅ.ಪ.

ಮಂಗಳ ಪಂಪಾ ಕ್ಷೇತ್ರ ಸನಿಯ ಮುನಿ
ಪುಂಗರು ಯಾರೇ ಪೇಳಮ್ಮಯ್ಯ ।
ಅಂಗಜನನು ಬಲು ಹಿಂಗಳೆಧರಿ ಪದ
ಭೃಂಗರೇನಿಪರ್‍ಯಾರೇ ಪೇಳಮ್ಮಯ್ಯ ।
ತುಂಗಭದ್ರ ಸುತರಂಗಿಣಿ ಮಧ್ಯಗ
ಮಂಗಳಾಂಗ ವ್ಯಾಸೇಂದ್ರ ಕಾಣಮ್ಮ ೧

ಮಾಯಾಮತ ವಿಧ್ವಂಸಕರೆನಿಸುವ
ನ್ಯಾಯಾಮೃತ ರಚಕರ ನೋಡಮ್ಮಮ್ಮ ।
ಸಾಯಣಾದಿ ಕುಭಾಷ್ಯದಲಿಹ ಅ
ನ್ಯಾಯವ ಜರಿದ ನೋಡಮ್ಮಮ್ಮ ।
ಕಾಯಜ ಪಿತನನ ಹೇಯನೆಂದು ಬಹು
ಗಾಯನ ಮಾಡ್ದ ಮಹಾತ್ಮ ಕಾಣಮ್ಮ ೨

ಪದುಮನಾಭ ಕವೀಂದ್ರ ವಾಗೀಶರ
ಮಧ್ಯದಲಿಹರ ನೀ ನೋಡಮ್ಮಯ್ಯ ।
ಸುಧೀಂದ್ರ ಶ್ರೀನಿವಾಸರು ರಾಮತೀರ್ಥರ
ಮಧ್ಯದಲಿಹರ ನೀ ನೋಡಮ್ಮಯ್ಯ ।
ಯದುರಿಲಿ ಪ್ರಾಣ ಸುಪಾರ್ಶ್ವದಿ ರಘುವರ್ಯ
ಗೋವಿಂದ ತೀರ್ಥರ ನೋಡಮ್ಮಮ್ಮ ೩

ಆರು ಕೋಣೆಗಳ ಮೇಲಾಕಾರ್‍ವೊಲಯದಿ
ಧೀರ ವಾನರರಾ ನೋಡಮ್ಮಯ್ಯ

ಮೂರು ಕೋಟಿ ಜಪದಾಧಾರದಿ ಸ
ಮೀರ ನಿಂದಿಹ ನೋಡಮ್ಮಯ್ಯ ।
ಧೀರ ನಿಲಿಸಿದಾಧಾರ ಭಕ್ತಿ ಯಂತ್ರೋ
ದ್ಧಾರರ ನೀ ನೋಡಮ್ಮಮ್ಮ ೪

ವಾದಿರಾಜ ವಿಜಯೀಂದ್ರರು ಮೊದ
ಲಾದವರ್ಗುರುಗಳ ನೋಡಮ್ಮಮ್ಮ ।
ವಾದಿನಿರಸನವ ಸಮ್ಮೋದದಿ ಗೈದು ಸು
ಭೇದ ಸ್ಥಾಪಿಸಿದ ನೋಡಮ್ಮಮ್ಮ ।
ಮೋದ ಬೋಧ ಗುರು ಗೋವಿಂದ ವಿಠಲನ
ಪಾದ ಸೇವಕ ವ್ಯಾಸಾರ್ಯ ಕಾಣಮ್ಮ ೫

೩೬೭

ವ್ಯಾಸತೀರ್ಥರ ಪಾದ । ಲೇಸಾಗಿ ಭಜಿಸಲು
ಕೇಶವ ನೊಲುಮೆಗೆ ಅವಕಾಶವೊ ಪ

ಆಸದಾಶಿವ ವಂದ್ಯ ಶ್ರೀಶನ ಪದ ಪದುಮ
ಸೂಸಿ ಸೇವಿಸುವಂಥ ದೈಶಿಕರೊಡೆಯರ ಅ.ಪ.

ಯತಿವರ ಬ್ರಹ್ಮಣ್ಯ ವರದಿಂದುದ್ಭವ ವಸು
ಮತಿಯ ಸ್ಪರ್ಶದ ಮುನ್ನ ಕನಕಪಾತ್ರ ಧೃತನೆ ।
ಮತಿವಂತನೆನಿಸುತಬ್ಬೂರೊಳು ನೆಲೆಸುತ್ತ
ಯತಿಯಾಗಿ ಮೆರೆದೆ ಬ್ರಹ್ಮಣ್ಯರ ಕರಜನೆ ೧

ಶ್ರೀಪಾದರಾಯರಲ್ಲೋದಿ ಸುಧಾದಿಯ
ಆ ಪಂಪಾ ಕ್ಷೇತ್ರವ ಪ್ರಾಪಿಸಿ ನೆಲಿಸೀ ।
ತಾಪಸೀಗಳು ವಿಜಯೀಂದ್ರ ವಾದಿರಾಜ
ಗಾಪಾರ ಮಹಿಮನ ತತ್ವಗಳೊರೆದಂಥ ೨

ವಿದ್ಯಾನಗರಿಯ ಭವ್ಯ ಗದ್ದುಗೆಯನೆ ಯೇರ್ದ
ತ್ರಿದ್ವೀದ ಪೃಥುವೀಪ ಕುಹುಯೋಗವಾ ।
ಮಧ್ವ ಸಮಯ ವರ ದುಗ್ಧಾಬ್ಧಿ ಪೂರ್ಣೇಂದು
ಅದ್ವೈತ ತಮಸೂರ್ಯ ವರ ಚಂದ್ರಿಕಾಚಾರ್ಯ ೨

ಮಾಯಾ ಸಮಯ ಮದಕರಿಗೆ ಕಂಠೀರವ
ನ್ಯಾಯಾಮೃತವು ತರ್ಕ ತಾಂಡವ ರಚಿಸೀ ।
ಮಾಯಾ ಮತಂಗಳ ಛೇದಿಸಿ ಬಹುವಿಧ
ರಾಯ ಕೃಷ್ಣನೆ ಪರಾತ್ಪರನೆಂದು ಪೇಳಿದ ೪

ವರುಷವು ಸುವಿಳಂಬಿ ಮಾಸ ಫಾಲ್ಗುಣ ವದ್ಯ
ಎರಡೆರಡನೆ ದಿನವು ಶನಿವಾರದೋಳ್
ವರ ಗುರು ಗೋವಿಂದ ವಿಠಲ ಧ್ಯಾನಾನಂದ
ಪರನಾಗಿ ತನು ಕಳೆದ ನವ ವೃಂದಾವನದೊಳು ೫

೨೬೮

ವ್ಯಾಸರಾಜ ಗುರುವೇ । ಎಮ್ಮನು ।
ಪೋಷಿಸುವುದು ಬಿಡದೇ ಪ

ಈ ಸಮೀರ ಸಮಯವನುಪದೇಶಿಸಿ ।
ಸಲಹುದು ಸತತಾ ಅ.ಪ.

ಹೆಂಚು ಹಾಟಕ ಸಮ ಬುದ್ಧೀ ।
ಹರಿಗುಣ । ಸಂಚಿಂತಿಪ ಬುದ್ಧೀ
ಮುಂಚೆ ಇತ್ತು ಮನ । ಅಂಚೆ ಗಮನ ಪಿತ ।
ವಾಂಛಿತ ಪ್ರದನಲಿ ೧

ಕಾಯಗಳಿತವಾಯ್ತು । ಬಂದ
ಕಾರ್ಯವಾಗಧೋಯ್ತು

ಮಾಯಾ ಸಂಸಾರದಿ ಮುಳುಗಿ ಬಳಲಿಹೆ ।
ತೋಯ ಜಾಕ್ಷನ ತೋರೋ ೨

ತರ್ಕ ತಾಂಡವನರಿಯೇ ।
ಗುರುವೇ ಕರ್ಕಶ ಭವ ಕಳೆಯೇ
ಶರ್ಕ ರಾಕ್ಷ ಗುರುಗೋವಿಂದ
ವಿಠಲನ ಚೊಕ್ಕ ಚರಣ ತೋರೀ ೩

೩೬೯

ವ್ಯಾಸರಾಯರ ಚರಣವನೆ ಸೇವಿಸಿ ಪ

ವ್ಯಾಸರಾಯರ ಚರಣ ಸರಸಿಜದ ಸೇವೆ ಬಲು ಮೀಸಲ
ಮನದಿ ಮಾಡೆ ಆಶೆಪಾಶೆಯ ತೊರೆದು ಕ್ಲೇಶವೆಲ್ಲವ
ಹರಿಸಿ ಭಾಸಿಸುವ ಬಿಡದಲೇ ಹೃದ್ದೇಶ ಖೇಶದೊಳಗೇ ಅ.ಪ.

ಬನ್ನೂರು ಪುರದಲ್ಲಿ ಮುನ್ನೋರ್ವ ಬ್ರಾಹ್ಮಣನ
ಮನ್ನೆಯೋಳ್ಭದಿಸಲೂ ಸ್ವರ್ಣ ಪಾತ್ರೆಲಿ ತರಿಸಿ
ಘನ್ನ ಮಹಿಮನ ತಂದು ಬ್ರಹ್ಮಣ್ಯ ಯತಿವರರು
ತಮ್ಮ ಆಶ್ರಮದಿ ಪೊರೆಯೆ ॥
ಉನ್ನತದ ಗುಡ್ಡದಲಿ ಗವಿಯ ಮನೆಯಾಗಿರಲು ಚಿಣ್ಣನಾ
ತೊಟ್ಟಿಲಿನ ಮೇಲಿನ ಗವಾಕ್ಷದಿಂ
ಚೆನ್ನಗೋವ್ ದಿನದಿನದಿ ಪಾಲ ಕರೆಯುತ ಚಿಣ್ಣನನು
ತಾ ಬಲು ಸಲಹಿತು ೧

ತಾಪಸೋತ್ತಮರಾದ ಶ್ರೀಪಾದರಾಯರ ಸ-
ಮೀಪದೊಳು ಆ ಪರಮ ಶಾಸ್ತ್ರ ವ್ಯಾಸಂಗದೀ
ಭಾಪು ಭಾಪನೆ ಮರೆದು ಭಕ್ತಿ ಸುಪಥವ ಪಿಡಿದು ಮೈ
ಮರೆದು ಕುಣಿಯುತಿರುವ ॥
ಶ್ರೀಪಾದ ಮುನಿಪ ತಾ ಮುಚ್ಚಳವ ತೆರೆಯದಿಹ

ಸಂಪುಟವ ತೆರೆಯುತ್ತ ಶ್ರೀ ಪತಿಯನೆ ನೋದುತ
ಶ್ರೀಪ ಶ್ರೀ ವೇಣುಗೋಪಾಲ ಕೃಷ್ಣನ್ನ ಕಾಣುತ್ತ ಕುಣಿ ಕುಣಿದಾಡಿದ ೨

ಶಾಲಿಗ್ರಾಮವ ಪಿಡಿದು ತಾಳವನೆ ಹಾಕುತ್ತ
ಬಲುಭಕ್ತಿ ಭರದಿಂದ ಘಲ್ಲು ಘಲ್ಲನೆ ಕುಣಿಯೆ
ಖುಲ್ಲ ಜನರಿದರ ವಳ ಮರ್ಮವನೆ
ತಿಳಿಯದಲೆ ಗುಲ್ಲುಗುಲ್ಲೆಂದು ನಗಲೂ ॥
ಬಲ್ಲಿದ ಶ್ರೀಪಾದರಾಯರಿದ ಕೇಳಿ ಕಂಗಳಲಿ ಗಂಬನಿ ಗಲ್ಲದಲಿ ಕೈಯಿಡುತ
ಸೊಲ್ಲ ಕೇಳಿರಿ ಸುಜನರೆಲ್ಲರು ಶ್ರೀ ಕೃಷ್ಣ ನಮ್ಮ ವ್ಯಾಸರೋಶನಾದನು ೩

ವಿಜಯ ನಗರಿಗೆ ಬಂದು ವಿಜಯ ಸಾರಥಿ ಹರಿಯ
ನಿಜ ಮತವ ಬೋಧಿಸುತ ನಿಜ ಜನರ ಪೊರೆಯುತ್ತ
ಕುಜನ ಕುತ್ಸಿತ ಮಾಯಿಮತ ಜೈಸಿಅಜನನಯ್ಯನ ಪ್ರೀತಿ ಸಂಪಾದಿಸಿ ॥
ಸುಜನ ಪಾಲಕ ಕೃಷ್ಣರಾಜನಿಗೆ ಕುಹುಯೋಗ
ಗಜಬಜಿಸಿ ಬರುತಿರ್ಪುದನು ನಿಜ ಮನದಿ ತಿಳಿದು
ಗಜವರದ ನಂಘ್ರಿಯನೆ ಭಜಿಸುತ್ತ ವಿಜಯ ಪುರಿ ಸಿಂಹಾಸನವನೇರ್ಧರ ೪

ಕಳೆದು ಕುಹುಯೋಗವನು ಶೀಲ ಭೂಪಾಲನಿಗೆ
ಒಲಿದು ಬಲು ದಾನ ಧರ್ಮಂಗಳನೆ ಮಾಡುತಾ
ಏಳಲವ ಮಾಡದಲೆ ಶೀಲ ಸುಬ್ರಾಹ್ಮರಿಗೆ ಸನ್ನದುಗಳಿತ್ತು ಪೊರೆದ ॥
ಅಲವ ಬೋಧರ ಮತವ ನೆಲೆಗೊಳಿಸಿ ರಾಜ್ಯದಲಿ
ಬಲು ಪರಿ ಗ್ರಂಥ ರಚನೆಯಲಿ ಕಳೆಯೆ ಕಾಲವ
ಕಲು ಮನದ ಜನರಿವರ ಬಲು ಪರಿಯ
ಮಹಿಮೆಗಳನೂ ತಾವ್ ತಿಳಿಯಲೊಶವೆ ೫

ಇಂಪುಗೊಳ್ಳುತ ಮನದಿ ತಂಪಿನಿಂದಲಿ ಮೆರೆವ
ಪಂಪೆ ಸುಕ್ಷೇತ್ರದಲಿ ಬಾಂಬೊಳೆಯ ಜನಕನ್ನ
ಸಂಪ್ರೀತಿಯನೆ ಪಡೆದಿರುವ ಯಂತ್ರ ಉದ್ಧಾರರನ ಸ್ಥಾಪಿಸುತಲಿ॥
ನೋಂಪಿನಿಂದಲಿ ಬ್ರಾಹ್ಮಲಕ್ಷ ಗುಂಪಿಗೆ ಉಣಿಸಿ ।

ಸಂಪುಲ್ಲ ಲೋಚನನ ಶಂಫಲಿಯ ಪುರಗನನು
ಸಾಂಪ್ರದಾಯಕದಿಂದ ಸಂಪ್ರೀತಿ ಬಡಿಸಿದರ ಪದ ಪಾಂಸುವನೆ ಸಾರಿರೋ ೬

ಶೇಷನಾವೇಶ ಶ್ರೀ ವ್ಯಾಸರಾಜರು ತಾವು
ಶೇಷ ಪರ್ವತ ವಾಸ ವೆಂಕಟೇಶನ ದ್ವಾ
ದಶಾಬ್ದಿಯೊಳೊಸೆದು ಬಲು ನೇಮದಿಂ ಪರಿ
ಪರಿಯ ಪೂಜೆಯನೆ ಗೈಯ್ಯುತಲಿ ॥
ಶ್ರೀಶನ ಸುಪೂಜಾ ವಿಧಾನವನೆ ಗೈಸುತ್ತ
ದೋಷದೂರನ ಸೇವೆ ಮೀಸಲಳಿಯದ ಮನದಿ ಒಸೆದು
ತಾವ್ ಗೈಯ್ಯುತ ಭಾಸಿಸುವ ಸತ್ಕೀರ್ತಿಯುತರಾಗಿ ಮೆರೆಯುತಿಹರ ೭

ದಾಸ ಪಂಥವ ಸಾರಿ ನಿಜ ದಾಸನೆನೆ ಶ್ರೀನಿ
ವಾಸನಿಗೆ ಪುರಂದರ ವಿಠಲ ದಾಸನೆಂದೂ
ದಾಸ ಪೀಠದಿ ನಿಲಿಸಿ ದಾಸ ಕೂಟವ ರಚಿಸಿ ಸತ್ಪಂಥವನೆ ಸಾರಿದ ॥
ಆಶುಕವಿತೆಯ ರಚಿಸಿ ಪ್ರಾಕೃತ ಸುಭಾಷೆಯಲಿ
ಕೇಶವನ ಗುಣಧಿಯಲಿ ಲೇಸಾಗಿ ಈಸುತಲಿ
ದಾಸರೊಡನಾಡುತಲಿ ಮೀಸಲಾಗಿರಿಸಿ ತನು ಕೇಶವನ ಗುಣ ಪೊಗಳಿದ ೮

ಜಯ ಜಯತು ಶುಭಕಾಯ ಜಯ ಜಯತು ವ್ಯಾಸಾರ್ಯ
ಜಯ ಮಧ್ವಮುನಿ ಪ್ರೀಯ ಜಯ ಚಂದ್ರಿಕಾಚಾರ್ಯ
ಜಯತು ವಿದ್ವದ್ವಾರ್ಯ ಜಯತು ಸುರಮುನಿ
ಪ್ರೀಯ ಜಯ ಜಯತು ಯತಿವರ್ಯನೆ ॥
ಕಾಯಭವ ಪಿತ ಗುರೂ ಗೋವಿಂದ ವಿಠ್ಠಲಗೆ
ಪ್ರೀಯ ಗುರು ವ್ಯಾಸಾರ್ಯ ಸ್ತೋತ್ರವನು ಭಾವ ಶುದ್ಧಿಯೊಳಾವ
ಭಜಿಸುವನವಗೆ ಭವವನಧಿ ಉತ್ತರಿಸೆ ನಾವೆಯೆನಿಸುವುದಿದು ೯

೩೭೦

ವ್ಯಾಸರಾಯ ನಿನ್ನ ಅನುದಿನಾ । ಸ್ಮರಿಪ ಜನಕೆ
ತೋಷದಿಂದ ಲೀವೆ ಸಾಧನಾ ।

ವಾಸುದೇವ ಕೃಷ್ಣಲೀಲೆ । ರಾಶಿಗುಣವ ಬೋಧಿಸುತ್ತ
ಶ್ರೀಶ ಪಾದಪದುಮ ಕಾಂಬ । ಲೇಸು ಮುಕ್ತಿ ಮಾರ್ಗತೋರ್ವೆ ಅ.ಪ.

ಏಸೊ ಮುನಿಗಳಿದ್ದು ಮಾಡದಾ । ಶಾಸ್ತ್ರವೆಂಬ
ಭೂಷಣಂಗಳ್ಹರಿಗೆ ತೊಡಿಸಿದಾ ।
ಕೇಶವನೆ ಸರ್ವೋತ್ತಮನು । ದೋಷದೂರನೆಂದು ತಿಳಿಸಿ
ಮೋಸಪಡಿಪ ಮಾಯಿ ಮತವ । ಘಾಸಿಮಾಡಿ ಜಯವ ಪಡೆದೆ ೧

ಕಾಶಿ ಗದಾಧರ ಸುಮಿಶ್ರನ । ಸೋಲಿಸುತ್ತ
ದಾಸನನ್ನ ಮಾಡಿಕೊಂಡನ ।
ಕಾಶಿ ಮಿಶ್ರಪಕ್ಷಾಧಾರ । ವಾಸುದೇವ ವಾಲೀಲೆಯ
ಏಸೊ ವಾದಿ ಜಯದ ಪತ್ರ । ಭೂಷಣಗಳ್ ಶ್ರೀಶಗಿತ್ತೆ ೨

ಶೇಷನಾವೇಶದಿಂದಲಿ । ಪುಟ್ಟಿ ನೀವು
ವ್ಯಾಸರಾಯರೆಂಬ ಪೆಸರಲಿ ।
ದೇಶ ಪತಿಗೆ ಬಂದ ಕುಹು । ದೋಷಯೋಗ ಹರಿಸುತ
ಸಿಂಹಾಸನೇರಿ ಜಗದಿ ಬಹಳ । ಭಾಸುರ ಸುಕೀರ್ತಿ ಪಡೆದೆ ೩

ನ್ಯಾಯ ಗ್ರಂಥವೆಂದು ಕರೆಸಿಹ । ಚಂದ್ರಿಕಾದಿ
ನ್ಯಾಯಾ ಮೃತವು ತರ್ಕ ತಾಂಡವ ।
ಗೇಯದಿಂದ ತುಚ್ಛ ಭಾಷ್ಯ । ಗಾಯನ ಮಾಡ್ದದುರ್ಮತೆನ್ನ
ಮಾಯಿಮತವ ಗೆದ್ದು ಮಧ್ವ । ಧೇಯ ಸಾಧಿಸೀದ ಗುರುವೆ ೪

ಪರಮ ಶಿಷ್ಯರೆಂದು ಮೆರೆವರಾ । ವಿಜಯಿಂದ್ರ
ವರ ಸುವಾದಿರಾಜರೆಂಬರಾ ।
ಗುರುಗಳಾಗಿ ಯತಿ ಸುರೇಂದ್ರ । ವರ ಸುಪುತ್ರ ಭಕ್ಷೆ ಬೇಡೆ
ಪರಮ ಹರುಷದಿಂದ ವಿಜಯ । ಇಂದ್ರರನ್ನ ಕಳುಹಿ ಪೊರೆದೆ ೫

ಜ್ಞಾನಿಯರಸ ವ್ಯಾಸ ಮುನಿಗಳಾ । ಮನುಜರೆಂದು
ಹೀನ ಜನರು ಪೇಳೆ ಆವರ್ಗಳಾ ।

ಭಾನುಸೂನು ನರಕಽನೇಕ । ಕಾಣಿಸುತ್ತ ಹಿಂಸಿಸೂವ
ಶ್ರೀನಿವಾಸ ಹರಿಯ ಮುಂದೆ । ಗಾನ ಗೈದು ಆಡುತಲಿಪ್ಪ ೬

ಪರಮಹಂಸ ಮುನಿಯು ಮನದಲಿ । ಪೂಜೆಗೈದು
ಹರಿಯ ಕಾಂಬ ಹೃದಯ ಗುಹೆಯಲಿ ।
ಗುರುವರ ಬ್ರಹ್ಮಣ್ಯ ಪೂಜ್ಯ । ಗುರು ಗೋವಿಂದ ವಿಠ್ಠಲಾನ
ಚರಣ ವನಜ ಧ್ಯಾನಾಸಕ್ತ । ವರ ಸುನವ ವೃಂದಾವನಸ್ಥ ೭

೩೭೧

ವ್ಯಾಸಾರ್ಯ – ವ್ಯಾಸಾರ್ಯ ಪ

ದೈಶಿಕಾರ್ಯ ಬ್ರಹ್ಮಣ್ಯರ ಕರಜನೆ ಅ.ಪ.

ಭುವಿ ಸ್ಪರ್ಶಿಲ್ಲದೆ । ಅವನಿಜನಿತ ಗುರು
ತವ ಪದ ಭಜಕಗೆ । ಭವ ಪರಿಹರಿಸುವೆ ೧

ಭೀಕರವೆನೆ ನೃಪ । ಗಾಕುಹುಯೋಗವ
ತಾಕುವ ಮುನ್ನವೆ । ನೀ ಕಳೆದೆಯೊ ಗುರು ೨

ಹನ್ನೆರೆಡೊರ್ಷವು । ಪನ್ನಗ ನಗಪ ಪ್ರ
ಪನ್ನ ಭಜಕ ನಿನ । ಗಿನ್ನುಂಟೇ ಸಮ ೩

ಮಂದ ಜನರೋದ್ಧರ । ವೆಂದು ರಚಿಸಿದೇ
ಚಂದ್ರಿಕಾದಿ ತ್ರಯ । ಸುಂದರ ಗ್ರಂಥ ೪

ವ್ಯಾಸ ತ್ರಯಾಭಿಧ । ಲೇಸು ಗ್ರಂಥ ಸಂ
ಕಾಶಿಸೆ ಬಹು ವಿಧ । ಆಸುರಿ ಮತ ಹನ ೫

ದಾಸ ಪಂಥ ಉಪ । ದೇಶಿಸೆ ಶ್ರೀನಿ
ವಾಸ ನಾಯಕರ । ದಾಸರೆಂದೆನಿಸಿದೆ ೬

ವಾಸವ ನಾಮಕ । ದಾಸರಿಂದ ದಿ
ಗ್ದೇಶ ಪ್ರಸರ ಮಹಿ । ದಾಸನ ನಾಮವು ೭

ಶ್ವಸನನ ಮತ ವಿ । ದ್ವೇಷಿವಾದ ಹರ
ದೇಶ ದೇಶ ಹನು । ಮೇಶ ಪ್ರತಿಷ್ಠಿತ ೮

ಸಾರ್ವ ಭೌಮ ಗುರು । ಗೋವಿಂದ ವಿಠಲನ
ತೋರ್ವುದೆನ್ನ ಹೃದ । ಯಾ ಕಾಶದಲಿ ೯

೩೭೨

ಭಾವೀ ಸಮೀರ ಶ್ರೀವಾದಿರಾಜರು

ಕೃಪೆಯಲಿಂದಲಿ ಕಾಯ ಬೇಕಯ್ಯ ।
ಶ್ರೀಸೋದೆ ನಿಲಯ ಕೃಪೆಯಲಿಂದಲಿ ಕಾಯ ಬೇಕಯ್ಯ ಪ

ಕೃಪೆಯಲಿಂದಲಿ ಕಾಯ ಬೇಕೈ ।
ವಿಪ ಅಹಿಪ ಸುರಪಾದಿ ವಂದ್ಯವೆ ।
ವಿಪುಲ ಪಾಪಾಳಿಗಳ ಹರಿಸೀ ।
ಸುಪಥ ಸದ್ಗತಿಗೆನ್ನ ಒಯ್ದು ಅ.ಪ.

ಗೌರಿದೇವಿಯ ಉದರಸಂಭವನೆ । ಹಯಾಸ್ಯನಂಘ್ರಿ
ಸರಸಿರುಹದಲಿ ಮಧುಪ ನೆನಿಸಿದನೆ ॥
ದ್ವಾರಕಾದಿ ಕ್ಷೇತ್ರ ಚರಿಸುತ ।
ಘೋರ ಹಿಮಗಿರಿ ಸೇತುಯಾತ್ರೆಯ
ಸಾರಿ ಸತ್ತೀರ್ಥ ಪ್ರಬಂಧವ ।
ಧೀರ ನೀ ರಚಿಸುತ್ತ ಮೆರೆದೆಯೊ ೧

ಲಕ್ಷಿಸುತ್ತಲಿ ಮಾತೆ ಬಿನ್ನಪವ । ಮಹ ಭಾರತಸ್ಥ
ಲಕ್ಷಪದ ಬಹು ಕ್ಲಿಷ್ಟವೆನಿಸೂವ ॥

ಲಕ್ಷಣದಿ ಸದ್ಯುಕ್ತ ಪದಗಳ ।
ಈಕ್ಷಿಸುತ ಅವಕರ್ಥ ಪೇಳುತ
ಲಕ್ಷಸದ್ದಾಭರಣ ಮಾಲಿಕೆ ।
ಲಕ್ಷ್ಮಿಪತಿ ಹಯಾಸ್ಯಗರ್ಪಿತ ೨

ಸೇವಿಸುತ್ತಿಹ ವಿಪ್ರನಾದವನ । ಕೌಟಿಲ್ಯ ಕಂಡು
ತೀವ್ರದಿಂದಲಿ ಶಾಪವಿತ್ತವನ ॥
ಭಾವ ತಿಳಿದು ಬೊಮ್ಮರಾಕ್ಷಸ ।
ಭಾವತಾಳೆಂದೆನುತ ಪೇಳಲು
ತೀವ್ರ ಯಾಚಿಸೆ ಕ್ಷಮೆಯ ಮಂತ್ರವ ।
ಆವ ಆಕಾಮ್ಯೆವ ನೊರೆದೆ ೩

ಮರಳಿ ಉತ್ತರ ಯಾತ್ರೆಯಲ್ಲಿರಲು । ಗುರು ವಾದಿರಾಜರ
ಅರಿಯದಲೆ ತನ್ಮಂತ್ರ ಪೇಳಲು ॥
ಒರೆದರೂ ರಂಡೇಯ ಮಗ ನೀ ।
ನಿರುತಿರುವೆನ ಸ್ನಾತ ಕಾರ್ತಿಕ
ಮರಳಿ ಮಾಘಾಷಾಢ ವಿಶಿಖದಿ ।
ಹರಿಯಿತೂ ನಿನ ಶಾಪವೆಂದರು ೪

ಆತುಗುರುಪದ ಕ್ಷಮೆಯ ಪ್ರಾರ್ಥಿಸಲು । ಗುರುರಾಜರಾಗ
ಭೂತ ರಾಜನು ನೀನೆ ಎನ್ನುತಲು ॥
ಖ್ಯಾತಿ ಪೊಂದುತ ಭಾವಿರುದ್ರನೆ ।
ಪೊತ್ತು ಎನ್ನಯ ಮೇನೆ ಮುಂಗಡೆ
ಕೌತುಕವ ತೋರುತ್ತ ಮೆರೆವುದು ।
ಪೋತ ಭಾವದಿ ತಮಗೆ ಎಂದರು ೫

ಆಖಣಾಶ್ಮಕೆ ಸಮವು ನಿಮಚರಣ । ಭಾವಿ ಮರುತರೆ
ಪಾಖಂಡ ಮತ ವೆಲ್ಲಿರಲು ಖಂಡನ ॥
ಸ್ವೀಕರಿಸಿ ಅರಸಪ್ಪ ರಾಜನ ।
ಕಾಕು ಶೈವನ ಖಂಡಿಸುತ್ತಲಿ

ಆಕೆವಾಳರ ಪೊರೆದು ದಶಮತಿ ।
ತೋಕನೆಂದೆನಿಸುತ್ತ ಮೆರೆದೇ ೬

ಭೂವಲಯದೊಳು ಕಾರ್ಯ ಪೂರೈಸಿ । ಬದರಿಯಿಂದಲಿ
ಭಾವಿ ಶಿವನಿಂ ಪ್ರತಿಮೆ ರಥತರಿಸೀ ॥
ದೇವ ಗೃಹ ಸಹ ವಿರುವ ವಿಗ್ರಹ ।
ತ್ರೈವಿಕ್ರಮನ ಸಂಸ್ಥಾಪಿಸುತ್ತ
ಭಾವ ಭಕ್ತಿಯಲಿಂದ ಉತ್ಸವ ।
ತೀವರದಿ ರಚಿಸುತ್ತ ಮೆರೆದೆ ೭

ಹಂಚಿಕಿಂದಲಿ ಪೂರ್ವರಚಿತೆನ್ನ । ವೃಂದಾವನಂಗಳು
ಪಂಚ ಸಂಖ್ಯೆಯಲಿಂದ ಮೆರೆವನ್ನೆ ॥
ಮುಂಚೆಯೇ ಸ್ಥಾಪಿತವು ಎನ್ನುವ ।
ಪಂಚರೂಪೀ ವ್ಯಾಸ ಸಮ್ಮುಖ
ಸಂಚುಗೊಳಿಸೀ ಸ್ಥಾಪಿಸುತ್ತ ।
ಕೊಂಚವಲ್ಲದ ಕಾರ್ಯ ರಚಿಸಿದೆ ೮

ಯುಕ್ತಿಮಲ್ಲಿಕೆ ರುಕ್ಮಿಣೀಶ ಜಯ । ಗುರ್ವರ್ಥ ದೀಪಿಕೆ
ಮತ್ತೆ ಪರಿಪರಿ ಶಾಸ್ತ್ರ ಗ್ರಂಥಗಳ ॥
ವಿಸ್ತರಿಸಿ ಭುವನದಲಿ ಮೆರೆದೆ ।
ಉತ್ತಮೋತ್ತಮ ದೇವ ದೇವನು
ಕರ್ತೃ ಶ್ರೀಹಯ ಮುಖನು ಎನ್ನುತ ।
ವತ್ತಿ ಪೇಳುತ ವ್ಯಾಪ್ತಿಸಾರಿದೆ ೯

ಶಿಷ್ಟ ಜನ ಸಂಸೇವ್ಯ ಧೀವರನೆ । ಶಮದಮಾನ್ವಿತ
ಕಷ್ಟಹರ ಕಾರುಣ್ಯ ಸಾಗರನೇ ॥
ಕುಷ್ಟ ಅಪಸ್ಮಾರ ರೋಗದ ।
ಅಟ್ಟುಳಿಯ ಕಳೆಯುತ್ತ ಮೃತ್ತಿಕೆ
ಸುಷ್ಠುಸೇವನೆಯಿಂದ ಭಕ್ತರ ।
ಇಷ್ಟವನೆ ಸಲಿಸುತ್ತ ಮೆರೆವೆ ೧೦

ಕಡೆಯ ಮಾಸಾಸಿತವು ತೃತಿಯದಲಿ । ನೀನೆ ಸ್ವೇಚ್ಛೆಲಿ
ನಡುವೆ ವೃಂದಾವನವ ಪೊಕ್ಕಲ್ಲಿ ॥
ಧೃಡದಿ ಬಿಂಬ ಹಯಾಸ್ಯ ಗುರುಗೋ ।
ವಿಂದ ವಿಠಲ ಧ್ಯಾನದಿರುತಲಿ
ಇಡುತ ಅಂಶವ ಸುರಪ ವಾಹನ ।
ಬಿಡದೆ ಏರುತ ಸಾರ್ದೆ ಹರಿಯನು ೧೧

೩೭೩

ಗುರುವಾದಿರಾಜ ತವ । ಚರಣಗಳಿಗಭಿನಮಿಪೆ
ದೊರಕಿಸೆನಗ್ಹರಿಪಾದ । ಸರಸಿರುಹ ಗುರುವೇ ಅ.ಪ.

ಯತಿ ಕುಲಾಗ್ರಣಿ ದ್ವೈತ । ಮತ ಜನರ ಉದ್ಧಾರ
ಸತತ ನೀ ನೆಸಗುತಲಿ । ಪ್ರತಿರಹಿತ ನೆನಿಸೀ ।
ಮತ ಗ್ರಂಥ ವಿಸ್ತರಿಸಿ । ಯುಕ್ತಿಗಳ ಬೋಧಿಸುತ
ಹಿತದಿಂದ ಸಜ್ಜನಕೆ । ಗತಿ ತೋರಿ ಮೆರೆದ ೧

ತವ ಪಾದಾರಾಧನೋ । ತ್ಸವಕೆ ಕಾತುರನಾಗಿ
ಹವಣಿಸಿರೆ ಜ್ವರದನೂ । ಭವವನ್ನೆ ಕೊಡಿಸೀ ।
ನೆವನದಲಿ ವಾರಿಸಿದೆ । ತವ ಪಾದ ಪೂಜೆಯನು
ಹವಣೆಗಳ ತಿಳಿಯೊ ನಾ । ದೈವಗತಿಯಂತೋ ೨

ಭಾವಿ ಮಾರುತ ನಿಮ್ಮ । ಭಾವ ತಿಳಿವರು ಯಾರು
ಓವಿ ನಿಮ್ಮಡಿಗಳನು । ಸ್ತವನ ಗೈದೂ ।
ಗೋವಳರ ಪ್ರೀಯ ಗುರು । ಗೋವಿಂದ ವಿಠ್ಠಲನ
ಭಾವದಲಿ ಕಾಣ್ವಂಥ । ಭಾವ ಕೊಡು ಸಂತ ೩

೩೭೪

ದಯದಿ ಪಾಲಿಸೋ ವಾದಿರಾಜ ಗುರುವೇ । ನತಜನ ಸುರತರುವೇ ಪ

ಹಯಮುಖ ಪದ ಸದ್ವನಜ ಸುಭೃಂಗಾ । ಪಾಲಿಸು ದಯಾಪಾಂಗಾ ಅ.ಪ.

ರಜತ ಪೀಠದೊಳು ಕೃಷ್ಣ ಪೂಜೆಗಳನ್ನು । ಪರಿಪರಿ ರಚಿಸಿನ್ನೂ ।
ಕುಜನರ ಭೇದಿಪ ಭಜನೆ ಪದಗಳನ್ನೂ । ಸುಜನಕಿತ್ತೆ ನೀನೂ ॥
ಭಜಿಸೆ ಬಂದವರಿಗನ್ನೋದಕಗಳನೂ । ಏರ್ಪಡಿಸಿನ್ನೂ ।
ನಿಜ ಜನರ ಪೊರೆವ ಸುವ್ಯವಸ್ಥೆಗಳನ್ನೂ । ರಚಿಸಿ ಮೆರೆದೆ ನೀನೂ ೧

ಅಂತರಂಗದಿ ಪೂಜಿಪೆ ಹಯವದನನ್ನ । ಭಾವಿ ಮರುತ ಎನ್ನ।
ಅಂತರಂಗದೊಳು ನೆಲಿಸುತ ನೀಯೆನ್ನ । ಸಂಚಿತಾದಿಯನ್ನ ॥
ಅಂತಗಾಣಿಪ ಶ್ರೀ ಅಂತರಾತ್ಮನನ್ನ । ಚಿಂತೆ ಪಾಲಿಸು ಮುನ್ನ ।
ಯೆಂತು ವರ್ಣಿಸಲಿ ತವ ಮಹಿಮೆಗಳನ್ನ । ನಿಂತು ನಲಿ ವದನದೊಳೆನ್ನ ೨।

ಭರತ ಖಂಡದಿ ತೀರ್ಥ ಕ್ಷೇತ್ರ ಚರಿಸೀ । ತತ್ಪ್ರಬಂಧ ರಚಿಸೀ ।
ವಿರಚಿಸಿದೆಯೋ ರುಕ್ಮಿಣೀಶ ಕಾವ್ಯಾ । ಯುಕ್ತಿಮಲ್ಲಿಕೇಯಾ ॥
ಸುರಸ ಪದಗಳಲಿ ತತ್ವ ಪುಂಜವನ್ನ । ರಚಿಸಿ ಮೆರೆದೆರನ್ನ ।
ನಿರಣಯಾದಿಗಳ ಭಾವಗಳನ್ನ । ಕನ್ನಡದಿ ರಚಿಸದೆ ಘನ್ನ ೩

ಸ್ವಾದಿ ಪುರದಿ ಬಲು ಮುದದಲಿ ಮೆರೆದಾ । ಬಿರಿದು ಪೊತ್ತ ಶೈವಾ
ವಾದಿಸೆ ನಿನ್ನೊಳು ಸೋತು ನಿಂತನವ । ಪಾದದಿ ಬಿದ್ದು ಅವ ॥
ಮೇದಿನಿಯೊಳ್ ನಿಮಗೆ ಸಮರು ಆವ । ಎಂದೊಪ್ಪಿಸಿದನು ಅವ ।
ಮೋದದಿಂದಲಿ ಬಸವ ಚಿನ್ಹಿತನಾದ । ತವ ಚರಿತೆ ಆಗಾಧಾ ೪

ಪಂಚ ಸುವೃಂದಾವನಗಳ ರಚಿಸುತ್ತಾ । ತಾವ್ನಡುವಿರ ಬೇಕೆನುತಾ ।
ಅಂಚೆಗಮನ ಪ್ರಾಣ ಗಂಗಾಧರನಾ । ಗುರು ಗೋವಿಂದ ವಿಠಲನಾ ॥
ಸಂಚಿಂತಿಸಿ ನಿಲಿಸುತ ನಾಲ್ಕರಲ್ಲೀ । ಚತುರ ದಿಕ್ಕಿನಲ್ಲೀ ।
ಪಂಚರೂಪಿ ನಿಷ್ಕಿಂಚಿನ ಪ್ರಿಯ ಹರಿಯಾ । ಪುರವ ಸೇರಿದಯ್ಯಾ ೫

೩೭೫

ಪಂಚ ವೃಂದಾವನದಿ ಮೆರೆಯುತಿರುವಾ ॥
ಪಂಚಾಸ್ಯ ಸಂದಿಷ್ಟ ವೈಭವವ ಕೇಳಿ ಪ

ವಿಪುಲ ಮತಿ ಪದಕರ್ಹ ಕಪಿಪ ರಾಮನ ಭಂಟ
ಸ್ವಪನದಾಖ್ಯಾನವನೆ ಶಪಥ ಪೂರ್ವಕದೀ ।
ವಿಪ್ರಗೋಸುಗವಾಗಿ ಸುಪ್ರಕಟ ಗೈದಿಹರು
ಅಪ್ರತಿಮ ಹಯಮೊಗನ ಸುಪ್ರೇಮ ಪಿಡಿದೂ ೧

ಆಖ್ಯಾನ ಪೆಟ್ಟಿಗೆಯು ಅಂಧಕಾರದಲಿದ್ದು
ವ್ಯಾಖ್ಯಾತೃ ವೇದನಿಧಿ ಜನ್ಮತಾಳುತಲೀ ।
ವ್ಯಾಖ್ಯಾನ ಗೈದಾಗ್ಯು ಭಾವ ತಿಳಿಯದಲೇವೆ
ಪ್ರಖ್ಯಾತಿ ಪಡೆಯದಲೆ ಬೀಗ ಮುದ್ರಿತದೀ ೨

ಅಂಧ ಭಾವದೊಲೊಬ್ಬ ಪಂಗು ಭಾವದಲೊಬ್ಬ
ಇಂದಿರೇಶನ ಮಹಿಮೆ ಪ್ರಕಟ ಗೈಯ್ಯುವಲೀ।
ಅಂಧ ಪಂಗುನ್ಯಾಯ ಆಶ್ರಯಿಸಿ ಪ್ರಕಟಿಸುವ
ಮಂದ ಜನರುದ್ಧಾರ ಕಾರ್ಯ ಗೈಸುತಲೀ ೩

ಅನುಮಾನ ತೀರಥರ ಶಾಸ್ತ್ರವನೆ ಮಥಿಸುತ್ತ
ತನುಮನ ಧನಧಾನ್ಯ ತೃಣವೆಂಬ ಕೀಲಿಯಲೀ ।
ಜ್ಞಾನ ಪೆಟ್ಟಿಗೆ ಬೀಗ ಮುದ್ರೆಯನೆ ತೆರೆಯುತ್ತ
ಮನದ ಪಾತ್ರಿಯಲುಣ್ಣಿ ಆಖ್ಯಾನದನ್ನಾ ೪

ಸಂತ ಸಂಗದಲಿಂದ ಮಂಥಿಸಲು ತತ್ವಗಳ
ಅಂತ ರಂಗದ ಕದವು ತೆರೆದಂತರಾತ್ಮನನು
ಕಂತು ಪಿತನಾದ ಗುರು ಗೋವಿಂದ ವಿಠಲನ್ನ
ಅಂತರಂಗದಿ ಕಾಂಬ ಪಂಥವಿತ್ತವರಾ ೫

೩೭೬

ಪೊಂದಿ ಬದುಕಿರೊ ನಿತ್ಯ ಮಂದಾರ ತರುವಂತೆ
ಕುಂದದಲ ಭೀಷ್ಟಗಳ ಗರೆವ । ಸುರ ತರುವಾ ಪ

ವಾಗೀಶ ಕರಜಾತ । ನಿಗಮಾರ್ಥ ಕೋವಿದರ
ಭೋಗಿಶಯನನ ಭಕುತ । ಭಾಗ್ಯ ದಾತೃಗಳ ।
ಯೋಗಿ ಕುಲವರ್ಯ ಹೃ । ದ್ರೋಗ ನೀಗುವರ
ಜಾಗು ಮಾಡದೆ ಭಜಿಪ । ಭಕ್ತರನು ಪೊರೆವರನು ೧

ಭವರೋಗ ಭೇಷಜರ । ಪದರಜವ ಧರಿಸುವರ
ಅವಗುಣಗಳೆಣಿಸದೆ । ಭವ ಭವಣೆ ಹರಿಸು ವರ ।
ನವ ನವ ಸ್ತೋತ್ರಗಳ । ಕವನ ರೂಪದಿ ಪೇಳಿ
ಪವನಾಂತರಾತ್ಮಕನ । ಪರಿತೋಷ ಗೈದವರಾ ೨

ನರಹರಿಯ ನೈವೇದ್ಯ । ಗರಳ ಮಿಶ್ರಿತವೆಂದು
ಅರಿತು ಭುಂಜಿಸಿದ । ಉರುತರದ ಮಹಿಮರನು ।
ಸಿರಿಹಯವದನನ । ಅಂಘ್ರಿ ಕಮಲಂಗಳನು
ನೆರೆನಂಬಿ ಸುಖಿಸುವರ । ಸುರವ ಭಯ ವಿರಹಿತರ ೩

ಉಕ್ತಿಯನು ಸ್ವಪ್ನದಲಿ । ಶಕ್ತಹಯಮುಖಪೇಳೆ
ಯುಕ್ತಿಮಲ್ಲಿಕೆ ಮಾಲೆ । ಮೌಕ್ತಿಕವ ನಿತ್ತವರ ।
ಭಕ್ತಿಪಥ ತೋರಿ । ಕು । ಯುಕ್ತಿಗಳನೇ ಕಳೆದು
ಮುಕ್ತಿ ಮಾರ್ಗವ ತೋರ್ವ । ಭಕ್ತಿಯೋಗಿಗಳಾ ೪

ಮಾಯಿ ಶೈವರು ಶಾಕ್ತ್ಯ । ಅನ್ಯಮತಗಳಗೆದ್ದು
ಜಯ ಪತ್ರ ಘಂಟೆಗಳ । ವಿಜಯ ಸಾರಥಿಗಿತ್ತು ।
ಭಯ ವಿನಾಶನು ನಮ್ಮ । ತೋಯಜಾಂಬಕ ಸಿರಿ
ಹಯ ವದನನರ್ಚಿಸುವ । ವಾದಿರಾಜರನೂ ೫

ಸೋದೆ ಮಠವಾಸ ಸ । ದ್ಭಕುತ ಜನ ತೋಷ
ಮೋದ ತೀರ್ಥರ ಪ್ರೀಯ । ವಿಬುಧಜನ ಗೇಯಾ ।
ವಾದಿಗಜ ಸಿಂಹ । ಅದ್ವೈತ ತಮ ಸೂರ್ಯ
ಮೇದಿನೀ ಸುರವಂದ್ಯ । ಶ್ರೀವಾದಿರಾಜರನೂ ೬

ಭಾವಿ ಮಾರುತಿಯ । ದಿನ ದಿನದಿ ಪ್ರಾರ್ಥಿಪರ
ಭಾವ ಕೊಲಿಯುತ ತೋರ್ವ । ಹಯ ಮುಖಾತ್ಮಕನು ।
ಭಾವ ಜನಯ್ಯ ಗುರು । ಗೋವಿಂದ ವಿಠ್ಠಲನ
ಭವ್ಯ ರೂಪವ ಹೃದಯ । ದವಕಾಶದೊಳಗೇ ೭

೩೭೭

ಮಂಗಳ ಸೋದೆಯ ರಾಜರಿಗೆ । ಜಯ
ಮಂಗಳ ವಾದೀಭ ಮೃಗರಾಜರಿಗೇ ಪ

ಅದ್ವೈತ ಮತವನ । ಪ್ರಧ್ವಂಸಕಾನಳ
ಮಧ್ವ ಮತಾಬ್ಧಿ ಪ್ರ । ಬುದ್ಧ ಚಂದ್ರನಿಗೆ ೧

ಶ್ರೀ ಮಧ್ವಯ ಮುಖ । ಸ್ವಾಮಿ ಸುಪ್ರೀಯಗೆ
ಕಾಮಿತ ಫಲ ಪ್ರದ । ಕಾಮಧೇನುವಿಗೆ ೨

ನಿರತಿ ಶಯನು ಹರಿ । ಸರ್ವಕ್ಕಧಿಕನಾದ
ಗುರು ಗೋವಿಂದ ವಿಠಲ ಭಕ್ತೇಶನಿಗೇ ೩

೩೭೮

ಮಂದಾರ ತರುವೇ । ನಾ ಬೇಡುವೇ ।
ಮಂದಾರ ತರುವೇ ಪ

ಇಂದು ಮೌಳಿನುತ । ಸಂದರುಶನ ತವ ಅ.ಪ.

ಋಜುಗುಣ ಚಕೋರಕೆ ಚಂದಿರ ।
ಭಜಿಪರಭೀಷ್ಟದ ಮುನಿವರ ।
ವಿಜಯ ಸಾರಥಿ ಪದ ಬಿಸಜಯುಗಳದಿ
ನಿಜಗತಿಯ ಕೊಡುತ ನಡೆಸು ಸುಪಥದಿ ೧

ದಶರಥ ಹರಿ ವಚೋನಯ ।
ಅಸುಪತಿಪರಿಕೃಷ್ಣ ವಚೋನಯ
ಯಶದಿ ಮೆರೆದು ಮುಂಬರುವ ಅಸುಪತಿ
ವಸುದೇಜೆರಮಣನ ಯಶವ ನುಡಿಸು ಯತಿ ೨

ಗುರುಗೋವಿಂದ ವಿಠಲಾರಾಧಕ ।
ನಿರುತ ಮಂಗಳ ಮಹಿಮದ್ಯೋತ
ವರವಿಷಯ ವರುಹು ಭವ ತಾರಕ ನಿರುತಿಹೆ
ಮುದಮುನಿ ಮತೋದ್ಧಾರಕ ೩

೩೭೯

ಲಾತವ್ಯ – ಲಾತವ್ಯ ಪ

ಖ್ಯಾತಾಗ್ರೇಸರ । ಭೂತರಾಜನುತ ಅ.ಪ.

ಸ್ವಪ್ನದ್ರಷ್ಟುವು । ವಿಪ್ರನ ಮುಖದಿಂ
ಸ್ವಾಪ್ನಾಖ್ಯಾನವ । ಸುಪ್ರಕಟಿಸಿದೆ ೧

ವ್ಯಾಸರ ಸಮ್ಮುಖ । ವಾಸಿಸುತಿಹ ಸುವಿ
ಶೇಷ ಮಹಿಮ ಗುರು । ದೈಶಿಕರೊಡೆಯನೆ ೨

ಆಖಂಡಲ ಮುಖ । ಮಂಡಿತ ಚರಣನೆ
ಪಾಖಂಡರ ಮತ । ಖಂಡಿಸಿ ಮೆರೆದಾ ೩

ಭಯವಿದೂರ ತವ । ದಯವನು ಪ್ರಾರ್ಥಿಪೆ
ಹಯವದನನ ಪದ ಪ್ರಿಯ ಭಜಕಾಗ್ರಣಿ ೪

ಭಾವಜ ಪಿತ ಗುರು । ಗೋವಿಂದ ವಿಠಲನ
ಭಾವದಿ ಕಾಣಿಸು । ಭಾವಿ ಮರುತ ಗುರು ೫

೩೮೦ ✓

ವಾದಿಗಳೆದೆಶೂಲಾ । ಗುರುವೆ । ವಾದಿರಾಜ ಶೀಲಾ ಪ

ಬೋಧಿಸಿ ದಶಮತಿ । ಬೋಧರ ಶಾಸ್ತ್ರವ
ಐದಿಸು ಸದ್ಗತಿ । ಯಾದವೇಶನ ಪ್ರೀತಿ ಅ.ಪ.

ಸೋದೆ ಪುರದಲಿರುವಾ । ವೃಂದಾವನ
ಮೋದದಿ ದರ್ಶಿಸುವಾ ॥
ಸಾಧುಗಳಘನೀಗಿ । ವೇದವಿನುತ ಹರಿ
ಪಾದವ ತೋರಿಸಿ । ಮೋದವ ಕೊಡಿಸುವ ೧

ಧವಳಾಭಿದ ಗಂಗಾ । ಅಲ್ಲುದು
ಭವಿಸಿರ್ಪುದು ತುಂಗಾ ॥
ಸವನ ಮೂರಲಿ ಸ್ನಾನ ಕವಿದಿಹ ಅಜ್ಞಾನ
ಸ್ರವಿಸಿ ಶ್ರೀಹರಿ ಜ್ಞಾನ । ಪ್ರವಹವ ಸೃಜಿಸುವುದು ೨

ಪಂಚ ವೃಂದಾವನದೀ । ಇಹ ಹರಿ
ಪಂಚ ಸುರೂಪದಲೀ ॥
ಅಂಚೆಗಮನ ಹರಿ । ಮಂಚಯೋಗ್ಯ ಮುಖ
ಪಂಚವಿಂಶತಿ ಸುರ । ವಾಂಛಿತ ಪಡೆವರು ೩

ವಾಗೀಶ ಕರಜಾತಾ । ಸೇವಿತ
ನಾರಾಯಣ ಭೂತ ॥
ಭೋಗಿ ಪುರೀಶನ । ರೋಗವ ಹರಿಸಿದೆ
ಆಗಮಜ್ಞ ಗುರು । ನಾಗಶಯನ ಪ್ರಿಯ ೪

ಬದರಿಯೊಳಿದ್ದವನಾ । ತರಿಸಿದಿ
ವಿಧಿನುತ ತ್ರಿವಿಕ್ರಮನಾ ॥

ಮುದದಿ ನಿಲ್ಲಿಸುತ । ವಿಧವಿಧ ವೈಭವ
ವಿಧಿಸೆ ನಿನ್ನಯ ಜನ । ಒದಗಿ ಚರಿಸುವರು ೫

ವಿಜಯ ಸಖನ ಪಾದಾ । ನಿರುತ
ಭಜಿಸಿ ಪಡೆವೆ ಮೋದ ॥
ಸುಜನ ಸುರದ್ರುಮ । ಭಜಿಸೆ ಹರಿಸಿ ಭ್ರಮ
ಅಜ ಜನಕನ ತೋರ್ವೆ ॥ ಋಜು ಲಾತವ್ಯರೆ ೬

ಪ್ರಾಕೃತ ಪದಪದ್ಯಾ । ರಚಿಸುತ
ಅ – ಪ್ರಾಕೃತ ನಿರವದ್ಯಾ ॥
ಅ – ವ್ಯಾಕೃತ ಗುರು ಗೋವಿಂದ ವಿಠ್ಠಲ
ಸ್ವೀಕೃತ ನಿಜ ಭಕ್ತ । ಪ್ರಾಕೃತ ಕಳೆವಂಥ ೫

೩೮೧ ✓

ವಾದಿರಾಜ ಗುರು ಮಾನತೋಸ್ಮಿ ಸತತಂ ।
ಕಲ್ಯಾದಿ ದೈತ್ಯ ನಿವಾರಣ ನಿಪುಣಂ ಪ

ಪಂಚವೃಂದಾವನ ಮಂದಿರ ಭವ್ಯಂ
ಪಂಚ ಸುಪರ್ವದಿ ಬುಧ ಜನ ಸೇವ್ಯಂ
ಅಂಚೆಗಮನ ಪದಯೋಗ್ಯ ಸುಭಾವ್ಯಂ
ಸಂಚಿಂತಿಪರ ಭವಾರ್ಣವ ತರಣಂ ೧

ಹಯಮುಖ ನಿಸ್ಸೃತ ಶ್ರುತಿ ಸತ್ತ್ರವಣಂ
ಹಯಮುಖ ಪದ ಸದ್ವನಜ ಸುದಾಸಂ ।
ಹಯಮುಖ ಪ್ರೀತ್ಯೈ ವಿರಚಿತ ಶಾಸ್ತ್ರಂ
ತ್ರಯಿ ಮುಯಿ ರಸ ಸ್ವಪ್ನಾಖ್ಯಾನಂ ೨

ಗುರು ಗೋವಿಂದ ವಿಠ್ಠಲ ವರ ಭಕ್ತೇಶಂ
ಸುರ ಮುಖ ದ್ವಿಜವರ ಸರ್ವ ಸುಸೇವ್ಯಂ ।

ಪರಮತ ಮದಕರಿ ಪಂಚ ಸುವಕ್ತ್ರಂ
ಪರಿಪಾಲಯ ಮಾಂ ತವ ಭಕ್ತಣುಗಂ ೩

೩೮೨

ವಾದಿರಾಜ ಗುರು ಸಾರ್ವಭೌಮ ಸು–
ರ್ವಾದಿ ವಿಭಂಜನ ನಮೋನಮೋ
ಮೋದ ತೀರ್ಥ ಸುಮತಾಂಬುಧಿಶಶಿ
ಮಾಧವ ಪದ ಪಂಕಜ ಮಧುಪ ನಮೋ ಪ

ಸ್ವಾದಿವಾಸ ಮುನಿ । ಮೋದ ತೀರ್ಥಪದವಾ
ರಾಧಕ ತೇ ನಮೊ ನಮೋ ॥
ಮೇದಿನಿ ಸುರರಿಗೆ । ಮೋದ ಪ್ರದಾಯಕ
ಽನಾದಿ ಬಂಧನ ಛೇದ ನಮೋ ॥
ಶ್ರೀದನಗುಣವಾಪಾದಿಸಿ ತನ್ನೊಳು
ಮೋದಿಪ ಮಾಯ್ಗಜ ಸಿಂಹ ನಮೋ ॥
ಬೋಧಿಸಿ ದಶಮತಿ । ಬೋಧ ಶಾಸ್ತ್ರದು
ರ್ವಾದಿಗಳ್ ಜೈಸಿದ ಯತಿಯೆ ನಮೋ ೧

ವಾಗೀಶರ ಕರಜಾತ ನಮೋ ನಮೊ
ಯೋಗಿ ಕುಲಾಬ್ಧಿಗೆ ಚಂದ್ರ ನಮೋ ॥
ಭಾಗವತರ ಸಂಪ್ರೇಮ ನಮೋ ನಮೊ
ಆಗಮಜ್ಞತೇ ನಮೋ ನಮೋ ॥
ಭೋಗಿ ಪುರೀಶ ಸುಮೋದ ನಮೋ ನಮೊ
ಕಾಗಿನಿ ತೀರಗ ಭಜಕ ನಮೋ ॥
ಭಾಗೀರಥಿ ಪಿತ ಹಯಮುಖನನು
ರಾಗದಿ ಭಜಿಸುವ ಯೋಗಿ ನಮೋ ೨

ಭೂಸುರ ಋಣ ಕ್ಲೇಶಾಪಹ ನಮೊ ನಮೊ
ಮೂಷಕ ಬಹು ಭಯ ನಾಶ ನಮೋ ॥

ಕಾಶಿ ಬದರಿ ರಾಮೇಶ್ವರ ಕ್ಷೇತ್ರ ಪ್ರ
ವಾಸಿಸಿ ಸತ್ಕಥೆ ಕರ್ತೃ ನಮೋ ॥
ಲೇಶ ಮಣ್ಣು ತಾ ಕೊಡುತಲಿ ವಿಪ್ರಗೆ
ದೋಷವ ಕಳೆದಗೆ ನಮೊ ನಮೋ ॥
ಮೀಸಲ ಮನದಿ ನಿಷೇವಿಸೆ ಸಂಸೃತಿ
ಶೋಷಿಪ ಶ್ರೀ ಲಾತವ್ಯ ನಮೋ ೩

ಎರ್ಡು ಭುಜದಿ ಹಯವದನನ ಚರಣವ
ಬಿಡದೆ ಧರಿಸುವಗೆ ನಮೊ ನಮೋ ॥
ಮೃಡನುತ ನಾ ಹರಿಷ್ಟರಿ ವಾಣದಿ
ಕಡಲೆ ಪೂರ್ಣ ಬಿಡದೀವಗೆ ನಮೋ ॥
ನಡುಮನೆ ದ್ವಿಜಸುತ ನಿಲಿಸ್ಯರ್ಚಿಸಿದಾ
ಉಡುಪಿನ ಕೃಷ್ಣಾರ್ಚಕಗೆ ನಮೊ ॥
ಸಡಗರದಲಿ ಪರ್ಯಾಯಗಳನು ಮಾ
ರ್ಪಡಿಸಿರುವಾತಗೆ ನಮೋ ನಮೋ ೪

ಪರಿಪರಿ ಗ್ರಂಥವು ಟೀಕಂಗಳ ತಾ
ವಿರಚಿಸಿದಾತಗೆ ನಮೋ ನಮೋ ॥
ಸರಸವು ರುಕ್ಮಿಣಿ ಪತಿ ವಿಜಯವ ತಾ
ಬರೆದು ಪೂಣೆಯಲಿ ಮೆರೆದಗೆ ನಮೋ ॥
ಎರಡೆರಡೊಂದು ವೃಂದಾವನ ಸ್ವಾದಿಲಿ
ಸುರನದಿ ತಟ ನಿಲಿಸಿದವಗೆ ನಮೋ ॥
ಎರಡೊಂದು ವಿಕ್ರಮನುತ್ಸವ ಗೈಸಿದ
ಗುರು ಗೋವಿಂದ ವಿಠಲಾರ್ಚಕಗೆ ನಮೋ ೫

೩೮೩

ವಾದಿರಾಜರ ಪಾದ – ಮೋದದಿ ಭಜಿಸಿದ
ಮನುಜನೆ ಬಲು ಧನ್ಯನೋ ಪ

ಧ್ರುತ – ಶ್ರೀದನೊಲಿಮೆ ಸುಪಾತ್ರ ದಶಮತಿ ।
ಬೋಧ ತೀರ್ಥರ ಪಾದ ಸೇವಕ
ರಾದ ಮಹಸುಸ್ವಾದಿ ಪುರದೊಳು ।
ವೇದ ವಿನುತನ ಸ್ತುತಿಸಿ ಮೋದಿಪ ಅ.ಪ.

ವಾಗೀಶ ಮುನಿಪ ಸದಾಗಮಜ್ಞನ ವರ ।
ವೇಗದಿಂದಲಿ ಫಲಿಸಲು
ಜಾಗು ಮಾಡದೆ ಗೌರಿ ತತ್ಪತಿ ।
ರಾಗ ರಹಿತರು ನಿನ್ನನೊಪ್ಪಿಸೆ ।
ರೋಗಹರ ಹಯವದನ ಪದವನು ।
ರಾಗದಿಂದಲಿ ಭಜಿಪ ಯತಿ ೧

ಶ್ರೀ ಮನ್ಯಾಯಾಮೃತ ಸುಧಾದಿ ಜಲನಿಧಿ ।
ಸೋಮನೆನುತ ಶೋಭಿಪಾ
ಆ ಮಹಾ ದುರ್ವಾದಿ ತಿಮಿರ ಸು ।
ತಾಮರಸ ಸಖನೆನಿಪ ಸಜ್ಜನ ।
ಸ್ತೋಮಕಾಮಹ ಬೋಧ ಶಾಸ್ತ್ರವ ।
ಪ್ರೇಮದಿಂದಲಿ ಪೇಳ್ದಯತಿವರ ೨

ವಿಕ್ರಮೋತ್ಸವಕೆ ತ್ರಿವಿಕ್ರಮ ಮೂರ್ತಿ ಪ ।
ರಾಕ್ರಮನಿಂ ತರಿಸೀ
ಚಕ್ರಿಯನೆ ನಿಲಿಸ್ಯುತ್ಸವದಿ ಸುರಪನ ।
ವಿಕ್ರಮದ ಆಳ್ಬಂದು ಕರೆಯಲು ।
ಉತ್ತಮಣ ತೊರೆದವರ ಕಳುಹುತ ।
ವಿಕ್ರಮನ ಪದಕೆರಗಿನಿಂದ ೩

ನಿಗಮವೇದ್ಯನ ಬಗೆಬಗೆಯಲಿ ಸಂಸ್ಕೃತ ।
ಮಿಗಿಲು ಪ್ರಾಕೃತ ಪದ್ಯದೀ
ಸುಗುಣಮಣಿಮಯ ಮಾಲೆಗಳ ಪ ।
ನ್ನಗನಗೇಶನ ಕೊರಳೊಳರ್ಪಿಸಿ ।

ಚಿಗಿ ಚಿಗಿದು ಆನಂದದಿಂದಲಿ ।
ದೃಗು ಜಲದಿ ಹರಿಪದವ ತೊಳೆದ ೪

ಸುರನದಿ ನದಿಧರರಾದಿ ಸ್ಥಾಪಿಸುತಲ್ಲಿ ।
ಎರಡೆರಡೊಂದು ವೃಂದಾವನವಾ ।
ಸ್ಥಿರಪಡಿಸಿ ಶ್ರೀವ್ಯಾಸ ಸಮ್ಮುಖ ।
ವರ ನರೇಯಣ ಭೂತಬಲದಲಿ
ಇರಿಸಿ ಗುರು ಗೋವಿಂದ ವಿಠಲನ ।
ನಿರುತ ಧ್ಯಾನಾನಂದಮಗ್ನ ೫

೩೮೪

ಸಾಧನಕೆ ಸಾಧನಾಖ್ಯಾನ ವೃಂದಾವನಾ ಪ

ಸೋದೆ ಪುರವಾಸಿ ಶ್ರೀ ವಾದಿರಾಜರ ಕರುಣಾ ಅ.ಪ.

ಕುರುಡು ಶುನಕವು ತಾನು ನೆರೆದ ಸಂತೆಗೆ ಬಂದು
ಸರಕು ವಿನಿಮಯ ಮಾಡಿ ಮರಳಿ ಬರುತಿರುವಾ ।
ಪರಿಯ ಮಾಡದಲೆನ್ನ ಇರುವ ಸ್ವಪ್ನದಿ ತಿಳುಹಿ
ಕರುಣಿಸಿಹೆ ಮಹ ಮಹಿಮ ಗುರು ಸಾರ್ವಭೌಮಾ ೧

ಕಾರ್ಯ ವೃಂದಾವನಚಾರ್ಯರೊಡೆವೆರಸುತ್ತ
ಧೈರ್ಯದಿಂದಲಿ ಗೈಸಿ ಭಾರ್ಯಸಹಕೃತದಿ ।
ಪ್ರೇರ್ಯ ಪ್ರೇರಕ ಹೃದಯ ಧಾರ್ಯಮಾರ್ಗವನರುಪಿ
ಸ್ಥೈರ್ಯವನು ಎನಗಿತ್ತ ಆರ್ಯ್ ಲಾತವ್ಯಾ ೨

ಜೀವ ಅಸ್ವಾತಂತ್ರ ದೇವ ನಿಜ ಸ್ವಾತಂತ್ರ
ನೀವೆ ಎಮ್ಮೊಳು ನಿಂತು ಸರ್ವ ಕಾರ್ಯಗಳಾ ।
ಓವಿ ಗೈವುತ ದೇವ ದೇವ ಹಯ ಮೊಗ ಗುರು
ಗೋವಿಂದ ವಿಠಲಂಗಿತ್ತು ತಾವಕನ ಸಲಹುವುದು ೩

೩೮೫

ಸೋದೆ ರಾಜರ ಭಜಿಸೋ । ಮಾನವ ನೀನು
ವಾದಿರಾಜರ ಪೂಜಿಸೋ ಪ

ಮೋದ ತೀರ್ಥರ ಮ । ತೋದ್ಧಾರ ಮಾಡಿದ ಧೀರ
ಸಾಧು ಹೃದ್ವನ ಜಾಪ್ತ । ಬುಧ ಜನವಂದ್ಯರ ಅ.ಪ.

ಶಾರ್ವರಿ ವತ್ಸರದೀ । ಜನಿಸಿ ಗೌರಿ
ಗರ್ಭ ಸುಧಾಂಬುಧಿಲೀ ॥
ಪುರಬಾಹ್ಯ ಪುಟ್ಟಿದ । ಕಾರಣದಿಂದಲಿ
ವರಯತಿ ವಾಗೀಶ । ಕರಜನೆನಿಸಿ ಮೆರೆದ ೧

ವೇದಾದಿ ಶಾಸ್ತ್ರಗಳಾ । ಓದಲು ಹಂಪೆ
ಸಾಧು ವ್ಯಾಸರ ಬಳಿಗೇ ॥
ಮೋದದಿ ಬಂದು ಮಧ್ವಾಗಮ ಪಠಿಸುತ್ತ
ವೇದ ವಿನುತ ಸಿರಿ ಹರಿಯ ಪೂಜಿಸಿದ ೨

ವಾಲಿ ಭಂಡಾರವನೂ । ಶೋಧಿಸೆ ಅಲ್ಲಿ
ಶೀಲ ಇನಜಾರ್ಚಿಸಿದ ॥
ಲೀಲ ವಿಗ್ರಹ ರಾಮ । ವಿಠಲ ಮೂರ್ತಿಗಳನ್ನ
ಕೋಲಾಹಲದಿ ತಂದು । ಭಾಳ ಪೂಜಿಸಿದ ೩

ವ್ಯಾಸರಾಜಾರ್ಚಿತನಾ । ದೇವನವೇದ
ವ್ಯಾಸರಿಂದಲಿ ಗಳಿಸಿದಾ ।
ವ್ಯಾಸಮುಷ್ಟಿಕೆಯ ವಿ । ಶ್ವಾಸದಿಂದಲಿ ಪೊಂದಿ
ಶ್ರೀಶ ಉಡುಪಿನ ಕೃಷ್ಣ । ವಾಸ ಸ್ಥಾನಕೆ ಬಂದ ೪

ಕವಿಕುಲ ಸಭೆಯೊಳಗೇ । ಪೂಣೆಯ ಪುರದಿ
ನವರಸಲಂಕಾರದೀ ॥

ಕವನ ರಚಿಸಿ ರುಕ್ಮಿ । ಣೀಶ ವಿಜಯ ಗ್ರಂಥ
ಕವಿ ಕುಲೋತ್ತಂಸ । ತಾನೆನಿಸುತ್ತ ಮೆರೆದಂಥ ೫

ಪಂಢರಿ ಪುರ ಮಾರ್ಗವ । ಸವೆಸುತ ಬರೆ
ಮುಂಡು ಸೈನಿಕರ್ ಬರಲೂ ॥
ಪುಂಡಲೀಕಗೆ ವರದ । ಪುಂಡರೀಕಾಕ್ಷನ
ಹಿಂಡು ಶ್ವೇತಾಶ್ವಗಳಿಂದ ವಾರಿಸಿದಾ ೬

ಹಯಗ್ರೀವ ಪದಾರಾಧಕಾ । ಶಿರದಿ ಧೃತ
ದಿವ್ಯ ಹರಿವಾಣ ಪೂರಣವ ॥
ಹಯವದನನು ಬಂದು । ಜಯ ಘೋಷದಲಿ ಮೆದ್ದು
ದಯ ದೃಷ್ಟಿ ತೋರಿದ । ಭಾವಿ ಮಾರುತರ ೭

ಶ್ರೀಶನ್ನ ಪ್ರಯಾಗದಿ । ಚಿಂತಿಸುತಿರೆ
ಕೇಶವ ನೊಲಿಯುತಲೀ ॥
ವಾಸವಾನುಜ ಶ್ರೀಶ । ವ್ಯಾಸರದಯ ಪೊಂದಿ
ದಶಮತಿಗಳ ಪಾದ । ಬಿಸಜವ ಕಂಡರ ೮

ವಾದಿರಾಜರ ಶಿಷ್ಯನು । ಪಂಡಿತನೆಂಬ
ಮದದಿಂದ ಗರ್ವಿತನೂ ॥
ಸಾಧಿಸೆ ಕುಟಿಲವ । ಸೋದೆ ರಾಜರಲ್ಲಿ
ಪೋದ ಶಾಪದಿ ಅವ । ಬೊಮ್ಮ ರಕ್ಕಸನಾಗೀ ೯

ಸಕಲ ಶಿಷ್ಯರವೆರಸಿ । ರಾಜರು ಬರೆ
ರಕ್ಕಸ ಕರೆದ ವಾದಕ್ಕೇ ॥
'ಅಕಾಮವೈ' ಕೋ ನಸ್ನಾತನೆಂದೆನೆ ಅವ
ಕಾಕು ರಂಡೆಯ ಪುತ್ರ । ತೋಕ ನೀನೆಂದ ೧೦

ಮೇನೆ ಪಾಲಕಿ ಹೊರುವ । ನರೆಯಣ ಭೂತ
ಯಾನ ವಾಹಕನಾದನೂ ॥

ಆನೆಂತು ಬಣ್ಣಿಪೆ । ಮುನಿಕುಲ ದಿನಮಣಿ
ವೇಣುಗಾನ ಪ್ರಿಯ । ಕೃಷ್ಣ ಸೇವಕರಾ ೧೧

ಆ ಮಹ ನೇತ್ರಾವತಿ । ಸಂಗಮವೆನ್ನ
ಕೌಮಾರ ನದಿ ಸನಿಯದಿ ॥
ಈ ಮಹಾ ಮಹಿಮರು । ಸಾಸಿರ ಲಿಂಗದ
ನೇಮದ ಪೂಜೆಗೆ । ನಿರ್ಮಿಸಿದರು ತೀರ್ಥ ೧೨

ಋಣದಿ ಪೀಡಿತ ದ್ವಿಜನು । ನತಿಸೆ ಇವರ
ಸ್ವರ್ಣ ವೃಷ್ಟಿಯ ಪಡೆದ ॥
ಅರ್ಣ ಸಂಪ್ರತಿ ಪಾದ್ಯ । ಸ್ವರ್ಣ ಗರ್ಭನ ಪಿತ
ಪೂರ್ಣಗೆ ಸುಪ್ರೀಯ । ಗಸದಳವೇನಿದು ೧೩

ಗರಳ ಮಿಶ್ರಿತ ನೈವೇದ್ಯ । ಪಾಚಕತೆರೆ
ಹರಿಗೆ ಸಮರ್ಪಿಸಿದಾ ॥
ಸಿರಿಪತಿ ಕಂಠದೋಳ್ । ಕರಿಯ ವರ್ಣವ ಕಂಡು
ಅರಿತು ಸೇವಿಸಿದನು । ಹರಿಯ ಪ್ರಸಾದವ ೧೪

ರಜತ ಪುರಿಯ ಮಠದಿ । ಪರ್ಯಾಯದ
ಪೂಜೆಯ ವಿಸ್ತರಿಸೀ ॥
ಅಜಜನಕನ ದಿವ್ಯ । ಭಜನೆ ಪದ್ಧತಿಗಳ
ಗಜಪಾಲ ಸಿರಿ ಕೃಷ್ಣ । ನಂಘ್ರಿಗರ್ಪಿಸಿದ ೧೫

ಅರಿಯು ಮುತ್ತಲು ಪುರವ । ಸೋದಾಧಿಪ
ಮೊರೆಯ ಹೊಕ್ಕನು ರಾಜರ ॥
ಭರದಿ ನಾರಾಯಣ । ವರ ಭೂತನನ ಕಳುಹಿ
ಅರಿಭಯ ವಾರಿಸಿ । ಪೊರೆದ ನಾಯಕನಾ ೧೬

ಸೋದೆಯಲ್ಲೋರ್ವ ಶೈವ । ಬಲುಗರ್ವದಿ
ವಾದ ಮಾಡುತಲವನೂ ॥

ವೇದ ಮತವ ಬಲು । ವಿಧದಿ ದೂಷಿಸಿ ಕಡು
ಬಾಧೆ ಪಡಿಸುತಲಿದ್ದ । ಬುಧಜನ ವೃಂದವ ೧೭

ಬಿಜಯ ಗೈಯ್ಯುತ ಅಲ್ಲಿಗೆ । ಗುರು ರಾಜರು
ವಿಜಯ ಉತ್ಸವ ರಚಿಸೇ ॥
ನಿಜ ಭೃತ್ಯ ಭಾವದಿ । ವಿಜಯ ಪತ್ರವನಿತ್ತು
ನಿಜ ಬಿರುದುಗಳವರ । ಪದಕೆ ಅರ್ಪಿಸಿದ ೧೮

ತ್ರಿವಿಕ್ರಮಾಲಯ ಸ್ಥಾಪನೆ । ರಚಿಸಿ ಮೆರೆದ
ದಿವ್ಯ ಶಾಲೀವಾಹನ್ನ ॥
ಸಾವಿರ್ರೈನೂರ್ನಾಲ್ಕು । ಚಿತ್ರ ಭಾನುವಿನಲ್ಲಿ
ರವಿಯು ಮೇಷಾರ್ಧದಿ । ಚರಿಸುವ ದಿನದಿ ೧೯

ರಥದಿಮೂರ್ತಿಯ ಸೇರಿಸಿ । ಬದರಿಯಿಂದ
ಭೂತ ನರೆಯಣ ಬರುತಿರೆ ॥
ಪಥದಿ ರಕ್ಕಸ ಸೆಣೆಸೆ । ಪೃಥುಕು ಆಯುಧ ಬಿಟ್ಟು
ರಥದ ಗಾಲಿಯಲಿಂದ । ಹತಗೈದನವನ ೨೦

ವೇದಾರ್ಥ ಬೃಂಹಿತದ । ಬಹು ಗ್ರಂಥಗಳ್
ಪದ ಪದ್ಯ ಸೂಳ್ವಾದಿಯ ॥
ಸೋದೆ ಮಠದಿ ನಿಂದು । ವಾದಿರಾಜರು ರಚಿಸಿ
ಬುಧರಿಗಾನಂದವ । ಮುದದಿ ಪಾಲಿಸಿದ ೨೧

ತ್ರಿವಿಕ್ರಮ ರಥೋತ್ಸವದಿ । ಕರೆಯಲು ಬಂದ
ದಿವಿರಾಜ ಜನರು ಕಳುಹಿ ॥
ಭವ್ಯ ಸು ಪಂಚ ವೃಂದಾವನಗಳ ರಚಿಸಿ
ದಿವಿರಾಜ ಗರುಹಿದರ್ ತಮ್ಮಯ ಬರವನು ೨೨

ಶಾರ್ವರಿ ವತ್ಸರದೀ । ಫಾಲ್ಗುಣ ವದ್ಯ
ಮೂರನೆ ದಿವಸದಲ್ಲೀ ॥

ವರ ವೃಂದಾವನ ಪೊಕ್ಕು । ಗುರು ಗೋವಿಂದ ವಿಠಲನ
ನಿರುತ ಧ್ಯಾನದೊಳಲ್ಲಿ । ವರವ ಪಾಲಿಸುತಿಹರ ೨೩

೩೮೬

ಹಯ ಮುಖ ಪದಾಬ್ಜ ಮಧುಪಾ । ದುರ್ಭವ
ಭಯವ ತಾರಿಸು ಮುನಿಪಾ ಪ

ವ್ರಯವಾಯಿತು ಮಮ । ಆಯುವು ಎಲ್ಲವು
ಪ್ರಿಯ ನೀನಲ್ಲವೆ । ಭಯ ಪರಿಹರಿಸೈ ಅ.ಪ.

ರಜತ ಪುರಿಲಿ ನಿಂದೂ । ವಿಧಿಸಿದಿ
ಅಜಪಿತ ಭಜನೆಯ ನಂದೂ ।
ಋಜಗಣದಲಿ ಬಹು । ರಾಜಿಪ ಗುರುವೇ
ಅಜನ ಸುಪದವಿಗೆ । ನಿಜದಿ ಬರುವ ಯತಿ ೧

ಸೋದೆ ಪುರದಿ ವಾಸಾ । ಭಕ್ತರ
ಽಗಾಧ ದೋಷ ನಾಶಾ ॥
ವಾದಿ ಜನರ ಮದ । ಛೇದನ ದಶಮತಿ
ಬೋಧಪ್ರೀಯ ಗುರು । ಮೋದವ ಪಾಲಿಸು ೨

ಪಂಚ ವೃಂದಾವನವಾ । ರಚಿಸುತ
ಪಂಚರೂಪಿ ಹರಿಯಾ ॥
ಸಂಚಿಂತಿಸಿ ಭಕ್ತ । ವಾಂಛಿತ ಗರೆಯಲು
ಸಂಚುಗೊಳಿಸಿ ಪ್ರ । ಪಂಚವ ತೊರೆದೇ ೩

ಅಮರೇಂದ್ರ ನಾಳ್ವರಲೂ । ತ್ರೈವಿ
ಕ್ರಮ ದುತ್ಸವದೋಳೂ ॥
ಸಮಯವಲ್ಲವಿದು । ನಿಮಗೆಂದೆನುತಲಿ
ಕ್ರಮಿಸುವ ತೆರ ನೀ । ಮಾಡಿದೆ ಯತಿವರ ೪

ಪೂವಿಲ್ಲನ ಪಿತನಾ । ಗುರು
ಗೋವಿಂದ ವಿಠ್ಠಲನಾ ॥
ಭಾವದಿ ಕಾಣುತ ಮೈಮರೆದ್ಹಿಗ್ಗುವ
ಈ ವಿಧ ಸುಖ ಯಾವಾಗಲೂ ಕಾಣುವ ೫

३೮೭

ಶ್ರೀ ರಘೋತ್ತಮತೀರ್ಥರು

ನಮೋ ದೈಶಿಕಾರ್ಯ । ರಘೂತ್ತಮ ಪದ
ನಮೋ ದೇವತಾತ್ಮ ಪ

ವಿಮಲ ರಾಮ ಸನ್ಮಹಿಮ ಭಜಕಗುರು
ನಮೋ ನಮೋ ಪೂತಾತ್ಮ ಅ.ಪ.

ನಾರಿ ಚೋರ ಸಂಹಾರ ಪದಾಂಬುಜ ಆರಾಧನ ದೀಕ್ಷ
ಸಾರ ಸುರಸ ಗ್ರಂಥಾರಾಧಿಸೆ ಬಹು ಚಾರು ವ್ಯಾಖ್ಯ ಕೃತ ದೀಕ್ಷ
ಭಾರಿ ಗ್ರಂಥ ಬೃಹದಾರಣ್ಯ ವಿವರಣ ನ್ಯಾಯ ಗ್ರಂಥಲಕ್ಷ್ಯ
ಸಾರ ತತ್ವಪ್ರಭೆ ಚಾರುಗೀತ ಪ್ರಭೆ ತೋರ್ದ ಭಾವದಕ್ಷ ೧

ಭ್ರಾಮಕ ಜನ ಸದ್ಭಾವದಿ ಮೆರೆವ ಸುಭಾವ ಬೋಧ ಕಾರ್ಯ
ತೀವ್ರ ಮನದ ದುರ್ಭಾವ ಕಳೆದು ಹರಿಭಾವ ಈಯೊ ವರ್ಯ
ಭಾವ ಕೊಲಿವ ಕರ್ಮಾವಳಿಗಲ್ಲೆನೆ ಓವಿ ಪೇಳ್ದ ದಾಸಾರ್ಯ
ಕಾವ ಕರುಣಿ ಹರಿಭಾವದಿ ನಿಲ್ಲುವ ಭಾವ ಬೋಧಕೃತ ಆರ್ಯಾ ೨

ಗುರುಗಳೆನಿಪ ರಘುವರ್ಯಕರಾಬ್ಜಜ ಶರಣ ಕಲ್ಪವೃಕ್ಷ
ವಿರಚಿಸೆ ನ್ಯಾಸವ ವರ ಸು ಅಂಗದೊಳು ಸುರರ ಕಾಂಬದಕ್ಷ
ಗುರು ತೈಜಸ ಒರಯ ನ್ಯಾಯ ಸುಧೆ ಪೇಳ್ದ ಕೋಣಾಧ್ಯಕ್ಷ
ಪರಿಪರಿ ಪ್ರಾರ್ಥಿಪೆ ಗುರು ಗೋವಿಂದ ವಿಠಲನ ಚರಣದಿ ದೀಕ್ಷ ३

೩೮೮

ರಘುವರ್ಯ ಕರಜಾತ ಶ್ರೀ । ರಘೋತ್ತಮ ತೀರ್ಥಾ ಪ

ಅಘಹರ ಶ್ರೀ ರಾಮ ಪದ ಭಜಕ ನೇಮಾ ಅ.ಪ.

ಪ್ರವಚನಾಚಾರ್ಯರಿಂ । ದವಮಾನ ತಡೆಯದಲೆ
ಸವನ ಮೂರರ ಮೇಲೆ । ಪವಡಿಸಿರೆ ತಾನೂ ।
ಪವನ ಪಿತ ತೈಜಸನು । ಗುರುವರರ ರೂಪಿನಲಿ
ಪ್ರವಚಿಸೆನೆ ನ್ಯಾಯ ಸುಧೆ । ಪ್ರವಚಿಸಿದ ಮಹಿಮಾ ೧

ಪ್ರಮೆಯ ದೀಪಿಕೆ ತತ್ವ । ಅಮಮ ಬೃಹದಾರಣ್ಯ
ಸುಮನ ವ್ಯಾಹರಣೆಯನು । ನೀ ಮಾಡಿ ಮುದದೀ ।
ಕಮಲನಾಭನ ಮಹಿಮೆ । ಅಮೃತವನು ತೆಗೆಯುತಲಿ
ಸುಮನಸರಿಗುಣಿಸಿದೆಯೋ । ರಾಮ ಪದ ಭಜಕಾ ೨

ತತುವನ್ಯಾಸವ ಮಾಡೆ । ತತ್ವ ದೇವತೆಗಳನು
ತತುತತೂ ರೂಪದಲಿ । ಸತತ ನೋಡುವನೇ ।
ಕ್ಷಿತಿಪತಿ ಶ್ರೀ ಗುರೂ । ಗೋವಿಂದ ವಿಠ್ಠಲನೆ
ಉತ್ತಮೋತ್ತಮನೆನುತ । ಬಹು ಮೆರೆಸಿದಾತ ೩

೩೮೯

ಶ್ರೀವೇದವ್ಯಾಸತೀರ್ಥರು

ನಮಿಸುವೆನು ನಮಿಸುವೆನು ಮುನಿವರ್ಯರೇ ಪ

ಅಮಮ ನಿಮ್ಮಯ ಮಹಿಮೆಯ ಪೊಗಳಲೆನ್ನಳವೇ ಅ.ಪ.

ಭಾವ ಬೋಧಾರ್ಯ ವಿಮಲ ಸತ್ಕರಜಾತ
ಭಾವಿ ಬೊಮ್ಮನ ಮತದಿ ಪೂರ್ಣ ವಿಖ್ಯಾತ

ಧಾವಿಸಿ ನಿಮ್ಮಡಿಗೆ ಓವಿ ನಮಿಪರ ತ್ರಾತ
ಕಾವುದೆಮ್ಮನು ಬಿಡದೆ ಪಾವಮಾನಿಯ ಪ್ರೀತ ೧

ಇಂದ್ರಗ ವರಜನಾಮ ಮಂದವಾಹಿನಿ ತಟದಿ
ಚೆಂದುಳ್ಳ ಮಹತೆನಿಪ ವೃಂದಾವನದೊಳು ।
ಇಂದಿರೇ ರಮಣ ಶಿರಿ ರಾಮಚಂದ್ರನ ಮನದಿ
ಛಂದಾಗಿ ಧ್ಯಾನಿಸುತ ನಿಂದ ಯತಿವರ್ಯಾ ೨

ಮೋದ ಮುನಿ ಸದ್ಭಾವ ಬೋಧಿಸುತ ಶಿಷ್ಯರಿಗೆ
ವೇದ ವ್ಯಾಸರ ಪ್ರೀತಿ ಆದರದಿ ಗಳಿಸೀ ।
ಮೋದ ದಾಯಕನೆನಿಸಿ ಸಾಧುಗಳ ಸಲಹುತ್ತ
ಸಾಧಿಸಿದೆ ಸತ್ಕೀರ್ತಿ ರಾಜ ಸನ್ಮಾನ್ಯ ೩

ಜೀಮೂತ ಸತ್ಕ್ಷೇತ್ರ ಶೋಭಿಸುವ ವಿಖ್ಯಾತ
ಆ ಮಾಯಿ ಮತ ತಿಮಿರ ಹರಿಚಕ್ಷುಜಾತ ।
ಪಾಮರನು ನಾನಿಮ್ಮ ಚರಣಂಗಳಭಿನಮಿಪೆ
ಶ್ರೀ ಮನೋಹರ ಪಾದ ನೀ ತೋರೊ ಮುನಿಪ ೪

ಬ್ರಹ್ಮಚರ್ಯಾಖ್ಯ ಮಹ ಮಹಿಮೆ ಪರಿಕಿಸಲು ।
ಸನ್ಮನದಿ ನೃಪನೆನ್ನ ನಿಮ್ಮ ಕೌಪೀನವಾ ।
ಒಮ್ಮನದಿ ಅಗ್ನಿಗಿಡೆ ದಹಿಸಲಾರದೆ ಪೋದ
ಸನ್ಮಹಿಮ ವೇದೇಶ ಸನ್ನುತನೆ ಪೊರೆಯೋ ೫

ಹರಿಭಕ್ತ ಸುರತರುವೆ ವರ ಸು ಚಿಂತಾಮಣಿಯೆ
ಪರಮ ಸೇವಾಸಕ್ತ ಶರಣ ಸುರಧೇನು ।
ಹರಿಯ ಸರ್ವೋತ್ತಮತೆ ಸ್ಥಿರ ಪಡಿಸೆ ಸಂಚರಿಸಿ
ಮೆರೆದ ವೇದವ್ಯಾಸ ತೀರ್ಥ ಸದ್ದಭಿಧಾ ೬

ಘನಗಿರಿ ನರಹರಿಯ ಪದವನುಜ ಸಂಜಾತ
ಮಿನುಗುತಿಹ ವಾಮನಾ ನದಿಯ ಸಂಗಮದಿ

ಗುಣಪೂರ್ಣನಾದ ಗುರು ಗೋವಿಂದ ವಿಠ್ಠಲನ ।
ಮನದಿ ಧ್ಯಾನಾಸಕ್ತ ಪೊರೆಮಹ ವಿರಕ್ತ ೭

೩೯೦

ಶ್ರೀ ಶ್ರೀ ರಾಘವೇಂದ್ರತೀರ್ಥರು

ಆನೆಂತು ತುತಿಪೆ ನಿನ್ನ – ಮಂಚಾಲಿ ರನ್ನ ಪ

ಆನೆಂತು ತುತಿಪೆ ನಾ – ಮಾನಮೇಯದಿನಿಪುಣ
ಗಾನ ವಿಶಾರದ – ಶ್ರೀನಿವಾಸನ ದೂತ ಅ.ಪ.

ಕೃತಯುಗದಲಿ ನೀನು । ದಿತಿಜ ವಂಶದಿ ಬಂದು
ವಿತತ ವಿಶ್ವಾಧಾರ । ಕೃತಿಪತಿಯ ತುತಿಸಿ ಮು
ಕುತಿ ಪಥಕೆ ಸತ್ತರ ತಮ ಪಂಚಭೇದ
ಮತಿಯೆ ಸಾರ್ಥಕವೆಂದು । ಹಿತದಿಂದ ಸಾಧಿಸೆ
ಮತಿಭ್ರಾಂತನಾದಂಥ । ದಿತಿಜ ಗುರುವು ತಾನು
ಖತಿಯಿಂದ ನೋಡುತ್ತಲೀ ॥ ಬಾಲಕರೆಲ್ಲ
ಹತಭಾಗ್ಯರೆನ್ನುತ್ತಲೀ । ನೃಪಗೆ ಪೇಳೆ
ಖತಿ ನಿನ್ನೊಳ್ ತೋರುತ್ತಲೀ । ದಂಡಿಸೆ ನಿನ್ನ
ಪಿತಗೆ ಬುದ್ಧಿಯ ಪೇಳ್ದ । ಅತುಳ ಪರಾಕ್ರಮೀ ೧

ಕಡು ವೇಗದಲಿ ಬಂದ । ಶಂಡ ಮರ್ಕನ ಕಳುಹಿ
ಒಡ ಹುಟ್ಟಿದವನನ । ದಾಡೆದಂತಗಳಿಂದ
ಬಿಡದೆ ಶೀಳಿದ ಹರಿಯ । ದೃಢದಿ ಪೂಜಿಪೆ ನೀನು
ಬಿಡು ಬಿಡು ಈ ಮತಿ । ಮೃಡನೆ ನಮ್ಮಯ ದೇವ
ಪುಡುಕಿ ಆ ಹರಿಯನ್ನೆ । ಖಡುಗದಿಂದಲಿ ಅವನ
ಕಡಿದು ಹಾಕುವೆನೆನ್ನುತ್ತ ॥ ಕರೆದು ನಿನ್ನ
ಕಡು ಭಾಗ್ಯ ಕೋ ಎನ್ನುತ್ತ । ಪೇಳಲು ನೀನು

ಮಿಡುಕದೆ ಬೇಡೆನ್ನುತ್ತ । ಬುದ್ಧಿಯ ಮಾತ
ದೃಢದಿ ಪಿತಗೆ ಪೇಳ್ದೆ । ಬಿಡೆನು ಹರಿಯ ಎನ್ನುತ್ತ ೨

ಹಿರಣ್ಯ ಕಶ್ಯಿಪು ನೋಡಿ । ವರಣ ಬೇರೆಯಾಗಿ
ಕರೆಸಿ ಕ್ರೂರಿಗಳನ್ನ । ಪರಿಪರಿ ವಿಧದಿಂದ
ತರಳನ್ನ ಹಿಂಸಿಸೆ । ಮರಳಿ ಜೀವಿಸುವಂಥ
ವರ ತನಯನ ಕಂಡು । ಗರಳವ ಕುಡಿಸಲು
ಗರಕೆ ಸಹೋದರಿ । ವರಲಕ್ಷ್ಮಿ ಮಾತೆಯ
ಸ್ಮರಿಸಿ ಜೀವಿಸೆ ಅವನೂ ॥ ರಕ್ಕಸ ನೋಡಿ
ಭರದಿ ಖಡ್ಗವ ಸೆಳೆದೂ । ತೋರೊ ಕಂಬದಿ
ಹರಿಯ ಎಂದು ಒದೆದೂ । ನಿಲ್ಲಲು ಪಿತಗೆ
ನರಹರಿ ರೂಪವ ತೋರ್ದೆ । ಕ್ರೂರನ ಜರಿದೂ ೩

ದಿಟ್ಟ ತರಳನ ಸಲಹೆ । ಗಟ್ಟಿ ಕಂಬದಿ ಬರೆ
ಛಟ ಛಟ ಶಬ್ದಾ । ಜಾಂಡ ಕಟಹ ಬಿಚ್ಚೆ
ಕಠಿಣ ಖಳನ ಪಿಡಿದು । ಜಠರವ ಭೇದಿಸಿ
ಹಠದಿ ಕರುಳಿನ ಮಾಲೆ । ಕಂಠದಿ ಧರಿಸುತ್ತ
ತೃಟಿಯು ಬಿಡದೆ ತನ್ನ । ಹಠದಿ ಭಜಿಪನಿನ್ನ
ಸ್ಫುಟದಿ ಕರದೋಳತ್ತಿದ ॥ ಮುದ್ದಿಸಿ ಬಲು
ದಿಟ ಭಟ ಎನೆ ಎನಿಸೀದ । ಮಗನ ಮಾತು
ದಿಟವ ಜಗಕೆ ತೋರಿದ । ವೆಂಕಟನ್ನ
ಪಟುತರ ವ್ಯಾಪ್ತಿಯ । ಮಹಿಮೆ ಸ್ಫುಟದಿ ತೋರ್ದ ೪

ದ್ವಿತಿಯುಗದಲಿ ನೀನು । ಭ್ರಾತ ದಶಕಂಠನ
ಕೃತಿಗೆ ಮೆಚ್ಚದೆ ಬಲು । ಪತಿವ್ರತೆ ಸೀತೆಯಾ
ಕೃತಿಯನೆ ಕೊಂಡ್ಹೋಗಿ । ವಿತತ ಮಹಿಮ ದಶ
ರಥ ಸುತಗೆ ಕೊಡು ಎನೆ । ಹಿತವಾಕ್ಯ ಪೇಳಲು
ಮತಿ ಹೀನ ದಶಶಿರ । ದೂತ ಹನುಮನ್ನ
ವ್ಯಥೆಯ ಪಡಿಸೆ ಪೋಗಲೂ ॥ ಖತಿಯಲಿ ಲಂಕೆ
ಹುತವಹನಿಗೆ ಈಯಲೂ । ವಾತನ ನೀ

ಪ್ರೀತಿಯಲ್ಲಾಶ್ರಯಿಸಲೂ । ಲಂಕೆಯ ಪುರ
ನೀತಿಯಿಂದಲಿ ಆಳ್ದ । ಖ್ಯಾತ ದೂತನೆನಿಸಲೂ ೫

ದ್ವಾಪರದೊಳು ಪ್ರ । ತೀಪನ ಸುತನಾಗಿ
ಆ ಪರಮ ಕಲಿಯ । ರೂಪನಾದ ಕುರು
ಭೂಪನೀಗೆ ಋಣ । ರೂಪವಾದ ಸೇವೆ
ಭಾಪೆಂದು ಸಲ್ಲಿಸಿ । ಪಾಪಿ ನಿಕರವನ್ನು
ಕೋಪದಿಂಭೇದಿಸಿ । ಶ್ರೀ ಪತಿಯೊಲಿ ಮೇಲಿ
ಭೂಪ ಭೀಮನ ಪಾದದಿ ॥ ವಪುವ ತ್ಯಜಿಸಿ
ಕಾಪಾಡೆನ್ನ ದಯದಿ । ಕಲಿಯಲಿ ಯತಿ
ರೂಪತಾಳೆನೆ ಮುದದಿ । ಕೈಕೊಳ್ಳುತ
ಶ್ರೀ ಪಾದರಾಯರ । ಶ್ರೀ ಪಾದ ಭಜಿಸಿದಿ ೬

ಶೇಷಾವೇಶದಿ ಪುಟ್ಟಿ । ವ್ಯಾಸ ತೀರ್ಥರಾಗಿ
ಮೀಸಲಾದ ಮತ । ದಾಶಯಗಳನೆಲ್ಲ
ಸೂಸಿ ಪೇಳುತ್ತಲಿ । ಶೇಷಾಚಲದಿ ಶ್ರೀನಿ
ವಾಸನ ದ್ವಾದಶ । ವರ್ಷ ಸೇವಿಸಿ ನೃಪ
ತೀಶನ ಕುಹುಯೋಗ । ಲೇಸಾಗಿ ಕಳೆಯುತ
ಆಶುಗತಿಯ ತತ್ವ ಮತವ ॥ ಸ್ಥಾಪಿಸಿ ಬಲು
ಮೀಸಲು ತರ್ಕತಾಂಡವ । ನ್ಯಾಯಾಮೃತ
ಭೂಸುರರ್ಗಿತ್ತು ನಾಯಕರ । ಪುರಂದರ
ದಾಸರಾಯರ ಮಾಡ್ದ । ದಾಸ ಪಂಥೋದ್ಧಾರ ೭

ತುಂಗ ಮಹಿಮ ಶ್ರೀ । ರಂಗನ ಸೇವೆಯ
ಹಿಂಗದೆ ಮಾಡಲು । ಅಂಗಜನ್ನೋಡಿಸಿ
ಸಂಗ ರಹಿತ ಯತಿ । ಪುಂಗ ಸುಧೀಂದ್ರರ
ಮಂಗಳ ಚರಣ ಕಮ । ಲಂಗಳಾಶ್ರಯಿಸಿ ದೇ
ಶಂಗಳ ಚರಿಸುತ್ತ । ಭಂಗಿಸಿ ಮಾಯ್ಗಳ ವಿ
ಹಂಗ ವಾಹನ ಶ್ರೇಷ್ಠನೂ ॥ ಎಂದೆನಿಸುತ್ತ
ತುಂಗ ತೀರದಲಿ ನೀನೂ । ರಾಮರ ಪಾದ

ಭೃಂಗನೆಂದೆನಿಸಿ ಇನ್ನೂ । ವ್ಯಾಖ್ಯಾನದಿ
ಶೃಂಗರಿಸಿದೆ ನಿನ್ನ । ಬಿಂಬ ಮೂರುತಿಯನ್ನೂ ೮

ಎರಡು ಮೂರನೆ ಮಾಸ । ಎರಡನೆ ದಿನವಸಿತ
ವರಸು ವೃಂದಾವನ । ಸೇರಿ ಅಲ್ಲಿರುತಲಿ
ನಿರುತ ನಿಮ್ಮಯ ಚರಣ । ಸೇವಿಪ ಭಕುತರ
ದುರಿತ ದುಷ್ಕೃತವೆಲ್ಲ ಕರಿಯು । ಸಿಂಹನ ಕಂಡ
ತೆರನು ಮಾಳ್ಪಿರಿ ನೀವು । ನರರ ಮನೋರಥ
ಧರೆಯೊಳು ಪಾಲಿಸುತ್ತ ॥ ಭವ ವನಧಿಯ
ತರಣೋಪಾಯವ ತೋರುತ್ತ । ಪವನಾಂತಸ್ಥ
ಗುರುಗೋವಿಂದ ವಿಠಲನೆಂಬಾತ । ಗುಣ ಪೂರ್ಣ
ಸರ್ವೋತ್ತಮನೆನ್ನುತ್ತ । ಕೀರ್ತಿಪೆ ನೀನು ನಿರುತ ೯

೩೯೧

ಗುರುರಾಯರ ನಂಬಿರೋ । ರಾಘವೇಂದ್ರ
ಗುರುರಾಯರ ನಂಬಿರೋ ಪ

ಗುರುರಾಯರ ನಂಬಿ । ದುರಿತ ದುಷ್ಕೃತ ಹರಿಸಿ
ಪುರುಷಾರ್ಥ ಪರಮವ ಕರಗತ ಕೈಗೊಳ್ಳಿ ಅ.ಪ.

ಪರಿಮಳೇತ್ಯಾದಿ ಸಂದ್ಗ್ರಂಥ । ವಿರಚಿಸಿ
ವರಮೋಕ್ಷ ಪ್ರದವೆನಿಸುವಂಥ ।
ಎರಡೆರಡ್ಹತ್ತು ಮತ್ತೆ । ಎರಡೈದು ಗ್ರಂಥವ
ಧರಣಿ ಸುರರಿಗಿತ್ತು । ಕರುಣವ ತೋರಿದ ೧

ರಾಮಕೃಷ್ಣ ನರಹರೀ । ವೇದವ್ಯಾಸ
ಮಾಮನೋಹರ ವೃಂದಾವನದಿ
ವಾಮಾಂಗ ಎನಿಸೀಹ । ಶ್ರೀಮಹಿಳೆಸಹಿತಾಗಿ
ಕಾಮಿತಾರ್ಥದ ಹರಿ । ನೇಮದಿ ನೆಲಸೀಹ ೨

ಕೂಸೆರಡರ ವಯದೀ । ಮಂತ್ರಾಲಯ
ದೇಶಕೆ ಪೋಗಿ ಮುದದೀ ।
ಲೇಸು ಸೇವೆಯ ಗೈಯ್ಯೆ । ಕಾಸರೋಗವನೀಗಿ
ಮೇಶ ಗುರುಗೋವಿಂದ । ದಾಸನ್ನಾಗಿಸಿದ ೩

೩೯೨

ಗುರವೆ ಪೊರೆಯೊ ಯನ್ನ । ಆವಗುಣ
ಮರೆದು ರಾಘವೇಂದ್ರಾ ಪ

ನೆರೆನಂಬಿದರ ಸುರತರುವೇ ಹೇ
ಪುರಟ ಕಶಿಪುಜ ಗರುಡವಹನ ಪ್ರೀಯ ಅ.ಪ.

ಬಲುಕರ್ಮ ಜಾಲಗಳ । ಮಾಡುತ ಬಳಲಿ
ಹೊಲಬು ತಪ್ಪದೆ ಬಹಳ ॥
ಚಲುವ ಚನ್ನಿಗನಾದ ॥ ಬಲರಾಮನನುಜನ
ಸಲೆ ನಾಮ ಒಲಿಸದೆ । ಮಲಿನನಾದವನ ॥
ಕಳೆದು ಬಿಡುವರೆ ಸುಜನ ವತ್ಸಲ ।
ಗೆಲುವ ಕಾಣೆನೊ ಕರ್ಮನಿರ್ವಹದಿ
ಜಲಜನಾಭನ ಚರಣ ಪುಷ್ಕರ ।
ಸುಲಭ ಷಟ್ಪದ ಸೆನಿಸೊ ಗುರುವರ ೧

ಯತಿಕುಲ ಸಾರ್ವಭೌಮ । ನಿಮ್ಮಯ
ನಾಮಾಮೃತವನುಣಿಸಲು ನಿಸ್ಸೀಮಾ ॥
ಪತಿತ ಪಾವನ ಹರಿಯ । ಸತತದಿ ನುತಿಸುವ
ಮತಿಯಿತ್ತು ಪಾಲಿಸೊ । ಶತ್ರಕ್ರತು ಪಿತ ಪಿತನೆ ॥
ರತಿಪತಿಯ ಪತನೆನಿಸಿದಾತನ । ನತಿಸಿ ನುತಿಸುತ
ಕರೆಯುತಲಿ ಗತಿ ಪ್ರದಾಯಕ ಹರಿಯ ವ್ಯಾಪ್ತಿಯ ।
ಪಿತಗೆ ತೋರಿದ ಅತುಳ ಮಹಿಮಾ ೨

ಮಂತ್ರ ನಿಕೇತನನೆ ಯತಿಕುಲರನ್ನ ಮಂತ್ರಾರ್ಥ ರಚಿಸಿದನೇ ॥
ಗ್ರಂಥೀಯ ಹರಿಸೂವ । ತಂತ್ರವ ತೋರೋ
ಅತಂತ್ರವಾಗಿದೆಯನ್ನ । ಮಂತ್ರ ಸಾಧನವೂ ॥
ಪ್ರಾಂತಗಾಣದೆ ಚಿಂತಿಸುವೆ ಸರ್ವಸ್ವ । ತಂತ್ರ
ಗುರುಗೋವಿಂದ ವಿಠಲನ ಅಂತರಂಗದಿ ತೋರಿ ಸಲಹೋ ।
ಕ್ರಾಂತನಾಗುವೆ ನಿಮ್ಮ ಪದಕೇ ೩

೩೯೩

ಗುರುವೆ ವರಹಜೆ ತಟವಾಸಾ ।
ಗುರುವೇ ಪುರಿ ಮಂತ್ರಾಧೀಶಾ ಪ

ಆರು ಮೊರೆ ಇಡುವೆನೊ । ವರಪದ ಪದುಮಕೆ
ಕರುಣದಲೆಮನ । ಹರಿಯಲಿ ಇರಿಸೋ ಅ.ಪ.

ಬಾಗಿ ಭಜಿಪೆ ಗುರುವೇ । ಎನ್ನಯ
ರೋಗ ಹರಿಸು ಪ್ರಭುವೇ ॥
ರಾಘವೇಂದ್ರ ದುರಿತೌಘ ವಿದೂರನೆ ।
ಭೋಗಿ ಶಯನ ಪದ । ರಾಗದಿ ಭಜಿಸುವ ೧

ಭೂತ ಪ್ರೇತ ಬಾಧೇ । ಬಿಡಿಸುವ
ಖ್ಯಾತಿ ನಿಮ್ಮದು ತಿಳಿದೇ ॥
ದೂತರೆನಿಪ ಜನ । ಆತುನಿಮ್ಮ ಪದ ।
ಪ್ರೀತಿ ಸೇವೆಯಲಿ । ಕಾತುರರಿಹರೋ ೨

ಮೌನಿವರ್ಯ ನಿನ್ನ । ಬೇಡುವೆ
ಜ್ಞಾನ ಭಕುತಿಯನ್ನ ॥
ದಾನ ಮಾಡಿ ಅಜ್ಞಾನವ ನೋಡಿಸೆ ।
ಹೀನ ಯೋನಿ ಬರಲೇನು ಅಂಜೆನೂ ೩

ಪರಿಮಳಾರ್ಯರೆಂದೂ । ನಿಮ್ಮಯ
ಬಿರಿದು ಕೇಳಿ ಬಂದೂ ॥
ಮೊರೆಯ ನಿಡುವೆ ತವ । ಚರಣಾಂಬುರುಹಕೆ ।
ಅರಿವ ನೀಯೊ ತವ । ಪರಿಮಳ ಸೊಬಗನು ೪

ಗುರು ಸುಧೀಂದ್ರ ಕರಜ । ತೋರ್ಪುದು
ಹರಿಯ ಪಾದ ಬಿಸಜ ॥
ವರ ಸುಹೃದ್ಗ ಗುರು । ಗೋವಿಂದ ವಿಠಲನ
ಚರಣ ಸರೋಜವ । ನಿರುತ ಭಜಿಪ ಗುರು ೫

೩೯೪

ಜೋ ಜೋ ಪ

ಜೋ ಜೋ ಜೋ ಜೋ ಜೋ ಗುರುರಾಜಾ
ಜೋ ಜೋ ಜೋ ಜೋ ।
ಯತಿ ಮಹರಾಜಾ । ಜೋಜೋ ಅ.ಪ.

ಬೋಧವ ಗೈಯ್ಯುತ್ತ । ಮೋದ ಮುನಿ ಮತವ
ವಾದಿಗಳ ಜಯಿಸುತ್ತ । ವೇದಾರ್ಥ ಪೇಳಿ ।
ಸಾಧು ಸಮ್ಮತವೆನೆ । ಗ್ರಂಥ ಬಹು ರಚಿಸೀ
ಆದುದಾಯಾಸವು । ಮಲಗೊ ಗುರುರಾಯ । ಜೋ ಜೋ ೧

ಯೋಗಿಗಳೊಡೆಯನೆ । ಯೋಗೀಂದ್ರ ವಂದ್ಯಾ
ಭೋಗಿ ಶಯ್ಯನ ಭಕ್ತ । ಗುರುರಾಘವೇಂದ್ರ ।
ಭಾಗವತರ ಬಯಕೆ । ಸಲಿಸಿ ವೇಗದಲಿಂದ
ಯೋಗ ನಿದ್ರೆಯ ಮಾಡೆ । ಮಲಗೊ ಮುನೀಂದ್ರಾ । ಜೋಜೋ ೨

ಎರಡೆರೆಡು ಮುಖದಿಂದ । ವೃಂದಾವನದಿಂದ
ಶರಣರಿಗಾನಂದ । ಸುರಿಸಿ ಹರಿಯಿಂದ ।

ಗುರು ಗೋವಿಂದ ವಿಠಲನ । ಧ್ಯಾನ ಆನಂದ
ಪರವಶದಲಿ ಮಲಗೊ । ಗುರು ರಾಘವೇಂದ್ರ । ಜೋಜೋ ३

३೯೫

ಪರಿಪಾಹಿ ಗುರು ರಾಘವೇಂದ್ರ ಪ

ಶರಣರ ಪೊರೆಯಲು । ವರ ಮಂತ್ರಾಲಯ
ಪುರದಲಿ ನೆಲಿಸಿಹೆ । ಕರುಣಿಗಳರಸ ಅ.ಪ.

ಪಿತನ ಬಾಧೆಗೆ ಲವ । ವ್ಯಥೆಯನು ಪಡದಲೆ
ರತಿಪತಿ ಪಿತನೆ ಸ । ರ್ವೋತ್ತಮನೆಂದೂರದೆ ೧

ದ್ವಿತಿಯ ಯುಗದಲಿ । ದೈತ್ಯನಲ್ಲುದಿಸುತ
ಸೀತೆಯ ರಮಣನ । ಪ್ರೀತಿಯ ಪಡೆದೆಯೋ ೨

ದ್ವಾಪರದಲಿ ಪ್ರ । ತೀಪನ ಸುತನೆನಿಸೀ
ಶ್ರೀಪತಿ ಕೃಷ್ಣನ । ಪ್ರೀತಿಯ ಪಡೆದೇ ३

ಇಷ್ಟವಿಲ್ಲದ ಪುಣ್ಯ । ಎಷ್ಟೂ ಗಳಿಸಿ ನೀವು
ಶಿಷ್ಟರ ಪಾಲಿಸೆಂದು । ಕೃಷ್ಣನ ಮೊರೆಯಿಟ್ಟೆ ೪

ವ್ಯಾಸರಾಯರಾಗಿ । ಭೂಸುರ ಸುಜನರ
ಕ್ಲೇಶವ ಹರಿಸಿದೆ । ದಾಸಕೂಟಕೆ ಹಿರಿಯಾ ೫

ಶ್ರೀಶನರಹರಿ । ವ್ಯಾಸ ರಾಮಾ ಕೃಷ್ಣ
ಈಸು ರೂಪಗಳಲ್ಲಿ । ವಾಸವು ವೃಂದಾವನದಿ ೬

ಪರಿಪರಿ ವಿಧ ನಿಮ್ಮ । ಚರಣವ ಸ್ಮರಿಸುವ
ನರರ ಮನೋರಥ । ಹರಿಯ ಕರುಣಿಪ ೭

ಸರಸಿಜಾಸನ ಮುಖ । ಸುರಪ ದೇವರ್ಕಳೆಲ್ಲ
ಹರಿಯನು ಚರರೆಂಬಾ । ವರಮತಿ ಪಾಲಿಸೋ ೮

ಪವನಾಂತರಾತ್ಮ ಗುರು । ಗೋವಿಂದ ವಿಠಲನ
ತವಕದಿಂದಲಿ ತೋರಿ । ಭವ ಭಯ ಹರಿಸೀ ೯

೩೯೬

ಬಾರಯ್ಯ ಬಾ ಬಾ ಬುಧಜನಗೇಯಾ । ಹೇ ಗುರರಾಯಾ
ಸಾರಿ ಬರುವ ಭಕುತರೊಡೆಯ । ಕಾಯಯ್ಯ ಜೀಯಾ ಪ

ವಾರಿಜನಾಭನ ವಾರಿಧಿಮಥನನ
ವೈರದಿ ಭಜಿಸಿದ ಪುರಟ ಕಶ್ಯಪನ ।
ವರ ಉದರೋದ್ಭವ ಹರಿ ಪ್ರಿಯ ಭಕುತನೆ
ಶರಣರ ಪೊರೆಯಲು ತ್ವರ್ಯದಿ ಬಾರೋ ಅ.ಪ.

ಪ್ರಥಮ ಪ್ರಹ್ಲಾದ ದಿತಿಸುತ ದೊರೆಯೇ । ಬಾಹ್ಲೀಕ ದೊರೆಯೇ ।
ಚತುರ ಚಂದ್ರಿಕೆ ಗುರು ಮಂತ್ರಾಲಯ ಗುರುವೇ । ದೊರೆಬಲು ಮೊರೆಯೇ ।
ವ್ಯಥೆಯಾಕೆನ್ನುತ । ಹಸ್ತವ ಚಾಚುತ
ಹುತ ವಹ ನೊಳು ಬಲಾ । ಜತನಾಗಿರಿಸಿಹ
ರತುನವ ಹಾರವ । ಪ್ರೀತಿಲಿ ಕೊಡುತ
ಅತಿಶಯ ತೋರಿದ । ಯತಿ ರಾಘವೇಂದ್ರ ೧

ಸುಧೀಂದ್ರರ ಕರಜ ಮಂತ್ರಾಲಯ ನಿಲಯ । ಬಲು ಮಂತ್ರಗಳೊಡೆಯಾ ।
ಬಧಿರ ಮೂಕರ ಅಂಧರ ಹೊರೆಯಾ । ಪರಿಹರಿಸುವ ದೊರೆಯಾ ।
ಮಧ್ವಾಂತರ್ಗತ ಮಧು ಕೈಟ ಭಾರಿಯ
ಸಿದ್ಧಾಂತದ ಸವಿ ಹೃದ್ಗತ ಮಾಡಿದ ।
ವಿದ್ವನ್ಮಣಿಗಳ ಸದ್ವೃಂದದ ಖಣಿ
ಸದ್ವಿದ್ಯದ ಸವಿ ಮೋದದಿ ಉಣಿಸಲು ೨

ಮನ್ರೋವಿನ ಮನ ತಿಳಿಯುತಲಿನ್ನೂ । ಮುನಿವರ ತಾನೂ ।
ಸಾನುರಾಗದಿ ತನುವ ತೋರಿದನೂ । ಘನ ಕರುಣಿಯು ತಾನೂ ।
ಜ್ಞಾನಿಗಮ್ಯ ಗುರುಗೋವಿಂದ ವಿಠಲನ
ಧ್ಯಾನಿಸೆ ಪೊಗುತಲಿ ವೃಂದಾವನವ ।
ಆನತ ಜನ ಮನದಿಷ್ಟವ ಸಲಿಸುತ
ಮೌನಿವರೇಣ್ಯನೆ ತುಂಗೆಯ ತೀರಗ ೩

೩೯೭

ಬೆಳಕಾ ತೋರಿಸೊ ಯೋಗಿಂದ್ರರ ಜನಕಾ ।
ಮಂತ್ರಾಲಯ ಪುರ ಪಾಲಕ ಪ

ಫಾಲನಯನ ಪ್ರಿಯ । ಪಾಲಾಬ್ಧಿ ಶಾಯಿಯ
ಶೀಲ ಮೂರುತಿ ತೋರೊ । ಮೇಲು ಕರುಣದಿ ಅ.ಪ.

ಭರ್ಮೋದರಸುತ ಸುರಮುನಿಯಿಂದಾ । ಉಪದೇಶದಿಂದಾ
ಕರ್ಮಜ ದೇವರ್ಕಗಳ ಮಹವೃಂದಾ । ಮಧ್ಯದಿ ನಲವಿಂದಾ ।
ಊರ್ಮಿಳ ಪತಿ ಭ್ರಾತೃ । ಪೇರ್ಮೆಯಿಂದಲಿ ನಿನ್ನ
ನಿರ್ಮಮತಗೆ ಮೆಚ್ಚಿ । ಪರ್ಮನ ಮಾಡಿದ ೧

ಅನಲಾ ಭೃಗು ಪ್ರಸೂತಿಗಳಿಗೇ । ಅವರಿಗೆ ಸಮನಾಗೇ
ಅನಿಲಾನಂದಾವೇಶಿತ ನಾಗೇ । ಬಾಲ್ಹೀಕನಾಗೇ ।
ನಿನ್ನ ತನುವು ಭೂಸ್ಪರ್ಶವಾಗಲು ಆ
ಕ್ಷಣದಲಿ ಬಿರಿಯಿತು ತತ್ ಕ್ಷಿತಿ ದೇಶವು ೨

ಸಿರಿಗುರು ಗೋವಿಂದ ವಿಠ್ಠಲನಾ । ಭವ್ಯ ಸುಚರಣಾ
ಸರಸಿಜ ಹೃದ್ವಾರಿಜದಲಿ ಪವನಾ । ನಲಿ ಸ್ಥಿತನಾಗಿಹನಾ ।
ತೋರಿ ಪೊರೆಯೊ । ಕರುಣಾಕರ ಗುರು
ಸಾರಿ ಭಜಿಪೆ ತವ । ಚರಣಾಂಬುರುಹವ ೩

೩೬೮

ಮಂಗಳಂ ಮಂಗಳಂ ಪ

ಮಂಗಳಂ ಮಂಗಳಂ । ಪರಿಮಾಳಾರ್ಯರಿಗೆ
ತುಂಗೆ ತೀರಗ ಯತಿ । ಪುಂಗರೀಗೇ ಅ.ಪ.

ಮಧು ವೈರಿ ಪದ ಭೃಂಗ । ಸುಧೀಂದ್ರ ಚರಣಾಬ್ಜ
ಮಧುಕರರೆನಿಸುತ್ತ । ಸುಧೆಯ ಸೌರಭವ ।
ಬುಧ ಜನ ಕುಣಿಸುತ್ತ । ವಿಧ ವಿಧ ಮೆರೆಯುವ
ತ್ರಿದಶ ಭೂರುಹವೆನಿಸಿ । ಸದಯದಿ ಪೊರೆವಗೇ ೧

ಮಧ್ವ ಮತಾಬ್ಧಿಗೆ । ಶುದ್ಧ ಪೂರ್ಣೇಂದ್ವಿಗೆ
ಅದ್ವೈತ ಕಲಿಮಲ । ದಾವಾಗ್ನಿಗೇ ।
ಸದ್ವೈಷ್ಣವ ಕುಮುದೇಂದು । ವಿದ್ವಾಂಸನತ ಪಾದ
ಶೌದ್ಧೋದನಿಯ ಮತ । ವಿಧ್ವಂಸಕಗೇ ೨

ಕರದೆಡೆ ಬರುವಂಥ । ಪರಮ ದಯಾಳುಗೆ
ಧರೆಯೊಳೆಲ್ಲೆಲ್ಲೂ । ಮೆರೆಯುತಿಹಗೇ ।
ಶರಣರ ಹೃತ್ಕಮಲ । ವರ ಮಿತ್ರನೆಂದೆನಿಸಿ
ಗುರು ಗೋವಿಂದ ವಿಠಲ । ಚರಣಾಬ್ಜಧೇನಿಪಗೇ ೩

೩೬೯

ಯತಿರಾಜಾ – ಪಾಲಿಸೊ ಎನ್ನ – ಯತಿರಾಜಾ ಪ

ಯತಿರಾಜಾ ಪಾಲಿಸೊ ಎನ್ನ – ಅಹಂ
ಮತಿಯ ಕಳೆದು ಗುರುವರೇಣ್ಯ । ಆಹ
ಸತತದಿ ಹರಿ ಧ್ಯಾನ । ರತನನ ಮಾಡಿ ಸದ್
ಗತಿಯ ಸೇರುವಂಥ । ಪಥದಲ್ಲಿರಿಸೊ ರಾಜ ಅ.ಪ.

ವೀಣಾ ವೆಂಕಟ ನಾಮಾಭಿಧ । ಕುಂಭ
ಕೋಣ ಪುರದೊಳು ಮೆರೆದಾ । ಓವಿ
ಜ್ಞಾನಿ ಸುಧೀಂದ್ರರೊಲಿಸಿದಾ । ಬಹು
ಮಾನವಾಗಿ ಶಾಲು ಪಡೆದಾ । ಆಹ
ಏನು ಇದಾಶ್ಚರ್ಯ । ಮಾನ ಉಳಿವದೆಂತು
ನಾನೊಂದು ಕಾಣೆ । ನೆನುತಾವಸನ ಮುಂದಿಟ್ಟ ೧

ಅಂದಿನಂದಿನ ಪಾಠಕ್ಕೆಲ್ಲ । ಟೀಕೆ
ಛಂದಾಗಿ ಬರೆದಿರುವಲ್ಲ । ನಮ್ಮ
ಹಿಂದಿನ ಸಂಶಯವೆಲ್ಲ । ನೀಗಿ
ಮುಂದೆ ಜರುಗಿತು ಪಾಠವೆಲ್ಲ । ಆಹ
ಎಂದು ನಮ್ಮ ವಸನ । ಕಂದ ನಿನ್ನಯ ಮೇಲೆ
ಹೊಂದಿಸಿ ಮುದದಿಂದ । ಬಂದೆವೆಂದರ ಶಿಷ್ಯ ೨

ಗುರುವು ಪಟ್ಟರು ಬಲು ಮೋದಾ । ಸುಧಾ
ಪರಿಮಳಾರ್ಯರೆಂಬ ಬಿರುದಾ । ಪೊಂದಿ
ಇರಲು ಕಾಲಾಂತರದಿಂದಾ । ಪಡೆದೆ
ವರ ಯತ್ಯಾಶ್ರಮವವರಿಂದಾ । ಆಹ
ಮೆರೆಸಿದೆ ರಾಮರ । ವರ ವೈಭವದಿಂದ
ದುರುಳ ಮಾಯ್ಗಳಮತ । ತರಿದಿಟ್ಟೆ ವಾದದಿ ೩

ಬೇಗೆಯಿಂದಳುತಿದ್ದ ಶಿಶುವಿಗೆ । ಚೈಲ
ಆಗಸದೊಳು ನೀನು ನಿಲಿಸಿದೆ । ಹಾಂಗೆ
ಮಾರ್ಗದಿ ಪ್ರಸವಿಸದವಳೀಗೆ । ನೀರ
ನುಗಮಿಸುತ ನೀನು ಪೊರೆದೇ । ಆಹ
ನಿಗಮಾಲಯ ವಾಸ । ರಾಘವೇಂದ್ರ ಗುರುವೆ
ಬಗೆ ಬಗೆ ಗ್ರಂಥವ । ಮಿಗಿಲಾಗಿ ರಚಿಸೀದೆ ೪

ಪಂಗು ಬಧಿರ ಮೂಕ ಜನರು । ನಿಮ್ಮ
ಹಿಂಗದೆ ಬಂದು ಸೇವಿಪರು । ಬಂದ

ಭಂಗಗಳೆಲ್ಲ ನೀಗುವರು । ಯತಿ
ಪುಂಗನೆ ನಿನಗೆ ಸರಿಯಾರು । ಆಹ
ಗಂಗಾ ಜನಕ ರೂ । ಪರಿಗಳು ನಾಲ್ಕರಿಂ
ಅಂಗಲಾಚಿಪ ಜ । ನಂಗಳ ಪೊರೆಯುವ ೫

ಸಂದರಶನದಿಂದ ಅಘ । ವೃಂದ
ಬೆಂದು ಪೋಗುವುದು ಬೇಗ । ನಿಮ್ಮ
ವೃಂದಾವನಗತ ಮೃತ್ತಿಕೆ । ಜಲ
ಬಿಂದು ಉದರ ಪೊಕ್ಕಾಗ । ಆಹ
ವೃಂದಾವನ ಪತಿ ಗೋ । ವಿಂದನ ಮಂದಿರ
ಬಂದು ಸೇರುವುದಕ್ಕೆ । ಅಂದ ಸೋಪಾನವು ೬

ವರಹಸುತೆ ತೀರ ವಾಸಾ । ಭಕ್ತ
ಸುರತರುವೆ ನಿನ್ನ ದಾಸಾ । ನಾಗಿ
ಇರಿಸೊ ಭೂ ತಳಾಧೀಶ । ಬೇಡ್ವೆ
ವರ ಒಂದ ನಾನಿನ್ನ ಅನಿಶ । ಆಹ
ಗುರುಗೋವಿಂದ ವಿಠಲನ । ಚರಣಾರವಿಂದವ
ನಿರುತ ಭಜಿಸುವಂಥ ವರಮತಿ ಕೊಟ್ಟಿನ್ನ ೭

೪೦೦

ಯತಿವರ್ಯ । ಯತಿವರ್ಯ ಪ

ಯತಿ ಸುಧೀಂದ್ರಕರ । ಸುತನೆಂದೆನಿಸಿದ ಅ.ಪ.

ಆರ್ತ ಜನೋದ್ಧರ । ಕೀರ್ತಿ ನಿನ್ನದೆನೆ
ವಾರ್ತೆ ಕೇಳಿ ಪರ । ಮಾರ್ಥವ ಯಾಚಿಪೆ ೧

ಪ್ರಣವ ಪಾದ್ಯ ಹರಿ । ಗುಣ ಸಂಪೂರ್ಣನ
ಗುಣವರ್ಣನ ಸು । ಜ್ಞಾನವ ನೀಯೋ ೨

ಪರಿಮಳಾರ್ಯ ತವ । ಚರಣಾರಾಧನೆ
ಕರುಣಿಸಿ ಸುಧೆರಸ । ಎರೆವುದೆನಗೆ ಗುರು ३

ಅನ್ಯನಲ್ಲ ನಾ । ನಿನ್ನವರವನೈ
ಘನ್ನ ಮಹಿಮ ಸಂ । ಪನ್ನ ಪೊರೆಯೊ ಗುರು ೪

ಯೋಗಿವರ್ಯ ತವ । ಅಘಹರನಾಮಕೆ
ಮಿಗಿಲಿಲ್ಲವೊ ಗುರು । ಬಾಗಿ ಭಜಿಪೆ ನಿನ ೫

ಕಾಮಧೇನು ಪರಿ । ಕಾಮ ಫಲಪ್ರದ
ಪಾಮರ ಮನುಜನ । ನೀ ಮಾಣದೆ ಪೊರೆ ೬

ಭೂಮಾರ್ಣವ ಗುರು । ಗೋವಿಂದ ವಿಠಲನ
ಕಾಮಿಪೆ ಮೆನ್ನನ । ಸೀಮೆಯಲಿರಿಸೋ ೭

೪೦೧

ಸ್ಮರಿಸಿ ಬದುಕಿರೊ । ಗುರುರಾಘವೇಂದ್ರರಾ
ಚರಣ ಕಮಲವಾ । ದುರಿತ ತರಿಯುವಾ ಪ

ಯಂತ್ರೋದ್ಧಾರರಾ । ಅಂತರಂಗರಾ
ಮಂತ್ರ ಮಂದಿರಾ । ಕಾಂತಿ ಭೂತರಾ ೧

ಕುಂತಿ ಜಾತರಾ ಏ । ಕಾಂತ ಭಕ್ತರಾ
ಸಂತ ಗುರಗಳ ನೀ । ವಿಂತು ನಂಬಿರೊ ೨

ಪಂಕಜಾಕ್ಷನಾ । ಅಣಕ ಧರಿಸಿಹಾ
ಬಿಂಕ ಗುರುಗಳಾ । ಲಂಕೇಶನನುಜರಾ ೩

ಖಂಪಾತಾಳ ಭೂ । ವ್ಯಾಪಿಸಿರುವರಾ
ಅಪಾರ ಮಹಿಮರಾ । ಕೋಪ ರಹಿತರಾ ೪

ಮೂಕ ಬಧಿರರಾ । ನೇಕ ರೋಗಿಯರಾ
ನೂಕಿ ತಾಪವಾ । ದುಃಖ ಕಳೆಯುವಾ ೫

ಮಾಯಿ ಮತಗಳಾ । ಸಾಯ ಒಡೆದರಾ
ಆರ್ಯ ಮಧ್ವರಾ । ಪ್ರೀಯ ಶಿಷ್ಯರಾ ೬

ಗುರುಗೋವಿಂದ ವಿಠಲನಾ । ಚರಣ ಸರಸಿಜಾ
ನಿರುತ ಸ್ಮರಿಪರಾ । ವರವ ಕೊಡುವರಾ ೭

೪೦೨

ಸ್ಮರಿಸುವರಘಹರ ರಾಘವೇಂದ್ರ ಗುರು
ಆರುಮೊರೆ ಇಡುವೆನು ತವಪದದಲ್ಲೀ ಪ

ಸುರತರು ನಿನ್ನನು । ನಿರುತದಿ ನುತಿಸುವ
ವರವನೆ ಕರುಣಿಸು । ಗುರು ರಾಘವೇಂದ್ರ ಅ.ಪ.

ಕೃತ ಯುಗದೊಳು ತಾ । ಮುನಿ ಕಶ್ಯಪನ
ಸುತನಲಿ ಮೋದದಿ । ಸುತನಾಗಿ ಜನಿಸುತ ।
ಪಿತನತಿ ಬಾಧೆಗೆ । ಅಳುಕದೆ ಮನ್ಮಥ
ಪಿತನಧಿಕೆಂದು ಬಹು । ಸಾರಿದೆ ಗುರುವರ ೧

ಜನಪ ಪ್ರತೀಪನ । ಸುತ ವರನೆನಿಸುತ
ಜನಿಸುತ ಪ್ರೀತಿಲಿ । ದ್ವಾಪರದಲ್ಲೀ ।
ಘನಬಲ ಬಾಹ್ಲೀಕ । ನೆನಿಸುತ ನೀನೂ
ಅನಿರುದ್ಧ ಮೂರ್ತಿಯ । ಸೇವಿಸಿ ಮೆರೆದೆ ೨

ನ್ಯಾಯಾ ಮೃತ ಚಂ । ದ್ರಿಕೆಗಳ ರಚಿಸುತ
ಮಾಯ ಮತವನು । ಪರಿಪರಿ ಜರೆಯುತ ।

ಕಾಯ ಜನಯ್ಯನ । ಕೀರ್ತಿಯ ಬೀರುತ
ತೋಯಜಾಕ್ಷ ಹರಿ । ಅಧಿಕೆಂದು ಸಾರಿದೆ ೩

ಸಂಗವ ತೊರೆದು । ಸುಧೀಂದ್ರರ ಕರಜನೆ
ತಂಗಾತೀರದಿ । ಮಂತ್ರಾಲಯದಲಿ ।
ಮಂಗಳ ಮಹಿಮನ । ಧ್ಯಾನವ ಗೈಯುತ
ತುಂಗ ವಿಕ್ರಮ ಹರಿ । ಪರನೆಂದು ಸಾರಿದೆ ೪

ವಾತನ ಮತ ವಿ । ಸ್ತರಿಸಿದ ಧೀರನೆ
ದ್ವೈತ ದುಂದುಭಿಯ । ಮೊಳಗಿಸಿದಾತನೆ ।
ದೂತರ ಪ್ರಿಯ ಗುರು । ಗೋವಿಂದ ವಿಠಲನ
ಪ್ರೀತಿಲಿ ಭಜಿಸುವ । ದಾಸಾಗ್ರಣಿಯೇ ೫

೪೦೩

ಕ್ಷಮಾಸಮುದ್ರನೆ ನಮಾಮಿ ಗುರು
ನಿನ್ನ ಸಮಾನರ್‍ಯಾರಿನ್ನೂ ।ಪ।।

ರಮೇಶ ಪದದ್ವಯ । ಕಮಲ ಪುಷ್ಪಕೆ
ಭ್ರಮರ ತವಪದ । ನಮಿಸುವೇ ಅ.ಪ.

ತತ್ವ ಪ್ರದರ್ಶಕ ಶೃತ್ಯರ್ಥ ಬೋಧಕ
ಗೀತಾರ್ಥ ಸಂಗ್ರಹ ಕೃತೇ ನಮೋ ।
ಪ್ರತ್ಯರ್ಥಿಮತ್ತೇಭ ಪಂಚಾಸ್ಯ ನಿನ್ನಯ
ಭೃತ್ಯನ ಅಪಮೃತಿ ತಪ್ಪಿಸಿದೇ ೧

ಅದ್ವೈತ ದುಸ್ಸಹ ವಾಸನ ನಿರಸನ
ಖದ್ಯೋತ ಸಮ ವ್ಯಾಪ್ತ ಪರಿಮಳಾ ।
ಸದ್ವೈಷ್ಣವ ಕುಮುದೇಂದು ವಿದ್ವಾಂಸನತ ಪದ
ದ್ವಂದ್ವಾ ವಿಮಲ ಕಮಲಾ ೨

ಕುಷ್ಠಾದಿ ರೋಗಹರ ಕಷ್ಟ ನಿವಾರಣ
ಶ್ರೇಷ್ಠ ನಿಮ್ಮಯ ಸ್ಮರಣಾ ।
ನಿಷ್ಟೇಲಿ ಭಜಿಪರ ಇಷ್ಟಾರ್ಥ ಸಲಿಸುವ
ದುಷ್ಟವಾದಿಯ ದಮನಾ ೩

ಪ್ರಹ್ಲಾದ ಬಾಲನೆ ವಿಮಲಾ ವಿಭೀಷಣ
ಬಾಹ್ಲೀಕ ಸೂನಾದೆ ಪ್ರತೀಪಗೆ ।
ವಿಠ್ಠಲ ಹೃದಯರ ಚಂದ್ರಿಕೆಯಿಂದಲಿ
ಆಹ್ಲಾದ ಪಡಿಸಿದ ಸಲ್ಹಾದಾಗ್ರಜನೇ ೪

ಗ್ರಂಥೀಯ ಹರಿಸುವ ಮಂತ್ರಾರ್ಥ ಬೋಧಿಸಿ
ಮಂತ್ರ ಸದನ ಗುರುವೇ ।
ಮಂತ್ರಾಗಮ್ಯ ಗುರು ಗೋವಿಂದ ವಿಠಲನ
ಅಂತರದಿ ತೋರಿಸಿ ರಕ್ಷಿಸಯ್ಯಾ ೫

೪೦೪

ಶ್ರೀ ಶೇಷ ಚಂದ್ರಿಕಾರಾಯರ ಸಂಕ್ಷಿಪ್ತ ಚರಿತ್ರೆ

(ವಾರ್ಧಿಕ ಷಟ್ಪದಿ)

ರಘುನಾಥರಂ ಸೇವಿಸೀ ।
ರಘುನಾಥ ತೀರ್ಥರಂ ಮಿಗಿಲಾಗಿ ಸೇವಿಸುವ
ಅಘಗಳನು ನೀಗಿ ಶ್ರೀ ರಘುವರನ ಪ್ರೀತಿಯನು
ಮಿಗೆ ಪೊಂದಿ ಭವದಾಟಿ ನಗಧರನ
ಲೋಕದೊಳು ಬಗೆ ಬಗೆಯ ಸುಖದಿ ಬಾಳ್ವ ಪ

ಏಕಮೇವನ ಚರಣ । ತೋಕರೆಂದೆನಿಸಿ ಸಾ
ತ್ವೀಕರೆನಿಪ ತಾಯ್ತಂದೆಗಾಕುವರನೆನಿಸುತ

ಏಕಋಷಿ ಶೌನಕ ಸುಗೋತ್ರದೊಳುವೆಂಕಟ
ವರಮೃಗಾಭಿದನು ಎನಿಸೀ ॥
ನೂಕಿ ಪಂಚಾಬ್ದಗಳನಾ ಕುವರಗಾಗುಪನಯನ
ಕೈಗೊಂಡು ಗುರು ಚರಣನೇಕ ವಿಧ ಸೇವಿಸುತ
ವಾಕಾದಿ ಶಾಸ್ತ್ರಗಳ ಸಾಕಷ್ಟು ಅಭ್ಯಸಿಸಿ
ಸ್ವೀಕರಿಸಿ ದ್ವಿತೀಯಾಶ್ರಮಾ ೧

ಕುಂಭಿಣಿಯೊಳು ಮೆರೆವ ಕುಂಭಕೋಣದಿನೆಲೆಸಿ
ಜಂಭಭೇದಿಯ ಅನುಜ ಅಂಭ್ರಣಿಯ ರಮಣಪದ
ಅಂಭುಜಗಳಂ ಭಜಿಸಿ ಸಂಭ್ರಮದಿ
ಸತಿವೆರಸಿ ಉಂಬುಡುವ ಸರ್ವವೆಲ್ಲ ।
ಬಿಂಬನಲಿ ಅನ್ವಯಿಸಿ ಇಂಬುಗೊಂಡವರಾಗಿ
ಸಂಭ್ರಮದ ಸಂತಾನದಂಬಲನೆ ತಾ ತೊರೆದು
ಹಂಬಲಿಸಿ ಹರಿಪಾದ ಗುಂಭದಿಂದಲಿ
ಭಜಿಸಿ ಇಂಬಿಟ್ಟ ಸನ್ಯಾಸದೀ ೨

ಹತ್ತು ಮೂರ್ಮತ್ತೈದು ವತ್ಸರದಿ ವಿಠಲ ಪದ
ವರ್ತಿ ಲಕುಮಿನರೆಯಣ ತೀರ್ಥರಿಂ ಸನ್ಯಾಸ
ದುತ್ತ ಮಾಶ್ರಮ ಪೊಂದಿ ಭೃತ್ಯರಿಗೆ ಶ್ರೀಮಧ್ವ ಶಾಸ್ತ್ರಗಳ ಬಿತ್ತರಿಸುತಾ ।
ಮತ್ತೆ ಬದರಿಯ ಸೇತು ಉತ್ತಮ ಕ್ಷೇತ್ರ ತ್ರೈರಾ
ವರ್ತಿ ಸಂಚರಿಸಿ ಬಲು ಮತ್ತ ಮಾಯ್ಗಳನಳಿದು
ಕೃತ್ತಿ ವಾಸನ ತಾತ ಉತ್ತಮೋತ್ತಮನೆಂದು
ವತ್ತಿ ಪೇಳ್ದರು ಸುಜನಕೇ ೩

ಶೇಷನಾವೇಷದಿಂ ವ್ಯಾಸಾಭಿದಾನ ಸ
ನ್ಯಾಸಿ ಎನಿಸುತಲಿ ದಿನೇಶನಂಶಜರಿಂದ
ವಾಸಿಸುತ ಹಂಪೆಯಲಿ ಲೇಸು ಸುತ್ತೂತ್ರಗಳ
ಭಾಷ್ಯಾವ್ಯಾಖ್ಯಾ ಚಂದ್ರಿಕಾ
ವ್ಯಾಸ ತ್ರಯಗಳು ಎಂದು ಭಾಸುರದ ಕೀರ್ತಿಯಲಿ
ಕಾಶಿ ಗಧದರ ಮಿಶ್ರ ಏಸು ಮಾಯ್ಗಳ ಜಯಕೆ

ಲೇಸು ಕಾರಣವೆನಿಪ ಆಸಿ ಗ್ರಂಥಗಳ್ರಚನೆ
ಬೇಸರದೆ ನೆಡೆಯುತಿರಲೂ ೪

ವರಶಿಷ್ಯರಿಂವರೆಸಿ ಇರುತಿರಲು ದಿನ ಒಂದು
ಅರೆವಾಸಿಯಾದಂಥವರ ಚಂದ್ರಿಕಾಗ್ರಂಥ
ಎರಡು ಅಧ್ಯಾಯಗಳು ಪೂರಣವು ಯಾರಿಂದ
ಒರೆವುದೆಂದೆನೆ ಪ್ರಾರ್ಥಿಸೀ ॥
ವರನರರ ಸಲಹುದಕೆ ಹರಿಯಾಜ್ಞೆಯಿಂ ಮತ್ತೆ
ಎರಡು ಮೂರ್ಜನ್ಮಗಳ ಧರಿಸುವೆವು ನಾವು ಎರಡ್ಯೆ-
ದರಿಲ್ಲಿಂದ ನರಜನ್ಮದೊಳು ಗ್ರಂಥ ಪೂರಣವು ಆಹುದೆಂದರು ೫

ಉಕ್ತಿಗನು ರಘುನಾಥ ತೀರ್ಥರೆಂದುರೆ ಮರೆದು
ಗ್ರಂಥ ಶೇಷವ ರಚಿಸಿ ತತ್ತರಭಿಧರು ಎನಿಸಿ
ತತ್ವ ಕಣಿಕಾಖ್ಯವನು ತಂತ್ರಸಾರದ ವ್ಯಾಖ್ಯಮತ್ತಿತರ ಗ್ರಂಥಗಳನು ॥
ಬಿತ್ತರಿಸಿ ಹರಿಯನ್ನು ತೃಪ್ತಿಸುತ ಪೂರ್ವದಲಿ
ಛಾತ್ರರಂ ಪಡೆದಂತೆ ಮತ್ತೆ ಈ ಜನ್ಮದಲಿ
ಉತ್ತಮರು ಶಿಷ್ಯ ಸಂಪತ್ತಿನಿಂ ಮೆರೆದಿಹರು ತತ್ವಕೋವಿದರು ೬

ಹತ್ತು ಆರರ ವರುಷ ಮತ್ತೇಳು ವಯದಲ್ಲಿ
ಉತ್ತರದ ಭಾರತವ ಸುತ್ತಿ ದಿಗ್ವಿಜಗೈದು
ಅತ್ತಬರೆ ಪೂರ್ವಕ್ಕೆ ಮತ್ತೆ ಸುಕ್ಷೇತ್ರವದು ಜಗನ್ನಾಥನಿರುವ ಸ್ಥಳ
ನಿತ್ಯಾಹ್ನಿಕಗೈದು ರಾತ್ರಿಯೊಳು ಮಲಗಿರಲು
ಸತ್ಯ ಸೂ ಸ್ವಪ್ನದೊಳು ಬ್ರಾತೃಸುತ ನರಸಿಂಹ
ಗುತ್ತಮದ ಯತಿ ಪದವಿ ಇತ್ತಪುದು ಎಂದೆನುತಲಿತ್ತ ತೈಜಸ ಪೇಳಿದ ೭

ಹರಿಯಾಜ್ಞೆಯನನುಸರಿಸಿ ನರಸಿಂಹಾಚಾರ್ಯರಿಗೆ
ವರಜಗನ್ನಾಥಾಖ್ಯಾ ತೀರಥರ ಪೆಸರಿಟ್ಟು
ಸಿರಿವೇಣುಗೋಪಾಲ ವರಮೂರ್ತಿ ಪೂಜಿಸುವ ಪರಮ ಸೌಭಾಗ್ಯವಿತ್ತು
ಚರಿಸಿ ಬರುತಲಿ ಮತ್ತೆ ವರ ಮಹಿಷಿ ಕ್ಷೇತ್ರದೊಳು
ಸಿರಿ ಕೃಷ್ಣನಂ ನಿಲಿಸಿ ಹರಿರಥೋತ್ಸವ ಪೂಜೆ

ವರುಷ ವರುಷದಿ ಗೈಯ್ಯುವರ ಭೂಮಿ ಕಾಣೆ
ಭೂಸುರರಿಗಿತ್ತಿಹರು ಅಯ್ಯಾ ೮

ಆಷಾಢ ಸಿತ ತೃತಿಯ ಭಾಸಿಸುವ ಮಧ್ಯಾಹ್ನ
ಕಾಶೀಗೇ ಮಿಗಿಲೆನಿಪ ತ್ರಿಮಕೂಟಗಾಗಮಿಸಿ
ಭೂಸುರರಿಗೇ ತಮ್ಮ ಆಶ್ವಾಸ ತಿಳಿಸುತ್ತ ಲೇಸು ಸಂಗಮವೀಯತಾ ॥
ಶೇಷ ಚಂದ್ರಿಕಾಚಾರ್ಯ ಶ್ರೀಶನರ್ಚಿಸಿ ಕಾಯರ
ಮೇಶ ಚರಣದಲೀಯ ಲೋಸುಗದಿ ಮನಮಾಡಿ
ಆಸುಸತ್ತಿಥಿ ಚೌತಿ ಲೇಸೆನಿಸಿ ಉದಿಸುತಿರಲೀ ಶರೀರವನು ಅರ್ಪಿಸಿದರು ೯

ಇವರ ವೃಂದಾವನವು ಅಶ್ವತ್ಥ ನರೆಯಣನ
ಪವಿತರದ ಪದ ಧ್ರುವಕೆ ಬೀಳುವ ಸ್ಥಳದೊಳಗೆ ಸ್ಥಾ
ಯವದು ಮಠಬಿರಿದುಗಳು ಅಶ್ವತ್ಥತರುಛಾಯವೇ
ಛತ್ರಿಯೆನಿಸುತಿಹುದೂ ॥
ಕವೇರ ಕನ್ಯೆಯು ಕಪಿಲ ದಿವ ದೀವಟಿಗೆ ಸಮವು
ಇವರಿರುವ ಕ್ಷೇತ್ರವೇ ಪ್ರವರ ಗಯಪ್ರಯಾಗ
ವಿಶ್ವೇಶ ಸನ್ನಿಧಿಯು ಇವರ ಗುಣ ಸ್ಥವನವೇಶಶ್ವದಾನಂದ ಸಂದೋಹವು ೧೦

ವತ್ಸರವು ನೂರೆರಡು ಸತ್ತಿದ್ದಿಗೇ ಪೊತ್ತ
ಸತ್ಸರೀರವ ತ್ಯಜಿಸಿ ಮತ್ಸರಾದ್ವಿರಹಿತರು
ವತ್ಸಾರಿ ಸಿರಿಕೃಷ್ಣ ವತ್ಸರೆಂದೆನಿಸುತ್ತ ಸತ್ವ ಭಾವದಿ ಮೆರೆಯುತಾ ॥
ಹೃತ್ಸರೋಜದಿ ಪವನ ಹೃತ್ಸರೂಜದಿ ಶಿರೀ
ವತ್ಸಲಾಂಛನ ಗುರುಗೋವಿಂದ ವಿಠಲಪದ
ಸತ್ಸರೋಜದ ಧ್ಯಾನ ಉತ್ಸುಕದಿ ಗೈದು ತನವತ್ಸರ್ಗ ಬೀಷ್ಟಗಳಗರೆವಾ ೧೧

೪೦೫

ತಂಗಳೊಡೆಯರು

ತಂಗಳೊಡೆಯರೇ ನಿಮ್ಮ । ಮಹಿಮೆಗೇನೆಂಬೆ
ಅಂಗವನೆ ಮರೆಮಾಚಿ । ಮಂಗಳವಕೊಂಡಾ ಪ.

ನಾಮ ನಿರ್ದೇಶ ಜನ । ಸ್ತೋಮಕಾಕರವೆಂದು
ನಾಮವನೆ ತೊರೆಯುತ್ತ । ಗೂಢಭಾವದಲೀ ।
ಭೀಮ ತೀರದಿ ನಿಂದು । ತಪವ ಗೈಯ್ಯುತಲಿರುವೆ
ಸೀಮೆ ಮೀರಿದ ಮಹಿಮ । ದಯೆದೋರೊ ಎನಗೆ ೧

ವೇದೇಶ ತೀರ್ಥ ಗುರು । ಮಾಧವಸುತೀರ್ಥಬಳಿ
ಸಾದರದಿ ವಾಸಿಸುತ । ಸಾಧಿಸಿಹೆಗತಿಯಾ ।
ಬಾದರಾಯಣ ಬೋಧ । ಮೋದದಿಂ ತಿಳಿಸುತ್ತ
'ಸಾಧನವ ಗೈಸೆನಗೆ । ಹೇದಯಾ ಪೂರ್ಣ ೨

ವೈರಾಗ್ಯ ಹರಿ ಭಕುತಿ । ವೀರಮೂರುತಿ ಎನಿಸಿ
ಮಾರನ್ನ ನೀ ಗೆಲಿದು । ಮೋಕ್ಷಕಾಮೀ
ಸಾರತಮನೂ ಗುರೂ । ಗೋವಿಂದ ವಿಠಲೆಂದು
ಬಾರಿಬಾರಿಗೆ ಸ್ಮರಿಸಿ ಆನಂದ ಗೊಳ್ವಾ ೩

೪೦೬

ಶ್ರೀ ವೇದೇಶ ತೀರ್ಥರು

ವೇದೇಶ ತೀರ್ಥಗುರು । ನತಜನಕ ಕಲ್ಪತರು
ಬೋಧಿಸೀ ತತ್ವಗಳ । ಕಳೆಯೋ ಭವಗರಳ ಪ

ಕರಜ ರಘೂತ್ತಮ ಸು । ತೀರ್ಥಬಿಧ ಸರ್ವೇಶ
ಚರಣಾಂಬುಜದ ಮಧುಪ । ಪೊರೆವುದೆನ ಮುನಿಪ
ಅರಹು ಉಪನಿಷದರ್ಥ । ಛಾಂದೋಗ್ಯಗಳ ಅರ್ಥ
ನಿರುತ ತವಪದ ರತಿಯ । ಅರ್ಧಿಸುವೆ ಮರೆಯ ೧

ಛಂದೋಗ ಶ್ರುತ್ಯರ್ಥ । ಅಂತೆಕಾಠಕದರ್ಥ
ಅಂದ ತಲವಾಕಾರ । ಮಾನಪದ್ಧತಿಯ

ಮಂದಜನ ಸೂಬೋಧ । ಲಕ್ಷಣವು ಮೊದಲಾದ
ಅಂಧಗ್ರಂಥಗಳ್ಬಾವ । ಪೇಳ್ದಭೂದೇವ ೨

ವೈರಾಗ್ಯ ಗುಣ ನಿಧಿಯೆ । ನೈರಪೇಕ್ಷದ ಖನಿಯೆ
ತೀರ ಭೀಮಾ ಸರಿತು । ಅಲ್ಲಿರುವೆ ಒಳಿತು
ಧೀರಗುರು ಗೋವಿಂದ । ವಿಠಲಪದ ಆನಂದ
ವಾರಿಧೀಯೊಳು ಮೀನ । ಇದು ನಿನ್ನ ಖೂನ ೩

೪೦೭

ಶ್ರೀ ಸತ್ಯಸಂಧರು

ಸತ್ಯ ಬೋಧರ ಕಂಡ । ಯತಿವರ್ಯ ಸತ್ಯಸಂಧ
ಕೃತ್ಯ ನಿಮ್ಮದು ಆನಂದಾ ಪ

ಸ್ತುತ್ಯುಯತ್ಯಾಶ್ರಮವ ವಹಿಸುತ
ಪ್ರತ್ಸಹತ ಸಚ್ಚಾಸ್ತ್ರ ಬೋಧಕ
ಪ್ರತ್ಯರ್ಥಿ ಮಾಯ್ಗಳ ಖಂಡಿಸುತ
ಭೃತ್ಯ ಜನಕಭೀಷ್ಟ ಗರೆವಾ ಅ.ಪ.

ಗಂಗೆಮೀಯಲು ಸಾಧು ಸಂಗದಿ ತೆರಳುತ್ತ
ಅಂಗಜಾರಿಯ ಪುರದೀ ।
ಮಂಗಳಾಂಗನು ಹರಿಪದಾಬ್ಜದಿ
ಬೃಂಗರೆನಿಸುತ ಪೂಜೆಯ ಗೈಯ್ಯಲು
ರಂಗ ಹರಿಪಾದಾರವಿಂದವ
ಕಂಗಳಿಂದಲಿ ಕಂಡಯತಿಯ ೧

ಗಯ ಗಧಾದರ ನಂಘ್ರಿಪ್ರಿಯವಿಂದ ಭಜಿಸಲು
ನಯಸುತ್ತ ಪರಿವಾರವಾ ।
ಮಾಯಿಗಳ ದುರ್ವಾದ ಖಂಡಿಸಿ

ಹೇಯಮತವಿಧ್ವಂಸ ಗೈಯ್ಯುತ
ರಾಯದಶರಥ ಸುತನು ರಾಮಗೆ
ಜಯಪತ್ರಾರ್ಪಿಸಿದ ಮಹಿಮ ೨

ವಿಷ್ಣುಪಾದವ ಮನ ಮುಟ್ಟಿ ಭಜಿಸಲು ಪೋಗೆ
ದುಷ್ಟಗಯಾಳವಾರರು ।
ದಿಟ್ಟತನದಲಿ ಕದವಮುಚ್ಚಲು ।
ಶ್ರೇಷ್ಠ ಯತಿಗಳ ಭಕ್ತಿಗೊಲಿಯುತ
ಥಟ್ಟನೇ ಕದತೆರೆಯಲಂದಿನ
ಅಟ್ಟಹಾಸದಿ ಪೂಜೆಗೈದ ೩

ಬಾಳಲಜ್ಜೆಲಿಗಯ । ವಾಳರು ಶರಣೆನ್ನೆ
ಲಾಲಿಸುವರ ಭಿನ್ನ ಪ ।
ಮೂಲರಾಮರ ಸೇವೆಯನುಗಯೆ
ವಾಳರೆಲ್ಲರು ಮಾಡಲೆನುತ
ಲೀಲೆಯಿಂ ಮುದ್ರಾಂಕಗೈದಘ
ಜಾಲವನು ತಾ ಕಳೆದ ಯತಿಯ ೪

ತುಂಗ ವಿಕ್ರಮ ನಮ್ಮ ಸಂಗೀತಲೋಲನ
ಮಂಗಳುಡುಪಿಲಿ ದರ್ಶಿಸಿ
ತುಂಗ ತಟಪಿನೆ ಮಹಿಷಿ ಕ್ಷೇತ್ರದಿ
ಅಂಗವೃಂದಾವನವ ಪೊಗಿಸುತ
ರಂಗಗುರು ಗೋವಿಂದ ವಿಠಲನ
ಮಂಗಳ ಧ್ಯಾನದಲಿರುತಿಹ ೫

೪೦೮

ಶ್ರೀಸತ್ಯವ್ರತರು

ಶಿರಿ ಸತ್ಯವ್ರತಸುರ ತರುವೆ ನಿಮ್ಮಯಪಾದ
ವರಶತ ಪತ್ರಕ್ಕೆಭಿನಮಿಪೇ ಪ

ಪರಮ ದುರ್ಮತಧ್ವಾಂತ ಭಾಸ್ಕರ
ವರಸುಜ್ಞಾನಾಕಾಂಕ್ಷಿಯಾಗಿಹೆ
ನಿರತ ಶ್ರೀ ಮದಾನಂದ ತೀರ್ಥರ
ವರಸು ಭಾಷ್ಯಾಮೃತವ ಸುಣಿಸೋ ಅ.ಪ.

ಪೊಗಳಲೆನ್ನಳವೆ ನಿಮ್ಮಗಣಿತ ಮಹಿಮೆಯ
ಜನದಿ ವಿಖ್ಯಾತರೆ ಗುರುವೇ ।
ಸುಗುಣಿತವ ಭಕ್ತರ್ಗೆ ಕಾಡುವ
ವಿಗಡ ಅಪಸ್ಮಾರ ಕುಷ್ಠವು
ಮಿಗಿಲು ರೋಗಾದಿಗಳ ಕಳೆಯುತ
ಬಗೆ ಬಗೆಂದಲಿ ಸ್ತುತ್ಯರಾಗಿಹ ೧

ಸರಿತು ಪ್ರವಹದಿ ಎರಡೆರಡು ಸುತರ್ಗಳ
ಹರಣ ಪೋಗಲು ಖೇದದೀ ।
ವರದ್ವಿಜನು ರಘುನಾಥಾಖ್ಯ ಭಕ್ತಿಲಿ
ಶಿರಿಸತ್ಯವ್ರತರನು ಸೇವೆಗೈಯ್ಯಲು
ಅರಿತು ಸಂತಾನಾಷ್ಟ ಕಂಗಳ
ತ್ವರಿತ ಕರುಣಿಸಿ ಪೊರೆದಗುರುವರ ೨

ಶಿರಿಸತ್ಯ ಸಮಧರೀ ವೃಂದಾವನದ ಬಳಿ
ಶಿರಿಮನ್ನ್ಯಾಯಾಸುಧೆ ಪಠಿಸೇ ।
ಗುರುವರರು ಸಂತುಷ್ಟ ಪಡುತಲಿ
ಶಿರವತೂಗಲು ಅಂತರಂಗದಿ
ವರಸುವೃಂದಾವನವು ತನ್ನಿಯ
ಶಿರವ ತೂಗುತ ತೋರಿತಚ್ಚರಿ ೩

ವಾದಿಭಹರ್ಯಕ್ಷ ಮೇಧಾವಿ ವಿಭುದೇಡ್ಯ
ಸುಧಾಪಿವೃತ್ತಿ ಕರ್ತಾರ ।
ಮೇಧಿನಿಯ ಸಂಚರಿಸಿದು
ವಾ೯ದಿಗಳ ಬಲು ಖಂಡಿಸುತ

ಭೋಧಿಸುತ ತತ್ವಗಳ ಸುಜನಕೆ
ಹಾದಿಮೋಕ್ಷಕೆ ತೋರ್ದ ಯತಿವರ ೪

ವೇದವಿದ್ಯಾಖ್ಯ ಸತ್ಕರಜರೆಂದೆನಿಸುತ್ತ
ಮೋದ ತೀರ್ಥರ ಸೇವೆಗೈದೂ ।
ಹಾದಿ ಚರಿಸುತ ಸಾಂಗ್ಲಿಕ್ಷೇತ್ರದಿ
ಆದರದಿ ವೃಂದಾವನವ ಪೊಕ್ಕು
ನಾದಗುರು ಗೋವಿಂದ ವಿಠಲನ
ಮೋದ ಧ್ಯಾನಾಸಕ್ತ ಗುರುವರ ೫

೪೧೯

ಶ್ರೀ ಶ್ರೀಸತ್ಯಪ್ರಿಯ ತೀರ್ಥರು

ವೃಂದಾವನ ನೋಡಿದೆ । ಸತ್ಯ ಪ್ರೀಯರ
ವೃಂದಾವನವ ನೋಡಿದೇ ಪ

ಸತ್ಯ ಪೂರ್ಣ ಕರಜರೆನಿಸಿ । ಸುತ್ತಿಕ್ಷೇತ್ರಗಳನೆಲ್ಲ
ಮತ್ತೆ ಬರಲು ಶ್ರೀರಂಗಕ್ಕೆ । ಫತ್ತೇಸಿಂಗ ಭೇಟಿಯಾದ ೧

ಶತೃಗಳ ಗೆದ್ದು ಬಂದು । ಸತ್ಯಪ್ರಿಯರಿಗೆರಗಿ ಅವನೂ
ಇತ್ತು ಊರುಗಳನೆರಡು । ನೆತ್ತಿ ಚಾಚಿ ನಮಿಸೀದ ೨

ಮಾನಮಧುರಿ ಊರಿನಲ್ಲಿ । ಪ್ರಾಣೋತ್ಕಮಣ ಸಮಯದಲ್ಲಿ
ಜ್ಞಾನಿ ರಾಮಾಚಾರ್ಯರಿಗೆ । ದಾನ ಮಾಡ್ದ ತುರ್ಯಾಶ್ರಮ ೩

ಮಾಧವನ ದಯದಿಂದೆ । ಸಾಧಿಸುತ ಬದರಿ ಯಾತ್ರೆ
ವೇದವತಿ ತೀರದಲ್ಲಿ । ಸಾಧುಗಳ ವೃಂದಾವನ ೪

ವೇದ ವೇದ್ಯನಾದ ಗುರು । ಗುರುಗೋವಿಂದ ವಿಠಲನ
ಮೋದದಿಂದ ಭಜಿಸುತ್ತ । ಆದರದಿ ಧ್ಯಾನಾಸಕ್ತ ೫

೪೧೦

ಶ್ರೀ ಸತ್ಯಬೋಧರು

ನೋಡಿದೇ । ಗುರುವರರ ನಾ ನೋಡಿದೇ ಪ

ನೋಡಿ ಗುರುಗಳ ಪಾದ । ಈಡಾಡಿ ಶಿರವನು
ಬೇಡೆ ಭಕ್ತಿ ಜ್ಞಾನ ನೀಡುತ ಪೊರೆವರ ಅ.ಪ.

ಹೇಮ ಕಾಮಿನಿಯನೆ ಜರಿದೂ । ಪ್ರಿಯರ
ಪ್ರೇಮದ ಚರಣಗಳ್ಪಿಡಿದೂ । ಬಲು
ನೇಮದಲ್ಪತಿಯಾಗಿ ಮೆರೆದೂ । ಮಾಯಿ
ಗೋಮಾಯಿಗಳನೆಲ್ಲ ಜರಿದೂ । ಅಹ
ರಾಮಚಂದ್ರರ ಪಾದ ತಾಮರಸವ ಧರಿಸಿ
ಭೂಮಿಯೊಳಗೆ ಚರಿಸಿ । ಮೆರೆಸಿದ ಗುರುಗಳ ೧

ಶೇಷರೂಪಿಲಿ ಬಂದ ಹರಿಯಾ । ಗುಪ್ತ
ಭಾಷೆಯ ಕೇಳುತ್ತ ಗೃಹವಾ । ಪೊಕ್ಕು
ಮೀಸಲೆಂದೆನಿಸಿದ ಧನವಾ । ಲೇಸಾ
ಯಾಸಿಲ್ಲದೆ ತೆಗಿಸ್ಯದನಾ । ಆಹ
ಏಸೇಸೋ ಜನುಮದಿ । ಪೋಷಿಸಿರೂವದನ
ಶ್ರೀ ಶಗರ್ಪೀಸುತಲಿ ತೋಷವ ಪಡಿಸಿದರ ೨

ಮೋದದಿ ಹರಿ ಪರನೆಂದೂ । ಪೂರ್ಣ
ಭೋದರೆ ಗತಿ ನಮಗೆಂದೂ । ಮಾಯ
ವಾದಗಳನೆ ಬಿಡಿರೆಂದೂ । ಸತ್ಯ
ಬೋಧರೆ ಅರುಹುತ ನಿಂದೂ । ಆಹ
ವೇದ ವಿನುತ ಗುರುಗೊವಿಂದ ವಿಠಲನ
ಪಾದ ಪಿಡಿದು ಸವಣೂರಲಿ ಮೆರೆವರ ೩

೪೧೧

ಶ್ರೀ ವಿಷ್ಣು ತೀರ್ಥರು (ಮಾದನೂರು)

ಶ್ರೀ ವಿಷ್ಣು ತೀರ್ಥರೆ ನಮೋ ಪ

ಶ್ರೀ ವಿಷ್ಣುಪದ ತಾಮರಸ ಭ್ರಮರರೆಂದನಿ
ಸೂವಲೌಕಿಕ ಸುವೈದಿಕ ಸುಶಬ್ದ ಜಾತವ
ಸಾರ್ವಭೌಮ ಹರಿಗನ್ವಯಿಪರಂ ಭಜಿಸುತ್ತ
ಇಷ್ಟಾರ್ಥವಂ ಪಡೆಯಿರೊ ಅ.ಪ.

ಸವಣೂರು ಸನಿಯ ಸಿದ್ಧಾಪುರದ ಸೀಮೆಯಲಿ
ಅವಸಿತರು ಬಾಲ ಆಚಾರ್ಯ ಭಾಗೀರ್ಥಿ ಎಂ
ಬುವರು ಸದ್ಧರ್ಮರತರೆನಿಸಿ ಜಯತೀರ್ಥರಂ ಸೇವಿಸಲು ಬಹು ಭಕುತಿಲಿ ।
ಅವರನುಗ್ರಹ ಜಾತ ವರಶಿಶುವಿಗವರ ನಾಮವನಿಟ್ಟು ।
ಕಾಲದೊಳಗುಪನಯ ನವಂ ಮಾಡಿ ಸರ್ವ ವೇದ
ವೇಂದಾಗ ಪಾರಂಗತರು ಐಜಿ ಆಚಾರ್ಯರಲಿ ಬಿಡಲು ೧

ಕುಶಲತೆಯು ಮತ್ತೆ ಸೌಶೀಲ್ಯ ಗುಣನಿಧಿ ಎನಿಪ
ಶಿಷ್ಯನಿಗೆ ಸಚ್ಛಾಸ್ತ್ರ ಪಾರಂಗತನು ಎನಿಸಿ
ಒಸೆದು ದ್ವಿತಿಯಾಶ್ರಮಕೆ ಚೋದಿಸಿ ಕಳುಹಲವ ಗೃಹಧರ್ಮ ಸ್ವೀಕರಿಸುತ ।
ಎಸೆವ ಕೀರ್ತಿಲಿ ಮೆರೆದು ಶಿಷ್ಯರಿಗೆ ಶಾಸ್ತ್ರ ಬೋ–
ಧಿಸುತಲಿರಲು ಸತ್ಸಂತಾನವಂತರಾಗುತ
ಎಸೆವ ಹಂಸತೂಲಿಕ ತಲ್ಪದೊಳು ಪವಡಿಸಿರೆ ಅಪರಾಹ್ನ ರೋಗಾರ್ತರು ೨

ಅಂತರ ಗೃಹ ಚತುರ ದಿಗ್ವಲಯ ದಾದರ್ಶ
ದೂತರದಿ ಪ್ರತಿಫಲಿತ ತಮರೂಪವಿರೆ ಸತಿಯು
ಸಂತಸದಿ ಪತಿ ಚರಣ ಸೇವಿಸಿರೆ ಹೊರ ಬಾಗಿಲೊಳು ಓರ್ವ ಭಿಕ್ಷಾರ್ಥಿಯು ।
ಸಂತ ಪುರಂದರ ಸುದಾಸಾರ್ಯ ನುಡಿದುದನು
ಅಂತೆ ಮಂಚ ಬಾರದು ಮಡದಿ ಬಾರಳು ಎಂಬ

ಪಿಂತಿನ್ವಚನವ ಕೇಳಿ ಚಿಂತಿಸುತ್ತಿರೆ ತಮಗೆ
ಜಾತಿ ಸ್ಮೃತಿ ಒದಗುತಿರಲು ೩

ಘನವಾದ ಐಶ್ವರ್ಯ ಸತಿಸುತರು ಬಂಧುಗಳ
ತೃಣಕೆ ಸಮ ತಿಳಿಯುತ್ತ ಜಯ ಗುರೂ ಹೃದ್ಗತವ
ಅನು ಸರಿಸೆ ಅಜ್ಞಾತ ಬಗೆಯಲಿರುತಿಹನೆಂದು ವೈರಾಗ್ಯವನೆ ಪೊಂದುತ ॥
ಮನೆಯಿಂದ ಹೊರ ಹೊರಟು ಅನತಿ ದೂರವಸಾಗೆ
ಘನ ಸರ್ಪ ರೂಪದಿಂ ತೋರಿ ಕೊಳೆ ಜಯತೀರ್ಥ ಮುನಿವರ್ಯ
ಹೃದ್ಗತವ ತಿಳಿದು ವಸುಮತಿ ವ್ಯರ್ಥ ಸಂಚರಣೆ ಸಂತ್ಯಜಿಸುತ ೪

ಶೃತಿ ಸ್ಮೃತಿಗೆ ಸಮ್ಮತವು ದಶಮತಿಯ ಸಮಯವೆ
ನುತತಿ ಹಿತದಿ ಪ್ರವಚನೆಗೆ ಪ್ರೇರಿಸಿಹ ಗುರು
ಮತವ ಸತ್ಕರಿಸಿ ಕಾರುಣ್ಯ ಕೊಂಡಾಡಿ ಸಾಧಿಸಲು ತೃತಿಯಾಶ್ರಮವನು ॥
ಹಿತದಿ ಕೈಕೊಂಡು ಮಲವ ತಾನಪಹರಿಪಸರಿ
ತ್ಪತಟದಲಿ ಇರುವ ಮನುವಳ್ಳಿ ಪಳ್ಳಿಯಲಿ ನೆಲಿ
ಸುತಲಿ ವಿಹಿತ ಕರ್ಮಾಚರಿಸಿ ಸಿರಿಮತ್ಸು ಮಧ್ವ ವಿಜಯವ ಪಠಿಸುತಿಹರು ೫

ಗುರುಮಧ್ವ ಕರುಣದಿಂ ಸಂಚಿತ ಸುಕೃತದಲ್ಲಿ
ವರು ಮಧುಕರೀ ವೃತ್ತಿಯಿಲಿ ಶಿಷ್ಯರಂ ಸಲಹಿ
ಸಿರಿನ್ಯಾಯ ಸುಧೆ ಪ್ರವಚಿಸುತ ಜ್ಞಾನವನೆ ಬೀರುತಲಿ ಯೋಗ್ಯ ಜನಗಳಿಗೆ ॥
ಇರುತ ಕೆಲಕಾಲ ಶಿರಿ ಸತ್ಯಸಂಧರ ಕರಜ
ಗುರು ಸತ್ಯವರ ತೀರ್ಥ ಕರಜರೆಂದನಿಸುತ್ತ
ಮೆರೆವ ಚತುರಾಶ್ರಮದಿ ಸಿರಿ ವಿಷ್ಣುತೀರ್ಥರೆಂಬಂಕಿತದಿ ಮೆರೆಯುತಿಹರು ೬

ಅಂತೆ ವಾಸೀಜನರ ಅಭಿಮತವನನುಸರಿಸಿ
ಅಂತ್ಯ ಕಾಲದ ಸ್ಮರಣೆ ಸರ್ವಕರ್ಮಾರ್ಪಣವು
ಕಂತು ಪಿತ ಸ್ತೋತ್ರ ಸಿರಿಗೀತೆರತ್ನ ಬಿಂಬೋಪಾಸನಾಜ್ಞಾಪತ್ರವ ॥
ಅಂತೆ ಶಿರಿ ಭಾಗವತ ಸಾರದುದ್ಧಾರವನು
ಮುಂತಾದ ಮುಕುತಿ ಸತ್ಪಂಥಗಳ ಬೋಧಿಪ
ಗ್ರಂಥಗಳ ರಚಿಸಿ ಸುಜನೋದ್ಧಾರವನೆ ಗೈದು ಶೋಭಿಸುವರವನಿಯಲ್ಲಿ ೭

ಲಕ್ಷುಮಿಯು ನರೆಯಣರನುಗ್ರಹವನೇ ಪಡೆದು
ದಕ್ಷಿಣದಿ ಬದರಿಕಾಶ್ರಮವೆನುತಿರೆ ಮೆರೆವ
ತ್ರಕ್ಷ್ಯ ಮೋದೇಶ್ವರ ಪುರದಲಿ ನೆಲಿಸಿ ನೂರೆಂಟು ಸಲ ಸುಧೆ ಪ್ರವಚಿಸುತಲಿ ॥
ಕುಕ್ಷಿಯೊಳಗುಳ್ಳ ಸು ಕ್ಷೇತ್ರಗಳ ಸಂಚರಿಸಿ
ಲಕ್ಷಿಸುತ ॥ ಯೋಗ್ಯ ಜನಕುಪದೇಶ ಚರಿಸಲು
ಸ್ವಕ್ಷೇತ್ರಕೇ ಮರಳಿ ಕುಶಸರಿತು ತೀರದಲಿ ಪರ್ಣ ಶಾಲೆಯಲಿ ವಸಿಸಿ ೮

ಹರಿನಿಯುತ ಕಾಲ ತಾ ತಿಳೀಯುತ್ತ ಶಿಷ್ಯಜನ
ಕರಿವಿತ್ತು ಶಾಲಿವಾನ ಸಹಸ್ರ ಷಟ್ಯತೊ
ತ್ತರವಷ್ಟಸಪ್ತತಿಯು ಮಾಘಾಸಿತ ಪಕ್ಷ ತ್ರಯೋದಶಿ ಸುಮೂಹೂರ್ತದಿ ॥
ಸುರರು ಭೂಸುರರೆಲ್ಲ ಜಯಘೋಷ ಗೈಯ್ಯುತಿರೆ
ವರ ಮಹಾತ್ಮರು ಆಗ ಹೊಗಲು ವೃಂದಾವನವ
ಪರಿಜನರು ಮುಳುಗಿದರು ದುಃಖ ಆನಂದ ಸಾಗರದಲದನೇನೆಂಬನು ೯

ಅವತಾರಮಾರಭ್ಯ ಐದು ದಶ ವರ್ಷಗಳು
ಅವನಿಜನ ದೃಗ್ವಿಷಯರೀ ಮಹಾತ್ಮರು ತಾವು
ಅವಧೂತ ವೇಷದಿಂ ಭವನ ಪಾವನವೆನಿಸಿ ಪಿಂತೆ ಶುಕಮುನಿಯಂದದಿ ॥
ಪವನ ಮತ ಶರನಿಧಿಗೆ ಶಶಿಯು ಇಪ್ಪತ್ತೆಂಟು
ಪವಿತರ ಸುಲಕ್ಷಣ ಸುತನುವಿಂದುರೆ ಮೆರೆದು
ಅವನಿಸುರ ಶಿಕ್ಷಣ ಸದುಪದೇಶನುಷ್ಠಾನದಿಂ ಗೈದ ಕೀರ್ತಿಯುತರು ೧೦

ಇವರ ನಾಮಸ್ಮರಣೆ ಕಲಿಮಲದ ಅಪಹರಣೆ
ಇವರ ಸೇವೆಯ ಫಲವು ಸರ್ವಾಮಯ ಹರವು
ಇವರುನುಗ್ರಹವಿರಲು ವಾದಿನಿಗ್ರಹವಹುದು ಇದಕೆ ಸಂಶಯ ಸಲ್ಲದು ॥
ಇವರಿಹರು ಸುರತರುವಿನಂದದಲಿ ಶರಣರಿಗೆ
ಇವರೆ ಚಿಂತಾಮಣಿಯು ಸರ್ವ ಭಯ ಹರಿಸುವರು ಇವರ
ಗುಣಕೊಂಡಾಡಿ ಇವರೊಲಿಮೆ ಅರ್ಜಿಸಲು ಸರ್ವಕಾಮವು ಲಭ್ಯವು ೧೧

ಸರ್ವಕ್ಷೇತ್ರಾಧಿಕದಿ ಭೂವರಹ ನಿಲ್ಲಿರುವ
ಸರ್ವಭಯ ನಾಶನಕೆ ನರಹರಿಯು ಅರಿರೂಪ

ಸರ್ವಭಕ್ತರ ಭೀಷ್ಟ ವರ್ಷಣಕೆ ಗೋಪಾಲಕೃಷ್ಣರೂಪದಿ ಇರುವನು ॥
ಇವರ ವೃಂದಾವನದೊಳೀ ಪರೀ ಹರಿರೂಪ
ಪವನ ರೂಪಗಳಿಹವು ಶಿರದೊಳಗೆ ಜಯ ಮುನಿಯು
ಸರ್ವಋಷಿ ದೇವತೆಗಳಿಹರು ವೃಕ್ಷರೂಪದಿ ಈ ಪವಿತರ ಕ್ಷೇತ್ರದಿ ೧೨

ನಮೊ ನಮೋ ಜಯತೀರ್ಥ ಮುನಿಯನುಗ್ರಹಜಾತ
ನಮೊ ನಮೋ ಅವಧೂತ ಚರ್ಯ ಬಹು ನಿಷ್ಣಾತ
ನಮೊ ನಮೋ ಶುಕರಂತೆ ಭಗವದ್ವಿಭೂತಿಯೇ ಭಾಗವತ ನಿಷ್ಣಾತರೆ ॥
ನಮೊ ನಮೋ ಭಕ್ತಜನ ಕಾಮಧುಕ್ ಭವ್ಯಾತ್ಮ
ನಮೋ ಶ್ರೀ ಮದಾನಂದ ಮುನಿಚರಣ ಮಧುಪರೆ
ನಮೊ ಗುರೂ ಗೋವಿಂದ ವಿಠಲ ಪಾದಾಶ್ರಿತರೆ ನಮೊ ವಿಷ್ಣುತೀರ್ಥ ಪಾಹಿ ॥

೪೧೨

ವಿಷ್ಣು ತೀರ್ಥರಪಾದ । ನಿಷ್ಠೆಯಿಂದಲಿ ಭಜಿಸೆ
ಇಷ್ಟಾರ್ಥ ಸಲಿಸೂವರ್ । ಕೃಷ್ಣಪೂಜಕರೂ ಪ

ಜಿಷ್ಣುಸಖ ಶ್ರೀ । ಕೃಷ್ಣ ಭಕುತರು
ಶ್ರೇಷ್ಠ ದಂಪತಿ । ಗರ್ಭಜಾತರು
ಸುಷ್ಠಜಯಮುನಿ । ಸೇವೆಯಿಂದಲಿ
ಇಷ್ಟವರದಿಂ । ದುದಯರಾದರು ೧

ಬಾಲ್ಯದಲ್ಲು ಪನೀತ । ಆರ್ಯರಿಂದು ಪದಿಷ್ಟ
ಆರ್ಯ ಐಜೀವರ್ಯ । ಗುರುಕುಲವಸಿತ ।
ಕ್ರೌರ್ಯ ಹರಿಜಪ । ಧೈರ್ಯದಿಂದಲಿ
ವೀರ್ಯವತ್ತರ । ಜಪಿಸಿ ಗುರುಸುತ
ವರ್ಯನಪಮೃತಿ । ಕಳೆದು ಗುರುವಿಂ
ಮಾನ್ಯವಂತನು । ಎನಿಸಿ ಮೆರೆದ ೨

ಮಲದ ಅಪಹಾರಿಯ । ಜಲಪ್ರವಾಹದಿ ನಿಂದು
ಘಳಿಗೆ ಇರಲು ಉದಯ । ವಲಿಸಿ ಮಧ್ವವಿಜಯ
ಒಲಿಮೆಯಿಂದಲಿ । ಸೂರ್ಯನರ್ಘ್ಯವ
ಕಾಲಮೀರದೆ । ತಾನು ಕೊಡುತಲಿ
ಮೂಲಗ್ರಂಥವ । ತಿಳಿಯ ಬೋಧವ
ಇಳೆಯ ಸುರರಿಗೆ । ಪೇಳ್ದ ಮಹಿಮಾ ೩

ಅವಧೂತ ಚರ್ಯದಿ । ಅವನಿಯೊಳ್ಚರಿಸುತ್ತ
ಭುವನ ಪಾವನ ಸುಧೆ । ದಿವಿಜರಿ ಗುಣಿಸೀ ।
ಶ್ರವಣ ಗೈಸುತ । ಸುಧೆಯ ಗ್ರಂಥವ
ಅವನಿಯೊಳು । ತತ್ವಾರ್ಥಬೋಧಿಸಿ
ಪ್ರವರ ಭೂಸುರ । ಮುಕ್ತಿಮಾರ್ಗದ
ಹವಣೆ ಗೈದಿಹ । ಭುವಿಯದಿವಿಜ ೪

ವನವನಚರಿಸುತ್ತ । ಮುನಿವಳ್ಳಿಯಲಿ
ಮುನಿಯೋಗ್ಯವೆನಿಸುವ । ವಾನಪ್ರಸ್ಥಾಶ್ರಮದಿ ।
ಘನಸುವ್ರತವನೆ । ಅಸಿಯಪತ್ರದಿ
ಮನವನಿರಿಸುತ । ಗಣ್ಯನಾದೆಯೊ
ಅನಘ ಹರಿಕಾ । ರುಣ್ಯ ನಿನ್ನಲಿ
ಗಣನೆಗೈಯ್ಯಲು । ಮನುಜಗಸದಳ ೫

ಯತಿ ಸತ್ಯವರರಿಂದ । ಯತಿ ಆಶ್ರಮವ ಪೊಂದಿ
ಕ್ಷಿತಿಯ ಸಂಚರಿಸುತ್ತ । ಅನ್ನಾಳಿಗಾಗಮೀಸೀ ।
ಹಿತನು ದೇಶಾದಿ । ಪತಿಯ ರೋಗವ
ಹತಗೈದು ಅನ್ನವ । ಜೊತೆಲುಂಬುವ
ಯತನ ಸಾಧಿತ । ಪ್ರಾಪ್ತಕ್ಷಾಮವ
ಹತವ ಗೈಸಿದೆ । ರಮೆಯನೊಲಿಸೀ ೬

ಮೇದಿನಿಯೊಳು ಖ್ಯಾತ । ಮೋದಾಪುರದಿ ನೆಲೆಸಿ
ಮೋದ ಮುನಿ ಮತ ಬೋಧ । ಗ್ರಂಥಗಳ್ರಚಿಸೀ ।

ಮೋದದಿಂ ವೃಂದಾವನಸ್ಥರು
ಸಾದು ಸೇವೆಗೆ ಅಭಯನೀಡುತ
ನಾದಗುರು ಗೋವಿಂದ ವಿಠಲನ
ಮೋದ ಧ್ಯಾನಾಸಕ್ತರಾಗಿಹ ೭

೪೧೩

ನಮಿಸುವೆನು ನಮಿಸುವೆನು ವಿಶ್ವಪ್ರಿಯಾರ್ಯ ।
ಅಮದು ನಿಮ್ಮಯ ಮಹಿಮೆ ಪಾಮರನಿಗಳವೇ ಪ

ಮುನಿಯ ವಿಶ್ವಾಧೀಶ್ವರರ ಕರಜಾತ
ಗುಣನಿಧಿಯು ವಿಶ್ವೇಶ ತೀರ್ಥ ಕರಜ
ಜನಕತಿ ಪ್ರಿಯನೆಂದು ವಿಶ್ವಪ್ರಿಯಾಭಿಧನೆ
ಗುಣಪೂರ್ಣ ಹಯಗ್ರೀವ ಪಾದ ಭಜಕ ೧

ಸ್ವಪ್ನದ್ರಷ್ಟುಗಳೆನಿಸಿ ಅಪ್ಪಹಯ ಮುಖದಯದಿ
ಅಪ್ಪುತಲಿ ಜಾತಿಸ್ಮೃತಿ ಗೊಪ್ಪವೆಂದೆನಿಪ ।
ಸ್ವಪ್ನದಾಖ್ಯಾನವನು ಪ್ರಕರಣಗಳಂದೆನಿಸಿ
ಕೃಪ್ಪೆಯಲಿ ವ್ಯಕ್ತಿಗಳ ಪರಿಚಯವ ಗೈದೇ ೨

ನಿರಶಾನದಿ ವ್ರತವು ಮರಳಿ ಶಿಬಿಕಾರೋಹ
ಪುರಟ ಸಂಪುಟಗತವು ಮಧ್ಯವಾಟಸ್ಥ ।
ಹರಿಪ್ರತಿಮೆ ಕೃಷ್ಣ ಬಳಿ ಅರ್ಚಿಸುತ ಭಾವೀಂದ್ರ
ಮೆರೆದೆ ಗುರುಗೋವಿಂದ ವಿಠಲ ಭಕ್ತೇಶ ೩

೪೧೪

ವಿಶ್ವಕ್ಕೆ ಪ್ರಿಯ ಗುರುವರ್ಯ । ಕಾಯೊ
ವಿಶ್ವಪ್ರಿಯಾಭಿಧ ಯತಿವರ್ಯ ಪ

ಧೃತ – ವಿಶ್ವದೊಳಗಾವೆಲ್ಲಿ ನಿಮಗೆಣೆ ।
ಸುಸ್ವಭಾವ ವಿರಾಗಭೂಷಣ
ವಿಶ್ವ ವಾಯುಪದಾರ್ಹವಂಶಜ
ಧ್ರಸ್ವಗೈವುದು ಎನ್ನಕರ್ಮ ಅ.ಪ.

ವಿಶ್ವಾಧೀಶ್ವರ ಮುನಿ ಕರಜ । ಯತಿ ।
ವಿಶ್ವೇಶ ತೀರ್ಥರ ಕರಜ
ವಿಶ್ವಪ್ರಿಯಾಭಿಧ ದಿವಿಜ । ಧೃತ ।
ಅಶ್ವಗ್ರೀವನ ಪಾದರಜ ।
ವಿಶ್ವ ಗುರು ಮಧ್ವಾರ್ಯ ಶಾಸ್ತ್ರದ ।
ನಿಸ್ವನವ ನಿಮ್ಮಿಂದ ಕೇಳಲು
ವಿಷ್ವಕುದೇಶಗಳ ಸಜ್ಜನ ।
ಸತ್ವರದಿ ಉಡಪಿಯನೆ ಸಾರ್ದರು ೧

ಸ್ವಪ್ನ ವೃಂದಾವನಾಖ್ಯಾನ । ನಿಮ್ಮ ।
ಗೊಪ್ಪಿದ ಶಿಷ್ಯರ್ಗೆ ಬೋಧನ ।
ಅಪ್ಪಂದದಲಿ ಮಾಡ್ದ ಕಾರಣ । ಅದು ।
ಒಪ್ಪಿತು ಬಹು ವಿಧ ಪ್ರಕರಣ ॥
ಸ್ವಪ್ನ ದ್ರಷ್ಟು ದ್ವಿಜವರೇಣ್ಯರೆ ।
ಅಪ್ಪ ಅಶ್ವಗ್ರೀವ ದೇವನ
ಕೃಪ್ಪೆಯಿಂದಲಿ ಜಾತಿ ಸ್ಮೃತಿಯನು ।
ಅಪ್ಪಿವ್ಯಕ್ತಿಯ ಜ್ಞಾನವಿತ್ತಿರಿ ೨

ಮಧ್ಯವಾಟ ಪುರಟ ಸಂಪುಟ । ತಂದು ।
ವಿದ್ಯುಕ್ತ ಹಯಮೊಗ ನಿಕಟ ।
ಸದ್ಯ ಸ್ಥಾಪಿಸಿ ರಜತ ಪೀಠ । ದಲ್ಲಿ ।
ಪರ್ಯಾಯ ಗೈದೆಯೊ ಪಟುಭಟ ॥
ಆರ್ಯ ಗುರು ರಾಜೋಕ್ತಿಯಂದದಿ ।
ಕಾರ್ಯಗಳು ಬಹು ಭಾವಿ ನಡೆಸಿದೆ

ಆರ್ಯ ಭಾವೀ ಇಂದ್ರ ಪದದಲಿ ।
ಯೋಗ್ಯರೆನಿಸಿದ ಯೋಗಿವರ್ಯ ೨

ನಿರಶನಾದಿಯ ವ್ರತ ಚರಣ ।
ಆರು ಎರಡೊತ್ತರ ಗೈದು ಸಜ್ಜನ
ನೆರೆದವರಿಗೆ ಸುಧಾ ಪ್ರವಚನ । ಗೈದು ।
ವಿರಚಿಸಿದ್ಯೊ ಮುಕ್ತಿ ಮಾರ್ಗಣ ।
ಮರಳಿ ಕೇರಳ ಭೂಷ ವಿರಚಿತ ।
ವರ ಸು ಶಿಬಿಕಾರೋಹ ಗೈಯ್ಯುತ
ತೆರಳಿ ಪರ್ಯಾಯೋತ್ಸವಕೆ ಬಹು ।
ಮೆರೆದ ಗುರು ವಿಶ್ವ ಪ್ರಿಯಾರ್ಯ ೪

ಜಯ ಜಯ ಜಯ ವಿಶ್ವಪ್ರಿಯ । ಮುದ್ದು ।
ಹಯ ಮೊಗಗತ್ಯಂತ ಪ್ರೀಯ ।
ದಯದೃಷ್ಟಿಯಲಿ ನೋಡು ಜೀಯ । ಭವ ।
ಭಯವನೆ ಕಳೆವುದು ರಾಯ ।
ದಯವನಧಿ ಕರುಣವನೆ ದೊರಕಿಸಿ ।
ಜಯ ಗುರು ಗೋವಿಂದ ವಿಠಲನ
ದ್ವಯ ಪದಾಂಬುಜ ತೋರಿ ಸಲಹೊ ।
ವಿಯದಧಿಪ ಪದ ಪೊಂದುವವನೆ ೫

೪೧೫

ಉತ್ತರಾದಿಯ ಮಠದ ಪೀಠವಾಸಾ ಪ

ಸತ್ಯಧರ್ಮಾಖ್ಯ ಯತಿ ಭಕ್ತ ಜನ ಪೋಷಾ ಅ.ಪ.

ಪಂಚಮುಖ ಪ್ರಾಣನೂಪಾಸಕನೆ ಎನ್ನ
ವಂಚಿಸದೆ ಭವದೊಳಗೆ ಕಾಯೊ ಬೇಗಾ ।
ಸಂಚಿತವ ಪರಿಹರಿಸೊ ವಾಂಛಿತಾರ್ಥದ ಹರಿಯ
ಮಂಚ ಪದ ಯೋಗ್ಯಾಂಶ ಸಂಭೂತ ಯತಿಯೇ ೧

ಭದ್ರೆ ತೀರದಿ ವಾಸ ಭವದುಪದ್ರವ ಕಳೆಯೊ
ಕಾದ್ರ ವೇಯನ ಪದವು ಭದ್ರ ನಿನಗೇ ।
ಮಾದ್ರ ವೇಯಾಗ್ರಜಗೆ ವಲಿದಿತ್ತೆ ಅಸ್ತ್ರವನು
ರೌದ್ರ ಮೂರುತಿ ಕಾಯೋ ಗುರು ವರೇಣ್ಯಾ ೨

ಪ್ರಾಜ್ಞ ಮೂರುತಿ ಹರಿಯ ಆಜ್ಞೆಯನು ಸ್ವೀಕರಿಸಿ
ಸುಜ್ಞ ನೀ ರಚಿಸಿದೆಯೊ ಭಾಗವತ ವ್ಯಾಖ್ಯಾ ।
ಸಜ್ಜನೋದ್ಧಾರಿಯನ್ನ ಜ್ಞಾನ ಪರಿಹರಿಸಿ
ವಿಜ್ಞಾನಮಯ ಹರಿಯ ತೋರ್‍ಯೆಯ್ಯ ಜೀಯಾ ೩

ಸತ್ಯವರ ಕರಜಾತ ಶ್ರೀ ಸತ್ಯ ಧರ್ಮಾಖ್ಯ
ನಿತ್ಯ ತವ ಸಚ್ಚರಣ ಸ್ತುತಿಪ ಜನರಾ ।
ಅತ್ಯಧಿಕ ಪ್ರೀತಿಯಲಿ ಹತ್ತಿರಕೆ ಕರೆಯುತ್ತ
ಸತ್ಯ ಮೂರುತಿ ಪುರಕೆ ಎತ್ತೊಯಿವ ಗುರುವೇ ೪

ವತ್ಸರ ಸುವಿಕೃತವು ಅಸಿತ ಶ್ರಾವಣದಲ್ಲಿ
ಮತ್ಸ್ಯಾದಿ ದಶ ಮತ್ತೆ ಮೂರನೆಯ ದಿನದೀ ।
ವತ್ಸಾರಿ ಶ್ರೀ ಗುರು ಗೋವಿಂದ ವಿಠ್ಠಲನ
ಹೃತ್ಸರೋಜದಿ ಭಜಿಸಿ ತನುವ ತ್ಯಜಿಸಿದನೇ ೫

೪೧೬

ಗುರು ಚರಣವನು ಸಂಸ್ಮರಿಸಿರೋ ಪ
ಗುರು ಲಕ್ಷ್ಮಿ ವರಜಾತ ।

ಗುರು ಲಕ್ಷ್ಮಿಪ್ರಿಯ ತೀರ್ಥ ಚರಣ ಸರಸಿಜ ಭಜಿಸೆ ।
ಕರಣದಂತರ ಬಾಹ್ಯ ಪರಿಶುದ್ಧಿಯನೆ ಗೈದು ।
ಜ್ಞಾನ ಭಕ್ತಿಯನಿತ್ತು ಹರಿ ಪೊರೆವ ಸಂತತದಲಿ ಅ.ಪ.

ಪೂರ್ವಾಶ್ರಮಾ ನಾಮ । ಭೂವಿಬುಧ ಕೃಷ್ಣಾಖ್ಯ
ದೇವರಾಯನ ದುರ್ಗ । ದಾವ ನರಸೀಪುರದಿ
ಆವಾಸಿಸುತ್ತಿರಲು । ಓರ್ವ ಸಖನಿವರ ಜ್ಞಾನಾನುಸಂಧಾನದಾ ।
ಭಾವ ತಿಳಿಯುತ ಮನದ । ಯಾವ ದೊಂದಭಿಲಾಷೆ
ನೀವು ಸಲಿಸುವುದೆನ್ನೆ । ಆವುದೆನುತಲಿ ಕೇಳೆ
ಯಾವ ಪನಸದ ಫಲವ । ಆಸ್ವಾದು ಮಧು ಒಡನೆ
ಓವಿ ಕರಡಿಯು ಕಲಸಿದ ೧

ಅದರ ಪ್ರಾಪುತಿಗಾಗಿ । ಬದಿವನನೊಂದಿನವು
ಬೆದರದಲೆ ಪೊಗುತಿರಲು । ಎದುರೊಂದು ಶಿಲೆ ಮೇಲೆ
ವದಗಿ ಕಲಸಿದ ಕಂಡು ।
ಅದರೊಡನೆ ಮರನೇರೆ ಬಂದಿತದು ಮರಿಗಳೊಡನೆ ।
ಅದಕು ಇವರಿಂಗಾಯ್ತು । ಕದನವೂ ಕೆಲಕಾಲ
ಒದಗೆ ಜಯ ವಿಬುಧರಿಗೆ । ಹದುಳದಲಿ ಗೃಹಸೇರಿ
ಮುದದಿಂದ ಶ್ರೀಹರಿಯ । ಪದ ಸ್ಮರಣೆಯಲ್ಲವರು
ದಿನಗಳನೆ ಕಳೆಯುತಿಹರು ೨

ಯತಿ ಲಕ್ಷ್ಮಿ ವರರಿಂದ । ಯತಿಗಳಾಶ್ರಮ ಪೊಂದಿ
ಹಿತದಿಂದಲಾ ಬೂದಿ । ನೆತ್ಯಾಖ್ಯ ಗ್ರಾಮದಲಿ
ಸ್ಥಿತರಾಗಿ ಶಿಷ್ಯರಿಗೆ । ಹಿತದ ಉಪದೇಶವ
ಪ್ರೀತಿಯಲಿ ಮಾಡುತಿರಲು ।
ಯತಿಗಳಾಶ್ರಮದಲ್ಲಿ । ಮತಿ ವಂತ ವಿಪ್ರೋರ್ವ
ಕ್ಷಿತಿಯೊಳಾ ನಾಕನಿಭ । ಮಂತ್ರ ಮಂದಿರ ಸೇವೆ
ಅತಿಹಿತದಲೆಸಗುತಿರೆ । ಯತಿಗಳಾಶೀರ್ವದಿಸೆ
ಪಥವಾಯ್ತು ಪ್ರಿಯರಲ್ಲಿಗೇ ೩

ಭಕುತಿಯಿಂ ಭರಿತ । ಭಾವುಕನಾಗಿ ಪರಮಗುರು
ಲಕುಮಿ ಪ್ರಿಯ ತೀರ್ಥಪದ । ಪಂಕರುಹಕಭಿನಮಿಪೆ
ರುಕುಮಿಣಿಯ ಪತಿ ಸೇವೆ । ಯುಕುತನಾಗಿರಲ್ವೊರೆದು
ನಾಲ್ವತ್ತು ದಿನ ಮಿತಿಯಲಿ ।

ಕಕುಲಾತಿ ತೊರೆದು ನಿಜ । ಭಕುತಿಯಿಂ ಗೈವುತಿರೆ
ಲಕುಮಿ ಪ್ರಿಯರಾಚಾರ । ಉಕುತಿಯಲಿ ದುರ್ಭಾವ
ಪ್ರಕಟವಾಗಲು ಮನದಿ । ಬಂಕಪುರ ಮಾರ್ಗವನೆ
ತೆರಳಲನುವಾದನೂ ೪

ಮತ್ತೆ ನರಹರಿ ತಾನು । ವ್ಯಕ್ತಯಿಂತೈಜಸನು
ಒತ್ತಿಪೇಳಲು ಬುಧನು । ಮತ್ತೆ ಗುರುಪದಕೆರಗಿ
ಬಿತ್ತರಿಸೆ ತನ್ನಸ್ವಪ್ನ । ವಾರ್ತೆಗಳ ವಿಶ್ವಮಿತ್ರನ
ಭಾವವನೆ ತೋರುತ ।
ಇತ್ತಲಿಂದೆರಡೊರ್ಷ । ಕಿತ್ತಪೆವು ಆಶ್ರಮವ
ಆರ್ಥಿಯಿಂದಿರುತಿರ್ದು । ಹಸ್ತಿವರದನ ಸೇವೆ
ಉತ್ಸಹದಲೆಸಗುವುದೆ । ನುತ್ತಲಾಶೀರ್ವದಿಸಿ
ಚಿಂತಿಸುತ್ತಿರೆ ಹರಿಯನು ೫

ಗ್ರಾಮದೊಳಗುಳ್ಳ ಖಲ । ಸ್ತೋಮ ಬಂದಡರುತ್ತ
ಭೂಮಿ ಗೋಸುಗ ಕಲಹ । ಸೀಮೆ ಮೀರುತ ಗೈಯ್ಯೆ
ಅ ಮಹಾಯತಿವರ್ಯ । ಭೂಮಿ ಕೃಷ್ಣಾಂಕಿತವು
ಕಾಮನೆಯ ಬಿಡಿರೆನುತಲಿ । ನೇಮದಲಿ ಘರ್ಜಿಸಲು ।
ಆ ಮಹಾ ದುಷ್ಟಜನ ಈ ಮಠದ
ಸಂಪದವ ಕಾಮಿಸುತ ಮನದಲ್ಲಿ
ನೇಮದಿಂ ಪತ್ರೋರ್ವ । ಪಾಮರನ ಒಡನವರು
ಯಾಮ ಸಂಜೆಲಿ ಕಳುಹಲು ೬

ಪರಿವಾರ ಜನಕೆಲ್ಲ । ಇರುವ ನೆಲೆ ಬಿತ್ತರಿಸಿ
ಸರಿಯುತಲಿ ಸುಕ್ಷೇಮ । ನೆರೆಯ ಸಾರುವುದೆನುತ
ಒರೆಯಲೂ ಕೆಲವರು । ಮರೆಮಾಡಿ ತೃಣ ಬಣವಿ
ನೆರೆ ಬಿಡದೆ ಸಾರುತಿರಲು ।
ವರನಿಶೀ ಸಮಯದಲಿ । ದುರುಳರೆಲ್ಲರು ಮಠಕೆ
ಬರಬರುತ ಕವಣೆಕಲ್ । ನೆರೆಬೀರ್ವ ಜನಗಳೂ

ಉರಿವ ತೃಣ ಬಣವಿಯಂ । ದುರೆ ಜ್ವಾಲೆ
ಪರಿಕ್ರಮಣ ಭಯ ಭ್ರಾಂತಿಯಿಂದಿರುತಿರೆ ೭

ಹೊರಗೆ ಪುಂಡರಳೊಬ್ಬ । ಉರಿಯೊಳಗೆ ತಾಸಿಲ್ಕಿ
ನೆರೆ ಚೀರಿ ಬೀಳಲವ । ದುರುಳರವನಂ ಕೊಂಡು
ಪುರವಿಡಿದು ಪೊರಮಡಲು । ಪರಯತುಯಗೊಡವೆ
ನಮಗೇಕೆಂದು ಬಹು ಬೆದರುತ ।
ಹರಿಗಿಡುವ ಆಭರಣ । ವರ ವಸನ ಭಂಡಾರ
ವರ ಪೇಟ ಕದತೆರೆದು । ಸರಿಸಿ ದ್ವಾರದಲಿಟ್ಟು
ಹರಿಗೆ ಆರತಿಯೆತ್ತಿ । ವರಶಿಷ್ಯ ನೊಡವೆರಸಿ
ಸಿರಿ ಹರಿಯ ನಮಿಸುತಿರಲು ೮

ಹರಿಕೃಷ್ಣ ನಾರೆಯಣ । ನರಹರೇ ತವ ಕರುಣ
ವಿರೆ ಭಯವು ಏಕೆನುತ । ನೆರೆಪಾಡಿ ಪೊಗಳುತಿರೆ
ಪರಿವಾರ ಬರುತ ಗುರು । ಚರಣಕಭಿನಮಿಸುತ್ತ
ಅಚ್ಚರಿಯ ಚಕಿತರಾಗೆ ।
ಗುರು ಲಕ್ಷ್ಮಿ ಪ್ರಿಯರು ಪರಿ । ಚರರಿಘರಸುತ್ತ ಬಲು
ಪರಿಯ ಹರಿ ಮಹಿಮೆಗಳ । ಒರೆಯುತಾನಂದಾಶ್ರೂ
ಸುರಿಸುತವ ಶೇಷನಿಶಿ । ಹರಿಕರುಣ ಸ್ಮರಣೆಯಲಿ
ಸರಿಸಿದರು ಶಿಷ್ಯರೊಡನೇ ೯

ಪ್ರಥಮ ವಾಸಸ್ಥಾನ । ದಕ್ಷಿಣ ಪಿನಕಿತಟ
ವಸ್ತಿಯಂತೊರೆದು ಕ್ರಮಿ । ಸುತ್ತ ಬರುತ್ತಬ್ಬುರೋಳ್
ಸ್ಥಿತರಾಗಿ ಪರಿಸರನ ಮತ ಬೋಧೆಲಿರಲೊಂದು
ದಿನ ನತ್ತೆ ಮತ್ಸರಿಗಳೂ ।
ಹುತಭುಕೂ ಶೇಷ ಮೆಲೆ । ಮತಿ ಮಾಡಿ ಕುಳಿತಿರಲು
ಅತಿಕ್ರೂರ ಗರ ಮಿಶ್ರ । ಯತಿಗೆ ಬಡಿಸೇ ಜೀರ್ಣಿ
ಸುತ ಪಾಪಿ ವಿಪ್ರರ್ಗೆ । ಗತಿಸಿದವು ಅಕ್ಷಿಗಳು
ಮೃತ್ಯಂತಲಂದರಾಗಿ ೧೦

ಮತ್ತೊಂದು ದಿನ ಚೆನ್ನ । ಪತ್ತನದಿ ಹರಿಪೂಜೆ
ಅರ್ಥಿಯಿಂ ಗೈದನ್ನ । ದತ್ತ ಮಾಡಲು ಹರಿಗೆ
ಯತ್ನಿಸಲು ಗರ ಮಿಶ್ರ । ಸತ್ಯವಾದುದ ಕಂಡು
ಪ್ರೋಕ್ಷಿಸಲು ಶಂಖದುದಕ ।
ವ್ಯಕ್ತವಾಯಿತು ಇವರ । ಉತ್ತುಂಗ ಮಹಿಮೆಗಳು
ಹಸ್ತಿವರದನು ಭೋಜ್ಯ । ವಸ್ತುಗಳ ಸ್ವೀಕರಿಸಿ
ದತ್ತ ಮಾಡಲು ಪುನಃ । ಮತ್ತೆ ಜೀರ್ಣಿಸಿಕೊಂಡು
ಹರಿಯನ್ನೆ ಚಿಂತಿಸುತಲಿ ೧೧

ನೆಲೆಸಿರಲ್ಲಬ್ಬುರೊಳು । ಗಳ ಗ್ರಾಹಕರು ಮತ್ತೆ
ಮಿಳಿತರಾಗುತ ರಾತ್ರಿ । ಛಲವ ಸಾಧಿಸೆ ನಿಶಿತ
ಅಲಗು ಕತ್ತಿಯ ಪಿಡಿದು । ನೆಲಕೆ ಯತಿ
ಶಿರವನ್ನು ಇಳಹುವ ಮತಿ ಮಾಡಲೂ ।
ಒಲವಿನಿಂ ಯತಿಯಕುಲ । ತಿಲಕ ವೃಂದಾವನವ ಬಳಸಿ
ನಮಿಸಲು ಸಂಚೆ । ಯಲಿ ಪೇಳ್ದ ಬ್ರಹ್ಮಣ್ಯ
ಒಳ ಪೊಗುತಲಾರಾಮ । ನೆಲೆಸೇರಿ ಮಠಸಾರಿ
ಎಂದೆನುತ ಎಚ್ಚರಿಸಿದರ್ ೧೨

ಮತ್ಸರಿಗಳಿನ್ನೊಮ್ಮೆ । ಕುತ್ಸಿತದ ಬುದ್ಧಿ ಮಹ
ಉತ್ಸವದ ಸಮಯದಲಿ । ಹೆಚ್ಚು ಜನ ಸಂಧಿಸಿರೆ
ನೆಚ್ಚಿದ್ದ ಪಾಚಕರು । ಉಚ್ಚಳಿಸಿ ಕೆಲಸಾರೆ
ಕೆಚ್ಚಿದೆಯನೇ ತೋರುತ ।
ಮುಚ್ಚಿಮಠದ್ವಾರಗಳ । ಹೆಚ್ಚುತಲಿ ಪಲ್ಯಗಳ
ಮತ್ಸಕೇತನ ಪಿತನು । ಮೆಚ್ಚುವಂದದಿ ಪಾಕ
ಪೆಚ್ಚಿಸುತಲಿ ಹರಿಯ । ಅರ್ಚನೆಯ ಕೈಕೊಂಡು
ಮೆಚ್ಚಿಸಿದರು ಸುಜನರ ೧೩

ಜ್ವರತಾಪದಿಂದೊಮ್ಮೆ । ನೆರೆ ಬಳಲು ವಂತಿರ್ಪ
ಗುರುವರರ ಕಂಡೋರ್ವ । ವರ ಶಿಷ್ಯ ಪ್ರಶ್ನಿಸಲು
ನೆರೆ ಬದುಕ ಬೇಕೆಂಬ । ಶರಿರವನೆ ತೊರೆವೆ

ನೆಂಬೆರಡುಕ್ತಿ ಸಲ್ಲದಿದಕೊ ।
ನರರಾಡಿ ಕೊಳದಂತೆ । ವರ ಭಿಷಜ ತಾಕೊಟ್ಟ
ವರಗುಳಿಗೆ ನುಂಗುವೆವು । ಹರಿ ಪೂಜೆ ವಿರುದ್ಧ
ಜ್ವರ ಕುಂಟೆ ಧನ್ವಣತ್ರಿ । ವರಮಂತ್ರ ಕೈ ಸೇರಿ
ಪರಿಪರಿ ಮರೆಯುತಿರಲು ೧೪

ಯತಿವರರ ಮಹಿಮೆಗಳ । ತುತಿಸಲೆನ್ನಳವಲ್ಲ
ಯುಕ್ತಿಯಲಿ ಅಪವಾದ । ಹೊತ್ತು ಕೊಳದಲೆ ಅವರು
ಜಿತ ಇಂದ್ರಿಯತ್ವವನು । ಮತಿಮತಾಂ ಸುಜನಕ್ಕೆ
ಪ್ರತಿರಹಿತದಿಂ ತೋರುತ ।
ಹಿತದಿಂದ ಲಾರಾಮ । ಸೇತು ಯಾತ್ರೆಯ ಗೈದು
ಕ್ಷಿತಿ ಚರಿಸಿ ಬರಬರುತ । ಹಿತಶಿಷ್ಯ ವ್ಯಾಜದಿಂ
ಸತ್ಯ ಧೀರ್‍ರನು ಚರರ । ಕೃತ ಬಹಿಷ್ಕರ ಗೆಲ್ದು
ಶಾಂತತೆಯನೇ ತೋರ್ದರು ೧೫

ವರಲಕ್ಷ್ಮಿ ಪ್ರಿಯ ತೀರ್ಥ । ಕರಗಳಿಂದರ್ಚಿತವು
ಪರಿಸರಾರ್ಚಿತ ಯೋಗ । ನರಹರಿಯು ವ್ಯಾಸಮುನಿ
ವರದ ಗೋಪತಿ ಕೃಷ್ಣ । ಸಿರಿವ್ಯಾಸಯತಿ ರಚಿತ
ಎರಡೇಳು ರಜತ ಪ್ರತಿಮೆ ।
ಗುರುವರ ಬ್ರಹ್ಮಣ್ಯ । ವರದ ವಿಠ್ಠಲದೇವ
ಸರ್ವಜ್ಞರರ್ಚಿಸಿದ । ವರ ಶರಣ್ಯ ವಿಠಲನು
ನಿರುತ ಪೂಜಿತವಾಗಿ । ಶರಿರ ಭೌತಿಕ ಬಿಡುವ
ವರ ಸಮಯ ತಾನುಸುರಿರೆ ೧೬

ಇಂತಿಪ್ಪ ಗುರುವರರ । ಶಾಂತತೆಯೇನೇನೆಂಬೆ
ಅಂತಿಮದ ಸಮಯದ ಭೂ । ಕಾಂತ ತಾ ಕಳುಸಿರ್ದ
ಪಿಂತೆ ತಾ ದೂರಿಟ್ಟ । ದಂತವಗೆ ಯತಿಪಂಥ
ರಾಹಸ್ಯ ಉಪದೇಶಿಸಿ ।
ಮುಂತವಗೆ ಪೀಠಾದಿ । ಚಿಂತೆಯಿಲ್ಲದೆ ಇತ್ತು
ಅಂತೆ ಮತ್ತೋರ್ವ ತಮ । ಪಂಥಗಳ ನಡೆಸುವಗೆ

ಕಾಂತ ವಿಠಲ ಶರಣ್ಯ । ಮೂರ್ತಿಯನೆ ಕೊಟ್ಟು
ಸಂತೈಸಿ ಇತ್ತರಾಶಿಷವ ೧೭

ಎರಡು ಕಂಗಳು ನೀಲ । ವರರೇಖೆಗಭಿಮಾನಿ
ಸುರವಿಶ್ವ ಮಿತ್ರಾಖ್ಯ । ಅರ್ಕಂಶ ತಾನೆಂಬ
ಗುರುತೋರ್ವ ಶಿಷ್ಯನಲಿ । ದರ್ಶ ದಿನದಲಿ ತೋರಿ
ಇರುತಿರರು ಕೆಲವು ಕಾಲ । ವರುಷವನು
ಪೈಂಗಳವು । ಎರಡೊಂದನೇ ಮಾಸ
ವರಶುಕ್ಲ ಹರಿದಿನದಿ । ಸರಿತು ವರ ಕಣ್ವತಟ
ಪರಮ ಸುಕ್ಷೇತ್ರದಲಿ । ವರಯೋಗ ಮಾರ್ಗದಲಿ
ದೇಹ ಹರಿಗರ್ಪಿಸಿದರು ೧೮

ಜಯ ಜಯತು ಶುಭಕಾಯ । ಜಯಜಯತು ತಪಶೀಲ
ಜಯ ಶಮೋದಮವಂತ । ಜಯ ಶಾಪನುಗ್ರಹನೆ
ಜಯಲಕ್ಷ್ಮಿ ವರಜಾತ ಜಯಲಕ್ಷ್ಮಿ ಪ್ರಿಯ ತೀರ್ಥ
ಜಯ ಜಯತು ವಿಶ್ವಮಿತ್ರ ।
ಪ್ರಿಯ ಗುರುಗಳಾಂತರ್ಯ । ಜಯ ದೇವ ನೋಳ್ಪರಮ
ಪ್ರಿಯನಾದ ತಂದೆ ಮುದ್ದು । ಮೋಹನ್ನ ವಿಠಲಾತ್ಮ
ಜಯ ಗುರೂ ಗೋವಿಂದ । ವಿಠ್ಠಲನ ಭಜಿಸಿದರೆ
ನಯಸುವನು ಪರಮಗತಿಗೆ ೧೯

೪೧೭

ಯತಿಕುಲಾಂಬುಜ ಸ್ತೋಮ ಸೂರ್ಯ । ಕಾಯೊ
ಯತಿ ಸತ್ಯ ಧ್ಯಾನಾಖ್ಯವರ್ಯಾ ಪ

ಧೃತ – ಕ್ಷಿತಿಯೊಳಗೆ ದುರ್ಮತವ ಖಂಡಿಸಿ ।
ಅತಿಹಿತದಿ ದ್ವೈತವನೆ ಬೋಧಿಸಿ
ವಿತತ ಹರಿ ಪರನೆಂದು ಸಾಧಿಸಿ ।
ಮತಿಯ ಮನುಜರ್ಗೊರೆದ ತಾಪಸಿ ಅ.ಪ.

ತಪಸೀ ಸತ್ಯ ಜ್ಞಾನರ ಕರಜಾ । ಸ್ವಾಮಿ
ಶ್ರೀಪ ರಾಮರ ಪಾದ ವನಜಾ ।
ಸಾಪರೋಕ್ಷೀಕೃತ ಯತಿಜ । ತೋರೊ
ಸುಪಥ ಮುಕ್ತಿಗೆ ಹತ ದಿತಿಜ ।
ಶ್ರೀ ಪತಿಯ ಚರಣಾಬ್ಜ ಮಧುಪನೆ ।
ಕೋಪ ಸಲ್ಲದು ಕೃಪೆ ಪಯೋನಿಧಿ
ಪಾಪ ರಹಿತನ ಮಾಡಿಯನ್ನನು ।
ಪ್ರಾಪಿಸೆನಗೆ ಜ್ಞಾನಖ್ಯ ಸೂರ್ಯನ ೧

ಕಾಶಿ ರಾಮೇಶ್ವರ ಕುಂಭ । ಕೋಣ
ದೇಶ ಯಾತ್ರೆಗಳ್ಮಾಡಿ ಡಿಂಬಾ ।
ಮೀಸಲೆನಿಸಿ ಜಯಸ್ತಂಭಾ । ಹೂಡಿ
ಶ್ರೀಶ ಸರ್ವೋತ್ತಮನೆಂಬಾ ॥
ಭಾಷೆಯನು ಕೈಗೊಂಡು ಚರಿಸುತ ।
ಕೃಷಿಯ ಮಾಡಿದೆ ಹರಿಯ ಮತವನು
ತೋಷಿಸಿದೆ ಸದ್ವೈಷ್ಣವೃಂದವ ।
ವಿಶದ ವಿದ್ವತ್ಸಭೆಯ ನೆರೆಸೀ ೨

ಚಿತ್ತ ವಿಡುತ ಲಯದಿ ಚಿಂತನಾ । ಸಾರಿ
ಸತ್ಯ ಪಾಂಡುರಂಗ ವಿಠಲನಾ ।
ಹತ್ತಿರ ಕಿತ್ತೊಗೆದೆ ತನುವಿನ ವರ
ಚೈತ್ರ ಶುಕ್ಲದಿ ಆರೆಡನೆ ದಿಣ ।
ಕ್ಷಾತ್ರ ತೇಜದಿ ಮೆರೆದೆ ಗುರುವರ ।
ಕ್ಷಿತಿಯೊಳಗೆ ಸುರಾರು ನಿಮಗೆ
ವಿತತ ಗುರುಗೋವಿಂದ ವಿಠಲನ ।
ಚಿತ್ತದಲಿ ಸ್ಮರಿಸುತ್ತ ಪೊರಟ ೩

೪೧೮

ಸತ್ಯಧ್ಯಾನರ ಪಾದ । ನಿತ್ಯದಿ ಭಜಿಸುವ
ಭೃತ್ಯನೆ ಬಲು ಧನ್ಯನೋ ಪ

ತತ್ವವಾದವ ಸ್ಥಾಪಿಸುತ ।
ಅತ್ಯಧಿಕ ಸಂತೃಪ್ತಿಯಿಂದಲಿ
ನಿತ್ಯಹರಿ ಸರ್ವೋತ್ತುಮತ್ವವ ।
ಭೃತ್ಯ ಜನಕೊತ್ತೊತ್ತಿ ಪೇಳುವ ಅ.ಪ.

ಮುನಿಕುಲ ಸನ್ಮಾನ್ಯ ಸತ್ಯಜ್ಞಾನರ ಕರಜ
ಮಾನ ಮೇಯ ಜ್ಞಾನ ನಿಪುಣಾ
ಹೀನ ಮಾಯ್ಗಳ ಗೋಣ ಮುರಿಸು ।
ಸ್ವಾನುಭಾವದಿ ಬ್ರಹ್ಮ ಸತ್ಯ
ಜ್ಞಾನ ಆನಂದನೆನುತಲಿ ।
ಆನುಪೂರ್ವ ವೇದಾರ್ಥ ಪೇಳ್ದ ೧

ಈ ಮಹಿಯೊಳು ಭರತ । ಭೂಮಿಯೊಳಖಿಳ ಸು
ಸೀಮೆಯ ಚರಿಸುತಲೀ ॥
ನೇಮದಿಂದಲಿ ವಾದ ಭಿಕ್ಷೆಯ ।
ಪ್ರೇಮದಿಂದಲಿ ಬಯಸಿ ಬರುತ
ಗ್ರಾಮ ಗ್ರಾಮದ ಭ್ರಾಮಕ ಜನ ।
ಸ್ತೋಮವ ನಿಸ್ತೇಜ ಗೈಸಿದ ೨

ಪರಮ ಹಂಸೋತ್ತಮ । ಪರವಾದಿ ಗಜಸಿಂಹ
ಗರುವ ರಹಿತ ಸಾರ್ವಭೌಮಾ ॥
ವರ ಸುವತ್ಸರ ಚಿತ್ರ ಭಾನುವು ।
ಚೈತ್ರ ಶುಕ್ಲದಿ ಅಷ್ಟಮೀ ದಿನ
ಸಿರಿ ಗುರು ಗೋವಿಂದ ವಿಠಲನ ।
ಚರಣ ಸರಸಿಜ ಸೇರಿ ಮೆರೆದ ೩

೪೧೯

ಶ್ರೀ ಶ್ರೀ ಶ್ರೀಸತ್ಯಪ್ರಮೋದತೀರ್ಥರು

ಸತ್ಯಾಭಿಜ್ಞ ಕರಜ ಶ್ರೀ । ಸತ್ಯಪ್ರಮೋದಾ ।
ತೀರ್ಥ ನಿಮ್ಮಯ ಚರಣ ದ್ವಂದ್ವಕಾ ನಮಿಪೆ ಪ

ವೈರಾಗ್ಯ ಸದ್ಭಾಗ್ಯ । ಪರಮ ನಿಧಿಯೆನಿಸುತಲಿ
ಶ್ರೀರಾಮ ಪದತುಂಗ । ಸರಸಿರುಹ ಭೃಂಗಾ ।
ಊರೂರು ಚರಿಸುತಲಿ । ಆ ರಾಮ ಪದದ್ವಂದ್ವ
ಆರಾಧಕರಿಗ್ವೊರೆದ । ಪರಮ ತತ್ವಗಳಾ ೧

ವಾದಿಗಳ ಹೃದಯ ನಿ । ರ್ಭೇದ ಗೈಸುವ ನಿಮ್ಮ
ವಾದಗಳ ಗಡಣೆಗಳ । ವಾದಿಗಳು ಕೇಳೀ ।
ಪಾದವನು ಕ್ರಮಿಸುತ್ತ । ಗೈದರು ಪಲಾಯನವ
ಮೋದ ಪ್ರಮೋದ ಹರಿ । ಕಾರುಣ್ಯ ಪಾತ್ರಾ ೨

ಕಲ್ಯಾಣ ಪುರಿಯೊಳಗೆ । ಎಲ್ಲ ವೈಷ್ಣವರ್ನೆರೆದು
ಪುಲ್ಲನಾಭನು ಶ್ರೀ ವೇದವ್ಯಾಸರನೂ ।
ಚೆಲ್ವಗಜ ವಾಹನದಿ । ಕುಳ್ಳಿರಿಸಿ ಐತರಲು
ಎಲ್ಲ ಭಕ್ತರು ಮೊರೆಯೆ । ಅಂಬರವು ಬಿರಿಯೇ ೩

ಖರನಾಮ ವತ್ಸರ ಸು । ಮೂರೆರಡನೆ ಮಾಸ
ಆರೆರಡನೇ ದಿನದಿ । ಚಾರು ನಿಮ್ಮಯ ಮಠದಲೀ ।
ಧೀರ ನೀ ಸ್ಥಾಪಿಸಿದೆ । ಎರಡು ವೃಂದಾವನವ
ಶ್ರೀ ರಘೋತ್ತಮ ಸಿರಿ । ಸತ್ಯಧ್ಯಾನರ ಭಕ್ತಿಲೀ ೪

ನವರತ್ನ ಮಂಟಪದಿ । ಶ್ರೀ ವರನ ಕುಳ್ಳಿರಿಸಿ
ವಿವಿಧ ವಿಧಿವತ್ಪೂಜೆ । ಹವಣೆಯಲಿ ಮಾಡೇ ।

ಅವನಿ ಸುರರುಗಳಿಂದ । ಸ್ತವನ ವೇದಗಳಿಂದ
ಶ್ರವಣ ಸುಖವಾನಂದ । ಕಳಗು ಭವ ಬಂಧಾ ೫

ಕೋಪರಹಿತರುಯೆನಿಸಿ । ಶ್ರೀ ಪತಿಯ ಧ್ಯಾನಿಸುತ
ತಾಪಸೀಗಳು ತೀರ್ಥ । ಪ್ರಾಪಿಸುತ್ತಿರೆ ಭಕುತರೂ ।
ಪಾಪ ಕಳೆದೆವು ಯೆಂಬ ಸ । ಲ್ಲಾಪದೊಳು ತಪನ
ತಾಪ ಮರೆತರು ನೋಡಿ । ಪಾಪ ಹೊರದೂಡೀ ೬

ಹತ್ತಾರು ಸಾಸಿರಕೆ । ಮತ್ತೆ ಭೋಜನಗೈಸಿ
ಕೃತಿವಾಸನ ತಾತ । ಉತ್ತಮೋತ್ತಮನೆನ್ನುತಾ ।
ಸತ್ಯವಲ್ಲಭ ಗುರೂ । ಗೋವಿಂದ ವಿಠಲನ
ಪ್ರತ್ಯಹರ್ ಅರ್ಚಿಸುವ । ಸತ್ಯ ಪ್ರಮೋದಾರ್ಯ ೭

೪೨೦

ಶ್ರೀ ಶ್ರೀ ಶ್ರೀ ಸತ್ಯಪ್ರಮೋದ ತೀರ್ಥರು

ಸ್ವಾಗತವು ಸ್ವಾಗತವು ಯೋಗಿವರ್ಯಾ ಪ

ಬಾಗಿ ಭಜಿಸುವೆ ನಿಮ್ಮ ಪಾದ ಪಂಕಜವಾ ಅ.ಪ.

ಯೋಗಿ ಜನ ವಂದ್ಯ ಭವರೋಗಾಹಿ ಖಗನೆನಿಪ
ನಾಗ ಭೂಷಣ ಸಖನ ಯೋಗ ನಿರತಾ ।
ಆಗು ಹೋಗುಗಳೆರಡು ಸಹಿಸುವಲಿ ನಿಷ್ಣಾತ
ಕಾಗಿನಿಯ ತಟವಾಸ ರಚಿತ ಸುಧೆ ಭರಿತಾ ೧

ಸತ್ಯ ಪ್ರಮೋದಾರ್ಯ ನಿತ್ಯ ನಿಜಯತಿ ಚರ್ಯ
ಸ್ತುತ್ಯ ಪರಮೌದಾರ್ಯ ಯೋಗ ಧುರ್ಯಾ ।
ಸತ್ಯಾತ್ಮ ಪರಯುಗ್ಮ ಭಕ್ತಿಯಲಿ ಚಾತುರ್ಯ
ಪ್ರತ್ಯಹರ್‍ರಾಮ ಪದ ಅರ್ಥ ಕೈಂಕರ್ಯಾ ೨

ಭಾವಜನಯ್ಯ ಗುರು ಗೋವಿಂದ ವಿಠಲ ಪದ
ಭಾವದಲಿ ಭಜಿಪಂಥ ಗುರುವರೇಣ್ಯಾ ।
ಪಾವನವು ನಿಮ್ಮ ಪದ ತೊಳೆದುದಕ ಶಿರಧೃತವು
ಪಾವಿಸಿತು ನಮ್ಮ ಕುಲ ನಾ ಪರಮ ಧನ್ಯಾ ೩

೪೨೧

ಸ್ವಾಗತವು ಸ್ವಾಗತವು । ಯತಿವರ್ಯರೇ
ಯೋಗೀಶ ಶ್ರೀಕೃಷ್ಣ । ಮೂರ್ತ್ಯುಪಾಸಕರೇ ಪ

ವಿಶ್ವಭಿಧರಂತಸ್ಥ । ವಿಶ್ವರೂಪಿಯ ಹರಿಯ
ವಿಶ್ವಸರ್ಜನ ಸ್ಥಿತೀ । ವಿಶ್ವಸಂಹರವಾ ।
ವಿಶ್ವತೊಮುಖವಾಗಿ । ಗುಣ ಕ್ರಿಯವ ಕೊಂಡಾಡೆ
ವಿಶ್ವೇಶ ತೀರ್ಥರೆಂದುರು । ಕೀರ್ತಿಯುಕ್ತರೇ ೧

ಮಧ್ವರೆಂಬಭಿಧದಿ । ಗ್ದೇಶ ವ್ಯಾಪಿಸುವಂತೆ
ವಿದ್ಯೆ ಪ್ರಸರಣ ಕಾರ್ಯಶುದ್ಧ ವ್ಯಾಜದಲೀ ।
ವಿದ್ಯೆ ಪೀಠವ ರಚಿಸಿ । ವಿದ್ವಾಂಸರನ್ನಿರಿಸಿ
ಮಧ್ವಶಾಸ್ತ್ರದ ಬೋಧ । ಸಿದ್ಧ ಪಡಿಸಿದರೇ ೨

ಶರಣ ಜನರಭಿಲಾಷೆ । ನಿರುತ ಪಾಲಿಸಿ ಪೊರೆವ
ಸರಳ ಹೃದಯರೆ ನಿಮ್ಮ । ಚರಣದ್ವಂದ್ವಗಳಾ ।
ವರ ರಜವ ಶಿರದಲ್ಲಿ । ಧರಿಸುತ್ತ ಧನ್ಯನೆಹೆ
ಮರಳಿ ಮಮಕುಲವೆಲ್ಲ । ಉದ್ಧಾರವಾಯ್ತು ೩

ಕ್ಷಾಮಡಾಮರ ಕಾಲ । ಸೀಮೆ ಮೀರಿದ ಸಮಯ
ನೇಮ ಮೀರದೆ ವೈಶ್ವ । ಹೋಮಾದಿ ಶೇಷಾ ।
ಪ್ರೇಮದಿಂ ವಿದ್ಯಾರ್ಥಿ । ಸ್ತೋಮ ಕುಣಿಸುತ ನಿತ್ಯ
ಸಾಮ ಸನ್ನುತನ ನಿ । ಷ್ಕಾಮ ಭಜಿಸುವರೇ ೪

ಕಾಣ್ಯೋಪ ನಿಷದರ್ಥ । ಕನ್ನಡ ಸುಪದ್ಯದಲಿ
ಇನ್ನು ರಚಿಸಿರ್ಪುದಕೆ । ಮುನ್ನುಡಿಯನಿತ್ತೂ ।
ಅನ್ನಂತ ಗುಣ ಗುರೂ । ಗೋವಿಂದ ವಿಠ್ಠಲನ
ನನ್ನೆಯಿಂ ಭಜಿಸೆ ಪ್ರ । ಸನ್ನ ಮಾರ್ಗದರೇ ೫

೪೨೨

ಸ್ವಾಗತವು ಸ್ವಾಗತವು ಯೋಗಿವರ್ಯಾ ಪ

ಭೋಗಿ ಭೂಷಣ ಸಖನ ಮಹ ಪೂಜಕಾರ್ಯ ಅ.ಪ.

ವತ್ಸರ ವಿರೋಧಿಕೃತು । ತತ್ಸಮಯದುದ್ಭವದ
ಕೃತ್ಸ್ನ ಸುವಿರೋಧಗಳ । ವತ್ಸಾರಿ ಪರಿಹರಿಸೇ ।
ಉತ್ಸವವು ಮಹಪೂಜೆ । ಸತ್ಯ ಭಾವದಿ ಗೈದು
ಸತ್ಸುಧೆಯ ಬೋಧ ನಿ । ರ್ಮತ್ಸರರು ಕೇಳೇ ೧

ಶತಕ್ರತೂ ಬಲಿ - ಇಂದ್ರ । ಪಿತ ಪಿತನ ಅಂಶಜರ
ಶತ ತ್ರಯೋತ್ಸವ ತಿಥಿಯು । ದ್ವಿತಿಯ ಶ್ರಾವಣದಿ ।
ವಿತತ ದಿರೆ ದಿಶಿ ದಶ ಪ್ರ । ಮತಿ ಸಿದ್ದಾಂತ ಸಭೆ
ಹತ್ತಾರು ಮತ್ತೇಳು । ವತ್ಸರೊತ್ಸವಕೇ ೨

ಮಧ್ವಾರ್ಯ ಪೀಠಸ್ಥ - ಇಂದ್ರ ವಿದ್ಯೆ ಮನ್ಯರೆ ನೀವು
ಅಧ್ಯಕ್ಷ ಪದಕೇರೆ । ಸದ್ವೃಂದದಾಶೇ ।
ಹೃದ್ಯದಲಿ ಪೂರೈಸಿ । ಸಿದ್ಧಾಂತದಾ ಸಭೆಯ
ವರ್ಧಂತಿ ಉತ್ಸವದ ವೃದ್ಧಿಗಾಶಿಸಲೂ ३

ಶ್ರೀ ವಿಭುದೇಶರಿಂ । ದಾವ ಬಹು ಮಾನಗಳ
ಭಾವುಕರು ಸ್ವೀಕರಿಸಿ । ಭಾವದಲಿ ನಮಿಸೀ ।
ಆವದ್ವಯ ಯತ್ಯಾ । ಶೀರ್ವಾದಗಳ ಪಡೆದು
ನಾವೆ ಧನ್ಯರು ಎನುತ । ಧಾವಿಪುದು ನೋಡೇ ೪

ಪಲಿಮಾರು ಅದಮಾರು । ಒಳಿತೆರಡು ಮಠವಾಳ್ವ
ಗೆಳೆಯರೀರ್ವರ ಪದಕೆ । ನಲಿನಲಿದು ಮನದೀ ।
ತಲೆಬಾಚಿ ಬೇಡ್ವೆ ಗುರು । ಗೋವಿಂದ ವಿಠ್ಠಲನ
ನಳಿನ ಪದದ್ವಯ ಭಕ್ತಿ । ಪಾಲಿಸಲಿಯೆಂದೂ ೫

೪೨೩

ಸ್ಮರಿಸುವುದು ಗುರು ಸಂತತಿಯನೂ ಪ

ಸ್ಮರಿಸಿ ನಮಿಪಲು ನಿತ್ಯ । ಗುರುವರ್ಯ
ಸಂತತಿಯ ಹರಿಕರುಣವೂ ದೊರಕಿ । ಸರ್ವ
ಆಮಯ ಹರವು ಪರಮ ಪುರುಷಾರ್ಥಕ್ಕೆ
ವರ ಮಾರ್ಗವೆಂದೆನಿಪ ಸದ್ಭಕ್ತಿ ಜ್ಞಾನಪ್ರದವು ಅ.ಪ.

ಆದಿ ಮೂರುತಿ ಹಂಸ । ಪಾದಾನುವರ್ತಿ ವಿಧಿ
ಆದಿವಿಧಿ ಸುತರು ಸನ । ಕಾದಿ ಪದ ಪದ್ಮಗಳ
ಮೋದದಿಂ ಭಜಿಪ ದೂ । ರ್ವಾಸ ತತ್ಕರಜ
ಸುಜ್ಞಾನ ನಿಧಿಗಳ ಪಾದವ ॥
ಆದರದಿ ಗರುಡವಾಹನ ತೀರ್ಥ ಕೈವಲ್ಯ
ರಾದರಿಸಿ ಜ್ಞಾನೇಶ ತತ್ಕರಜ ಪರತೀರ್ಥ
ಪಾದಾಬ್ಜ ಸೇವಿಸುವ ಸತ್ಯ ಪ್ರಾಜ್ಞ ಕರಜ
ಪ್ರಾಜ್ಞ ತೀರ್ಥರು ಯತಿಗಳ ೧

ಯತಿ ಅಚ್ಯುತ ಪ್ರೇಕ್ಷ । ತತ್ಕರಜ ವಾಯ್ವಂಶ
ಪ್ರಥಮಾಂಗ ಹರಿಗೆನಿಪ । ಆನಂದ ತೀರ್ಥರ
ಪ್ರಥಮ ದಾಸ್ಯದಿ ಮೆರೆವ ಯತಿಪದುಮನಾಭಾಖ್ಯ
ನೃಹರ್‍ಯಾಭಿಧ ತೀರ್ಥರ ॥
ಯತಿಯು ಮಾಧವ ತೀರ್ಥ । ಅಕ್ಷೋಭ್ಯ ತೀರ್ಥರೂ
ತತ್ಕರಜ ಪರವಾದಿ । ಗಜಸಿಂಹ ಜಯತೀರ್ಥ

ಯತಿಗಳಾ ವಿದ್ಯಾಧಿ । ರಾಜ ಸತ್ಕವೀಂದ್ರರು
ವಾಗೀಶ ರಾಮಚಂದ್ರ ೨

ಅತ್ಯಂತ ಮಹಿಮರೆನೆ । ವಿಭುದೇಂದ್ರ ವಿದ್ಯೆನಿಧಿ
ಮತ್ತವರ ಕರಜಾತ । ರಘುನಾಥ ರಘುವರ್ಯ
ಭೃತ್ಯ ವೇದವ್ಯಾಸ । ತೀರ್ಥ ವಿದ್ಯಾಧೀಶ ವೇದನಿಧಿ ಸತ್ಯವ್ರತರ ॥
ಸತ್ಯನಿಧಿ ಸತ್ಯನಾಥಾಖ್ಯ ಸತ್ಯಾಭಿನವ
ಸತ್ಯ ಪೂರ್ಣಾಖ್ಯ ಯತಿ । ಸತ್ಯ ವಿಜಯಾರ್ಯ ವರ
ಸತ್ಯ ಪ್ರಿಯ ತೀರ್ಥಾಖ್ಯ । ಸತ್ಯ ಬೋಧಾಖ್ಯ
ಮಹ ಸತ್ಯ ಸಂಧಾಖ್ಯ ಮುನಿಯ ೩

ಸತ್ಯವರ ಸತ್ಯಧರ್ಮಾಖ್ಯ ಸತ್ಯಸಂಕಲ್ಪ
ಸತ್ಯ ಸಂತುಷ್ಟಾಖ್ಯ । ಸತ್ಯ ಪರೆಯಣ ತೀರ್ಥ ಸತ್ಯ
ಕಾಮಾಖ್ಯ ಯತಿ । ಸತ್ಯೇಷ್ಟ ಕರಜರೆನೆ ಸತ್ಯ ಪರಾಕ್ರಮ
ತೀರ್ಥರ ॥ ಸತ್ಯ ವೀರಾಖ್ಯಯತಿ । ಸತ್ಯಧೀರಾಖ್ಯರಂ
ತತ್ಕರಜ ಶಿರಿಸತ್ಯ । ಜ್ಞಾನಾಖ್ಯ ಅಗ್ನ್ಯಂಶ
ದುಸ್ತಿಮಿರ ಮಾಯ್ಮತದ । ಮಾರ್ತೆಂಡರೆಂದೆನಿಪ
ಶಿರ ಸತ್ಯ ಧ್ಯಾನಾಖ್ಯರ ೪

ಕೃತ್ತಿವಾಸನ ತಾತ । ಉತ್ತಮೋತ್ತಮನೆಂದು
ಪ್ರತ್ಸಹರ್ಬೋಧಿಸಲು । ಸ್ತುತ್ಯಯತ್ಯಾಶ್ರಮದಿ
ವರ್ತಿಸುತ ಸದ್ಗ್ರಂಥ । ವ್ಯಾಖ್ಯಾನ ಪೀಯಾಪ
ಉತ್ತಮರಿಗುಣಿಸುತಿಹರ ॥
ಸ್ತುತ್ಯ ನಾಮಂಗಳನು । ಹೊತ್ತು ಹೊತ್ತಿಗೆ ಪಠಿಸೆ
ಚಿತ್ತ ನಿರ್ಮಲವಾಗಿ । ವತ್ತಿ ಬಹ ವಿಘ್ನಕ್ಕೆ
ಮೃತ್ಯವೆಂದೆನಿಸುತ್ತ । ನಿತ್ಯ ಗುರು ಗೋವಿಂದ
ವಿಠಲ ತಾ ಪೊರೆವ ಸತ್ಯ ೫

೪೨೪

ಸ್ವಾಗತವು ಸ್ವಾಗತವು ಯೋಗಿವರ್ಯರಿಗೆ ॥
ವಿಶ್ವೇಶ ತೀರ್ಥ ಶ್ರೀ ವಿದ್ಯ ಮಾನ್ಯರಿಗೇ ಪ

ಪ್ರೊದಟೂರು ಜನನಿಮ್ಮ । ಮೋದಮಯ ಆಗಮಕೆ
ಆದರದಿ ಕಾದಿಹರು । ವೇದ ಘೋಷಿಸುತ ।
ಹೇದಯಾ ಪರಿಪೂರ್ಣ । ಸಾದುಗಳೆ ನಮಿಸುವೆವು
ಮೋದ ಪ್ರಮೋದ ಗುಣ । ಬೋಧಿಪುದು ನಮಗೇ ೧

ಸಿರಿವೇಣು ಗೋಪಾಲ । ಸಿರಿ ಲಕುಮಿ ವಿಗ್ರಹವು
ಮರಳಿ ನವಗ್ರಹ ಮೂರ್ತಿ । ಗುರುರಾಘವೇಂದ್ರಾ ।
ವರಸು ಬೃಂದಾವನವ । ಸ್ಥಿರ ಪಡಿಸಿ ನಿಮ್ಮಾಮೃತ
ಕರದಿಂದಲಿಂದೀಗ । ವರ ಮಹೂರ್ತದಲೀ ೨

ವತ್ಸರವು ಆನಂದ । ವೈಶಾಖ ಸ್ಥಿತ ದಶಮಿ
ವಾತ್ಸಲ್ಯ ಯತಿಗಳು । ಸುಸ್ಥಿರವು ಆಗೀ ।
ವತ್ಸಾರಿ ಹರಿಭೃತ್ಯ । ವತ್ಸಲತಯಿಂನಿಂದು
ಸುಸ್ಥಿರವು ಆಗಿಹುದು । ಭೃತ್ಯರಿಗೆ ವರದಾ ೩

ಮಂಟಪಾಲಂಕೃತವು । ಭಂಟರಿಂದಲಿ ಬಹಳ
ನೆಂಟರಿಷ್ಟರು ಮತ್ತೆ । ಸಂತಜನ ಕೂಟಾ ।
ಊಟ ಉಪಚಾರದಿಂ । ಸಂತೃಪ್ತಿ ಹೊಂದುತಲಿ
ವೈಕುಂಠ ಪತಿ ಮಹಿಮೆ । ಈಂಟಿ ಮುದ ಹೊಂದೇ ೪

ಪಾವನವು ಈ ಕ್ಷೇತ್ರ । ಪಾವನರು ನಾವೀಗ
ಆವನಿಮ್ಮಯ ಪಾದ । ಪಾಂಸುಗಳ ಧರಿಸೀ
ಕೇವಲಾನಂದಮಯ । ಭಾವದೊಳು ಇಹೆವುಗುರು
ಗೋವಿಂದ ವಿಠಲ ಪವ ತಾವರ್ಯಾ ಶ್ರೀತರೇ ೫

೪೨೫

ಸ್ವಾಗತವು ಸ್ವಾಗತವು । ಯೋಗಿ ವರ್ಯಾ ಪ

ಯೋಗಿ ದಶಮತಿ ಬ್ರಾತ್ಯ । ವಂಶ ಸಂಭೂತಾ ಅ.ಪ.

ಭಾವಿ ವಾಯ್ದೆನಿಸಿದ್ದು । ಆವಿಪರು ಶೇಷಾದಿ
ದೇವ ಸದ್ವಂದ್ಯರೆನೆ । ಶ್ರೀ ವಾದಿರಾಜಾ ।
ಆವ ವಂಶಾಬ್ಧಿಯಲಿ । ದಿವ್ಯ ಸೋಮನು ಎನಿಸಿ ।
ದೈವ ವಿಭವದಿ ಮೆರೆವ । ವಿಶ್ವೋತ್ತಮಾಖ್ಯಾ ೧

ಉದಿತ ಭಾಸ್ಕರನಂತೆ । ಮೆರೆದು ಸದ್ಬಾಲ್ಯದೊಳು
ಅದುಭುತವು ಎಂದೆನಿಪ । ಸುಧೆಯ ಪ್ರವಚನವಾ ।
ಸದಯಯತಿ ಕಾಣ್ವೂರು । ಪದದಲ್ಲಿ ಅಭ್ಯಸಿಸಿ
ಮುದದಿ ಮಂಗಳ ಮಾಡ್ದ । ವಿಭವ ನಾನೋಡ್ದೆ ೨

ನಂದಮುನಿಮತ ಸುಜನ । ವೃಂದದಲಿ ಭೋಧಿಸುತ
ಇಂದಿಲ್ಲಿ ಸಿದ್ಧಾರ್ಥಿ । ಸಂದ ಅಯ ನವಮೀ ।
ಮಂದಿರಕೆ ಬಂದುತವ । ನಂದ ಪದ ಪೂಜಿಸುವ
ಸಂದು ಇತ್ತಿಹ ಗುರೂ । ಗೋವಿಂದ ಭಜಕಾ ೩

೪೨೬

ಶ್ರೀ ಪುರಂದರದಾಸರು

ಏಸು ಮಹಿಮೆಯೋ । ಪುರಂದ್ರ
ದಾಸರ್ಮಹಿಮೆಯೋ ಪ

ಭಾಷೆ ಕನ್ನಡದೇಸೋ ಶಾಸ್ತ್ರ
ಸೂಸಿ ರಚಿಸಿ ಕೊಟ್ಟು ಇರುವ ಅ.ಪ.

ಗ್ರಂಥನೇಕ ರಚಿಸಿ ಹೃದಯ
ಗ್ರಂಥಿ ಭೇದಿ ಶಾಸ್ತ್ರ ತುಂಬಿ
ಮಂಥನಾವ ಮಾಡಿ ಸುಖದ
ಸಂತತೀಯ ಉಣಿಸಿ ಇರುವ ೧

ಅಂದುದೆಲ್ಲ ವೇದವೃಂದ
ಎಂದು ಮೆರೆವ ಗಾನವೃಂದ
ಸಂದಣೀಸಿ ಗ್ರಂಥವೃಂದ
ನಂದದಿಂದ ದಾನಮಾಡ್ದ ೨

ಗುರುಗೋವಿಂದ ವಿಠ್ಠಲಾನ
ಚರಣ ಭಜಕರಾಗಿ ಚರಿಸಿ
ನರರ ದುರಿತ ಪೋಗಗೊಡಿಸಿ
ವರಸುಮೋಕ್ಷ ಪಥವ ತೋರ್ದ ೩

೪೨೭

ದಾಸ ಜನರ ಹೃತ್ ತೋಷನೆ ಪುರಂದರ
ದಾಸರಾಯ ಪರಿಪೋಷಿಸೋ ಪ

ಅಂಡಜವಾಹ ಬ್ರ । ಹ್ಮಾಂಡ ದೊಡೆಯನ
ಪಿಂಡಾಂಡದಿ ಕಂ । ಢಿಗ್ಗುವ ಮೂರ್ತೇ ೧

ಮಹತಿ ನಾಮಕ ವೀಣಾ । ಧರಿಸಿ ಶ್ರೀಹರಿ
ಮಹಿಮೆ ಪೊಗಳಿ ಲೋಕ । ತಿರುಗುವನೇ ೨

ಅನ್ನಂತ ಗುಣ ಗುರು । ಗೋವಿಂದ ವಿಠಲನ
ಎನ್ನಂತ ರಂಗದೀ । ಕಾಣಿಸೋ ೩

೪೨೮

ದಾಸರಾಯ ಪಾದ ವನಜ । ಸೂಸಿ ಭಜಿಸಿರೋ ।
ವ್ಯಾಸ ತೀರ್ಥ ಶಿಷ್ಯರೆಂದು । ಭಾಸಿಸಿದ್ದರೋ ಪ

ಭರತ ವರ್ಷಕ್ಕಧಿಷ್ಠಾತೃ । ಜ್ಞಾನ ದಾತರಾ
ಸುರರ ಮುನಿ ನಾರಾದಾಂಶ । ಜಾತರೆನಿಪರಾ॥
ಪುರವು ಪುರಂದರ ಗಡದಿ । ವಾಸರಿದ್ದರಾ
ಪರಮ ಲೋಭಿ ನವ ಕೋಟಿ । ದ್ರವ್ಯವಿದ್ದರಾ ೧

ಬಂದ ಕಾರ್ಯ ಮರೆತನೆಂದು । ಹರಿಯು ಚಿಂತಿಸೀ
ಇಂದಿರೇಶ ದ್ವಿಜನಾಗಿ । ಹುಡುಗನಾವೆರಸೀ ॥
ಬಂದು ಮಗನ ಮುಂಜಿಗಾಗಿ । ಧನವನು ಬಯಸೀ ॥
ನಂದ ಕಂದ ತಿರುಗುತ್ತಿದ್ದ । ಅಂಗಲಾಚಿಸೀ ೨

ಭಿಕ್ಷುಕನ್ನ ಬಿಡದಂತೆ । ಅಂಗಡಿಯಲ್ಲಿ
ಶಿಕ್ಷಿಸೀದ ಆಳುಗಳ । ಲೋಭಿ ತಾನಲ್ಲಿ ॥
ತ್ರ್ಯಕ್ಷಸೇವ್ಯ ತಿಂಗಳಾರು । ತಿರುಗಿದನಲ್ಲೀ
ಲಕ್ಷಿಸಾದೆ ಮೆರೆಯುತಿದ್ದ । ಕಾಣದಂತಲ್ಲಿ ೩

ಕಟ್ಟಕಡೆಗೆ ಸವೆದ ನಾಣ್ಯ । ಚೀಲ ವೆಸೆಯುತ್ತ
ಕಟ್ಟು ಮಾಡ್ದ ದುಡ್ಡೊಂದನ್ನು । ಕೊಳ್ಳೆಂದೆನುತ್ತ ॥
ಅಟ್ಟುಗಳಿಗೆ ಬೇಸರಿಸಿ । ಮುಂದೆ ಹೋಗುತ್ತ ।
ಥಟ್ಟನ್ಹೋದ ಹಿತ್ತಲಿನ । ಕದವ ಸಾರುತ್ತ ೪

ಅಲ್ಲಿನಿಂತ ಲೋಭಿ ಸತಿಯ । ಬಳಿಗೆ ಪೋಗುತ್ತ
ಬಲ್ಲ ಹರಿಯ ಧನವ ಬೇಡ್ದ । ಮುಂಜಿಗೆನ್ನುತ್ತ ॥
ನಲ್ಲ ಬೈವನೆಂದು ಬೆದರಿ । ಇಲ್ಲವೆನ್ನುತ್ತ
ಚೆಲ್ವ ಸತಿಯು ಪೇಳೆ ಅವಳ । ಮೂಗ್ತಿ ನೋಡುತ್ತ ೫

ತವರು ಮನೆಯ ದ್ರವ್ಯದಾನ । ಮಾಡು ನೀನೆಂದ
ಅವಳು ತನ್ನ ಮೂಗುತಿಯ । ಕೊಟ್ಟುದೆ ಛಂದ ॥
ಇವನು ಅದನ ಸಾಹುಕಾರ್‍ನ । ಮುಂದಾಕಿ ಅಂದ
ಜವದಿ ನಾನೂರ್ಪಾಕಿ ಹಣ । ತನಗೆ ಬೇಕೆಂದ ೬

ನಾಯಕನು ಕೈಲಿ ತೆಗೆದು ನೋಡುತ್ತಲಿರೇ
ಶ್ರೀಯರಸ ಪೋದತಾನು । ಕಣ್ಣಿಗೆ ಮರೇ ॥
ಕಾಯುತ್ತಿದ್ದ ಆಳು ಹಿಡುಕಿ । ಸಿಗದೆತಾಬರೇ
ನಾಯಕನದ ಭದ್ರಮಾಡಿ । ಸತಿಬಳಿಗೆ ಬರೇ ೭

ಬರಿಯ ನಾಸಿಕವ ನೋಡಿ । ಮೂಗ್ತಿ ಎಲ್ಲೆನಲು
ಸರಿಯ ಪಡಿಸಲಿಕ್ಕೆ ಕೊಟ್ಟು । ಇರುವೆ ನೆನ್ನಲು
ತ್ವರದಿ ತೋರದಿರೆ ನಿನ್ನ । ಅರೆವೆ ನೆನ್ನಲು ।
ಬರುವೆ ಬೇಗ ಎಂದು ಪೋಗಿ । ಗರದ ಬಟ್ಟಲು ೮

ಕರದಿ ಪಿಡಿದು ತುಳಸಿ ಮುಂದೆ । ಮೊರೆಯ ನಿಡುತಿರೇ
ಗರದ ಬಟ್ಟಲೊಳು ಬಿದ್ದ । ಶಬ್ದವು ಬರೇ ॥
ಹರುಷದಿ ದಿಗ್ಗನೆ ಎದ್ದು । ಪತಿಗೆ ತಾತೋರೇ
ಗರ ಹೊಡೆದಂತವನಾಗಿ । ಮೋರೆಯ ತೋರೇ ೯

ಹೆಂಡತಿಯ ಕೇಳಿ ತಿಳಿದ । ಆದ ಪರಿಯಾ
ಮಂಡೆ ಬಾಗಿ ತಾನು ಆದ । ಹೊಸ ಪರಿಯಾ ॥
ಕೊಂಡಾಡಿದ ಪತ್ನಿ ಚರ್ಯ । ಹರಿಯ ಭಕ್ತಿಯ
ಬಂಡುಣಿ ಹರಿಪಾದಾಬ್ಜದಿ । ತೊರೆದ ಮನೆಯ ೧೦

ಸೂರೆ ಮಾಡಿ ಧನವೆಲ್ಲ । ದ್ವಿಜರಿಗರ್ಪಿಸೀ
ನಾರಿಮಣಿ ಸುತರೊಡನೆ । ಹಂಪೇಗಾಗಮಿಸೀ
ಸಾರಿ ವ್ಯಾಸ ತೀರ್ಥ ಯತಿಯ । ಪಾದ ನಮಿಸೀ
ಬಾರಿ ಬಾರಿ ಹರಿಯ ತತ್ವ । ಕೇಳಿ ಸುಖಿಸೀ ೧೧

ದಾಸ ಪಂಥಕ್ಕಧಿಕಾರಿ । ಎಂದು ಈಕ್ಷಿಸೀ
ವ್ಯಾಸ ತೀರ್ಥರೊಲಿದವಗೆ । ಉಪದೇಶಿಸೀ ॥
ಶ್ರೀಶ ಪುರಂದರ ವಿಠಲ । ದಾಸನೆನಿಸೀ
ವ್ಯಾಸ ಗ್ರಂಥ ಸಾರ ಭಾಷೆ । ಪ್ರಾಕೃತ ವೆನಿಸೀ ೧೨

ಅಂಡಾನಂತಕ್ಕೀಶನಾದ । ಮೂರ್ತಿ ಸುಂದರ
ತೊಂಡನಾದ ಮೇಲೆ ತನ್ನ । ಹೃದಯ ಮಂದಿರ ॥
ಪಿಂಡ ಅಂಡದೊಳಗೆ ಕಂಡು । ಹಿಗ್ಗಿದ ವಿವರ ।
ಕಂಡವನೆ ಪೇಳ ಬಲ್ಲ । ಅದರ ವಿಸ್ತಾರ ೧೩

ಪೊಂದಿ ಅಪರೋಕ್ಷವನ್ನು । ಸುಜನರುದ್ಧಾರ
ಛಂದದಿಂದ ಮಾಡಿದಂಥ । ದಾಸವರ್ಯರ ॥
ಅಂದ ಚರಿತೆ ಕೇಳಿ ತೋಷ । ಪೊಂದಿದವರ
ನಂದ ಕಂದ ಪಾಲಿಸುವ । ಬಿಡದೆ ಅವರಾ ೧೪

ಗೋವ ಕಾವ ಗೊಲ್ಲರೊಡೆಯ । ಗೋಪಿಯ ಬಾಲ
ತಾವಕ ಭಕ್ತರ ಪೊರೆವ । ಪಾಂಡವ ಪಾಲ
ಆವ ದಾಸರ ಪೊರೆದಂತೆ ಮೈದುನ ಪಾಲ
ದೇವ ದೇವ ಪೊರೆವ ಗುರು । ಗೋವಿಂದ ವಿಠಲ ೧೫

೪೨೯

ಪುರಂದರ ದಾಸರಾಯಾ । ನಮಿಸೆ ನಿಮ್ಮ
ಚರಣ ಸರಸೀರುಹವಾ ಪ

ಮೊರೆಹೊಕ್ಕ ಜನರ ನೀ । ಪೊರೆಯದೆ ಬಿಡುವರೆ
ವರಪ್ರಹ್ಲಾದ್ ಗರುಹಿದಂ । ತರುಹು ಮಂತ್ರಾರ್ಥಿವ ಅ.ಪ.

ದ್ವಾರಕ ಪುರದೊಳಗೆ । ನರ್ತನ ಗೈಯ್ಯೆ
ವಾರ ಕಾಂತೆಯರೆಲ್ಲರೂ ।

ಘೋರಿಟ್ಟು ಮೊರೆಯುವ । ಸ್ವರಕೇಳಿ ಸುರರೆಲ್ಲ
ಹರಿಯ ಓಲಗವಾರು । ಹೊಗುವರು ಎಂದರು ೧

ಬಂದನು ಮುನಿ ನಾರದ । ಪೋಗುವೆ ನಾ
ನೆಂದು ದ್ವಾರಕೆಗೆ ತಾನೆಂದ ।
ಸಿಂಧು ಶಯನ ಗೋ । ವಿಂದನೆ ಪೊರೆಯೆಂದು
ಇಂದರೆ ಯರಸನಾ । ನಂದ ಓಲಗ ಸೇರ್ದ ೨

ಷೋಡಶದ್ವಯ ಸ್ವರದಿ । ಮೈ ಮರೆಯುತ್ತ
ಪಾಡಿ ಪೊಗಳಿ ಮುದದೀ ।
ಮೃಡವಂದ್ಯ ಹರಿಯವನ । ಕಡುಭಕುತಿಗೆ ಮೆಚ್ಚಿ
ನೀಡುವೆ ವರವ ನೀ । ಬೇಡು ಬೇಡನೆ ಪೇಳ್ದ ೩

ಎಚ್ಚತ್ತು ಮುನಿ ನೋಡಿದ । ನಗುತಿರ್ಪ
ಅಚ್ಯುತನ್ನಾ ಬೇಡಿದ ।
ಸಚ್ಚಾರಿತ್ರನೆ ಕೇಳು । ನಿಚ್ಚಾಟೆನ್ನಯ ಕೂಡೆ
ಪೆಚ್ಚ ಪೇರ್ಮಲಿ ಆಡು । ಲಕ್ಷ್ಮಣಾಗ್ರಜನೇ ೪

ಕಲಿ ಪ್ರಾಬಲ್ಯದ ಯುಗದೀ । ನಿನ್ನಯ ಇಷ್ಟ
ಸಲಿಸೂವೆ ತೆರಳೆನಲೂ ।
ಕಲಿಕಾಲ ಬರುವಂದು । ಒಲಿಮೇಲಿ ನರಜನ್ಮ
ತಾಳುತ ಪುರಂದರ । ಗಡದಲ್ಲುದೀಸಿದ ೫

ಚಿನಿವಾರ ವರದನಲ್ಲೀ । ಜನಿಸುತ್ತ
ಧನ ನವಕೋಟಿಯ ಗಳಿಸೀ ।
ಘನ ಲೋಭಿ ದ್ವಿಜನ । ಜ್ಞಾನೋದಯ ಮಾಡುತ
ಘನಗುಣ ಸಿರಿಪತಿ । ಅಣುಗನ್ನ ಪೊರೆದ ೬

ಅಂದಿನ್ನೊಚನ ಮನಕೆ । ಶ್ರೀ ಹರಿ ತಾ
ತಂದು ಸಲಿಸಿದ ಅವನಿಗೇ ।

ಹಿಂದೆ ಮುಂದೆ ಬಂದು । ಪೊಂದಿ ನಿಂದಾಡ್ದ ನಾ
ರಂದ ರೂಪನು ಪುರಂದರ ದಾಸರ ೭

ಹಿರಿಯ ವೈರಾಗ್ಯ ಪೊಂದಿ । ಸಕಲವನ್ನು
ಸಿರಿಕೃಷ್ಣಗರ್ಪಣೆಂದೀ ।
ಗುರು ವ್ಯಾಸರಲಿ ಪುರಂ । ದರನೆಂಬಂಕಿತ ಪೊಂದಿ
ಪರಿಸರ ಮತ ಸರ್ವೋತ್ತಮವೆಂದು ಬರೆದಂಥ ೮

ಪದಪದ್ಯ ಸೂಳ್ಹಾದಿಯ । ಪಾದೊನದಿ
ಪದಪಂಚ ಲಕ್ಷವ ರಚಿಸೀ ।
ಮೋದ ತೀರ್ಥರ ಶಾಸ್ತ್ರ । ಸಾರ ವಿಸ್ತಾರದಿ
ವೇದ ಗಮ್ಯಾನಂದ । ಮಯನ ಬೋಧಿಸಿದ ೯

ನಾಲ್ಕಾರು ಜನ ಶಿಷ್ಯರ । ಜ್ಞಾನೀಗಳ
ಲೋಕೋದ್ಧಾರಕೆ ಈಯುತೆ ಕಾಕು
ಮಾಯ್ಮತಗಳ । ಸಾಕಷ್ಟು ಖಂಡಿಸಿ
ಮಾಕಳತ್ರನ ಮಹಿಮೆ । ಮನೆಮನೆ ಬೀರಿದ ೧೦

ಮಾಸ ಪುಷ್ಯವದ್ಯದೀ । ಪರಮೋತ್ತಮ
ಶಶಿ ರವಿಗಳ ಮೇಳದೀ ।
ರಸೆಯ ತ್ಯಜಿಸಿ ಗುರು ಗೋವಿಂದ ವಿಠಲನ
ಎಸೆವ ಪಾದಗಳ್ಬಿಸಜ । ಸೇರುತ ಮೆರೆದಾ ೧೧

೪೩೦

ಭಾಸಿಸುತಿಹ । ದಾಸರ ನೋಡಿ ॥
ವ್ಯಾಸ ತೀರ್ಥರ ದಾಸರು ಪ

ಧೃತ : ಈ ಸಮಸ್ತ ಜಗದಾಶಯ ರಂಜಿಸಿ
ದಾಸ ಪುರಂದರ ಕರ್ಮಜರ ಗುರು ಅ.ಪ.

ಚಾರು ಚರಿತ ಚರಿತ್ರಾ । ಅಕಳಂಕ ದೇವ ದೇವಾ ॥
ಕಾರುಣೀಕ ಸಾರಸಾಕ್ಷ । ಶ್ರೀ ರಮೇಶನ ಚಾರು ಚರಣ ।
ಧೃತ : ನೀರಜ ಹೃತ್ಸರೋರುಹದೊಳಾರಾಧಿಸ್ಯ
ಪಾರಸುಖದಿ ಸಮೀರ ಮತ ಪ್ರಸಾರವ ಪಡಿಸೀ ೧

ದಾಸಕೂಟ ಸನ್ಮೌಳಿಮಣಿ ವಿದಿತ ಜ್ಞಾನೀ
ನ್ಯಾಸ ಕೋವಿದ ವ್ಯಾಸತೀರ್ಥ । ದಾಸ ಸುರಪ ದಾಸನೆನಿಸಿ ॥
ಧೃತ : ದಾಸಪಂಥ ಪೋಷಿಸೀದ ದಾಸವರ್ಯ
ಆ ಸಮೀರ ಶಾಸಿತ ಗೌರೀಶನ ಬಳಿವಾಸಿಸಿ ೨

ನಾಕಪತಿಯ ನಾಮದಾಸ । ಶತ ಚತುರ ವರ್ಷ
ಲೋಕ ಲೋಕ ಪ್ರಕಾಶಿಸಿ । ಆಕೆವಾಳರ ವಾಕಿನಲ್ಲಿ ।
ಧೃತ : ಸಾಕು ಸಾಕನೆ ಪ್ರಾಕೃತ ಗೀತೆಯ ಝೇಂಕರಿಸಿದ
ಶುಕ ಪಿತ ಗುರುಗೋವಿಂದ ವಿಠಲ ಸ್ವೀಕೃತ ಭಕುತ ೩

೪೩೧

ವಾಸವನಾಮಕ ದಾಸರ ನೆರೆನಂಬೂ । ಜ್ಞಾನ ಭಕುತಿ ತುಂಬೂ
ಕಾಸುಗಳಿಸಿ ಕೋಟೀಶ್ವರ ನೆನಿಸಿದನಾ । ಸರ್ವವು ಚಲ್ಲಿದನಾ ಅ.ಪ.

ಆಶೆಯೆಂದೆನಿಸುವ । ಪೈಶಾಚವ ಕಳೆಯೇ । ದ್ವಿಜಸೋಗಿನಲ್ಲರಿಯೇ
ಕೂಸಿಗೆ ಬ್ರಹ್ಮಚಾರಿ । ಆಶ್ರಮಕೇ ಬೇಡೇ । ಮತ್ತೆ ಕೊಂಡಾಡೇ
ಭೂಸುರ ಬಹುಪರಿ । ಕ್ಲೇಶನಟಿಸಿ ಪೇಳೇ । ಮತ್ತು ಅವನಕೇಳೇ
ಲೇಸುಕಾಸು ಕೊಡ । ದಾಶ್ಮ ಹೃದಯ ವಿವರಾ । ತೆರಳಿದ ದ್ವಿಜವರ ೧

ಅತ್ತಿತ್ತಲು ತಿರುಗುತ । ಮತ್ತೆ ಮನೆಗೆ ಬಂದಾ ತಾನಲ್ಲೆ ನಿಂದ
ಹಿತ್ತಲ ಬಾಗಿಲೊಳ್ । ನಿಂತ ಸತಿಯನಾಸಾ ನೋಡಿದ ತಾ ಶ್ರೀಶಾ
ಚಿತ್ತವ ಪ್ರೇರಿಸಿ । ಮತ್ತೆ ಬೇಡಿತಂದಾ । ಮೂಗುತಿ ಬಲು ಛಂದಾ
ವಿತ್ತತಾರೆನುತವ । ನ್ನತ್ತಿರಿತ್ತು ಪೋದಾ । ಮತ್ತೆ ಬರಧೋದಾ ೨

ದಿಟ್ಟ ಸತಿಯ ಮನ । ಕೆಟ್ಟ ಧೈರ್ಯವೆಂದೂ ।ತಾಯೋಚಿಸುತಂದು
ಕೊಟ್ಟ ಮೂಗುತಿ ಬಚ್ಚಿಟ್ಟ ಪಟ್ಟಿಯೊಳಗೇ । ಬಂದನು ಸತಿ ಬಳಿಗೇ
ಸಿಟ್ಟಿನೊಳಗೆ ಕಂಗೆಟ್ಟು ಕೊಲ್ವೆನೆನಲೂ । ಹರಿಗೆ ಮೊರೆ ಇಡಲೂ
ನೆಟ್ಟಘೋಗಿ ಗರ । ಬಟ್ಟಲ ಕುದಿಪೋಗೇ । ಮೂಗುತಿ ಬಿತ್ತಾಗೇ ೩

ಸುಂಡಿಪೋಗೆ ತನ । ದಿಂಡು ವ್ಯಸನಕಾಗೀ । ತನಪಾಪಕೆ ಮರುಗೀ
ಕಂಡು ಈಸೋಜಿಗ । ಕೊಂಡಾಡಿದ ಸತಿಯ । ಆದನು ಹೊಸಪರಿಯ
ಭಂಡತನದ ಭಂಡಿ । ಭಂಡಿ ದ್ರವ್ಯವೆಲ್ಲ । ದಾನ ಮಾಡ್ದನಲ್ಲಿ
ಗಂಡುಗಲಿಯು ಆಗಿ । ಪುಂಡರಿಕಾಕ್ಷಪದಾ । ಬಂಡುಣಿ ತಾನಾದಾ ೪

ತುಂಗೆ ತಟದಿ ಯತಿ । ಪುಂಗ ವ್ಯಾಸ ಪಾದ । ಭೃಂಗನೆನಿಸಿ ಮೆರೆದಾ
ಮಂಗಳಾಂಗ ಸಿರಿ ರಂಗ ಪಾದ ಭಜಿಸೇ । ಇಂದ್ರ ದಾಸನೆನಿಸೇ
ಸಂಗ ರಹಿತರಿಗೆ । ಮಂಗಳ ಸಂದೇಶ । ಇತ್ತು ತಾನುಪದೇಶಾ
ಅಂಗಜ ಪಿತ ಗುರು । ಗೋವಿಂದ ವಿಠ್ಠಲನಾ ಚರಿತೆಗಳ್ ಬಿತ್ತಿದನಾ ೫

೪೩೨

ಶರಣು ಶರಣೂ ಪ

ಶರಣು ಸುರಮುನಿ ಶರಣು ಸುರವಂದ್ಯ
ಶರಣು ಪುರಂದರ ದಾಸರೇ ಅ.ಪ.

ಆರು ಮೂರೂ ಕೋಟಿ ದ್ರವ್ಯವ ।
ನೆರೆಸಿ ಚಿನಿವಾರ ಕಟ್ಟೆಯಾ
ಭೂರಿ ದೈವವು ಎಂದು ಮೆರೆದಾ ।
ಪಾರ ಲೋಭಿಗೆ ಶರಣು ಶರಣೂ ೧

ಧರೆಗೆ ಬಂದವತಾರ ಕಾರ್ಯವ ।
ಮರೆದು ಮೆರೆಯುವ ಶ್ರೀನಿವಾಸಗೆ

ಭಾರಿ ವಿಜಯ ನಗರಿಯಲ್ಲಿ ।
ಕೀರುತಿಯ ಪಡೆದಾತಗೇ ೨

ಹರಿಯು ತಾಳಿ ದ್ವಿಜನ ವೇಷವ ।
ಕರವ ಚಾಚಿದ ಭಿಕ್ಷೆಗೇ
ತರಳನುಪನಯನೆಂದು ಬೇಡಲು ।
ಬರಿಯ ಹಸ್ತವ ತೋರ್ದಗೆ ೩

ಶ್ರೀನಿವಾಸನ ಸತಿಯ ಸಾರುತ ।
ಗಾನಲೋಲನು ಯಾಚಿಸೇ
ತನ್ನ ಹಣ ಬಂದಿಲ್ಲ ವೆನುತ ।
ತನ್ನ ಮೂಗುತಿನಿತ್ತಳೂ ೪

ಮೌಲ್ಯವ ಕೊಡು ಮೂಗ್ತಿಗೆಂದು ।
ಚೆಲುವ ದ್ವಿಜ ಧನಿಕನ್ನ ಬೇಡಲು
ಬೆಲೆಯ ನೀಯುವ ಮುನ್ನ ತನ್ನಯ ।
ಚೆಲುವ ಸತಿಯನೆ ಸಾರ್ದಗೆ ೫

ಸತಿಯ ನಾಸಿಕ ನೋಡಿ ಭುಗಿಲೆಂದು ।
ಭೀತಿ ಪಡಿಸಿದ ಮಡದಿಯ
ಗತಿ ಪ್ರದಾಯಕ ಪಥವ ತೋರೆಂದು ।
ಎತ್ತಿ ಪಿಡಿದಳು ಗರಳವಾ ೬

ತರುಣಿ ಪಿಡಿದಾ ಗರಳ ಪಾತ್ರೆಲಿ ।
ತ್ವರನೆ ಬಿದ್ದಿತು ಮೂಗುತಿ
ಹರಿಯ ಕರುಣವ ಒರೆಯಲಸದಳ ।
ತ್ವರದಿಯಿತ್ತಳು ಭತೃಗೇ ೭

ಮುದ್ರೆ ಮಾಡೌ ಚಿಟ್ಟ ಪೇಟೆಯ ।
ತೆರ್ದು ನೋಡಲು ಶೀಘ್ರದೀ

ಭದ್ರದೊಡವೆಯ ಕಾಣದೀತನು ।
ಆರ್ದ್ರನಾದನು ಮನದಲೀ ೮

ಸತಿಯೆ ಧನ್ಯಳು ಸತಿಯೆ ಮಾನ್ಯಳು ।
ಸತಿಯೆ ಗತಿಪಥ ತೋರ್ದಳೂ
ಸತಿಯೆ ಶಿರಿಪತಿ ನೋಡೆಳೆನ್ನುತ ।
ಕ್ಷಿತಿಯ ಮೇಲ್ ಕುಣಿ ಕುಣಿದಗೆ ೯

ತನ್ನ ದ್ರವ್ಯವ ತನ್ನ ಗೃಹವನು ।
ತನ್ನದೆಂಬುದೆಲ್ಲವನ್ನು
ಘನ್ನ ಮಹಿಮ ಸಂಪನ್ನ ಕೃಷ್ಣಗೆ ।
ನನ್ನೆಯಿಂದರ್ಪಿಸಿದಗೇ ೧೦

ಮೀಸಲದ ಮನವನ್ನೆ ತಾಳಿ ।
ವ್ಯಾಸ ತೀರ್ಥರ ಬಳಿಗೆ ಪೋಗಿ
ಕ್ಲೇಶಹಾ ಪುರಂದರ ವಿಠಲನ ।
ದಾಸನೆನಿಸಿ ಮೆರೆದಗೇ ೧೧

ಮಧ್ವ ಗುರುಗಳೆ ಗುರುಗಳೆಂದು ।
ಮಧ್ವಮತವೇ ಮತವು ಎಂದು
ಮಧ್ವ ಶಾಸ್ತ್ರವೆ ಶಾಸ್ತ್ರವೆಂದು ।
ಅದ್ವಯನು ಹರಿಯಂದಗೇ ೧೨

ಮಾಸ ಪುಷ್ಯವದ್ಯದೋಳು ।
ಶಶಿಯ ಸೂರ‍್ಯ ಸೇರುವಾಗ
ಶ್ರೀಶ ಗುರು ಗೋವಿಂದ ವಿಠಲನ ।
ಎಸೆವ ಪದವನು ಸೇರ್ದಗೇ ೧೩

೪೩೩

ಶ್ರೀ ವಿಜಯದಾಸರು

ಆಲಿಸೀ ಸಜ್ಜನರೆಲ್ಲ । ಆಲಿಸಿ
ಅಲಿಸಿ ಶಿಷ್ಯ ಸಂಪತ್ತಿ । ಬಹು
ಮೇಳವಿಸಿತು ದಾಸ ವೃತ್ತಿ । ಆಹ
ಲೀಲೇಲಿ ಚರಿಸುತ ಪಾಲಿಸಿ ಸುಜನರ
ಮಾಲೋಲ ಧ್ಯಾನದಿ ಕಾಲವ ಕಳೆವಂಥ ಅ.ಪ.

ಸತ್ರಯಾಗದ ನೆವದಿಂದ । ಒಬ್ಬ
ಪುತ್ರನಿರೆ ಮುದದಿಂದ । ಕಾ
ಳತ್ರ ಮಡಲಿಘಾರೆ ನಿಂದ
ಪುತ್ರಗೆ ಮೋಹನನೆಂದಾ । ಆಹ
ಹಸ್ತವ ಶಿರದೊಳಿಡುತ್ತಲಿ ಹರಸೀದ
ವಿಸ್ತಾರ ತವ ಕೀರ್ತಿ ಆಗಲೆಂದೆನುತಲಿ ೧

ಈ ಪರಿಯಲಿ ಬಹು ಸುಜನ । ಶಿಷ್ಯ
ತಾ ಪೊಂದುತಂಕಿತಗಳನ । ಕೊಟ್ಟು
ಗೋಪಾಲ ವಿಠಲಾಂಕದವನ । ಗೈದು
ಆ ಪಂಗನಾಮ ತಿಮ್ಮಯ್ಯನ । ಆಹ
ಆ ಪರಿಯಲಿ ವೇಣುಗೋಪಾಲ ವಿಠಲನ
ಶ್ರೀಪಾದದಾಸನ್ನ ಮಾಡುತ್ತ ಪೊರೆದಂಥ ೨

ಒಪ್ಪುವೊ ಭಾಸ್ಕರ ಕ್ಷೇತ್ರ । ನಾಮ
ಚಿಪ್ಪಗಿರಿ ಬಹು ಪವಿತ್ರ । ಸೇವೆ
ಅರ್ಪಿಪ ಜನರ ತಾಪತ್ರ್ಯ । ನೀಗೆ
ಒಪ್ಪುತಲಿದ್ದು ಸೂತ್ರ । ಆಹ
ಅಪ್ಪನಾದ ಗುರು ಗೋವಿಂದ ವಿಠಲಗೆ
ಕಪ್ಪ ತೆರದಿ ದೇಹ ನರ್ಪಿಸಿ ಮೆರೆದನ ೩

೪೩೪

ಉದಿಸೀದಾ ರವಿಯು ತಾನುದಿಸಿದ ಪ

ಉದಿಸಿದ ರವಿಯು ತಾನೆನಿಸೀ । ಗುರು
ಮುದಮುನಿ ಮತವ ವಿಸ್ತರಿಸೀ । ಆಹ
ಬುಧಜನರಂತಸ್ಥ ಬಹು ವಿಧ ತಿಮಿರವ
ಒದೆದು ಛೇದಿಸುವಂಥ ವಿಜಯಾರ್ಯ ತರಣಿಯು ಅ.ಪ.

ಸುರಮುನಿ ಪಾದವ ಭಜಿಸೀ । ಯುಗ
ವೆರಡರೊಳ್ ಸುರಲೀಲ ನೆನಿಸೀ । ಯುಗ
ಮೂರರೊಳ್ ನಿಕಂಪನೆನಿಸೀ । ಯುಗ
ಮೂರೊಂದರಲಿ ಕರುವೆನಿಸೀ । ಆಹ
ಪುರಂದರ ದಾಸರ ಗೃಹದೊಳಗುದಿಸುತ ೧

ಕರಣೀಕ ಶೀನಪ್ಪ ತನು । ತನ್ನ
ವರಪ್ರಿಯ ಸತಿಕೂಸಮ್ಮನು । ಬಲು
ಪರಿಪರಿ ಸೇವಿಸಿ ವರವನು । ಪೊಂದಿ
ಎರಡೊಂದು ತನಯರುಗಳು । ಆಹ
ಪರಿ ಪಾಲಿಸುತ್ತಲಿ ಪರಿಪರಿ ಭವಣೇಲಿ
ಪೊರೆಯವು ಉದರವ ಸರಿಯಿತು ಕಾಲವು ೨

ಬಡತನ ಭವಣೇಲಿ ಬಂದೂ । ಒಂದು
ಕುಡಿತೆ ಗಂಜಿಗಾಗಿ ನೊಂದೂ । ಛಾಗಿ
ಒಡೆಯನ ಮನೆಯೊಳಗಂದೂ । ಮೆದ್ದು
ಒಡಲ ತುಂಬಿಕೊಂಡು ಬಂದೂ । ಆಹ
ಬಡಗ ದಿಕ್ಕಿನ ಗಂಗೆ ಮಡುವ ಕಾಣುವೆನೆಂದು
ಸಡಗರದಲಿ ಪೋದ ಬಡ ಕೂಸೀಮಗದಾಸ ೩

ಎರಡೆಂಟು ವತ್ಸರ ತರಳ । ತನ್ನ
ಹಿರಯರಿಗ್ಹೇಳದೆ ಪೊಳಲ । ಬಿಟ್ಟು

ತಿರುಗುತ ತೀರ್ಥ ಕ್ಷೇತ್ರಗಳ । ಮಿಂದು
ಮರಳಿ ತಾ ಮಾತಾ ಪಿತೃಗಳ । ಆಹ
ಬೆರೆದು ಮಾನವರಂತೆ ಸಂಸಾರ ವೃತ್ತಿಲಿ
ಚರಿಸಿದವೆರಡುಂಟು ವರುಷವ ಕಳೆಯುತ ೪

ಮತ್ತೆ ತಾ ವೈರಾಗ್ಯದಲ್ಲಿ । ಹರಿ
ಪೆತ್ತ ಗಂಗೆಯ ಸ್ನಾನದಲ್ಲಿ । ಮನ
ತೆತ್ತು ಗಯಾದೇಶದಲ್ಲಿ । ಪಿಂಡ
ವಿತ್ತು ವಾರಣಾಸಿಯಲ್ಲಿ । ಆಹ
ಉತ್ತಮರ ಸಂಗ ನಿತ್ಯಸ್ನಾನ ಸಂಧ್ಯ
ಕೃತ್ಯವನೆಸಗಿ ಸುಚಿತ್ತದಿ ಮಲಗಿರೆ ೫

ಸತ್ಯ ಸ್ವಪ್ನದಿ ನರಹರಿಯು । ತನ್ನ
ಪುತ್ರನೆಬ್ಬಿಸಿದಂತೆ ಪರಿಯು । ದಾಸ
ರಂತೆ ರೂಪವ ತಾಳಿ ಹರಿಯು । ತನ್ನ
ಹತ್ತಿರ ಕರೆಯುತ ಧೊರೆಯು । ಆಹ
ಚಿತ್ತಜ ಪಿತ ಪೆತ್ತ ಸರಿತವ ದಾಂಟಿಸಿ
ಉತ್ತಮ ಕಾಶಿಯ ವ್ಯಾಸರ ಕಂಡವ ೬

ಎಚ್ಚೆತ್ತು ಮನಸೀನ ಪರಿಯ । ಕಂಡು
ಹೆಚ್ಚಿನ ಸಂತೋಷಧೊರೆಯ । ಹೊತ್ತು
ನಿಚ್ಚಟ ಭಕುತಿಯಿಂಧರಿಯ । ಮನ
ಮೆಚ್ಚುವಂತೆ ಪರಿ ಪರಿಯ । ಆಹ
ಅಚ್ಚ ಕವನ ಪೇಳಿ ನೆಚ್ಚಿನ ಮನದವರ
ಸ್ವಚ್ಛತನಕೆ ತಿದ್ದಿ ಅಚ್ಯುತಗಿಂತವ ೭

ಎರಡೊಂದನೇ ಬಾರಿ ಪೋಗಿ । ಕಾಶಿ
ಪುರದಿ ಗಂಗಾಸ್ನಾನಕಾಗಿ । ಕೂಡೆ
ಸುರನದಿ ಪೆಚ್ಚಿ ಮೇಲಾಗಿ । ಸಿರಿ
ವರದ್ವಿಜಗಭಿಷೇಕವಾಗಿ । ಆಹಸರಿತವು

ಮುಂಚಿನ ಪರಿಯಂತೆ ಪ್ರವಹಿಸೆ
ಸುರನರೋರುಗರೆಲ್ಲ ಪರಿಪರಿ ಕೊಂಡಾಡೆ ೮

ತುತಿಸುತಲಲ್ಲಿಂದ ಸೇತು । ಸ್ನಾನ
ರತಿಯಿಂದ ಗೈಯ್ಯುತ ಹೊತ್ತು । ಹರಿ
ಕಥೆಗಳ ಪೇಳಿ ಯಾವತ್ತು । ಜನ
ತತಿಗೆ ಸನ್ಮಾರ್ಗವನಿತ್ತು । ಆಹ
ತೀರ್ಥ ಕ್ಷೇತ್ರಂಗಳ ನತಿಸುತ ದಶಮತಿ
ಮತವ ಬೀರಿದನೀತ ಸುಜನರ ಪೊರೆಯಲು ೯

ವೇದಾದಿ ಸಕಲಾರ್ಥ ಸಾರ । ಸೊ
ಳ್ಳಾದಿಗಳ್ ಮೊದಲಾದ ಹಾರ । ದಿಂದ
ಭೇದ ವಾದಿಯ ಮತೋದ್ಧಾರ । ಗೈದು
ಶ್ರೀಶ ಗೊಪ್ಪಿಸೀದ ಧೀರ । ಆಹ
ನಾದ ಮೂರುತಿ ಗುರು ಗೋವಿಂದ ವಿಠಲನ
ಪಾದವ ಸ್ಮರಿಸುತ್ತ ಮೋದವ ಪಡುತ್ತಿದ್ದ ೧೦

೪೩೫

ಗುರುವಂತರ್ಗತ ವಿಜಯ ದಾಸಾ ಕಾಯೋ
ಶರಣರ ಹೃತ್ಸನ್ನಿವಾಸಾ ಪ

ಸುರಮುನಿ ಸುತನಾದ ವರ ಭೃಗ್ವಂಶಜನೆಂ
ದುರೆ ಮೆರೆವನೀಯೊಳ್ ವರದ್ವಿಜನೆನಿಸೀದ ಅ.ಪ.

ಶ್ರೀಪಾದರಾಜ ಯೋಗೀಂದ್ರ । ರಿಂದ
ಸ್ಥಾಪಿಸಿದಶ್ವತ್ಥ ಛಂದ ।
ಆ ಪುರ ಪ್ರಸಿದ್ಧವ ವರಹಚಿ ತಟಚೀಕ
ನಾಪರಿ ಗ್ರಾಮದಿ ರೂಪಿಸಿದವತಾರ ॥
ತಾಪತ್ರಯ ಪ್ರದೀಪವಿರೆ ಸು ।

ರಾಪಗವ ಸಾರುತ್ತ ಮಲಗಿರೆ
ಆ ಪುರಂದರ ದಾಸ ರೂಪಿಯ ।
ಸ್ವಾಪದಲಿ ಕಾಣುತ್ತನಲಿದ ೧

ದಾಸ ರೂಪಿಯು ಕೊಂಡು ನಿನ್ನ । ವ್ಯಾಸ
ಕಾಶಿಯಲಿರುವ ದೇವನ್ನ ।
ವ್ಯಾಸರೂಪನ ಪಾದ । ದಾಸನ್ನ ಮಾತೆ ವಿ
ಶ್ವಾಸದಲೀ ಪಡೆದೆ । ಭಾಸುರ ಉಪದೇಶ ॥
ಶ್ರೀಶನನುಗ್ರಹಿಸಿ ತನ್ನಯ ।
ದಾಸ ರೂಪವ ಮರೆಯಗೈಯ್ಯಲು
ಲೇಸು ಎಚ್ಚರಗೊಂಡು ಪುಳಕೀತ ।
ಭಾಸುರದ ಸುಸ್ತೋತ್ರಗೈದು ೨

ಪಾವನ ವಾನಂದ ತೀರ್ಥ । ಭಾಷ್ಯ
ಭಾವ ಕನ್ನಡದಿ ಪೇಳುತ್ತ ।
ಜೀವರುದ್ಧರ ಕಾರ್ಯ । ತೀವರ ನಡೆಸುತ್ತ
ಕಾವಕೊಲ್ಲುವ ಗುರು । ಗೋವಿಂದ ವಿಠಲ
ದೇವ ಸರ್ವೋತ್ತಮನು ಪವನನು ।
ಜೀವರುತ್ತಮನೆಂದು ಸ್ಥಾಪಿಸಿ
ದೇವತತಿ ತರತಮದ ಭಾವವ ।
ಓವಿ ಪೇಳ್ದ ಮಹಾನುಭಾವ ೩

೪೩೬

ದಾಸರಿವರ ನೋಡಿರೊ । ಗುರು ವಿಜಯ ।
ದಾಸರಿವರ ಪಾಡಿರೋ ಪ

ವ್ಯಾಸರಾಜ್ಞೆಯಲಿಂದ । ವ್ಯಾಸ ಕಾಶಿಗೆ ಪೋಗಿ ।
ಶ್ರೀಶಾನುಗ್ರಹದಲಿ । ಭಾಸಿಸೀ ಮೆರೆದಂಥ ಅ.ಪ.

ಎರಡನೆ ಯುಗದೊಳಗೆ । ಸುರಲೀಲ । ವರಕಪಿ ಎಂದೆನೆಸಿ ।
ಶಿರಿ ರಾಮಚಂದ್ರನ್ನ । ಚರಣ ಸೇವಕರಾಗಿ
ಸುರ ವಿರೋಧಿಗಳ ಬಹಳ ಸಂಹರಿಸಿದ ೧

ಯಾದವರಲಿ ಜನಿಸಿ । ನಿಕಂಪಾಖ್ಯ । ಶ್ರೀದಕೃಷ್ಣನ ಭಜಿಸಿ ।
ಮಾಧವ ಗೆದುರಾಂತ । ದೈತ್ಯರ ಸದೆಬಡಿದು
ಯಾದವೇಶನ ಪದ । ಕರ್ಪಿಸಿ ಮೆರೆದಂಥ ೨

ವರಕಲಿಯುಗದೊಳಗೆ । ತುರುಕರು । ವರಜನ್ಮದಲಿ ಉದಿಸಿ ।
ಪುರಂದರ ದಾಸರ । ವರ ಗೃಹದಲಿ ಇದ್ದು
ಹರಿಚರಿತೆ ಶ್ರವಣದಿ ! ವಿಪ್ರನಾಗ್ಯುದೀಸಿದ ೩

ಮಧ್ವಪತಿಯ ನಾಮದಿ । ಭೃಗ್ವಂಶದಿ । ಮುದ್ದು ಮಗನೆನಿಸಿ
ಮಧ್ವೇಶ ಹರಿಪಾದ । ಶ್ರದ್ಧೆಯಿಂದಲಿ ಭಜಿಸಿ
ಮಧ್ವರಾಯರ ಮತ । ತುತಿಸಿ ಮೋದಿಸಿದಂಥ ೪

ಚೀಕನಪರಿ ಕ್ಷೇತ್ರದೀ । ದಾಸಪ್ಪನು । ಆ ಕೂಸಮ್ಮನ ಉದರದಿ
ಬೇಕಾಗಿ ಜನಿಸುತ್ತ । ಪ್ರಾಕು ಪ್ರಾರಬ್ಧವ
ನೇಕ ಬಗೆಯಲಿ ಉಂಡ । ಮಾಕಳತ್ರನ ಕಂಡ ೫

ದಾಸನಾಗುತ ಸ್ವಪ್ನದಿ । ಪುರಂದರ । ದಾಸರೂಪಿಯಲಿಂದ ।
ಸೂಸಿ ಶಾಸ್ತ್ರವ ಮಧ್ವ । ಭಾಷ್ಯಾನು ಸಾರದಿ ।
ಭಾಷೆ ಕನ್ನಡದಲ್ಲಿ ! ಮೀಸಲೆನಿಸಿ ಪೇಳ್ದ ೬

ಧ್ಯಾನೋಪಾಸನೆ ಕರ್ಮವ । ಯೋಗ್ಯರಿಗೆ । ಗಾನಗೈದಿಹ
ಸುಜ್ಞಾನೀ । ಮಾನ್ಯ ಮಾನದ ದುಷ್ಟ । ಗಾನಕೆ ಮನ ಕೊಡದೆ
ಮೌನಿಯಾಗುವ ಮಾರ್ಗ । ದಾನವ ಮಾಡೀದ ೭

ಸ್ವಪ್ನದಲ್ಲೆನಗವರೂ । ದರ್ಶನದಿ । ಕೃಪ್ಪೆಯಲನುಗ್ರಹಿಸಿ ।
ಅಪ್ಪಾರ ಮಹಿಮರು । ತಪ್ಪದೆ ತ್ರಯ ಬಾರಿ
ಒಪ್ಪಿ ತೀರ್ಥವನಿತ್ತು ಕಳುಹಿದ ಮಹಾಂತ ೮

ಯುವ ವತ್ಸರ ಕಾರ್ತೀಕ । ಸಿತ ದಶಮಿ । ಆವಗುರುವಾಸರದಿ
ಭಾವಜ ಪಿತ ಗುರು । ಗೋವಿಂದ ವಿಠಲನ
ಭಾವದಿ ಕಂಡು ಸುಯೋಗದಿ ಪೊರಟಂಥ ೬

೪೩೭

ನಮಿಸುವೆನು ನಮಿಸುವೆನು । ವಿಜಯದಾಸರಿಗೇ ಪ

ಅಮಮ ಮಹಿಮೆಗಳ್ನಿಮ್ಮ । ವರ್ಣಿಸಲು ಅಳವೇ ಅ.ಪ.

ಕವಚ ವಿಜಯವ ಪಠಿಸಿ । ಅವನಿಯೊಳು ಸಜ್ಜನರು
ಬವಣೆಗಳ ಕಳಕೊಂಡು । ಸುಖದಿಂದ ಜೀವಿಪರೋ ।
ಅವರನುಗ್ರಹದಿಂದ । ಭವಣೆ ಎನೆ ಮಧ್ಭಯವು
ಸವೆದು ಪೋಗುತ ಗ್ರಂಥ । ಮುದ್ರಣವ ಮುಂಬರಿಸಿದೆ ೧

ತ್ರಯಭಾರಿ ತೀರ್ಥವನು । ಸ್ವಪ್ನದಲಿ ಎನಗಿತ್ತು
ಕಾಯ ಶದ್ದಿಯ ಗೈದು । ಆಶಿಷಂಗಳನೆ ಇತ್ತು ।
ಜಯ ಜಯವೆಂದೆನಿಸಿ । ಹಯಾಸ್ಯ ನಂಪ್ರಿಯಲಿ
ಕಾರ್ಯಮುಂಬರಿಸಿರುವ । ಮಹ ಕಾರುಣ್ಯ ಮೂರ್ತೇ ೨

ಹರಿಗುರು ಗೋವಿಂದ । ವಿಠಲ ಚರಣಬ್ಜವನು
ಪರಿಪರಿಯಲಿಂದತುತಿಸಿ । ಮರಳಿ ಕಾಂಬುವ ಸುಹವನಾ
ವರ ವಿಜಯ ದಾಸಾರ್ಯಾ । ಕರುಣಿಸೆನೆ ಬಿನ್ನಪವ
ಕರಗತವ ಮಾಡುವುದು । ಉರುಕರುಣ ಸಂಪನ್ನಾ ೩

೪೩೮

ವಿಜಯ ಗುರು ಜಯ ಜಯವು ನಿಮ್ಮಪದಕೇ ಪ

ವಿಜಯ ಸಖನನ ಪಾದ ಅಬುಜ ನಿಜ ಮಧುಪಾ ಅ.ಪ.

ಮೋದತೀರ್ಥರ ದಿವ್ಯ । ಪಾದಗಳನಾಶ್ರಯಿಸಿ
ಬೋಧಿಸುತ ತಿಳಿ । ಯಾದ ಪ್ರಾಕೃತದಲೀ ।
ವೇದಾದಿ ಶಾಸ್ತ್ರ ಸೂ । ಧಾದಿ ಟೀಕೆಗಳ ಸೂ
ಳ್ಳಾದಿಯಲಿ ರಚಿಸುತ್ತ । ಮೋದ ಪಡಿಸಿದೆಯೋ ೧

ಅಡಿಗಡಿಗೆ ನಿಮ್ಮಯಾ । ಅಡಿಗಳಿಗೆ ಎರುಗುವೆನು
ಬಿಡದಲೇ ನೀವಿನ್ನು । ಕೈ ಪಿಡುವುದೂ ।
ಕಡು ದಯಾನಿಧಿ ಗುರುವೆ । ಪೊಡವಿ ಪತಿ ಹರಿಯಂಘ್ರಿ
ಜಡಜದಲಿ ಕಡು ಭಕುತಿ । ದೃಢಮಾಡಿ ಪೊರೆಯೊ ೨

ಏಸೇಸೊ ಜನ ನಿಮ್ಮ । ನಾಶ್ರಯಿಸುತೀ ಭವದ
ಪಾಶವನೆ ಕಳೆದು ಸಂ । ತೋಷಿಸಿದರೋ ।
ಮೇಶ ಗುರುಗೋವಿಂದ । ವಿಠ್ಠಲನ ಪಾದ ವಾ
ರಾಶಿಜವನೇ ತೋರಿ । ಸಲಹಯ್ಯ ಕರುಣೀ ೩

೪೩೯

ವಿಜಯ ದಾಸರ ಭಜಿಸಿರೋ । ಸುಜನರೆಲ್ಲ ನೀವೂ ಪ

ವಿಜಯ ದಾಸರ ಭಜಿಸೇ । ಕುಜನ ಮರ್ದನ ನಮ್ಮ
ವಿಜಯ ವಿಠಲ ತಾನೇ । ನಿಜವ ತೋರುವ ಮನದೀ ಅ.ಪ.

ಮುನ್ನ ಸುರಲೀಲಾ ನೆನಿಸಿ ತಾ ।
ಜನಿಸಿದ ತ್ರೇತಾಯುಗದಿ ।
ವನಧಿಜೆ ರಮಣ ಶ್ರೀ । ಹನುವ ಸೇವಿತನಾದ
ಶ್ರೀನಿವಾಸನ ಚರಣ । ವನಜವ ಸೇವಿಸಿದಾ ೧

ಸಕಲ ಸದ್ಗುಣ ಆಕರಾ ।
ನಿಖಿಲ ಲೋಕದ ಧಾರಕಾ ।

ಪಾಕಶಾಸನ ಪೂಜ್ಯ । ಗೋಕುಲರೊಡೆಯನ
ನಿಕಂಪಾನೆನಿಸಿ ಜನಿಸಿ । ಕೃಷ್ಣನ್ನ ಪೂಜಿಸಿದ ೨

ಸುರ ಪುರ ಮುನಿ ನಾರದಾ ।
ವರಕಲಿಯಲ್ಲಿ ಜನಿಸೇ ।
ತುರುಕರುವಾಗಿ ಅವರಾ । ಚರಣವ ಸೇವಿಸಿದ
ಮರಳಿ ಅವರ ಪುತ್ರಾ । ಗುರುಮಧ್ವಪತಿ ಭೃಗುವಾ ೩

ಪದಪಂಚ ಲಕ್ಷ ಗ್ರಂಥಕೇ ।
ಪಾದವೇ ನ್ಯೂನವಿರಲೂ । ಪದಪದ್ಯ ಸುಳ್ಗಾದಿಯಲಿ ।
ಪಾದ ಪೂರ್ತಿಯ ಮಾಡೆ
ಮೋದದಲುದಿಸಿದಾ । ಬುಧನು ದಾಸಪ್ಪ ನೆನಿಸೀ ೪

ಪರಮ ಕಾರುಣ್ಯ ಗುರುವೇ ।
ಕರವ ಪಿಡೀರಿ ಎನ್ನಾ ।
ಮರುತಾಂತಾರಾತ್ಮಾ ಗುರು । ಗೋವಿಂದ ವಿಠ್ಠಲನ
ಚರಣವ ತೋರಿಸೀ । ಕರುಣದಿ ಪೋಷಿಸಿ ೫

೪೪೦

ವಿಜಯರಾಯ । ಗುರು । ವಿಜಯರಾಯ ಪ

ವಿಜಯರಾಯ । ಗುರು । ವಿಜಯರಾಯ ಅ.ಪ.

ಎರಡನೆ ಯುಗದೊಳು । ವಿ । ಸುರಲೀಲ ಕಪಿಯಾದ್ಯೊ ।ವಿ।
ಹರಿಕಾರ್ಯಕನುವಾಗಿ । ವಿ । ಹರಿಕರುಣ ಪಾತ್ರನೆ । ವಿ । ೧

ಶಕಟ ಭಂಜನ ಪಾದ । ವಿ । ಸುಕಮಲವ ಸೇವಿಸೆ । ವಿ ।
ಪ್ರಕಟಿ ಯಾದವರಲ್ಲಿ । ವಿ । ನಿಕಂಪಾನೆನಿಸೀದೆ । ವಿ । ೨

ವರ ಕಲಿಯುಗದೊಳು । ವಿ । ಪುರಂದರ ದಾಸರೋಳ್
ತುರುಕರು ನೀನಾಗಿ । ವಿ । ಹರಿಚರಿತೆ ಕೇಳಿದೆ । ವಿ । ೩

ಧರೆ ಸುರ ಜನುಮದಿ । ವಿ । ಗುರು ಮಧ್ವಪತಿಯಾಗಿ । ವಿ ।
ಗುರು ಚರಣ ಸೇವಿಸಿ । ವಿ । ಪರ ವಿದ್ಯಾರ್ಜಿಸಿದ್ಯೊ । ವಿ । ೪।

ಗುರು ವಾಜ್ಞದಿ ಮತ್ತೆ । ವಿ । ತಿರಿಪಾದ ಪೂರೈಸೆ ವಿ ।
ವರ ಭೂಸುರನಾಗಿ । ವಿ । ಹರಿಚರಿತೆ ಪೇಳಿದೆ । ವಿ । ೫

ವರಯುವ ವತ್ಸರ । ವಿ । ಎರಡು ನಾಲ್ಕರ ಮಾಸ । ವಿ ।
ಎರಡು ಐದನೆ ದಿನ । ವಿ । ಗುರುವಾರ ಪ್ರಹರದಿ । ವಿ । ೬

ವರಯೋಗ ಮಾರ್ಗದಿ । ವಿ । ಗುರು ಗೋವಿಂದ ವಿಠಲನ । ವಿ ।
ಚರಣಾಬ್ಜ ಸೇರುತ । ವಿ । ಮೆರೆವೆ ಭಕ್ತರ ಮನದಿ । ವಿ । ೭

೪೪೧

ವಿಜಯರಾಯರಂಘ್ರಿ ಕಮಲ । ಭಜಿಸಿ ಬದುಕಿರೋ
ನಿಜ ಸುಜ್ಞಾನ ಹರಿಭಕ್ತಿ । ನಿಜಕೆ ತರುವರೋ ಪ

ಸಂತ ಶ್ರೀನಿವಾಸನಹಂ । ಮತಿಯ ವಿಚಾರಾ
ಚಿಂತಿಸದೆ ಒಲಿದಂಥ । ಶಾಂತ ಚಿತ್ತರಾ ॥
ಕಂತುಹರ ಸುತನಂಶ । ಜಾತರಿಹರಾ
ಅಂತೆ ತೋರಿ ದಾಸ ದೀಕ್ಷೆ । ಪಂಥ ವಿತ್ತರಾ ೧

ಮಂಗಳದುತ್ಸವಕಾಗಿ । ಸಂಘ ಬರ್ಲಾಗಿ
ಮಂಗಳ ಭಕ್ಷವು ಮಂಡಿಗಿ । ಮಾಳ್ಪರಿಲ್ಲಾಗಿ
ಭಂಗ ಭೀತಿ ಅಧಿಪಗೊದಗಿ । ಚಿಂತಿಸಲಾಗಿ
ಅಂಗ ವೇಷ ಬದಲಾಗಿ । ಬಂದ ತಾನಾಗಿ ೨

ಗ್ರಂಥ ಸುಧಾಭಿಧ ಬಲ್ಲ । ಸಂತ ಸುಬ್ಬಣ್ಣ
ಸಂತ ವಿಜಯದಾಸಗಿಂಥ । ಗ್ರಂಥವೆಲ್ಲಣ್ಣ
ಅಂತೆ ದಾಸಗಪರೋಕ್ಷ । ಕಂತೆ ಕಾಣಣ್ಣ
ಚಿಂತಿಸುತ್ತ ಪ್ರವಚನ । ಭ್ರಾಂತ ನಿದ್ದನ ೩

ಬಂದು ವಿಜಯದಾಸರಾಗ । ತೊಂದರೆ ಯೋಗ
ಛಂದದಿಂದ ನೀಗಿ ಭಕ್ಷ । ಮಾಡಿದ ರಾಗ ।
ಬಂದು ಸುಧಾ ಕೇಳುತಿರಲು । ಆಚಾರ್ಯರಾಗ
ಸಂದೇಹವ ಪಡುತಲಿ । ಮೌನವಿರಲಾಗ ೪

ಪಾಚಕನ ತೆರ ಬಂದ । ಭೃಗುವಿನಂಶನು
ನೀಚ ನೀರಿನವನ ಶಿರದಿ । ಚಾಚಿ ಕೈಯ್ಯನ್ನು
ಬಾಚಿ ಬಿಡಿಸೆಂದ ಅವರ । ಸಂಶಯವನ್ನು
ವಾಚೀಸೀದ ಅನುವಾದ । ನೀರಿನವನೂ ೫

ಪೇಚಿಗೆ ಸುಬ್ಬಣ್ಣ ಸಿಕ್ಕಿ । ಮನದಿ ತಪಿಸೀ ।
ಯಾಚಿಸೀದ ಕ್ಷಮೆಯನ್ನು । ಬಹಳ ಪ್ರಾರ್ಥಿಸಿ ॥
ಸೂಚಿಸಲು ಶೈವನಿದ್ದ । ಬೇಲೂರು ವಾಸಿ
ಪ್ರಾಚೀನದ ಸ್ಮೃತಿ ಬಂತು । ನಂಜುಂಡ ನೆನಿಸಿ ೬

ಪಾಣಿ ಇಟ್ಟು ಶಿರದಲ್ಲಿ । ಆಶೀರ್ವದಿಸಿ
ವೇಣುಗೋಪ ದಾಸರಲ್ಲಿ ಅಂಕಿತ ಕೊಡಿಸಿ ॥
ಸಾಣೆ ಇಟ್ಟಂತಾಯಿತವನ । ಜ್ಞಾನದ ಅಸಿ
ಮಾಣದಲೆ ವಿಜಯ ಕವಚ । ಮಾಡಿದ ಸೂಸಿ ೭

ದಾಸಕೂಟ ಜನರೆಲ್ಲ । ಬಿಡದೆ ಪಾಡುವ
ವ್ಯಾಸವಿಠಲ ರಚಿತೆನ್ನ । ವಿಜಯ ಕವಚವ
ಲೇಸು ನೆರೆ ನಂಬಿದೆನ್ನ । ವಿಠಲ ಸ್ತೋತ್ರವ
ಮೀಸಲಾಗಿ ಪಾಡುವರು । ಸ್ತೋತ್ರವೆಲ್ಲವ ೮

ವರ್ಷ ಸೌಮ್ಯ ಕಾರ್ತೀಕದಿ । ಸೇವಿಸುತ್ತಿರೆ
ದರ್ಶನಿತ್ತು ಸ್ವಪ್ನದಲ್ಲಿ । ಧೈರ್ಯಕೊಟ್ಟಾರೆ
ಹರ್ಷವಿತ್ತು ದಾಸಕಾರ್ಯ । ಸಾಗಿಸುತ್ತಾರೆ
ದರ್ಶದಿನ ಪುಷ್ಯ ನೃಹರಿ । ಯಾತ್ರೆಯಿತ್ತಾರೆ ೯

ಕಾರ್ತಸ್ವರೇತ್ಯಾದಿ ವಿತ್ತ । ಒಂದು ನಾನೊಲ್ಲೆ
ಪಾರ್ಥಸಾರ್ಥಿ ಸೇವೆ ನಿತ್ಯ । ಇಲ್ಲದಿನ ವ್ರೊಲ್ಲೆ ॥
ಮೂರ್ತಿ ಬಿಂಬ ತೋರಿ ಎಂದು । ಕೇಳುವ ಸೊಲ್ಲೆ
ಸಾರ್ಥಕವ ಮಾಡಿರೆಂದು । ಪ್ರಾರ್ಥಿಸೆ ಬಲ್ಲೆ ೧೦

ಭಾವಭಕ್ತಿ ಸುಜನ ಸಂಗ । ವಿತ್ತು ಸುಶೀಲ
ಕಾವ ದಾಸ ಜನರನ್ನು । ಹೃದಯ ವಿಶಾಲ
ಗೋವ ಪರಿಪಾಲ ಗುರು । ಗೋವಿಂದ ವಿಠಲನ
ತೀವರದಿ ಭಜಿಸಿ ಕಳೆದ । ಮಾಯಾಪಟಲ ೧೧

೪೪೨

ವಿಜಯ ರಾಯರ ಭಜಿಸದವ ನಿರ್ಭಾಗ್ಯ ಕಾಣೋ ಪ

ಅಜಭವರಕಿಂತಧಿಕ ಗಜವರದ ಪರನೆಂದಾ ಅ.ಪ.

ಋಷಿಗಳೆಲ್ಲರು ಕಲೆತು ಸತ್ರಯಾಗವ ಮಾಡೆ
ಹೃಷಿಕೇಶ ಚತುರಾಸ್ಯ ಕೈಲಾಸ ವಾಸಾ ।
ಈಸು ಮೂರ್ತಿಗಳಲ್ಲಿ ಮಿಗಿಲಾರು ಎಂದೆನ್ನೆ
ಸೂಸಿ ಮೂರ್ಲೋಕಗಳ ಶ್ರೀಶ ಪರನೆಂದಾ ೧

ದೇವಮುನಿ ನರನಾಗಿ ಭುವಿಯಲ್ಲಿ ಜನಿಸುತಾ
ದೇವದೇವನ ಸ್ತೋತ್ರ ಕವನವನೆ ಗೈದಾ ।
ಆವ ಲಕ್ಷವು ಪಂಚಕೆ ನ್ಯೂನ ಪಾದವ ಮಾಡ್ದ
ದೇವ ಮುನಿ ಸುತ ಗುರು ಮಧ್ವಪತಿ ವಿಠಲಾ ೨

ಜವನವರು ಕೊಂಡ್ಯೋಗೆ ಜವಪುರಿಗೆ ತನಯನಾ
ಜವನೊಡನೆ ಶೆಣೆಶಾಡಿ ಹರಿಗೆ ಮೊರೆಯಿಡಲು ।
ಜೀವದಾನವ ಪೊಂದಿ ಚಿಪ್ಪಗಿರಿಗೆ ತೆರಳಲು
ಜೀವಂತ ನಾದನ್ಯೆ ತನಯ ಮೋಹನ್ನಾ ೩

ಪೂರ್ಣಬೋಧರ ಮತವ ಗಾನ ರೂಪದಿ ಪೇಳಿ
ಪೂರ್ಣಗುಣ ಹರಿಯೆಂದು ಸ್ಥಾಪಿಸುತಲೀ ।
ಪೂರ್ಣ ಸಂಪ್ರೀತಿಯಲಿ ನೆಲೆಸಿ ಚಿಪಗಿರಿಯಲ್ಲಿ
ಪೂರ್ಣನಂಘ್ರಿಯ ಭಜಿಸಿ ಭಕ್ತರನೆ ಪೊರೆದಾ ೪

ಯುವ ಸಂವತ್ಸರದ ಸುಕಾರ್ತಿಕದ ಸಿತಪಕ್ಷ
ಯಾದು ಗುರುದಿನ ದಶಮಿ ಮೊದಲ್ಯಾಮದಿ ।
ಪವನಾಂತರಾತ್ಮ ಗುರು ಗೋವಿಂದ ವಿಠ್ಠಲನ
ಸ್ತವನದಿಂದಲಿ ಪೊರಟ ಹರಿಯ ಪುರಕಾಗಾ ೫

೪೪೩

ಸಾರಿ ಭಜಿಸಿರೋ । ವಿಜಯ ಗುರುಗಳೆಂಬರಾ ಪ

ಮಾರ ಜನಕನಾ ಚಾರು । ಚರಣ ತೋರ್ಪರಾ ಅ.ಪ.

ಸತ್ರಯಾಗದೀ ಗಂಗೆ । ಕ್ಷೇತ್ರ ತೀರದಿ
ಭ್ರಾತೃವರ್ಗವೂ ಅವರ ತುತಿಸಿ ಕಳುಹಲೂ ೧

ಗಿರಿಜೆ ರಮಣನಾ ಪುರವ । ಸಾರಿ ಬೇಗನೇ
ಮಾರ ಕೇಳಿಯಾ ನೋಡಿ । ಗಿರಿಯ ತ್ಯಜಿಸಿದಾ ೨

ಚತುರವದನನಾ ದಿವ್ಯ । ಸತ್ಯಲೋಕವಾ
ಚತುರ ಸೇರುತಾ ಅವನ । ಸ್ತುತಿಯ ಮಾಡಿದ ೩

ವೇದ ಪಠಿಸುತಾ । ಬಧಿರನಂತಿರೇ
ವದಗಿ ಸಾಗಿದಾ । ನಾರ್‍ದ ದೂತನೂ ೪

ಹರಿಯೆ ಕಾಣುವೆ ಎಂದು । ತ್ವರದಿ ಬಂದನೂ
ಹರಿಯ ಮಾಯವಾ ಜಗದಿ । ಯಾರು ಅರಿವರು ೫

ನಿದ್ರೆ ಬಂದವಾ । ನಂತೆ ಮಲಗಿಹಾ
ಭದ್ರ ಮೂರ್ತಿಯಾ ತಾನು ಕಾಲಿಲೊದ್ದನು ೬

ವೇದಗಮ್ಯನು ಮುನಿಯ । ಪಾದ ಒತ್ತುತಾ
ಮೋದ ಬಡಿಸಿದಾ ತಾನು । ಸಾಧು ಮುನಿಯನು ೭

ಹರಿಯೆ ಪರನೆಲ್ಲಾ । ಹರಿಯ ಸರ್ವಜ್ಞಾ
ಹರಿಗಿನ್ನಿಲ್ಲವೋ । ಸಮರು ಅಧಿಕರವಾ ೮

ಎಂದು ಸ್ಥಾಪಿಸೀ । ತಾನು ಬಂದು ನಿಂತನು
ಛಂದದಿಂದಲಿ ಯಜ್ಞ । ಸಾಂಗಗೈಸಿದಾ ೯

ಪದಸುಳ್ಹಾದಿಯಾ । ರಚಿಸಿ ಮೋದದಿಂದಲೀ
ವೇದ ಸಾರವಾ । ಜನಕೆ ಬೋಧಿಸೀರುವಾ ೧೦

ಪವನನಯ್ಯನಾ ಗುರು । ಗೋವಿಂದ ವಿಠಲನಾ
ಸ್ತವನ ಮಾಡುತ ತಾನು । ಭವವ ಕಳದನಾ ೧೧

೪೪೪

ಶ್ರೀ ಗೋಪಾಲದಾಸರು

ಕಾಪಾಡು ಕಾಪಾಡು । ಗೋಪಾಲರಾಯಾ ಪ

ತಾಪತ್ರಯಗಳ ಕಳೆದು । ಶ್ರೀ ಪತಿಯ ತೋರಿ ಅ.ಪ.

ಕಾಮಮದ ಮಾತ್ಸರ್ಯ ಸೀಮೆ ಮೀರುತ ಚರ್ಯ
ಕಾಮಿಸುತ ಮನ್ಮನದ ಸೀಮೆಯೊಳು ನೆಲೆಸೀ ।
ನೇಮ ನಿಷ್ಠೆಗಳಳಿದು ಭೂಮಗುಣಿ ಸುಸ್ತವನ
ಕಾಮನಕೆ ಪ್ರತಿ ಬಂಧ ಸ್ತೋಮದಂತಿಹುದೊ ೧

ವಿಶ್ವವ್ಯಾಪಕಗೆ ಸಾದೃಶ್ಯ ರೂಪವ ಧರಿಸಿ
ವಿಶ್ವಪಾಲಿಪ ಮಾತರಿಶ್ವನನೆ ಕಂಡೂ ।
ವಿಶ್ವನಾಮಕ ಹರಿಯ ಭಾಸ್ವದಪರೋಕ್ಷದಲಿ
ಹ್ರಸ್ವಗೈಸಿದೆ ಕರ್ಮ ಕೆಸರ ಕಳೆಯುತಲೀ ೨

ಭಕ್ತಿಸಾಕಾರಿ ಹರಿ । ಭಕ್ತಿ ಗುರು ಭಕ್ತಿಗಳ
ವ್ಯಕ್ತಗೈವುದು ಮನದಿ ತ್ಯಕ್ತದೋಷಾದಿ ।
ಗುಪ್ತ ಮಹಿಮಾ ಗುರು ಗೋವಿಂದ ವಿಠ್ಠಲನ
ವ್ಯಕ್ತ ಕಾಣುವ ಹದನ ಬಿತ್ತರಿಸೊ ಕರುಣಾ ೩

೪೪೫

ಕೃಪೆಯ ತೋರಬಾರದೇನೋ । ಗೋಪಾಲರಾಯ ಪ

ತಾಪತ್ರಯ ಬಲು ದೀಪನವಾಗಿದೆ
ನೀ ಪರಿಹರಿಸದೆ ಮತ್ತೋರ್ವರನರಿಯೆ ಅ.ಪ.

ಮರಣೋನ್ಮುಖ ನಾದಾ । ವರ ।
ನರಸಪ್ಪನ ಸೂನು ಶ್ರೀನಿವಾಸಾ ।
ಸಾರುತ ತವಪದ ಸೇವಿಸಿ ಭಕುತಿಲಿ ।
ದೂರೋಡಿಸಿದನು ಜವನವರಾ ೧

ಗಿರಿಜಾತೆಯ ಪ್ರಿಯ ಕುವರಾ । ನೃಪ
ವರದಶರಥ ಸುತ ಭರತಗೆ ಅವರಾ ।

ಮಾರುತಿ ಮತವನು ಅರುಹುತ ನೀ ಸಂಸಾರಕೆ ।
ತಾರಕ ನೆನಿಸಿದ ಧೀರಾ ೨

ತ್ಯಾಗಿ ಭೋಗಿ ಶೀಲಾ । ನೀ
ನಘದೂರ ಕಳೆಯೊ ಮೋಹಜಾಲಾ ।
ಭೋಗಿಶಯನ ಗುರು ಗೋವಿಂದ ವಿಠಲನ
ಬಾಗಿ ಭಜಿಸುವಂಥ ಭಾಗ್ಯವ ನೀಯೋ ೩

೪೪೬

ಗೋಪಾಲದಾಸರ ಸ್ಮರಣೆ । ಬಹು
ತಾಪತ್ರಯದ ನಿವಾರಣೆ ಪ

ಶ್ರೀಪತಿ ವೇಂಕಟೇಶನ । ಸಾಪರೋಕ್ಷದಿ ಕಂಡುಹಿಗ್ಗುತ
ವ್ಯಾಪ್ತದರ್ಶಿಗಳಾಗಿ ಭಕ್ತಿಲಿ । ಆಪರಂತಪನೊಲುಮೆಗಳಿಸಿದ ಅ.ಪ.

ಬಾಲ್ಯತನದಿ ವೇದಮಾತಾ । ಎಂಬ
ಗಾಯತ್ರಿ ಮಂತ್ರವು ಜಪ್ತಾ ।
ಸೂರ್ಯಾಂತರ್ಗತನಾದ । ಹರಿಯನ್ನು ಕಾಣುತಾ
ಕಾರ್ಯೋನ್ಮುಖನು ಆದ । ಪ್ರಶ್ನೆಗಳ ಪೇಳಲು ೧

ಇರಲೊಂದು ಕಾಲಕ್ಕೆ ವಿಜಯಾ । ದಾಸರ್ ಬರವಾಯ್ತು
ಕೇಳಿರಿ ಚರ್ಯಾ ॥ ವರ ವಿಜಯ ದಾಸಾರ್ಯರೆಂಬರ ।
ಪ್ರತಿಭೆಯಾವರಣ ಮುಸುಕಿಲಿ
ನಿರುತ್ತರರು ಆಗಿಹರ್ । ಪ್ರಶ್ನೋತ್ತರಗಳ ಕೇಳಲು ೨

ಗುರುಗೋವಿಂದ ವಿಠಲನ ಕರುಣ । ದೊರಕಿ ಹರಿಯು
ಗೋಪಾಲ ವಿಠಲನಂಕಿತದ ॥ ವರಸು ಉಪದೇಶಗಳಕೊಳ್ಳುತ ।
ಪರಮ ಸದ್ಭಕ್ತರನುಪಾಲಿಸಿ ಪರಮ ಮೋಕ್ಷವ
ತೋರ್ದ ಮೂಷಕ । ವರಸುವಾಹನನಂಶ ಸಂಭವ ೩

೪೪೭

ಧೇನುಪಾಲ ದಾಸಾರ್ಯಾ । ನುತಿಸುವೆ
ಮಾನವೀಶನ ಪೊರೆದಾರ್ಯಾ ಪ

ಕಾಣೆ ನಿನಗೆ ಸಮ ಕರುಣಾಳುಗಳನು
ಶ್ರೀನಿವಾಸರ ಪೊರೆದಾರ್ಯಾ ಅ.ಪ.

ಯತಿವರ ವರದೇಂದ್ರರ ವರಬೋಧ ಪಡೆದು ಸಚ್ಛಾಸ್ತ್ರ
ಗತಿಯನೆ ತಾ ಗಳಿಸುತಹಂ ಮತಿ ವಿಶಿಷ್ಟ ತಚ್ಛಾತ್ರ ।
ಹಿತವ ನುಡಿಯೆ ವಿಜಯಾರ್ಯಾಗತ ತಿಳಿದು ಸುಪಾತ್ರ
ಕೃತಕನಟಿಸಿ ತಾ ಕಳುಹಿದವರ ಉಪಚಾರದಿ ಮಾತ್ರ ೧

ಉತ್ತಮ ನಿಂದೆಯ ಕೃತಿಗೆ ಪ್ರಾಪ್ತಿ ಇವಗೆ ಅತಿರೋಗ
ಇತ್ತ ಮಾತೆಗರಿವಾಯ್ತು ಸುತನ ಕ್ಷೀಣಾಯ್ಯುರ್ಯೋಗ ।
ಅತ್ತ ಅನಿಲಾಜ್ಞೆ ಪೊತ್ತು ವಿಜಯಾರ್ಯಪದ ಸುಯೋಗ
ಪ್ರಾಪ್ತಿಗೈಸಿ ಕ್ಷಮೆಯಾಚಿಸಿ ಆಯ್ತಿವಗೆ ತವಪದ ಯೋಗ ೨

ಬಂದ ದ್ವಿಜಗೆ ಗುರು ಅಣತಿಯಿಂದಲಿ ನಂದ ತೋರ್ದೆ ಆಗ
ಛಂದದಿ ಮಂತ್ರಿತ ರೊಟ್ಟಿಯ ನೀಯಲು ತಿಂದು ಕಳೆದರೋಗ ।
ಕಂದಗಿತ್ತು ನಿನ್ನರ್ಧಾಯುವೆ ರವಿನಂದನ ಪರಿ ಯೋಗ
ದಿಂದ ಮೆರೆದೆ ಸುರ ಭೂಸುರ ವೃಂದವು ಪೊಗಳುತಿರಲು ಆಗ ೩

ಸಂಗತೊರೆದು ವಿಷಯಂಗಳ ಬಹುತೆರ ದೂರಗೈದ ದೇವ
ಅಂಗದೊಳಗೆ ತವ ಮಂಗಳ ಬಿಂಬವ ಮೂರ್ತಿ ಕಂಡದೇವ ।
ರಂಗನೊಲಿಮೆಯಿಂದಂಗ ಜನಸ್ತ್ರದ ಸಂಗರಹಿತ ಭೂದೇವ
ಇಂಗಿತಜ್ಞ ಎನಗೀಯೊ ಗುರುವೆ ದ್ವಂದ್ವ ಸಮರ್ಪಣ ಭಾವ ೪

ಹೊತ್ತಿಹೆ ಬಿರುದನು ಭಕ್ತಿರೂಪಿ ಎನೆ ಗುರು ಭಾಗಣ್ಣ
ಹತ್ತು ಎಂಟು ಮತ್ತೊಂದು ಮೊಗದವನ ವಿಶ್ವಮೂರ್ತಿಯನ್ನ ।

ಪೊತ್ತು ನೀನು ಹೃತ್ಕಂಜದೊಳಗೆ ಬಹು ತುತ್ತಿಪೆಯೊ ಅವನ
ಕೃತ್ತಿವಾಸ ಸಖ ಸರ್ವೋತ್ತಮನೆನುತೊತ್ತಿ ಪೇಳ್ದ ಅಣ್ಣ ೫

ಯೋಗದಿಂದ ಗಾಯತ್ರಿ ಮಂತ್ರ ಜಪಗೈಯುತಿರಲು ಅಂದು
ಭೋಗಿ ಅಡರಿ ಶಿರಭಾಗದಿ ಅದು ಹೆಡೆಯ ತೆರೆದು ಅಂದು ।
ನಾಗಸೂತ್ರ ಕಟಿಭಾಗ ಭೂಷ ಪರಿ ಮೆರೆದೆ ನೀನು ಅಂದು
ಯೋಗ ಇದನ ಕಂಡಾಗ ಜನರು ಭಯ ಭ್ರಾಂತರಾದರಂದು ೬

ವೇದವ್ಯಾಸ ಪಾದಾರವಿಂದ ಸನ್ಮೋದದಿಂದ ಭಜಿಪ
ಮೋದ ತೀರ್ಥಮತ ಬೋಧಿಸಿರುವೆ ಸೂಳ್ಬಾದಿ ಪದ ಸುರೂಪ ।
ಐದಿಹೆ ಹರಿಪುರ ಗೈದು ಯೋಗ ಲಯ ಸಚ್ಚಿಂತನೆರೂಪ
ನಾದ ಮೂರ್ತಿ ಗುರು ಗೋವಿಂದ ವಿಠಲನ ಪಾದತೋರೊ ಭೂಪ ೭

೪೪೮

ಭಾಗಣ್ಣಾ । ಗುರು ನಿನ್ನ ಪೊಗಳುವೆನಯ್ಯಾ
ಕರುಣದಿ ಪಿಡಿಕೈಯ್ಯಾ । ಮುರಹರ ಕುವರಯ್ಯಾ ಪ

ನಗಧರ ಮೊಮ್ಮಗ ಮಗನೀ ಯೆನ್ನನು
ಖಗವರ ವಹ ಪ್ರಿಯ ಪಾಲಿಸೊ ಜೀಯಾ ಅ.ಪ.

ಜ್ಞಾನ ಸದ್ಭಕ್ತಿ ವಿರಕ್ತಿಯ ಮೂರ್ತೀ । ಸಾರುವೆ ತವಕೀರ್ತೀ
ಗಾನ ಲೋಲನ ಸೇವಿಸೆ ಜಾಗರ್ತೀ । ಮಾಡುವೆ ಶರಣಾರ್ತೀ ।
ಘನ್ನ ಮಹಿಮ ಕಾರುಣ್ಯ ಮೂರುತೀ
ಎನ್ನವ ಗುಣ ಮರೆದು ಸಲಹೊ ವಿಶ್ವಂಭರ ೧

ಕಾಲಜ್ಞಾ ಕಲಿಕಲ್ಮಷವನೆ ಕಳೆಯೊ । ಮನದೋಳು ನೀಸುಳಿಯೋ
ಆಲಸ್ಯಾವ್ಯಾತಕೊ ನೀ ಪೇಳೋ । ಭಕುತಗೆ ನೀನೊಲಿಯೋ ।
ಅಲವ ಭೋಧರ ಮತ ಜಲಧಿ ವಿಹಾರನೆ
ಸುಲಭದಿ ಸಾಧನ ಪಾಲಿಸೋ ಜೀಯ ೨

ಅರುಹಲೇತಕೊ ಎನದುರಿತ ಸಮೂಹ । ನೀನಲ್ಲವೆ ದುರಿತಹರ
ತುರು ತನ್ನ ಕರುವನೆ ಮರೆವುದೆ ಆಹಾ । ಪಾಲಿಸು ತವನೇಹಾ
ಸಿರಿಪತಿ ಗುರುಗೋವಿಂದ ವಿಠಲನ
ಚರಣಾಂಬುಜದೊಳು ನಿಲಿಸೆಲೊ ಮನವಾ ೩

೪೪೯

ಬಾಗಿ ಭಜಿಸಿರೋ । ಭಾಗಣ್ಣ ದಾಸರನಾ ।
ನಮಿಪರ ಬೀಷ್ಟದನಾ ಪ

ನಾಗಶಯನ ಪ್ರಿಯ । ಭೋಗಿ ಭೂಷಣ ಸುತನಾ ।
ಮನ್ಮಥ ಸದೃಶನನಾ ಅ.ಪ.

ಮುರಹರ ನಾಮಕನರಸಿಯುದರದಲ್ಲಿ । ಜನುಮತಾಳಿ ಅಲ್ಲೀ
ಸುರಪುರ ವೈದಲು ತನ್ನ ಪಿತನು ಮುಂದೇ । ಸಂಕಾರ ಪುರಸೇರ್ದೇ ।
ವರಚಿಂತಲ ವೇಲಿಲಿ ಧ್ಯಾನಕಾಗಿ ನಿಂದು । ಗಾಯಿತ್ರಿ ಜಪಿಸು ತಂದು
ವರಮಾರುತಿ ಗುಡಿಯೊಳು ನೆಲಿಸುತ್ತಾ । ವರಪಡೆದೆಯೊ ಜಪಿಸುತ್ತಾ ೧

ತ್ರಿಲಿಂಗಪುರಕೇ ಕವಿಯೈತರಲೂ । ಪಂಡಿತರನು ಗೆಲಲೂ
ಬಲುಚಿಂತಿಸಿ ಜನಸಭೆಯ ಸೇರಿ ಆಗ । ತೀರ್ಮಾನಿಸಿ ವೇಗ ।
ಕಳುಹಿದರವನ ಭಾಗಣ್ಣನ ಬಳಿಗಾಗೀ । ಬಲವನು ತೋರೆನಲಾಗೀ
ನಿಲಲಾರದೆ ತೆರಳಿದ ಭೀತಿಯಲೀ । ವರಕವಿ ಮೆರೆದನು ಕೀರ್ತಿಯಲೀ ೨

ಉತ್ತನೂರಿಗೆ ಮಾತೆಯ ಕೂಡ್ಯೆತರುತಾ । ವೆಂಕಟಪತಿ ಬಳಿಯಿರುತಾ
ಸ್ತುತ್ಯ ಸಂಕೀರ್ತನೆ ರಚನೆಯ ಮಾಡುತ್ತ । ಈ ಪರಿ ಸೇವಿಸುತ ।
ನಿತ್ಯ ಶ್ರೀ ವೆಂಕಟಕೃಷ್ಣನ ಪಾಡುತ್ತಾ । ನರ್ತನ ಗೈಯ್ಯುತ್ತಾ
ಸುತ್ತಿ ಬರುವ ಜನರ ದೃಷ್ಟಾರ್ಥಾ । ಪೇಳುತ ಗಳಿಸಿದೆ ಅರ್ಥಾ ೩

ತಿಮ್ಮಣ್ಣ ದಾಸಾರ್ಯರ ಬಳಿಯಲೀ । ಆದವಾನಿಯಲ್ಲೀ
ನೆಮ್ಮದಿಲಿದ್ದಲ್ಲಿಂದಲಿ ತೆರಳಿ । ಕಾಶೀಶನ ಬಳೀ

ಕ್ರಮ್ಮಿಸಿ ದಿನ ಗುರು ಸೇವೆಯಲ್ಲಿ ಬಹಳಾ । ಮೆಚ್ಚಿಸಿ ಗುರುಗಳ ।
ಹಮ್ಮಿನ ವಿಜಯರಿಂದುಪದೇಶಾ । ಗೋಪಾಲ ವಿಠ್ಠಲದಾಸ ೪

ವೆಂಕಟರಾಮಗೆ ರಾತ್ರಿಕಾಲದಲ್ಲೀ । ಆರ್ಘ್ಯವ ಕೊಡುವಲ್ಲೀ
ಪಂಕಜಮಿತ್ರನ ತೋರುತಲವರೀಗೆ । ಸಂಶಯ ಕಳೆದವಗೆ ।
ವೆಂಕಟೇಶನೊಳ್ ಭಕುತಿ ಪುಟ್ಟುವಂತೆ । ಸೇವೆ ವಿಧಿಸಿ ಅಂತೇ
ಪಂಕಜನಾಭನ ಕೀರ್ತನಾದಿಗಳನೂ । ಮಾಡಿ ಕಳೆದ ದಿನಗಳನೂ ೫

ವೆಂಕಟೇಶನ ಪರೋಕ್ಷಿ ದಾಸರೆಂದು । ಪೇಳೆ ಜನರು ಅಂದು ವೆಂಕಟ
ನರಸಿಂಹಾಚಾರ್ಯಾ । ದಾಸರೊಳು ಮಾತ್ಸರ್ಯಾ । ಶಂಕೆಪಟ್ಟು
ಭಜನೆಯೊಳಿರುವಂದೂ । ಮುಂದಿನ ಪೀಠದಲೊಂದೂ
ಲಂಕೆಯ ಪುರವನು ದಹಿಸಿದನಾ । ಕಂಡರು ಕೋಡಗನಾ ೬

ವೆಂಕಟರಾಮಾರ್ಯರು ಬರಲಾಗೀ । ಅಪರೋಕ್ಷವುಹೇಗೆ ನಲಾಗೀ
ಶಂಕೆಯಿಲ್ಲದಲೆ ಯತಿಯಾಗೀ । ಎಂದನೆ ಯತಿಯಾಗೀ ।
ಪಂಕಜಾಕ್ಷ ವಾಸುದೇವ ವಿಠಲನ್ನಾ । ಕಾಣುತಲಿ ಮುನ್ನಾ
ಅಂಕಿತ ನಾಮದಿ ಪದಪದ್ಯಾ । ರಚಿಸಿ ಮೆರೆದ ನಿರವದ್ಯಾ ೭

ರೋಗದಿ ಶ್ರೀನಿವಾಸಾಚಾರ್ಯಾ । ಬರಲಾಗ ದಾಸಾರ್ಯ
ಜಾಗ ಗುಡಿಯಲಿ ಶುದ್ಧಿ ಮಾಡುತಿರಲು । ಕೇಳಿ ಗೃಹಕೆ ಹೋಗಲು ।
ವೇಗದಿ ಮಂತ್ರಿತ ರೊಟ್ಟಿ ತಿಂದು ಇನ್ನ । ಕಳೆದ ರೋಗವನ್ನ
ನಾಗಶಯನ ಶ್ರೀ ಜಗನ್ನಾಥ ವಿಠಲನ್ನಾ । ತೋರ್ಯಧಾರ್ಯಯು ಇತ್ತವನ್ನಾ ೮

ಮುದದಲಿ ನಿಜಜನರನು ಪೊರೆಯೇ । ಶಾಸ್ತ್ರಾರ್ಥವ ನೊರೆಯೆ
ಪದ ಸುಳಾದಿಯನೆ ಬಲುರಚಿಸೀ । ಭಕುತಿ ಮಾರ್ಗ ಬೆಸಸೀ ।
ಸುಧೆಸಮವೆನೆ ಹರಿಕಥೆಸಾರ । ರಚಿಸಿ ಜನೋದ್ಧಾರ
ಮುದಮುನಿ ಮತಗ್ರಂಥಗಳೊರೆದೇ । ಸಚ್ಛಾಸ್ತ್ರಪೊರೆದೇ ೯

ಹತ್ತೆಂಟು ಒಂದು ಮೊಗದ ರೂಪ । ಶ್ರೀ ವಿಶ್ವರೂಪ
ನಿತ್ಯ ಚಿಂತಿಪ ತನ್ನ ಬಿಂಬರೂಪ । ಅಂಶದಿಹನು ಗಣಪ

ಚಿತ್ರಿಸಿರುವ ಚಕ್ರಾಬ್ಜ ವಲಯವನ್ನ । ಧೇನಿಸಿ ವಿಜಯರನ್ನ
ಕೃತ್ಯ ಪೇಳಲೊಶವೆ ಅಪರೋಕ್ಷಿಗಳ । ಮಂದನು ನಾ ಬಹಳ ೧೦

ಚಿತ್ರಮಾರ್ಗದಿ ಭ್ರಾತೃವರ್ಗವನ್ನ । ದೂರಕಳಿಸಿ ಮುನ್ನ
ಚಿತ್ರಭಾನು ಸಂವತ್ಸರದಲ್ಲಿ । ದಶಮಾಸಾಷ್ಟಮಿಲೀ ।
ಚಿಂತಿಸುತ ಯೋಗಮಾರ್ಗದಲ್ಲಿ । ದಹಿಸಿ ದೇಹವಲ್ಲೀ ।
ಚಿತ್ರ ಚರಿತ ಗುರುಗೋವಿಂದ ವಿಠ್ಠಲನಾ । ಪದಕಮಲವ ಸೇರಿದನ ೧೧

೪೫೦

ಬಾರಯ್ಯ ಭಾಗಣ್ಣನೇ । ಯನ್ನಯ
ಮನಕೆ ಬಾರಯ್ಯ ಭಾಗಣ್ಣನೆ
ಕರೆ ಕರೆ ಮನದ ವಿಷಾದವ ಕಳೆದು ಶ್ರೀ
ಹರಿಯಲಿ ಮನವಿತ್ತು ಕರುಣಿಸುದಯ್ಯ ಅ.ಪ.

ಗೋಪಾಲ ವಿಠಲನ ಭಜಕನೇ । ಹೇ ಉ
ಮಾಪತಿಸುತ ಬಲುತ್ಯಾಗ ಶೀಲನೆ ।
ಶಾಪದಿ ನೊಂದ ಶ್ರೀನಿವಾಸಪ್ಪಗೆ
ಆಪಾರಾಯುಷ್ಯವಿತ್ತು ಸಲಹೀದ ೧

ತಡವು ಇನ್ಯಾತಕಯ್ಯಾ । ಗುರು
ಮಡದಿಯ ಸಲಹಿದೆ ಹರಿಯಾ ।
ಒಡಲೊಳು ತೋರಿಸಿ ಸಲಹೆಂದು ಬೇಡುವೆ
ಕಡು ದಯಾನಿಧೆ ಅಡಿಗೆರುಗುವೆನಯ್ಯಾ ೨

ಸಕಲ ಶಾಸ್ತ್ರದಿ ಬಲು ನಿಪುಣಾ । ಮಂತ್ರ
ಸಕಲವ ಚಕ್ರದಿ ರಚಿಸಿದ ಧಿಷಣಾ ।
ಲಕುಮಿಯರಸ ಗುರು ಗೋವಿಂದ ವಿಠಲನೆ
ಸಕಲಕ್ಕು ದೇವನೆಂದರುಹಿದ ಗುರುವೇ ೩

೪೫೧

ಶ್ರೀ ಮೋಹನದಾಸರು

ಇನ್ನಾದರು ಎನ್ನ ಪೊರೆಯೊ । ಮೋಹನರಾಯ
ನಿನ್ನವನಲ್ಲವೇನೋ ಪ

ಎನ್ನನೀಪರಿ ಬನ್ನ ಬಡಿಪದುಚಿತವೇನೋ
ಚೆನ್ನ ಶ್ರೀ ವಿಜಯ ದಾಸಾರ್ಯರ ಚಿಣ್ಣಾ ಅ.ಪ.

ಎನ್ನ ಪಾಲಿಸಿದಂದದೀ । ಸಕಲ ಪ್ರಪನ್ನರ
ಸಲಹುವುದೆಂದೂ ಬಿನ್ನಪಗೈದು
ಮೋಹನ್ನ ವಿಠಲನೀಗೆ
ಘನ್ನುಪಕಾರವ ಮಾಡಿದ ಧೀರಾ ೧

ಮನ್ನವಚ ಕಾಯದಿ । ನಿನ್ನಯ ಚರಣ ।
ವನ್ನು ಪೂಜಿಪೆ ಮೋಹನ್ನ ।
ಮನ್ನಿಸಿಯೆನ್ನಯ ಅವಗುಣವೆಣಿಸದೆ
ಕುನ್ನಿಯ ಕಾಯೊ ಸದ್ಗುರುವೆ ಪ್ರಸನ್ನ ೨

ಯುಕ್ತಿ ಕಥೋಕ್ತೀಲಿ ಪವನ । ಮತದ ಸಾರ ।
ಭಕ್ತರಿಗರ್ಥಿಲಿ ಸ್ತವನ ।
ಮುಕ್ತಿದಾಯಕ ಗುರುಗೋವಿಂದ ವಿಠಲನ
ವ್ಯಕ್ತಮಾಡಿಸೊ ಗುರು ಮೋಹನ್ನರಾಯಾ ೩

೪೫೨

ಒಪ್ಪಿಕೊಳ್ಳಲಿಬೇಕು ಅಪ್ಪ ಮೋಹನ್ನ ಪ

ತಪ್ಪನೆಣಿಸದೆ ಕರ್ಮ । ಕಪ್ಪಕೊಳ್ಳಲಿ ಬೇಕೋ ಅ.ಪ.

ಸುತೆಯ ವೈವಾಹದುತ್ಸವಕೆ ಬಂದ ಶ್ರೀ
ಯುತರು ಉರುಗಾದ್ರಿ ವಾಸಾಖ್ಯರಾ ।
ಸತು ಮುಖದಿ ತವ । ಆರಾಧನೋತ್ಸವವ
ಸತುವ ಮಾರ್ಗದಿ ಗೈವ ಮತಿ ಮರೆತನಯ್ಯಾ ೧

ಅಂದು ಗೈಯ್ಯುವ ಕರ್ಮ । ಕಿಂದೆನ್ನ ನೆಚ್ಚರಿಸೆ
ತಂದೆ ವೆಂಕಟೇಶ । ವಿಠಲ ದಾಸರ್ಯರಾ ।
ಮುಂದು ಮಾಡೀ ನೀನು । ಅಂದ ಪತ್ರವ ಬರೆಸಿ
ಸಂದಿಸಿ ಕೊಂಡೆಯೋ ಮಂದ ಶಿಷ್ಯನ ಸೇವಾ ೨

ಅಪರಾಧ ಅಪರಾಧ । ಅಪರಾಧವಾಯಿತೋ
ಕುಪಿತನಾಗಲಿ ಬೇಡ । ಕೃಪಣ ವತ್ಸಲನೇ ।
ಆಪಾರ ಕರುಣಿ ಗುರು ಗೋವಿಂದ ವಿಠ್ಠಲನ
ಕೃಪೆ ಮಾಡಿ ತೋರಯ್ಯ । ಶಫರಕೇತನ ತೇಜಾ ೩

೪೫೩

ನಂಬಿದೆ ನಿನಪಾದ ಅಂಬುಜಾಕ್ಷನ ಪ್ರಿಯ
ಬೆಂಬಿಡದಲೆ ಯೆನ್ನ । ಕಾಯೋ ।
ಬೆಂಬಿಡದಲೆ ಯನ್ನ ಕಾಯೆಂದು ನಿನ್ನನು
ಹಂಬಲಿಸೂವೆ ಮೋಹನ್ನರಾಯಾ ಪ

ದೋಷರಾಶಿಯನೀಗಿ । ದಾಸನ್ನ ಮಾಡಿದ
ಋಷ್ಯಂಶರಾಗಿಹ ನಿಮ್ಮಾ ।
ಋಷ್ಯಂಶರು ವಿಜಯ ದಾಸರ ಪ್ರೇಮಕ್ಕೆ
ಆಶ್ರಯನಾಗಿಪ್ಪ ಮೋಹನ್ನ ೧

ಹೆಮ್ಮೆಯ ಪಡುವೆ ನಾ ನಿಮ್ಮವರವನೆಂದು
ದುರ್ಮಮತೆಯ ನೀಗೋ ಎನ್ನಾ ।

ದುರ್ಮಮತೆಯು ನೀಗಿ । ಧರ್ಮಗರ್ಭನ ಪಿತನ
ಪೇರ್ಮೆ ದೊರಕಿಸೊ ಎನಗೆ ಮುನ್ನಾ ೨

ಅಂಬುಜಾಂಬನಂಘ್ರಿ । ಅಂಬುಜ ತೋರೆಂದು
ಹಂಬಲಿಸಿ ಬೇಡುವೆ ನಿನಗೆ ।
ಹಂಬಲಿಸಿ ಬೇಡುವೆ । ಶಂಬರಾರಿಯ ತೇಜ
ನಂಬಿ ಬಂದಿಹೆ ನಿನ್ನ ಅಡಿಗೇ ೩

ವಿಷಯಧುಯ್ಯಲಿನಿಂದ । ಕ್ಲೇಶವಧಿಕವಯ್ಯ
ವಿಷದಂತೆ ಕಾಣಿಸೊ ಜೀಯ ।
ವಿಷದಂತೆ ಕಾಣಿಸಿ । ಶೇಷವಿಲ್ಲಾಧಾಂಗೆ ।
ದೋಷವಳಿಸಿ ಕಾಯೊ ಜೀಯಾ ೪

ನಿನ್ನ ವಂಶಜನಾಗಿ । ನಿನ್ನವರವನಾಗಿ
ಉನ್ನಂತ ಮಹಿಮ ಶ್ರೀಹರಿಯಾ ।
ಉನ್ನಂತ ಮಹಿಮನು । ಅನ್ನಂತನ ಪಾದ
ಕಾಣದಿದ್ದವನಿರೆ ವ್ಯರ್ಥ ೫

ಪಂಚಾಶದ್ವತ್ಸರ । ಹಂಚಿಪೋಗುವ ಮುನ್ನ
ಪಂಚರೂಪಾತ್ಮಕ ಹರಿಯಾ ।
ಪಂಚರೂಪಾತ್ಮ ವಿ । ರಿಂಚಿಪಿತನ ಪಾದ
ಹಂಚಿಕಿಂದಲಿ ತೋರೊ ಮೋಹನ್ನ ೬

ಉರುಗಾದ್ರಿವಾಸ ವಿಠಲಾತ್ಮಕನು ಶಿರಿ
ಗುರುಗೋವಿಂದ ವಿಠ್ಠಲನ ।
ಗುರಗೋವಿಂದ ವಿಠಲನ ಚರಣಾರವಿಂದವ
ತೋರಿ ಪೊರೆ ನಮ್ಮ ಹಿರಿಯಾ ೭

४५४

ಪಾಹಿ ಪಾಹಿ ಮೋಹನ್ನರೆ । ಲೋಹಲೊಷ್ಟ ಸಮೇಕ್ಷಣ ಪ

ಅಹಿಶಾಯಿ ಪಾದ ಸೇವೆ । ವಿಹಿತದಿ ನೀಡೆನಗೆ ಅ.ಪ.

ಪುಂಡರಿಕಾಕ್ಷನ ಪಾದ । ಬಂಡುಣಿಯಂದದಲೀ
ಮಾಂಡವ್ಯರಾಗಿರುವಾಗ । ಚಂಡತಪ ಮಾಡಿದಿರಿ ೧

ಗಾಣಿಗನುದರದೀ । ಜನಿಸುತ ಪೂರ್ವದೀ
ಧನ ಬಹುಗಳಿಸುತ । ಜನುಮವ ನೂಕಿದಿರಿ ೨

ಗಳಿಸಿದ ಧನವನೂ । ಲಲನೆಗೂ ಪೇಳದೇ
ಮಲಿನ ದೇಹವನೀಗಿ । ಕಳೆದಿರಿ ಪ್ರಾರಬ್ಧವ ೩

ಸತಿಸುತ ಬಂಧು ಜನ । ಗತಿತಪ್ಪಿ ಭ್ರಾಂತರಾಗೀ
ಅತಿ ಅತಿ ವ್ಯಥೆಯಿಂದ । ಪಾಥೇಯವ ಕಾಣಲಿಲ್ಲ ೪

ಚಿನಿವಾರ ನೂದರದೀ । ಪುನರಪಿ ಜನಿಸಲೂ
ಜನನಿಯು ಅನುವನು । ಕಾಣದಲೆ ಚಿಂತಿಸಿದಳ್ ೫

ಆರ್ತಳಾಗುತ ಚಕ್ರ । ತೀರ್ಥವ ಪೊಗಲೂ ಬರೇ
ಪಾರ್ಥ ಸಖನ ಭಕ್ತ । ಆರ್ತೆಯನು ತಡೆದರು ೬

ಆಕೆಯ ಶಿಶು ಸಹಾ । ಸಾಕುವೆನೆನುತಲೀ
ಶ್ರೀಕರ ವಾಕ್ಯವಿತ್ತು । ಭೀಕರವ ತಪ್ಪಿಸಿದ ೭

ವಿಜಯರಾಯರು ಬಂದೂ । ನಿಜಸತಿ ಮಡುವಿನೊಳ್
ತೇಜಸ್ಸಿನಿಂ ಮೆರೆವಂಥ । ದ್ವಿಜಸುತನರ್ಪಿಸಿದರ್ ೮

ಮೋಹನ ಬಾಲನಿಗೆ । ಮೋಹನ ವಿಠಲನಾ
ಮೋಹದಂಕಿತವಿತ್ತು । ಮಾಹಿತಾಂಘ್ರಿ ನೆನೆಸಿದರ್ ೯

ಮುಂಜಿ ಮದುವೆ ಮಾಡೀ । ಹಂಜರದಿ ನಿಲಿಸುತಾ
ಕಂಜಾಕ್ಷನಂಘ್ರಿಯನು । ಅಂಜಾದಲೆ ಭಜಿಸೆಂದರ್ ೧೦

ಚಿನಿವಾರತನದಿಂದ । ಧನವನು ಗಳಿಸಿದಾ
ಜನುಮ ಪೂರ್ವದಸ್ಮೃತಿ । ಮನದೊಳು ನೆನೆದೆಯೋ ೧೧

ಗಾನವ ಮಾಡುತಲೀ । ಗಾಣಿಗತನಯರನೂ
ಕಾಣುತಲೀ ಪೇಳಿದೆಯೊ । ಧನವಿಟ್ಟ ಸ್ಥಳವನು ೧೨

ಗುರುಗಳ ಕರುಣೆಯಿಂ । ಹರಿದೆಯೊ ಅಪಮೃತೀ
ನೆರೆದಿದ್ದ ಜನರುಗಳ್ । ಅರೀಯರು ಸೋಜಿಗವ ೧೩

ಪದಪದ್ಯ ಕೋಲ್ಹಾಡುಗಳ್ । ಮೋದದಿ ರಚಿಸುತಾ
ಮೋದ ತೀರ್ಥರ ಮತ । ಸಾಧಿಸಿದೆ ಜಗದೊಳು ೧೪

ಪವನಾಂತರಾತ್ಮ ಗುರು । ಗೊವಿಂದ ವಿಠಲನಾ
ಪಾವನಾ ಸ್ಮರಣೆಯಿಂ । ಭವವನು ಕಳೆದೆಯೋ ೧೫

४೫೫

ಮೋಹನಾರ್ಯನೆ ಯೆನ್ನಾ । ಪೀಡಿಸುವ ಭವ
ಮೋಹಕಳೆವುದು ಮುನ್ನಾ । ಹರಿಯಂಘ್ರಿ ಭಜನೆಯ
ಈಹ ಕೊಡುವುದು ಇನ್ನಾ । ಭೂಸುರವರೇಣ್ಯಾ ಪ

ದೇಹ ಮಮತೆಯ ದಾಶೆಯಲಿ ಸುಖ ।
ವಾಹಿನಿಗಳನುಭವಿಸೆ ಬಲುದುರ್

ದೇಹ ಪೋಷಣೆಗೈದು ಹರಿಪದ ।
ಈಹಿಸದೆ ಬಲುನೊಂದೆ ಭವದಲಿ ಅ.ಪ.

ಜಯದಲುದಿಸುತಲಂದೂ । ತಾರುಣ್ಯವನುನಿರ್
ಭಯದಿ ಕಳೆದಿಹೆ ಬಂಧೂ । ವಿದ್ವೇಷದೊಳಗ್ಹರಿ
ಹಯನನುಜ ವರ್ತಿಗಳಂದೂ । ಸಲಹಿದರು ಎನ್ನಯ
ಭಯ ನಿವಾರಿಸುತಂದೂ । ಕಾರುಣ್ಯ ಸಿಂಧೂ ॥
ಹಯಮುಖನ ಪದ ಸತ್ಸರೋಜಗಳ್ ।
ದ್ವಯಭಜಿಪ ಮನವಿರದೆ ವಿಷಯದ
ಹುಯಿಲಿನಲಿ ಬೆಂಡಾಗಿ ತಾಪದ ।
ತ್ರಯದಿ ಬಲು ಬಳಲಿರುವೆನಯ್ಯ ।
ಜಯದ ಸಂವತ್ಸರವು ಮರಳಿ ।
ಬಯಲು ಆಗದ ಮುನ್ನ ಹರಿಪದ
ದ್ವಯಗಳನು ಕಾಂಬಂಥ ಹದನವ ।
ದಯದಿ ತೋರುತ ಸಲಹೊ ಬಂಧು ೧

ಕಾಮಮದ ಮಾತ್ಸರ್ಯಾ । ಅರಿಗಳನಮನ
ನೇಮನಿಷ್ಟಯ ಚರ್ಯಾ । ಕುಂದಿಸುತ ವಿಷಯ
ಸ್ತೋಮ ಕಳೆಯುವರಯ್ಯ । ಈ ಪರಿಯ ಪರಿಭವ
ಸೀಮೆ ಮೀರುವ ಚರ್ಯಾ । ಪರಿಹರಿಸೊ ಜೀಯ ॥
ಭ್ರಾಮಕತ್ರಯ ಮಾರಿಗೆನ್ನ ಸು ।
ಹೋಮಿಸುವ ದುರುಳನನು ಸದೆವ
ತಾಮರಸಭವ ಪದಕೆ ಬರುತಿಹ ।
ಆ ಮಹಾ ಮಾರುತ ನೊಳಿರುವ ।
ರಾಮ ಚಂದ್ರ ಪದಾರವಿಂದವ ।
ಕಾಮಿಸುತ ತನ್ಮಹಿಮೆಗಳ ಸನ್
ನಾಮ ಕೀರ್ತನೆಗೈದು ಮೋದಿಪ ।
ಪ್ರೇಮಮನವಿತ್ತೆನ್ನ ಸಲಹೋ ೨

ನೀರೊಳಾಡುತ ಬಂದಾ । ಬೆನ್ನಿನಲಿ ಬಹು
ಭಾರ ಪೊತ್ತುದೆ ಛಂದಾ । ಅವನಿಯನು ತನ
ಕೋರೆದಾಡೆಗಳಿಂದಾ । ತರಳನನು ಬಹು
ಘೋರರೂಪದಲಿಂದಾ । ಸಲಹಿದುದೆ ಛಂದಾ ॥
ಮೂರು ಪಾದವ ಬೇಡಿ ಬಲಿಯನು ।
ಭಾರಿ ಕೊಡಲಿಯ ಪೆತ್ತು ಪೆಗಲೋಳು ।
ಘೋರ ಅಟವಿಯ ತಿರುಗಿ ತಿರುಗಿ ।
ನಾರೆರೊಲುಮೆಗೆ ಸಿಲ್ಕಿ ತ್ರಿಪುರದ
ನಾರಿಯರ ವ್ರತಗೆಡಿಸಿ ಹಯವನು ।
ಏರ್ದ ಗುರುಗೋವಿಂದ ವಿಠ್ಠಲ
ಕಾರಣನು ಜಗಕೆಂಬ ಮತಿಯನು ।
ಧೀರಗುರು ಮೋಹನ್ನ ಕರುಣಿಸು ೩

೪೫೬

ವಿಜಯ ಗುರು ಕರಜಾತ । ಮೋಹನ್ನರಾಯಾ ಪ

ನಿಜ ಪಾದ ರಜಕಾಗಿ । ಭಜಿಪೆ ತವ ಚರಣಾ ಅ.ಪ.

ಸುಖತೀರ್ಥ ಸಿದ್ಧಾಂತ । ಪ್ರಾಕೃತದಿ ರಚಿಸಿ ಅಜ
ಭೃಕುಟ ಸಂಜಾತ । ಸುರಮುಖರು ಹರಿಪದಕೇ ।
ಮುಕುಟಗಳ ಚಾಚಿ ಸದ್ । ಭಕುತಿ ಬೇಡುವರೆಂಬ
ಉಕುತಿ ತರತಮ ಪೇಳಿ । ಮುಕುತಿ ಪಥತೋರ್ದ ೧

ಗುರು ಚರಣ ಸರಸಿಜ । ದ್ವಯಕೆರಗಿಬಿನ್ನವಿಸಿ ।
ಶರಣಜನ ಸಂತತಿಯ । ನೆರೆ ಪೊರೆಯಲೂ ।
ವರಅಭಯದಿಂ ಚಿನ್ನಿ । ವರದ ಕುಲಸ್ಥಿರ ಮಾಡ್ದ
ಪರಿಸರ ಕುಲೋತ್ಪನ್ನ । ಪೊರೆಯೊ ಮೋಹನ್ನಾ ೨

ಕಾಯ ಭವ ಪಿತಪಾದ । ತೋಯಜವ ಕಾಣದಲೆ
ಆಯುಗಳು ವ್ರಯವಾಗಿ । ಕಾಯ ಬಳಲಿಹುದೂ ।
ಶ್ರೀಯರಸ ನಮ್ಮ ಗುರು । ಗೋವಿಂದ ವಿಠಲಪದ
ಪ್ರೀಯದಲಿ ತೋರಯ್ಯ । ಜೀಯದಮ್ಮಯ್ಯಾ ೩

೪೫೭

ಶ್ರೀ ಜಗನ್ನಾಥದಾಸರು

ನಮೋ ದಾಸವರ್ಯ ಪೂತಾತ್ಮ ಪದ ನಮೋ ದೇವತಾತ್ಮ ॥ ಪ

ರಮಾ ರಮಣಪದ ಅಮಲ ಭಜನೆ ಕೊಡು
ನಮೋ ನಮೋ ಭವ್ಯಾತ್ಮ ಅ.ಪ.

ನಾರಸಿಂಹ ಸತ್ತೋರನೆಡರ ಪರಿಹಾರ ಪದದಿ ದೀಕ್ಷ
ಪಾರುಮಾಳ್ಪಕೂಪಾರ ಭವವ ಸತ್ಸರಾಮೃತ ಕೃತದಕ್ಷ ।
ಭಾರ ನಿನ್ನದಾಪಾರ ಕೃಪೆಯ ನೀತೋರ್ವುದೆಂಬ ಮಹರಕ್ಷ
ಬಾರಿ ಬಾರಿ ನಿರ್ಧಾರ ಮನದಿ ಹಾರೈಸುತಿಹೆನೂ ಹರಿಪಕ್ಷ ೧

ಮಾನವೀಶ ಪ್ರಾಣೇಶ ದಾಸನುತ ಆನತೇಷ್ಟ ತೋಷ
ಗಾನಲೋಲ ಮೌನೀಶ ಪದಾಂಬುಜ ಆನಮಿಪರ ಆಶೇಷ ।
ಹೀನವೆನಿಪ ಕುಯೋನಿ ನಿವಾರಕ ಧ್ಯಾನಗಮ್ಯ ಸುವಿಶೇಷ
ಪ್ರಾಣನಾಥ ಮಹಿಮೋನ್ನತಿ ಗಾನದಿ ಕಳೆದೆ ದೋಷ ೨

ವಾದಿರಾಜ ಗುರು ಪಾದಾರ್ಚಿಸಿ ಸನ್ಮೋದ ಪಡೆದದೇವ ವೇದ ವ್ಯಾಸ
ಸದ್ಬೋಧ ತಿಳಿದು ನೀ ಬೋಧಿಸಿದೆ ಗುರುಭಾವ ।
ಮೋದಕ ಪ್ರಿಯ ಗುರು ಪಾದ ಭಜಿಸಿ ಅರ್ಧಾಯು ಪಡೆದ ಸ್ವಭಾವ
ನಾದ ಮೂರ್ತಿ ಗುರು ಗೋವಿಂದ ವಿಠಲನ ಪಾದ ತೋರೊ ದೇವ ೩

೪೫೮

ದಾಸರ ಭಾಗ್ಯವಿದೂ । ಮಾನವೀ
ದಾಸರ ಭಾಗ್ಯವಿದೂ ॥ ಪ

ಸುರಭೂಸುರ ಸೇವ್ಯವು । ಹರಿಕಥೆ ಅಮೃತವ
ನೆರೆದು ಜನಾಳಿಯ । ಪೊರೆದಿಹುದೆಲ್ಲ ಅ.ಪ.

ವೇದೋಪನಿಷದೆಲ್ಲ । ಶೋಧಿಸಿ
ಬೋಧಿಸಿಹರು ಗ್ರಂಥ ॥
ವಾದಿಗಳನು ತಾ । ವಾದದಿ ಜಯಿಸುತ
ಶ್ರೀದನೆ ಪರನೆಂದ್ಹೇಳಿದುದೆಲ್ಲ ೧

ಪಾತ್ರರ ಸಹವೆರಸೀ । ಭುವಿಯಲಿ
ತೀರ್ಥ ಕ್ಷೇತ್ರ ಚರಿಸೀ ॥
ಗಾತ್ರ ಮಜ್ಜನದಿ । ತೀರ್ಥಂಗಳ ಪಾ
ವಿತ್ರ್ಯ ಗೈಸಿದ ಮಹಿಮೆಗಳೆಲ್ಲ ೨

ಇಂದು ಭಾಗದಲ್ಲೀ । ಅಂಕಿತ
ಸಂದಿತು ಪಂಢರಿಲೀ ॥
ನಂದ ನಂದನ ಗುರು ಗೋವಿಂದ ವಿಠಲನೆ
ಛಂದ ಬಂಧುರದಿಂದ ವಂದಿಪುದೆಲ್ಲ ೩

೪೫೯

ದಾಸರಾಯರ ಪಾಡಿರೋ । ರಂಗನೊಲಿದ ಶ್ರೀ ।
ದಾಸರಾಯರ ಪಾಡಿರೋ ಪ

ದಾಸರಾಯರ ಪಾಡಿ । ದೋಷಗಳೀಡಾಡಿ
ಶಾಶ್ವತ ಲೋಕಗ । ಳಾಶಿಪ ಜನರೆಲ್ಲಾ ಅ.ಪ.

ಮಾನವಿ ಕ್ಷೇತ್ರಸ್ಥಿತನೂ । ಘನ
ಕರ್ಣೀಕ ನರಸಪ್ಪನೆಂಬ ದ್ವಿಜನೂ ।
ಜ್ಞಾನಿ ತಿಮ್ಮಣ್ಣನ ಸತಿಸಹಿತ ಸೇವಿಸೆ
ಮಾನ್ಯ ಸಹ್ಲಾದ ತಾ ಸುತನಾಗಿ ಜನಿಸಿದ ೧

ಶಾಲಿವಾಹನ ಶಕವೂ । ಮತ್ತೇ
ಗಾಳಿಗಣಯುತ ಹತ್ತಾರ್ನೂರು ।
ಕೀಲಕವತ್ಸರ ಶುಕ್ಲ ಶ್ರಾವಣದಲ್ಲಿ
ಶೀಲ ವೆರಡನೆ ದಿನ ಜನಿಸಿಹರನ್ನಾ ೨

ಈತನು ಹರಿಭಕ್ತನೊ । ಪ್ರಹ್ಲಾದಗೆ
ಪ್ರೀತಿಯ ಸೋದರನೋ
ಧಾತ ಜನಕ ಹರಿ ಮಾತಿನಿಂದಲಿ ಇವ
ಖ್ಯಾತನಾಗಿ ಶ್ರೀನಿವಾಸನೆಂದೆನಿಸಿದ ೩

ಆದ ಸಕಾಲದಿ ದ್ವಿಜನು । ಸದ್
ಬೋಧಿತ ವರದೇಂದ್ರರಿಂ ।
ಭೇದ ಮತದೊಳದ್ವಿತೀಯ ನೆಂದೆನಿಸುತ್ತ
ವಾದಿ ನಿಗ್ರಹದೊಳತ್ಯಾದರವನೆ ಪೊತ್ತ ೪

ಒದಗಲುದ್ಧೃತ ಕಾಲವೂ । ಪ್ರಾಪ್ತ
ಸಾಧು ವಿಜಯ ದಾಸರು ।
ಮುದದಿ ನರ್ತವಗೈದು ಕೀರ್ತನೆ ಪಾಡಲು
ಹದಗೆಟ್ಟನಿವನೆಂದು ಬಿರುನುಡಿ ನುಡಿದಂಥಾ ೫

ಒದಗಲುದರ ರೋಗವೂ । ಮುಂದೆ
ಹದನ ಕಾಣದೆ ತಪಿಸಾಲು ।
ಮೋದ ತೀರ್ಥರ ರೂಪ ಆದರದಲಿ ಭಜಿಸಿ
ಸಾಧು ಸೋತ್ತಮ ದ್ರೋಹ ಕಳವ ಮಾರ್ಗವ ತಿಳಿದ ೬

ವಿಜಯ ದಾಸರ ಪಾದವಾ । ತಮ್ಮಯ
ನಿಜ ಶಿರದೊಳು ಪೊತ್ತು ಮೆರೆವಾ ।
ನಿಜ ಶಿಷ್ಯ ಗೋಪಾಲದಾಸರಲ್ಲಿಗೆ ಬಂದು
ಭಜಿಸೆ ಅವರ ಆಯು ನಾಲ್ವತ್ತು ಪಡೆದಂಥ ೭

ಮಂತ್ರಿತ ಭಕ್ಕರಿಯಾ । ಭುಜಿಸೆ ದೇಹ
ಯಂತ್ರ ಸಾಧನ ಕೊಡಗಲೂ ।
ಮಂತ್ರೋಪದೇಶವ ಗೊಳ್ಳುತ ಮುದದಿಂದೆ
ಯಂತ್ರೋದ್ಧಾರಕ ಪ್ರಿಯ ರಂಗನ ಒಲಿಸಿದ ೮

ಇಂದು ಭಾಗದಿ ಸ್ನಾನವ್ಪೂ । ಮಾಡುತಲಿರೆ
ಸ್ಕಂಧಾ ರೋಹಿತ ಶಿಲೆಯಸ್ಥ ।
ಇಂದಿರಾ ರಮಣ ಶ್ರೀ ಜಗನ್ನಾಥ ವಿಠಲನ
ಸುಂದರಾಂಕಿತವನ್ನು ಧರಿಸಿದ ಶಿರದಲ್ಲಿ ೯

ಪಾಂಡುರಂಗನ ಕಾಣುತ । ತನ್ನಯ
ದಿಂಡುಗೆಡಹಿದ ಆಕ್ಷಣಾ ।
ಅಂಡಜಾಧಿಪನುದ್ದಂಡ ದೇವರ ದೇವ
ಪುಂಡರೀಕಾಕ್ಷನ ಪಾದಕೆ ಶರಣೆಂದ ೧೦

ಸ್ವಾದಿ ಕ್ಷೇತ್ರಕ್ಕ ಪೋಗೀ । ಪೂಜ್ಯರಾದ
ವಾದಿರಾಜರ ಪೂಜಿಸೀ ।
ಸಾಧು ವರ್ಯರ ಆಜ್ಞಾಧಾರಕರಿವರಾಗಿ
ಬುಧರಿಗೆ ಹರಿಕಥಾ ಸುಧೆಯ ಸಾರವನಿತ್ತ ೧೧

ಪದ ಸುಳಾದಿಗಳಿಂದಲಿ । ಹರಿಯ ಪಾದ
ಸದ್ವನಜವ ಸ್ತುತಿಸುತಲೀ ।
ಹೃದಯ ಸದ್ಮದಿ ತದ್ಧಿಮಿ ಧಿಮಿ ಧಿಮಿಕೆಂದು
ವಿಧಿಪಿತ ಹರಿಯನ್ನ ಕುಣಿಸಿ ಮೋದಿಸಿದಂಥ ೧೨

ಸುವತ್ಸರವು ಶುಕ್ಲದೀ । ಸಿತಭಾದ್ರ
ನವಮಿ ತಾರೆಯು ಮೂಲದೀ ।
ರವಿಯ ವಾರವು ಸಂದ ಶುಭದಿನದಲಿ ಗುರು
ಗೋವಿಂದ ವಿಠಲನ ಸೇರಿ ತಾಮೆರೆದಂಥ ೧೩

४೬೦

ಪಾಲಿಸೊ ಜಗನ್ನಾಥ ದಾಸಾ । ವರ್ಯ
ಕಳೆಯೊ ಯನ್ನ ಕಲಿಕಲ್ಮಷ ಪ

ಶೀಲ ಗೋಪಾಲನ ದಾಸಾರ್ಯರ ಕರಜನೆ
ಲಾಲಿಸೋಗುಣನಿಧಿ ಬಾಲನ ಬಿನ್ನಪ ಅ.ಪ.

ಹರಿಕಥಾಮೃತ ವಕ್ತಗುರುವೇ । ಕಾಯೊ
ಪರಮ ಭಕ್ತರ ಕಲ್ಪತರುವೆ ।
ಹರಿಗುರು ಕರುಣ ಸಂಪೂರ್ಣಪಾತ್ರನೆ ಭವ
ಸೆರೆಯ ಬಿಡಿಸಿ ಕಾಯೊ ಪರಮ ಪವಿತ್ರ ೧

ಮೋದತೀರ್ಥರ ಭೇದ ಮತವಾ । ಸಾರಿ
ಭೇದವಾದಿಗೆ ಮಧ್ವಹೃದಯಾ ।
ಸಾಧಿಸಿ ತೋರಿದ ಪದಪದ್ಯನೊರೆಯುತ
ವಿದ್ವದಾರ್ಯನೆ ಕಾಯೊ ಅದ್ವೈತ ಗಜಸಿಂಹ ೨

ಭವಜಲಧಿ ನವಪೋತ ಹರಿಯಾ । ಗುರು
ಗೋವಿಂದ ವಿಠಲನ ಪದವಾ ।
ಅವಿರತ ಹೃದಯದಿ ನೋಡುವ ಸೌಭಾಗ್ಯ
ಜವದಿ ಪಾಲಿಸೊ ಜಗನ್ನಾಥ ದಾಸಾರ್ಯನೆ ೩

೪೬೧

ಮಾನವಿ ದಾಸರ । ನಿ ಸೇರೋ
ಹೀನ ಮನುಜ ನಿನ್ನಘವನೆ ನೀಗುವ ಪ

ಕೃತ ಯುಗದಲಿ ಹಿರಣ್ಯಜನೆನಿಸೀ
ವಿತತ ಮಹಿಮ ಹರಿಯನೆ ಭಜಿಸೀ ॥
ಸತತದಿ ಸುಜನರ ಸಂತವಿಸಿ ಸಿರಿ
ಪತಿಯ ಸೇವಿಸೆ ಸಹ್ಲಾದ ನೆನಿಸಿದಾ ೧

ಎರಡೊಂದ್ಯು ಯುಗದಲಿ ಶಲ್ಯನಾಗಿ ಜನಿಸೀ
ಕುರುಪಗೆ ಋಣರೂಪ ಸೇವೆ ಸಲಿಸಿ ॥
ಉರುತರ ಭಕುತಿಲಿ ಶೌರಿಯ ನೆನೆಯುತ
ಹರಿಪದ ಸೇರಿದ ನೃಪಕುಲ ಮೌಳೀ ೨

ವರಕಲಿಯಲಿ ದ್ವಿಜನಾಗವತರಿಸೀ
ನರಮೃಗಾಖ್ಯಸುತ ಶ್ರೀನಿವಾಸನೆನಿಸೀ ॥
ವರದೇಂದ್ರ ಯತಿಯಲಿ ತರ್ಕವ ಕಲಿತು
ದುರುಳರ ಮುರಿದತಿ ಗರ್ವದಿ ಮೆರೆದಾ ೩

ಭೃಗ್ವಂಶಜ ವಿಜಯಾಖ್ಯ ದಾಸ ಬಂಧೂ
ಋಗ್ವಿನುತನ ಪ್ರಾಕೃತದೊಳು ಪಾಡೆ ॥
ದಿಗ್ಗಜ ಗರ್ವದಿ ಗೆಜ್ಜೆಯ ಕಟ್ಟಿದ
ಅಗ್ಗದ ನಟನಿವನೆನುತಲಿ ಜರೆದಾ ೪

ದಾಸರ ನಿಂದ್ಯದಿ ಬಂದುದು ಅಪಮೃತ್ಯು
ದೋಷನೀಗೆ ಗೋಪಾಲರ ಭಜಿಸೆನ್ನ ॥
ಔಷಧ ಪೇಳಲು ದಾಸರ ನಾಲ್ದಶ
ವರ್ಷಾಯುಷ್ಯವ ಪೊಂದಿದವರನಾ ೫

ಇಂದು ಭಾಗದಲಾನಂದದಿ ಮೀಯೇ
ಬಂದೊದಗಿತು ಜಗನ್ನಾಥ ನಾಮಾ ॥
ಪೊಂದುತ ಅಂಕಿತ ಕುಣಿಯುತ ಪಾಡುತ
ಇಂದಿರೆಯರಸನ ಛಂದದಿ ತುತಿಸಿದ ೬

ಪಾವನತರ ಹರಿಕಥೆ ಸುಧೆ ರಚಿಸೀ
ಪವನ ಮತದವರನ್ನುತ್ತರಿಸೀ ॥
ಪವನನ ಹೃತ್ಕಂಜದಿ ನೆಲೆಸಿಹ ಗುರು
ಗೋವಿಂದ ವಿಠಲ ಪದಾಬ್ಜವ ಸೇರಿದ ೭

೪೬೨

ರಂಗವಲಿದರ ಪಾದ । ಭೃಂಗನು ಎನಿಸುವ
ಡಿಂಗರಿಗನೆ ಧನ್ಯನೊ ಪ

ಧೃತ : ಅಂಗಜನಪಿತ ಕಾ । ಳಿಂಗ ಮರ್ದನ
ತುಂಗ ಮಹಿಮನಪಾಂಗ ಕರುಣನ
ಡಿಂಗರಿಗೆ ಅಭಯಾಂಕ ಹಸ್ತನ
ರಂಗನಂಘ್ರಿ ಸರೋಜ ಭೃಂಗನ ಅ.ಪ.

ಮಾನವಿ ಕರಣೀಕ । ನರಹರ್ಯಭಿಧ ದ್ವಿಜ
ಸೂನು ಶ್ರೀನಿವಾಸನೂ ॥
ಮಾನ್ಯವಂತನು ಚರಿಸಿ ಮೇದಿನಿ ।
ಮೌನಿವರ ವರದೇಂದ್ರ ಯತಿಯಲಿ ।
ಸಾನು ರಾಗದಿ ಜ್ಞಾನವಾರ್ಜಸಿ ।
ಜ್ಞಾನ ನಿಧಿ ಎಂದೆನಿಸಿ ಮೆರೆದ ೧

ವಿಜಯರ ನಿಂದೆಯಿಂದ । ಸಂದಿತು ರೋಗವು
ನಿಜತನು ತ್ಯಜಿಸುವಂತೇ ॥
ಅಜನ ನಿಜಪದ ಯೋಗ್ಯ ಪ್ರಾಣನು ।

ಬಿಜಯಗೆಯ್ಯುತನಿಜ ಸುಸ್ವಪ್ನದಿ ।
ವಿಜಯದಾಸರ ಪೂಜಿಸೆನ್ನಲು ।
ಭಜಿಸುತಲಿ ವರವನ್ನೆ ಪಡೆದ ೨

ತ್ಯಾಗೀ ಭೋಗೀ ಶೀಲ । ವಿಜಯರ ಸೇವಕ
ಭಾಗಣ್ಣಾರ್ಯರ ಸೇವಿಸೀ ॥
ಆಗಮಜ್ಞನ ನಾಲ್ದಶಾಯು ।
ಭಾಗ್ಯವನೆ ತಾಪಡೆದು ಚಂದ್ರ
ಭಾಗದಲಿ ಮೀಯುತಿರೆ ಶಿರಿ ।
ಜಗದೀಶ ವಿಠಲಾಂಕ ಪಡೆದ ೩

ಸ್ವಾದಿ ಸ್ಥಳಕೆ ಪೋಗಿ । ರಾಜರ ಆಜ್ಞೆಯ
ಆದರದಲಿ ಕೊಳ್ಳುತಾ ॥
ಮೋದ ತೀರ್ಥರ ಮತವ ಸಾರುತ ।
ವೇದ ಶಾಸ್ತ್ರ ಸುಧಾದಿ ಗ್ರಂಥದ
ಸ್ವಾದುರಸ ಪ್ರಾಕೃತದಿ ಬೋಧಿಸಿ ।
ಶ್ರೀ ಹರಿಕಥೆ ಸುಧೆಯ ಗರೆದ ೪

ಲಕ್ಷ್ಯವಿಡುತ ಶುಕ್ಲ । ವರ್ಷವು ಸಿತವೆನ್ನ
ಪಕ್ಷ ಭಾದ್ರ ಪದದೀ ॥
ದಕ್ಷಿಣಾಯನ ಶುದ್ಧನವಮಿಲಿ ।
ದೀಕ್ಷೆ ಪಿಡಿಯುತ ಆದಿವಾರದಿ
ಪಕ್ಷಿವಹ ಗುರು ಗೋವಿಂದ ವಿಠಲನ ।
ಈಕ್ಷಿಸುತ ಭುವಿಯನ್ನೆ ತೊರೆದ ೫

೪೬೩

ಶ್ರೀ ಶ್ರೀ ವರವಿಠಲದಾಸರು

ಶ್ರೀವರ ದಾಸರ್ಯಾ । ತವಗುಣ
ಭಾವದೊಳ್ವರ್ಣಿಸುವಾ ಪ

ಭಾವ ಭಕುತಿ ನಿತ್ತು । ನೀವ್ಪೊಲಿಯೋ ಗುರು
ದೇವ ತಾಂಶರೆಂದು । ಅವನಿಯೊಳ್ಖ್ಯಾತಾ ಅ.ಪ.

ಶ್ರೀನಿವಾಸ ಹರಿಯಾ । ಸೇವಿಸಿ
ಜ್ಞಾನಿಗಳೆನಿಸಿರುವಾ ।
ಶ್ರೀನಿಧಿ ವಿಠಲನ । ಗಾನವ ಮಾಡುವ
ಜ್ಞಾನಿಶ್ರೇಷ್ಠರಿಂ । ದಂಕಿತ ಪಡೆದ ೧

ಇಂದು ಭಾಗ ವಾಸಾ । ಎನಿಸಿಹ
ಚಂದ ಹರಿಯ ರೂಪಾ ।
ನಂದ ತುತಿಸಿ ಹೃ । ನ್ಮಂದಿರದಲಿ ನೋಡಿ
ಬಂಧ ಕಳೆದೆ ಭೂ । ವೃಂದಾರಕವರ ೨

ಗರ್ವ ರಹಿತನಾಗಿ । ಹರಿಯನು
ಸೇರ್ವ ಮಾರ್ಗ ಪಿಡಿದೀ ।
ಸರ್ವೋತ್ತಮ ಗುರು ಗೋವಿಂದ ವಿಠಲನು
ಶರ್ವ ಮುಖ್ಯರಾ । ದೇವಾ ಸೇವ್ಯನೆಂದೇ ೩

೪೬೪

ಶ್ರೀ ಮುದ್ದುಮೋಹನದಾಸರು

ಮುದದಿ ಪಾಲಿಸೊ । ಮುದ್ದು ಮೋಹನರಾಯಾ ।
ಮದ್ಗುರುವರ ಪ್ರೀಯಾ ಪ

ಮಧ್ವೇಶನ ಪದ ಪದುಮ ಪೂಜಿಪ
ಮಧುಪಾ ಪರಿಹರಿಸೆಲೊ ತಾಪಾ ಅ.ಪ.

ಜನುಮ ಪೊತ್ತೆ ನೀ ದೊಡ್ಡ ಬಳ್ಳಾಪುರದೀ । ಅನುನಯದಲಿ ಓದೀ ।
ಗುಣವಂತೆಯು ಕನ್ಯೆಯ ತಾ ಸ್ವೀಕರಿಸೀ । ಕನ್ಯಾಸೆರೆ ಬಿಡಿಸೀ ।

ವನಜನಾಭನನು ಕಾಣಲು ಮನಮಾಡೀ । ಶ್ರೀ ವರರನು ಬೇಡೀ ।
ಗಾನ ಲೋಲ ಮುದ್ದು ಮೋಹನ ವಿಠ್ಠಲನಾ ಘನನಾಮ ಪೊತ್ತೆ ನಿನ್ನಾ ೧

ಅಂಗಜಗಳು ಕದಲರ್ಧಾಂಗಿಯನಾಳೀ । ಯಾತ್ರೆಗೆ ಮನತಾಳೀ ।
ಗಂಗೆಯಾತ್ರೆ ಮೂರೊಂದು ಬಾರಿ ಮಾಡೀ । ಉಡುಪಿಗೆ ಬಲುಬಾರೀ ।
ತುಂಗ ಮಹಿಮ ನಮ್ಮ ವೆಂಕಟ ನಿಲಯನ್ನಾ । ತುಂಗೆ ತೀರಗನನ್ನಾ ।
ಭಂಗವಿಲ್ಲದಾನೇಕ ಬಾರಿ ನೋಡೀ । ಮಂಗಳಾಂಗನ ಪಾಡೀ ೨

ತರಮನ್ನಳ್ಳಿ ಹನುಮಪ್ಪನ ತಾವಲಿಸೀ । ನಿರಶನ ವ್ರತ ಚರಿಸೀ
ಸಿರಿ ವಿಜಯ ವಿಟ್ಠಲನ ನಿಜಪುರದಲ್ಲೀ । ಸಂಸ್ಥಾಪಿಸುತಲ್ಲೀ ।
ಪರಮ ಶಿಷ್ಯರಿಗುಪದೇಶಗಳನ್ನಾ । ವಿರಚಿಸಿದಿಯೊ ಘನ್ನಾ ।
ಪರಿಸರ ಮತ ಸರ್ವೋತ್ತಮವೆಂದೂ । ಸಾರಿದೆ ದಯಾಸಿಂಧೂ ೩

ಬುದ್ಧಿ ಪೇಳುತಲಿ ತಿದ್ದಿದೆ ಸುಜನರೂ । ನಡೆನುಡಿಗಳಲಿನ್ನೂ ।
ಮದ್ಗುರು ಸಿರಿ ತಂದೆ ಮುದ್ದು ಮೋಹನರಾ । ಉದ್ಧರಿಸಿದ ಧೀರಾ ।
ಮಧ್ವ ಮತಾಗಮ ಸದ್ವನದಿ ವಿಹಾರ । ಬುಧಜನರಘ ಹರಾ ।
ವಿದ್ವದಾರ್ಯ ಮುದ್ದು ಮೋಹನ ರಾಯ । ಮುದ ಬೇಡುವೆ ಜೀಯ ೪

ಕೃತನಿತ್ಯಾಹ್ನಿಕನಾಗಿ ತೆವಳಿ ಬಂದೂ । ಚಕ್ರದಿ ಕುಳಿತಂದೂ ।
ವತ್ಸರ ವಿಳಂಬಿ ವದ್ಯ ಕಾರ್ತೀಕದೀ । ಚತುರ್ದಶಿ ನಡುದಿನದಿ।
ಅತುಳ ಮಹಿಮ ಗುರುಗೋವಿಂದ ವಿಠಲನ್ನ । ಹೃದಯಾಬ್ಜದಿ ಪವನಾ ।
ಆತುಮಾಂತರದಿ ಕಾಣುತಲವನಾ । ಕಿತ್ತೊಗೆದೆಯೊ ತನುವಾ ೫

೪೬೫

ಮುದ್ದು ಮೋಹನ ಗುರುಗಳಂಘ್ರಿ । ಶ್ರದ್ಧಾ ಭಕುತೀಲಿ
ಬುದ್ಧಿ ಪೂರ್ವಕ ಭಜಿಪ ಜನರ । ನ್ನುದ್ಧರೀಸುವಾ ಪ

ಧರ್ಮ ಪತ್ನಿಯೊಡನೆಯಿದ್ದು ಸಂಗರಹಿತನು
ಜನ್ಮಾರಭ್ಯ ಬ್ರಹ್ಮಚಾರಿ । ನಿರ್ಮಲಾತ್ಮನೂ ।

ಬ್ರಹ್ಮಯ ಜನ ಆದಿನಿತ್ಯ । ಕರ್ಮ ನಿಷ್ಣಾತ್ಯ
ಸುಮ್ಮನಸ ವಿಜಯಗುರವ । ನಮ್ಮಿಸುತಿಸುವ ೧

ತೀರ್ಥಕ್ಷೇತ್ರ ಚರಿಸೂತ । ಮೂರ್ತಿದರ್ಶನಾ
ಸಾರ್ಥಕವ ಮಾಡಿಕೊಂಡ । ತೀರ್ಥಪಾವನಾ ।
ಕಾರ್ತಸ್ವರೇತ್ಯಾದಿವಿತ್ತ । ಪಾರ್ಥಿವಸಮಾ
ಶಾಸ್ತ್ರ ಪ್ರಾಕೃತಾದಿ ತಿಳಿಪ । ಹರಿ ಸರ್ವೋತ್ತಮ ೨

ಶ್ರೀ ವರರಿಂದುಪದಿಷ್ಟ । ವಿಠಲ ಪ್ರತಿಷ್ಟ
ಓ ವಿಸಾಧೀಸಲು ಹರಿಯೊಳ್ । ಪ್ರಾಯೋಪವಿಷ್ಟ ।
ಭಾವಿ ಬ್ರಹ್ಮನಲ್ಲಿ ಗುರು ಗೋವಿಂದ ವಿಠಲನ
ಭಾವ ಅಷ್ಟ ಕುಸುಮದಿ । ಸೇವಿಸೀದನ ೩

೪೬೬

ಮುದ್ದು ಮೋಹನ ದಾಸ । ತಿದ್ದಿಯನ್ನಯ ದೋಷ
ಉದ್ಧರಿಸೊ ಬುಧತೋಷ । ನಮಿಪೆ ನಿನ್ನನಿಶಾ ಪ

ದಾಸ ದೀಕ್ಷೆಯ ವಹಿಸಿ । ಕ್ಲೇಶಗಳ ಬಹುದಹಿಸಿ
ದೇಶ ದೇಶವ ಚರಿಸಿ । ಹರಿ ಪ್ರತಿಮೆಗಳ ಭಜಿಸಿ ।
ಮೀಸಲೆನಿಸಿದ ಮತವ । ವ್ಯಾಸರಿಗೆ ಸಮ್ಮತವ
ದಾಸರಾಯರ ಮಾತ । ಬೀರಿರುವ ಖ್ಯಾತಾ ೧

ಕರಿಗಿರಿಯ ದುರ್ಗದಲಿ । ವರ ರಥೋತ್ಸವ ಸಮಯ
ನರಸಿಪುರ ಶೇಷಪ್ಪ । ವರ ಕುವರ ನಾಗಾಖ್ಯಗೆ
ಕರುಣಿಸುತ ಲಂಕಿತವ । ಪರಿಸರನ ಮತರಸವ
ಒರೆದು ಸಲಹಿದೆ ಗುರುವೆ । ನೀ ಪರಮ ಗುರುವೇ ೨

ನೆಲಿಸಿ ನಿಜಪುರದಲ್ಲಿ । ನಿಲಿಸಿ ವಿಠ್ಠಲನಲ್ಲಿ
ತಿಳಿಸುತಲಿ ದಾಸತ್ವ । ಮಹಿಮೆ ನಿಜತತ್ವಾ

ಕಲಿಯ ಬಹು ಪ್ರಾಬಲ್ಯ । ತಿಳಿಸಿ ಮನ ಚಾಂಚಲ್ಯ
ಅಳಿಸಿ ಸಲಹಿದೆ ಸುಜನ । ಆರ್ತರುದ್ಧರಣಾ ೩

ತಂಬ್ರೂಹಿ ಎನುವಂಥ । ತಂಬೂರಿ ನೀ ಕೊಡುತ
ತುಂಬಿ ದ್ಭೋಭವದಿಂದ । ಪೊರೆದೆ ಮುದದಿಂದಾ ।
ಉಂಬುಡುವುದೂ ಹರಿಗೆ । ಕೊಂಬ ಸರ್ವವ ಹರಿಗೆ
ಎಂಬ ಜ್ಞಾನವನಿತ್ತು । ಸಂಭ್ರಮವ ಬಿತ್ತೂ ೪

ಸರ್ವ ಜಗ ಸೃಜಿಸುವನ । ಸರ್ವವನು ಲಯಿಸುವನ
ಸರ್ವ ಲೋಕೋದ್ಧರನ । ಅಮಿತ ಗುಣ ಪೂರ್ಣಾ ।
ಸಿರಿಪತಿ ಶ್ರೀಗುರೂ । ಗೋವಿಂದ ವಿಠ್ಠಲನ
ಉರುತರದಿ ಭಜಿಪಂಥ । ಕರುಣಿಸೆಲೊ ಪಂಥ ೫

೪೬೭

ಮುದ್ದು ಮೋಹನ ದಾಸರೇ ನಿಮ್ಮ । ಶುದ್ಧ ಪಾದವ ನಂಬಿದೇ
ತಿದ್ದಿಯೆನ್ನಯನಾದ್ಯ ವಿದ್ಯೆಯ । ಬುದ್ಧಿ ನಿಲಿಸಿರಿ ಹರಿಯಲೀ ಪ

ನಡುಮನೆ ದ್ವಿಜನೆಂಬನಾ । ವಡ್ಡಲೊಳು ಉದಿಸೀದನಾ ।
ಆಡ್ಯಮತವನುಕರಿಸಿದಾ । ದೊಡ್ಡ ಬಳ್ಳಾಪುರದಲೀ ೧

ವಿಕೃತಿ ಸಂವತ್ಸರದಲೀ । ಪ್ರಕೃತ ಜನ್ಮವ ಪಡೆದನಾ.
ಸುಕೃತ ಪೊಗಳುವ ಜನರ ದು । ಷ್ಕೃತವ ನೀ ಪರಿಹರಿಸುವೀ ೨

ಚಿಪ್ಪಗಿರಿ ಸುಕ್ಷೇತ್ರದೀ । ಗೊಪ್ಪ ಶ್ರೀ ಅಂಕಿತವನೂ
ಅಪ್ಪ ಶ್ರೀ ವರರಿಂದಲೀ । ವಪ್ಪಿ ನೀ ಕೈಗೊಂಡೆಯೋ ೩

ಮೂರೊಂದು ಸಲ ಶ್ರೀಕಾಶಿಗೇ । ಭೂರಿಸಲ ಶ್ರೀ ಉಡುಪಿಗೇ
ಸಾರಿ ವೆಂಕಟ ಪತಿಯನೂ । ಬಾರಿ ಬಾರಿಗೆ ನೋಡಿದೇ ೪

ದಾಸ ಪೀಳಿಗೆ ಬೆಳೆಸಲೂ । ಶೇಷನಾಮಕ ದಿವಿಜಗೇ
ಭಾಸಿಸುವ ಅಂಕಿತವನಿತ್ತೂ । ಪೋಷಿಸಿದೆ ಸದ್ವೈಷ್ಣವತತ್ವ ೫

ಸುಜನ ಜನ ಸಂಸೇವಿಸೆ । ವಿಜಯ ವಿಠಲನ ಸ್ಥಾಪಿಸೇ
ಭಜನೆ ಗೈಯುತ ಮೆರೆದೆಯೊ । ನಿಜಪುರದಿ ನೀ ನಿಲ್ಲುತಾ ೬

ಸಿರಿಯಧರಿಸಿ ಮೆರೆಯುವ ಗುರು । ಗೋವಿಂದ ವಿಠಲನ ಭಜಿಸುವಾ
ಪರಮ ಗುರುಗಳೆ ನಿಮ್ಮ ಚರಣವ । ಪರಿಪರೀಯಲಿ ಪೂಜಿಪೆ ೭

೪೬೮

ಮುದ್ದು ಮೋಹನರಾಯಾ । ಅಸ್ಮದ್ಗುರೋರ್ಗುರು
ಶುದ್ಧ ಜನ ಸಂಪ್ರೀಯ । ನಿಮಗೊಂದಿಸುವೆ ಭವ
ಬಂಧ ಪರಿಹರಿಸಯ್ಯಾ । ಬುಧರಿಂದಗೇಯಾ ಪ

ಶ್ರೀಧರಾ ಹರಿಪಾದ ಪಂಕಜ । ಹೃದಯ ಸದನದಿ
ನೋಡಿಸುಖಿಸುವ ಮೋದ ಪಾಲಿಸೊ ಸಾಧುವರ್ಯನೆ ।
ಹೇ ದಯಾಂಬುದೆ ಪಾದ ನಂಬಿದೆ ಅ.ಪ.

ದೇವಮುನಿನುತ ಪೀಠಾ । ವರ ಚಿಪ್ಪಿಗಿರಿಯಲಿ
ದಿವ್ಯ ಭವಹರ ಮಂತ್ರಾ । ಅಂಕಿತ ಸುತಾರಕ
ಪ್ರವರ ಪೊಂದಿದೆ ಪೋತ । ಜಪಿಸುತ್ತ ಮನದೀ
ಶರ್ವವಂದ್ಯ ವಿಧಾತಾ । ಪಾದಾಬ್ಜ ಭಕುತಾ ॥
ಶ್ರೀ ವರರ ಕರಕಮಲಜಾತನೆ ಭುವಿಯ ಸತ್ತೀರ್ಥಗಳ ಚರಿಸುತ
ಪಾವಮಾನಿ ಮತಾಬ್ಧಿಜಾತರ । ಪಾವನವ ಮಾಡ್ಯವನಿಯಲಿಮೆರೆದೆ ೧

ಬಹು ವಿಧದಿ ದಾಸರವಂಶ । ಈ ಧರೆಯೊಳಗೆ
ಬಹು ವಿಸ್ತಾರಿಪೆ ಗೈವಾಂಶ । ತಿಳಿಯುತ್ತ ಮನದಲಿ
ಸಾಹಸಿಗನಿಹ ಶೇಷಾಂಶ । ದಿಂದುದ್ಭವಿಸಿಹಗೆ
ಮಹಮಂತ್ರ ಪ್ರಹ್ಲಾದಾಂಶ । ದಿಂದಿಹ ಸುಹಂಸಾ ।

ಮಾಹಿತಾಂಘ್ರಿ ಸರೋಜ ಭೃಂಗ ಮುದ್ದು
ಮೋಹನಾರ್ಯ ಗುರುರೂಪದೇಶವ
ವಿಹಿತ ಮಾರ್ಗದಿಗೈದು ತಂದೆ ಮುದ್ದು
ಮೋಹನಾಭಿಧನೆಂದು ಕರೆದೆಯೊ ೨

ಗುರುವಿನಾಣತಿಯನ್ನಾ । ಪೊಂದುತಲಿಸ್ವಪ್ನದಿ
ಸಿರಿವಿಜಯ ವಿಠಲನ್ನಾ । ನಿಜಪುರದಿ ನಿಲಿಸಿ
ನಿರುತ ಅರ್ಚನೆಯನ್ನಾ । ಸ್ಥಿರಪಡಿಸಿ ಮುನ್ನ
ಅರಿತು ಮನದಲಿ ನಿನ್ನ । ಉತ್ತಮಣವನ್ನಾ ॥
ಶೌರಿ ದಾಮೋದರನ ಮಾಸದಿ । ವರದತುರ್ದಶಿ ಅಸಿತಪಕ್ಷದಿ
ಸಿರಿ ಗುರೂ ಗೋವಿಂದ ವಿಠಲನ । ಚರಣ ಸರಸಿಜ ಸೇರಿ ಮೆರೆದೆ ೩

೪೬೯

ಮುದ್ದು ಮೋಹನ ರಾಯಾ । ಸುಜನರ
ಉದ್ಧರಿಸಿದ್ಯೊ ಜೀಯಾ । ಪ

ಶ್ರದ್ಧಾಳುತನದಲಿ । ಬದ್ಧ ದೀಕ್ಷಿತನೆ
ಮಧ್ವಮತವು ಎನೆ । ದುಗ್ಧಾಬ್ಧಿ ಚಂದಿರ ಅ.ಪ.

ಚಿಪ್ಪಗಿರಿ ಸುಕ್ಷೇತ್ರಾ । ದೊಳಗೆ
ಅಪ್ಪ ಶ್ರೀ ವರರಿಂದಾ ।
ಗೊಪ್ಪ ಸದುಪ ದೇಶ । ಅಪ್ಪುತದಾಸನೆ
ನೆಪ್ಪು ಕೊಡುತ ತಿ । ಮ್ಮಪ್ಪನೊಳಗೆಮನ ೧

ತೀರ್ಥಕ್ಷೇತ್ರ ಚರಿಸೆ । ದೇಹವು
ಸಾರ್ಥಕಾಯಿತು ಎನಿಸೀ ।
ಯಾತ್ರೆ ಮಾಡಿದೆ ಸ । ತ್ಪಾತ್ರರ ಸೇರುತ
ಗಾತ್ರ ಗೈಸಿದೆ ಪಾವಿ । ತ್ರ್ಯ ಬಾಹ್ಯಾಂತರ ೨

ಗುರುಗೋವಿಂದ ವಿಠಲನೇ । ಪರತತ್ವ
ಸರ್ವೋತ್ತಮನವನೇ ।
ಒರೆಯುತ ಸುಜನರ । ಪರಿಪಾಲಿಸಿದಿಯೊ
ವರಬಳ್ಳಾಪುರದಲಿ । ವಿಠಲನ ಸನಿಯ ೩

೪೭೦

ಶ್ರೀ ತಂದೆ ಮುದ್ದು ಮೋಹನದಾಸರು

ಕರುಣದಿ ಕಾಯೊ ಮದ್ಗುರುವೆ । ಬೇಡುವೆ ನಿಮ್ಮ
ಚರಣ ಸೇವಕನು ನಾನೂ ಪ

ಮೊರೆ ಹೊಕ್ಕವರ ಆರ್ತ । ಸ್ವರವ ಕೇಳುತ ನೀವು
ಕರುಣ ರಹಿತರಂತೆ । ಇರುವುದು ಉಚಿತೇ ಅ.ಪ.

ಮುದ್ದು ಮೋಹನ ಕರ । ಪದುಮ ಸಂಭವ ಗುರು
ವಿದ್ವದಾರ್ಯನೆ ತಂದೆ । ಮುದ್ದು ಮೋಹನ್ನ ।
ಮಧ್ವ ಶಾಸ್ತ್ರದಿ ನಿಪುಣ । ಅದ್ವೈತ ಗಜಸಿಂಹ
ಮದ್ಗುರುವೆ ತೋರೆನ್ನ । ಹೃದ್ಗುಹಸ್ಥಿತನಾ ೧

ಯಕುತಿ ಶಾಸ್ತ್ರವನರಿಯೆ । ಮುಕುತಿ ಮಾರ್ಗದಿ ಸಿರಿ
ಲಕುಮಿ ಪತಿಯ ನಾಮಕೆದುರೇ ।
ಭಕುತಿಯಿಂದಲಿ ತವ । ಉಕುತಿಯ ಚಿಂತಿಪ
ಶಕುತಿ ಇತ್ತೆನ್ನ । ನೀ ಕಾಯೊ ಗುರುವೆ ೨

ಗುರುವೆ ನಿಮ್ಮಯ ಕರುಣ । ಕವಚ ತೊಟ್ಟಮೇಲೆ
ಕರೆಕರೆ ಸಂಸಾರ ಭಯ ವೇತಕೋ ।
ಗರುಡ ಗಮನನು ಗುರು । ಗೋವಿಂದ ವಿಠಲನ
ಚರಣ ಪುಷ್ಕರ ಭೃಂಗ । ಪೊರೆಯೊ ಕೃಪಾಪಾಂಗಾ ೩

೪೭೧

ಕರೆದೂ ಕೈ ಪಿಡಿಯೊ ಎನ್ನಾ ಗುರುವರ ಮುನ್ನಾ
ಕರೆದೂ ಕೈ ಪಿಡಿಯೊ ಎನ್ನಾ ಪ

ಮೊರೆಯ ನಿಡುವೆ ತವ । ಚರಣ ಯುಗ್ಮಗಳಿಗೆ
ಬರಿದೆ ಬಳಲಿಪದಿರಿ । ಪರಿ ಪರಿಯಿಂದಲಿ ಅ.ಪ.

ಪಸುಳೆ ತಪ್ಪನು ಮಾಡೆ । ಶಿಶುವ ಕರೆಯಳ ಜನನಿ
ಕಸವಿಸಿ ಕಳೆದೆನಗೆ । ಕುಶಲವ ನೀಯೋ ॥
ಕಸರು ಕರ್ಮವ ಕಳೆದು । ಬಿಸಜನಾಭನ ಹೃನ್
ಮುಸುಕಿಲಿ ತೋರಿಸಿ । ಪಸರಿಸು ಜ್ಞಾನವ ೧

ಅನ್ಯ ಸಾಧನ ಕಾಣೆ । ನಿನ್ನ ನಾಮವೆ ಗತಿ
ಮನ್ನಿಸಿ ಪೊರೆ ತಂದೆ । ಮುದ್ದು ಮೋಹನ್ನಾ ।
ಕುನ್ನಿ ಮಾನವ ನಾನು । ನಿನ್ನ ಮಹಿಮೆಯನ್ನ
ಯೇನ ಬಣ್ಣಿಪೆನಯ್ಯ । ಘನದಯಾ ಪೂರ್ಣ ೨

ಗುರುಗೋವಿಂದ ವಿಠಲನ । ಚಾರು ಸುಂದರ ರೂಪ
ತೋರೊ ಹೃತ್ಸದನದಿ । ಕರುಣ ವಾರಿಧಿ ಗುರುವೇ ।
ಆರೂ ಕಾಯುವರಿಲ್ಲ । ಸಾರಿದೆ ತವ ಚರಣ
ಭೋರಿಟ್ಟು ಮೊರೆಯಿಡುವೆ । ಧೀರ ಕಾಯಲಿ ಬೇಕೊ ೩

೪೭೨

ಕಾಪಾಡು ಕಾಪಾಡು । ಕಾಪಾಡು ಗುರುವೇ ಪ

ಶ್ರೀ ಪತಿಯ ಪರಮಾತ್ಮ । ಅಪದ್ದರ ಗುರುವೇ ಅ.ಪ.

ಕೃಪಣ ವತ್ಸಲ ಗುರುವೆ । ಕೋಪಸಲ್ಲದು ನಿಮಗೆ
ಕಾಪಥವ ನೈದುವನು । ತವಕೃಪೆ ವಿಹೀನಾ ॥
ಅಪರಾಧ ವೆಣಿಸದಲೆ । ಕೃಪೆಮಾಡಿ ಕೈ ಪಿಡಿದು
ಸುಪಥದಲ್ಲಿರಿಸುತ್ತ । ಆಪವರ್ಗದನ ತೋರೊ ೧

ತಂದೆ ತಾಯಿಯು ನೀವೆ । ಬಂಧು ಬಳಗವು ನೀವೆ
ಎಂದೆಂದಿಗೂ ಎನಗೆ ಗುರುವು ನೀವೆ ॥
ಕಂದ ಮಾಡಿದ ತಪ್ಪ । ತಂದೆಯೆಣಿಸುವರೇನೊ
ಪೊಂದಿ ಭಜಿಸುವೆ ಕಾಯೊ । ತಂದೆ ಕೃಪ ಸಾಂದ್ರಾ ೨

ತಂದೆ ಮುದ್ದು ಮೋಹನ್ನ । ವಂದಿಸುವೆ ನಿಮ್ಮಡಿಗೆ
ಇಂದು ತವ ದರ್ಶನವ । ಸಂಧಿಸಲಿ ಬೇಕೋ ॥
ಇಂದಿರಾಪತಿ ಗುರು । ಗೋವಿಂದ ವಿಠ್ಠಲನ
ಛಂದಾಗಿ ಭಜಿಸುವ । ತಂದೆ ಕೈ ಪಿಡಿಯೋ ೩

೪೭೩

ಕಾಯೊ ಕಾಯೋ । ಗುರುವರ್ಯ ।
ಕಾಯೊ ಕಾಯೋ ಪ

ಕಾಯೊ ಕಾಯೊ ಗುರುವರ್ಯ ಪರಮ ಪ್ರಿಯ
ಜೀಯ ನಿನ್ನಯ ಪಾದಕೆರಗುವೆನಯ್ಯಾ ಅ.ಪ.

ಒಂದರಿತವನಲ್ಲ । ಕಂದನು ಎಣಿಸದೆ
ಬಂದು ಸಲಹೊ । ತಂದೆ ಮುದ್ದು ಮೋಹನ್ನ ೧

ಹಿಂದಿನ ಸುಕೃತದಿ । ಬಂದು ಜನಿಸಿದೆ
ನಂದ ಮುನಿಯ ಮತ । ಸಿಂಧುವಿನಲ್ಲಿ ೨

ಇಂದಾದರು ತವ । ದ್ವಂದ್ವಪದವ ಮನ
ಮಂದಿರದಲಿ ತೋರಿ । ದಂದುಗ ಬಿಡಿಸೋ ೩

ಎಂದಾಗುದೊ ತಂದೆ । ಇಂದಿರೇಶ ಪದ
ದ್ವಂದ್ವ ಸಂದರ್ಶನ । ಸಂಧಿಸೊ ಬೇಗನೆ ೪

ತಂದೆ ನಿನ್ನಲಿ ಗುರುಗೋ । ವಿಂದ ವಿಠಲನ
ಅಂದ ಮೂರುತಿಯನು । ಛಂದದಿ ತೋರೊ ೫

೪೭೪

ಗುರು ಭಾಗ್ಯ ಗುರುಭಾಗ್ಯ । ಗುರು ಭಾಗ್ಯವಯ್ಯಾ ಪ

ನರಹರಿಯ ಕಲ್ಯಾಣ । ಪರಿಕಿಸುವ ಸೌಭಾಗ್ಯ ಅ.ಪ.

ಸಿರಿಭೂಮಿ ದೇವಿ ಸಹ । ವರಭೋಗ ನರಹರಿಯ
ಪರಮ ಕಲ್ಯಾಣವೂ । ಜರುಗುತಿರುವುದನೂ
ಗುರುಭಕ್ತರೊಡವೆರಸಿ । ಪರಿಕಿಸುವ ಪರಿಯಾಯ್ತು
ವರ ಸುಜನ ಸಂಗ ಫಲ । ವರ್ಣಿಸಲು ಅಳವೇ ೧

ಕರಿಗಿರಿಯ ವರಭೋಗ । ನರಹರಿಯ ಕರುಣದಲಿ
ಪರಮ ಪ್ರಿಯರೆಂದೆನಿಪ । ಗುರು ಕಾರುಣ್ಯದೀ ।
ಎರಡು ನಾಲ್ಕರ ಮಾಸ । ವರಸಪ್ತ ಸಿತ ಪಕ್ಷ
ವರರವಿಯ ದಿನ ಝಾವ । ಎರಡು ಮೂರರ ಮೇಲೆ ೨

ಸೀತೆಪತಿ ರಾಮನಾ । ದೂತರ ಪ್ರೇರಣೆಯ
ಮಾತುಗಳು ಮತ್ತೆ ಗುರು । ಜಾತರುಕುತಿಗಳಾ ।
ಆತು ಅಂಕಿತ ಮಾಲೆ । ಪ್ರೀತಿಯಿಂ ಗುರುದತ್ತ
ಶ್ರೀ ತಂದೆ ಮುದ್ದು ಮೋಹನ್ನ । ವಿಠಲಗರ್ಪಿಸಿದೆ ૩

ತತುವ ಸುವ್ವಾಲಿ ಪರಿ । ವಿತತವಾಗಿರುವಂಥ
ಶತ ದಶದ ಮೇಲಾಗಿ । ಕೃತಗಳಾಗಿರುವಾ
ಕೃತಿಗಳನು ಪೋಣಿಸುತ । ತುತಿಸಿ ಭಕುತಿಯಲಿಂದ
ಕೃತಿ ಪತಿಯ ಕೊರಳಿಗ । ರ್ಪಿತವು ಎಂದೆನುವಾ ೪

ಗುರುಗೋವಿಂದ ವಿಠಲನ । ಚರಣ ಯುಗ ಕಾಂಬಂಥ
ವರ ಮಾರ್ಗ ತೋರಿರುವ । ಪರಮ ಜ್ಞಾನಿಗಳಾ
ಕರುಣ ಕಿನ್ನೆಣೆಯುಂಟೆ । ಎರಡೊಂದು ಲೋಕದಲಿ
ಗುರು ಪಾದ ಸಂಸ್ಮರಿಸಿ । ಸ್ಮರಿಸಿ ಸುಖಿಯಾದೇ ೫

४೭೫

ಗುರುವೇ ನೀ ಕರುಣಿಸದಿರಲಿನ್ನ್ಯಾರು ಕರುಣಿಪರೋ ಪ

ಕರಿಗಿರಿಪುರ ತಂದೆ ಮುದ್ದು ಮೋಹನ್ನ ಅ.ಪ.

ಮೊರೆಹೊಕ್ಕ ಜನರ ಕೈ ಬಿಡುವರೇನೋ
ಚರಣ ಯುಗ್ಮಕೆ ನಿನ್ನ ನಮಿಸುವೆನೋ ।
ಭಾರ ವಹಿಸಿ ಬೇಗ ಸಲಹಬೇಕೋ ।
ಜರೆಯು ನುಂಗುವ ಮುನ್ನ ಪೊರೆಯ ಬೇಕೋ ೧

ಬನ್ನ ಬಡಿದು ಭವ ರೋಗವ ಕಳೆಯೋ
ಉನ್ನತ ಪದವಿಗೇರುವ ದಾರಿ ತೋರೋ ।
ಘನ್ನ ಮಹಿಮ ನಿನ್ನ ಹೊರತು ಮತ್ಯಾರೋ
ಎನ್ನ ಅಂಕಿತ ನಾಮ ಹರಿಯನ್ನ ತೋರೋ ೨

ಹಂಬಲ ಕೊಡು ಎನಗೆ ಹರಿಪಾದದಲ್ಲೀ
ನಂಬಿ ತುತಿಪೆನಯ್ಯ ತವ ಪಾದದಲ್ಲೀ ।
ಬಿಂಬ ಗುರು ಗೋವಿಂದ ವಿಠ್ಠಲನಲ್ಲಿ
ಹಂಬಲ ಸ್ಥಿರವಾಗಿ ನಿಲಿಸೋ ನೀನಲ್ಲೀ ೩

४೭೬

ಗುರುವೆ ನಮ್ಮ ತಾಯಿ ತಂದೆ । ಗುರುವೆ ನಮ್ಮ ಬಂಧುಬಳಗ
ಗುರುವೆ ನಮ್ಮ ಸರ್ವಸ್ವವು ಗತಿಗೋತ್ರರಯ್ಯಾ ಪ

ತಂದೆ ತಾಯಿ ಮಗುವಿಗಾಗಿ । ನೊಂದಿ ಬಳಲಿ ಸಾಕುವಂತೆ
ಎಂದೆಂದು ಅವರೆ ನಮ್ಮ ಸದುಪದೇಶದೀ ।
ಬಂಧನಕ್ಕೊಳಗಾಗದಂತೆ । ಮಂದರೋದ್ಧರನ ನಾಮ
ಅಂದದಿಂದ ಬೋಧಿಸುತ್ತ । ಉದ್ಧರಿಸುವರಯ್ಯಾ ೧

ಮುದ್ದು ಮೋಹನದಾಸರಿಂದ । ಬದ್ಧಶಿಷ್ಯರೆನಿಸಿಕೊಂಡು
ಶುದ್ಧರು ಅವಧೂತರು । ಹರಿಯನ್ನೆ ಕಂಡೂ ।
ಗೆದ್ದು ತಾವು ಬಂಧದಿಂದ । ಉದ್ಧರಿಸಲನ್ಯರನು
ಸಿದ್ಧರಾಗಿ ಕರಿಗಿರೀಲಿ । ದಾಸಕೂಟ ನೆರೆಸೀದ ೨

ಮಂಕುಮತಿಯ ತೊಡೆಯುತ್ತ । ಲೆಂಕತನದಿ ಬದ್ಧರೆನಿಸಿ
ಅಂಕಿತಗಳುಪದೇಶ । ಬಿಂಕದಿಂ ಗೈದೂ ।
ಶಂಕರ ಸನ್ನುತ ಗುರು । ಗೋವಿಂದ ವಿಠಲನೆ
ಶಂಕೆ ರಹಿತಾಗಿ ಪರ । ವಸ್ತುವೆಂದು ಬೋಧಿಸಿದ ೩

೪೭೭

ತಂದೆ ಮುದ್ದು ಮೋಹನ್ನ ತವ ಚರಣ ಕಾನಮಿಪೆ
ಬಂದೆನ್ನ ಸಲಹ ಬೇಕೋ ಪ

ಎಂದೆಂದಿಗೂ ನಿಮ್ಮ ಪದ ಧ್ಯಾನವಿತ್ತು ಭವ
ಬಂಧನವ ಬಿಡಿಸಬೇಕೋ । ಕರುಣೀ ಅ.ಪ.

ಅಂಕಿತವನಿತ್ತೆ ಮನಪಂಕ ಹರಿಸೀ ಹರಿ
ಕಿಂಕರರ ಸಂಗ ಸಲಿಸೋ ।
ಸಂಕಟವ ಪರಿಹರಿಪ ವೆಂಕಟೇಶನ ಪಾದ
ಪಂಕಜಕೆ ಮಧುಪ ನೆನಿಸೋ ।
ಶಂಕೆಗಳು ಎಂದೆನಿಪ । ಸೊಂಕು ಜಾಡ್ಯವ ಹರಿಸೆ
ಡೊಂಕು ಮನ ವೈದ್ಯನೆನಿಸೋ ।

ಮಂಕುಮತಿಯಾದೆನಗೆ ಅಕಲಂಕ ಮಹಿಮನನ
ಲೆಂಕತನವನೆ ಇತ್ತು ಕಾಯೋ । ಕರುಣೀ ೧

ಚಿರಕಾಲ ನಿಮ್ಮಡಿಯ ಸೇವೆ ಮಾಡಲು ಇಲ್ಲ
ನರಹರಿಯ ಭಜಿಸಲಿಲ್ಲ ।
ಮರುತ ಮತವನೆ ಮಥಿಸಿ । ತರತಮ ಜ್ಞಾನವನು
ನಿರುತ ಭಜಿಸಲು ತಿಳಿಯದೋ ॥
ಇರಲು ಈ ಪರಿ ನಾನು । ಪುರುಷಾರ್ಥ ಪಡೆವುದಕೆ
ವರಮಾರ್ಗ ತೋರೊ ನೀನು
ಹರಕು ಮಾನವ ಎನ್ನ । ಮರುಕದಿಂದಲಿ ನೋಡಿ
ವಿರಕುತಿಯನಿತ್ತು ಸಲಹೋ । ಕರುಣೀ ೨

ಲೆಕ್ಕವಿಲ್ಲದ ದೇಹ ಗೇಹಾದಿಗಳ ಪೊಕ್ಕು
ಸಿಕ್ಕಿನಿಂದ್ನೊಂದೆನೋ ।
ಕಕ್ಕಸದ ಸಂಸಾರ । ಅಕ್ಕರವು ಎಂದೆನುತ
ಮರ್ಕಟನ ತೆರನಾದೆನೋ ।
ಸೊಕ್ಕು ಮೂರ್‍ಯೈದನ್ನ । ಮುಕ್ಕಿ ಕಾಡುತ್ತಿರಲು
ನಕ್ಕು ನೀ ನೋಳ್ಪುದೇನೋ ।
ಪಕ್ಕಿವಹ ದೇವ ಗುರು ಗೋವಿಂದ ವಿಠ್ಠಲನ
ಅಕ್ಕರದಿ ತೋರಯ್ಯಾ । ಕರುಣೀ ೩

೪೭೮

ತಂದೆ ಮುದ್ದು ಮೋಹನ್ನಾ । ನಮಿಪೆ ಗುರು
ಇಂದಿರೇಶನ ಪ್ರೀಯನ್ನ ॥
ಸುಂದರ ಮೃಗಧರ । ಇಂದು ಧರನ ಸಖನ
ಛಂದಾಗಿ ಭಜಿಪ ದೇ । ವಾಂಶ ಸಂಭೂತನೆ ಅ.ಪ.

ದಣಿಸುವರ್ದನುಜರೆಲ್ಲಾ । ನೀನರೆ ಎನ್ನ
ಮನಕಭಿಮಾನಿ ಎನಿಸೀ ॥

ಘನವೇನೊ ನಿನಗಿದು । ದನುಜ ದಲ್ಲಣನೆನಿಸಿ
ಮನದ ಡೊಂಕನು ತಿದ್ದಿ । ಮನುಜ ನೆನಿಸೊಯೆನ್ನ ೧

ಮುಕುತಿ ಮಾರ್ಗಕೆ ಸಾಧನಾ । ಎನಿಸಿ ಮೆರೆವ
ಭಕುತಿ ವಿರಕುತಿ ಸುಜ್ಞಾನ ॥
ಸುಖ ತೀರ್ಥ ಮತದೊಳು । ಸುಖಿಸುವ ಸೌಭಾಗ್ಯ
ಸುಖವ ನೀ ಪಾಲಿಸೊ । ಕಕುಲಾತಿಯನೆ ಹರಿಸೀ ೨

ಎರಗಿ ಬೇಡುವೆ ಪಾವನಾ । ಕಾಯನೆ ನಿನ್ನ
ಮೊರೆಯ ಹೊಕ್ಕನೊ ಸಂಪನ್ನಾ ॥
ಗುರು ಗೋವಿಂದ ವಿಠಲನ । ಚರಣ ಪಂಕಜ ಧ್ಯಾನ
ನಿರುತದಿ ಮಾಳ್ಪನೆ । ಕರಿಗಿರಿ ವಾಸನೇ ೩

೪೭೯

ತಂದೆ ಮುದ್ದು ಮೋಹನ ।
ನಿನ್ನಂದ ಪಾದದಿ ಬಿದ್ದಿಹೆ ಪ

ನಂದ ನಂದನ ಚರಣಗಳ ಅರ ।
ವಿಂದ ತೋರಿ ಪೊರೆಯೊ ನೀ ಅ.ಪ.

ಇಂದಿರೇಶನ ಶಯ್ಯನಂಶ । ದಿಂದ ಜಾತರೆನಿಪರೇ ।
ಬಂಧುರಾತ್ಮ ಜ್ಞಾನವಿತ್ತು । ತಂದೆ ಕಾಯೋ ಕರುಣಿಸೀ ೧

ಮುದ್ದು ಮೋಹನ ಕರಜನಾಗಿ । ವಿದ್ವಜ್ಜನರ ಪ್ರೀಯನೇ ।
ತಿದ್ದಿ ಎನ್ನಯ ಮನದ ಡೊಂಕನು । ಬುದ್ಧಿ ನಿಲಿಸು ಹರಿಯಲಿ ೨

ಹತ್ತು ನೂರು ಮತ್ತೆ ನೂರು । ಹತ್ತಾರೈದು ಅಂಕಿತಾ
ಬಿತ್ತಿ ಬೆಳೆಸಿದೆ ಶಿಷ್ಯವೃಂದ । ಚಿತ್ತದಲಿ ನೆಲಸಯ್ಯ ನೀ ೩

ಏಸು ಜನುಮದ ಸುಕೃತದಿಂದ । ದಾಸ ನಾ ನಿನಗಾಗಿಹೇ
ಕ್ಲೇಶ ಮತ್ತಾನಂದವೆರಡು । ಶ್ರೀಶನ್ವಶವೆಂದು ತಿಳಿಸೊ ನೀ ೪

ಗುರು ಗೋವಿಂದ ವಿಠ್ಠಲಾನ । ತೋರಿ ನಿನ್ನ ಹೃದಯದೊಳಗೇ
ಪಾರು ಗೈಸೊ ಭವದ ತಾಪ । ಸಾರ ಹೃದಯನೆ ಸಾಧು ಸಾಧು ೫

೪೮೦

ತಂದೆ ಮುದ್ದು ಮೋಹನಾ । ನಿನ್ ।
ಅಂದ ಪಾದವ ಭಜಿಸುವೆ ಪ

ನಂದ ಕಂದನ ತಂದು ತೋರಿಸಿ ।
ಬಂಧನವ ಪರಿಹರಿಸು ನೀ ಅ.ಪ.

ನರಸಿ ಪುರದೊಳು ಉದಿಸಿ ನೀ । ನರಹರಿಯನೇ ಭಜಿಸಿದೇ
ಎರಡು ಹತ್ತು ಆರು ವತ್ಸರ । ತರಳನಾಗಿರುವಾಗಲೇ ೧

ಹರಿಯ ವ್ಯಾಪ್ತಿಯ ಕಂಡು ನೀ । ಗಿರಿ ಗುಹೇಯಲಿ ಚರಿಸುತಾ
ತೊರೆದು ಮಮತೆಯ ಚರಿಸಿದೇ । ಕರೆಕರೆಯ ಸಂಸಾರದೀ ೨

ತಪವನಾಚರಿಸುತ್ತಲೀ । ವಿಪಿನವಸಿ ಸಂಚರಿಸುತಾ
ವಿಪವರಸ ಪೆಗಲೇರಿದವನ್ನ । ಅಪರೋಕ್ಷದಿ ಕಾಣುತಾ ೩

ನಡುನಡುವೆ ಮನೆಗೈದುತಾ । ಮಡದಿಯನೆ ತಕ್ಕೈಸುತಾ ಎಡ
ಬಲದ ಒಡನಾಡಿ ಜನ ಕಡು । ಮೋಹಬಡುವಂತಾಡುತಾ ೪

ಇಭಗಿರೀ ರಥೋತ್ಸವಕ್ಕೇ । ಪ್ರಭು ಮುದ್ದು ಮೋಹನ ದಾಸರು
ವಿಭವದಿಂದಲಿ ಬಂದು ನಿಮಗೆ । ಶುಭದ ಅಂಕಿತವಿತ್ತರು ೫

ಶಾಂತ ಚಿತ್ತದಿ ಜಪಿಸುತಾ । ಮಂತ್ರ ಸಿದ್ಧಿಯ ಪಡೆಯುತಾ
ಭ್ರಾಂತ ಜನರನು ಭಕ್ತಿ ಪಂಥದಿ । ನಿಂತು ನಲಿವಂತೆ ಮಾಡುತಾ ೬

ಸಾಹಸ್ರಾರಂಕಿತವನಿತ್ತೂ । ಮಾಹಿತಾಂಘ್ರಿಯ ಭಜಿಸಿದಾ
ಸಾಹಸಿಗ ಶೇಷಾಂಶ ಭಕ್ತರ । ಮೋಹ ಕಳೆದುದ್ಧರಿಸಿದಾ ೭

ನಕ್ರಹರಗತಿ ಪ್ರೀತನಾ । ವಿಕ್ರಮದಿ ಸಂಸ್ಥಾಪಿಸೀ
ಚಕ್ರಿಪುರಿಗಾ ರಾಮನವಮಿಲಿ । ವಿಕ್ರಮದಿ ನೀ ಹೊರಡುತಾ ೮

ಗರುಡ ಅಹಿ ಭವ ವಂದ್ಯನಾ । ಗುರುಗೋವಿಂದ ವಿಠಲನ
ನಿರುತ ಭಜಿಸುವ ಜ್ಞಾನವಾ । ಕರುಣಿಸೀ ಸಲಹೆನ್ನನು ೯

೪೮೧

ತಂದೆ ಮುದ್ದು ಮೋಹನ್ನಾ ನಿನ್ನಯ
ದ್ವಂದ್ವ ಪಾದವ ತೋರಣ್ಣಾ ಪ

ಕಂದನ ಕುಂದನು ಒಂದನು ಎಣಿಸದೆ
ಬಂದು ನಿಲ್ಲೊ ಮನ ಮಂದಿರದೊಳು ನೀ ಅ.ಪ.

ವಾಕು ಮನ್ನಿಸಿ ಕೇಳೋ ಪ
ರಾಕು ಪೇಳುವೆ ಓಹೋ ।
ಸಾಕು ಮಾಡು ಈ ಭವದ ಸಂಗವನು ।
ಸ್ವೀಕರಿಸೆನ್ನ ಕೃಪಾಕರ ಮೂರುತಿ ೧

ಆಸುರಿ ಮಾನಿಗಳೂ ಬಲು
ಘಾಸಿಸುವರು ಕೇಳೊ ।
ವಾಸವ ಗುರವೇ ಪೋಷಿಸು ಎನ್ನನು
ಮೀಸಲೆನಿಸಿ ಮನ ಶ್ರೀ ಶನ ಪದದಲಿ ೨

ಉರುಗಾದ್ರಿ ವಾಸನ್ನ ತದಾತ್ಮಕ
ಗುರುಗೋವಿಂದ ವಿಠಲನ್ನ ।
ಚಾರು ಪದವ ತೋರೊ ಹೃತ್ಸರಸಿಜದಲಿ
ಸಾರಿದುದಕೆ ತವ ಚಾರು ಚರಣವನು ૩

४೮೨

ತಂದೆ ಮುದ್ದು ಮೋಹನ್ನ । ನೀ ಕಾಯಬೇಕೆನ್ನ
ವಂದಿಸಿ ಬೇಡುವೆ । ಭಕ್ತ ಪಾವನ್ನ । ಜೋ ಜೋ ಪ

ಕರಿಗಿರಿ ಕ್ಷೇತ್ರದಲಿ । ನೀ ಈಗ ನೆಲಿಸೀ
ಗುರವಾರ ಪಂಚಮೀ । ಮಾರುತಿಯ ನಿಲಿಸೀ । ಜೋ ಜೋ ೧

ಭೂಸುರರ ಉದ್ಧಾರ । ಗೈಯ್ಯ ಬೇಕೆಂದೂ
ದಾಸ ಭಾವವ ತೋರಿ । ನೀಮೆರೆದೆ ಜಗದೀ । ಜೋ ಜೋ ೨

ಸೂಸಿ ಬಹ ದಾಸರಿಗೆ । ಅಂಕಿತಗಳಿತ್ತೂ
ದಾಸ ಪಂಥವ ತೋರ್ದಿ । ಸಜ್ಜನರಿಗೆಲ್ಲಾ । ಜೋ ಜೋ ೩

ಐಸು ಜನುಮದ ಪುಣ್ಯ । ರಾಶಿ ಒದಗಿತೊ ಎನಗೇ
ಕ್ಲೇಶನಾಶನ ಗುರು । ಪಾದವಾ ಶ್ರೈಸಿದೇ । ಜೋ ಜೋ ೪

ಕಂದರ್ಪ ಜನಕ ಗುರು । ಗೋವಿಂದ ವಿಠ್ಠಲನೇ
ತಂದೆ ಮುದ್ದು ಮೋಹನ್ನ । ವಿಠ್ಠಲನೆ ಎಂದೂ ಜೋ ಜೋ ೫

४೮೩

ತಂದೆ ಮುದ್ದು ಮೋಹನರ ಪೊಂದಿ ಭಜಿಸಲು
ನಿತ್ಯ ಇಂದಿರಾಧವನೊಲಿಮೆ । ಸಂಧಿಸುವುದೂ ಪ

ಪರಮ ಪ್ರಿಯ ಗುರುವರ್ಯ ನರಸಿಪುರ ದಾಸರ
ಪರಮ ಮಂಗಳ ನಾಮ ಸುಸ್ತವನದೀ ॥
ಉರುತರದ ಸಂಚಿತವು ಮಿಂಚಿನಂದದಿ ಕರೆಗು
ಗರುವ ವೇತಕೊ ಮನುಜ ಭಜಿಸೊ ನಿತ್ಯಾ ೧

ಪತಿತರುದ್ಧಾರಕರು । ಕ್ಷಿತಿಯೊಳಾರುಂಟಿನ್ನು
ಮತಿ ವಿಕಳರಾದವರ । ಸಂತೈಪರ್‍ಯಾರೊ ॥
ಹತಭಾಗ್ಯನಾಗಿದೆ । ತವ ಸೇವೆ ದೊರಕದಲೆ
ಗತಿ ಗೋತ್ರರೊದಗಿರಲು । ಪಥ ದೊರಕಿತೆನಗೆ ೨

ಶ್ರೀದಾಸಗುರುತಿಲಕ । ಮೋದತೀರ್ಥರ ಪ್ರೀಯ
ಭೇದಾಗಮಜ್ಞಾನಿ ಪ್ರಾಜ್ಞ ಮೌಳೀ ॥
ಆದರಿಸಿ ಉದ್ಧರಿಸು । ಮೋದಮಯ ರತ್ನನೇ
ವಾದಿಗಜ ಪಂಚಾಸ್ಯ । ಬುಧಜನರ ಪ್ರೀಯಾ ೩

ಜ್ಞಾನ ಪ್ರಕಾಶನೇ । ಜ್ಞಾನ ಮಾರ್ಗವ ತೋರ್ವ
ಪೂರ್ಣೇಂದು ಮತ್ತುದಯ । ಘನಗುಣಜ್ಞಾ ॥
ಮೌನಿವರ ಕರುಣಿಸಿ । ನಿನ್ನಕಾಂಬುವ ಹದನ
ನೀನೆ ತಿಳಿಸಲಿ ಬೇಕು । ಆ ನಮಿಪೆ ನಿನ್ನ ೪

ಮುದ್ದು ಮೋಹನ ದಾಸ ಪದಕಮಲ ಭೃಂಗನೇ
ಸಿದ್ಧಜನ ಸನ್ಮೌಳಿ । ತಿದ್ದಿ ಮನ್ಮನವಾ
ಮಧ್ವಾಂತರಾತ್ಮಗುರು । ಗೋವಿಂದ ವಿಠಲನ
ಮದ್ಗುರುವೆ ಮನ್ನನದಿ । ಸಿದ್ಧಿಸೋ ಜೀಯಾ ೫

೪೮೪

ತೆರಳಿದರೋ ತಂದೆ ಮುದ್ದು ಮೋಹನರೂ
ಮರಳಿ ಬಾರವ ಪುರಿ ನರಹರಿ ಪೂರಕೇ ಪ

ತರಳತನಾರಭ್ಯ ದ್ವಾದಶ ವತ್ಸರ
ಪರಿಸರಾಗಮ ಪಠಿಸಿ ನಿಪುಣನೆನಿಸೀ ।
ಇರಲು ಬಂದರು ಮುದ್ದು ಮೋಹನ್ನದಾಸರು
ಕರಿಗಿರಿ ನರಹರಿ ರಥವ ಉತ್ಸವಕೇ ೧

ಕರಿಗಿರಿ ಸನಿಯದ ನರಸಿಪುರದೊಳಿದ್ದ
ವರಸುಬ್ಬರಾಯಾಖ್ಯ ಭರದಿಂದ ಬರುತಾ ।
ಗುರು ಮುದ್ದು ಮೋಹನರ ಪದಪಾಂಸು ಶಿರದಲ್ಲಿ
ಧರಿಸಿ ಬಿನ್ನವಿಸಿದರುಪದೇಶ ಕೊಂಡಿರೆಂದೂ ೨

ಪರಿಕಿಸಲೋಸುಗ ಅರುಣ ಉದಯ ಮುನ್ನ
ಕರಿಗಿರಿ ಪುರಬಿಟ್ಟು ತೆರಳಲು ಅವರೂ ।
ಭರದಿ ಅಡ್ಡೈಸುತ ಗುರುಪಾದದಲಿ ಬಿದ್ದು
ವರ ಉಪದೇಶವ ಕೈಗೊಂಡ ಧೀರಾ ೩

ಅಂದೇ ಬರುತ ನರಹರಿಯ ಸಮ್ಮುಖ ಭೂ
ವೃಂದಾರಕನಿಗೆ ಶುಭ ಅಂಕಿತವಾ ।
ತಂದೆ ಮುದ್ದು ಮೋಹನ್ನ ವಿಠ್ಠಲನೆಂದು
ಛಂದೋಗಮ್ಯನೆ ದಿವ್ಯ ನಾಮವನಿತ್ತರು ೪

ದಾಸ ದೀಕ್ಷೆಯ ಪೊತ್ತು ದಾಸ ಕೂಟವ ನೆರಸಿ
ಶೇಷಗಿರೀಶನೆ ಸರ್ವೇಶನೆನುತಾ
ಎಸೆವ ಅಂಕಿತ ಮಂತ್ರ ಉಪದೇಶಗೈಯ್ಯುತ್ತ
ದಾಸರ ಕ್ಲೇಶವ ಹರಿಸೀದ ಗುರುವೇ ೫

ವರಚೈತ್ರ ಪಂಚಮಿ ವರುಷವು ವಿಕ್ರಮ
ಶರಣರ ಪೊರೆಯಲು ಕರಿಗಿರಿಯಲ್ಲೀ ।
ಗುರು ಮುಖ್ಯ ಪ್ರಾಣ ಪ್ರತೀಕವ ನಿಲಿಸುತ
ಆರು ಮೂರನೆ ದಿನ ಹರಿಯ ಸೇರುವೆ ನೆನುತಾ ೬

ನರಲೀಲೆ ಕೊನೆಗೈದು ಪರಮ ಪುರುಷಹರಿ
ಶಿರಿಯರಸಗೆ ಪ್ರೀತೆ ಪಾತ್ರನೆನಿಪಾನೂ ।
ವರ ಗುರು ಗೋವಿಂದ ವಿಠಲನ ಚರಣವ
ಸ್ಮರಿಸಿ ಹಿಗ್ಗುತ ಪೊರಟ ನೀರಿಕ್ಷಿಸುತಾ ೭

೪೮೫

ದಾಸರ ಭಾಗ್ಯವಿದು ಪ

ತಂದೆ ಮುದ್ದು ಮೋಹನ ದಾಸರ ಭಾಗ್ಯವಿದು ಅ.ಪ.

ಕರಿಗಿರಿ ನರಹರಿ ಸಂದರ್ಶನವು ।
ನರಹರಿ ಭಕುತರ ವಿಹಿತದಸೇವೆ ।
ಪರಿಪರಿ ಗೈಯ್ಯುತ ಹಿಗ್ಗುತ ನಾನು ।
ಧರಿಸಿರುವಂಕಿತ ಭಾಗ್ಯವು ಎಲ್ಲಾ ೧

ಉರುಗಾದ್ರಿವಾಸನ ಶರಣರ ಕೂಡೆ ।
ಸರಸದಿ ಕೇಳುತ ಹರಿ ಮಹಿಮೆಯನು
ಉರುತರ ಸುಖಸಂತೋಷದಿ ಕೀರ್ತನೆ ।
ಹಿರಿದಾಗಿ ಪಾಡುತ ನರ್ತಿಪುದೆಲ್ಲ ೨

ಭವನಿಧಿ ದಾಟಿಪ ಹವಣೆಯು ಎನಿಸುವ ।
ಭುವನ ಮೋಹನನ । ಗುಣರೂಪಗಳ
ನವನವ ಕೀರ್ತನೆ ಸ್ತವನದಲಿ ಗುರು ।
ಗೋವಿಂದ ವಿಠಲ ನುಡಿಸುವುದೆಲ್ಲಾ ೩

೪೮೬

ದಾಸರಾಯಾ ತಂದೇ ಮುದ್ದು ಮೋಹನ । ದಾಸರಾಯ ಪ

ಶೇಷನ ಸಮ ನೀ ದಾಸರ ಪಾಲಿಸೆ
ಭಾಸುರ ಕರಿಗಿರಿ ವಾಸಿಸಿದೆ ನೀ ಅ.ಪ.

ಕರಿಗಿರಿ ಗುಹೆಯಲಿ ಎರಡೈದ್ವತ್ಸರ
ವರ ತಪ ಗೈದ ಪರೋಕ್ಷವ ಪಡದೇ ೧

ಪಾಪಿಗಳುಸುರುವ ತಾಪದ ವಚನಕೆ
ಕೋಪಿಸದಲೆ ನೀ ಪಾಲಿಸುವೀಯಾ ೨

ಇಂದಿಗೆ ಸಂದವು ವಿಂಶದ್ವತ್ಸರ
ಕುಂದದೆ ಸಾಕಿದೆ ಪರಮಾರ್ಥೇಂದುವ ೩

ಪ್ರಮಾಥಿ ವತ್ಸರ ವದ್ಯ ಸುಫಾಲ್ಗುಣ ಪಂ
ಚಮಿಯಲಿ ಮಾರುತಿಯನು ಸ್ಥಾಪಿಸಿದೇ ೪

ಭಾರತೀಶ ಮುಖ್ಯ ಪ್ರಾಣಾಂತರ್ಗತ
ಗುರು ಗೋವಿಂದ ವಿಠ್ಠಲ ಪರನೆಂದು ಸಾರಿದೆ ೫

೪೮೭

ನಮಾಮಿ ತಂದೆಯೇ । ಮುದ್ದುಮೋಹನಾ
ನತೋಸ್ಮಿ ಸಿದ್ಧರೇ । ತ್ವತ್ವದಾಂಬುಜಂ ಪ

ಪುರಾಕೃತಾಮಯಾ । ಸುಕೃತ ವೆಂಥದೋ
ಗುರುಗಳ್ ನಿಮ್ಮಯಾ । ಕರುಣದೊರಕಿತು ೧

ವಿಲಸಿತಾಮಲಾ ನಿ । ಷ್ಕಲ್ಮಷ ಹೃದಯರೇ
ಆಲವಾ ಬೋಧರಾ । ಒಲವ ಪಡೆದರೇ ೨

ಹಲವು ಜನುಮದೀ । ಬಳಲಿ ಬಂದುದಾ
ತಿಳಿದು ನೀವೆನ್ನಾ । ಪಾಲಿಸೀದಿರಿ ೩

ಅಂಕಿತಲ್ಲವೇ । ಪಂಕಜಾಕ್ಷನಾ
ಲೆಂಕತನವೆಲ್ಲಾ ಕ । ಳಂಕ ವಿಹಿತವೂ ೪

ಎಂದು ಕರುಣೆಯಿಂ । ತಂದೆ ವೆಂಕಟನಾ
ಹೊಂದಿ ಭಜಿಪರಾ । ಅಂದು ಪ್ರೇರಿಸೀ ೫

ಕರೆದು ಎನ್ನನೂ । ತೆರಳು ಎನುತಲೀ
ಒರೆದು ಮತಿಯನೂ । ದಾರಿ ತೊರ್‍ದಿರೀ ೬

ಸೋಮ ಶೇಖರಾ । ಸಮ ಪದಸ್ಥನೇ
ಸಾಮಾಜಾದ್ರಿಲೀ । ಪ್ರಮಾಥಿವತ್ಸರಾ ೭

ವದ್ಯ ಫಾಲ್ಗುಣಾ । ಪ್ರತಿಪದಾದಿನಾ
ಆದಿವಾರದೀ । ವಿದಿತ ಮಾರ್ಗದೀ ೮

ಗುರು ಗೋವಿಂದನಾ । ನಾಮ ತಾರಕಾ
ಅರುಹೀ ಪ್ರೀತಿಲೀ । ದಾರಿ ತೋರ್ದಿರೀ ೯

ಕೋಮಲಾಂಗನೇ । ನಿಮ್ಮ ಮಹಿಮೆಯಾ
ಪಾಮರಾನು ನಾ । ಗಮಿಸಲಾಪನೇ ೧೦

ಗತಿಯೆ ನೀವೆಂದೂ । ಸತತ ತುತಿಸುವೆ
ಅತುಳ ಮಹಿಮರೇ । ಹಿತವ ಮಾಡಿರಿ ೧೧

ತವ ಪದಾರ್ಚನೇ ತ್ರಿ । ಸವನ ಸಂಧ್ಯವೂ
ಹವನ ಹೋಮವೂ । ಭವದ ಶೋಷವೂ ೧೨

ನೀವೆ ಬಂಧುವೂ । ನೀವೆ ಬಳಗವೂ
ನೀವೆ ತಾಯಿಯೂ । ನೀವೆ ತಂದೆಯೂ ೧೩

ನಿಂತು ನೀವೆನ್ನಾ । ಅಂತರಂಗದೀ
ಮಂತವ್ಯ ರಂಗನಾ ಚಿಂತೆ ಪಾಲಿಸೀ ೧೪

ಗುರು ಗೋವಿಂದ ವಿಠಲನಾ । ಸುರಚಿರಾಮಲಾ
ಚರಣ ಪುಷ್ಕರ । ಸ್ಮರಿಪ ಗುರುವರಾ ೧೫॥

೪೮೮

ನೋಡಿದ್ರ್ಯಾ ಕಂಡಿದ್ರ್ಯಾ ಶ್ರೀಸುಬ್ಬರಾಯ ದಾಸರ್ಯರಾ ಪ

ಕಾಡೂವ ಭವದ ದೂರೋಡಿಪ ಮಾರ್ಗದ
ಜಾಡನೆ ತಿಳಿಸುವಾಗಾಢ ಮಹಿಮರ ಅ.ಪ.

ವ್ಯಾಸೋಪತಿಷ್ಟ ಪುರಂದರ । ದಾಸರ ಪೀಳಿಗೆ ಶರಧಿ
ಗಾಶಶಿಗೊಪ್ಪುವ ದಾಸವರ್ಯರನ ೧

ಮುದ್ದು ಮೋಹನ ಗುರು । ಮುದ್ದು ಶಿಷ್ಯರು ತಂದೆ
ಮುದ್ದು ಮೋಹನರು । ಪ್ರಸಿದ್ಧರಾಗಿಹರಾ ೨

ಆರ್ತರುದ್ಧರ ಪರ । ಮಾರ್ಥ ಚಂದಿರ ಹರಿ
ಕೀರ್ತನೆ ಗೈವ ಸ । ತ್ಪಂಥ ಬೀರಿದರಾ ೩

ಅಂಕಿತರಹಿತ ನಿ । ಷಿದ್ಧ ದೇಹವು ಎಂದು
ಅಂಕನಗೈಧರಿ । ಲೆಂಕತನವ ಬೀರ್ದರ ೪

ಸಹಸ್ರಾರು ಅಂಕಿತ । ವಿಹಿತೋಪದೇಶ ಸ–
ನ್ನಿಹಿತರ ಗೈದೂ । ದ್ಧರಿಸಿದ ಗುರುಗಳ ೫

ದಾಸಕೂಟಾಬ್ಧಿ ತಾ । ರೇಶನ ಪರಿಯಲಿ
ಭಾಸಿಸಿ ಶರಣರ । ಪೋಷಿಸಿದವರನು ೬

ಸಾರ ಶಾಸ್ತ್ರದ ಸವಿ । ಆರು ಮೊಗನ ಪರಿ
ಆರು ಬಗೇಯಲಿ । ಬೀರಿದ ವರನ ೭

ಸುಂದರೇಶ ಪ್ರಾಣ । ಅಂದ ಪ್ರತೀಕವ
ಅಂದೇಭ ಗಿರಿಯಲ್ಲಿ । ಚಂದದಿ ನಿಲಿಸಿದರ ೮

ಪ್ರಥಮ ಮಾಸವು ವರ । ಸಿತ ನವಮಿ ಮಧ್ಯಾಹ್ನ
ಪೃಥುವಿ ಸಂಬಂಧವ । ಮತಿಯಿಂದ ತ್ಯಜಿಸಿದರ ೯

ಬಂದ ಭಕುತರ ಸೇವೆ । ಚಂದಾಗಿ ಕೊಳ್ಳುತ
ಒಂದಂಶದಿಂದಲ್ಲಿ । ಇಂದು ಕರಿಗಿರಿಲಿಹರ ೧೦

ಗೋವಿದಾಂಪತಿ ಗುರು ಗೋವಿಂದ ವಿಠಲ ಪ
ರಾವರೇಶನು ಎಂದು । ಓವಿ ತುತಿಸುತ್ತಿಹರ ೧೧

೪೮೯

ಪರಮಪ್ರೀಯಾ ದಾಸರಾಯಾ । ಸತ್ಕವಿಜನಗೇಯಾ ಪ

ಶರಣರ ಸುರತರು । ಕರಿಗಿರಿ ನಿಲಯನೆ
ಉರುಗಾಯನ ಸಂದರುಶನ ಕೊಡಿಸಯ್ಯ ಅ.ಪ.

ಆಮ್ನೂರೇಳು ನಾಲ್ಕೆಂಟು ಗ್ರಂಥ । ಅವುಗಳ ಸಾರಾರ್ಥ
ಸಾರುತ್ತ ಭಕುತರಿಗೆ ಪುರುಷಾರ್ಥ । ಮಾರ್ಗವ ತೋರುತ್ತ ॥
ಚಾರು ಚರಿತ ಶ್ರೀರಮಾರಮಣನಗುಣ
ವಾರಿಧಿಯೊಳು ಬಹು ಈಸಿದ ನಿಪುಣ ೧

ಸಾಸೀರ ದಶನವತೀ ವತ್ಸರದಿ । ಕರಿಗಿರಿದುರ್ಗದಿ
ಲೇಸಾಗಿ ಶರಣರ ಸಭೆ ನೆರೆಸೀ । ಸುಜನರ ಸತ್ಕರಿಸೀ ॥
ದಾಸಕೂಟ ಸಂಸ್ಥಾಪಿಸಿ ಗಿರಿಯಲಿ
ಮಾಸಲಾದ ಪಥ ಪುನರುದ್ಧರಿಸಿದ ೨

ಪರತತ್ವ ಸಾರಾಂಬುಧಿ ಬೆಳಗುವನ ಪರಿಪರಿಕಲೆಯವನ
ಶರಣರ ಹೃತ್ತಾಪವ ಹರಿಸುವನ । ನಿರತೈಕರೂಪನನ
ಪರಮಾರ್ಥೇಂದು ವರೋದಯ ಕರುಣಿಸಿ
ಧರಣಿಯ ಸುರರನು ಪೊರದೆಯೊ ಗುರುವೆ ೩

ಅಂಕೀತವಿಲ್ಲದ ದೇಹಗಳೊಂದು । ನಿಷಿದ್ಧವೆಂದೂ
ಪಂಕಜಾಕ್ಷನ ನಾಮಗಳೊಂದೊಂದು । ಬಳಸುತ ನೀನಂದೂ
ಅಂಕನ ಗೈಧರಿ ಲೆಂಕತನವನಿತ್ತು
ಬಿಂಕದಿ ಜನ ಹೃತ್ಸಂಕಟ ಕಳೆದೀ ೪

ಬಿಂಬೋಪದೇಶವೆ ತಾರಕವೆಂದೂ । ನಿಸ್ಸಂಶಯವೆಂದೂ
ಹಂಬಾಲ ಹಚ್ಚುತ ಶರಣರಿಗೆಂದೆಂದೂ । ಕರುಣಾ ಸಿಂಧೂ
ಬಿಂಬನು ಗುರುಗೋವಿಂದ ವಿಠಲ ಪಾ
ದಾಂಬುಜದಲ್ಯನ ಹಂಬಲವಿರಿಸಿದೆ ೫

೪೯೦

ಪಾಲಿಸೊ । ಗುರುವರನೇ ಪಾಲಿಸೋ ಪ

ಪಾಲಿಸೊ ಗುರುವರ ಎನ್ನ । ಬಲು
ಬಾಲ ಭಾಷೆಗೆ ಒಲಿದಿನ್ನ । ಆಹ ।
ಕಾಲ ಕಾಲಕೆ ಹೃದ । ಯಾಲಯದಲಿ ನಿಂತು
ಶೀಲ ಗೋಪಾಲನ । ಲೀಲ ಧ್ಯಾನವನಿತ್ತು ಅ.ಪ.

ತಂದೆ ವೆಂಕ್ಟನಾ ಕೃಪಾ ಬಲದೀ । ಸಾರಿ
ಬಂದೆನೋ ಪೊಗಳುತ್ತ ಮುದದೀ । ನಿನ್ನ
ದ್ವಂದ್ವ ಪಾದವ ನೋಡೆ ಜವದೀ । ಭವ
ಬಂಧವ ಕಳೆಯಲೋಸುಗದೀ । ಆಹ ।
ಮಂದಾನ ಕರೆ ತಂದು । ಸಂದೇಶ ಎನಗಿತ್ತು
ಛಂದಾದಿ ಸಲಹಿದ್ಯೋ । ಸಿಂಧೂರ ಗಿರಿವಾಸ ೧

ಅಹಿನವಾಭಿಧ ಕಾಯೋಯನ್ನಾ । ಮನ
ಮೋಹ ಜಾಲವ ನೀಗೋ ಘನ್ನಾ । ಬಲು
ಕುಹಕ ಬುದ್ಧಿಯ ಬಿಡಿಸೆನ್ನಾ । ನಿನ್ನ
ನೇಹ ಕರುಣೀಸೆನಗೆ ಮುನ್ನ । ಆಹ

ವಿಹಗವಾಹನ ದೂತ । ಮಹಭಯ ವಾರಣ
ಸಹನಾದಿ ಗುಣವಂತ । ಪ್ರಹಿತಾದಿ ಸಲಹೆನ್ನ ೨

ಮುದ್ದು ಮೋಹನ ಗುರು ಬಾಲಾ ತಂದೆ
ಮುದ್ದು ಮೋಹನ್ನ ವಿಠ್ಠಲ್ಲಾ । ಸಿರಿ
ಮುದ್ದು ನೃಸಿಂಹನ ಲೀಲಾ । ಬಲು
ಮುದ್ದಿಸಿ ಪಾಡುವೆ ಬಹಳಾ । ಆಹ
ಮಧ್ವಾಂತರ್ಗತ ಗುರು । ಗೋವಿಂದ ವಿಠಲನೆ
ಹೆದ್ದ್ಯವ ವೆಂತೆಂಬ । ಶುದ್ಧ ಮತಿಯನಿತ್ತು ೩

೪೯೧

ವಂದಿಸಿ ಬದುಕಿ ತಂದೆ ಮುದ್ದು ಮೋಹನ ಗುರುಗಳ ಪ

ಇಂದಿರೆ ಅರಸ ಅಂದ ತಲ್ಪರಂಶರೆಂಬರಾ ಅ.ಪ.

ತರಳತನಾರಭ್ಯ ಹರಿಯ । ಪರಮ ಅನುರಾಗದಿಂದ
ಪರಿಸರಾನಂದ ತೀರ್ಥ । ಪರಮಮತ ವಿಚಾರದಲ್ಲಿ ।
ಅರೆಕ್ಷಣವು ಬಿಡದೆ ನಿರತರಾ । ಆತ್ಮ ಜ್ಞಾನ
ದರ್ಶನಾನುಷ್ಠಾನ ಚರಿಸುತಾ । ಭಕ್ತಿಯೇ ಸುಪ್ರ
ಚುರ ಪಂಥವನ್ನೆ ಮಾಡುತಾ । ಯುಕ್ತಿಯಿಂದ
ಚರಿಪ ಸರ್ವವೂ ಶ್ರೀಹರಿಯ । ಪರವು ಎಂದ ಕಡಿದ ಬಂಧ ೧

ವ್ಯಾಸ ಗ್ರಂಥ ಸದಾಭ್ಯಾಸಿ । ದಾಸಕೂಟವೆಂಬ ವರಜ
ಲಾಶಯಕೆ ಪರಮ ಅರ್ಥ ತಾ । ರೇಶನ್ನುದಿಸಿ ಭೂಸುರ
ಮನೋಲ್ಲಾಸ ಮಾಡಿ ಲೇಸಾಗಿ ಬೆಳಗುತ । ಜ್ಞಾನ
ಕಿರಣಸೂಸ್ಯನೇಕಾಂಕಿತಾಗಳ । ಇತ್ತು ಕರ್ಮ
ಹ್ರಾಸ ಮಾಳ್ಪ ಬಗೆಯ ತಿಳುಹುತ । ಕವನದಿಂದ
ಸಾಸಿರ ಪುಷ್ಪಮಾಲೆ ಹರಿಗಿತ್ತ ದಯವ ಪೊತ್ತ ೨

ಪರಮ ಪ್ರಿಯರುರು ಜ್ಞಾನ ರತ್ನ । ಬಿರಿದು ಪೊತ್ತು ದೇಶ ತಿರುಗಿ
ಶರಣ ಜನ ಕ್ಲೇಶ ಸಂಶಯಾ । ಹರಿಸಿ ಪವನ ಮತದಿ ದೀಕ್ಷೆಯಾ
ನಿರತಿಶಯದ ದಾಸದೀಕ್ಷೆಯ । ಇತ್ತು ಹೃದಯದಲ್ಲಿ
ಹರಿಯ ಮೂರ್ತಿಯನ್ನೆ ನೋಡುವ । ಶಾಸ್ತ್ರ ಸಮ್ಮತಿ
ಕೀರ್ತನೆಗಳ ನುಡಿಸಿದಾ । ಗುರು ಗೋವಿಂದ ವಿಠಲ ಪದ
ಸರೋಜ ರಜವ ಶಿರದೊಳ್ ಧೃತರ । ಕೃಪಾಕರರ ೩

೪೯೨

ವಂದಿಸುವೆ ನಾ ನಿಮ್ಮ । ದ್ವಂದ್ವ ಪಾದಕ್ಕೇ

ತಂದೇ ಮುದ್ದು ಮೋಹನ್ನ ವಿಠಲ ದಾಸಾರ್ಯ ಪ

ಇಂದಿರೆಯ ಪತಿಪಾದ । ಮನ್ಮನದಿತೋರುತಲಿ
ಬಂಧುರಾತ್ಮ ಜ್ಞಾನ । ಛಂದದಲಿ ತಿಳಿಸೋ ಅ.ಪ.

ತಂದೆ ಸಿರಿ ವೆಂಕಟನ । ನಂದದಲಿ ಭಜಿಸುವರ
ಅಂದ ಸಹವಾಸವನು । ಸಂಧಿಸಿದೆ ದಯದೀ ೧

ಆರು ಕಾಯುವರಿಲ್ಲ । ಸಾರಿದೆನೊ ತವ ಚರಣ
ಧೀರ ನೀ ಪೊರೆಯುವುದು । ಸಾರ ಸುಖ ಸಾಂದ್ರಾ ೨

ಚಾರು ಕುಂಡಲ ಭೂಷ । ತೋರೊ ಹೃದ್ವಾರಿಜದಿ
ಧೀರ ಗುರು ಗೋವಿಂದ । ವಿಠಲ ಪದಪದ್ಮಾ ೩

೪೯೩

ಸಾಮಜಾದ್ರಿ ನಿವಾಸ । ಮಮ ಹೃದಯ ।
ಸದ್ಧಾಮದಲಿ ಆವಾಸ ।

ಸೌಮನಸ್ಯವ ಕಾಮಿಸುವೆ ಮನಕೇಶ ।
ನಾ ನಿಮ್ಮ ದಾಸಾ ಪ

ಶ್ರೀ ಮನೋಹರನಂಘ್ರಿ ಕಮಲವ ।
ಯಾಮ ಯಾಮಕೆ ಭಜಿಸಿ ಹಿಗ್ಗುವ ಆ
ಮಹಾತ್ಮರ ಚರಣ ರಜವನು ।
ಕಾಮಿಸುವೆ ಕರುಣಾಳು ಗುರುವರ ಅ.ಪ.

ಘಾಸಿ ಪಡುತಲಿ ಬಂದ । ಪಾಪಾತ್ಮಯೆನ್ನಯ
ಕ್ಲೇಶ ಹರಿಸಲು ಛಂದ । ಅಂಕಿತವನುಪ
ದೇಷಿಸಿದೆ ನೀ ನಲವಿಂದ । ಕರುಣಾಳು ನಿನ್ನಯ
ದಾಸ ಜನಗಳ ವೃಂದ । ಸೇವೆ ಕೊಡು ಆನಂದ ॥
ವಿಷಯ ದಾಸೆಯ ಹರಿಸೊ ಗುರುವರ ।
ಬಿಸುರುಹಾಂಬಕನಂಘ್ರಿ ಕಮಲವ
ಒಸೆದು ಸ್ಮರಿಸುವ ಮತಿಯನಿತ್ತು ।
ಎಸೆವ ಹರಿಯಪರೋಕ್ಷ ಪಾಲಿಸೊ ೧

ಕರಿಗಿರಿಯಲಿ ನಿಂದು । ಪ್ರಾಣಪ್ರತೀಕವ
ಗುರು ದಿನದಿ ಸ್ಥಾಪಿಸು ತಂದೂ । ವತ್ಸರ ಸುವಿಕ್ರಮ
ವರ ನವಮಿ ಮಧ್ಯದಿನಂದೂ । ನಿಶ್ಚಯಿಸಿ ಮನದಲಿ
ನರನಟನೆ ಉಪರಮಿಪೆನೆಂದೂ । ತನುವ ತ್ಯಜಿಸಿದೆ ಅಂದೂ ॥
ಸಾರ ಭಕುತರು ಸೇವೆ ಗೈಯಲು । ಕರಿಗಿರೀಯಲಿ ಒಂದು ಅಂಶದಿ
ವರವ ಪಾಲಿಪುದಕ್ಕೆ ನೆಲೆಸಿದೆ । ಧೀರ ಕರುಣಾಪಾರ ಗುರುವೇ ೨

ಆರಿಗುಸುರೆಲೊ ನಾನೂ । ನಿನ್ನಂಘ್ರಿ ಕಮಲವ
ಸಾರಿ ಭಜಿಸುವೆ ನಿನ್ನೂ । ಜ್ಞಾನಾರ್ಕ ನಿನ್ನಯ
ಕರುಣ ದೊರಕಿಸೊ ಇನ್ನೂ । ಮೊರೆಹೊಕ್ಕ ಜನರ
ದೂರ ನೋಳ್ಪದೆ ನೀನು । ಆರ್ತರ್ಗೆ ಸುರಧೇನು ॥
ಬಾರಿ ಬಾರಿಗೆ ಬೇಡ್ವೆ ನಿನ್ನನು । ಮಾರುತಾಂತರ್ಗತನು
ಎನಿಪ ಧೀರ ಗುರು ಗೋವಿಂದ ವಿಠಲನ ಚಾರು
ಚರಣವ ತೋರು ಗುರುವೇ ೩

೪೯೪

ಶ್ರೀ ರಮಾ ವಿನುತ ಪದ ತಾಮರಸ ಪಲ್ಲವನೆ
ಸಾರಶೃತಿ ಪ್ರತಿಪಾದ್ಯ ವೇದಾಣಿ ಸನ್ನುತನೆ
ನೀರಜಜ ವಿಧಿ ಈರ ಖಗಪಾಹಿ ರುದ್ರಸುರ
ಪೂಜ್ಯ ತ್ರೈಧಾಮ ಹರಿಯೆ ॥
ಭೂರಿ ಕರುಣಾಪೂರ್ಣ ಶರಣರಿಗೆ ಫಲದಾತ
ವೀರ ವೈಷ್ಣವನು ಗಂಗಾಧರಾಪ್ತ ಸುದೀಪ್ತ
ಚಾರುದೇಷ್ಣ ಪಿತನೆ ಶ್ರೀಮಧ್ವ ಹೃತ್ಕುಮುದ
ಪೂರ್ಣೇಂದು ಪಾಹಿಪಾಹಿ ೧

ಪರಮ ಪ್ರಿಯ ಶ್ರೀ ತಂದೆ ಮುದ್ದು ಮೋಹಾಭಿಧರ
ಪರಮಗುರು ಮುದ್ದು ಮೋಹನಗುರು ಶ್ರೀವರರ
ಹರಿಕಥಾಮೃತಸಾರ ಸವಿಸಿದ ಶ್ರೀಜಗನ್ನಾಥ ದಾಸರಿಗೆ
ನಮಿಸಿ ಕರುಣದಿಂದರ್ಧಾಯುವಿತ್ತ ಭಾಗಣ್ಣರಿಗೆ
ಗುರುವೆನಿಸಿ ಸಛ್ಛಾಸ್ತ್ರಪದ ಸುಳಾದಿಯಲಿ ಪೇಳ್ದ
ಶಿರಿ ವಿಜಯ ದಾಸರಿಗೆ ತದ್ಗುರುವು
ಶಕ್ರಾಖ್ಯಗಭಿನಮಿಸಿ ಬಹುಭಕ್ತಿಲಿ ೨

ತುಂಗೆ ತಟವಾಸ ಯತಿಪುಂಗ ರಾಘವೇಂದ್ರರ್ಗೆ
ಗಂಗೆ ಧವಳಾಖ್ಯ ತೀರಸ್ಥ ಗುರುರಾಜರಿಗೆ
ಮಂಗಳದ ಚಂದ್ರಿಕಾ ಗ್ರಂಥ ಮಾಡ್ದರಿಗೆ
ಯತಿಯು ಶ್ರೀಪಾದರಾಜರಿಗೆ ॥
ಅಂಗ ಜಾಸ್ತ್ರಾರಿ ಜಯಮುನಿಗೆ ಮಾಯ್ಮತಗಳನು
ಭಂಗಿಸಿದ ನಂದಮುನಿ ಸಾತ್ವವತ್ಯಾತ್ಮಕನು
ಮಂಗಳಪ್ರದನು ಗುರುಗೋವಿಂದ
ವಿಠಲಗಾನಮಿಸಿ ವಾಚಿಸುವುದಿದನ ೩

ಆನಮಿಪೆ ಆದಿಪೂಜಾರ್ಹನಿಗೆ ಸಾಂಬನಿಗೆ
ಮಾಸಿ ಹರಿ ಚಕ್ರಕೇ ಸುರಪನಿಗೆ ಗೌರಿಗೇ ಜ್ಞಾನಿಜನ
ಸಂಸೇವ್ಯೇ ತುಳಸಿಗೆ ಆರುದ್ರ ಶೇಷ ವೈನತೇಯರಿಗೆ ॥
ಜ್ಞಾನಾತಿರೋಹಿತರು ವಿಜ್ಞಾನ ರೂಪಿ ವೇದಾಣಿ
ಶಿರಿವಾಣಿ ಕಲಿಹರ್ತ ಬೊಮ್ಮನಿಗೆ ರಾಣಿ ಶ್ರೀದೇವಿ
ಭರ್ತಾರ ಗುರು ಗೋವಿಂದ ವಿಠ್ಠಲಗೆ ಆನಮಿಸುವೆ ೪

೪೯೫

ಗುರು ಮಧ್ವರಾಯರಿಗೆ ನಮೋ ನಮೋ ನಮ್ಮ
ಗುರುವಂಶ ಸಂತತಿಗೆ ನಮೋ ನಮೋ ಪ

ವರರಂಗ ವಿಠಲನ ಚರಣಾರ್ಚಕರಿಗೆ ।
ಗುರು ವ್ಯಾಸರಾಯರಿಗೆ ನಮೋ ನಮೋ ।
ಗುರು ವಾದಿರಾಜರಿಗೆ ಗುರು ರಾಘವೇಂದ್ರರಿಗೆ
ಪುರಂದರ ರಾಯರಿಗೆ ನಮೋ ನಮೋ ೧

ಗುರು ವಿಜಯ ರಾಯರಿಗೆ ಗೋಪಾಲದಾಸರಿಗೆ
ವರಮೋಹನ್ನ ರಾಯರಿಗೆ ನಮೋ ನಮೋ
ಹರಿಯ ಕಥಾಮೃತ ಸಾರವ ರಚಿಸಿದ
ಗುರು ಜಗನ್ನಾಥರಿಗೆ ನಮೋ ನಮೋ ೨

ಶ್ರೀವರ ದಾಸರಿಗೆ ವರ ಮುದ್ದು ಮೋಹನ್ನಗೆ
ಗುರುಗಳು ತಂದೆ ಮುದ್ದು ಮೋಹನ್ನಗೇ ।
ವರ ಗುರು ಗೋವಿಂದ ವಿಠಲನ ಚರಣವ
ನಿರತ ಸ್ಮರಿಸುವರ ಚರಣಕ್ಕೆ ನಮೋ ನಮೋ ೩

ಅಂಕಿತನಾಮ ಪದಗಳು

೪೯೬

ಅಚ್ಯುತಾನಂತವಿಠಲ । ಸಲಹ ಬೇಕಿವನಾ ಪ

ಸ್ವಚ್ಛಶಪಥದಿ ಹರಿಯ । ನಾಮ ನಂಬಿಹನಾ ಅ.ಪ.

ಜೀವಕಾರಣವೆನೆ । ಆವನ ವಿದ್ಯಾಪಟಲ
ಓವಿಕಡಿಯಲು ಸಾಧ್ಯ । ನಾಮ ಸಾಧನದೀ
ಈ ವಿಧದ ಸಂಪ್ರಜ್ಞೆ । ಭಾವ ಉಳ್ಳವನೀತ
ತೀವರದಿ ಕೈಪಿಡಿದು । ಕಾಯೋ ಕೃಪ ಸಾಂದ್ರ ೧

ಗುರು ಭಕ್ತಿಯುಳ್ಳವನು । ಸುಜ್ಞಾನಕಾಂಕ್ಷಿತನು
ಇರುವನೀತನು ಎಂದು । ವರ ಸು ಉಪದೇಶ
ಹರಿಯ ನಾನಿತ್ತಿಹೆನು । ಸ್ವಪ್ನ ಸೂಚೀಯಂತೆ
ಕರುಣದಿಂ ನಿಜತೋರೊ । ಮರುತಂತಾರಾತ್ಮ ೨

ಹರಿ ನಾಮ ವೆಂಬಂಥ । ವಜ್ರಾಂಗಿ ತೊಡಿಸಿವಗೆ
ದುರಿತರಾಶಿಗಳಳಿದು । ಪೊರೆಯ ಬೇಕಿವನಾ
ಸುರು ಭೂರಹವು ಆಗಿ । ಪರಿಪರಿಯ ವರಗಳನು
ಗರೆಯುತ್ತ ಹರ್ಷವನೆ । ಸುರಿಸೊ ಶ್ರೀಹರಿಯೇ ೩

ಸತ್ಸಂಗವನೆ ಕೊಟ್ಟು । ದುಸ್ಸಂಗವನೆ ಕಳೆಯೊ
ಮತ್ಸಕೇತನ ಜನಕ । ಸಚ್ಚಿದಾನಂದಾತ್ಮಾ
ವತ್ಸಾರಿ ಕೃಷ್ಣ ಗೋ । ವತ್ಸ ದನಿಗಾವು ಬಹು
ಉತ್ಸವದಿ ಬರುವಂತೆ । ನೀನೆ ಪೊರೆ ಇವನಾ ೪

ಭಾವಜ್ಞ ನೀನಿರುವೆ । ಪೇಳ್ವದೇನಿಹುದೆನಗೆ
ದೇವ ದೇವೇಶನೆ । ಹರಿ ಸಾರ್ವಭೌಮ

ಗೋವರ್ಧನೊದ್ಧಾರನೆ । ಗೋವಿಂದ ಪತಿಯೆ ಗುರು
ಗೋವಿಂದ ವಿಠಲ ಮದ್ । ಭಿನ್ನಪವ ಸಲಿಸೊ ೫

೪೯೭

ಅಂಜನಾಸುತ ವರದ । ವಿಠಲ ಪೊರೆ ಇವನಾ ಪ

ಕಂಜಜನಯ್ಯ ಹರಿ । ಸಂಜೆ ಚರಹರನೇ ಅ.ಪ.

ತತುವರೊಳು ನೀನಿಂತು । ಯತನಜ್ಞಾನೇಚ್ಛಾದಿ
ಸತತ ಪ್ರೇರಿಸಿ ಕರ್ಮ । ಮಾಡಿ ಮಾಡಿಸುತಾ
ಮತಿರಹಿತ ಜೀವನಿಗೆ । ಫಲ ಎಂಬ ತೆರಮಾಳ್ವೆ
ಕೃತುಭುಜನೆ ಈ ತರಳ । ನುದ್ಧಾರಗೈಯ್ಯೊ ೧

ಆದ್ಯಂತರಹಿತ ಸ । ದ್ಬುದ್ಧಿಗಳ ಪ್ರೇರಕನೆ
ಶ್ರದ್ಧಾಳು ಎನಿಸಿವನ । ಮಧ್ವಮತದಲ್ಲೀ
ಪದ್ಧತಿಯ ಪ್ರಕಾರ । ಬದ್ಧನಾಗಿಹದಾಸ
ಶುದ್ಧ ದೀಕ್ಷೆಯಲಿವನ । ಉದ್ಧರಿಸೋ ದೇವ ೨

ಉತ್ತಮಾಧಮರೆಂಬ । ತತ್ವ ತರತಮ ತಿಳಿಸಿ
ಅರ್ಥಿಯಿಂದಿವನ ಭಾವ । ಉತ್ತರಿಸೊ ಹರಿಯೇ ।
ಕರ್ತೃ ಸರ್ವಕೆ ನೀನೆ । ಅತ್ಯಂತ್ಯ ಆಪ್ತ ತಮ
ಮತ್ತೊಬ್ಬರಿಲ್ಲಿವಗೆ । ಸ್ತುತ್ಯ ಶ್ರೀಹರಿಯೇ ೩

ಸಂಸಾರಯಾತ್ರೆಯಲಿ । ಕಂಸಾರಿ ತವತಾಮ
ಶಂಸನಕೆ ಎಡೆಗೊಟ್ಟು । ಸಲಹ ಬೇಕಿವನಾ
ಅಂಶ ಅವತಾರಗಳ । ಶಂಸನದಿ ತವಪಾದ
ಪಾಂಸುವನೆ ಭಜಿಪಂಥ । ಸನ್ಮತಿಯನೀಯೊ ೪

ಸತ್ಸಂಗ ದೊರಕಿಸುತ । ಕುತ್ಸಿತರ ದೂರಗೈ
ಮತ್ಸ್ಯಧ್ವಜ ಪಿತ ಶ್ರೀ । ವತ್ಸಲಾಂಛನನೇ

ನಿತ್ಯ ತವ ಸಂಸ್ಮರಣೆ । ಇತ್ತುಪಾಲಿಪುದಿವನ
ಚಿತ್ಸುಖಪ್ರದ ಗುರು । ಗೋವಿಂದ ವಿಠಲಾ ೩

೪೯೮

ಅಂತರಾತ್ಮಕ ವಿಠಲ । ಪೊರೆಯ ಬೇಕಿವಳಾ ಪ

ಶಾಂತಮೂರುತಿ ಹೃದಯ । ಚಿಂತನೆಗೆ ಪದಗೀ ಅ.ಪ.

ಪತಿಸುತರು ಹಿತರಲ್ಲಿ । ವ್ಯಾಪ್ತನಾಗಿಹ ನಿನ್ನಾ
ವಿತತ ಮಂಗಳರೂಪ । ಚಿಂತನೆಗೆ ಬರುತಾ
ಮತಿ ಮತಾಂವರರಂಘ್ರಿ । ಶತಪತ್ರ ಸೇವಿಸುತ
ಕೃತಕಾರ್ಯಳೆಂದೆನಿಸೊ । ಪತಿತ ಪಾವನ್ನ ೧

ಜ್ಞಾನ ಸದ್ಭಕುತಿ ವೈ । ರಾಗ್ಯ ಭಾಗ್ಯಗಳಿತ್ತು
ನೀನಾಗಿ ಪೊರೆಯೊ ಹರಿ । ವತಾನಿ ಜನವಂದ್ಯ
ವೇಣುಗಾನಪ್ರಿಯನ । ಗಾನಕಲೆ ತಿಳಿಸುತ್ತಾ
ಧ್ಯಾನಾನು ಸಂಧಾನ । ಮಾಣದಲೆ ಈಯೋ ೨

ದೇವತವಗುಣ ರೂಪ । ಆವಕ್ರಿಯಗಳನೆಲ್ಲಾ
ಭಾವಭಕ್ತಿಲಿತುತಿಪ । ತಾವಕಳು ಎನಿಸೋ
ಆವತ್ರಯ ಅದ್ವೈತ । ಭಾವಕ್ರಿಯ ದ್ರವ್ಯಗಳ
ಓವಿ ತಿಳಿಸುತ ಹರಿಯೆ । ಭವಭಂಧ ಕಳೆಯೋ ೩

ಮಂಗಳಾಂಗನೆ ದೇವ । ಶೃಂಗಾರ ಮೂರುತಿಯೆ
ಅಂಗನಾಮಣಿ ಹೃದಯ । ಅಂಗಳದಿ ದಿವ್ಯ
ರಂಗ ತವ ರೂಪವನು । ಕಂಗಳಿಂದಲಿ ಕಂಡು
ಭಂಗವಾಗಲಿ ಕರ್ಮ । ಸಂಚಿತಗಳೆಲ್ಲಾ ೪

ಸ್ಮೃತಿಯೆ ವಿಧಿಯೆಂತೆಂದು । ವಿಸ್ಮೃತಿಯೆ ನಿಷೇಧ
ಮತಿಯ ಅಂಕೆಯ ಕೊಟ್ಟು । ಮಡಿ ಮೈಲಿಗೆಯೊಳು

ಗತಿಗೋತ್ರ ನೀನಾಗಿ । ಸತತ ಪೊರೆಯಲಿ ಬೇಕೋ
ಹಿತಗುರು ಗೋವಿಂದ । ವಿಠಲ ಬಿನ್ನವಿಪೆ ೫

೪೯೯

ಅಕ್ರೂರ ವರದ ವಿಠಲ । ಕಾಪಾಡೊ ಇವಳಾ ಪ

ಶ್ರೀಕೃಷ್ಣ ನಿನದಾಸ್ಯ ಚೊಕ್ಕ ಪಾಲಿಸುತಾ ಅ.ಪ.

ವಿನಯಾದಿ ಗುಣ ಭರಿತೆ ಜನನಿ ಜನಕರಪ್ರೀತೆ
ಮನೊ ಮೈಲಿ ಕಳೆಯುತಲಿ ಮನೊಮಾನಿ ಒಡೆಯಾ
ಗುಣ ಉಳ್ಳವಳ ಮಾಡಿ । ಜಾಣ್ಮೆಯಲಿ ಸಂಸಾರ
ಅನುಸರಿಸುವಂತೆಸಗೊ । ಅನಿಲಾಂತರಾತ್ಮಾ ೧

ಭಕುತರಾ ಸುರಧೇನು । ಭಕುತಿ ಜ್ಞಾನವನಿತ್ತು
ಮುಕುತಿ ಪಂಥದಿ ಹಾದಿ । ಯುಕುತಳೆನಿಸೋ
ಕಕುಲಾತಿಯನೆ ಕಳೆದೂ । ಶಕುತಿ ಇದ್ದುದ ತಿಳಿಸಿ
ಸುಕರ ಸತ್ಸಾಧನವ । ಪ್ರಕಟವನೆ ಮಾಡೋ ೨

ಪತಿಸುತರು ಹಿರಿಯರಾ । ಸತ್ಸೇವೆ ಕೈಕೊಂಡು
ಅತುಳ ಹರಿ ಆವರಲ್ಲಿ । ಸ್ಥಿತನೆಂದು ತಿಳಿದೂ
ಹಿತದಿಂದ ಸೇವಿಸಲು । ಗತಿಯ ಆಹುದೆಂದೆಂಬ
ಮತಿಯನೇ । ಕರುಣಿಸುತ । ಕೃತ ಕೃತ್ಯಳೆನಿಸೋ ೩

ಕಷ್ಟ ನಿಷ್ಠುರಗಳಲಿ । ಇಷ್ಟಸಂತುಷ್ಟಿಯಲಿ
ದೃಷ್ಟಿ ಸಮತೆಯ ಕೊಟ್ಟು । ಕಾಪಾಡೊ ಹರಿಯೇ
ಸೃಷ್ಟಿ ಕರ್ತನು ಹರಿಯು । ಶ್ರೇಷ್ಠ ದೇವತೆಯೆಂಬ
ಸ್ಪಷ್ಟಮತಿ ಕರುಣಿಸುತ । ಪ್ರೇಕ್ಷ ನೀನಾಗೋ ೪

ಗಾಮಲ್ಗಣಿ ವರದ । ನೀವೊಲಿಯದಿನ್ನಿಲ್ಲ
ಭಾವದಲಿ ಮೈದೋರಿ । ಭವದ ಸುತ್ತರಿಸೋ

ಈ ವಿಧದ ಭಿನ್ನಪವ । ನೀ ವೊಲಿದು ಸಲಿಸೋದು
ದೇವ ಪ್ರಾರ್ಥಿಪೆ ಗುರೂ । ಗೋವಿಂದ ವಿಠಲಾ ೫

೫೦೦

ಅನಂತಗಿರಿವಿಠಲ । ಪಾಲಿಸೋ ಇವಳಾ ಪ

ಗುಣಪೂರ್ಣ ಶ್ರೀಹರಿಯೆ । ಬೇಡುವೆನು ಧೊರೆಯೇ ಅ.ಪ.

ಸಿದ್ಧಿಸುತ ಶಿಷ್ಯತ್ವ । ಶುದ್ಧ ಸ್ವಪ್ನದೊಳೀಕೆ
ಉದ್ಧಾರಕೆಂದೆನುತ । ಪ್ರಾರ್ಥಿಸುತ್ತಿಹಳೋ ।
ಮಧ್ವರಮಣನೆ ದೇವ । ಸಿದ್ದಾಂತ ಸಾರವನು
ಬುದ್ಧಿಗೇ ನಿಲುಕಿಸೋ । ಭದ್ರಮೂರುತಿಯೆ ೧

ಪ್ರಾಚೀನ ದುಷ್ಕರ್ಮ । ಮೋಚನೆಗೆ ಮನಮಾಡೋ
ವಾಚಾಮ ಗೋಚರನೆ । ಖಚರಾರಿ ವಂದ್ಯ
ನೀಚೋಚ್ಚ ತರತಮವ । ವಾಚಿಸುತ ಕರ್ಮಗಳ
ಪಾಚಿಯನೆ ಕಳೆಸವ್ಯ । ಸಾಚಿ ಸಖದೇವಾ ೨

ಹರಿಪಾದ ರತಿ ಕೊಟ್ಟು । ಹರಿ ಗುರು ಸೇವೆಗಳ
ನಿರುತಗೈಯುವ ಮನವೆ । ಪರಿಪಾಲಿಸ್ಹರಿಯೇ
ಅರವಿಂದನಾಭಹರಿ ಸರ್ವ ಸತ್ಸಾಧನವ
ನೆರವೇರಿಸೆಂದೆನುತ । ಪ್ರಾರ್ಥಿಸುವೆ ಹರಿಯೇ ೩

ಜ್ಞಾನಾನು ಸಂಧಾನ । ಮಾಣದಲೆ ಇತ್ತಿವಳ
ಧ್ಯಾನ ಮಾರ್ಗಕೆ ತಂದು । ಮೌನಿ ಜನ ವಂದ್ಯಾ
ಸಾನುರಾಗದಿ ನಿನ್ನ । ಹೃದಯ ಗಹ್ವರದಲ್ಲಿ
ಕಾಣುವ ಸುಸಾಧನವ । ನೀನೇ ಮಾಡಿಸೊ ಹರಿಯೇ ೪

ಸರ್ವಾಂತರಾತ್ಮಕನೆ । ದುರ್ವಿ ಭಾವ್ಯನೆ ದೇವ
ಸರ್ವಕರ್ಮದಿ ನಿನ್ನ । ಸಂಸ್ಮೃತಿಯ ನಿತ್ತು

ದುರ್ವಿಜೀವಿಯ ಕಾಯೋ ಸರ್ವೇಶ ಶ್ರೀಹರಿಯೆ
ಶರ್ವನೊಡೆಯನೆ ಗುರು । ಗೋವಿಂದ ವಿಠಲಾ ೫

೫೦೧

ಅನಂತ ಗುಣ ಪೂರ್ಣ । ವಿಠಲ ಪೊರೆ ಇವನಾ ಪ

ವಿನಯದಲಿ ತವದಾಸ್ಯ । ವನು ಕಾಂಕ್ಷಿಸುವನಾ ಅ.ಪ.

ಸ್ವಪ್ನದಲಿ ದೇವ ಗೃಹ । ಒಪ್ಪವೋ ಹರಿರೂಪ
ಅಪ್ಪ ಸಮ್ಮುಖದಿ ಸ್ತುತಿ । ವಪ್ಪಿಸುತ್ತಿರುವಾ ।
ನೆಪ್ಪಿನ ಗುರೂ ರೂಪ । ತಪ್ಪದಲೆ ತಾ ಕಂಡು
ಸೊಪ್ಪಿನಾ ಭಾವದಲಿ । ಅಪ್ಪಿದನು ನೆಲವಾ ೧

ವಿತತ ಮಹಿಮನ ಗುಣನ । ತುತಿಸುತಿಹ ಗುರುವಿನೆಂ
ಹಿತದಿ ಅಂಕಿತಯುಕ್ತ । ತುತಿಯ ಉಪದೇಶಾ
ಕೃತವಾಯ್ತು ಭಾವುಕಗೆ । ಅತಿ ಚಿತ್ರ ಪೇಳಿಲ್ಕೆ
ಮತಿಗೆ ಸಿಲುಕದೆ ಹೋಯ್ತು । ಮತ್ತೆ ಎಚ್ಚರದೀ ೨

ಸುಪ್ರೀಶ ಚರ್ಯವನು । ಅಪ್ಪಿ ಇವಗಂಕಿತವ
ಗೊಪ್ಪದಲಿ ಇತ್ತಿದೆನೊ । ಅಪ್ಪ ಹಯವದನಾ ।
ಅಪ್ರಮೇಯಾ ನಂತ । ಸ್ವ ಪ್ರಕಾಶಕ ಹರಿಯೆ
ಕೃಪೆಯಿಂದಲಿ ಇವನ । ಒಪ್ಪಿ ಕೈ ಪಿಡಿಯೋ ೩

ನಿದ್ರೆಯಲ್ಲಿಹನ ಪ್ರ । ಬುದ್ಧನನ ಗೈಯ್ಯುತ್ತ
ಮಧ್ವಮತ ದೀಕ್ಷೆಯನು । ತಿದ್ದಿ ಇವನಲ್ಲೀ
ಶ್ರದ್ಧಾಳು ಎಂದೆನಿಸೊ । ಸಿದ್ಧಾಂತ ಪಂಥದಲಿ
ಅಧ್ವದೇಡ್ಯನೆ ಹರಿಯೆ । ಮುದ್ದು ನರಹರಿಯೇ ೪

ಶ್ರೀವತ್ಸ ಸದ್ವಕ್ಷ ಕೈವಲ್ಯ ಪ್ರದ ಹರಿಯೆ
ಆವ ತವನಾಮ ಸ್ಮೃತಿ । ಸಾರ್ವ ಕಾಲದಲೀ

ತಾವಕಗೆ ನೀನಿತ್ತು ಕಾವುದೆಂಬೆನೊ ಗುರೂ
ಗೋವಿಂದ ವಿಠಲಯ್ಯ । ಗೋವುಗಳ ಪಾಲಾ ೫

೫೦೨

ಅನಂತಪದ್ಮನಾಭ । ವಿಠ್ಠಲನೆ ನೀನಿವನ
ಅನಂತ ಜನ್ಮದ ಪಾಪ । ಕಳೆದು ಸಲಹೋ ಪ

ಗುಣಗಣಾರ್ಣವ ಸ್ವಾಮಿ । ಪೂರ್ಣಕರುಣೆಯೆಂದು
ನಿನಗೆ ನಾ ಬಿನ್ನೈಪೆ । ಸತತ ಹರಿಯೇ ಅ.ಪ.

ಪಂಚ ಪರ್ವಾಖ್ಯ । ಅಜ್ಞಾನ ಮೋಹಗಳ ತವ
ಸಂಚಿಂತನೆಯ ಕೊಟ್ಟು । ಹಂಚಿ ದೈತ್ಯರಿಗೇ ।
ಸಂಚಿತಾಗಮ ಕಳೆವ । ಸಂಚುಗಳ ನೀ ತೋರಿ
ವಾಂಛಿತಪ್ರದನಾಗೊ । ಅಂಚೆವಹ ಪಿತನೇ ೧

ಕಾಮ ಜನಕ ಸ್ವಾಮಿ । ಮಾಮನೋಹರ ದೇವ
ಕಾಮ ಕ್ರೋಧಗಳಳಿದು । ಕಾಪಾಡೊ ಇವನಾ ।
ಭೀಮ ಭವ ತಾರಕವು । ನಾಮಸ್ಮೃತಿಯೆಂಬಮೃತ
ಯಾಮಯಾಮಕೆ ಉಣಿಸಿ । ರಾಮನೇ ಸಲಹೋ ೨

ಮೂರೆರಡು ಭೇದಗಳು ತಾರತಮ್ಯ ವನರುಹಿ
ಸಾರತಮ ನೀನೆಂಬ । ಸುಜ್ಞಾನವೀಯೋ ।
ಕಾರಣಿಕ ಶ್ರೀಹರಿಯೆ । ವೈರಾಗ್ಯ ಧನದಿ ಸಂ
ಸಾರ ನಿಸ್ಸಾರೆಂಬ । ಸನ್ಮತಿಯ ನೀಯೋ ೩

ದಾಸನಿವನೆಂದೆನುತ । ನೀ ಸಲಹ ಬೇಕಿವನ
ಈಶಾದಿ ದಿವಿಜೇಡ್ಯ । ಶೇಷಶಾಯೀ
ಕ್ಲೇಶ ಆನಂದಗಳು । ಶ್ರೀಶ ನಿನ್ನಿಂದೆಂಬ
ಈಸು ಸನ್ಮತಿ ಕೊಟ್ಟು । ನೀ ಸಲಹಬೇಕೊ ೪

ಸರ್ವವ್ಯಾಪ್ತ ಸ್ವಾಮಿ । ನಿರ್ವಿಕಾರನೆ ದೇವ
ಸರ್ವಜ್ಞ ನೀನಿರಲು । ನಾ ಪೇಳ್ವುದೇನೋ
ದರ್ವಿ ಜೀವನ ಕಾವ । ಸರ್ವಭಾರವು ನಿಂದು
ಸರ್ವ ಸುಂದರ ಗುರು ಗೋವಿಂದ ವಿಠಲಾ ೫

೫೦೩

ಅನಂತಶಯನ ವಿಠಲಾ । ಕಾಪಾಡೊ ಇವಳಾ ಪ

ಗುಣಪೂರ್ಣ ನಿತ್ಯಾತ್ಮ । ಸೌಂದರ್ಯ ಸಾರ ಅ.ಪ.

ತಾಪತ್ರಯಗಳು ಎಂಬ । ಕೂಪಾರದಲಿ ಬಿದ್ದು
ಶಾಪಕೊಳಗಾಗಿ ಹಳ ಕಾಪಾಡಬೇಕೊ
ದ್ರೌಪದಿಯವರದ ಕರು । ಣಾಪಯೋನಿಧಿಹರೆಯೆ
ನೀ ಪೊರೆಯದಿರಲನ್ಯ । ಕಾಪಾಡ್ವರ್‍ಯಾರೊ ೧

ತೈಜಸನೆ ನೀನಾಗಿ । ಸೂಚಿಸಿಹ ಅಂಕಿತವ
ಯೋಜಿಸಿಹೆ ಇವಳೀಗೆ । ಅವ್ಯಾಜ ಕರುಣೀ
ಪ್ರಾಜ್ಯ ಎನ ಸಂಸಾರ । ಗೌಜು ಕಳೆಯಲ್‌ವೆನ್
ತ್ರ್ಯಜಗದ್ವಾಪನೆ । ವಾಜಿವದನಾಖ್ಯ ೨

ಕರ್ಮಾಕರ್ಮಗಳ । ಮರ್ಮಗಳ ತಿಳಿಸುತ್ತ
ಪೇರ್ಮೆಯಲಿ ಪತಿಸೇವೆ । ಕರ್ಮಪ್ರಾಧಾನ್ಯ
ಧರ್ಮವನೆ ತಿಳಿಸುತ್ತ । ಭರ್ಮಗರ್ಭನ ಪಿತನೆ
ಕರ್ಮಬೀಜವ ಕಳೆಯೊ । ಬ್ರಹ್ಮಣ್ಯದೇವಾ ೩

ಮರುತಾಂತರಾತ್ಮನೆ । ಮೂರೆರಡು ಭೇದಗಳ
ತರತಮಂಗಳನರುಹಿ । ಪೊರೆಯೊ ಇವಳಾ
ಅರುಹುವೆನೊ ಸರ್ವಜ್ಞ । ತರುಳೆಬಹುಭಕ್ತಿಯಂತೆ
ಕರುಣಿಸೆಲೊ ಕೃಪಾಸಾಂದ್ರ । ಕಂಜಜಾನಯ್ಯ ೪

ಗಾವಲ್ಗಣೀ ವರದ । ಭಾವದಲಿ ಮೈದೋರಿ
ನೀ ವೊಲಿಯೆ ಬಿನ್ನಪದೆ । ಗೈಯೆ ಶ್ರೀಹರಿಯೆ
ಕೋವಿದೊತ್ತಂಸ ಗುರು । ಗೋವಿಂದ ವಿಠಲನೆ
ಕಾವ ಕರುಣಿ ಎಂದು । ಪ್ರಾರ್ಥಿಸುವೆ ಹರಿಯೆ ೫

೫೦೪

ಅನಂತ ಹರಿ ವಿಠಲ । ಕಾಪಾಡೊ ಇವನಾ ಪ

ಅನಘ ಕರುಣಾಳು ಹರಿ । ನಿನಗೆ ಭಿನ್ನೈಪೇ ಅ.ಪ.

ಪಿತೃಮಾತೃ ಸೇವೆಯಲಿ । ರತಿಯ ಕರುಣಿಸು ಇವಗೆ
ಹಿತ ವಹಿತ ವೆರಡರಲಿ । ಪ್ರೀತಿ ಸಮ ವಿರಲೀ
ಮತಿ ಮತಾಂವರರಂಘ್ರಿ । ಹಿತದಿಂದ ಸೇವಿಸುವ
ಮತಿಯನೇ ಕರುಣಿಸುತ । ಕಾಪಾಡೋ ಹರಿಯೇ ೧

ಭಕುತಿ ಸುಜ್ಞಾನಾದಿ । ವ್ಯಕುತಿಗೈ ಇವನಲ್ಲಿ
ಕಕುಲಾತಿ ಇರದಂತೆ । ಮುಕುತಿ ಸತ್ಪಥದೀ
ಪ್ರಕಟಗೈ ಸ್ಥಿರಬುದ್ಧಿ । ಅಕಳಂಕ ಶ್ರೀಹರಿಯೆ
ನಿಖಿಲಾಗಮ ಸುವೇದ್ಯ । ಭಕುತ ಪರಿಪಾಲಾ ೨

ಸ್ಮರಣೆ ಸುಖ ಸುಧೆ ಸುರಿದು । ಶರಧಿಭವ ಉತ್ತರಿಸೊ
ಮರುತಾಂತರಾತ್ಮಕನೆ । ಕಾರುಣ್ಯ ಮೂರ್ತೇ
ಆರುಹಲೇನಿಹುದಿನ್ನು । ಸರ್ವಜ್ಞ ನೀನಿರಲು
ಮೊರೆಇದನ ಸಲಿಸು ಗುರು । ಗೋವಿಂದ ವಿಠಲ ೩

೫೦೫

ಆಮಿತ ಮಹಿಮೋಪೇತ ವಿಠಲ ಸಲಹೋ ಪ.

ವಿಮಲಮತಿ ಇತ್ತಿವಗೆ ಕಾಮಿತಾರ್ಥವನೇ ಅ.ಪ.

ತೈಜಸನೆ ನೀನಾಗಿ ನಿಜಯಾರ್ಯನುಗ್ರಹವ
ಯೋಜಿಸಿಹೆ ಸ್ವಪ್ನದಲಿ ಕಾರುಣ್ಯಮೂರ್ತೇ
ಭ್ರಾಜಿಷ್ಣು ಸುಜ್ಞಾನ । ವೈರಾಗ್ಯ ಭಾಗ್ಯಗಳ
ಮಾಜದಲೆ ಕರುಣಿಸೆಂದಾನಮಿಪೆ ಹರಿಯೇ ೧

ಹೇ ಸದಾಶಿವ ವಂದ್ಯ । ಕ್ಲೇಶತೋಷಗಳಲ್ಲಿ
ಭಾಸಿಸಲಿ ತವನಾಮ । ಮೀಸಲದ ಮನದೀ ।
ಆಶುಗತಿಮತ ಪೊಂದಿ । ದಾಸದೀಕ್ಷಾಕಾಂಕ್ಷಿ
ವಾಸವಾನುಜ ಇವನ । ದಾಸನೆಂದೆನಿಸೋ ೨

ಶುದ್ಧ ಬುದ್ಧಿಯನಿತ್ತು । ಮಧ್ವಮತ ಪದ್ಧತಿಯ
ಉದ್ಧರಿಸು ಇವನಲ್ಲಿ । ಸಿದ್ಧ ಜನ ವಂದ್ಯಾ
ಕೃದ್ಧಖಿಳ ಬಾಧೆಗಳ । ಗೆದ್ದು ಭವ ಉತ್ತರಿಪ
ಸದ್ವಿದ್ಯ ಪಾಲಿಪುದು ಮಧ್ವಾಂತರಾತ್ಮಾ ೩

ಹರಿಗುರೂ ಸದ್ಭಕ್ತಿ । ದುರ್ವಿಷಯನಾಸಕ್ತಿ
ಎರಡು ಮೂರ್ಭೇದಗಳ । ಅರಿವ ನೀನಿತ್ತೂ
ತರತಮದ ಸುಜ್ಞಾನ । ಕರುಣಿಸುವುದೆಂದೆನುತ
ಕರಿವರದ ಭಿನ್ನವಿಪೆ ಪ್ರಾರ್ಥನೆಯ ಸಲಿಸೋ ೪

ಬೇಕಾದ ವರಗಳನು । ನೀ ಕೊಡುವ ಮಹಿಮೆಗಳ
ನಾ ಕೇಳಿ ಬೇಡಿದೆನೋ । ನಾಕನದಿ ಪಿತನೇ
ನೋಕನೀಯನೆ ಗುರೂ । ಗೋವಿಂದ ವಿಠ್ಠಲನೆ
ಕೋಕವನ ಕೈಪಿಡಿದು । ನೀ ಕಾಯ ಬೇಕೋ ೫

೫೦೬

ಅಸಾಧಾರಣ ವಿಠಲ ನೀ ಸಲಹೊ ಇವಳಾ ।
ಈಶಾದಿ ದಿವಿಜೇಡ್ಯ । ಶ್ರೀರಾಮಚಂದ್ರಾ ಪ

ದಾಸತ್ವ ದೀಕ್ಷೆಯಲಿ । ಆಶೆಯುಳ್ಳವಳಾಗಿ
ಲೇಸು ಪ್ರಾರ್ಥನೆ ಸಲಿಸೆ । ವಿಶ್ವ ಮೂರುತಿಯೇ ।
ಮೀಸಲ ಮನದಲಿರೆ । ನೀ ಸ್ವಪ್ನ ಸೂಚಿಸಿದೆ
ಏಸು ಕರುಣವೊ ನಿನಗೆ । ದಾಸ ಜನರಲ್ಲೀ ೧

ಪರಿಪರಿಯ ಭವಣೆಗಳ । ಪರಿಹರಿಸಿ ಭಕ್ತಳಿಗೆ
ಪೊರೆಯೊ ಕರುಣಾವನಧಿ ನರಹರಿಯೇ ಸ್ವಾಮೀ ।
ತರತಮದ ಜ್ಞಾನ ಸ । ದ್ವೈರಾಗ್ಯ ಭಕುತಿಯನು
ಕರುಣಿಸೀ ಪೊರೆ ಇವಳ । ಮರುತಾಂತರಾತ್ಮ ೨

ಪಂಚಾತ್ಮಕನೆ ಪ್ರಾ । ಪಂಚ ಸುಖದೊಳಗೆ ತವ
ಸಂಚಿಂತನೆಯ ಕೊಟ್ಟು । ಕಾಪಾಡೊ ಹರಿಯೇ
ಪಂಚಭೇದವು ಅಂತೆ । ನೀಚೋಚ್ಚ ಕ್ರಮ ತಿಳಿಸೀ
ವಾಂಛಿತಾರ್ಥದ ಕಳೆಯೊ । ಸಂಚಿತಾಗಮವಾ ೩

ಸೃಷ್ಟ್ಯಾದಿಕರ್ತನೇ । ಕೃಷ್ಣ ಮೂರುತಿ ದೇವ
ಭ್ರಷ್ಟಸಂಗವ ಕೊಡವೆ । ಶಿಷ್ಟರಲ್ಲಿಡಿಸೋ ।
ಇಷ್ಟ ಮೂರ್ತಿಯ ಮನದಿ । ಸ್ಪಷ್ಟ ತೋರುತ ಸಲಹೋ
ಶಿಷ್ಟ ಜನ ಸದ್ವಂದ್ಯ । ವಿಷ್ಣು ಪ್ರಾರ್ಥಿಸುವೇ ೪

ಗೋವರ್ಧನೋದ್ಧರಗೆ । ಭಾವುಕರ ಪರಿಪಾಲ
ಪಾವನಕೆ ಪಾವನನೆ । ಕಾವುದೀಕೆಯನು
ದೇವನೀನಲ್ಲದಲೆ । ಕಾವರನ್ಯರನ ಕಾಣೆ
ಗೋವಿದಾಂಪತಿ ಗುರು ಗೋವಿಂದ ವಿಠಲಾ ೫

೫೦೭

ಆನಂದ ಗಿರಿ ವಿಠಲ । ಕಾಪಾಡೊ ಇವಳಾ ಪ

ನೀನೊಲಿಯದಿನ್ನಿಲ್ಲ । ಕಾರುಣ್ಯ ಮೂರ್ತೆ ಅ.ಪ.

ಸಾಧನ ಸುಜೀವಿಗಳ । ಮೋದ ಪಡಿಸುವ ಭಾರಾ
ಶ್ರೀಧರನೆ ನೀನದಲ್ಲೆ । ಹೇ ದಯಾಪರನೇ ।
ಮಾಧವನೆ ತವದಾಸ್ಯ । ಸಾದರದಿ ಬಯಸುವಳು
ಹೇ ದಯಾಂಬುಧೆ ಚೆನ್ನ । ಉಪದೇಶಿಮನ್ನಿಸೋ ೧

ಕಾಮಾದಿ ಅರಿಗಳನ । ನೇಮದಿಂದಲಿ ಸವರಿ
ಭೂಮಗುಣಿತವ ಸ್ತವನ । ಕಾಮದಲಿ ಇರಿಸೀ
ನೇಮ ಸಾಧನೆಗೈಸೀ । ಕಾಮಿತಾರ್ಥವನೀಗೋ
ಶ್ರೀ ಮಹೀಸೇವಿತನೆ । ರಾಮಗುಣಧಾಮಾ ೨

ಭೇದ ಪಂಚಕ ತಿಳಿಸಿ । ಆದರದಿ ತರತಮದ
ಬೋಧಿಸೀ ಉದ್ಧರಿಸೋ । ಮೋದ ಮುನಿ ವಂದ್ಯಾ ।
ಬೇಧ ಸುಖದ್ವಂದಾದಿ । ಸಾದರದಿ ಅನುಭವಿಪ
ಹಾದಿಯಲ್ಲಿರಿಸೊ ಗುರು । ಗೋವಿಂದ ವಿಠಲಾ ೩

೫೦೮

ಆನಂದ ಗಿರಿ ಪತಿ ವಿಠಲ । ಶ್ರೀನಿವಾಸ ಪ

ದೀನ ಜನ ಮಂದಾರ । ನೀನಿವನ ಸಲಹೋ ಅ.ಪ.

ಮಾಧವನೆ ಭಿನ್ನವಿಸೆ । ಸಾಧನ ಸುಜೀವಿ ಇವ
ಹಾದಿ ಹೋಕರ ಉದಯ । ತೋರ್ವ ಸ್ವಭಾವ
ವೇದೋಕ್ತ ಕರ್ಮದಲಿ । ಮೋದವನೆ ತೋರುತಿಹ
ಹೇ ದಯಾಂಬುಧೆ ಘನ್ನ । ಮೋದ ಉಣಿಸಿವಗೇ ೧

ಪ್ರಾಚೀನ ಕರ್ಮಾಂಧ । ಕೂಪದಲಿ ಬಿದ್ದಿಹನೊ
ಖೇಚರೋತ್ತಮ ಪ್ರಾಣ । ಮತದಿ ಬಂದಿಹನೋ
ವಾಚಿಸುತ ಇವನಲ್ಲಿ । ನಿಚೋಚ್ಚ ತರತಮನ
ಮೋಚಿಸೋ ದುಷ್ಕರ್ಮ । ಕೀಚಕಾರಿ ಪ್ರಿಯಾ ೨

ದಾಸ ದೀಕ್ಷೆಯಲಿ ಮನ । ದಾಶಿ ಬಲು ಇಟ್ಟಿಹೆನೊ
ಶ್ರೀಶ ತೈಜಸನೀನೆ । ಲೇಸು ಸತ್ಪಂಥಾ ।
ಸೂಸಿ ತೋರಿಹೆ ಹರಿಯೇ । ಹೇ ಸದಾಶಿವ ವಂದ್ಯ
ಕ್ಲೇಶ ನಾಶನ ಕಾಯೊ । ವಾಸವಾನುಜನೇ ೩

ತೈಜಸನೆ ನೀ ತೋರ್ದ । ತೇಜರೂಪೋಪಾಸಾ
ಮಾಜದಲೆ ಪೇಳಿರುವೆ । ವಾಜಿವದನಾ ।
ಸೋಜಿಗದ ತರಳನಿಗೆ । ಓಜಸ್ಯ ಪಾಲಿಸುತ
ರಾಜಿಸೋ ಇವನಲ್ಲಿ । ಮೂಜಗತ್ಪತಿಯೇ ೪

ಸರ್ವಾಂತರಾತ್ಮ ತವ । ದಿವ್ಯ ಸಂಸ್ಮೃತಿಯನ್ನ
ಸರ್ವತ್ರ ಸರ್ವದಾ । ಓವಿ ಪಾಲಿಪುದೋ ।
ದುರ್ವಿ ಭಾವ್ಯನೆ ಗುರೂ । ಗೋವಿಂದ ವಿಠಲಯ್ಯ
ದರ್ವಿ ಜೀವಿಯ ಕಾಯೊ । ಬಿನ್ನವಿಪೆ ಹರಿಯೇ ೫

೫೦೯

ಆನಂದಾನಂತ ವಿಠಲ ನೀನಿವನ ಸಲಹೊ ಪ

ಜ್ಞಾನಿಜನ ಸುಪ್ರೀಯ ನೀನೆಂದು ಭಿನ್ನವಿಪೆ ಅ.ಪ.

ಪ್ರಾಚೀನ ದುಷ್ಕರ್ಮ ನಿಚಯದಿಂದಲಿ ಬಳಲಿ
ಸ್ವೋಚಿತ ಸುಕರ್ಮಕ್ಕೆ ಅವಕಾಶ ವಿರದೇ ।
ವಾಚಿಸುತಲೀ ನಿನ್ನ ನಾಮಾಮೃತವ ಸವ್ಯ
ಸಾಚಿ ಸಖನೇ ನಿನ್ನ ಮೊರೆಯ ಹೊಕ್ಕವನಾ ೧

ಆದಿ ವಿರಹಿತ ಕರ್ಮ ಆಧೀನ ನಿನದಲ್ಲೆ ।
ನೀದಯದಿ ಸಂಚಿತವ ಮೋದದಲಿ ಕಳೆದು ।
ವೇದಗಮ್ಯನೆ ಹರಿಯೆ ಭೇದಮತ ಸುಜ್ಞಾನ
ಭೋದಗೈವುದು ಎಂದು ಪ್ರಾರ್ಥಿಸುವೆ ನಿನ್ನಾ ೨

ಮಂತ್ರನಿಲಯರ ನಿರುತ ಸ್ವಾಂತದಲಿ ಭಜಿಸುತ್ತ
ಸಂತ್ರಸ್ತಸಜ್ಜನರ ಪೊರೆಯೆ ಮೊರೆಯಿಡುತ ।
ಭ್ರಾಂತ ಮಾಯಾತ್ಮ ತೊರೆದು ಅಂತರಂಗದಿ ಮಧ್ವ
ಅಂತರಾತ್ಮನ ಭಜಿಪ ಸಂತದಾಸನ್ನಾ ೩

ಅಂಬರ ಸುವಾಣಿಯಿಂದಂಬೆ ರಮಣನು ರುದ್ರ
ಬಿಂಬ ನರಹರಿ ನೀನೆ ಇಂಬಿನಂಕಿತವ
ನಂಬಿ ಬಂದಿಹಗಿತ್ತು ಸಂಭ್ರಮದಿ ಕರುಣಿಸಿಹೆ
ಬಿಂಬ ಕ್ರಿಯ ಸುಜ್ಞಾನ ತುಂಬು ಇವನಲ್ಲೀ ೪

ದೋಷದೂರನೆ ಹರಿಯೆ ದಾಸನ ಸದ್‌ಹೃದಯ
ದಾಶಯದಿ ತವರೂಪ ಲೇಸು ತೋರೆಂಬಾ ।
ಮೀಸಲು ಪ್ರಾರ್ಥನೆಯ ಸಲಿಸೆಂದು ಭಿನ್ನವಿಪೆ
ವಾಸುಕೀ ಶಯನ ಗುರು ಗೋವಿಂದ ವಿಠಲಾ ೫

೫೧೦

ಆನಂದಾದ್ರಿವಿಠಲ । ನೀನೇ ಪೊರೆ ಇವಳಾ ಪ

ಜ್ಞಾನಿಜನವಂದ್ಯ ಹರಿ । ಶ್ರೀನಿವಾಸಾಖ್ಯ ಅ.ಪ.

ತರಳೆ ಬಹುನೊಂದಿಹಳೊ । ಕರುಣಾ ಮಾಳ್ಪುದು ದೇವ
ದುರಿತವನ ದಾವಾಗ್ನಿ । ಶರಣಜನರೊಡೆಯಾ ।
ಮರುತ ಮತದಲ್ಲಿರುತೆ । ನೆರೆ ನಂಬಿಬಂದಿಹಳೊ
ಕರುಣದಿಂ ಕೈಗೊಟ್ಟು । ಪರಿಪಾಲಿಸಿವಳಾ ೧

ಅನ್ಯದೇವರ ಪೂಜೆ । ಇನ್ನಾದರು ಬಿಡಿಸಿ
ನನ್ನೆಯಿಂ ನಿನ್ನನ್ನೆ । ಪೂಜಿಸುವ ಭಾಗ್ಯಾ
ಇನ್ನಾದರೂ ಕೊಟ್ಟು । ಪನ್ನಂಗಶಯನಹರಿ
ಮನ್ನಿಸೊ ಇವಳ ಹರಿ । ಅನ್ನಂತ ಮಹಿಮಾ ೨

ಸಾಧುಜನ ಸದ್ವಂದ್ಯ । ಸತ್ಸಂಗವನೆ ಕೊಟ್ಟು
ಮಾಧವನೆ ನೀನಾಗಿ । ಕಾದುಕೊ ಹರಿಯೇ
ಭೇಧಮತ ತತ್ವಗಳ । ಬೋಧಿಸುತ ಇವಳಿಗೆ
ಸಾಧನವ ಗೈಸುವುದೋ । ಬಾದರಾಯಣನೇ ೩

ಪತಿಸುತರು ಹಿತರಲ್ಲಿ । ವ್ಯಾಪ್ತ ನೀನೆಂಬಂಥಾ
ಮತಿಯನೇ ಕೊಟ್ಟು ಸ । ದ್ಗತಿಯನೆ ಕರುಣಿಸೋ ।
ಸತತ ನಿನ್ನಯ ನಾಮ । ರತಿಯನೆ ಕರುಣಿಸುತ
ಮತಿಮತಾಂವರರಂಘ್ರಿ । ಭಕ್ತಿಯನೆ ಈಯೋ ೪

ಸರ್ವತ್ರ ಸರ್ವದಾ । ತವಸ್ಮೃತಿಯ ಕರುಣಿಸುತ
ಭವಭಂದ ಪರಿಹರಿಸೊ । ಭಾವಜನಯ್ಯ ಎನೆ
ಓವಿ ಬಿನ್ನವಿಪೆ ಹರಿ । ಸಲಿಸುವುದು ಇವನೇವೆ
ಗುರ್ವಂತ ರಾತ್ಮಗುರು । ಗೋವಿಂದ ವಿಠಲಾ ೫

೫೧೧

ಆನಂದಾದ್ರಿ ವಾಸ । ವಿಠಲ ಪೊರೆ ಇವನಾ ಪ

ಮಾನಮೇಯ ಜ್ಞಾನ । ಸಾನುಕೂಲಿಸಿ ಇವಗೆ
ನೀನಾಗಿ ಪೊರೆಯೊ ಹರಿ । ಕೋನೇರಿವಾಸಾ ಅ.ಪ.

ಚಿತ್ರ ಚಾರಿತ್ರ । ಶುಭಗಾತ್ರನೇ ಶತಪತ್ರ
ನೇತ್ರಕರವಾದ ದ್ವಂದ್ವ । ಸೂತ್ರಾಂತರಾತ್ಮ ।
ಮಿತ್ರನಾನುಗ್ರಹಕೆ । ಪಾತ್ರನ ಸಲಹೊ ಮಾಕ
ಳತ್ರನೇ ನಿನ್ನ ಸುಪ । ವಿತ್ರ ಪದ ನಮಿಪೇ ೧

ಕರುಣವೆಂತುಟೊ ನಿನಗೆ । ಶರಣಜನ ವತ್ಸಲನೇ
ಕರೆದೊಯ್ದು ಸ್ವಪ್ನದಲಿ । ಹರ ಗಿರಿಜೆ ತೋರೀ ।
ಮರಳಿ ಬ್ರಹ್ಮನ ಲೋಕ । ದರುಶನಾನಂದದಲಿ
ಕರೆದೊಯ್ದು ಕರುಣಾಳು । ಸುರಸೇವ್ಯ ಬದರಿಗೆ ೨

ದಶಮತಿಗೆ ಬೋಧಿಸುವ । ವ್ಯಾಸದರ್ಶನ ಭಾವಿ
ದಶಮತಿಯ ಸಹವಿರುವ । ವ್ಯಾಸ ಭಕ್ತನ್ನಾ ।
ಹಸನಾಗಿ ತೋರಿ ನೀ । ವಸುಮತಿಗೆ ಕರೆತಂದು
ಬೆಸಸಿದೆಯಾ ಫಲದೈವ । ದರ್ಶನಕೆ ಇವನಾ ೩

ಬದ್ಧನಾದರು ಇಹದಿ । ಶುದ್ಧ ಸಂಸ್ಕೃತನಿಹನು
ಮಧ್ವಮತ ದಾಸತ್ವ । ಶ್ರದ್ಧೆಯುಳ್ಳವನೇ
ಬುದ್ಧಿಯಲಿ ಎನಗೆ ಉ । ದ್ಬುದ್ಧವನೆ ಮಾಡ್ದ ಪರಿ
ತಿದ್ದಿ ಅಂಕಿತವಿತ್ತು । ಬುದ್ಧಿ ಪೇಳಿಹೆನೋ ೪

ಮಾವಿನುತ ತವರೂಪ । ಓವಿಹೃದಯದಿ ತೋರಿ
ಆವ ಸಂಚಿತ ಕರ್ಮ । ತೀವ್ರದಲಿ ದಹಿಸೇ
ಗೋವುಗಳ ಪಾಲ ಗುರು । ಗೋವಿಂದ ವಿಠ್ಠಲನೆ
ಭಾವದಲಿ ಬಿನ್ನವಿಪೆ । ನೀ ವೊಲಿದು ಸಲಿಸೋ ೫

೫೧೨

ಆನಂದನಿಲಯ ವಿಠ್ಠಲನೆ । ನೀನಿವಳ ಸಲಹಬೇಕೊ
ಜ್ಞಾನಗಮ್ಯನೆ ದೇವ । ಮೌನಿಮಧ್ವರ ಹೃದಯಾ ಪ

ದಾಸದೀಕ್ಷೆಯಲಿ ಬಹು ಆಶೆಯುಳ್ಳವಳಾಗಿ
ಶ್ರೀಶ ನಿನ್ನಯ ಪಾದ ಸೂಸಿ ಸೇವಿಪಳೋ ।
ವಾಸುಕೀಶಯನ ಮ । ಧ್ವೇಶ ತವಪದ ಕಮಲ
ದಾಸಳೆಂದೆನಿಸುತ್ತ । ನೀ ಸಲಹೊ ಹರಿಯೇ ೧

ಉದ್ಯೋಗ ವ್ಯವಹಾರ । ವಿದ್ಯೆಯಲಿ ಚಾತುರ್ಯ
ಮಧ್ಯೆ ಮಧ್ಯೇ ಬರುವ । ಹೃದ್ರೋಗಗಳು ಸರ್ವ
ಪ್ರದ್ಯುಮ್ನ ತವ ಸೇವೆ । ಎಲ್ಲ ಇವು ಎಂಬಂಥ
ಶುದ್ಧ ಜ್ಞಾನವಿತ್ತು । ಉದ್ಧರಿಸೊ ಹರಿಯೇ ೨

ತಾರತಮ್ಯ ಜ್ಞಾನ । ಮೂರೆರಡು ಭೇದಗಳ
ಸಾರತತ್ವವ ತಿಳಿಸಿ । ಘೋರ ಭವ ಕಳೆಯೋ
ಈರ ಕರುಣಾ ಪಾತ್ರ । ಗೌರಿಪತಿ ಶಿವವಂದ್ಯ
ಗೌರಿದೇವಿಯ ಅಭಯ । ತೋರ್ದೆ ಸ್ವಪ್ನದಲೀ ೩

ಪತಿಸೇವೆ ಇತ್ತಿವಳ । ಕೃತಕಾರ್ಯಳೆಂದೆನಿಸು
ಹಿತಮಿತ್ರ ಪಿತೃಮಾತೃ । ಬಂಧು ಬಳಗದಲೀ ।
ಕೃತಿಪತಿಯು ಸರ್ವರಲಿ । ವ್ಯಾಪ್ತನಾಗಿಹನೆಂಬ
ಮತಿಯಿತ್ತು ಸಲಹಿವಳ । ಗತಿ ಪ್ರದನೆ ಹರಿಯೇ ೪

ಗುರುಧರ್ಮ ಗುರುಸೇವೆ । ಪರಮ ಭಕುತಿಯಲಿಂದ
ಚರಿಪ ಸನ್ಮತಿಯಿತ್ತು ಕರುಣದಲಿ ಕಾಯೋ
ಗುರುವಂತ ರಾತ್ಮನನ । ತೋರೆಂದು ಪ್ರಾರ್ಥಿಸುವೆ
ಪರಮ ಪುರುಷನೆ ಗುರು । ಗೋವಿಂದ ವಿಠಲಾ ೫

೫೧೩

ಆನಂದವಾಹನ ವಿಠಲ ನೀನಿವಳ ಕಾಯಬೇಕೋ ।
ಜ್ಞಾನಪೂರ್ಣನೆ ನಿನ್ನ ಸುಜ್ಞಾನ ಪಾಲಿಸುತ ಹರಿಯೆ ಪ

ನಿಗಮವೇದ್ಯನೆ ದೇವ ಜಗದಂತರಾತ್ಮನೆ
ಬಗೆಬಗೆಯ ಲೀಲೆಗಳ ನಗುನಗುತ ತೋರೀ
ಬಗೆಹರಿಸು ಭವರೊಗ ಭಿನ್ನೈಪೆ ನಾನಿದನ
ನಗಚಾಪ ಪರಿಪಾಲ ಖಗವಹನೆ ದೇವಾ ೧

ಪಂಚರೂಪಾತ್ಮಕನೆ ಪಂಚ ಬಾಣನ ಪಿತನೆ
ಪಂಚ ಭೇದ ಜ್ಞಾನ ಸಂಚಿಂತನೆಯನಿತ್ತು ।
ವಾಂಚಿತಾರ್ಥದ ಹರಿಯೆ ವೈರಾಗ್ಯ ಸದ್ಭಕುತಿ
ವಾಂಚಿಪಳಿಗೀಯೊ । ನಿಷ್ಕಿಂಚನರ ಪ್ರೀಯಾ ೨

ಪತಿಸುತರು ಹಿತದಲ್ಲಿ ಮತಿ ಮತಾಂವರರಲ್ಲಿ
ಕೃತಿಪತಿಯೆ ನಿನವ್ಯಾಪ್ತಿ ಅತಿಶಯದಿ ತೋರುತಲಿ
ಹಿತದಿಂದ ಸೇವಿಸುವ ಮತಿಯಿತ್ತು ನೀನಿವಳ
ಗತಿಗೆ ಸಾಧನನೆನಿಸು ಪ್ರತಿರಹಿತ ದೇವಾ ೩

ನಾಮ ಮಹಿಮೆಯ ತಿಳಿಸಿ ಪ್ರೇಮದಿಂದಲಿ ನಿನ್ನ
ನಾಮದುಚ್ಚಾರಣೆಯ ನೇಮವನೆ ಪಾಲಿಸುತ ।
ಕಾಮಿತವ ಸಲಿಸುವುದು ಭೂಮ ಗುಣ ನಿಸ್ಸೀಮ
ರಾಮಚಂದ್ರನೆ ಸರ್ವ ಸ್ವಾಮಿ ಎನಿಸುವನೇ ೪

ಶ್ರೀವರನೆ ಭವವನಧಿ ನಾವೆ ಎಂದೆನಿಸಿಹನೆ
ಕಾವುದಿವಳನು ಸತತ ಸರ್ವಾಂತರಾತ್ಮ ।
ನೀವೊಲಿಯದಿನ್ನಾರು ಕಾವವರ ನಾಕಾಣೆ
ದೇವವರ ವಂದ್ಯ ಗುರು ಗೋವಿಂದ ವಿಠಲಾ ೫

೫೧೪

ಆಪದ್ಬಾಂಧವ ವಿಠಲ । ಕಾಪಾಡೊ ಇವಳಾ ಪ

ಶ್ರೀಪತಿ ಶೀರಂಗ ಸ । ಮೀಪಗನೆ ಹರಿಯೇ ಅ.ಪ.

ದುರಿತ ರಾಶಿಗಳಳಿದು । ಹರಿನಾಮ ಸುಧೆ ಸವಿಯೆ
ವರಮಾರ್ಗ ತೋರಿ ಪೊರೆ । ಶ್ರೀದ ನರಹರಿಯೇ ।
ತರುಣಿಮಣಿ ಹರಿದಾಸ್ಯ । ನೆರೆಸುಕಾಂಕ್ಷಿಸಲಾಗಿ
ವಿರಚಿಸಿಹೆ ಉಪದೇಶ । ಪರಿಪಾಲಿಸಿವಳಾ ೧

ತಾರತಮ್ಯಾಂತರದಿ । ಹರಿಯ ಉತ್ಕರ್ಷತ್ವ
ಸುರಸಾದಿ ಸುರರೆಲ್ಲ । ಹರಿದಾಸರೆಂಬಾ ।
ಎರಡು ಮೂರ್ಭೇದ ಸಹ । ವರ ಜಗದ ಸತ್ಯತೆಯ
ಅರುಹಿ ಪಾಲಿಸು ಇವಳ । ಕರಿವರದ ಹರಿಯೇ ೨

ಸೀಮೆ ಮೀರಿದ ಮಹಿಮ । ಭೂಮ ಗುಣ ಸಂಪೂರ್ಣ
ಕಾಮಾರಿ ಸಖಕೃಷ್ಣ । ಕಾಮಿತಾರ್ಥದನೇ
ನೇಮ ನಿಷ್ಠೆಗಳಿತ್ತು । ಸಾಧನಗಳಳವಡಿಸಿ
ಕಾಮಿನಿಯ ಪೊರೆಯೊ ಹರಿ ಸ್ವಾಮಿ ಭೂವರಹಾ ೩

ಜಲಜಾಕ್ಷನಮಲ ಗುಣ । ತಿಳಿಯಲ್ಕೆ ಸಾಧನವು
ಕಲಿಯುಗದಿ ಸತ್ಸಂಗಾ । ಬಲ ಉಳ್ಳದೋ
ಹಲವು ಮಾತೇಕೆ ನಿನ್ನ । ಮಲಗುಣ ನಾಮಗಳ
ತಿಳಿಸಿ ಪೊರೆ ಇವಳನ್ನು । ಕಲಿಮಲಧ್ವಂಸೀ ೪

ಪಾವ ಮಾನಿಯ ಪ್ರೀಯ ದೇವ ದೇವೋತ್ತಮನೆ
ಭಾವುಕಳ ಪೊರೆಯಲ್ಕೆ । ತೀವ್ರ ಭಿನ್ನವಿಪೇ
ಕಾವ ಕರುಣಾಳು ಗುರು । ಗೋವಿಂದ ವಿಠ್ಠಲನೆ
ಈ ವಿಧದ ಭಿನ್ನಪವ । ನೀ ವೊಲಿದು ಸಲಿಸೋ ೫

೫೧೫

ಇಂದು ಭಾಗ ಹರಿ ವಿಠಲ । ಪೊರೆಯ ಬೇಕಿವಳಾ ಪ

ನೊಂದಿಹಳೊ ಬಹುವಾಗಿ । ಹೇಸಿ ಸಂಸ್ಮೃತಿಲೀ ಅ.ಪ.

ಕರುಣಾಸಾಗರ ವಿನುತ । ಪರಿಪರಿಯ ಶಾಸ್ತ್ರಗಳು
ವರಲುತಿದೆ ಶ್ರೀಹರಿಯೆ । ಮೊರೆ ಕೇಳದೇನೋ
ತರುಣಿ ದ್ರೌಪದಿವರದ । ಕರಿವರದ ನೀನೆಂದು
ಮರಳಿಮಹಪಾಪಿ ಆ । ಅಜಾಮಿಳವರದಾ ೧

ಉಸಿರಿದ್ದು ಭಾರವನು । ಹೊರುಎಂದು ಪೇಳ್ಬಹುದು
ಉಸಿರಳಿವ ಪರಿಮಾಡೆ । ಮೊರೆ ಆವನಿಡುವಾ
ಬಸಿರಿನಿಂ ಬಂದಂಥ । ಶಿಶುಗಳೆಲ್ಲವೂ ಪೋಗಿ
ಯಶವ ವರ ಮೆರೆಸಲ್ಕೆ । ಹಸುಮಗನಸಲಹೋ ೨

ಸಂಸಾರ ಕ್ಲೇಶಗಳ । ಶಿಂಸಿಸಲು ಅಳಿವಲ್ಲ
ಕಂಸಾರಿ ನಾವಾಗಿ । ಪೊರೆಯ ಬೇಕಿವಳಾ
ವಂಶ ಉದ್ಧರಿಸೆ ಪದ । ಪಾಂಸು ಬೇಡ್ವಳೊ ನಿನ್ನ
ಸಂಶಯವು ಯಾಕಿನ್ನು । ಕರುಣಿಸೋ ಹರಿಯೆ ೩

ನಂದಮುನಿ ಮತವನ್ನು । ಪೊಂದಿ ಜೀವಿಪಳೊ ಸಂ
ಕ್ರಂದ ನಾದಿಗಳಿಂದ । ವಂದ್ಯ ಶ್ರೀಹರಿಯೇ
ಅಂದ ಈ ಕಾರಣದಿ । ನಂದವನು ಈಯದಿರೆ
ಅಂದುಕೊಂಬರೆ ಸುಜನ । ತಂದೆ ಕೈಪಿಡಿಯೋ ೪

ಜ್ಞಾನ ಸದ್ಭಕುತಿ ವೈ । ರಾಗ್ಯ ಕೊಟ್ಟವಳೀಗೆ
ಕಾಣಿಸೋ ಸದ್ಗತಿಯ । ಕಾರುಣ್ಯ ಮೂರ್ತೇ
ಏನೊಂದು ಅನ್ಯವನು । ನಾನು ಬೇಡುವುದಿಲ್ಲ
ಜಾಣಗುರು ಗೋವಿಂದ । ವಿಠಲಾ ಪೊರೆ ಇವಳಾ ೫

೫೧೬

ಉಪೇಂದ್ರ ವಿಠ್ಠಲನೆ ಕೃಪೆಯಿಂದ ಕೈಯ್ಯ ಪಿಡಿಯೊ ಪ

ಅಪವರ್ಗ ಪ್ರದಹರಿಯೆ । ನಿಪುಣವೆನಿಸುತ ಶಿಶುವ
ವಿಪುಲ ಮತಿಯನೆ ಕೊಟ್ಟು । ಕಾಪಾಡೊ ಹರಿಯೇ ಅ.ಪ.

ವರುಷ ಕಾರಣವಲ್ಲ ಹರಿಭಜನೆಗೆಂಬುದನ
ಪರಿಕಿಸುತ ಇವನಲ್ಲಿ। ಪ್ರಾರ್ಥಿಸುವೆ ನಿನಗೇ ।
ನಿರುತ ನಿನ್ನಯ ಪದದಿ । ಮೆರೆವ ಭಕುತಿ ಜ್ಞಾನ
ಕರುಣಿಸುವುದೆಂದೆನುತ । ಪರಿಪರಿಯಲಿಂದ ೧

ಪ್ರಾಕ್ಕು ಕರ್ಮವ ಕಳೆದು । ಕಾಕು ಮತ ದಿಕ್ಕರಿಪ
ವಾಕು ವೈಖರಿಯಿತ್ತು । ತೋಕನ್ನ ಸಲಹೋ ।
ಲೌಕಿಕದಿ ಸತ್ಕೀರ್ತಿ । ಬೇಕಾದವರವಿತ್ತು
ನೀ ಕರುಣಿಸುವೆನೆಂದು । ನಾ ಕೇಳ್ವೆ ಹರಿಯೇ ೨

ದೇವದೇವೇಶ ತವ। ಪಾವನ್ನಸ್ಮೃತಿಯಿತ್ತು
ಗೋವತ್ಸದ ನಿಗಾವು । ಧಾವಿಸುವ ತೆರದೀ
ಕೋವಿದೋದ್ಗೀತ ಗುರು ಗೋವಿಂದ ವಿಠ್ಠಲನೆ
ಭಾವುಕನ ನೀಪೊರೆಯೊ । ಗೋವಿದಾಂಪತಿಯೇ ೩

೫೧೭

ಉಪೇಂದ್ರ ಹರಿ ವಿಠಲ ಕೃಪೆಯಲಿಂದಲಿ ಇವನ
ಕಾಪಾಡ ಬೇಕೆಂದು ಪ್ರಾರ್ಥಿಸುವೆ ಹರಿಯೇ ಅ.ಪ.

ಹರಿಗುರೂ ಭಕ್ತಿಯುತ । ತರಳ ನಿರುವನು ಹರಿಯೆ
ಸುರರಾಜ ಭೋಗಗಳ । ಕರುಣಿಸುತ ಇವಗೇ ।
ಒರೆದು ತತ್ವ ಜ್ಞಾನ । ಮರಳಿ ಭಕ್ತ್ಯಭಿವೃದ್ಧಿ
ಕರುಣಿಸುತ ಕಾಪಾಡೊ । ಕರಿವರದ ಹರಿಯೆ ೧

ವಿಯದಧಿಪ ಸುತನಿಗೆ । ಭಯವ ಪರಿಹರಗೈದು
ದಯದಿಂದ ಪೊರೆದಂತೆ । ಕಾಯಬೇಕೋ
ಹಯವೇರಿ ಇಂದ್ರಿಯದ । ಜಯಸೂಚಿ ಸ್ವಪ್ನದಲಿ
ಭಯಕೃತೂ ಭಯನಾಶ । ಅಭಯನೀಯೋ ೨

ಪಿತೃ ಮಾತೃ ಸೇವೆಯಲಿ । ರತನನ್ನ ಮಾಡುತಲಿ
ಹಿತ ಅಹಿತ ವೆರಡನ್ನು । ಸಮತೆಯಲಿ ಉಂಬಾ
ಮತಿಯನ್ನೆ ಕರುಣಿಸುತ । ಕೃತಕಾರ್ಯನೆಂದೆನಿಸಿ
ಸತತ ತವ ಸಂಸ್ಮೃತಿಯ । ಇತ್ತು ಪೊರೆ ಇವನಾ ೩

ಲೌಕಿಕದಲ್ಲಿದ್ದರೂ । ಕಾಕು ಮಾಯ್ಮತ ಹಳಿ
ಚಾಕ ಚಕ್ಯತೆ ಕೊಟ್ಟು । ನೀ ಕಾಯಬೇಕೋ ।
ಬೇಕಾದಭೀಷ್ಟಗಳ । ತೋಕನಿಗೆ ಕರುಣಿಸುತ
ಶ್ರೀಕರಾರ್ಚಿತ ಪಾದ । ಪಂಕಜವ ತೋರೋ ೪

ಪಾವಮಾನಿಯ ಪ್ರೀಯ । ಶ್ರೀವರನೆ ಈಶಿಯವ
ಕೋವಿದನ ಗೈಯ್ಯುತ್ತ । ಭುವಿಯೊಳಗೆ ಮೆರೆಸೋ
ಗೋವಿದಾಂಪತಿಯೆ ಗುರು । ಗೋವಿಂದ ವಿಠ್ಠಲನೆ
ನೀ ವೊಲಿಯದಿನ್ನಾರು । ಕಾವರನು ಕಾಣೇ ೫

೫೧೮

ಉದಯಾದ್ರೀಶ ವಿಠಲ ಮುದವನಿತ್ತವನೀಗೆ
ಉದ್ಧರಿಸ ಬೇಕೆಂದು ಪ್ರಾರ್ಥಿಸುವೆ ಹರಿಯೇ ಪ

ಸದಯ ನೀನಿರೆದೇವ ಸಂಸ್ಕೃತಿಯ ಶೃಂಖಲೆಗೆ
ಬೆದರಿಕಿಲ್ಲವೊ ಇವಗೆ ನರಹರಿಯೆ ಸ್ವಾಮಿ ಅ.ಪ.

ಸ್ವಾಪದಲಿ ನಭದಲ್ಲಿ ರೂಪವನೆ ತೋರಿದ
ಯೊಪಯೋನಿಧಿಯಾಗಿ ಮೆರೆವೆ ವೆಂಕಟೇಶ ।
ಆಪಯೋಜಾಸನ ವಿಷಾದ್ಯರಿಗೆ ನಿಲುಕದ
ಅಪಾರ ತವಮಹಿಮೆ ನಾ ಪೇಳಲೊಶವೇ ೧

ಸಾರನಿಸ್ಸಾರವೆನೆ ಜಗದೊಳಗೆ ನೀನೊಬ್ಬ
ಸಾರತಮನೆಂದೆಂಬ ಪಾರಮಾರ್ಥಿಕವ ।
ತಾರತಮ್ಯ ಜ್ಞಾನ ಮೂರೆರಡು ಭೇಧಗಳ
ಸಾರವನೆ ತಿಳಿಸಿ ಸಂಸಾರ ನಿಧಿ ದಾಟಿಸೋ ೨

ಗರ್ವರಹಿತನು ಇವಗೆ ಕವನ ಶಕ್ತಿಯನಿತ್ತು
ಸರ್ವತ್ರ ಸರ್ವದಾ ಸರ್ವಕಾರ್ಯಗಳಲ್ಲಿ
ಸರ್ವೇಶ ತವನಾಮ ಸ್ಮೃತಿಯನ್ನೆ ಕರುಣಿಸುತ
ದರ್ವಿ ಜೀವನಕಾಯೊ ಸರ್ವಾಂತರಾತ್ಮಾ ೩

ಶ್ರೀದ ಶ್ರೀ ವೆಂಕಟನ ನೋಡಿದೆ ಎಂಬಂಥ
ಮೋದದಾಯಕ ಪದವು ಉದಯ ವಿಠಲಾಂಕಿತ

ವಾದಿರಾಜರ ಶಿಷ್ಯ ಪಾಡಿ ಪೂರೈಸುತಿರೆ
ನೀದಯದಿ ತವರೂಪ ತೋರ್ದುದನು ಮರೆ ಮಾಡಿದೆ ೪

ಪಾವಮಾನಿಯ ಪ್ರೀಯ ಭಾವುಕರ ಪರಿಪಾಲ
ಗೋವತ್ಸ ಧ್ವನಿ ಕೇಳಿ ಧಾವಿಸೀ ಬರುವಂತೆ
ತೀವ್ರುಪಾಸನೆ ಇತ್ತು ಇವನ ಹೃತ್ಕಂಜದಲಿ
ದೇವ ಗುರು ಗೋವಿಂದ ವಿಠಲ ತವರೂಪ ತೋರೊ ೫

೫೧೯

ಉರಗಗಿರಿವಾಸ ವಿಠಲ । ಪೊರೆಯ ಬೇಕಿವಳಾ ಪ

ಪರಮಕರುಣಾಮೂರ್ತಿ । ಪ್ರಾರ್ಥಿಸುವೆ ಹರಿಯೇ ಅ.ಪ.

ನಿರತ ನಿನ ಸ್ಮರಿಪರಘ । ಪರಿಹರಿಪೆ ನೆಂಬನುಡಿ
ಪರಮ ಸಾರ್ಥಕ ಗೊಳಿಸೊ । ತರಳೇ ಇವಳಲ್ಲಿ
ಕರುಣ ಸಾಗರ ನಿನ್ನ । ಬೇರೊಂದಪೇಕ್ಷಿಸದೆ ।
ಸರಸದಲಿ ತವರೂಪ । ಚಿಂತೆಯಲ್ಲಿಹಳೋ ೧

ಮರುತ ಮತವನೆ ಪೊಂದಿ । ತರತಮದ ಸುಜ್ಞಾನ
ಪರಪಂಚಬೇಧಗಳ । ಅರಿತು ಭಜಿಸುವಳೋ
ನೆರೆನಂಬಿ ತವಪಾದ । ಹಾರೈಸುತಿರುತಿಹಳ
ವರ ಸುಸಾಧನವನ್ನೆ । ಅಭಿವೃದ್ಧಿಗೊಳಿಸೊ ೨

ಪತಿಸುತರು ಹಿತರಲ್ಲಿ । ವ್ಯಾಪ್ತ ಶ್ರೀಹರಿಯೆಂಬ
ಮತಿಯಿಂದ ಸೇವಿಸುತ । ದ್ರವ್ಯ ವಿಭಮನಾ
ಹತಗೈದು ಕತ್ರುಪ್ವ । ಅಂತಕಾರಕ ಭ್ರಮವ
ಕ್ಷಿತಿರಮಣ ಪರಿಹರಿಸಿ । ಆರ್ತಳುದ್ಧರಿಸೋ ೩

ಜ್ಞಾನ ಸದ್ವೈರಾಗ್ಯ । ಅನುವಂಶಿಕವಾಗಿ
ನೀನಾಗಿ ಕರುಣಿಸಿಹೆ । ಜ್ಞಾನಾತ್ಮಹರಿಯೆ

ಮೌನಿಕುಲ ಸನ್ಮಾನ್ಯ । ಜ್ಞಾನಿ ಜನಸಂಗವನು
ನೀನಾಗಿ ಕೊಟ್ಟಿವಳ ಉದ್ಧರಿಸೋ ಹರಿಯೆ ೪

ಸರ್ವಜ್ಞ ಸರ್ವೇಶ । ಸರ್ವಾಂತರಾತ್ಮಕನೆ
ದರ್ವಿ ಜೀವಿಯ ಹೃದಯ । ಗಹ್ವರದಿ ನಿನ್ನಾ
ಭವ್ಯರೂಪವ ತೋರಿ । ಉದ್ದಾರ ಗೈ ಇವಳಾ
ಶರ್ವವಂದ್ಯನೆ ಗುರು । ಗೋವಿಂದ ವಿಠಲಾ ೫

೫೨೦

ಋಗ್ವೇದ ಪ್ರಿಯ ವಿಠಲ । ಸದ್ಗುಣಾರ್ಣವನೇ ಪ

ಋಗ್ವಿನುತ ನೀನಾಗಿ । ಈಕೆಯನು ಪೊರೆಯೋ ಅ.ಪ.

ವೇದಾಧಿಕಾರವನು । ನೀ ದಯದಿ ತ್ಯಜಿಸದೆ
ಮೋದದಿಂ ತೋರಿ । ಋಗ್ವೇದ ವಾಚಿಸಿದೇ ।
ಮೋದ ಮುನಿ ಮತದಲ್ಲಿ । ಸಾಧಿಸಿವಳಲಿ ದೀಕ್ಷೆ
ಭೇದ ಪಂಚಕ ತಿಳಿಸಿ । ಉದ್ಧರಿಸೊ ಇವಳಾ ೧

ಹರಿದಾಸ್ಯ ಕಷ್ಟವೆನೆ । ಹಿರಿಯರ ಮತವಿಹುದು
ತರಳೆ ಆದ ಕಾಂಕ್ಷಿಪಳು । ಪೂರ್ವ ಪುಣ್ಯದಲೀ
ಮುರವೈರಿ ನೀನಾಗಿ ಕರುಣಿಸುತ ತವದಾಸ್ಯ
ಪರಿಹರಿಸು ಭವನೋವ । ಕಾರುಣ್ಯಮೂರ್ತೇ ೨

ವಾಚಾಮ ಗೋಚರನೆ । ಖೇಚರೋತ್ತಮವಂದ್ಯ
ನೀಚೋಚ್ಚ ತರತಮನ । ವಾಚಿಸಿವಳಲ್ಲೀ
ಕ್ರಂಚಾರಿ ಸನ್ನುತನೆ । ಕೀಚಕಾರಿ ಪ್ರಿಯನೆ
ಮೋಚಕೇಚ್ಛೆಯಲಿ ಭವ । ಮೋಚನವ ಗೈಯ್ಯೋ ೩

ಲೌಕಿಕವು ವೈದಿಕವು । ಸಕಲವರ್ಣಾತ್ಮಕನೆ
ವಾಕು ಸಕಲವು ತವ ಆ । ಲೌಕಿಕದ ಮಹಿಮಾ

ವಾಕಾಗಿ ವರ್ತಿಸುತ । ಬೇಕಾದ ವರ ನೀಡಿ
ನೋಕ ನೀಯನೆ ಕಾಯೊ । ಈಕೆಯನು ಹರಿಯೇ ೪

ಭಾವಿ ಮರುತರ ಪ್ರೀಯ । ಆವಾವ ಕಾಲಕ್ಕು
ದೇವ ತವ ಸ್ಮೃತಿಯಿತ್ತು । ಕಾವುದೀಕೆಯನೂ
ನೋವು ಸುಖಗಳ ಸಮತೆ । ಭಾವದಲಿ ಅನುಭವಿಪ
ಭಾವ ಕೊಡುವುದು ಗುರೂ । ಗೋವಿಂದ ವಿಠಲಾ ೫

೫೨೧

ಋಜುರಾಜ ಸನ್ನುತ । ವಿಠಲ ಪೊರೆ ಇವಳಾ ಪ

ಯಜನ ಯಜ್ಞಾಭಿದನೆ । ಗಜವರದ ಹರಿಯೇ ಅ.ಪ.

ಗುರು ಹಿರಿಯರ ಸೇವೆ । ಈ ನೆರೆಮಾಳ್ವಳೇಕನ್ಯೆ
ಕರ ಪಿಡಿದು ಪೊರೆ ಇವಳ । ಕಾರುಣ್ಯ ಸಿಂಧೋ
ತರತಮಾತ್ಮಕ ಜ್ಞಾನ । ಮೂರೆರೆಡು ಭೇದಗಳ
ಅರಿವಾಗುವಂತೆಸಗೊ । ಮರುತಾಂತರಾತ್ಮಾ ೧

ದುರಿತ ರಾಶಿಗಳಳಿದು । ವರಸುವೈರಾಗ್ಯವನು
ಕರುಣಿಸುತ ಪೊರೆ ಇವಳ । ಧರೆಯಮರ ವಂದ್ಯಾ
ಇರಿಸಿ ಸತ್ಸಂಗದಲಿ । ನೆರೆಸು ಸಾಧನಗೈಸೊ
ಪರಮಾತ್ಮ ಪರಮೇಶ ಪರಿಪೂರ್ಣ ಹರಿಯೇ ೨

ಶರ್ವಾದಿ ದಿವಿಜೇಡ್ಯ । ಸರ್ವಸ್ವಾಮಿಯೆ ದೇವ
ಭವ ವನಧಿ ಉತ್ತರಿಸೊ । ಭವದೂರ ಹರಿಯೇ
ಸವನತ್ರಯದಲಿ ನಿನ್ನ । ತವ ನಾಮ ಸ್ಮೃತಿಯಿತ್ತು
ಅವನತಳ ಪೊರೆಯೊ ಗುರು । ಗೋವಿಂದ ವಿಠಲಾ ೩

೫೨೨

ಅಂಕಿತ ಪದ

ಕನಕಾದ್ರಿ ಹರಿ ವಿಠಲ । ಕಾಪಾಡೊ ಇವಳಾ ಪ

ಅನಘನಿನ್ನಯ ಪಾದ । ವನಜ ಸೇವಿಪಳಾ ಅ.ಪ.

ಭಕ್ತಿಯುವ ಸೂಕನ್ಯೆ । ಆರ್ಥಿಪಳ ಹರಿದಾಸ್ಯ
ಸತ್ಯಕಾಮ ಶರಣ್ಯ । ನಿತ್ಯ ಮಂಗಳನೆ ।
ಅತ್ತ ತೈಜಸ ಸೂಚ್ಯ । ಇತ್ತಿಹೆನೊ ಅಂಕಿತವ
ಸಾರ್ಥಕನಿಸುದು ಇದನ । ಭಕ್ತನಾಭಯದನೇ ೧

ಪತಿಸೇವೆ ದೊರಕಿಸುತಾ । ಮುಕ್ತಿ ಮಾರ್ಗದಿ ನಡೆಸಿ
ಕೃತಕೃತ್ಯಳೆಂದೆನಿಸೊ । ಕೃತಿರಮಣದೇವಾ ।
ಹಿತವಹಿತ ವೆರಡುಗಳಾ । ಸಮತೆಯಲಿ ಉಂಬಂಥ
ಧೃತಿಯನ್ನೆ ನೀಕೊಟ್ಟು । ಸತತ ಕೈ ಪಿಡಿಯೋ ೨

ಮಧ್ವಮತ ತತ್ವಗಳ । ಶುದ್ಧಭಾವದಿ ತಿಳಿದು
ಅದ್ವಯನು ಹರಿಯೆಂಬ । ಬುದ್ಧಿವೃದ್ಧಿಸುತಾ
ಶ್ರದ್ದೆ ಭಕ್ತಿ ಜ್ಞಾನ । ಸಿದ್ಧಾಂತ ಅನುಸರಿಪ
ಶುದ್ಧ ಬುದ್ಧಿಯನಿತ್ತು । ಉದ್ಧರಿಸೊ ಹರಿಯೇ ೩

ಕಾಮಿತ ಪ್ರದನಾಗಿ । ಕಾಮಿತಂಗಳನಿತ್ತು
ಭೂಮಿಯೊಳು ಸದ್ವೃಂದ್ಯ ಸ್ತೋಮದಲಿ ಮೆರೆಸೋ
ಶ್ಯಾಮಸುಂದರ ಹರಿಯೆ । ಶ್ರೀಮಹೀ ಸೇವಿತನೆ
ನೀ ಮನವ ಮಾಡೆ ಹರಿ । ಆವುದಾ ಸಾಧ್ಯಾ ೪

ಭಾವ ಜ್ಞಾನೀನಿರಲು । ಪೇಳ್ವುದೇನಿಹುದಿನ್ನು
ಭಾವುಕಳ ಪೊರೆಯಿಂದು । ಓವಿ ಪ್ರಾರ್ಥಿಸುವೆ ।

ಭಾವಜನಯ್ಯಗುರು । ಗೋವಿಂದ ವಿಠ್ಠಲನೆ
ನೀವೊಲಿಯದಿನ್ನಿಲ್ಲ । ಕಾವಕೊಲ್ಲುವನೆ ೫

೫೨೩

ಕದರಿ ನರಹರಿ ವಿಠಲ । ಮುದದಿ ಪೊರೆ ಇವಳಾ ಪ

ಬೆದರಿ ಬೆಂಡಾಗಿ ತವ । ಪದಕೆ ಬಿದ್ದಿಹಳಾ ಅ.ಪ.

ಘನ್ನ ಮಹಿಮನೆ ದೇವ । ನಿನ್ನ ಪದ ಕಮಲಗಳ
ನನ್ನೆಯಿಂ ಭಜಿಪಳಿಗೆ । ಬನ್ನ ಬವಣೆಗಳೇ ?
ಇನ್ನು ಪೇಕ್ಷಿಸದೆ ಕಾ । ರುಣ್ಯ ವೀಕ್ಷಣ ತೋರೊ
ಪನ್ನಂಗಶಯ್ಯ ಹರಿ । ಮನುಜ ಮೃಗವೇಷಾ ೧

ಸ್ವಾಪದಲಿ ನೀ ತೋರ್ದ । ಆಸನಿಯ ಅಂಕಿತವ
ಪ್ರಾಪಿಸಿಹೆ ಇವಳಿಗೆ । ಶ್ರೀಪತಿಯೆ ಕೇಳೋ ।
ನೀ ಪಾಲಿಸುತ್ತಿವಳ । ತಾಪತ್ರಯಗಳ ಕಳೆಯೆ
ಹೇ ಪಯೋಜ ಭವನುತ । ಪಾಪಾತಿದೂರಾ ೨

ಸದ್ವಂಶದಲಿ ಬಂದು । ಮಧ್ವಮತದಲ್ಲಿಹಳು
ಶ್ರದ್ಧೆಯಿಂ ತವ ಪಾದ । ಪದ್ಮಗಳ ಭಜಿಪಾ
ಮುಗ್ದೆಯನು ಪೊರೆಯೆಂದು । ಮಧ್ವಾಂತರಾತ್ಮಕನೆ
ಬುದ್ಧಿ ಪೂರ್ವಕ ಬೇಡ್ವೆ । ಶ್ರದ್ಧೆ ಪತಿಸುತನೇ ೩

ಐಹಿಕಾಮುಷ್ಮಿಕದ । ಬಹು ಪರಿಯ ಸುಖ ಸೌಖ್ಯ
ಶ್ರೀಹರಿಯೆ ಕರುಣಿಸುತ । ಕಾಪಾಡೊ ಇವಳಾ
ಸ್ನೇಹ ಸತ್ಸಂಗದಲಿ । ಪಾಲಿಸುತ ನೀನಾಗಿ
ಮೋಹ ಮಮತೆಯ ಕಳೆದು । ಸಾಧನವ ಗೈಸೋ ೪

ತರಳ ಪ್ರಹ್ಲಾದನನ । ಪೊರೆಯಲಿಲ್ಲವೆ ಹರಿಯೆ
ವರ ಧ್ರುವನನ ಪಾಂಚಾಲಿ । ಅಜಮಿಳರ ಪೊರೆದೆ

ಮರುತಾಂತರಾತ್ಮ ಗುರು । ಗೋವಿಂದ ವಿಠ್ಠಲನೆ
ಪೊರೆಯ ಬೇಕಿವಳ ಬಹು । ಕಾರುಣ್ಯದಲಿ ಹರಿಯೇ ೫

೫೨೪

ಕಮಲಾಲಯ ವಿಠಲ । ಕಾಪಾಡೊ ಇವಳಾ ಪ

ಬ್ರಹ್ಮಾದಿ ಸುರ ವಂದ್ಯ । ಅಮಿತ ಮಹಿಮಾತ್ಮಾ ಅ.ಪ.

ಹಿಂದಿನ ಸುಕೃತದಿಂ । ಕೈ ಹಿಡಿದು ವೈಷ್ಣವನ
ನಂದತೀರ್ಥರ ಪಾದ । ವಂದನೆಯ ಬಯಸೀ
ಬಂದಿಹಳು ಎನ್ನಲ್ಲಿ । ಕಂದರ್ಪಪಿತ ನಿನ್ನ ।
ಅಂದ ದಾಸ್ಯವ ಬಯಸಿ । ಪ್ರಾರ್ಥಿಸುತ್ತಿಹಳೋ ೧

ಮನ್ನಿಸುತ ಮನ್ಮನದ । ಬಿನ್ನಪವ ಸಲಿಸುತ್ತ
ನನ್ನೆಯಿಂ ತೈಜಸನು । ನೀನೇವೆ ಆಗೀ
ಚೆನ್ನಮುತ್ತೈದುಳ್ಳ ।ಹೆಣ್ಣೆನ್ನ ರೂಪದಲಿ
ಸನ್ನಿಹಿತ ದಂಕಿತವೆ ಸೂಚಿಸಿದೆ ಹರಿಯೇ ೨

ದುಷ್ಟ ಸಂಸ್ಕಾರಗಳ । ಸುಷ್ಠು ಕಳೆಯುತ ನೀನು
ಕಷ್ಟ ಸಂತೋಷಗಳ । ಸಮತೆಯನೆ ತಿಳಿಸೀ
ವಿಠಲನ ನಾಮ ಸುಧೆ । ವಜ್ರ ಕವಚವ ತೊಡಿಸಿ
ಶ್ರೇಷ್ಠಭಕುತಳ ಗೈಯ್ಯೊ । ವಿಷ್ಠರ ಶ್ರವನೇ ೩

ಎಲ್ಲೆಲ್ಲೂ ನೀನಿದ್ದು । ಬೆಲ್ಲದಚ್ಚಿನ ಪರಿಯ
ಮಲ್ಲ ಮರ್ಧನ ಕೃಷ್ಣ । ಕೈಪಿಡಿದು ಇವಳಾ
ಬಲ್ಲವರ ಸಂಗದಲಿ । ಚೆಲ್ವತವ ಮಹಿಮೆಗಳ
ಸಲ್ಲಲಿತ ಮನದಲ್ಲಿ ಕೇಳುವಂತೆಸಗೋ ೪

ಪತಿಸುತರುಹಿತರಲ್ಲಿ । ವಿತತ ನಿನ್ನಯಮೂರ್ತಿ
ಅತಿಶಯಂಗಳ ಕಂಡು । ಮರುತಮಾರ್ಗದಲೀ

ಹಿತ ಗುರು ಗೋವಿಂದ । ವಿಠಲನ್ನ ಸೇವಿಸುವ
ಮತಿಯನೇ ಕೊಡು । ಪ್ರಾರ್ಥಿಸುವೆ ಹರಿಯೇ ೫

೫೨೫

ಕಮಲಾ ರಮಣ ಹರಿ ವಿಠಲ । ಕಾಪಾಡೊ ಇವಳಾ ಪ

ವಿಮಲ ಮತಿ ಕರುಣಿಸುತ ಮಮತೆಯನೆ ಕಳೆದೂ ಅ.ಪ.

ಗುರುರೂಪಿ ತೈಜಸನೆ । ಪರಮನುಗ್ರಹ ಪೊಂದಿ
ಗುರುವಿನಿಂದ ಶಿಷ್ಯನ । ಪಡೆಯುತಲಿ ಮತ್ತೇ
ಪರ್ವತವ ಅಡಿಯಲ್ಲಿ । ಪರಮ ಗುರು ತದ್ಗುರುವ
ವರ ಅಂಕಿತಗಳ ಕಂಡು । ಮರಮಾಶ್ಚರ್ಯ ಪೊಂದೀ ೧

ಹರ ವಿರಿಂಚಾದಿಗಳು । ಹರಿಯ ಸೇವಕರೆಂಬ
ವರಮತಿಯ ಪೊಂದುತ್ತ । ಚರಾಚರಗಳಲ್ಲಿ
ಹರಿಯಧಿಷ್ಠಿತನೆಂಬ । ವರ ಜ್ಞಾನದಿಂದಲ್ಲಿ
ಹರುಷದಿಂ ಸೇವಿಸುವ । ಸಾಧನವ ಗೈಸೋ ೨

ಹರಿ ಗುರೂ ಸದ್ಭಕ್ತಿ । ಹಿರಿಯರ ಸತ್ಸೇವೆ
ಕರುಣಿಸುತಲೀ ಕಾಯೋ । ಕಮಲಾಕ್ಷ ಹರಿಯೇ
ಕರುಣ ನಿಧಿ ನೀನೆಂದು । ಒರಲುತಿದೆ ವೇದಗಳು
ಪರಿಪಾಲಿಸಿವಳ ಗುರು । ಗೋವಿಂದ ವಿಠಲಾ ೩

೫೨೬

ಕರಿವರದ ಗೋಪಾಲ ವಿಠಲ ಸಲಹೋ ಪ

ತರಳನನು ನಿನ್ನಡಿಗೆ ಒಪ್ಪಿಸಿಹೆ ಹರಿಯೇ ಅ.ಪ.

ಸ್ವಾಪದಲಿ ನರಸಿಂಹ ರೂಪದಲಿ ಕರವೆತ್ತಿ
ಶ್ರೀಪತಿಯೆ ಅನುಗ್ರಹಿಸಿ ಕರುಣಿಸಿರುವೇ
ಈ ಪರಿಯ ಮಹಿಮೆಗಳ ನಾ ಪೇಳಲಳವಿಲ್ಲ
ಕೈಪಿಡಿದು ತರಳನ್ನ ಕಾಪಾಡೊ ಹರಿಯೇ ೧

ಸಿದ್ಧಾಂತ ಜ್ಞಾನಗಳು ಸಿದ್ಧಿಯಾಗಲಿ ಇವಗೆ
ಮಧ್ವ ಮತ ದೀಕ್ಷೆಯಲಿ ಶುದ್ಧವಾಗಿರಲೀ
ಶುದ್ಧಭಕ್ತಿಯಲಿಂದ ವೃದ್ಧರನು ಸೇವಿಸಲಿ
ಮಧ್ವ ವಲ್ಲಭ ನಿನ್ನ ಪ್ರಾಧ್ಯಾನ ವಿರಲೀ ೨

ಅರ್ಥಿಯಲಿ ಗುರುರಚಿತ ಕೀರ್ತನೆಯ ಭಜಿಪಂಥ
ಚಿತ್ತಕೊಡು ಇವಗೆ । ಜಗಕರ್ತಾ ಸಂಹರ್ತಾ
ಮತ್ತೆ ಲೌಕಿಕದಲ್ಲಿ ಸತ್ಕೀರ್ತಿ ವೈಭವವ
ಇತ್ತು ಪಾಲಿಸು ಹರಿಯೆ । ನಿತ್ಯ ಮಂಗಳದಾ ೩

ಪರಿಪರಿಯ ಮಹಿಮೆಗಳ । ತೋರುತಲಿ ಇವನಲ್ಲಿ
ಧರೆಯ ಜನಗಳಿಗೆಲ್ಲ । ತೋರಿ ಕೌತುಕವಾ
ಮೆರೆವ ಸಂಪದವಿತ್ತು । ಮರೆಸಿದೆ ತವಸ್ಮೃತಿಯ
ಪೊರೆಯ ಬೇಕೆಂದೆನುತ । ಮೊರೆ ಇಡುವೆ ಹರಿಯೇ ೪

ಅಷ್ಟ ಸೌಭಾಗ್ಯಗಳು । ಅಷ್ಟು ಸ್ಥಿರವಲ್ಲೆಂಬ
ಸುಷ್ಟು ಮತಿಯಿಲ್ಲವಗೆ । ನಿಷ್ಠೆ ಇರಲೆಂಬ
ಶ್ರೇಷ್ಠ ಭಿನ್ನಪಕೃಷ್ಣ । ದ್ವೈಪಾಯ ನಾತ್ಮಕನೆ
ಕೃಷ್ಣ ಗುರು ಗೋವಿಂದ ವಿಠ್ಠಲನೆ ಸಲಿಸೋ ೫

೫೨೭

ಕೈವಲ್ಯಪತಿ ವಿಠಲ । ಇವಳ ನೀ ಸಲಹೋ ಪ

ದೇವದೇವೊತ್ಮತವ । ದಾಸ್ಯಕಾಂಕ್ಷಿಪಳಾ ಅ.ಪ.

ಗುರುಗಳೊಂದಗೆ ಯಾತ್ರೆ । ಭರದಿ ಸ್ವಪ್ನದಿಗೈದು ।
ಮರಳಿ ಕೊಲ್ಹಾಪುರದ । ಶಿರಿರಮೆಯ ಕಂಡೂ ।
ಮರುತ ದರ್ಶನದಿಂದ । ವರಸು ಉಪದೇಶಕ್ಕೆ
ತರುಣಿ ಶುದ್ಧಳು ಇಹಳು । ಉರಗಾದ್ರಿವಾಸಾ ೧

ತೈಜಸನು ನೀನಾಗಿ ನೈಜದಂಕಿತ ಪ್ರಾಪ್ತಿ
ಮಾಜದಲೆ ಸೂಚಿಸಿಹೆ । ಭ್ರಾಜಿಷ್ಣು ಮೂರ್ತೇ।
ಯೋಜಿಸಿದೆ ಅದಕಾಗಿ । ತರಳೆಗಂಕಿತವನ್ನು
ರಾಜಿಸೋ ಮನದಿ ತವ । ನೈಜರೂಪವನೂ ೨

ತರತಮದ ಸುಜ್ಞಾನ । ಹರಿಗುರೂ ಸದ್ಭಕ್ತಿ
ಮರುತ ಮತ ದೀಕ್ಷೆಯನು । ಪರಮ ವೈರಾಗ್ಯ
ಕರುಣಿಸುತ ಸಂಸಾರ ಶರಧಿಯನೆ ದಾಂಟಿಸೊ
ಅರವಿದೂರನೆ ಹರಿಯೆ । ಪ್ರಾರ್ಥಿಸುವೆ ನಿನ್ನಾ ೩

ಕರ್ಮ ನಿಷ್ಕಾಮದಲಿ । ಪೇರ್ಮೆಯಲಿ ಚರಿಪಂತೆ
ಭರ್ಮಗರ್ಭನ ಪಿತನೆ । ಸನ್ಮನವನಿತ್ತೂ ।
ನಿರ್ಮಮತೆ ನೀಡಿ । ಕರ್ಮನಿರ್ಲೇಪದಲಿ
ಹರ್ಮ್ಯ ವೈಕುಂಠವನು । ಗಮಿಪ ತೆರಮಾಡೋ ೪

ಭಾವುಕರ ಪರಿಪಾಲ । ಭೂವೈಕುಂಠಲೋಲ
ದೇವದೇವೋತ್ತಮನೆ । ಗೋವಿಂದ ಮೂರ್ತೇ ।
ನೀ ವೊಲಿಯದಿಲ್ಲ ಗುರು । ಗೋವಿಂದ ವಿಠ್ಠಲನೆ
ಸೇವಕಳ ಪೊರೆಯಲ್ಕೆ । ಪ್ರಾರ್ಥಿಸುವೆ ಹರಿಯೇ ೫

೫೨೮

ಕೋನೇರಿ ವಾಸ ವಿಠಲ । ನೀನೆ ಪೊರೆ ಇವನ ಪ

ಕಾಣೆ ನಿನ್ನೊರತು ಕಾ । ರುಣ್ಯ ಮೂರುತಿ ಹರಿಯೆಂ
ಜ್ಞಾನಗಮ್ಯನೆ ಸಲಹೊ । ಮಾಣದಲೆ ಇವನಾ ಅ.ಪ.

ಯೇಸೊ ಜನ್ಮದ ಸುಕೃತ । ರಾಶಿ ಫಲಿಸಿತೊ ಇವಗೆ
ದಾಸ ದೀಕ್ಷೆಯಲಿ ಬಹು । ಆಶೆ ತೋರುವನೋ
ವಾಸವಾನುಜ ನಿನ್ನ । ದಾಸತ್ವ ಪಾಲಿಸುತ
ಪೋಷಿಸೂವುದು ಬಿಡವೆ । ಶೇಷಾದ್ರಿವಾಸಾ ೧

ತೈಜಸನು ಗುರುವಾದಿ । ರಾಜಾಖ್ಯ ರೂಪದಲಿ
ಮಾಜದಲೆ ಪೇಳ್ವ ವಿ । ಭ್ರಾಜದಂಕಿತವಾ
ವಾಜರೂಪಯು ಹರಿಯೇ । ಯೋಜಿಸಿಹೆ ಇವಗೆನಿ
ರ್ವ್ಯಾಜ ಕರುಣಿಯೆ ಪೂರ್ಣ । ತೇಜೌಜ ನಿಧಿಯೇ ೨

ಮಧ್ವ ಸಮಯದ ಜ್ಞಾನ । ವೃದ್ಧಿ ಗೈಸಿವನಲ್ಲಿ
ಅದ್ವೈತ ತ್ರಯದರಿವು । ಬುದ್ಧಿಗೇ ನಿಲುಕೀ
ಅಧ್ವಯನು ಹರಿಯೆಂಬ । ಸಿದ್ಧಾಂತ ಮನಸಿನಲಿ
ಬದ್ಧವಾಗುವ ತೆರದಿ । ಸಿದ್ಧಿಸೋ ಹರಿಯೇ ೩

ಕಂಸಾರಿ ತವನಾಮ । ಶಂಸನ ಪ್ಲವದಿಂದ
ಸಂಸಾರ ನಿಧಿ ತರಣ । ಸಂಶಯವು ರಹಿತಾ
ಅಂಶ ಅವತಾರ ಆ । ವೇಶ ವಿಷಯಗಳ ನಿ
ಸ್ಸಂಶಯದಿ ತಿಳಿಸಿ ಪದ । ಪಾಂಸು ಸೇವೆ ಈಯೋ ೪

ಸರ್ವಜ್ಞ ಸರ್ವೇಶ ಸರ್ವಮೂಲನೆ ದೇವ
ದುರ್ವಿಭಾವ್ಯದೆ ಹರಿಯೆ । ಶರ್ವವಂದ್ಯಾ
ಸರ್ವಾಂತರಾತ್ಮ ಗುರು । ಗೋವಿಂದ ವಿಠ್ಠಲನೆ
ದರ್ವಿ ಜೀವಿಯ ಪೊರೆಯೆ । ಪ್ರಾರ್ಥಿಸುವೆ ಹರಿಯೆ ೫

೫೨೯

ಖಗವರಧ್ವಜ ವಿಠಲ ಪೊರೆಯ ಬೇಕಿವನ ಪ

ಭಾಗವತ ಸುಶ್ಲೋಕ್ಯ ಬಗೆಬಗೆಯಲಿಂದಿವನ
ಮಿಗಿಲಾಗಿ ಪೊರೆಯಲ್ಕೆ । ಪ್ರಾರ್ಥಿಸುವೆ ಹರಿಯೇ ಅ.ಪ.

ವಿತ್ತಪತಿಯೊಲಿಮೆಗಳು । ಕತ್ತರಿಸಿ ಪೋಗಿ ಕೃತ
ಕೃತ್ಯತಾನೆಂಬ ಉ । ತ್ಕೃಷ್ಟಮತಿಯೊದಗೇ
ಕೃತಿವಾಸನ ತಾತ । ಇತ್ತುದಕೆ ಸಂತೃಪ್ತಿ
ಪೊತ್ತು ತವದಾಸ್ಯವನು । ಅರ್ಥಿಸುವ ಹರಿಯೇ ೧

ಪೋರನಾ ಮಯಕಳೆದು । ತಾರತಮ್ಯ ಜ್ಞಾನ
ಮೂರೆರಡು ಭೇದಗಳ । ಸಾರವನೆ ಅರುಹೀ
ಕಾರಣಿಕ ನೀನೆ ಉ । ದ್ಧಾರವನೆ ಮಾಡೊ ಹರಿ
ಬೇಕೊಂದ ಪ್ರಾರ್ಥಿಪೆನೊ । ಕಾರುಣ್ಯ ಮೂರ್ತೇ ೨

ಅನೇಕ ಜನ್ಮದಲಿ । ಹೀನಯೋನಿಲಿ ನೊಂದು
ಜ್ಞಾನ ಸಾಧನ ವಿರದೆ । ದೀನ ನಾದವಗೇ
ಮಾನ ನಿಧಿ ಶಾಸ್ತ್ರ ಸಂ । ಧಾನ ವೀಯುತ ತ್ವರ್ಯ
ಧ್ಯಾನ ಸಾಧನ ವೀಯೊ । ಪ್ರಾಣಾಂತರಾತ್ಮಾ ೩

ಲೌಕಿಕವನೆಲ್ಲ ವೈ । ದೀಕ ವೆಂದೆನಿಸೊ ಹರಿ
ಕಾಕು ಸಂಗವ ಕೊಡದೆ । ನೀ ಕೊಡೊ ಸತ್ಸಂಗ
ಏಕಮೇವನೆ ಸ್ವಾಮಿ । ಮಾಕಳತ್ರನೆ ನಿನ್ನ
ನೇಕ ಬಗೆಯಲಿ ತುತಿಪ । ವಾಕ್ಸಿದ್ಧಿ ಈಯೋ ೪

ಪದ್ಮನಾಭನೇ ಹೃ । ತ್ಪದ್ಮದಲಿ ತವರೂಪ
ಸಿದ್ಧಿಸುತ ಸಂಚಿತವ । ಪ್ರಧ್ವಂಸ ಗೈದೂ
ಅದ್ವೈತ ತ್ರಯದರಿವು । ಬುದ್ಧಿಗೆ ನಿಲುಕಿಸೆನೆ
ಹೃದ್ಯ ಗುರು ಗೋವಿಂದ ವಿಠಲ ಬಿನ್ನವಿಪೇ ೫

೫೩೦

ಗಂಗಾ ಜನಕ ವಿಠಲ । ಅಂಗನೆಯ ಪೊರೆಯೋ ಪ

ಮಂಗಳಾಂಗನೆ ದೇವ । ರಂಗ ಭವಹಾರೀ ಅ.ಪ.

ವೈರಾಗ್ಯ ಭಾಗ್ಯಗಳ । ಹಾರೈಸುವಂತೆಸಗೋ
ಸಾರಸುಖ ಸಾಂದ್ರ ಹರಿ । ಮಾರಮಣ ದೇವಾ ।
ಘೋರ ಭವವೆನಿಪ ಕೂ । ಪಾರ ದಾಟಿಸೊ ಹರಿಯೆ
ಕಾರುಣ್ಯ ಶರಧಿತವ । ಓರೆ ನೋಟದಲೀ ೧

ಗಣನೆಗೊಳಗಾಗದಿಹ । ಜನನ ಮರಣವು ಬರಲಿ
ತನು ಮನದ ಸಂತಾಪ । ಅಣು ಬೃಹತು ಇರಲೀ
ಗುಣ ಪೂರ್ಣ ಶ್ರೀಹರಿಯೆ । ಗಣನೆಗದು ಸಿಗದ ತೆರ
ಅನನುತನೆ ನಿನ್ನ ಕಾರುಣ್ಯ ಒಂದಿರಲೀ ೨

ಅಂಗನೆಗೆ ಸ್ವಪ್ನದಲಿ । ಗಂಗೆ ಮೀಯಿಸಿ ಬಾಲ
ಸಂಗದಲಿ ಧವಳಾಖ್ಯ । ಗಂಗೆ ಸೋಪಾನಾ
ಭಂಗ ವಿಲ್ಲದೆ ಯೇರಿ । ಮಂಗಳಾಂಗೆರ ಕಂಡು
ಶಿಂಗರದಿ ಪೂಜಿಸಿಹ । ಅಂಗನಾ ಮಣಿಯಾ ೩

ಉಚ್ಚ ನೀ ಚಂಗಳನು । ಸ್ವಚ್ಛ ತಿಳಿಸುತ್ತಿವಳ
ಕೃಚ್ಛ್ರಕೇ ಒಲಿಯುತ್ತ । ಲಕ್ಷ್ಮೀ ರಮಣಾ
ಅಚ್ಚ ಭಕುತಿ ಜ್ಞಾನ । ನಿಚ್ಚಳದ ಮನವಿತ್ತು
ಸಚ್ಚಿದಾನಂದಾತ್ಮ । ಉಚ್ಚಳೆಂದೆನಿಸೋ ೪

ವಿಷ್ಣು ಪದಿಧರಸಖನೆ । ದಶರಥಾತ್ಮಜ ಹರಿಯೆ
ಯಶವಂತೆ ಗೃಹಿಣಿ ತವ । ಎಸೆವ
ಪದ ಬಿಸಜವನು ಹಸನು ಸೇರಿಸೊ
ಗುರೂ ಗೋವಿಂದ ವಿಠಲಾ ೫

೫೩೧

ಗಿರಿಜೆಪತಿ ಪ್ರಿಯ ವಿಠಲ । ಪೊರೆಯ ಬೇಕಿವನಾ ಪ

ದುರಿತ ವಾರಿಧಿ ಪೋತ । ಹರಿಯೇ ವಿಖ್ಯಾತ ಅ.ಪ.

ಹಿಂದಿನ ಪರಾಧಗಳ । ತಂದೆ ನೀನೆಣಿಸದಲೆ
ಕಂದನನು ಸಲಹುವುದು । ಇಂದಿರಾರಾಧ್ಯಾ
ನೊಂದಿದ್ದರು ಭವದಿ । ಮಂದ ಮಾನವ ನೀದಯ
ಎಂದಿಗೂ ಗತಿ ನೀನೆ । ಯೆಂದು ನಂಬಿಹೆನೋ ೧

ತೈಜಸನು ಶ್ರೀ ಹರಿಯೆ । ವಾಜಿವದನನು ಆಗಿ
ನೈಜರೂಪವ ತೋರಿ । ಸೋಜಿಗವ ಬೀರಿ ।
ಭ್ರಾಜಿಷ್ಣು ಭಯ ತೋರೆ । ಓಜಸವ ಕಳಕೊಂಡು
ಮಾಜದಲೆ ದುಷ್ಕರ್ಮ । ಗೋಜಿದೊಳಗಿಹನಾ ೨

ಹರಿಯ ಸಖರುದ್ರನನ । ವರಸು ವೈವಾಹಿಕವ
ತರಳನಿಗೆ ಸ್ವಪ್ನದಲಿ । ತೋರೆ ಬೆರಗಾಗೀ
ಅರಿಯು ವಂತಾಯ್ತವಗೆ ಗಿರಿಜೆ ಪತಿ ಕಲ್ಯಾಣ
ನಿರುತ ಭಕ್ತರು ಗೈವ । ಪರಮ ಸೇವೆಗಳಾ ೩

ತಾರತಮ್ಯ ಜ್ಞಾನ । ಮೂರೆರಡು ಭೇದಗಳ
ಸಾರವನೆ ತಿಳಿಸುತ್ತ । ಪೋರನ್ನ ಸಲಹೋ
ಮಾರಾರಿ ಸಖ ನಿನ್ನ । ಸಾರ ನಾಮಾ ಮೃತವ
ಬಾರಿ ಬಾರಿಗೆ ಉಣಿಸಿ । ತಾರಿಸೋ ಭವವಾ ೪

ಸತಿ ಸುತರು ಹಿತರಲ್ಲಿ । ವ್ಯಾಪ್ತನಿಹ ಶ್ರೀ ಹರಿಯೇ
ಅತುಳ ಮಹಿಮೆಯ ತಿಳಿಸಿ ವಾತಸುತ ವಂದ್ಯಾ ।
ಕೃತ ಕೃತ್ಯನೆಂದೆನಿಸಿ । ಭಕ್ತನ್ನ ಪೊರೆಯೆಂದು
ಹಿತ ಗುರೂ ಗೋವಿಂದ । ವಿಠಲ ಪ್ರಾರ್ಥಿಸುವೇ ೫

೫೩೨

ಗುರು ಜಗದೀಶ ವಿಠಲ । ಪೊರೆಯ ಬೇಕಿವನ ಪ

ಮರುತಾಂತರಾತ್ಮ ಹರಿ । ಪ್ರಾರ್ಥಿಸುವೆ ನಿನಗೇ ಅ.ಪ.

ಲೌಕಿಕದಿ ಸಂಘಟಿಪ । ಕಾಕು ಸಂಗವ ಕೊಡದೆ
ಮಾಕಳತ್ರನೆ ಕಾಯೊ । ಜೋಕೆಯಿಂದಿವನ
ವಾಕು ಮನ್ನಿಸಿ ಎನ್ನ । ಬೇಕಾದಭೀಷ್ಟಗಳ
ತೋಕನಿಗೆ ಕೊಡು ನೀನೆ ಶ್ರೀಕರಾರ್ಚಿತನೇ ೧

ಶರ್ವಾದಿ ದಿವಿಜೇಡ್ಯ । ಪರ್ವಕಾಲದಿ ಬಪ್ಪ
ಸರ್ವ ವಿಘ್ನಗಳ್ಹರಿಸಿ । ಪೊರೆಯೊ ಇವನ
ದುರ್ವಿಭಾವ್ಯನೆ ಹರಿಯೆ । ದರ್ವಿಜೀವಿಯ ಕಾದ
ಸರ್ವ ಭಾರವು ನಿನದೊ । ಸರ್ವಾಂತರಾತ್ಮ ೨

ಪೂರಿ ಜಗದೀಶ ಹೇ ಕಾರುಣ್ಯ ಮೂರುತಿಯೆ
ಪೋರನಿಗೆ ಸ್ವಾಪದಲಿ । ತೋರಿ ಕೊಂಡಿರುವೇ
ಮಾರಾರಿ ಸಖನೆ ಅನು । ಸಾರ ಅಂಕಿತವಿತ್ತು
ಧೀರ ನೀ ಪೊರೆಯೆಂದು । ಪ್ರಾರ್ಥಿಸಿಹೆ ಹರಿಯೇ ೩

ಕೃಷ್ಣೆಗಕ್ಷಯ ವಸನ । ಕೊಟ್ಟು ರಕ್ಷಿಸಿದಂಥ
ಕೃಷ್ಣ ಮೂರುತಿ ಇವನ । ಸುಷ್ಟುಷ್ಟು ಪಾಲಿಪುದೋ
ಶ್ರೇಷ್ಠ ಹರಿ ಗುರು ಭಕ್ತಿ । ಮತ್ತೆ ತರತಮ ಜ್ಞಾನ
ಕೊಟ್ಟು ಕಾಪಾಡೊ ಹರಿ । ವಿಷ್ಟರಶ್ರವನೇ ೪

ಆವ ಸಂಸ್ಕೃತಿ ಜಲಧಿ । ನಾನೆ ಎಂದೆನಿಪ ತವ
ಭವ್ಯ ನಾಮಾಮೃತವ । ಸಾರ್ವಕಾಲದಲೀ
ತಾವಕಗೆ ಉಣಿಸುತ್ತ । ಭಾವದಲಿ ಮೈದೋರೊ
ಗೋವಿದಾಂಪತಿಯೆ ಗುರು । ಗೋವಿಂದ ವಿಠಲ ೫

೫೩೩

ಗುರು ಪ್ರಸನ್ನ ವಿಠಲ । ಪೊರೆಯ ಬೇಕಿವನಾ ಪ

ದುರಿತ ದುಷ್ಕೃತ ನಿಚಯ । ಪರಿಹರಿಸಿ ವರ್ಯಾ ಅ.ಪ.

ಮಧ್ವ ಮತದಲಿ ಶ್ರದ್ಧೆ । ವೃದ್ಧಿಗೈ ಸಿವನಲ್ಲಿ
ಶ್ರದ್ಧೆ ಪತಿನುತ ಹರಿಯೆ । ಮಧ್ವಾಂತರಾತ್ಮಾ
ಬುದ್ಧಿ ಜೀವಿಯು ಇವನು । ಸಾಧನದಿ ಶಕ್ತನಿಹ
ನಿದ್ರೆಯಿಂದೆಚ್ಚರಿಸಿ । ಉದ್ಧರಿಸೊ ಇವನಾ 1

ಅಂಕಿತದ ಉಪದೇಶ ಕಾಂಕ್ಷಿಸುತ್ತಿಹ ಇವಗೆ
ಬಿಂಕದಲಿ ತೈಜಸನು । ಗುರು ರೂಪಿಲಿಂದಾ
ಲೆಂಕಕನ ಸ್ವೀಕರಿಸಿ । ಆಶಿಷವ ನಿತ್ತಿಹನು
ಪಂಕಜಾಸನ ವಂದ್ಯ । ಅಂಕಿತವ ನಿತ್ತೇ 2

ಸಂಸಾರ ಕ್ಲೇಶಪದ । ಪಾಂಸು ಭಜಿಪುದರಿಂದೆ
ಸಂಶಯವು ರಹಿತಾಗಿ । ದೂರ ಓಡುವುದೋ
ಕಂಸಾರಿ ನಿನ ಅಂಶಿ । ಅಂಶಾವತಾರಗಳ
ಶಂಸನದಿ ಸಾಧನವ । ಗೈಸೊ ಶ್ರೀಹರಿಯೇ 3

ಕರ್ಮಾ ಅಕರ್ಮಗಳ । ಮರ್ಮಗಳ ತಿಳಿಸುತ್ತ
ಧರ್ಮಗೋಪ್ತನೆ ಕಾಯೊ । ನಿರ್ಮಲಾತ್ಮಕನೇ
ಕರ್ಮನಾಮಕ ಹರಿಯೆ । ನಿರ್ಮಮತೆ ಫಲದಲ್ಲಿ
ಪೆರ್ಮೆಯಲಿ ಕೊಡು ಕೃಷ್ಣ ಬ್ರಹ್ಮ ಭವ ವಂದ್ಯಾ 4

ಯೋಗೀಶ ಶ್ರೀ ಕೃಷ್ಣ । ಯೋಗ ಸಾಧನೆಯಿತ್ತು
ನೀಗು ಭವವನು ಇವಗೆ । ಭಾಗವತರೊಡೆಯ
ಬಾಗಿ ಬೇಡುವೆ ದಯಾ । ಸಾಗರನೆ ಉದ್ಧರಿಸೊ
ಯೋಗಿ ಜನ ವಂದ್ಯ ಗುರು । ಗೋವಿಂದ ವಿಠಲಾ 5

೫೩೪

ಗುರು ಪಾಂಡುರಂಗ ವಿಠಲ । ಪರಿಪಾಲಿಸಿವನಾ ಪ

ಕರಣ ನೀಯಾಮಕನೆ । ಕರುಣವನೆ ತೋರೀ ಅ.ಪ.

ತತ್ಥಳಿಪ ನಿನರೂಪ । ಸುಪ್ತಿಯಲಿ ತಾ ಕಂಡು
ಅತ್ಯಂತ ಆನಂದ । ತೃಪ್ತನಾಗಿಹೆನೋ ।
ಮತ್ತದನೆ ಅನುಸರಿಸಿ । ಇತ್ತಿಹೆನೊ ಉಪದೇಶ
ಕರ್ತೃ ಕರ್ಮ ಸ್ವಾಮಿ । ಎತ್ತಿಕರ ಪಿಡಿಯೋ ೧

ಭರಿತ ಭಾವುಕನಿವನು । ನಿರುತ ಸತ್ಕರ್ಮದಲಿ
ಪರಮ ರತಿಯನು ಮಾಳ್ಪ । ಸುರಸಾರ್ವ ಭೌಮ
ವರಜ್ಞಾನ ಯುತ್ ಕರ್ಮ ನೆರವಾಗಲಿವನೀಗೆ
ಪರಮ ಪಾವನ ಮೂರ್ತೆ ಹರಿ ಪಾಂಡುರಂಗಾ ೨

ಉಚ್ಚ ನೀ ಚಂಗಳನು ಸ್ವಚ್ಛೈದು ಭೇದಗಳ
ಕೃಧ್ರ ವ್ರತಗಳನರುಪಿ । ಅಚ್ಚ ಕರ್ಮದಲೀ
ಮೆಚ್ಚಿಗೆಯ ನೀನಿತ್ತು ಉಚ್ಚತವನಾಮ ಸ್ಮೃತಿ
ಹೆಚ್ಚಾಗಿ ಮಾಡಿಸುತ । ತುಚ್ಚ ಭವ ಕಳೆಯೋ ೩

ಪದ್ಧತಿಯ ತಪ್ಪದಲೆ । ಮದ್ವಮತದಂಗವನು
ಉದ್ಧರಿಸೊ ಇವನಲ್ಲಿ । ಪದ್ಮನಾಭಾಖ್ಯಾ
ಈ ಧರೆಯ ಸಂಸಾರ । ಬದ್ಧ ಲೌಕೀಕಗಳ
ತಿದ್ದಿ ವೈದಿಕವೆನಿಸೋ । ಹದ್ದು ವಾಹನನೇ ೪

ಕೃದ್ಧಖಳ ಸಂತತಿಯ । ಒದ್ದು ಕಳೆಯುತ ಹರಿಯೆ
ಹೃದ್ಗುಹದಿ ಮೈದೋರೊ । ಶಬ್ಧಗೋಚರನೇ
ಮಧ್ವಾಂತರಾತ್ಮ ಗುರು । ಗೋವಿಂದ ವಿಠ್ಠಲನೆ
ಮದ್ವಚನ ಸಲಿಸೆಂದು । ಪ್ರಾರ್ಥಿಸುವೆ ಹರಿಯೇ ೫

೫೩೫

ಗುರು ಭಾರತೀಶ ಪ್ರಿಯ । ವಿಠಲ ಪೊರೆ ಇವಳ ಪ

ನೆರೆನಂಬಿ ಬಂದಿಹಳ । ಪೊರೆಯೊ ಶ್ರೀಹರಿಯೇ ಅ.ಪ.

ದಾಸ ದೀಕ್ಷೆಯ ಜ್ಞಾನ । ಲೇಸು ಪಡೆದವಳಲ್ಲ
ಆಶೆಪಳು ತವದಾಸ್ಯ । ಮೇಶ ಮಧ್ವೇಶ
ಆಶೆ ಮಾತ್ರಕೆ ಒಲಿದು । ಪೋಷಿಸಲಿ ಬೇಕಯ್ಯ
ಹೇ ಸದಾಶಿವ ವಂದ್ಯ । ವಾಸ ವಾನುಜನೆ ೧

ಪತಿಸುತರು ಬಾಂಧವರ । ಹಿತದಲ್ಲಿ ಮತಿಯಿತ್ತು
ಅತುಳ ವಿಭವದಿ ಮೆರೆಸಿ । ಕೀರ್ತಿಕೊಡಿಸೋ
ಕೃತಿ ಪತಿಯೆ ತವಚರಣ । ಸತತ ನೆನೆಯುವ ಭಾಗ್ಯ
ಪಥದಲ್ಲಿ ಇರಿಸಿ ಕೃತ । ಕೃತ್ಯಳೆಂದೆನಿಸೋ ೨

ಕದರ ಮಂಡಲಿಗೀಶ । ಕಾಂತೇಶ ಸನ್ನುತನೆ
ವಿದುರ ಶಬರೀ ವರನ । ಉದಧಿ ಶಯನಾ ।
ಹದುಳದಲಿ ಮೂರೆರಡು । ಭೇದ ತರತಮಜ್ಞಾನ
ವದಗಿಸುತ ಪೊರೆ ಇವಳ । ಮಧು ಮಥನ ಹರಿಯೇ ೩

ನಿನ್ನ ನಾಮವ ಬಿಟ್ಟು । ಅನ್ಯ ಸಾಧನ ಕಾಣೆ
ಚೆನ್ನ ಈ ಕಲಿಯುಗದಿ । ಅನ್ನಂತ ಮಹಿಮಾ
ಘನ್ನ ದಯವನಧಿ ಆ। ಪನ್ನ ಜನರಕ್ಷಕನೆ
ನಿನ್ನೊಲಿಮೆ ಉಳ್ಳನಕ । ಇನ್ನಾವ ಭಯವೋ ೪

ಪಾವನಾತ್ಮಕ ದೇವ । ಪಾವಮಾನಿಯ ಪ್ರೀಯ
ಜೀವ ಅಸ್ವಾಂತಂತ್ರ್ಯ । ಭಾವವನೆ ತಿಳಿಸೀ ।
ದೇವ ದೇವೇಶ ಗುರು । ಗೋವಿಂದ ವಿಠಲಯ್ಯ
ಭಾವಜ್ಞ ನೀನಾಗಿ । ಪಾವಕಳೆ ಸಲಹೋ ೫

೫೩೬

ಗುರು ಮಧ್ವೇಶ ವಿಠಲ । ಪೊರೆಯ ಬೇಕಿವಳ ಪ

ಪರಮ ಭಕುತಿಲಿ ನಿನ್ನ । ದಾಸ್ಯ ಕಾಂಕ್ಷಿಪಳ ಅ.ಪ.

ಹರಿಗುರೂ ಸದ್ಭಕ್ತಿ । ಹಿರಿಯರಲಿ ಅಸಕ್ತಿ
ನಿರುತ ಕರುಣಿಸಿ ಇವಳ । ಪೊರೆಯೊ ಹರಿಯೇ ।
ಅರುಹ ಲೇನಿಹುದಿನ್ನು । ಸರ್ವಜ್ಞ ನೀನಿರುವೆ
ಕರುಣದಲಿ ಪೊರೆಯೆಂದು । ಪ್ರಾರ್ಥಿಸುವೆ ಹರಿಯೇ ೧

ಕೃದ್ಧಖಳ ಜನರನ್ನು । ಪ್ರಧ್ವಂಸ ಮಾಡುತಲಿ
ಬುಧ್ಧಿಯೊಳು ನೀ ನಿಂತು । ವಿದ್ಯೆ ಪ್ರದನಾಗೋ
ಮಧ್ವಮತ ಪದ್ಧತಿಗಳುದ್ಧರಿಸಿ ಇವಳಲ್ಲಿ
ಪದ್ಮನಾಭನೆ ಪೊರೆಯೊ । ಮಧ್ವಾಂತರಾತ್ಮಾ ೨

ಹಂಸ ವಾಹನನಾದಿಪಾಂಶದೇವರ ಪಾದ
ಪಾಂಸುವನೆ ತರತಮದಿ । ಶಂಸಿಪಂತೆಸಗೋ
ಅಂಶ ಅವತಾರ ಆವೇಶಗಳ ತಿಳಿಸುತ್ತ
ಸಂಸಾರ ಉತ್ತರಿಸೊ । ಕಂಸಾರಿ ಹರಿಯೇ ೩

ನಿನ್ನ ಪ್ರೇರಣೆಯಂತೆ । ಕನ್ಯೆಗಂಕಿತವಿತ್ತೆ
ನನ್ನೆಯಿಂ ಪೊರೆಯಿವಳ ಪನ್ನಂಗ ಶಯನಾ ।
ನಿನ್ನಂಥ ಕರುಣಾಳು । ಅನ್ಯರಾರಿಹರಯ್ಯ
ಪನ್ನಗಾರಿಯ ವಾಹ । ಅನ್ನಂತ ಮಹಿಮಾ ೪

ಪಾವನಾತ್ಮಕ ದೇವ । ಸಾರ್ವಕಾಲದಿ ನಿನ್ನ
ಪಾವನ ಸ್ಮೃತಿಯಿತ್ತು । ಶರ್ವವಂದ್ಯಾ
ಭಾವದೊಳು ಮೈದೋರಿ । ಕಾವ್ಯದನೆ ಬಿನ್ನಪವಾ
ನೀ ವೊಲಿದು ಸಲಿಸೊ ಗುರು । ಗೊವಿಂದ ವಿಠಲಾ ೫

೫೩೭

ಗುರು ಮೋಹನ ವಿಠಲ ಸಲಹಬೇಕಿವನಾ
ಕರುಣಾ ಪಯೋನಿಧಿಯೆ ಮರುತಾಂತರಾತ್ಮ ಪ

ನಿಗಮವೇದ್ಯನೆ ಹರಿಯೆ । ರಘುರಾಮ ದಾಸರೊಳು
ಮಿಗೆ ಸುಪ್ರೇರಕನಾಗಿ । ಮಗನ ಮದುವೆಯಲೀ
ಅಘಹರವು ತವನಾಮ । ಸದ್ಗುರೂ ಕರುಣೆಯಲಿ
ನಗುನಗುತ ಒದಗಿಸಿದೆ । ನಗಧರನೆ ದೇವಾ ೧

ಭೇಧ ಪಂಚಕ ತಿಳಿಸಿ । ಮೋದ ತೀರ್ಥರ ಮತದಿ
ಸಾಧನವ ಗೈಸಿವಗೆ । ಸಾಧು ವಂದಿತನೇ
ಮೋದದಾಯಕನಾಗಿ । ಐದಿಪುದು ಸದ್ಗತಿಯ
ಬಾದರಾಯಣ ದೇವ । ಪಾದ ಕಾ ನಮಿಪೇ ೨

ಹರಿಗುರೂ ಸದ್ಭಕ್ತಿ । ತರತಮದ ಸುಜ್ಞಾನ
ಕರುಣಿಸೀ ಪೊರೆ ಇವನ । ಗುರುವಂತರಾತ್ಮ ।
ಪರಮ ಗುರು ಕಾರುಣ್ಯ । ದರುಶನವ ಪಡೆದಿಹನು
ಪರಿಪರಿಯ ಸೌಖ್ಯಗಳ । ಕರುಣಿಸೋ ಹರಿಯೇ ೩

ಎಲ್ಲ ಬಲ್ಲವ ನಿನಗೆ ಪೇಳ್ವದುಂಟೇ ಎನಗೆ
ಕಲ್ಲು ಕಾಂಚನದಲ್ಲಿ । ಚೆಲ್ವ ಸಮಬುದ್ಧೀ
ನಿಲ್ಲಿಸುತ ನೀನಾಗಿ ಗೆಲ್ಲಿಸೀ ಸಂಸಾರ
ಮಲ್ಲ ಮರ್ಧನನೆ ಎನ್ನ । ಸೊಲ್ಲು ಲಾಲಿಸುತಾ ೪

ದಾವಾಗ್ನಿಯನೆ ನುಂಗಿ । ಗೋವಳರ ಪಾಲಿಸಿದೆ
ಪಾವಮಾನಿಯ ಪ್ರೀಯ । ನೀ ವೊಲಿದು ಇವಗೇ
ಭಾವದಲಿ ತವರೂಪ । ತೋರೆಂದು ಭಿನ್ನವಿಸೆ
ದೇವದೇವನೆ ಗುರು ಗೋವಿಂದ ವಿಠಲಾ ೫

೫೩೮

ಗುರು ರಾಜ ಹರಿ ವಿಠಲ । ಪೊರೆಯ ಬೇಕಿವಳಾ ಪ

ಗರುಡ ಗಮನನೆ ದೇವ । ಸರ್ವಾಂತರಾತ್ಮ ಅ.ಪ.

ಪತಿಯೆ ಪರದೈವ ವೆಂ । ಬತಿಶಯದ ಮತಿಯಿತ್ತು
ರತಳೆನಿಸು ಗುರು ಹಿರಿಯ । ಹಿತಸೇವೆಯಲ್ಲೀ
ಕೃತ ಕೃತ್ಯಳೆಂದೆನಿಸೊ । ಗೃಹ ಮೇಧಿ ಎಂಬಲ್ಲಿ
ಕೃತಿ ರಮಣ ಪ್ರದ್ಯುಮ್ನ । ವಿತತ ಮಂಗಳನೇ ೧

ಮಧ್ವಮತದನುಯಾಯಿ । ಶುದ್ಧ ಭಕುತಿ ಜ್ಞಾನ
ಉದ್ಧರಿಸಿ ಇವಳಲ್ಲಿ । ಸಾಧನವ ಗೈಸೋ
ಅಧ್ವರೇಢ್ಯನೆ ಹರಿಯೆ । ಶ್ರದ್ಧಾಳು ತನದಲ್ಲಿ
ಬುದ್ಧಿ ಓಡಲಿ ದೇವ । ಮಧ್ವಾಂತರಾತ್ಮಾ ೨

ಹರಿಕಥಾಮೃತ ಸಾರ । ತರಳೆ ಬುದ್ಧಿಗೆ ನಿಲುಕಿ
ಪರಮ ಸತ್ಸಾಧನವ । ಚರಿಸುವಂತೆಸಗೋ
ಮೊರೆಯಿಡುವೆ ನಿನ್ನಲ್ಲಿ । ಕರುಣಿಸೀ ಬಿನ್ನಪವ
ಗುರುವಂತರಾತ್ಮ ಗುರು । ಗೋವಿಂದ ವಿಠಲಾ ೩

೫೩೯

ಗುರು ರಾಘವೇಂದ್ರ ವಿಠಲ । ಪೊರೆಯ ಬೇಕಿವಳಾ ಪ

ದುರಿತ ದುಷ್ಕೃತ ಕಳೆದು । ವೈರಾಗ್ಯ ಕೊಡುತಾ ಅ.ಪ.

ಪ್ರಾಚೀನ ದುಷ್ಕರ್ಮ । ಮೋಚಕೇಚ್ಛೆಯ ಮಾಡಿ
ಕೀಚಕಾರಿಯ ಮತದಿ । ದೀಕ್ಷೆಯನೆ ಕೊಟ್ಟು
ನೀಚೋಚ್ಚ ತರತಮವೆ । ವಾಚಿಸುತ ಇವಳಲ್ಲಿ
ವಾಚಾಮಗೋಚರನ । ಭಕ್ತಿಯನೆ ಕೊಡುತಾ ೧

ಸಾಧುಸಂಗವ ಕೊಟ್ಟು । ಸಾಧನೆಯ ಗೈಸುವುದು
ಯಾದವೇಶನ ಪ್ರೀತಿ । ಸಾಧನೆಯ ಗುರಿಯಾ
ಮಾಧವನೆ ಪರನೆಂಬೋ ಬೋದ ಸಂತತಕೊಟ್ಟು
ಕಾದುಕೋ ಶ್ರೀಹರಿಯೆ । ಬಾದರಾಯಣನೆ ೨

ಸರುವ ಕರ್ಮಗಳೆಲ್ಲ ಹರಿ ಮಾಡಿ ಮಾಡಿಸುವ
ಬರುವ ತತ್ಸುಖ ದುಃಖ । ಸಮತೆಯಲಿ ಎಂಬಾ
ವರಮತಿಯ ಕರುಣಿಸುತ । ಪರಿಹರಿಸು ಭವಬಂಧ
ಕರುಣಾಳು ಗುರುರೂಪಿ । ಪೊರೆಯ ಬೇಕಿವಳಾ ೩

ಮನಸೀನ ಚಾಂಚಲ್ಯ । ವನ್ನೆ ನೀನು ಕಳೆಯುತ್ತ
ಕ್ಷಣಕನಂತಪರಾಧ । ಎಣಿಸದಲೆ ಹರಿಯೆ
ದೀನನಾಥನಾದ ಹರಿ । ಜ್ಞಾನ ದಂಕುರವಿತ್ತು
ಘನ ದಯಾವಾರಿಧೇ । ಪೊರೆಯ ಬೇಕಿವಳಾ ೪

ನಂದ ಗೋಪನ ಕಂದ । ನಂದ ವ್ರಜ ಪರಿಪಾಲ
ಇಂದಿರಾನಂದ ಮುಚ । ಕುಂದ ವರದ ಹರಿಯೇ
ನೊಂದವಳಿಗಾನಂದ । ಸಂಧಿಸಲು ಪ್ರಾರ್ಥಿಸುವೆ
ಇಂದಿರಾರಾಧ್ಯ ಗುರು । ಗೋವಿಂದ ವಿಠಲಾ ೫

೫೪೦

ಗುರುರಾಜ ನುತ ವಿಠಲ । ಪೊರೆಯ ಬೇಕಿವಳಾ ಪ

ಕರುಣ ಪಯೋ ನಿಧಿಯೆ । ಶರಣು ಬಂದವಳಾ ಅ.ಪ.

ಮರುತ ಮತದಲ್ಲಿದ್ದು ಗುರು ಹಿರಿಯರಾ ಸೇವೆ
ನಿರುತ ಗೈಯುವ ಮನವ । ಉಳ್ಳವಳೊ ಈಕೇ
ಕರುಣಾ ಪಯೋ ನಿಧಿಯೇ । ಮರುತಾಂತರಾತ್ಮಕನೆ
ಕರಪಿಡಿದು ಪೊರೆಯೋ । ಪ್ರಾರ್ಥಿಸುವೆ ಹರಿಯೇ ೧

ಕಂಸಾರಿ ತವನಾಮ । ಅಮೃತವನೆ ಉಣಿಸುತ್ತ
ಸಂಸಾರ ಶರಧಿಗೆ । ಪ್ಲವವೆನಿಸೊ ದೇವ
ಸಂಶಯವು ರಹಿತಾಗಿ । ಹರಿಯೆ ಸರ್ವೋತ್ತಮನೆ
ಶಂಸನದಿ ಮತಿಕೊಟ್ಟು । ಕಾಯೊ ಕಮಲಾಕ್ಷ ೨

ಕೋವಿದೋತ್ತಂಸ ಹರಿ । ಗೋವರ್ಧನೋದ್ಧರನೆ
ಗೋವಿದಾಂಪತಿಯೆ ಗುರು । ಗೋವಿಂದ ವಿಠಲಾ
ನೀವೊಲಿಯದಿನ್ನಿಲ್ಲ । ತ್ರೈಭುವನದಿ ದೇವ
ಭಾವುಕಳ ಪೊರೆಯಲ್ಕೆ । ಪ್ರಾರ್ಥಿಸುವೆ ಹರಿಯೇ ೩

೫೪೧

ಗುರುರಾಜ ವರದ ವಿಠಲ । ಪೊರೆಯ ಬೇಕಿವಳಾ ಪ

ಮರುತಂತರಾತ್ಮಕನೆ । ಪ್ರಾರ್ಥಿಸುವೆ ಹರಿಯೇ ಅ.ಪ.

ಸೃಷ್ಟ್ಯಾದಿ ಸತ್ಕರ್ಮ । ಸುಗುಣಮೂರುತಿದೇವ
ಕಷ್ಟಗಳ ಪರಿಹರಿಸಿ ಕಾಪಾಡೋ ಹರಿಯೇ
ಕೃಷ್ಣಮೂರುತಿ ದೇವ । ಅಷ್ಟ ಸೌಭಾಗ್ಯಗಳ
ಕೊಟ್ಟು ಸಂತೈಸುವುದು । ಕಾರುಣ್ಯ ಮೂರ್ತೇ ೧

ಆ ಪನ್ನ ಜನಪಾಲ । ಗೋಪಿಜನಪ್ರಿಯ
ತಾಪತ್ರಯ ಕಳೆದು । ಕಾಪಾಡೊ ಹರಿಯೇ
ಶ್ರೀಪತಿ ನೀನಾಗಿ । ಕೋಪಾದಿಗಳ ಕಳೆದು
ಕೈಪಿಡಿದು ಸಲಹೆಂದು । ಪ್ರಾರ್ಥಿಸುವೆ ಹರಿಯೇ ೨

ಪತಿಸುತರು ಹಿತರಲ್ಲಿ । ಹರಿಯುವ್ಯಾಪ್ತನು ಎಂಬ
ಮತಿಯನ್ನೆ ಕರುಣಿಸುತ । ಕಾಪಾಡೊ ಹರಿಯೇ
ಸುಪ್ತಿಜಾಗ್ರತ ಸ್ವಾಪ । ಮಾರವಸ್ಥಾ ಸ್ವಾಮೀ
ಆಪ್ತ ಗುರು ಗೋವಿಂದ । ವಿಠಲೆಂದು ತಿಳಿಸೊ ೩

೫೪೨

ಗುರುವರ ಹರಿ ವಿಠಲ । ಪೊರೆಯ ಬೇಕಿವಳಾ ಪ

ನಿರುತ ನಿನ್ನಯ ಪಾದ । ಸ್ಮರಿಸಿ ಭಜಿಸುವಳಾ ಅ.ಪ.

ಹರಿಯು ಕೊಟ್ಟದನುಂಡು । ಪರಿ ಪರಿಯ ಸಂತಸದಿ
ಇರುವ ಈ ಪತಿವ್ರತೆಯ । ದುರಿತಗಳ ಕಳೆದೂ ।
ಹರಿಯೆ ನಿನ್ನಲಿ ಭಕ್ತಿ । ವರಜ್ಞಾನ ವೃದ್ಧಿಸುತ
ಜರುಗಿಸೋ ಸಾಧನವ । ಕರುಣ ಸಂಪನ್ನಾ ೧

ಪತಿಸುತರು ಹಿತರಲ್ಲಿ । ವ್ಯಾಪ್ತ ಹರಿಯನು ಭಜಿಸಿ
ಮತಿ ಮತಾಂವರರಂಘ್ರೀ । ಶತಪತ್ರ ಸೇವಿಸುತಾ ।
ಕೃತ ಕೃತ್ಯಳನು ಮಾಡಿ । ಗತಿ ಪ್ರದನು ನೀನಾಗೊ
ವಿತತ ಅಚ್ಯುತ ಮೂರ್ತಿ । ಪ್ರತಿ ರಹಿತ ದೇವಾ ೨

ದೇಶ ಕಾಲಾ ತೀತ । ವಾಸುದೇವನೆ ಇವಳ
ಆಶೆ ಪೂರೈಸುತಲಿ । ಹೃದ್ಗುಹದಿ ತೋರೀ
ಮೇಶ ಗುರು ಗೋವಿಂದ । ವಿಠಲ ಪದ ಆನಂದ
ರಾಶಿಯೊಳು ಸುಖಿಪಂತೆ । ಪೋಷಿಸೊ ಇವಳಾ ೩

೫೪೩

ಗೋಪಗೋವಿಂದ ವಿಠಲ । ನೀ ಪಾಲಿಸಿವಳಾ ।
ಸ್ವಾಪಜಾಗ್ರತ್ಸುಪ್ತಿ ಸರ್ವ ಕಾಲದಲೀ ಪ

ಪತಿಸುತರು ಭಾಂದವರು । ಹಿತದಿಂದ ಸೇವಿಸುತ
ಕೃತಿಸರ್ವ ನಿನಸೇವೆ । ಮತಿ ನೀಡೊ ಹರಿಯೇ ।
ಅತುಳ ವೈಭವ ತೋರಿ । ಕೃತಕಾರ್ಯಳೆಂದೆನಿಸು
ಕ್ಷಿತಿರಮಣ ನಿನಗಿದುವೆ ಪ್ರಾರ್ಥಿಸುವೆ ದೊರೆಯೇ ೧

ಮೋದಮುನಿ ಮತ ದೀಕ್ಷೆ । ಸಾದರದಿ ಕೊಟ್ಟೈದು
ಭೇದಗಳ ತಿಳಿಸುತ್ತ । ಕಾದುಕೊ ಇವಳಾ
ನೀದಯದಲಂಕಿತವ । ಓದಿಸಿಹೆ ತೈಜಸನೆ
ಸಾದಿಸುವೆ ಅದನೀಗ । ಹೇ ದಯಾವರನೇ ೨

ಕರ್ಮ ಸಂಚಿತ ಕಳೆವ । ಧರ್ಮ ನಿನ್ನದೊ ಸ್ವಾಮಿ
ಭರ್ಮ ಗರ್ಭನ ಪಿತನೆ । ಕರ್ಮನಾಮಕನೇ
ನಿರ್ಮಮತೆ ಮನದಿ ನಿ । ಷ್ಕಾಮ ಕರ್ಮದಲಿವಳ
ಪೇರ್ಮೆಯಲ್ಲಿರಿಸೆಂದು । ಸ್ವಾಮಿ ಪ್ರಾರ್ಥಿಸುವೆ ೩

ಸರ್ವಜ್ಞ ಸರ್ವೇಶ । ಸರ್ವದಾ ತವನಾಮ
ಸರ್ವತ್ರ ಸ್ಮೃತಿಯಿತ್ತು । ಸರ್ವಾಂತರಾತ್ಮ
ದುರ್ವಿಭಾವ್ಯನೆ ದೇವ । ದರ್ವಿ ಜೀವಿಯ ಕಾವ
ಸರ್ವ ಕರ್ತೃವು ನೀನೆ । ಶರ್ವ ಸನ್ನುತನೇ ೪

ಸೃಷ್ಟಿಕರ್ತನೆ ದೇವ । ಕಷ್ಟಗಳ ಪರಿಹರಿಸಿ
ಶಿಷ್ಟಳ್ಹೃತ್ಕಂಜದಲಿ । ಇಷ್ಟ ಪ್ರದನಾಗೀ
ಇಷ್ಟ ಮೂರ್ತಿಯ ಕೋರಿ । ಹೃಷ್ಟಳನ ಮಾಡೆಂದು
ಕೃಷ್ಣ ಗುರು ಗೋವಿಂದ । ವಿಠಲ ಪ್ರಾರ್ಥಿಸುವೆ ೫

೫೪೪

ಗೋಪಾಲ ಹರಿ ವಿಠಲ ನೀ ಪಾಲಿಸಿವಳಾ ಪ

ಪಾಪೌಘಗಳ ಕಳೆದು ಸುಪವಿತ್ರಳನೆ ಮಾಡಿ
ಕೈ ಪಿಡಿದು ಪೊರೆಯಿವಳ । ಗೋಪಾಲ ಬಾಲ ಅ.ಪ.

ನಿನ್ನ ಸೇವಿಸೆ ದಾಸ । ಘನ್ನ ದೀಕ್ಷೆಯ ಮನದಿ
ಕನ್ಯೆ ಬಹು ಭಕ್ತಿಯಲಿ । ಬಿನ್ನವಿಸಿ ಇಹಳೊ
ಮನ್ಯು ಸೂಕ್ತೋದಿತನೆ । ಚೆನ್ನ ತೈಜಸನಾಗಿ
ಇನ್ನು ಪೇಳ್ದಂಕಿತವ । ಕನ್ಯೆ ಗಿತ್ತಿಹನೋ ೧

ಪತಿಸೇವೆ ದೊರಕಿಸುತ । ಪತಿವ್ರತೆಯಳೆಂದೆನಿಸಿ
ಅತುಳ ವೈಭವ ತೋರಿ । ಹಿತದಿಂದ ಪೊರೆಯೋ
ವ್ರತತಿ ಜಾಸನ ಪಿತನೆ । ಗತಿಗೋತ್ರ ನೀನೆನಿಸಿ
ಸುತೆಸಮಳ ಪೊರೆವುದಕೆ । ಮತಿ ಮಾಡೊ ಹರಿಯೇ ೨

ತಾರತಮ್ಯ ಜ್ಞಾನ ಮೂರೆರಡು ಭೇದಗಳ
ಸಾರತತ್ವಗಳುರುಹಿ । ಸಾರತಮ ನಿನ್ನಾ
ಪಾರುಗಾಣದ ಮಹಿಮೆ । ಚಾರುಕೀರ್ತಿಸುವಂತೆ
ತೋರೊ ಸನ್ಮಾರ್ಗವನು । ವಾರಿನಿಧಿ ಶಯ್ಯಾ ೩

ಹರಿಗುರೂ ಸದ್ಭಕ್ತಿ । ಹಿರಿಯರಲಿ ಆಸಕ್ತಿ
ಸರ್ವ ಕಾರ್ಯವು ಹರಿಯ ವರಸೇವೆಯೆಂಬಾ
ವರಮತಿಯ ಕರುಣಿಸುತ । ಹರಿಯು ತಾನಿತ್ತುದನ
ಹರುಷದಲಿ ಉಂಬಂಥ । ಅರಿವು ಕೊಡು ಸತತ ೪

ಭಾವಜಾರಿಯ ತಾತ । ಪಾವಮಾನಿಯ ಪ್ರೀತ
ಕೇವಲಾನಂದಮಯ । ಜೀವ ಪರತಂತ್ರಾ
ಈ ವಿಧವು ಇರಲಾಗಿ । ನೀವ್ಪೊಲಿಯಲಿನ್ನಾರು
ಕಾವರನು ಕಾಣೆ ಗುರು । ಗೋವಿಂದ ವಿಠಲಾ ೫

೫೪೫

ಗೋಪಿನಾಥ ವಿಠಲ । ನೀ ಪಾಲಿಸಿವಳಾ ಪ

ಶ್ರೀಪತಿಯೆ ಕರುಣಾಳು । ಕೈ ಪಿಡಿದು ಸಲಹೊ ಅ.ಪ.

ಭಕ್ತಿಯುತೆ ಈ ಹಸುಳೆ । ಸಕ್ತಿಯಲಿ ಹರಿದಾಸ್ಯ
ಅರ್ಥಿಪಳು ಹೇ ಸ್ವಾಮಿ । ನಿತ್ಯ ಮಂಗಳನೆ
ಯುಕ್ತಿಯಲಿ ನಿನ್ನಿಂದ । ಸ್ವಪ್ನ ಸೂಚಿಸಿದಂತೆ
ಇತ್ತಿಹೆನು ಅಂಕಿತವ । ಸಾರ್ಥಕವ ಪಡಿಸೊ ೧

ಶೃಂಗಾರ ಮೂರುತಿಯೆ । ಮಂಗಳಾಂಗನೆ ದೇವ
ಹೆಂಗಳೀಗೆ ಸುಜ್ಞಾನ । ಭಕ್ತಿಯನೆ ಇತ್ತೂ
ಅಂಗನಾಮಣಿಯಂತೆ । ಸಿಂಗರಿಸುತಿವಳನ್ನು
ಭಂಗಗೈ ಅಜ್ಞಾನ । ಭ್ರಾಂತಿ ಜ್ಞಾನವನು ೨

ಭಾಗವತರೊಡನಾಟ । ಯೋಗಕರುಣಿಸು ದೇವ
ನಾಗಾರಿವಾಹನನೆ । ಯೋಗಿಜನವಂದ್ಯಾ
ಆಗುಹೋಗುಗಳೆಲ್ಲ । ನೀನಿಚ್ಛೆ ಸಂಕಲ್ಪ
ಆಗು ಮಾಡ್ಕೈ ದೇವ । ಮನದಭೀಷ್ಟಗಳಾ ೩

ತತ್ವ ಪತಿಗಳಿಗೆಲ್ಲ । ಮರುತನೆ ಅಧಿಕೆಂಬ
ತತ್ವವನೆ ತಿಳಿಸುತ್ತಾ । ಕಾಪಾಡೊ ಇವಳಾ
ಪ್ರತ್ಯಹತ್ ತವನಾಮ । ಸಂಸ್ತುತಿಯ ಕರುಣಿಸುತ
ಉತ್ತಾರಿಸೋ ಭವವನ್ನು । ಪ್ರತ್ಯಗಾತುಮನೆ ೪

ಗೋವುಗಳ ಪರಿಪಾಲ । ಗೋವರ್ದನೋದ್ಧರನೆ
ಗೋಪಿಜನಪ್ರಿಯ । ಗೋಪಾಲ ಬಾಲಾ
ಗಾವಲ್ಗಣೀವರದ । ಬಿನ್ನಪವ ಸಲಿಸಯ್ಯ
ಕಾವುದಾನತರ ಗುರು । ಗೋವಿಂದ ವಿಠಲಾ ೫

೫೪೬

ಗೋಪೀಶ ವಿಠ್ಠಲನೆ । ನೀ ಪಾಲಿಸಿವಳಾ ಪ

ನೀ ಪೊರೆಯದೇ ಇನ್ನು । ಕಾಪಾಡು ನರಹರಿಯೆ
ಗೋಪಗೋಪಿಯರೊಡೆಯ । ಗೋಪಾಲ ಕೃಷ್ಣಾ ಅ.ಪ.

ಹೇ ದಯಾಂಬುಧಿ ಹರಿಯೆ । ಭೇದ ಪಂಚಕ ಜ್ಞಾನ
ಮೋದದಲಿ ಕರುಣಿಸುತ । ಸಾಧನವ ಗೈಸೀ
ಶ್ರೀಧರಾ ದುರ್ಗೇಶ । ಕಾದುಕೋ ಈ ಶಿಶುವ
ಸಾಧುವಂದಿತ ಹರಿಯೆ । ಸಾಧ್ಯ ನೀನಲ್ಲೇ ೧

ಭೋಗ ಭಾಗ್ಯಗಳಿತ್ತು । ಭೋಗ ನಿನ್ನದು ಎಂಬ
ಭಾಗ್ಯವನೆ ಪಾಲಿಸೋ ಭೋಗಿ ಶಯನಾ

ಆಗುಹೋಗುಗಳೆಂಬ । ಯೋಗ ಸಮತೆಲಿ ಉಂಬ
ಯೋಗ ಕೊಟ್ಟುದ್ಧರಿಸೋ ಭಾಗವತ ಪ್ರೀಯಾ ೨

ಹರಿಗುರೂ ಸದ್ಭಕ್ತಿ । ಹಿರಿಯರ ಸತ್ಸೇವೆ
ನಿರತ ಪಾಲಿಸುತಿವಳ । ಪೊರೆಯಬೇಕೊ ।
ಮರುತಾಂತರಾತ್ಮ ಗುರು । ಗೋವಿಂದ ವಿಠ್ಠಲನೆ
ಕರುಣಿಸೆನೆ ಬಿನ್ನಪವ । ನಿರತ ಪ್ರಾರ್ಥಿಸುವೇ ೩

೫೪೭

ಚಂದ್ರಭಾಗ ಹರಿ ವಿಠಲ । ಸಲಹ ಬೇಕಿವಳಾ ಪ

ಇಂದೀವರಾಕ್ಷ ಹರಿ । ಮಂದರೋದ್ಧಾರೀ ಅ.ಪ.

ಸಾಧಕ ಸುಜೀವಿಗಳ । ಮೋದ ಬಡಿಸುವ ಭಾರ
ಮೋದ ಮಯ ನಿನಗಲ್ಲ । ದಧಾರಿಸಿಹುದೋ
ಆದಿ ಮೂರುತಿ ಹರಿಯೆ । ಸಾಧನ ಸಾಧ್ಯವಾಗಿ
ಕಾದುಕೋ ಬಿಡದಿವಳ । ಮಾಧವನೆ ದೇವಾ ೧

ತರತಮಾತ್ಮಕ ಜ್ಞಾನ । ಅರುಹುತಿವಳಿಗೆ ಭೇದ
ಎರಡು ಮೂರರ ಅರಿವು । ನೆರೆ ಕೈಗೂಡಲೀ
ಹರಿಯೆ ಸರ್ವೋತ್ತಮನು । ಸುರಪಾದಿ ಸುರರೆಲ್ಲ
ಹರಿಯ ಕಿಂಕರರೆಂಬ । ವರಜ್ಞಾನ ವಿರಲಿ ೨

ಆಗು ಹೋಗುಗಳಲ್ಲಿ । ವೇಗ ಸಮತೆಯು ಬರಲಿ
ಜಾಗು ಮಾಡದೆ ದ್ವಂದ್ವ । ಸಹನೆ ಬರುತಿರಲೀ
ನಾಗಾರಿ ವಾಹನನ । ನಾಮ ಸುಧೆ ಸರ್ವದಾ
ಸಾಗಿ ಮನ ಸವಿವಂತೆ । ಹಗಲಿರುಳು ಇರಲೀ ೩

ಸಾಧು ಸಂಗದಿ ಕಾಲ । ಮೋದದಿಂ ಕಳೆವಂತೆ
ನೀ ದಯದಿ ಪಾಲಿಸುತ । ಕಾದುಕೋ ಇವಳಾ
ಬೋಧ ಮೂರುತಿಯಾಗಿ । ಹೇ ದಯಾಕರ ಕೃಷ್ಣಾ
ಆದರದಿ ಸುಜ್ಞಾನ । ಭಕ್ತಿಯನ್ನೀಯೋ ೪

ಜೀವರಂತರ್ಯಾಮಿ । ಸರ್ವಜ್ಞ ಸರ್ವೇಶ
ಭಾವ ಮೈದುನ ಪಾಲ । ಗೋವಳರ ಈಶಾ
ಭಾವದಲಿ ಮೈದೋರಿ । ಭವ ಬಂಧ ಬಿಡಿಸುವುದು
ಶ್ರೀವರನೆ ಶ್ರೀಗುರೂ । ಗೋವಿಂದ ವಿಠಲ ೫

೫೪೮

ಜಗದೀಶ ವಿಠ್ಠಲನೆ । ಮಗುವ ಕಾಯೋ ಪ

ಹಗಲಿರುಳು ಬೆಂಬಲಿಗ । ನಾಗಿ ನೀ ಕರುಣದಲಿ
ಬಗೆಬಗೆಯ ಸುಖವಿತ್ತು । ಹಗರಣವ ಕಳೆಯೋ ಅ.ಪ.

ಮರುತ ಮತ ತತ್ವಗಳ । ಅರಿವಿಕೆಯ ಕೊಡು ಇವಗೆ
ಹರಿಗುರೂ ಸತ್ಸೇವೆ । ಪರಮ ಹರುಷದಲೀ
ನಿರುತ ಗೈಯ್ಯು ಮನವ । ಕರುಣಿಸುವುದೆಂದೆನುತ
ಪರಿಪರಿಯ ಪ್ರಾರ್ಥಿಸುವೆ ಶರಧಿಜೆಯ ರಮಣಾ ೧

ಕಾಕು ಸಂಗವ ಕೊಡದೆ । ನೀ ಕೊಟ್ಟು ಸತ್ಸಂಗ
ತೋಕನನು । ಪೊರೆಯೆಂದು । ನಾ ಕೇಳ್ವೆ ಹರಿಯೇ
ಬೇಕಾದ ವರ ಇವಗೆ । ನೀ ಕೊಡುತ ಕಾಯುವುದು
ಶ್ರೀಕಾಂತ ಬೇಡುವೆನೊ ನೀ ಕರುಣಿ ಎನುತಾ ೨

ಪಾವಪಾನಿಯ ಪ್ರೀಯ । ಝಾವ ಝಾವಕೆ ನಿನ್ನ
ಪಾವನ ಸ್ಮೃತಿಯಿತ್ತು । ಕಾವುದೈ ಹರಿಯೇ

ಪಾವು ಮದ ಹರ ಗುರೂ । ಗೋವಿಂದ ವಿಠ್ಠಲನೆ
ನೀವೊಲಿವುದಿವಗೆಂದು । ಭಾವದಲಿ ಬೇಡ್ವೆ ೩

೫೪೯

ಜಗತ್ಸಾರ ವಿಠಲ । ನೀನಿವಳ ಸಲಹೊ ಪ

ಬಗೆಬಗೆಯಲಿಂ ನಿನ್ನ । ದಾಸ್ಯಕಾಂಕ್ಷಿಪಳ ಅ.ಪ.

ಭಯದೋರಿ ಸ್ವಪ್ನದಲಿ । ಜಯದೇವಿಸುತ ಪ್ರಾಣ
ದಯೆ ಪಡೆಯಲನುವಾಗ್ಯೆ । ಭಯವನು ತೋರ್ದೇ
ಹಯಮೊಗನೆ ನಿನ್ನಂಥ । ದಯೆ ಪೂರ್ಣರಿನ್ನುಂಟೆ
ನಯವಿನಯ ದಿಂದಿರ್ಪ । ಕನ್ಯೆಯನು ಸಲಹೊ ೧

ತೈಜಸನೆ ನೀನಾಗಿ । ಸೂಚಿಸಿದೆ ಅಂಕಿತವ
ಯೋಜಿಸಿಹೆ ಇವಳಿಗೆ । ವ್ಯಾಜ ಕರುಣೇ
ಗೋಜು ಸಂಸೃತಿಯಳಿಯೆ । ಬಾಜಿಸುತ ಮನದಲ್ಲಿ
ನೈಜರೂಪವ ತೋರೊ । ಹೇ ಜನಾರ್ದನನೇ ೨

ನೂಕಿ ಸಂತಾಪಗಳ । ಲೌಕಿಕ ಸುಭೋಗ ವೈ
ದೀಕ ವೆನಿಸೋ ಹೇ ಕೃ । ಪಾಕರನೇ ದೇವಾ
ಜೋಕೆಯಿಂದಿವಳ ನೀ ಸಾಕಬೇಕೆಂದೆಂಬ
ವಾಕು ಮನ್ನಿಸಿ ಕಾಯೊ । ಶ್ರೀ ಕರಾರ್ಚಿತನೇ ೩

ನೀಚೋಚ್ಚ ತರತಮದ । ಸೂಕ್ಷ್ಮ ಸುಜ್ಞಾನಗಳ
ವಾಚಿಸಿವಳಲಿ ನಿಂತು । ಕೀಚಕಾಂತಕನುತ
ಪ್ರಾಚೀನ ಕರ್ಮಗಳ । ಮೋಚಕನು ನೀ ಸವ್ಯ
ಸಾಚಿ ಸಖನೇ ಇವಳ । ಪೇಕ್ಷೆಗಳ ನೀಯೋ ೪

ದೇವವರ ಭವ್ಯಾತ್ಮ । ಪಾವನವು ತವ ಸ್ಮೃತಿಯ
ನೀ ವೊಲಿದು ಸರ್ವತ್ರ । ಸರ್ವ ಕಾಲದಲೀ
ಈ ವುದನೆ ಬಿನ್ನವಿಪೆ । ಬಾವಜ್ಞ ಸಲಿಸುವುದು
ಕಾವ ಕರುಣಾಳು ಗುರು । ಗೋವಿಂದ ವಿಠಲಾ ೫

೫೫೦

ಜಯ ಗೋಪಾಲ ವಿಠಲ । ದಯೆ ತೋರೋ ಇವಗೇ ಪ

ನಯ ವಿನಯದಿಂ । ನಿನ್ನ । ದಾಸ್ಯಕಾಂಕ್ಷಿಪಗೇ ಅ.ಪ.

ಜ್ಞಾನ ವಿರಹಿತನಾಗಿ । ಅನೇಕ ಜನುಮಗಳು
ಹೀನಯೋನಿಯ ಪೊಂದಿ । ಜನಿಸಿಹನು ಇವನೂ
ಮಾನನಿಧಿ ಮೋಹನ್ನ । ದಾಸರರೊಲಿಮೆಯಲಿಂದ
ಆನಂದ ಮುನಿ ಮತದಿ । ತನುವ ಪೊತ್ತಿಹನೊ ೧

ಲೇಸು ಮೋಹನರಾಯ । ದಾಸವಂಶದಿ ಬಂದು
ಆಶುಗಾಧ್ಯಾತ್ಮರಾ । ಹಸ್ಯ ವರಿಯದಲೇ
ದಾಸ ದೀಕ್ಷೆಯ ನಡೆಯೆ ಆಶಿಸುತ್ತಿಹಗೆ ಉಪ
ದೇಶವಿತ್ತೆ ನಿನ್ನಾ । ದೇಶ ಸುಸ್ತೀಶಾ ೨

ಲೌಕಿಕದ ಬಹು ಮೋಹ । ನೀ ಕಳೆದು ಸುಜ್ಞಾನ
ಭಕುತಿ ವೈರಾಗ್ಯಗಳ । ನೀ ಕೊಡುವುದ್ಧರಿಯೇ
ಮಾಕಳತ್ರನೆ ತವಾ । ಲೌಕಿಕಸುಮಹಿಮೆಗಳ
ಸಾಕಷ್ಟು ತಿಳಿಸುತ ಲೋಕದಲಿ ಮೆರೆಸೊ ೩

ಬಲ್ಲವರೊಳತಿ ಬಲ್ಲ । ಚೆಲ್ವ ರುಕ್ಮಿಣಿ ಲೋಲ
ಎಲ್ಲೆಡೆಯು ತವವ್ಯಾಪ್ತಿ । ಸೊಲ್ಲು ಸ್ಪುರಿಸುತಲೀ
ಬಲ್ಲಿದನ ಗೈಯ್ಯೆಂಬ । ಸೊಲ್ಲು ಸಲಿಸುವುದ್ಧರಿಯೆ
ಖುಲ್ಲ ಜನದಲ್ಲಣನೆ । ಗೊಲ್ಲ ಗೋಪಾಲಾ ೪

ಭಾವ ಮೈದುನ ಬಂಡಿ । ಬೋವ ಶ್ರೀಹರಿ ಇವನ
ಶೈವಲಾವರಣ ಕಳೆ । ದೀವುದೋಜ್ಞಾನಾ
ಕೈವಲ್ಯದಾತ ಗುರು । ಗೋವಿಂದ ವಿಠ್ಠಲನೆ
ನೀವೊಲಿಯದಿನ್ನಿಲ್ಲ । ದೇವ ದೇವೇಶಾ ೫

೫೫೧

ಜಯ ಪಾಂಡುರಂಗ ವಿಠಲ । ದಯದಿ ಪೊರೆ ಇವನಾ ಪ

ಭಯ ಕೃತೂ ಭಯನಾಶ । ಹಯಮೊಗನೆ ಹರಿಯೇ ಅ.ಪ.

ಹಿಂದಿನ ಸುಸಂಸ್ಕಾರ । ಛಂದದಲಿ ಅನುಭವಿಸಿ
ಇಂದು ತವದಾಸ್ಯವನು । ಕಾಂಕ್ಷಿಸುವ ಹರಿಯೇ
ಅಂದ ಪುಣ್ಯದರಾಶಿ । ಬಂದೊದಗಿತೋ ಎನೋ
ಇಂದಿರಾ ನಂದದಾ । ನಂದವನೆ ಈಯೋ ೧

ಕರ್ಮಾಕರ್ಮಗಳ । ಮರ್ಮವನೆ ತಿಳಿಸುತ್ತ
ಧರ್ಮನಾಮಕ ನಿನ್ನ । ಪೇರ್ಮೆ ಸನ್ನಾಮಾ
ಒಮ್ಮನದಿ ಸರ್ವದಾ । ಸುಸ್ಮರಣೆ ಈಯುವುದು
ದುಮ್ಮಾನಗಳ ಕಳೆದು । ಸಲಹಬೇಕಿವನಾ ೨

ಪಂಚ ಭೇದ ಜ್ಞಾನ । ಸಂ ಚಿಂತನೆಯ ಕೊಟ್ಟು
ವಾಂಛಿತಾರ್ಥವನೀಡೋ । ಪಂಚ ಪಂಚಾತ್ಮಾ
ಹೆಂಚು ಹಾಟಕದಿ ಸಮ । ಚಿಂತನೆಯು ಬರುತಿರಲಿ
ಅಂಚೆವಾಹನ ಪಿತನೆ । ಸಂಚಿತಾಗಮ ಕಳೆಯೋ ೩

ತಾರತಮ್ಯ ಜ್ಞಾನ । ಧಾರಾಳವಾಗಿ ಕೊಡು
ವಾರುತಿಗಳೆಲ್ಲವೂ । ದೂರ ದೂರಾಗಲೀ
ಸೇರುವಂತಾಗಲೀ । ಸಾಧು ಜನಸಂಗಗಳು
ಕೋರುವಂತಾಗಲೀ । ಭೂರಿ ಭಕ್ತಿಗಳಾ ೪

ಧೀವರರ ಆಶಿಷವು । ತೀವರಾಗಲಿ ಇವಗೆ
ಮಾವಾರಿ ಪದಚಿಂತೆ । ಯಾವಾಗ್ಯೂ ಇರಲೀ
ಕೇವಲಾನಂದಗಳು । ಭಾವದಲಿ ಮೈದೋರೆ
ದೇವಗುರು ಗೋವಿಂದ । ವಿಠಲ ಪ್ರಾರ್ಥಿಸುವೆ ೫

೫೫೨

ಜಯಶ್ರೀ ನರ ಹರಿ ವಿಠಲ । ಕಾಯ ಬೇಕಿವಳ
ಭಯ ಕೃತು ಭಯನಾಶ । ದಯದೋರೊ ಶ್ರೀಶ ಪ

ವಾದೀಭ ಮೃಗರಾಜ । ವಾದಿರಾಜರ ದಯದಿ
ಸಾಧನಕೆ ಹೆದ್ದಾರಿ । ನೀ ದಯದಿ ತೋರೀ
ಮೋದ ತೀರ್ಥರ ಸಮಯ । ಧ್ವಾದಿಯಲಿ ನಡೆವಂತೆ
ಹೇ ದಯಾಂಬುಧಿ ಚೆನ್ನ । ಆದರಿಸೋ ಘನ್ನ ೧

ಚಂದ್ರ ಸಮ ಸಂಕಾಶ । ಸಂಧಿಸಲು ಸ್ವಪ್ನದಲಿ
ಇಂದು ಭಾಗ ನಿವಾಸ । ಸಂದರ್ಶನಿತ್ತೂ
ಕಂದಿದ್ದ ಕನ್ಯೆಗೇ । ನಂದ ದಾಯಕನಾಗಿ
ಸುಂದರನೆ ನರರೂಪಿ । ಸಂಧಿಸಿದೆ ಭಾಗ್ಯ ೨

ಚಂದ್ರ ವದನೆಯು ಲಕುಮಿ । ಮಂದಿರಕೆ ಬರುತಲ್ಲೆ
ನಿಂದಿರಲು ಸೌಭಾಗ್ಯ । ಸಂಧಿಸದೆ ಇಹುದೇ
ಇಂದಿರಾರಾಧವಪದ । ಮಂದಸ್ಮಿತಾನನನೆ
ಮಂದಿಯೊಳಗೀ ಶಿಶುವ । ಛಂದಾಗಿ ಸಲಹೋ ೩

ಹರಿಗುರು ಸದ್ಭಕ್ತಿ । ಪರತತ್ವ ಸುಜ್ಞಾನ
ಕರುಣಿಸುತ್ತ ಸಂತೈಸು । ಸುರ ವರೇಣ್ಯಾ ।
ಮರುತಾಂತರಾತ್ಮ ನಿ । ನ್ನೊರತು ಅನ್ಯರ ಕಾಣೆ
ಪರಿ ಹರಿಸೊ ಪ್ರಾಚೀನ । ಕರ್ಮಾಂಧ ಕೂಪಾ ೪

ಸರ್ವತ್ರ ಸರ್ವದಾ । ದೇವ ತವ ಸ್ಮೃತಿಯಿತ್ತು
ಭವದ ಬಂಧನ ಕಳೆಯೆ । ಓವಿ ಪ್ರಾರ್ಥಿಸುವೆ
ಭಾವಜ್ಞ ನೀನಾಗಿ । ಭಾವದೊಳು ಮೈದೋರೊ
ಗೋವಿದಾಂ ಪತಿಯೆ ಗುರು । ಗೋವಿಂದ ವಿಠಲ ೫

೫೫೩

ಜಾಂಬುವತಿ ಪ್ರಿಯ ವಿಠಲ । ಅಂಬುಜದಳಾಕ್ಷ ಪ

ನಂಬಿ ಬಂದಿಹನ ಮನ । ದಂಬಲವ ಸಲಿಸೋ ಅ.ಪ.

ಲೌಕಿಕಾನೇಕದಲಿ । ಸಿಲ್ಕಿ ನೊಂದವನಾಗಿ
ಏಕಾಮೇವಾದ್ವಿತೀಯ । ನೀನೇವೆಯಂಬಾ
ವಾಕು ನುಡಿವಾ ಇವಗೆ । ಪ್ರಾಕ್ಕು ಕರ್ಮವ ಕಳೆದು
ತೋಕನ್ನ ಸಲಹೆಂದು । ಪ್ರಾರ್ಥಿಸುವೆ ಹರಿಯೇ ೧

ನೀಚೋಚ್ಛ ಸುಜ್ಞಾನ । ದಾಸ್ಯಕಿದುವೇ ಮೂಲ
ವಾಚಿಸೋ ಇವನಲ್ಲಿ । ಕೀಚಕಾರಿಪ್ರಿಯಾ
ವಾಚಾಮಗೋಚರನೆ । ಖೇಚರೋತ್ತಮಸವ್ಯ
ಸಾಚಿ ಸಖನೇ ಇವನ । ಕಾಪಾಡೊ ಹರಿಯೇ ೨

ಸಂಗೀತ ಲೋಲ ಹರಿ । ಮಂಗಳಾಂಗನೆ ಸಾಧು
ಸಂಗವನು ಇವಗಿತ್ತು । ಕಾಪಾಡೊ ಹರಿಯೇ
ಇಂಗಿತಜ್ಞನೆ ವಿಷಯ । ನಿಸ್ಸಂಗನೆಂದೆನಿಸಿ
ಸಂಗೀತದಲಿ ತವ ಪ್ರ । ಸಂಗವಿತ್ತು ಕಾಯೋ ೩

ಮೂರೆರಡು ಭೇದಗಳ । ತಾರತಮ್ಯ ಜ್ಞಾನ
ವಾರವಾರಕೆ ತಿಳಿಸಿ । ಕಾಪಾಡೊ ಇವನಾ
ಸೂರಿಜನ ಸಂಪ್ರೀಯ । ಸೂರಿಸಂಗವನಿತ್ತು
ಪಾರುಗೈ ಭವದ ಕೂ । ಪಾರ ಹರಿಯೇ ೪

ಗರುಡವಾಹನ ಕೃಷ್ಣ । ಗರುವಗಳ ಪರಿಹರಿಸಿ
ಸರ್ವಾಂತರಾತ್ಮಕನೆ । ಕಾಪಾಡೊ ಹರಿಯೇ ।
ನಿರವಧಿಕ ಗುಣ ಪೂರ್ಣ । ಸರ್ವೇಷ್ಟ ಪ್ರದನಾಗಿ
ಪೊರೆಯ ಬೇಕಿವನ । ಗುರು ಗೋವಿಂದ ವಿಠಲಾ ೫

೫೫೪

ಜಾನಕೀಶ ವಿಠಲ ನೀನಿವನ ಪೊರೆಯೋ ಪ

ಮೌನಿಕುಲ ಸನ್ಮಾನ್ಯ । ಆನತೇಷ್ಟಪ್ರದನೆ
ಆನಮಿಸಿ ಪ್ರಾರ್ಥಿಸುವೆ । ಭಿನ್ನಪವ ಪಾಲಿಸೋ ಅ.ಪ.

ಇವನ ಸತಿ ಸ್ವಪ್ನದಲಿ । ಅವನಿಜೆಯ ವಲ್ಲಭನೆ
ತವನಾಮ ಸೂಚಿಸಿಹೆ । ಎನ್ನ ರೂಪದಲೀ
ಭವವನಧಿ ದಾಟಲ್ಕೆ । ತವನಾಮ ಸಂಸ್ಮರಣೆ
ನವಪೋತವೆನಿಸಿಹುದು । ಪವನಾಂತರಾತ್ಮಾ ೧

ಸತ್ಯ ಶೌಚಾಚಾರ । ಕೃತ್ಯ ನಡೆಸಿವನಲ್ಲಿ
ಭೃತ್ಯ ಇವ ದಾಸತ್ವ । ದೀಕ್ಷೆ ಕಾಂಕ್ಷಿತನೂ
ಸತ್ವ ಜೀವರಿಗಿನ್ನು । ಅತ್ಯಧಿಕ ಪ್ರಿಯತಮನೆ
ನಿತ್ಯ ತವ ಪದದಲ್ಲಿ । ಭಕ್ತಿ ಕರುಣಿಸೋ ೨

ಮಧ್ವಮತ । ಸಾಕಷ್ಟು ತಿಳಿಸುತ್ತಾ
ಮಾಕಳತ್ರನೆ ಇವನಾ । ವ್ಯಾಕುಲದಲ್ಹರಿಸೀ
ಲೌಕಿಕವೆಲ್ಲ ವೈ । ದೀಕ ವೆಂದೆನಿಸುತ್ತ
ಪ್ರಾಕ್ಕು ಕರ್ಮವ ಕಳೆಯೊ । ಲೋಕ ಲೋಕೇಶಾ ೩

ತಾರತಮ್ಯ ಜ್ಞಾನ । ಮೂರೆರಡು ಭೇದಗಳ
ಸಾರತಮ ಹರಿಯು ನಿ । ಸ್ಸಾರ ಜಗವೆಂಬಾ
ಚಾರುಮತಿಯನೆ ಇತ್ತು । ಪಾರಗಾಣಿಸು ಭವವ
ಧೀರ ನೀನಲ್ಲದಲೆ । ಆರು ಕಾಯುವರೋ ೪

ಜೀವ ಬಹು ಪರತಂತ್ರ ದೇವ ನಿಜ ಸ್ವತಂತ್ರ
ಈ ವಿಧದ ಸುಜ್ಞಾನ । ಸಾರ್ವಕಾಲದಲೀ
ದೇವ ನೀ ದಯದಿ ಈ । ಜೀವಂಗೆ ಕರುಣಿಸೇ
ಭಾವದಲಿ ಬೇಡ್ವೆ ಗುರು । ಗೋವಿಂದ ವಿಠಲಾ ೫

೫೫೫

ಜ್ಞಾನಪ್ರದ ನರಸಿಂಹ ವಿಠಲ ನೀ ಸಲಹೊ ಪ

ಧೇನು ವತ್ಸದ ಧ್ವನಿಗೆ ತಾನೇವೆ ಬರುವಂತೆ ಅ.ಪ.

ಕರ್ಮ ಪೂರ್ವಾರ್ಜಿತವ ನಿರ್ಮಲವ ಗೊಳಿಸುತ್ತ
ಭರ್ಮ ಗರ್ಭನ ಜನಕ ಪೇರ್ಮೆಯಲಿ ಇವನ
ಧರ್ಮ ಮಾರ್ಗದಿ ನಡೆಸು ಸುಜ್ಞಾನ ಮತಿಯಿತ್ತು
ಕರ್ಮನಾಮಕ ಹರಿಯೆ ಶರಣಜನ ಧೊರೆಯೆ ೧

ಹರಿಯು ಸರ್ವೋತ್ತಮನು ಶಿರಿಯು ಆತನರಾಣಿ
ಗುರು ವಾಯು ಸುರರೆಲ್ಲ ಹರಿಭೃತ್ಯರೆಂಬ
ವರಮತಿಯನಿತ್ತವಗೆ ಸಂಸೃತಿಯ ಕ್ಲೇಶಗಳ
ಪರಿಹರಿಸಿ ಪಾಲಿಪುದು ಪರಮ ಕರುಣಿಕಾ ೨

ಬೇಕೆಂಬ ವರವನೀವ ಲೋಕೇಶ ಪತಿ ಇರುವೆ
ಮೂಕ ಪುರುಷರ ನೀನು ವಾಕ್ಪತಿಯ ಮಾಳ್ಪೆ
ನಾಕೇಳ್ಪುದರಿದೇನೊ ಪಂಚ ಮುಖ ಭವವಂದ್ಯ
ತೋಕನಿವ ಶರಣಗಿಹ ವ್ಯಾಕುಲವ ಕಳೆಯೋ ೩

ಮಗುವಿನೊಚನವ ಕೇಳಿ ಜಗಿವೆ ಕಂಬದಲಿಂದ
ನಗೆ ಮೊಗನೆ ತರಳೆಯಾ ಹಗರಣವ ಕಳೆದೇ
ಖಗವರಧ್ವಜ ನಿನ್ನ ಬಗೆಬಗೆಯ ಲೀಲೆಗಳ
ಮಿಗಿಲಾಗಿ ತೋರಿವಗೆ ನಗಧರನೆ ಹರಿಯೇ ೪

ನಿತ್ಯತವ ಸ್ಮೃತಿಯಿತ್ತು ಭೃತ್ಯನತಿ ಕಷ್ಟಗಳ
ಕಿತ್ತೊಗೆದು ಮಧ್ವಮತ ತತ್ವ ತಿಳಿಸುತ್ತಾ
ಗುಪ್ತ ಮಹಿಮನೆ ಗುರುಗೋವಿಂದ ವಿಠ್ಠಲನೆ
ಭಕ್ತನುದ್ಧರಿಸೆಂದು ಪ್ರಾರ್ಥಿಸುವೆ ನಿನ್ನಾ ೫

೫೫೬

ತಿರುಮಲೇಶವಿಠಲಾ । ಪೊರೆಯ ಬೇಕಿವಳಾ ಪ

ನಿರುತ ನಿನ್ನಯ ನಾಮ । ಸ್ಮರಣೆ ಸುಖ ಕೊಡುತಾ ಅ.ಪ.

ಸ್ವಪ್ನದಲಿ ತವರೂಪ । ಕನ್ಯೆತಾ ಕಾಣುತ್ತಾ
ಉನ್ನಂತ ಹರ್ಷದಲಿ । ಭಿನ್ನವಿಸಿ ಇಹಳೋ ।
ಪನ್ನಗಾರಿಧ್ವಜನೆ । ಮನ್ನಿಸುತ ಮನ್ನಾತ
ಕನ್ನೆಗಭಯದನಾಗಿ । ನನ್ನೆಯಿಂ ಸಲಹೋ ೧

ಆದಿಮಧ್ಯದಿ ಶೂನ್ಯ । ಭೋಧಾತ್ಮ ಶ್ರೀ ಹರಿಯೆ
ಭೇದಪಂಚಕ ವರುಹಿ । ಮಧ್ವಮತ ದೀಕ್ಷಾ ।
ಸಾಧಿಸುವುದಿವಳಲ್ಲಿ । ಹೇದಯಾಂಬುದೆ ಪೂರ್ಣ
ಭೋದಮುನಿಯ ಸನ್ನುತನೆ । ವೇದಾಂತ ವೇದ್ಯಾ ೨

ಭೌತಿಕದ ಸುಖಃದುಃಖ । ವ್ರಾತ ಸಮತೆಲಿಯುಂಬ
ಭೂತಿಕರುಣಿಸು ಹರಿಯೆ । ವಾತಾಂತರಾತ್ಮಾ ।
ಧಾತಾಂಡ ಸೃಜಿಸಿ ಹರಿ । ಓತ ಪ್ರೋತನು ಇರಲು
ಮಾತನೊಪ್ಪಿಸೆ ನಿನಗೆ । ಏತರವ ನಾನೂ ೩

ಹರಿಗುರೂ ಸದ್ಭಕ್ತಿ । ಹಿರಿಯರಾ ಸತ್ಸೇವೆ
ಕರುಣಿಸುತ ಸಾಧನದ । ವರಮಾರ್ಗ ತೋರೋ ।
ಶರಣಜನ ವಾತ್ಸಲ್ಯ । ಬಿರಿದು ಪೊತ್ತಾಮೇಲೆ
ಕರುಣಾಬ್ಧಿಪೂರ್ಣೆಂದು । ಕರಪಿಡಿಯೊ ಇವಳಾ ೪

ಸಾಮಗಾನವಿಲೋಲ । ಭಾಮೆರುಕ್ಮಿಣಿಲೋಲ
ಸಾಮಾಜಾವರವರದ । ಭೂಮಗುಣಪೂರ್ಣ ।
ಕಾಮಾರಿಸನ್ನುತನೆ । ಕಾಮಿತಪ್ರದನಾಗೊ
ಕಾಮನಯ್ಯನೆ ಗುರು । ಗೋವಿಂದ ವಿಠಲಾ ೫

೫೫೭

ತಿರುಮಲೇಶ ಹರಿ ವಿಠ್ಠಲ । ಪೊರೆಯ ಬೇಕಿವನಾ ಪ

ಕರುಣಾಳು ನೀನೆಂದು । ಪ್ರಾರ್ಥಿಸುವೆ ಹರಿಯೇ ಅ.ಪ.

ತರಳನಿವ ಸಾಧನದ । ಸತ್ಪಥವ ಸಾಧಿಸಲು
ಹರಿದಾಸ ದೀಕ್ಷೆಯನು । ಕಾಂಕ್ಷಿಸುವ ಹರಿಯೇ ।
ಸರ್ವಬಗೆಯಲಿ ಇದಕೆ । ಪರಿಪರಿಯ ವಿಘ್ನಗಳ
ಪರಿಹರಿಸಿ ಪೊರೆ ಇವನಾ । ಸರ್ವಾಂತರಾತ್ಮಾ ೧

ಮರುತಮತ ದೀಕ್ಷೆಯಲಿ । ಇರುವಂತೆ ಕರುಣಿಸುತ
ಪರತತ್ವ ಸಾರವನೆ । ಅರುಹುತಲಿ ಪೊರೆಯೋ ।
ವರಪಂಚ ಭೇಧಗಳ । ತರತರಾತ್ಮಕದರಿವು
ನೆರವಾಗಲಿವನೀಗೆ । ಗುರುದಯದಿ ಹರಿಯೇ ೨

ಕಾಕುಸಂಗವ ಕೊಡದೆ । ಸತ್ಸಂಗ ಪ್ರಾಪಿಸುತ
ಲೌಕಿಕೋನ್ನತಿ ಕೊಟ್ಟು । ನೀಕಾಯೊ ಹರಿಯೇ ।
ಪ್ರಾಕ್ಕು ಕರ್ಮವ ಕಳೆದು । ಬೇಕಾದ ವರಗಳನು
ನೀ ಕೊಟ್ಟು ಕಾಯೊ ಹರಿ । ಸಾಕಾರ ಮೂರ್ತೇ ೩

ಗುರು ಹಿರಿಯ ಸೇವೆಯಲಿ । ಪರಮರತಿಯನೆ ಕೊಟ್ಟು
ಹರಿಗುರು ಚರಿತೆಗಳ । ಬರೆವ ಕೌಶಲವಾ ।
ಕರುಣಿಸೀ ಸತ್ಪಥದ । ಚರಿಪಂತೆಯ್ಯುಪ್ಪುದು
ಮರುತಾಂತರಾತ್ಮಕನೆ । ಉರುಗಾದ್ರಿ ನಿಲಯಾ ೪

ಸರ್ವೇಶ ಸರ್ವಜ್ಞ । ಸರ್ವವ್ಯಾಪ್ತನೆ ಸ್ವಾಮಿ
ನಿರ್ವಿಕಾರನೆ ದೇವಾ । ಶರ್ವಾದಿ ವಂದ್ಯಾ ।
ದರ್ವಿಜೀವಿಯ ಪೊರೆಯೆ । ಪ್ರಾರ್ಥಿಸುವೆ ಶ್ರೀಹರಿಯೇ
ಸರ್ವ ಸುಂದರ ಗುರೂ ಗೋವಿಂದ ವಿಠಲಾ ೫

೫೫೮

ತುಲಸಿ ವಂದಿತ ವಿಠಲ । ಕಾಪಾಡೊ ಇವಳಾ ಪ

ಕಲುಷ ಸಂಹಾರಕನೆ । ಶ್ರೀ ಕೃಷ್ಣಮೂರ್ತೇ ಅ.ಪ.

ಸಾಂಶಯಿಕ ಮತಿ ಕಳೆದು । ಕಂಸಾರಿ ತವಪಾದ
ಪಾಂಸುವನೆ ಭಜಿಪಂಥ । ಮಾರ್ಗದಲ್ಲಿರಿಸೀ
ಹಂಸ ವಾಹನನಾದಿ । ಮುಕ್ತಿ ಯೋಗ್ಯರ ವರ್ಗ
ಶಂಸನವು ತರ ತಮದಿ । ಮಾಡಿಸೋ ಹರಿಯೇ ೧

ಹರಿನಾಮ ಕವಚವನು । ತರುಣಿ ಮಣಿಗಳವಡಿಸಿ
ಪರಿ ಹರಿಸೋ ಭವ ತಾಪ । ಕಾರುಣ್ಯ ಮೂರ್ತೇ
ಹರಿ ಗುರೂ ಸದ್ಭಕ್ತಿ । ವೈರಾಗ್ಯವಿಷಯದಲಿ
ಕರುಣಿಸುತ ಪೊರೆ ಇವಳ । ಕರಿವರದ ಕೃಷ್ಣಾ ೨

ಪತಿಸೇವೆ ಪ್ರಾಮುಖ್ಯ । ಮತಿಯನಿತ್ತಿವಳೀಗೆ
ಹಿತದಿಂದ ಸಲಹೆಂದು । ಭಿನ್ನವಿಪೆ ಹರಿಯೇ
ಹಿತ ವಹಿತ ವೆರಡರಲಿ । ವ್ಯಾಪ್ತ ಶ್ರೀ ಹರಿಯೆಂಬ
ಮತಿಯ ಕರುಣಿಸು ಗುರೂ । ಗೋವಿಂದ ವಿಠಲ ೩

೫೫೯

ದಧಿವಾಮನ ವಿಠಲ ಉದ್ಧರಿಸೊ ಇವನ ಪ

ಅಧಿ ಭೂತ ಅಧ್ಯಾತ್ಮ ಅಧಿದೈವಗತ ದೇವ
ವಿಧಿ ಜನಕ ವಿಶ್ವಾತ್ಮ ಮಧು ಮಥನ ಹರಿಯೆ ಅ.ಪ.

ವಿದ್ಯಾಯುಗಳನಿತ್ತು ಮಧ್ವಮತ ದೀಕ್ಷೆಯಲಿ
ಶ್ರದ್ಧೆ ಬುದ್ಧಿಯ ನೀಯೊ ಮಧ್ವಾಂತರಾತ್ಮಾ ।
ಕೃದ್ಧಖಳರ್ಗಾವಳಿಯ ಒದ್ದು ಪೋಷಿಸುತಿಪನ
ಶುದ್ಧಗೈವುದು ಮನವ ಸಿದ್ಧಜನ ವಂದ್ಯಾ ೧

ತಾರತಮ್ಯ ಜ್ಞಾನ ಮೂರೆರಡು ಭೇದಗಳ
ವಾರ ವಾರಕೆ ತಿಳಿಸಿ ಪೊರೆಯಬೇಕೋ ।
ಸಾರತಮ ನಿನ್ನೊರತು ಆರು ಕಾಯುವರಯ್ಯ
ಪೋರಗಿಹ ದುರಿತಾಳಿ ಪಾರುಮಾಡ್ಯೆದೇವ ೨

ಕಾರಣಿಕ ಕರುಣಾಬ್ಧಿ ತಾರೇಶ ಶ್ರೀ ಹರಿಯೆ
ನೀರ ಜಾಸನವಂದ್ಯ ನೀರಜಾಕ್ಷಾ ।
ತಾರಕನು ಕುಭವ ಕೂಪಾರ ದಾಟಿಸಲು
ಧೀರ ಗುರು ಗೋವಿಂದ ವಿಠಲ ಪ್ರಾರ್ಥಿಸುವೇ ೩

೫೬೦

ದಾಮ ಶೋಭಿತ ವಿಠಲ । ಸಾಮ ಸನ್ನುತನೇ ಪ

ಪ್ರೇಮದಿಂದಿವಳ ಮನ । ಕಾಮ ಪೊರೈಸೋ ಅ.ಪ.

ಯೇಸೊ ಜನ್ಮದ ಪುಣ್ಯ । ರಾಶಿ ಫಲ ಒದಗುತಲಿ
ದಾಸತ್ವ ದೀಕ್ಷೆಯನು । ಆಶಿಸುತ್ತಿಹಳೋ ।
ದಾಸವರ್ಯರು ವಿಜಯ । ದಾಸರುತ್ಸವದಿ ಸಂ–
ತೋಷದಲಿ ಬಿನ್ನಹವ । ಲೇಸು ಗೈದಿಹಳೋ ೧

ಭಾರಿ ತವ ಕಾರುಣ್ಯ । ಬೀರಿ ತವರೂಪವನು
ತೋರಿಸು ಸ್ವಪ್ನದಲಿ । ಮಾರಪಿತ ಕೃಷ್ಣಾ

ಸಾರ ನಿಸ್ಸಾರ ಸಂ । ಸಾರ ಸಾಗರದಾಟಿ
ಹಾರಿ ತೋರಿದಿ ಉಡುಪಿ । ಚಾರು ಮೂರುತಿಯೇ ೨

ಆನಂದ ಮುನಿ ಮತದಿ । ಸ್ವಾನುಭವ ದೀಕ್ಷೆಯನು
ಜ್ಞಾನ ಭಕ್ತ್ಯಾದಿ ಸಂ । ಧಾನ ತಿಳಿಸುತಲೀ ।
ಮಾನನಿಧಿ ಕೈ ಪಿಡಿದು । ದೀನಳನು ಪೊರೆಯೆಂದು
ಪ್ರಾಣ ಪ್ರಾಣನೆ ಬೇಡ್ವೆ । ದೀನ ವತ್ಸಲನೇ ೩

ಸಾಧನದಿ ಸತ್ವತೆಯ । ಹಾದಿಯಲ್ಲಿಹಳೀಕೆ
ಸಾಧುಗಳ ಕಂಡು ಹೃದ । ಯಾರ್ದ್ರ ಭಾವದಲೀ ।
ಮೋದ ಬಡಿಸುತ ಸೇವೆ । ಶ್ರೀಧರನಿಗರ್ಪಿಪಳು
ಹೇ ದಯಾಂಬುಧೆ ಸಲಹೊ । ಸಾಧು ಜನ ವಂದ್ಯಾ ೪

ಸರ್ವಕಾಲವು ದೇಶ । ಸರ್ವಗುಣದ್ರವ್ಯದಲಿ
ದುರ್ವಿಭಾವ್ಯನ ವ್ಯಾಪ್ತಿ । ಸ್ಫುರಣೆಯನು ಕೊಡುತಾ ।
ಸರ್ವಾಂತರಾತ್ಮಗುರು । ಗೋವಿಂದ ವಿಠ್ಠಲನೆ
ದರ್ವಿ ಜೀವಿಯ ಹೃದಯ । ಗಹ್ವರದಿ ತೋರೋ ೫

೫೬೧

ದಾಮೋದರ ವಿಠಲನೆ । ಸಲಹ ಬೇಕಿವಳಾ ಪ

ಈ ಮಹಿಳೆ ತವದಾಸ್ಯ ಕಾಮಿ ಸುತ್ತಿಹಳಯ್ಯ
ಸಾಮ ಸನ್ನುತ ಹರಿಯೆ । ಸ್ವಾಮಿ ಪಾಲಿಪುದೊ ಅ.ಪ.

ತರಳೆ ದ್ರೌಪತಿ ವರದ । ಕರಿಯು ಮೊರೆಯಿಡೆ ಕಾಯ್ದ
ವರ ಅಹಲ್ಯೆಯ ಪೊರೆದ । ತರಳ ಧ್ರುವ ವರದ
ಕರುಣದಿಂದಲಿ ಮನದ । ಪರಿಪರಿಯ ಸತ್ಕಾಮ
ಗರೆದು ಪಾಲಿಪುದಿವಳ । ಶಿರಿ ರಾಮಚಂದ್ರಾ ೧

ಪತಿ ಸೇವೆ ಪರಳೆನಿಸು । ಗತಿಗೋತ್ರ ನೀನೆನಿಸು
ಸತತ ನಿನ್ನಯ ನಾಮ । ಸ್ಮೃತಿಗೊದಗಿಸೊ
ತತುವೇಶರೊಲಿಮೆಯಲಿ । ಸತತ ಗೈಯ್ಯುವ ಕಾರ್ಯ
ವಿತತವಾಗಲಿ ನಿನ್ನ । ಹಿತಸೇವೆ ಎಂದೂ ೨

ಓಲೆಯಲಿ ತೈಜಸನು । ಶೀಲನಾಮವನರುಹೆ
ಪಾಲಿಸಿಹೆ ಅದನೇವೆ । ಬಾಲ ಗೋಪಾಲಾ ।
ಕಾಳಿ ರಮಣನೆ ಕೃಷ್ಣ ಕಾಲ ಕಾಲಕೆ ನಿನ್ನ
ಓಲಯಿಪ ಭಾಗ್ಯದಲಿ । ಕೀಲಿಪುದು ಮನವಾ ೩

ಮೂರೆರಡು ಭೇದಗಳ । ತಾರತಮ್ಯವನರುಹಿ
ತೋರೊ ತವರೂಪ ಹೃ । ದ್ವಾರಿಜದನಡುವೇ
ಕಾರುಣಿಕ ನೀನೆಂದು । ಸಾರುತಿವೆ ವೇದಗಳು
ಮಾರಾರಿ ಸಖ ನಿನ್ನ । ಕಾರುಣ್ಯ ತೋರೋ ೪

ಪಾವಮಾನಿಯ ಪ್ರೀಯ । ಭಾವದಲಿ ಪ್ರಾರ್ಥಿಸಲು
ಪೂವನಿತ್ತಭಯವನು । ಓದಿ ಪಾಲಿಸಿಹೇ
ಕೇವಲಾ ನಂದಮಯ । ಗೋವಿದಾಂಪತಿಯೆ ಗುರು
ಗೋವಿಂದ ವಿಠ್ಠಲನೆ । ಭಿನ್ನಪವ ಸಲಿಸೋ ೫

೫೬೨

ದ್ವಾರಕಾನಾಥ ವಿಠಲ । ಪೊರೆಯ ಬೇಕಿವಳಾ ಪ

ಕಾರುಣಿಕ ಶ್ರೀ ಹರಿಯೆ । ಸರ್ವ ಮಂಗಳನೇ ಅ.ಪ.

ಶೀಲ ಗುಣ ಸಂಪನ್ನೆ । ಮಾಲೋಲ ತವ ಪಾದ
ಓಲೈಪಜನರಲ್ಲಿ । ಲಾಲಿಸೋ ಇವಳಾ ।
ಮೇಲಾಗಿ ಭಿನ್ನವಿಪೆ । ಪಾಲಿಸಲಿ ಬೇಕೆಂದು
ಶ್ರೀ ಲೋಲ ಕಮಲಾಕ್ಷ । ಬಾಲ ಗೋಪಾಲ ೧

ಕಾಮ ಜನಕನೆ ದೇವ । ಕಾಮಿತವ ಸಲಿಸುತ್ತ
ವಾಮಾಂಗಿಯನು ಪೊರೆಯೊ । ಕಾಮಿತಾರ್ಥದನೇ ।
ಯಾಮ ಯಾಮಕೆ ನಿನ್ನ । ನಾಮಸ್ಮೃತಿ ಕರುಣಿಸುತ
ನೀ ಮಾಡಿ ಮಾಡಿಸೊ ನೇಮ ಸಾಧನವಾ ೨

ಮಧ್ವ ಮತ ಪದ್ಧತಿಯ । ವೃದ್ಧಿಗೈಸಿವಳಲ್ಲಿ
ಪದ್ಮನಾಭನೆ ದೇವ । ಮಧ್ವರಮಣಾ ।
ಶುದ್ಧ ಭಕ್ತಿ ಜ್ಞಾನ । ಸಿದ್ಧಿಸುತ ಇವಳಲ್ಲಿ
ಮುದ್ದು ಗುರು ಗೋವಿಂದ । ವಿಠಲ ಉದ್ಧರಿಸೋ ೩

೫೬೩

ದಾಸವರವರದ ವಿಠಲ । ಸಲಹೊ ಇವಳಾ ಪ

ಈಶಾದಿ ದಿವಿಜೇಡ್ಯ । ವಾಸವಾನುಜನೇ ಅ.ಪ.

ಕ್ಲೇಶನಾಶನನೆ ಮ । ಧ್ವೇಶ ನಿನ್ನಡಿ ದಾಸ್ಯ
ಆಶಿಸೂವಳ ಬಿಡದೆ । ಶ್ರೀಶ ಕೈಪಿಡಿದೂ
ದೋಷರಾಶಿಯ ಕಳೆದು । ಪೋಷಿಸಲು ಬಿನ್ನವಿಪೆ
ಹೇಸದಾಶಿವ ವಂದ್ಯ । ಮೇಶ ಮಹಿದಾಸಾ ೧

ಪತಿಸೇವೆ ಗುರುಸೇವೆ । ಹಿತದಿಂದ ಮಾಳ್ಪಂಥ
ಮತಿಯನೆ ಕರುಣಿಸುತ । ಕ್ಷಿತಿರಮಣ ನಿನ್ನಾ
ಸ್ಮೃತಿಯ ಕೊಡು ಸತತ ಸಂ । ಸೃತಿಯನೇ ಕಳೆಯಲ್ಕೆ
ಗತಿಗೋತ್ರ ನೀನಾಗಿ । ಪಥದೋರೊ ಹರಿಯೇ ೨

ಏಕಮೇವನೆ ದೇವ । ಪ್ರಾಕ್ಕು ಕರ್ಮವ ಕಳೆದು
ನೀ ಕೊಡುತ ಸುಜ್ಞಾನ । ಭಕುತಿ ವೈರಾಗ್ಯ
ಕಾಕು ಸಂಗವ ಕೊಡದೆ । ನೀಕೊಟ್ಟು ಸತ್ಸಂಗ
ಮಾಕಳತ್ರನೆ ಸಲಹೊ । ಈಕೆ ಕೈ ಪಿಡಿದೂ ೩

ಖೇಚರೋತ್ತಮ ವಾಹ । ಕೀಚಕಾರಿ ಪ್ರಿಯನೆ
ಮೋಚಕೇಚ್ಛೆಲಿ ಸವ್ಯ । ಸಾಚಿಸಖಕೃಷ್ಣಾ ।
ವಾಚಾಮಗೋಚರನೆ । ನೀಚೋಚ್ಚ ತರತಮವ
ವಾಚಿಸುತ ಇವಳಲ್ಲಿ । ಮೋಕ್ಷಪ್ರದನಾಗೋ ೪

ದೇವವರ ಭವ್ಯಾತ್ಮ । ಭಾವಕೊಲಿಯುವ ಹರಿಯೆ
ನೀವೊಲಿಯದಿನ್ನಿಲ್ಲ । ಆವ ಈ ಜಗದೀ ।
ಕಾವುದಿವಳನು ಎಂದು । ಭಾವದಲಿ ಭಿನ್ನೈಪೆ
ಭಾವುಕರ ಪಾಲ ಗುರು । ಗೋವಿಂದ ವಿಠಲಾ ೫

೫೬೪

ನರ್ತನಗೋಪ ಕೃಷ್ಣ । ವಿಠಲ ಪೊರೆ ಇವನಾ ಪ

ಅರ್ತು ನಿನ್ನಂಘ್ರಿಯಲಿ । ದಾಸ್ಯ ಕಾಂಕ್ಷಿಪನಾ ಅ.ಪ.

ಮಧ್ವಮತ ತತ್ವಗಳ । ಉದ್ದರಿಸು ಇವನಲ್ಲಿ
ಶ್ರದ್ಧೆ ಪತಿ ಸುಪ್ರೀಯ । ಮಧ್ವಾಂತರಾತ್ಮ
ಸದ್ಧರ್ಮರತಿಯಿತ್ತು । ತಿದ್ದಿ ಸಂಸ್ಕತಿಗಳನು
ಶ್ರದ್ಧಾಳು ವೆಂದಿನಿಸು । ಸಿದ್ಧಾಂತ ಸಥದೀ ೧

ಸಾಧನ ಸುಮಾರ್ಗದಲಿ । ಒದಗುತಿಹದ್ವಂದ್ವಗಳ
ಬಾಧೆಗೊಳಗಾಗದತಿ । ಸಮತೆ ಅನುಭವಿಪ
ಬೋಧ ಓದಗಿಸಿಕಾಯೋ । ಬಾದರಾಯಣದೇವ
ಮೋದದಿಂ ಪ್ರಾರ್ಥಿಸುವೆ । ಹೇ ದಯಾಪೂರ್ಣ ೨

ಧ್ಯಾನುಪಾಸನವಿತ್ತು । ಶ್ರೀನಿವಾಸನಮನದಿ
ಕಾಣುವ ಸುವಿಜ್ಞಾನ । ನಿನಾಗಿ ಕೊಡುತಾ
ಮೌನಿಕುಲ ಸನ್ಮಾನ್ಯ । ಜ್ಞಾನದಾಯಕ ಹರಿಯೆ
ದೀನಜನ ಮಂದಾರ । ನೀನಾಗಿ ಪೊರೆಯೊ ೩

ಪಿತೃ ಮಾತೃ ಪರಿವಾರ । ವ್ಯಾಪ್ತ ಹರಿಮೂರ್ತಿಯನು
ಅರ್ಥಿಯಿಂದಲಿ ಭಜಿಪ । ಮತಿಯ ಪಾಲಿಸುತಾ
ಕರ್ತೃತ್ವ ಭ್ರಾಂತಿಯನು । ಹತಮಾಡಿ ಶ್ರೀಹರಿಯೆ
ಕೀರ್ತಿವಂತನ ಗೈಯ್ಯೋ । ಆರ್ತರುದ್ಧರಣಾ ೪

ಮುನ್ನವೇ ತೈಜಸನು । ನನ್ನೆಯಿಂ ಸೂಚಿಸಿಹ
ಚೆನ್ನ ಅಂಕಿತವನ್ನೆ । ಇನ್ನು ಸ್ಥಿರಪಡಿಸೀ
ಘನ್ನ ಉಪದೇಶವನು । ಚಿತ್ತಾನಿಗೆ ಇತ್ತಿಹೆನೋ
ಮನ್ನಿಸೀಕೃತ್ಯ ಗುರು । ಗೋವಿಂದ ವಿಠಲಾ ೫

೫೬೫

ನಾರಾಯಣ ವಿಠ್ಠಲನೆ ನೀನಿವನ ಕಾಪಾಡೊ ಹರಿಯೆ ಪ

ನೀರಜಾಸನವಂದ್ಯ ಪೋರ ನಿನ್ನವನೆಂದು
ಕಾರುಣ್ಯದಲಿ ಕೈಪಿಡಿದು ಕಾಪಾಡೊ ಹರಿಯೇ ಅ.ಪ.

ಜ್ಞಾನಾಯು ರೂಪಕ ಸು । ವಾಯುದೇವನೊಳಿದ್ದು
ನೀನಿವಗೆ ಜ್ಞಾನಾಯು ಸಂಪದವನೀಯೋ ।
ಮೌನಿಕುಲ ಸನ್ಮಾನ್ಯ ಪೂರ್ಣಪ್ರಜ್ಞರ ಮತದಿ
ಜ್ಞಾನಿ ಎಂದೆನಿಸಿವನ ಕಾಪಾಡೊ ಹರಿಯೆ ೧

ಗೋವುಗಳೊಳುದ್ಗೀಥ ಕಾವ ಕರುಣಿಯೆ ದೇವ
ಭಾವದಲಿ ನೀನಿದ್ದು ಉದ್ಧರಿಸೊ ಹರಿಯೇ ।
ಆವ ಭವವನಧಿ ಲಕ್ಷ್ಮೀ ನರಹರಿಯೇ
ನೋವುಗಳ ಪರಿಹರಿಸೊ ಪವನ ಪ್ರೀಯ ೨

ಹೆಂಚು ಹಾಟಕದಲ್ಲಿ ಸಮಬುದ್ಧಿ ನೀನಿತ್ತು
ಪಂಚ ಪಂಚಿಕೆ ತತ್ವ ತರತಮವ ತಿಳಿಸುತ್ತ
ಮಿಂಚಿನಂತಿವನ ಹೃತ್ಪಂಕಜದಿ ಪೊಳೆಯೊ
ವಾಂಛಿತ ಪ್ರದನೆ ಗುರು ಗೋವಿಂದ ವಿಠಲಾ ೩

೫೬೬

ನಾರಾಯಣ ಹರಿ ವಿಠಲ । ಪೊರೆಯ ಬೇಕಿವಳಾ ಪ

ಸಾರತಮ ವಿಶ್ವಾತ್ಮ । ಕಾರುಣಿಕ ಹರಿಯೇ ಅ.ಪ.

ನಾದ ಮೂರುತಿ ನಿನ್ನ । ಪಾದಾನುವರ್ತಿ ಇಹ
ಸಾಧು ತರುಳೆಯ ಕಾಯೊ । ವೇದ ವೇದ್ಯಾ ।
ಶೋಧಿಸಿದ ಸಂಸ್ಕಾರ । ಕಾದಿಹುದು ಸತ್ಪುಣ್ಯ
ಬೋಧವಿದು ಸಂಪಿಗೆಯ । ಸ್ವಾದು ದರ್ಶಾ ೧

ಆಗುಹೋಗುಗಳೆಲ್ಲ । ಸಾಗರಜೆ ಪತಿಯದೆಂಬ
ಆಗ ಮಗಳರಿವ ಸ । ದ್ಯೋಗ ಪಾಲಿಪುದೂ
ನಾಗಶಯ ದಯದಿ ಭವ । ಸಾಗರವ ದಾಂಟಿಸುವೆ
ಯೋಗಿ ಕುಲ ಸದ್ವಂದ್ಯ । ಅಗಜೆದರ್ಶನದೀ ೨

ಭಾವಿ ಬೊಮ್ಮನ ಮತವ । ಭಾವದಲ್ಯಭಿವೃದ್ಧಿ
ಗೈವ ಹವಣೆಯು ನಿಂದು । ದೇವದೇವೇಶಾ
ಭಾವಿ ಕಾರ್ಯವು ಎನ್ನೆ । ಜೀವಗಂಕಿತಸೂಚಿ
ಭಾವದಲಿ ತೋರಿರುವೆ । ಶ್ರೀ ವರನೆ ಹರಿಯೇ ೩

ಜ್ಯೋತಿಯಿಂದಲಿ ಜ್ಞಾನ । ದಾತವ್ಯ ವೆಂಬುದರ
ನೀತಿ ತೋರ್ದೆಯೊ ಖಳಾ । ರಾತಿತೈಜಸಾಖ್ಯಾ
ಮಾತಿಗೇ ಕೈವಲ್ಯ । ದಿಂತ ತವದಾಸ್ಯವನು
ಈ ತರಳೆಗಿತ್ತು ಸುಖ । ದಿಂದ ನಾಗುವುದೋ ೪

ಸಾರ್ವ ಭೌಮ ಸ್ವಾಮಿ । ಸಾರ್ವಕಾಲದಿ ನಿನ್ನ
ಪಾವನ ಸ್ಮೃತಿಯಿತ್ತು । ದರ್ವಿಜೀವಿಯನೂ
ಕಾವುದೆನೆ ಭಿನ್ನಪವ । ನೀ ವೊಲಿದು ಸಲಿಸುವುದು
ದೇವ ದೇವೇಶ ಗುರು । ಗೋವಿಂದ ವಿಠಲಾ ೫

೫೬೭

ನಾರಾಯಣ ಕೃಷ್ಣವಿಠಲ । ಪೊರೆಯ ಬೇಕಿವನಾ ಪ

ಕಾರುಣ್ಯನಿಧಿ ನಿನ್ನ । ಮೊರೆಯ ಹೊಕ್ಕವನಾ ಅ.ಪ.

ಗುರು ರಾಘವೇಂದ್ರರಾ । ಆಶಿಷವ ಪಡೆಯುತ್ತ
ಗುರು ಪರಮ ಗುರುಗಳಾ । ದರುಶನವ ಪೊಂದೀ
ಮೆರೆವ ಸುಸ್ವಾಪರಲಿ । ಹರಿಗುರು ದಾಸ್ಯಗಳ
ವರಸು ತೈಜಸ ಸೂಚಿ । ಅಂಕಿತವ ನಿತ್ತೇ ೧

ಮುಕ್ತಿಗಿವು ಸೋಪಾನ । ಭಕ್ತಿವ್ವೈರಾಗ್ಯಗಳು
ತತ್ವ ತರತಮಜ್ಞಾನ । ಉತ್ತಮರ ಸೇವೇ
ಕೃತ್ತಿವಾಸನ ತಾತ । ಇತ್ತು ಪೊರವುದು ಇವನಾ
ಮತ್ತನ್ಯನ ಬೇಡೆ । ಉತ್ತರಿಸೊ ಇವನಾ ೨

ಸಾಧನ ಸುಸಾಧ್ಯವೆನೆ । ಶ್ರೀಧರನ ನಾಮಸುಧೆ
ಮೋದದಿಂದುಣಿಸಿವಗೆ । ಮೋದಮುನಿವಂದ್ಯ
ನಾದ ಮೂರುತಿ ಗುರು । ಗೋವಿಂದ ವಿಠಲನೆ
ನೀ ದಯದಿ ಬಿನ್ನಪವ । ಆದರಿಸಿ ಸಲಿಸೋ ೩

೫೬೮

ನಾರಾಯಣಚ್ಯುತ ವಿಠಲ ಪೊರೆಯ ಬೇಕಿವಳಾ ಪ

ಭೂರಿ ಕರುಣಾ ಮೂರ್ತಿ । ಪ್ರಾರ್ಥಿಸುವೆ ಹರಿಯೇ ಅ.ಪ.

ರೋಗದಿಂ ನರಳಿ ಬಹು । ರಾಘವೇಂದ್ರರ ದಯದೀ
ರೋಗ ವರ್ಜಿತಳಾಗಿ । ರಾಗ ರಹಿತೇ ।
ಭೋಗಗಳ ತೆರೆದು ವೈರಾಗ್ಯ ಮಾರ್ಗದಿ ತೆರಳೇ
ಭೋಗಿ ಶೈಲೇಶ ಕಥೆ । ಕೇಳಿ ಮುಂಧೋಗೇ ೧

ಮಂಗಳಾರತಿ ಕೊಂಡು । ಅಂಗನಾ ಮಣಿತೋರ್ವ
ಮಂಗಳ ಪ್ರದ ಗುರುವ । ಕಂಗಳಲಿ ನೋಡೇ
ಹೆಂಗಳೆಯು ಕಾತುರದಿ । ಭಂಗವಿಲ್ಲದೆ ಸಾಗೆ
ಸಂಗವಾಯ್ತೀರ್ವ ನಿ । ಸ್ಸಂಗಿ ಮಾರ್ಗದರಾ ೨

ಗುರು ವಿರುವ ದೇಶವನು । ಒರೆದು ಕಣ್ಮರೆಯಾಗೆ
ಭರದಿ ಸಾಗುತ ಅಲ್ಲಿ । ನೆರೆದವರ ಪೇರೇ
ಬರೆದು ಪೂರ್ವಾನು ಭವ । ತೋರಿಗುರುಗಳಲ್ಲಿ
ಅರುಹಿದಳ್ ಮುತ್ತೈದೆ । ವಿಠಲ ಮಂದಿರವಾ ೩

ತೈಜಸನ ಸೂಚನೆಲಿ । ಯೋಜಿಸಿದೆ ಅಂಕಿತವ
ನೀಜಯ ಪ್ರದನಾಗೊ । ವೃಜಿನ ಹರ್ತಾ ।
ರಾಜೀವ ನಯನ ಸ । ದ್ಭಾಜಿಷ್ಣು ಧನ್ವಂತ್ರಿ
ಭ್ರಾಜಿಸಿವಳ್ಮನದಿ ಅ । ವ್ಯಾಜ ಕರುಣಾಂಬುಧೆ ೪

ಬಾಧೆಗೊಳ ಪಡಿಸದಲೆ । ಕಾದುಕೊ ಇವಳನ್ನ
ಮೋದ ತೀರ್ಥರ ಮತದಿ । ಸಾಧನವ ಗೈಸೀ
ಐದಿಸೆನೆ ಸದ್ಗತಿಯ । ಪ್ರಾರ್ಥನೆಯ ಸಲ್ಲಿಪುದು
ಮೋದ ಪ್ರಮೋದ ಗುರು । ಗೋವಿಂದ ವಿಠಲಾ ೫

೫೬೬

ಪಂಕಜಾಸನ ವಂದ್ಯ । ವೆಂಕಟಾದ್ರಿ ವಿಠಲ ತವ
ಕಿಂಕತನ ವಿತ್ತವಗೆ । ಸಂಕಟವ ಕಳೆಯೊ ಪ

ಮಂಕುಹರಿಸುಜ್ಞಾನ । ದಂಕುರಕೆ ಮನಮಾಡಿ
ಬಿಂಕದಿಂ ಪೊರೆಇವನ । ಅಕಳಂಕ ಮಹಿಮಾ ಅ.ಪ.

ಸತ್ಯಶೌಚಾಚಾರ । ಕೃತ್ಯದಲಿ ಮನವಿರಿಸು
ನಿತ್ಯತವ ಮಹಿಮಗಳ । ಸುತ್ತಿಇರಲಿ ಇವಗೇ

ನಿತ್ಯನೂತನ ಮಹಿಮ । ತತ್ವಗಳ ತಿಳಿಸುತ್ತ
ಭೃತ್ಯವತ್ಸಲ ಕಾಯೋ । ಮೃತ್ಯುಹರದೇವಾ ೧

ತತ್ವಾರ್ಥ ತಿರುಳುಗಳ । ಚಿತ್ರಿಸುವ ಕಲೆವೃದ್ಧಿ
ವಿಸ್ತರೀಸಿವನಲ್ಲಿ । ನಿಸ್ತುಲಾತ್ಮಕನೇ ।
ಅರ್ಥಕಾಮಸುರೂಪ । ಪೊತ್ತುಪೊರೆಯುವ ದೇವಾ
ಪ್ರತ್ಯೇಕ ಪ್ರಾರ್ಥನೆಯ । ಕೃತ್ಯವೇಕಿನ್ನು ೨

ನಾನು ನನ್ನದು ಎಂಬ । ಹೀನಮತಿಕಳೆದಿನ್ನು
ನೀನು ನೀನೇ ಎಂಬ । ಜ್ಞಾನಮಹಬರಲೀ ।
ಪ್ರಾಣ ಪ್ರಾಣನೆ ಜಗ । ತ್ರಾಣನಹುದೆಂಬ ಸು
ಜ್ಞಾನ ಪಾಲಿಸಿ ಪೊರೆಯೋ । ಮನಿಮಧ್ವ ವರದಾ ೩

ಆನತೇಷ್ಟ ಪ್ರದನೆ । ಗಾನಕಲೆ ಇವನಲ್ಲಿ
ಸ್ವಾನುಭಾವದಿ ಬರಲಿ । ಮೀನಾಂಕ ಜನಕಾ
ಮಾನಮೇಯಾನುಭವ । ಸಾನು ಕೂಲಿಸುವ
ಕೋನೇರಿವಾಸ ಕಾರುಣ್ಯ । ತೋರಿವಗೇ ೪

ಗೋವತ್ಸದನಿ ಕೇಳಿ । ಆವುಧಾನಿಸುವಂತೆ
ನೀವೊಲಿದು ಕಾಪಾಡು । ಬಾವುಕರ ಪಾಲಾ ।
ಪೂವಿಲ್ಲನಯ್ಯಗುರು । ಗೋವಿಂದ ವಿಠಲತವ
ಪಾವನವ ಪದ ತೋರೆ । ಓವಿ ಪ್ರಾರ್ಥಿಸುವೆ ೫

೫೭೦

ಪಂಢರಿನಾಥ ವಿಠಲ । ತೊಂಡನನು ಸಲಹೊ ಪ

ಅಂಡಜಾದಿಪತುರಗ । ಕುಂಡಲಿಯ ಶಯನಾ ಅ.ಪ.

ಭವ ಸಮುದ್ರಕೆ ಪೋತ । ತವಪಾದವಾಶ್ರಯಿಸಿ
ಬವಣೆಗಳ ಕಳೆವೆನೆನೆ । ತವಕದಿಂದಿರುವಾ ।

ಇವನ ಕೈ ಪಿಡಿಯುತ್ತ । ಧೃವವರದ ಸಲಹೋಮಾ
ಧವನೆ ಭಿನ್ನವಿಪೆ ಶ್ರೀ । ಪವನ ವಂದಿತನೇ ೧

ಅಂತರಂಗದ ದೈತ್ಯ । ಸಂತತಿಯು ಕೊಡುತಿಪ್ಪ
ಸಂತಾಪ ಹರಿಸಿ ಮ । ಧ್ವಾಂತರಾತ್ಮಾ ಹರಿಯೆ
ಸಂತತವು ತವನಾಮ । ಚಿಂತೆಯಲ್ಲಿರಿಸುತ್ತ
ಸಂತಸವ ಬಡಿಸೊ ಶ್ರೀ । ಕಂತುಹರಸಖನೇ ೨

ಏಸೇಸೊ ಜನ್ಮಗಳ । ರಾಶಿಪುಣ್ಯಗಳೊದಗಿ
ದಾಸನಾಗಲು ಇಂದು । ಆಶಿಸುತ್ತಿಹನೇ ।
ಲೇಸಾದ ಸತ್ಪಂಥ । ದಾಶಯವ ತಿಳಿಸುತ್ತ
ದಾಸನಾಗೆಂದೆನುತ । ಆಶಿಷವನೀವೇ ೩

ಹರಿಗುರೂ ಸದ್ಭಕ್ತಿ । ಪರತತ್ವ ಸುಜ್ಞಾನ
ಮರುತ ಮತ ದೀಕ್ಷೆಯನು । ವಿಷಯ ವೈರಾಗ್ಯ ।
ಕರುಣಿಸುತ ತರಳನ್ನು । ಪೊರೆಯೆಂದು ಬಿನ್ನೈಪೆ
ಕರಿವರದ ಕಮಲಾಕ್ಷ । ಕಾರುಣ್ಯ ನಿಧಿಯೇ ೪

ಗಾನಲೋಲನೆ ಇವಗೆ । ಧ್ಯಾನ ಸಾಧನ ಕೊಟ್ಟು
ಕಾಣಿಸೋ ಹೃದ್ಗುಹದಿ । ಮೌನಿಜನವಂದ್ಯ ।
ಜಾಣಗುರೂಗೋವಿಂದ । ವಿಠಲ ಮದ್ಭಿನ್ನತವ
ನೀನಾಗಿ ಸಲಿಸೆಂದು । ಆನಮಿಸಿ ಬೇಡ್ವೆ ೫

೫೭೧

ಪದ್ಮಾಪತಿ ವಿಠಲ ನೀನಿವಳ ಸಲಹ ಬೇಕೋ ಪ

ಪದ್ಮ ಸಂಭವ ಜನಕ ಪದ್ಮದಳ ನೇತ್ರ ಹೃ
ತ್ಪದ್ಮ ದೋಷಗಳ ತಿದ್ದಿ ಕಾಪಾಡೊ ಹರಿಯೇ ಅ.ಪ.

ಜನ್ಮಜನ್ಮಾಂತರದ ಪುಣ್ಯ ಸಂಚಯದಿ ಶ್ರೀ
ಮನ್ಮಧ್ವಮತದಲಿ ಜನ್ಮ ತಾಳಿಹಳೋ ।
ಕರ್ಮನಾಮನೆ ಅನಾದ್ಯವಿದ್ಯಾಕಾಮ
ಕರ್ಮಗಳನೆ ಕಳೆವ ಸನ್ಮಾರ್ಗವನೆ ತೋರೊ ೧

ತಾರತಮ್ಯ ಜ್ಞಾನ ಮೂರೆರಡು ಭೇದಗಳ
ಸಾರವನೆ ತಿಳಿಸಿ ಸಂಸಾರನಿಧಿ ದಾಟಿಸೋ
ಕಾರುಣ್ಯ ನಿಧಿ ಮೂಲ ಕಾರಣನು ನೀನೆಂದು
ಸಾರಿಬೇಡುವೆ ನಿನ್ನ ಪಾರು ಮಾಡಿವಳಾ ೨

ಪತಿಸುತರು ಹಿತರಲ್ಲಿ । ಮತಿಮತಾಂವರಲ್ಲಿ
ಕೃತಿಪತಿಯ ವ್ಯಾಪ್ತಿ ಸನ್ಮತಿಯನೇ ಕೊಡುತ
ಹಿತದಿ ಸೇವೆಯಗೈಸು ಕೃತಕಾರ್ಯಳೆಂದೆನಿಸು
ಗತಿ ವಿಹೀನರಿಗೆಲ್ಲ ಗತಿಪ್ರದನೆ ಸ್ವಾಮೀ ೩

ನಿನ್ನ ಸ್ಮೃತಿಗಿಂದಧಿಕ ಅನ್ಯಸಾಧನ ಕಾಣೆ
ಘನ್ನ ಈ ಕಲಿಯುಗದಿ ಪ್ರಾಣಾಂತರಾತ್ಮ ।
ಪುಣ್ಯ ಫಲದಾತ ಪ್ರಪನ್ನ ಪರಿಪಾಲಕನೆ
ನಿನ್ನ ಸಂಕೀರ್ತನವ ಸರ್ವದಾ ಕೊಡು ಹರಿಯೇ ೪

ಶರ್ವಾದಿ ದಿವಿಜೇಡ್ಯ । ಸರ್ವಾಂತರಾತ್ಮಕನೆ
ಸರ್ವಸ್ವತಂತ್ರನೆ ಹರಿಯೆ ಸರ್ವೋತ್ತಮಾ ।
ದರ್ವಿಜೀವಿಯ ಕಾವ । ಭಾರ ನಿನ್ನದೊಸ್ವಾಮಿ
ಮಧ್ವಾಂತರಾತ್ಮ ಗುರು ಗೋವಿಂದ ವಿಠಲಾ ೫

೫೭೨

ಪದ್ಮೇಶ ವಿಠ್ಠಲನೆ । ಪೊರೆಯ ಬೇಕಿವನಾ ಪ

ಸನ್ಮುದವ ನೀನಿತ್ತು ಪ್ರೇಮದಲಿ ಸಲಹೋ ಅ.ಪ.

ಮನೊಮಾನಿ ಒಡೆಯನೇ । ಮನಸಿನಲಿ ನೀನಿದ್ದು
ಮನೊ ವಿಕಾರಕ್ಕೆಡೆಯು । ಉಚಿತವೇ ಹರಿಯೇ ।
ಮನಶಾಂತಿ ಕರುಣಿಸುತ । ಘನ್ನ ಸಾಧನಗೈಸೆ
ಗುಣ ಉಳ್ಳವನು ಇವನು । ಅನಿಲಾಂತರಾತ್ಮಾ ೧

ಆದಿ ಮೂರುತಿ ಹರಿಯೆ ಭೇಧ ಪಂಚಕತಿಳಿಸಿ
ಮೋದ ತೀರ್ಥರ ಶಾಸ್ತ್ರ । ಭೋಧ ವದಗಿಸುತಾ
ಸಾಧನ ಸುಮಾರ್ಗದಲಿ । ನೀದಯದಲಿಡು ಇವನ
ವೇದಾಂತ ವೇದ್ಯ ಹರಿ । ಬಾದರಾಯಣನೇ ೨

ತೈಜಸನು ನೀನಾಗಿ । ಯೋಜಿಸಿದ ಅಂಕಿತವ
ಮಾಜದಲೆ ಇತ್ತಿಹೆನೊ । ಕಾರುಣ್ಯಮೂರ್ತೇ
ಮೂಜಗಜ್ಜನ್ಮಾದಿ । ಕಾರಣನೆ ಸಂಸಾರ
ಗೋಜುಗಳ ಬಿಡಿಸೊ ನಿ । ವ್ಯಾಜ ಮೂರುತಿಯೇ ೩

ಸಾಧು ಸತ್ಸಂಗಗಳ । ನೀ ದಯದಿ ಕೊಟ್ಟವಗೆ
ಕಾದುಕೋ ಕೈ ಬಿಡದೆ । ಯಾದವರೊಡೆಯಾ
ಬಾಧೆ ಮನಸಿಗೆ ಬಂದಿ । ಹುದ ಕಳೆದು ಸಂತವಿಸು
ಮೋದ ಮುನಿ ಸಂಪ್ರೀಯ । ಧನ್ವಂತ್ರಿ ದೇವಾ ೪

ಭಾವುಕರ ಪರಿಪಾಲ । ಭಾವ ಮೈದುನಗೊಲಿದ
ಗೋವಳೇಶನೆ ಭುವನ । ಮೋಹನ ದೇವಾ ।
ಭಾವುಕನ ಪೊರೆಯೆಂದು । ಈ ವಿಧದ ಭಿನ್ನವಿಪೆ
ಗೋವಿದಾಂ ಪತಿ ಗುರೂ । ಗೋವಿಂದ ವಿಠಲಾ ೫

೫೭೩

ಪರತತ್ವ ವಿಠಲನೇ । ಪೊರೆಯ ಬೇಕಿವಳಾ ಪ

ದುರಿತ ರಾಶಿಯ ತರಿದು । ಕರಪಿಡಿಯ ಬೇಕೋ ಅ.ಪ.

ಬಾಲೆಯತಿ ಮುಗ್ದೆ ಗುಣ । ಜಾಲವಂತೆಯ ಮಾಡಿ
ಶೀಲವತಿ ಎನಿಸಿವಳ । ಶ್ರೀ ಲೋಲ ಹರಿಯೇ ।
ಓಲಗವ ಕೊಡಿಸಿ ತವ । ಕಾಲ ಕಾಲಕೆ ದೇವ
ಪಾಲಿಸೋ ಶಿಶುವನ್ನು । ಕಾಲ ರೂಪಾತ್ಮಾ ೧

ಗುರು ಕರುಣವಿಲ್ಲದಲೆ । ಹರಿಯೊಲಿಯನೆಂದೆಂಬ
ಪರಮರಾಹಸ್ಯವನು । ಅರುಹಿ ಪ್ರೀತಿಯಲೀ
ಕರುಣಿಸೋ ತವನಾಮ । ಸ್ಮರಣೆ ಸುಖ ಸಖ್ಯವನು
ಮರುತಾಂತರಾತ್ಮ ಹರಿ । ದುರಿತವನದಾವಾ ೨

ಹರಿದಾಸ್ಯವತಿ ಕಷ್ಟ । ವಿರುವುದೆಂದರಿತಾಗ್ಯು
ಪರಿ ಪ್ರಶ್ನೆ ಭಕ್ತಿಯಲಿ । ಮೊರೆಯನಿಡುತಿರುವಾ ।
ತರಳೆ ಗಂಕಿತ ವಿತ್ತೆ । ವರ ಸ್ವಪ್ನ ಸೂಚ್ಯದಲಿ
ಹರಿಯೆ ನಿನ್ನಾದೇಶ । ವಿರುವುದೆಂದರಿತು ೩

ತರತಮದ ಸುಜ್ಞಾನ । ಹರಿ ಗುರೂ ಸದ್ಭಕ್ತಿ
ಹರಿಗನ್ಯ ವಸ್ತುವಿಲಿ । ವೈರಾಗ್ಯ ಭಾವಾ
ಕರುಣಿಸುತ ಮನೆವಾರ್ತೆ । ಪರಿ ಪರಿಯಗ್ಯೆಯ್ಯುವಲಿ
ಹರಿಯೆ ತವ ಸಂಸ್ಮರಣೆ । ಮರೆಯದಂತಿರಿಸೋ ೪

ಜೀವೇಶ ಸನ್ನುತನೆ । ಜೀವರಂತರ್ಯಾಮಿ
ಗೋವತ್ಸದನಿ ಗಾವು । ಧಾನಿಸೂವಂತೇ ।
ಕೈವಲ್ಯ ಪ್ರದ ಗುರೂ । ಗೋವಿಂದ ವಿಠಲನೆ
ಭಾವುಕಳ ಮಾಡಿವಳ । ನೀವೊಲಿಯ ಬೇಕೋ ೫

೫೭೪

ಪನ್ನಗಾದ್ರಿವಿಠಲ । ನನ್ನೆಯಿಂ ಸಲಹೋ ಪ

ಸನ್ನುತಿಸಿ ತವ ದಾಸ್ಯ । ಪ್ರಾರ್ಥಿಸುತ್ತಿಹಳಾ ಅ.ಪ.

ಮನೋನಿಯಾಮಕನೊಡೆಯ । ಮನಶಾಂತಿ ಇತ್ತಿವಳ
ಅನುನಯದಿ ಸಲಹಲ್ಕೆ । ಬಿನ್ನವಿಪೆ ಹರಿಯೇ ।
ಘನಸುತ್ತೈಜಸ ಮೂರ್ತಿ । ಅನಘ ತವನಾಮವನು
ಗುಣಿಸಿ ಇತ್ತಿಹೆ ಹರಿಯೇ । ಮುನಿ ಮೌಳಿ ವರದಾ ೧

ಭವವನದಿ ಉತ್ತರಿಸೆ । ಭುವನ ಪಾದವ ವೆನಿಪ
ತವನಾಮ ಅಮೃತವ । ಸರ್ವದಾ ಸವಿಯೇ ।
ಹವಣಿಸೋ ಅಭಯಾದ್ರಿ ನಿವಸಿತ ಶ್ರೀಹರಿಯೇ
ಧ್ರುವ ವರದ ಕರಿವರದ । ಪವನಾಂತರಾತ್ಮಾ ೨

ಮುಕ್ತಿಗೇ ಸೋಪಾನ । ಸತ್ಯಗವನೆ ಕೊಟ್ಟು
ಭಕ್ತಿ ಸುಜ್ಞಾನಗಳು । ಮತ್ತೆ ವೈರಾಗ್ಯ ।
ಇತ್ತು ಇವಳನು ಪೊರೆಯೆ । ಪ್ರಾರ್ಥಿಸುವೆ ಶ್ರೀಹರಿಯೇ ।
ಉತ್ತಮೋತ್ತಮನೆ ಗುರು । ಗೋವಿಂದ ವಿಠಲಾ ೩

೫೭೫

ಪರಸೌಖ್ಯ ಪ್ರದ ವಿಠಲ । ಪೊರೆಯ ಬೇಕಿವಳಾ ಪ

ದುರಿತ ದುಷ್ಕೃತವೆಲ್ಲ । ದೂರ ಓಡಿಸುತಾ ಅ.ಪ.

ಪಿತೃಮಾತೃ ಭಕ್ತಿಯುತೆ । ಪತಿಯ ಸೇವಾ ನಿರತೆ
ಹಿತದಿಂದ ಸೇವಿಪಳು । ಗುರುಹಿರಿಯರುಗಳು
ವಿತತ ಅಚ್ಯುತ ನಿನ್ನ । ಮಹಿಮೆಗಳ ಕೊಂಡಾಡಿ
ಕೃತ ಕೃತ್ಯಳೆಂದೆನಿಸೊ । ಕ್ಷಿತಿ ರಮಣ ಸೇವಾ ೧

ಸಾಧನಕೆ ಸಹಕಾರಿ । ಸಾಧು ಜನ ಸತ್ಸಂಗ
ನೀ ದಯದಿ ಒದಗಿಸುತ । ಕಾಪಾಡೊ ಹರಿಯೇ ।
ಮೋದ ತೀರ್ಥರ ಮತವ । ಭೋಧಿಸುತ ಇವಳಿಗೆ
ಮೋದ ಪಾಲಿಸಿ ಹರಿಯೆ ಉದ್ಧಾರ ಮಾಡೋ ೨

ಮಾತೃದತ್ತವು ಎನ್ನೆ । ವೆಂಕಟೇಶನ ಪೂಜೆ
ಸಾರ್ಥಕೆನಿಪುದು ಹರಿಯೆ । ಪಾರ್ಥ ಸಾರಥಿಯೇ
ಕಾರ್ತಸ್ವರ ಮೊದಲಾದ । ಅರ್ಥಗಳ ಯೋಚಿಸಳು
ವಾರ್ತೆ ಎನ್ನನು ಭವವು ಆರ್ತರುದ್ಧರಣಾ ೩

ತಂದೆ ಮುದ್ದು ಮೋಹನ್ನ । ಗುರುವನುಗ್ರಹವಿಹುದು
ಇಂದು ನಿಮ್ಮದಿ ನಮಿಸಿ । ಅಂಕಿತದ ಪದವಾ
ಛಂದದಲ್ಯುದ್ಧರಿಸಿ । ಉಪದೇಶಿಸುತ್ತಿಹೆನು
ಮಂದನುದ್ಧಟ ತನವ । ತಂದೆ ಮನ್ನಿಪುದೋ ೪

ಇಂದು ಮುಖಿ ಹೃದಯದಾ । ಅಂಬರದಿ ಪ್ರಕಾಶಿಸೆನೆ
ನಂದ ತೀರ್ಥಸುವಂದ್ಯ । ಪ್ರಾರ್ಥಿಸುವೆ ನಿನಗೇ
ತಂದೆ ಮುದ್ದು ಮೋಹನ್ನ । ವಿಠ್ಠಲನೆ ಗುರು ಗೋ–
ವಿಂದ ವಿಠ್ಠಲ ಎನ್ನ । ಭಿನ್ನಪವ ಸಲಿಸೋ ೫

೫೭೬

ಪವಮಾನವಿಠಲ । ಕಾಪಾಡೊ ಇವನಾ ಪ

ಭುವಿ ಭವ್ಯ ಮರುತಮತ । ದೀಕ್ಷೆಯುಳ್ಳವನಾ ಅ.ಪ.

ಭಾವಿಮಾರುತರ ದಿವ್ಯ । ಪಾದಗಳನಾಶ್ರಯಿಸಿ
ದೇವ ಗುಹ್ಯವು ಎಂಬ । ಆಖ್ಯಾನ ಪಠಿಸೀ
ಭಾವಭಕ್ತಿಯಲಿಂದ । ಪೂರಿತನು ತಾನಾಗಿ
ಧಾವಿಸಿ ಬಂದಿಹನೊ । ಎನ್ನ ಬಳಿಗಾಗಿ ೧

ಗುರುವನುಗ್ರಹ ಪಡೆದು । ಗುರುದತ್ತ ಅಂಕಿತವ
ನೆರವಿನಾ ಸಾಧನವ । ವಿರಚಿಸಲು ಮಾರ್ಗ
ಅರಿಯದಲೆ ಪ್ರಾರ್ಥಿಸುವ । ಕರುಣಪಯೋನಿಧಿಯೇ
ಪೊರೆಯ ಬೇಕಿವನ ಪರಿಯ । ಮರುತಾಂತರಾತ್ಮ ೨

ತರತಮಜ್ಞಾನವನು । ಹರಿಗುರು ಸದ್ಭಕ್ತಿ
ಪರಿಪರಿಯಲಿಂ ವೃದ್ಧಿ । ಗೈಸಿವಗೆ ಹರಿಯೇ
ಗುರು ಕರುಣ ಕವಚದಿಂ । ಹರಿಯ ಸರ್ವೋತ್ತಮತೆ
ಅರಿವಾಗಲಿವಗೆಂದು । ಪ್ರಾರ್ಥಿಸುವೆ ಹರಿಯೆ ೩

ಸತಿಸುತರು ಹಿತರಲ್ಲಿ । ವ್ಯಾಪ್ತ ಶ್ರೀ ಹರಿಯೆಂಬ
ಮತಿಯನೆ ಕರುಣಿಸುತ । ಕಾಪಾಡೊ ಹರಿಯೇ
ಸತತ ತವ ಸ್ಮೃತಿಯಿತ್ತ । ಭವದಿಂದ ಕಡೆಸೆತ್ತು
ವಿತತ ಮಲಗಳ ಮೂರ್ತಿ । ಕೃತಿರಮಣ ದೇವ ೪

ಮಧ್ವ ರಮಣನೆ ದೇವ । ಹೃದ್ಯ ಹರಿ ನಿನಕಾಂಬ
ಹೃದ್ಯ ಸಾಧನ ಗೈಸಿ । ಉದ್ಧರಿಸೊ ಇದನಾ
ಶುದ್ಧ ಮೂರುತಿ ಗುರು । ಗೋವಿಂದ ವಿಠಲನೆ
ಬುದ್ಧಿಯಲಿ ನೀನಿಂತು । ಶುದ್ಧ ಮತಿ ಈಯೋ ೫

೫೭೭

ಪವಮಾನವರದ ವಿಠಲ । ಇವನ ನೀಸಲಹೋ ಪ

ಭವದೊಳಗೆ ಸಂತಪ್ತ । ತವಪಾದ ಶರಣನ ಅ.ಪ.

ರಾಶಿಪುಣ್ಯವು ಫಲಿಸೆ । ದಾಸದೀಕ್ಷೆಗೆ ಒಲಿದು
ಆಶಿಸಲು ತೈಜಸನು । ಭಾಸುರಾಂಕಿತಕೇ
ಸೂಸಿ ತನ್ನನುಗ್ರಹದ । ಭಾಷೆ ಅಸ್ತ್ವೆಂದೆನುತ
ಲೇಸಾಗಿ ಪೇಳಲುಪ । ದೇಶಿಸಿಹೆ ಹರಿಯೇ ೧

ವಿಜ್ಞಾನ ತತ್ವಾಭಿಗ । ಭಿಮಾನಿ ಒಲಿದಿಹ ನಿನಗೇ
ಸುಜ್ಞಾನ ಕರುಣಿಸುತ ಕಾಪಾಡೊ ಹರಿಯೇ
ಮಗ್ನಗೈಸಿವನಹರಿ । ಪ್ರಾಜ್ಞನ್ನ ಪದದಲ್ಲಿ
ಭಗ್ನವಾಗಲಿ ಕರ್ಮ । ಸಂಚಿತಾದಿಗಳು ೨

ತತ್ವರೊಲಿಮೆಯ ಕೊಡಿಸು । ತತ್ವಾರ್ಥಸ್ಫುರಿಸಿವಗೆ
ಮೃತ್ಯುವೆನೆ ಗೆಲುವಂಥ । ಪಥವನ್ನೆ ತೋರಿ
ಕರ್ತತಾನಲ್ಲೆಂಬ । ಉತ್ಕೃಷ್ಟ ಮತಿಯಿತ್ತು
ಎತ್ತು ಭವದಿಂ ಹರಿಯೇ । ಉತ್ತಮೋತ್ತಮನೆ ೩

ಸರ್ವತ್ರ ಸರ್ವದಾ । ಶರ್ವನೊಡೆಯನೆದೇವ
ಸರ್ವಮಂಗಳ ನಿನ್ನ । ನಾಮಸುಧೆಯನ್ನು
ದರ್ವಿಜೀವಿಗೆ ಉಣಿಸಿ । ಭವಕಡಲ ಪ್ಲವನೆನಿಸೊ
ಸರ್ವಾಂತರಾತ್ಮಕನೆ । ಉದ್ದರಿಸೊ ಇವನಾ ೪

ಜೀವ ಅಸ್ವಾತಂತ್ರ । ದೇವ ನಿಜಸ್ವಾತಂತ್ರ
ಜೀವ ಜಡರುಗಳೆಲ್ಲ । ದೇವರಾಧಿನಾ
ಈ ವಿಧದ ಸುಜ್ಞಾನ । ಆವಾಗಲೂ ಕೊಟ್ಟು
ದೇವಗುರು ಗೋವಿಂದ । ವಿಠಲ ಪೊರೆ ಇವನಾ ೫

೫೭೮

ಪ್ರಭು ಪಾಂಡುರಂಗ ವಿಠಲ । ಅಭಯಪ್ರದಾತಾ ಪ

ಇಭವರದ ನೀನಾಗಿ । ಪೊರೆಯ ಬೇಕಿವನಾ ಅ.ಪ.

ಮರ್ಮಗಳ ನರಿಯದಲೆ । ಕರ್ಮಾನುಭವದೊಳಗೆ
ಪೇರ್ಮೆಯಲಿ ಸಿಲ್ಕಿ ಬಲು । ನೊಂದಿಹನೊ ಬಹಳಾ
ಧರ್ಮಕೃದ್ಧರ್ಮಿ ಹರಿ । ಧರ್ಮಸೂಕ್ಷ್ಮವ ತಿಳಿಸಿ
ನಿರ್ಮಮನ ಮಾಡಿವನ । ಕರ್ಮನಾಮಕನೇ ೧

ಮಧ್ವರಾಯರ ಕರುಣ । ಬದ್ಧ ನಿರುವನು ಈತ
ಸಿದ್ದಾಂತ ತತ್ವಗಳು । ಬುದ್ದಿಗೇ ನಿಲುಕೀ
ಅದ್ವಯನು ನೀನೆಂಬ । ಶುದ್ಧಬುದ್ಧಿಯನಿತ್ತು
ಉದ್ಧಾರಮಾಡೊ ಹರಿ । ಕೃದ್ಧಖಳಹಾರೀ ೨

ನಾನು ನನ್ನದು ಎಂಬ । ಹೀನಮತಿಯನು ಕಳೆದು
ನೀನು ನೀನೇ ಎಂಬ । ಸುಜ್ಞಾನವಿತ್ತು
ದಾನವಾರಣ್ಯ ಕೃ । ಶಾನು ಶ್ರೀ ಹರಿಯೇ
ಸಾನುರಾಗದಿ ಪೊರೆಯೊ । ದೀನವತ್ಸಲ್ಲಾ ೩

ಹರಿ ನಾಮ ವೆಂತೆಂಬೊ । ವಜ್ರಕವಚವತೊಡಿಸಿ
ದುರಿತಾಳಿ ಅಟ್ಟುಳಿಯ । ದೂರಗೈ ಹರಿಯೇ
ಸರುವ ಕಾರ್ಯಗಳಲ್ಲಿ । ಹರಿಯು ಓತಪ್ರೋತ
ನಿರುವ ನೆಂಬುದ ತಿಳಿಸಿ । ಪೊರೆಯ ಬೇಕಿವನಾ ೪

ಪಾದನಾತ್ಮಕನೆನಸಿ । ಪಾವ ಮಾನಿಯ ಪ್ರೀಯ
ಧೀವರನೆ ತ್ರೀವರನೆ । ಕಾವ ಕರುಣಾಳು
ಗೋವುಗಳ ಕಾವ ಗುರು । ಗೋವಿಂದ ವಿಠಲನೆ
ನೀವೊಲಿಯದಿನ್ನಿಲ್ಲ । ದೇವ ದೇವೇಶಾ ೫

೫೭೯

ಪ್ರವಹ ಸನ್ನುತ ವಿಠಲ । ಇವನ ಪೊರೆಯೋ ಪ

ಅವಿಕಾರಿ ಆದ್ಯ ನಿರ । ವದ್ಯ ಎಲೊ ಹರಿಯೆ ಅ.ಪ.

ತೈಜಸನೆ ನೀನಾಗಿ । ಮಾಜದಲ್ಯುಪದೇಶ
ಯೋಜಿಸುವೆನೆಂದೆನುತ । ಪೇಳ್ವುದಕ್ಕಾಗೀ
ಆರ್ಜವದ ಮನದಲ್ಲಿ । ಪ್ರಾರ್ಥಿಸಲು ಸ್ವಪ್ನದಲಿ
ಯೋಜಿಸಿಹೆ ಅಂಕಿತವ । ಹೇ ನೈಜಮೂರ್ತೇ ೧

ಚೆಣ್ಣನಿರುವನು ಇವನು । ಕಣ್ಣೆಗೆವೆಯಂದದಲಿ
ಇನ್ನೀವನ ಕಾಯುವುದು । ಬನ್ನಬಡಿಸದಲೇ
ಅನ್ನ ಆರೋಗ್ಯಕ್ಕೆ । ನಿನ್ನನೆ ಮೊರೆಯಿಡಲಿ
ಅನ್ಯ ಹಂಬಲ ನೀಗೊ । ಪನ್ನಂಗ ಶಯನಾ ೨

ಎಡರು ತೊಡರು ಬರಲಿ । ಬಿಡದೆ ನಿನ್ನಂಘ್ರಿಯನು
ಧೃಡಭಕ್ತಿಯಿಂ ಸ್ಮರಿಪ । ಮುದ ಮನವ ನೀಯೋ ।
ಎಡಬಲದಿ ನೀನಾಗಿ । ಬಿಡದೆ ಬೆಂಬಲ ವಿರಲು
ಕಡು ಭವಾರ್ಣವವೆಲ್ಲ । ಅಡಿಯ ಪರಿಮಿತಿಯೋ ೩

ಮರುತ ಮತ ತತ್ವಗಳ । ಸರಳ ಭಾವದಿ ತಿಳಿಸಿ
ಹರಿಯೇ ಸರ್ವೋತ್ತಮನು । ಸಿರಿ ವಾಯು ಮೊದಲಾದ
ಸುರರೆಲ್ಲ ಹರಿಯ ಕಿಂಕರರೆಂಬ ಮತಿಯಿತ್ತು
ಪೊರೆವುದಿವನನ ಎಂದು । ಹರಿಯೆ ಭಿನ್ನವಿಪೆ ೪

ನಾಮ ಸ್ಮರಣೆ ಯೆಂಬ । ವಜ್ರಕವಚವ ತೊಡಿಸಿ
ಈ ಮಹಾ ಕಲಿಯುಗದಿ । ಸಾಧನವ ಗೈಸೋ
ಶ್ರೀ ಮನೋಹರ ಗುರು । ಗೋವಿಂದ ವಿಠಲಯ್ಯ
ಈ ಮಹತ್ತುಪಕಾರ । ನಾ ಮರೆಯನಯ್ಯ ೫

೫೮೦

ಪ್ರದ್ಯುಮ್ನ ವಿಠಲ ನೀನಿವಳ ಸಲಹಬೇಕೋ ಪ

ವಿದ್ಯಾಯು ಸಂಪತ್ತು । ಭಕ್ತ್ಯಾದಿಗಳನಿತ್ತು
ಉದ್ಧರಿಸ ಬೇಕಿವಳ । ಮಧ್ವಾಂತರಾತ್ಮಾ ಅ.ಪ.

ಹರಿದಾಸ್ಯ ಕಾಂಕ್ಷಿತಳು । ಹಿರಿದಾಗಿ ಬೇಡಿಹಳು
ವರತೈಜ ಸಾಖ್ಯಹರಿ । ವರದ ನಾಗಿರುವೇ
ಕರುಣನಿಧಿ ತವನಾಮ । ಸ್ಮರಿಪ ಸನ್ಮಾರ್ಗವನು
ಅರುಹಿ ಮಹ ಭವನಿಧಿಯ । ತರಣ ತಿಳಿಸಿರುವೇ ೧

ಸಂಸಾರ ತಾರಕವು । ಕಂಸಾರಿ ತವಪಾದ
ಪಾಂಸುವನೆ ಶಿರದಿ ಅ । ಸಂಶಯದಿ ಧರಿಸೀ

ಮಾಂಸಧಾತುಕ ಸಪ್ತ । ಹೇಸಿಕೆಯ ದೇಹವು – ವಿ
ಪಾಂಸಗನಿಗಧಿಷ್ಠಾನ । ವೆಂಬುದನೆ ತಿಳಿಸೋ ೨

ಪಂಚಬೇದಾತ್ಮಕ ಪ್ರ । ಪಂಚವು ಸದಾ ಸತ್ಯ
ಅಂಚೆವಹ ಸುರರಾದಿ । ತರತಮ್ಯದಾ
ಸಂಚಿಂತನೆಯ ಕೊಟ್ಟು । ವಾಂಛಿತಾರ್ಥದ ಹರಿಯೆ
ಮಿಂಚಿನಂದದಿ ಪೊಳೆಯೊ । ಹೃತ್ಪಂಕಜದ ನಡುವೆ ೩

ಮತೆ ಈ ಯುಗದಲ್ಲಿ । ಕೃತ್ಯ ವ್ರತನೇಮಾದಿ
ಸತ್ವ ರಹಿತವು ಆಗಿ । ನಿತ್ಯಫಲರಹಿತಾ
ಎತ್ತ ನೋಡಿದ ರತ್ತ । ಕತ್ತಲೆಯು ಕವಿದಿಹುದು
ಹತ್ತಿರವೆ ಇರುವಂಥ । ಭಕ್ತವತ್ಸಲ ಸಲಹೋ ೪

ದಾವಾಗ್ನಿ ಕುಡಿದವನೆ । ಪಾವಿನಾಮದ ಹರನೆ
ಗೋವುಗಳೊಳುದ್ಗೀಥ । ದೇವಾದಿದೇವಾ
ಕಾವುದಿವಳನು ಎಂಬ । ಭಾವ ಬಿನ್ನಪ ಸಲಿಸೊ
ಮಾವಿನೋದಿಯೆ ಗುರು । ಗೋವಿಂದ ವಿಠಲಾ ೫

೫೮೧

ಪ್ರಕಾಶರೂಪಿ ವಿಠಲಾ ತೋಕನ್ನ ಸಲಹೋ ಪ

ಅಕಳಂಕ ಚಾರಿತ್ರ । ನಿಖಿಲಾಗಮಸುವೇದ್ಯ
ಪ್ರಕಟಿಸಿವನಲಿ ಜ್ಞಾನದಂಕುರವ ಹರಿಯೇ ಅ.ಪ.

ಮಧ್ವಮತದಲಿ ದೀಕ್ಷೆ । ಶುದ್ಧ ಭಕುತಿ ಜ್ಞಾನ
ಸಿದ್ಧಿಸುವುದಿವನಲ್ಲಿ । ಮಧ್ವಾಂತರಾತ್ಮಾ
ವಿದ್ಯೆಸಂಪದದಲ್ಲಿ । ಸ್ಪರ್ಧಿಸುವ ಮನಕಾಗಿ
ಬುದ್ಧಿ ಪ್ರೇರಿಸು ಹರಿಯೆ ಸಿದ್ಧಮುನಿವಂದ್ಯಾ ೧

ಕಾಮಾದಿ ಷಡ್ವೈರಿ । ಸ್ತೋಮವನೆ ಕಳೆಯುತ್ತ
ನೇಮನಿಷ್ಠೆಯಲಿ ಮನ । ಕಾಮನೆಯ ಕೊಟ್ಟೊ
ಪ್ರೇಮದಲಿ ಹರಿಗುರೂ । ಸ್ವಾಮಿ ಕಾರ್ಯವಗೈಸಿ
ಕಾಮಿತಾರ್ಥದನಾಗೊ । ಕಾಮ ಪಿತ ಹರಿಯೇ ೨

ಅಂಶದಲಿ ತನುವ್ಯಾಪ್ತಿ । ಸಾಂಶದೇವಾದಿಗಳು
ಸಂಸಾರ ನಿರ್ವಹಣೆ ಮಾಡಿಮಾಡಿಸುತಾ
ಕಂಸಾರಿ ಪೂಜೆ ಎನೆ । ಶಂಸಿಸುತ ಯೋಗ್ಯರಲಿ
ವಂಶ ಉದ್ಧರವೆಂಬ । ಅಂಶವನೆ ತಿಳಿಸೋ ೩

ಕಾಕು ಜನಗಳ ಸಂಗ । ಓಕರಿಸುವಂತೆಸಗಿ
ನೀಕೊಟ್ಟು ಸತ್ಸಂಗ । ಪ್ರಾಕ್ಕರ್ಮ ಕಳೆಯೋ
ಲೌಕಿಕದಿ ಸತ್ಕೀರ್ತಿ । ನೀ ಕರುಣಿಸಿವನಲ್ಲಿ
ಏಕಮೇವನೆ ಇದನೆ । ನಾ ಕೇಳ್ವೆ ಹರಿಯೇ ೪

ಜೀವರಂತರ್ಯಾಮಿ । ಜೀವಕರ್ಮವವೆಸಗಿ
ಆವಫಲ ದ್ವಂದ್ವಗಳ । ಜೀವಕರುಣಿಸುವನೇ
ಭಾವುಕರ ಪಾಲಗುರು । ಗೋವಿಂದ ವಿಠ್ಠಲನೆ
ಕಾವುದಿವನನು ಎಂಬ । ಭಿನ್ನಪವ ಸಲಿಸೋ ೫

೫೮೨

ಪ್ರಹ್ಲಾದ ವರದ ವಿಠಲ । ಕಾಪಾಡೊ ಇವಳಾ ಪ

ಆಹ್ಲಾದವನೆ ಕೊಟ್ಟು । ಸಂತೈಸೊ ಹರಿಯೇ ಅ.ಪ.

ಸಾಧನ ಸುಜೀವಿಗಳು । ಭೋದನೆಗೆ ಮೊರೆಇಡಲು
ಆದರಿಸ ಬೇಕವರ । ಸಾಧು ಜನ ಬಂಧೋ
ಸಾಧು ಈ ಕನ್ಯೆ ಮಣಿ । ಉಪದೇಶ ಬೇಡುವಳೋ
ಬೋಧಿಸಿಹೆ ಅಂಕಿತವ । ಶೀದ ಪೊರೆ ಇವಳಾ ೧

ಕಾಮ ಮದ ಮಾತ್ಸರ್ಯ । ಸ್ತೋಮವನೆ ಕಳೆದುಸತ್
ಕಾಮಗಳ ಪೂರೈಸು । ಸೋಮಧರವಂದ್ಯಾ ।
ಕಾಮ ಜನಕನೆ ತಾರ । ತಮ್ಯವನೆ ತಿಳಿಸುತ್ತ
ನೇಮದಿಂ ಭೇದಗಳ ಪ್ರೇಮದಲಿ ತಿಳಿಸೋ ೨

ಭಕ್ತ ಭಕ್ತರ ಅಸದ್ । ಭಕ್ತಿ ಮಾಡಲಿ ಇವಳು
ಮುಕ್ತಿ ಮಾರ್ಗದ ಹಾದಿ । ಯುಕ್ತಿಯಲಿ ಅರಿತೂ
ಗೋಪ ಗುರು ಗೋವಿಂದ । ವಿಠ್ಠಲನ ಕೀರ್ತಿಸುತೆ
ಉತ್ತರಿಸಲೀ ಭವವ । ಉತ್ತಮೋತ್ತಮನೇ ೩

೫೮೩

ಪಾಂಡು ರಂಗ ವಿಠಲ । ಪೊರೆಯ ಬೇಕಿವಳ ಪ

ಕುಂಡಲಿಯ ಶಯ್ಯ ಬ್ರ । ಹ್ಮಾಂಡದೊಡಿಯಾ ಅ.ಪ.

ಹಸುಳೆ ತನ ಸ್ವಾಪದಲಿ । ಎಸೆವ ನಂಜುಡೇಶ
ದರ್ಶನಾಕಾಂಕ್ಷಿಸುತ । ನುಸುಳಿ ಗುಡಿ ಪೊಗಲೂ
ಅಸಮ ಗುರು ಸುಧೀಂದ್ರ । ಶಿಷ್ಯರನು ತಾ ತೋರಿ
ಎಸೆವ ಸದ್ಗತಿಗೆ ಗುರು । ದರ್ಶನವೆ ಪಥವೆಂದೇ ೧

ಲೀಲೆಯೊಳ್ ತೈಜಸನು । ಮಾಲೆಧರ ದಂಪತಿಯ
ಶೀಲ ರೂಪವ ತಾಳಿ । ಬಾಲಕಿಯ ಬಯ್ದೂ ।
ಏಳಲನ ಮಾಡದಲೆ । ಶೀಲ ಗುರು ಬಳಿ ಪೋಗಿ
ಬಾಲಕಿಯು ಪರಮಾನ್ನ । ಮೆಲುವಂತೆ ಮಾಡ್ದಾ ೨

ಗುರು ಹಿರಿಯರಾ ಸೇವೆ । ಹರಿಯಲ್ಲಿ ಸದ್ಭಕುತಿ
ವರಜ್ಞಾನ ಪಾಲಿಸುತ । ಮೆರೆಸೊ ಈ ಶಿಶುವ
ವರ ಪ್ರದಯಕನಾಗಿ । ಸರುವ ಸದ್ಧಭಿಲಾಷೆ
ಗರೆನು ಹರ್ಷವನೀಯೋ । ಮರುತಾಂತರಾತ್ಮಾ ೩

ಕಲಿಹೆಚ್ಚದಾ ಯುಗವು । ಸತಿಮಂತ್ರ ತಂತ್ರಗಳು
ಫಲಿಸಲಾರವು ಹರಿಯೆ । ಜಲಜನಾಭಾ
ಚೆಲುವ ತವನಾಮ ಸ್ಮೃತಿ । ಘಳಿಗೆ ಬಿಡದಲೆ ಕೊಟ್ಟು
ಒಲಿಯೊ ಕಾರುಣ್ಯನಿಧಿ । ಬಾಲ ಗೋಪಾಲ ೪

ಪಾವನದ ಅಂಕಿತವ । ಓದಿ ಸೂಚಿಸಿದಂತೆ
ತಾವಕಳಿಗಿತ್ತಿಹೆನು । ಶ್ರೀ ವರನೆ ಹರಿಯೇ ।
ದೇವ ದೇವೇಶಗುರು । ಗೋವಿಂದ ವಿಠ್ಠಲನೆ
ನೀ ವೊಲಿದು ದಾಸತ್ವ । ಭಾವ ಸಿದ್ಧಿಪುದೋ ೫

೫೮೪

ಪಾಂಡುರಂಗ ಹರಿ ವಿಠಲ । ಕಾಪಾಡೊ ಇವನಾ ಪ

ತೊಂಡ ವತ್ಸಲ ನೆಂಬ । ಬಿರಿದುಳ್ಳೊ ದೇವಾ ಅ.ಪ.

ದಾಸವತ್ಸರ ಕರುಣ । ಲೇಸಾಗಿ ಪಡೆದಿಹಗೆ
ಆಸುಪ್ತಿಪತಿ ಸೂಚ್ಯ । ಮೀಸಲುಪದೇಶ
ದಾಸದೀಕ್ಷಾರೂಪ । ಆಶೆಯುಳ್ಳವಗಿತ್ತು
ಆಶಿಷವನಿತ್ತಿಹೆನೊ । ಹೃಷೀ ಕಪನ ಮೂರ್ತೇ ೧

ಸಾಧನ ಸುಮಾರ್ಗದಲಿ । ಹಾದಿ ಹಿಡಿದಿಹ ನಿವಗೆ
ಮೋದ ತೀರ್ಥರ ಶಾಸ್ತ್ರ । ಬೋದ ಕೈ ಗೂಡೀ
ವೇದೈಕಗಮ್ಯ ಹರಿ । ಪಾದ ಮಹಿಮಾನುಭವ
ಸಾಧಿಸೊ ಇವನಲ್ಲಿ । ಶ್ರೀ ದ ಶ್ರೀ ಹರಿಯೇ ೨

ಊರ್ಮಿ ಷಟ್ಕಳವಕಳೆಯೆ । ಕರ್ಮನಿಷ್ಕಾಮಕದಿ
ಪೇರ್ಮೆಯಲ್ಲಾ ಚರಿಪ । ಸನ್ಮನವ ನೀಯೋ
ನಿರ್ಮಲಾತ್ಮನೆ ದೇವ । ಹರ್ಮ್ಯ ಗಹ್ವರದಲ್ಲಿ
ಪರ್ಮ ನಿನ್ನಯರೂಪ । ತೋರಿಸೋ ಹರಿಯೇ ೩

ಬಿಂಬಾನು ಸಂಧಾನ । ತುಂಬಿಸುತ ಸೋತ್ತಮರ
ಬಿಂಬೈಕ್ಯ ಚಿಂತನದ । ಹಂಬಲವ ನೀಯೋ
ಕಂಬು ಚಂಕ್ರಾಂಕಿತನೆ । ಅಂಬರೀಷನವರದ
ನಂಬಿ ಬಂದಿಹನ ಭವ । ಅಂಬುಧಿಯ ಕಳೆಯೋ ೪

ಕೈವಲ್ಯಪ್ರದ ಹರಿಯೆ । ಭಾವುಕರ ಪರಿಪಾಲ
ನೋವಿಲ್ಲದಾ ಸ್ಥಳಕೆ । ಬಯ್ವುದೋ ಇದನಾ
ಈ ವಿಧದ ಭಿನ್ನಪವ । ಸಲಿಸೆಂದು ಪ್ರಾರ್ಥಿಸುವೆ
ಧೀವರನೆ ಹರಿಯೆ ಗುರು । ಗೋವಿಂದ ವಿಠಲಾ ೫

೫೮೫

ಪುಂಡರೀಕ ವರದ ವಿಠಲ । ಪೊರೆಯಿವನಾ ಪ

ತೊಂಡ ವತ್ಸಲನೆ ಬ್ರಂ । ಹ್ಮಾಂಡಗಳ ಒಡೆಯಾ ಅ.ಪ.

ಅನುವಂಶಿಕವಾಗಿ । ಆಧ್ಯಾತ್ಮ ಪರಿನಿಷ್ಠ
ಧಾನವಾಂತಕ ಕೃಷ್ಣ । ಧೀನವತ್ಸಲನೇ ।
ನೀನೇಗತಿ ಎಂದೆಂಬ । ಸ್ವಾನುಭಾವದಿಇವಗೆ
ಮಾನನಿಧಿ ತವದಾಸ್ಯ । ಧಾನಮಾಡುವುದೋ ೧

ಪವನವಂದಿತದೇವ । ಕವನಶಕ್ತಿಯು ಇವಗೆ
ದಿವಸದಿವಸಕ್ಕೆ ವೃದ್ಧಿ । ಭಾವವನೆ ಪೊಂದೀ ।
ಧೃವವರದ ನಿನ್ನಂಘ್ರಿ । ಸ್ತವನಮಾಳ್ವಂತೆಸಗಿ
ಭವವನಿಧಿ ಉತ್ತರಿಸೊ । ಶರ್ವದೇವೇಡ್ಯಾ ೨

ಮಧ್ವಮತ ದೀಕ್ಷೆಯಲಿ । ಶ್ರದ್ಧಾಳು ಎಂದೆನಿಸಿ
ಸಿದ್ದಾಂತ ಪದ್ಧತಿಯ । ಶುದ್ಧಮತಿಯಿತ್ತೂ
ಅದ್ವೈತತ್ರಯ ತಿಳಿಸಿ । ಉದ್ದಾರ ಗೈಯುವುದೂ
ಕೃದ್ಧಕಶ ಸಂಹಾರಿ । ಮಧ್ವವಲ್ಲಭನೇ ೩

ಕರ್ಮ ಅಕರ್ಮಗಳ । ಮರ್ಮಗಳ ತಿಳಿಸುತ್ತ
ನಿರ್ಮಲನು ಎಂದೆನಿಸೊ । ಪೇರ್ಮೆಯಲಿ ಇವನಾ ।
ಭರ್ಮಗರ್ಭನನಯ್ಯ । ನಿರ್ಮಮತೆ ವೃದ್ಧಿಸುತ
ಪ್ರಮ್ಮೆಯಂಗಳ ತಿಳಿಸಿ । ಹರ್ಮ್ಯದೊಳು ತೋರೀ ೪

ಭಾವಜ್ಞ ತೈಜಸನೆ । ನೀವೊಲಿದು ಪೇಳ್ದಂತೆ
ಭಾವುಕಗೆ ಇತ್ತಿಪೆನೊ । ಈ ವಿಧಾಂಕಿತವಾ ।
ನೀವೊಲಿಯದಿನ್ನಿಲ್ಲ । ದೇವದೇವೋತ್ತಮನೆ
ಕಾವಕರುಣೆಯೆಗುರು । ಗೋವಿಂದ ವಿಠಲಾ ೫

೫೮೬

ಪುಂಡರೀಕ ವರದ ಹರಿ । ವಿಠಲ ಪೊರೆ ಇವಳಾ ಪ

ತೊಂಡ ವತ್ಸಲ ದೇವ । ಕಾರುಣ್ಯ ಸಿಂಧೋ ಅ.ಪ.

ಸತ್ಯಸೂ ಸ್ವಪ್ನದಲಿ । ಪೊತ್ತು ಗುರು ಕರುಣವನು
ಉತ್ಸಾಹದಲಿ ನಿನ್ನ । ಕೀರ್ತಿಸುವ ಭಾವಾ
ಮತ್ತೆ ತೈಜಸನಿಂದ । ಮೂರ್ತಿ ಸಂದರ್ಶನವ
ಪೊತ್ತುದಕೆ ನಾನೀಗ । ಇತ್ತೆ ಉಪದೇಶಾ ೧

ಚಿತ್ತದಲಿ ನೀನು ಸೂ । ವ್ಯಾಪ್ತನಾಗಿದ್ದವಳ
ಭಕ್ತಿ ಜ್ಞಾನೆರಡರಾ । ವೃತ್ತಿ ವೃದ್ಧಿಸಲೀ
ಆಪ್ತ ನಿನಗಿಂದನ್ಯ । ಮತ್ತೊಬ್ಬರಿಲ್ಲ ಹರಿ
ಕೃತ್ತಿ ವಾಸನ ತಾಪ । ಎತ್ತಿವಳ ಸಲಹೋ ೨

ಪರತಮಾತ್ಮಕ ಜ್ಞಾನ । ಎರಡು ಮೂರ್ಭೇದಗಳ
ಅರಿವಾಗುತಿವಳೀಗೆ । ಸಾಧನವ ಗೈಸೋ
ಹಿರಿಯರಾಶೀರ್ವಾದ । ನೆರವಾಗಿ ಇವಳ ಭವ
ಶರಧಿಯನೆ ಬತ್ತಿಸೈ । ಸುರಸಾರ್ವಭೌಮಾ ೩

ಬೇಕಾದ ವರಗಳನು । ನೀ ಕರುಣಿಸಿವಳೀಗೆ
ಸಾಕುವಾಭಾರ ನಿನ್ನದು । ಶ್ರೀ ಕರಾರ್ಚಿತನೇ
ಶೋಕ ಸುಖ ವೆರಡಕ್ಕು । ನೀಕಾರಣೆಂಬಂಥ
ವಾಕನನುಭವ ವಿರಲಿ । ಶ್ರೀ ಕಾಂತ ಹರಿಯೇ ೪

ಪೂವಿಲ್ಲ ಪಿತ ನಿನ್ನ । ಭಾವದಲಿ ಮೈ ಮರೆದು
ಸಾವಧಾನದಿ ಹರಿ ಪೊಗಳಿ । ಹಿಗ್ಗುವಂತೆಸಗೋ
ಪಾವನಾತ್ಮಕ ಗುರೂ । ಗೋವಿಂದ ವಿಠ್ಠಲನೆ
ನೀವೊಲಿದು ಪ್ರಾರ್ಥನೆಯ । ಓದಿ ಸಲಿಸುವುದೋ ೫

೫೮೭

ಪ್ರಾಣ ಪತಿ ಗೋಪಾಲ । ವಿಠಲ ಕಾರುಣಿಕಾ ಪ

ನೀನಾಗಿ ಒಲಿದಿವನ । ಪೊರೆಯೆ ಪ್ರಾರ್ಥಿಸುವೇ ಅ.ಪ.

ಉತ್ತಮ ಸುಸಂಸ್ಕೃತಿಯ । ಪೊತ್ತು ಜನಿಸುತ ಸರ್ವ
ಕರ್ತೃ ನಿನ್ನಯ ಸೇವೆ । ಅರ್ಥಿಯಂ ಗೈವೆ ।
ಅರ್ಥಿಸುವ ನಿನ್ನ ದಾಸತ್ವ ದೀಕ್ಷೆಯನೂ
ಸುಪ್ರೀಶ ತೋರ್ದಪರಿ । ಇತ್ತಿಹೆನೊ ಅದಗೇ ೧

ಕರ್ಮನಾಮಕನೆ ದುಷ್ಕರ್ಮಗಳ ಪರಿಹರಿಸಿ
ನಿರ್ಮಲ ಸುಸಾಧನಕೆ । ಸನ್ಮಾರ್ಗ ತೋರೋ ।
ಮನ್ಮಥನ ಜನಕ ತವ । ನಾಮಸ್ಮರಣೆಯ ಕವಚ
ಪೇರ್ಮೆಯಿ ತೊಡಿಸಿ ಸ । ದ್ಧರ್ಮರಥನೆನಿಸೋ ೨

ವೃದ್ಧ ಜನಗಳ ಸೇವೆ । ಬುದ್ಧಿಪೂರ್ವಕಗೈದು
ಮಧ್ವಮತ ಸಚ್ಛಾಸ್ತ್ರ । ತಿದ್ದಿ ಪೇಳುವಲೀ ।
ಶುದ್ಧಬುದ್ಧಿಯನಿತ್ತು । ಉದ್ಧರಿಸಬೇಕಿವನ
ಹದ್ದುವಾಹನದೇವ । ಮಧ್ವಾಂತರಾತ್ಮಾ ೩

ಅಧಿಭೂತ ಅಧ್ಯಾತ್ಮ । ಅದಿದೈವದೊಳು ನಿನ್ನ
ಅದುಭೂತ ವ್ಯಾಪ್ತಿಯನೆ । ವದಗಿಸಿ ಮನಕೇ ।
ಬುಧ ಜನೇಢ್ಯನೆ ದೇವ । ಸದಯದೀ ತರಳಂಗೆ
ಹೃದಯದಲಿ ಮೈದೋರಿ । ಮುದವನೇ ಬೀರೋ ೪

ದೀರವನು ಎಂದೆನಿಪ । ಪಾವಮಾನೀಯ ಪ್ರಿಯ
ಕೇವಲಾನಂದಮಯ । ಮಾವಿನೋಧೀ
ಸಾವಧಾನದಿ ತರಳ । ಭಾವುಕಗೆ ಒಲಿಯೆಂದು
ಓದಿ ಭಿನ್ನವಿಪೆ ಗುರು । ಗೋವಿಂದ ವಿಠಲ ೫

೫೮೮

ಪ್ರಾಣಪತಿ ಹರಿ ವಿಠಲ । ಪೊರೆಯ ಬೇಕಿವನಾ ಪ

ಕಾಣೆ ನೀನನ್ಯರನು । ಕ್ಷೋಣಿಯೊಳು ಹರಿಯೇ ಅ.ಪ.

ಕೈಶೋರವಯನಿವನು । ಆಶೆಗೈವನು ದೀಕ್ಷೆ
ದಾಸತ್ವದಲಿ ಮಾಳ್ಪ । ವಿಶ್ವಾಸಗಳನೂ ।
ಕೇಶವನೆ ತೈಜಸೀ । ವೇಷದಲಿ ಗುರುರೂಪ
ಲೇಸಾಗಿ ತೋರಿಸುತ । ಆಶಿಸುತ್ತಿಹನೊ ೧

ಗುರು ಹಿರಿಯರ ಸೇವೆ । ದೊರಕಿಸುತ ಇವನೀಗೆ
ಪರತಮಜ್ಞಾನಾದಿ । ವರಸು ಸಾಧನವಾ
ತರಳಂಗೆ ವದಗಿಸುತ । ಹರಿಯೆ ಉದ್ಧರಿಸಿವನ
ಕರುಣಾ ಪಯೋನಿಧಿಯೆ । ಮರುತಾಂತರಾತ್ಮಾ ೨

ಕಷ್ಟಗಳ ಪರಿಹರಿಸಿ । ಇಷ್ಟಗಳ ಸಲಿಸುತ್ತ
ಕೃಷ್ಣ ಮೂರುತಿ ಹರಿಯೆ । ಕಾಪಾಡೊ ಇವನಾ ।
ದುಷ್ಟ ಭಕುತನ ಗೈದು । ಶಿಷ್ಟೇಷ್ಟರಲಿ ಇಟ್ಟು
ಶ್ರೇಷ್ಠ ಸಾಧನಗೈಸೊ । ಜಿಷ್ಣು ಸಖ ದೇವಾ ೩

ಕಲಿಯುಗದಿ ಸಾಧನವು । ಸುಲಭವೆಂದೆನುತ
ಲಲಿತ ವಚನಗಳಿಹವು । ಜಲಜಾಕ್ಷ ಹರಿಯೇ ।
ಕಲಿಮಲಾಪಹ ನಿನ್ನ । ಸ್ಮರಣೆಯನು ಒದಗಿಸುತ
ಬಾಲಕನ ಸಲಹೆಂದು । ಭಿನ್ನವಿಪೆ ಸತತಾ ೪

ನಿತ್ಯ ತವ ಲೀಲೆಗಳ । ಸ್ತುತಿಯನೇಗೈಸಿ
ಕೃತ್ಸನೆಂದೆನಿಸಿವನ । ಸತ್ಯಾತ್ಮ ಹರಿಯೇ ।
ಸ್ತುತ್ಯ ಗುರು ಗೋವಿಂದ । ವಿಠಲ ಕರುಣಾಳುವೇ
ಭೃತ್ಯನ್ನ ಪೊರೆಯೆಂದು । ಅರ್ಥಿಸುವೆ ನಿನಗೇ ೫

೫೮೯

ಪ್ರಾಣಪತಿ ಶ್ರೀನಿವಾಸ ವಿಠಲ ಪೊರೆ ಇವಳ ಪ

ಆನತೇಷ್ಟ ಪ್ರದನು । ನೀನೆಂದು ಬಿನ್ನವಿಪೆ
ಜ್ಞಾನ ಗಮ್ಯನೆ ದೇವ । ನೀನಾಗಿ ಪೊರೆಯೋ ಅ.ಪ.

ಮಾನ್ಯ ಮಾನದ ಹರಿಯೆ । ಕನ್ಯೆಗಭಯದನಾಗಿ
ಪುಣ್ಯ ಜೀವಿಯ ಸಲಹೆ । ಬಿನ್ನೈಪೆ ನಿನಗೇ ।
ನಿನ್ನೊರತು ಜಗದೊಳಗೆ । ಅನ್ಯರನು ಕಾಣೆ ಕಾ
ರುಣ್ಯ ನಿಧಿ ದಾನವಾ । ರಣ್ಯ ದಾವನಲಾ ೧

ಭಾವಿಭಾರತಿ ಪತಿಯ । ಸೇವೆಯನೆ ಕೊಂಬಹಯ
ಗ್ರೀವನೆ ನಿನ್ನ ಪದ । ತಾವರೆಯ ದಾಸ್ಯಾ ।
ಓದಿ ಬೇಡುತ್ತಿಹಳ । ತೀವರದಿ ಕೈ ಪಿಡಿಯೆ
ದೇವ ನಿನ್ನಡಿಗಾನು । ಧಾವಿಸುತ ಬೇಡ್ವೇ ೨

ಮಾರುತಾಂತರ್ಗತನೆ । ತಾರತಮ್ಯ ಜ್ಞಾನ
ಮೂರೆರಡು ಭೇದಗಳ । ದಾರಿಯನೆ ತೋರೀ ।
ಸಾರತಮ ನೀನು ನಿ । ಸ್ಸಾರ ಜಗವೆಂತೆಂಬ
ಚಾರುಮತಿಯನೆ ಇತ್ತು । ಪಾರು ಮಾಡಿವಳಾ ೩

ವಿಷಯಗಳ ಅನುಭವದಿ । ಎಸೆವ ನಿನ್ನಯ ಸ್ಮರಣೆ
ಹಸನಾಗಿ ನೀನಿತ್ತು । ಕೆಸರ ಕಳೆಯೋ ।
ಕುಶಲ ಕ್ಲೇಶಾದಿ ನಿ । ನ್ನೊಶವೆಂಬ ಧೃಡವಿರಲಿ
ಬಿಸಜಾಕ್ಷ ಶ್ರೀರಾಮ । ಪ್ರಸರಿಸೋ ಜ್ಞಾನ ೪

ದೇವ ದೇವೇಶ ಗುರು । ಸಾರ್ವಬೌಮರ ಪಾಲ
ಶ್ರೀವರನೆ ಸರ್ವಜ್ಞ। ದುರ್ವಿಬಾವ್ಯಾ ।
ನೀವೊಲಿಯುತಿವಳಿನ್ನು । ಸಾರ್ವ ಕಾಲದಿ ಪೊರೆಯೊ
ಗೋವಳರ ಪಾಲ ಗುರು । ಗೋವಿಂದ ವಿಠಲ ೫

೫೯೦

ಪ್ರಾಣಸನ್ನುತ ವಿಠಲ । ನೀನೆ ಪೊರೆ ಇವನಾ ಪ

ಮೌನಿಕುಲ ಸನ್ಮಾನ್ಯ । ದೀನ ಮಂದಾರಾ ಅ.ಪ.

ಯೋನಿ ಅನೇಕ ದೊಳು । ಜ್ಞಾನರಹಿತನಾಗಿ
ಮಾನುಷತ್ವದಿ ಬಂದು । ಜ್ಞಾನ ಬಯಸೀ
ಗಾನ ಲೋಲನ ದಾಸ್ಯ । ಕಾಂಕ್ಷಿಸುತ್ತಿರುವನಿಗೆ
ಶ್ರೀನಿವಾಸನೆ ನಿನ್ನ । ದಾಸ್ಯ ವಿತ್ತಿಹೆನೋ ೧

ಪಂಕೇರುಹಜನು ಮಿಾ । ನಾಂಕಷಿತನು ಸರ್ವ
ಸಂಖ್ಯೆರಹಿತಾ ದೇವಾ । ಸಂಕುಲಗಳೆಲ್ಲಾ
ಪಂಕಜಾಕ್ಷನು ಹರಿಸಿ । ಕಿಂಕರರು ತಾವಾಗಿ
ಅಂಕೆಯಲ್ಲಿಹರೆಂಬ । ತರತಮನ ತಿಳಿಸೋ ೨

ಸತ್ಯ ಜಗತೀನೊಳಗೆ । ನಿತ್ಯಹರಿ ಸುವ್ಯಾಪ್ತ
ಕರ್ತೃ ಕರ್ಮವು ಕರಣ । ತಾ ಸೇವೇ ಆಗೀ
ನಿತ್ಯರಿಗೆ ಕರ್ಮಗಳ । ತುತ್ತು ಮಾಡ್ಯಣಿಸುತ್ತಾ
ಭತೃವೆಂದೆನಿಸಿಹನೆ । ಉತ್ತಮೋತ್ತಮನೆ ೩

ಸಾಧನಸುಜೀವಿ ಇವೆ । ಬಾಧೆಗೊಳಗಾಗಿಹನು
ಮೋದತೀರ್ಥರಮತದಿ । ಸಾಧನೇಯ ಗೈಸೀ
ಮೋದಪ್ರದನೆಂದೆನಿಸೊ । ಸಾಮವಂದಿತ ಹರಿಯೆ
ಹೇದಯಾ ಪರಿಪೂರ್ಣ । ಆದಿ ಜಗಕರ್ತಾ ೪

ಲೌಕೀಕ ಸುಖದಲ್ಲಿ । ಕಾಕುಮತಿಯನು ಕೊಟ್ಟಾ
ಬೇಕಾದ ವೈರಾಗ್ಯ । ಭಾಗ್ಯ ಪ್ರದನಾಗೋ
ನಾಕನದಿ ವಂದ್ಯ ಗುರು । ಗೋವಿಂದ ವಿಠಲನೆ
ನೂಕಿಸಂತಾಪಗಳ । ಮೋಕ್ಷಪ್ರದನಾಗೋ ೫

೫೯೧

ಪ್ರಾಣಸನ್ನುತ ನರಸಿಂಹ । ವಿಠಲ ಪೊರೆ ಇವಳಾ ಪ

ಕಾಣೆನಾನನ್ಯರನು । ಕಾರುಣ್ಯ ಮೂರ್ತೇ ಅ.ಪ.

ಏಸೊ ಜನ್ಮದ ಪುಣ್ಯ । ರಾಶಿಗೊದಗುವ ದಾಸ್ಯ
ಲೇಸು ಕಾಂಕ್ಷಿಪಳೀಕೆ । ವಾಸುದೇವ ಹರೀ ।
ಕೇಶವನೆ ಪೂಜಿಸೀ । ವೇಷದಲಿ ಸೂಚ್ಯ ಪರಿ
ಆಶಿಷವನಿತ್ತು ಉಪ । ದೇಶ ಮಾಡಿಹೆನೋ ೧

ಕಾಮಾರಿ ಸಖಕೃಷ್ಣ । ಕಾಮಿತವನೇ ಇತ್ತು
ಭಾಮಿನಿಯ ಸಲಹೆಂದು । ನೇಮದಲಿ ಬೇಡ್ವೇ
ಶ್ರೀ ಮನೋಹರ ಹರಿಯೆ । ದುರಿತಾಳಿ ಪರಿಹರಿಸಿ
ನಾಮಸ್ಮೃತಿ ಸುಖ ಕೊಟ್ಟು । ಭವವನುತ್ತರಿಸೋ ೨

ಪಾವನಾ ಮದ ಹರನೆ । ಪಾದ ಮಾನಿಯ ಪ್ರೀಯ
ಪಾವನ್ನ ತವನಾಮ । ನಾಲಿಗ್ಗೆ ಒದಗೀ
ಜೀವನದಿ ಸಂತೋಷ । ಒದಗಲೀ ಎನುತ ಹರಿ
ದೇವ ಗುರು ಗೋವಿಂದ । ವಿಠಲ ಪ್ರಾರ್ಥಿಸುವೇ ೩

೫೯೨

ಪ್ರಾಣೇಶ ಹರಿ ವಿಠಲ । ಪೊರೆಯ ಬೇಕಿವಳಾ ಪ

ನಿನಲ್ಲದಿನ್ನಿಲ್ಲ । ಪ್ರಾಣಾಂತರಾತ್ಮಾ ಅ.ಪ.

ಮೂರು ಲೋಕಾಗ್ರಣಿಯೆ । ಪಾರುಗಾಣಿಸೊ ಇವಳಾ ।
ಘೋರ ತರವೆನಿಪ ಸಂ । ಸಾರ ಕೂಪದಿಂದ ।
ಕಾರುಣ್ಯ ಮೂರುತಿಯೆ । ಆರು ಅನ್ಯರ ಕಾಣೆ
ನೀರ ಜಾಸನ ವಂದ್ಯ । ನಿರ್ಮಲಾತ್ಮಕನೇ ೧

ಕನ್ಯೆಮಣಿ ಇವಳೀಗೆ । ನಿನ್ನ ನಾಮಾಮೃತದ
ಬೆಣ್ಣೆಯನು ಉಣಿಸುತ್ತ । ಕಾಪಾಡೊ ಇವಳಾ
ಚಿನ್ನುಮಯ ಶ್ರೀ ಹರಿಯೆ । ಸಮ್ಮೋದ ಪಾಲಿಸುತ
ಚೆನ್ನಾಗಿ ಪೊರೆ ಇವಳ । ಅನ್ನಂತ ಮಹಿಮಾ ೨

ಸಾಧು ಸತ್ಸಂಗವನು । ನೀ ದಯದಿ ಕೊಟ್ಟವಳ
ಸಾಧನವ ಗೈಸುವುದೊ ಮಾಧವನೆ ದೇವಾ ।
ಆಧ್ಯಂತ ರಹಿತ ಹರಿ । ವೇದಾಂತ ವೇದ್ಯನೆ
ಕಾದುಕೋ ಬಿಡದಿವಳ । ಮಧ್ವಮುನಿ ವಂದ್ಯಾ ೩

ಕಾಮ ಜನಕನೆ ದೇವ । ಕಾಮಿತವ ಕರುಣಿಸುತ
ನೇಮ ನಿಷ್ಠೆಯನಿತ್ತು । ನೀ ಮುದದಿ ದೇವಾ ।
ಪಾಮರಳ ಉದ್ಧರಿಸೋ । ಶ್ರೀ ಮನೋಹರ ಹರಿಯೆ
ಸಾಮಜಾಸದ್ವಂದ । ಸಾಮ ಸನ್ನುತನೇ ೪

ಕೇವಲಾನಂದವನೆ । ಶಾಶ್ವತದ ಸುಖಕಾಗಿ
ಬಾಳ್ವ ಅಳವಡಿಸುತ್ತ । ಕಾವುದೋ ಇವಳಾ ।
ಗೋವಿಂದಂ ಪತಿಯೆ ಗುರು । ಗೋವಿಂದ ವಿಠ್ಠಲನೆ
ಈ ವಿಧದ ಭಿನ್ನಪವ । ನೀವೊಲಿದು ಸಲಿಸೋ ೫

೫೯೩

ಪ್ರಾಣ ಗುರು ಜಯ ವಿಠಲ ಕಾಪಾಡು ಇವಳ ಪ

ಪ್ರಣತಾರ್ತಿ ಹರನೆಂದು ಭಿನ್ನವಿಪೆ ಸತತಾ ಅ.ಪ.

ಪತಿವ್ರತಾಮಣಿ ಎನಿಸಿ ಪತಿಸೇವೆಯೊಳುನಿರತೆ
ಸತತ ಸದ್ಭಕ್ತಿ ಶ್ರೀ ಹರಿಗುರುಗಳಲ್ಲೀ ।
ಅತಿಶಯದಿ ಮಾಡುತಲಿ ವಿಹಿತವನು ತೊರೆಯದಲೆ
ಕೃತಕಾರ್ಯಳಾಗಿಹಳ ಸತಿಯ ಸಲಹುವುದೂ ೧

ಸ್ವಾಪದಲಿ ತೈಜಸ ದಯಾಪಯೋನಿಧಿ ಹರಿಯೆ
ಆ ಪರಿಮಳಾರ್ಯ ಯತಿರೂಪವನೆ ಕೊಂಡು
ಕೈ ಪಿಡಿದು ಕಾಯ್ವೆನೆಂಬಭಯ ಹಸ್ತವ ತೋರಿ
ರೂಪವನು ಮರೆಮಾಡ್ದೆ ಬೃಂದಾವನಾಂತ ೨

ಮೋಚಕೇಚ್ಛೆಯೊಳ್ಸವ್ಯ ಸಾಚಿಗೇ ಅತಿಪ್ರೀಯ
ಖೇಚರೋತ್ತಮ ಪ್ರಾಣಗೊಪ್ಪಿಸುತ ಇವಳಾ
ನೀಚೋಚ್ಚತರತಮ ಜ್ಞಾನ ಸ್ಥಿರಪಡಿಸುತ್ತ
ಪ್ರಾಚೀನ ದುಷ್ಕರ್ಮ ಪರಿಹರಿಸೊ ಹರಿಯೇ ೩

ತನುವು ಇಂದ್ರಿಯವೆಲ್ಲ ಕ್ಷಣ ಭಂಗುರೆಂದೆಂಬ
ಘನಜ್ಞಾನ ವೃದ್ಧಿಸುತ ಕಾಪಾಡೊ ಹರಿಯೇ ।
ಅನಿಮಿತ್ತ ಬಂಧುವೇ ಪ್ರಣತಜನ ಪರಿಪಾಲ
ಎನುತ ಭಿನ್ನೈಸುವೆನೊ ವೇಣುಗೋಪಾಲ ೪

ಬದಿಗ ನೀನಾಗಿರಲು ಭಯವೇನೊ ಬುಧವಂದ್ಯ
ವದಗಿ ಹೃದ್ಗುಹದೊಳಗೆ ತೋರಿತವ ರೂಪ
ಮುದದಿಂದ ಕಳೆ ಇವಳನಾದಿ ರೋಗವನೆಂಬೆ
ಇದನೇವೆ ಸಲಿಸೊ ಗುರು ಗೋವಿಂದ ವಿಠಲ ೫

೫೯೪

ಪ್ರಾಣ ಗುರು ರಾಮ ವಿಠಲ । ನೀನೆ ಪೊರೆ ಇವಳಾ ಪ

ಮೌನಿ ಸದ್ವಂದ್ಯಗೆ । ಶ್ರೀನಿವಾಸದೇವ ಅ.ಪ.

ಅರುಹಳೆನ್ನಳವಲ್ಲ । ಗುರುಕರುಣ ಸತ್ಪಾತ್ರೆ
ವರಸುತ್ಯೆಜಸನಿತ್ತ । ಪಾನಕವ ಕೊಂಡು
ಸಿರಿ ರಮಣ ಮಂದಿರವ । ಸೇರಿ ನಾರಿಳ ಫಲವು
ಕರಗತವು ಆಗಲದು । ವರಮೂರ್ತಿಎನಿಸೆ ೧

ಸುಪ್ತೀಶನಾಜ್ಞೆಯಲಿ । ಇತ್ತಿಹೆನೊ ಅಂಕಿತವ
ಕತ್ಯಸಿರಿ ರಾಮನೆ । ವ್ಯಕ್ತ ತೆರನಾದಾ
ಮಕ್ತಗೊಡೆಯನೆ ದೇವ । ಭಕ್ತವತ್ಸಲಹರಿಯೆ
ಆರ್ತರುದ್ಧರತಾ ಹರಿ । ಅರ್ಥಿಯಲಿಸಲಹೊ ೨

ಹರಿದಾಸ್ಯದೊರಕಲ್ಕೆ । ಪೂರ್ವಸುಕೃತವೇ ಮಾರ್ಗ
ತರಳೆ ಅದ ಪಡೆದಿಹಳು । ಕಾರುಣ್ಯ ಮಾರ್ತೆ
ಮರುತಮತದಲ್ಲಿರುವ । ಕಾರುಣದಿ ಪೊರೆ ಇವಳ
ಸರ್ವಜ್ಞಸರ್ವೇಶ । ಸುರ ಸಾರ್ವ ಭೌಮ ೩

ಭ್ರೂತ ಪಂಚಕದೇಹ । ಸುಸ್ಥಿರವು ಅಲ್ಲೆಂಬ
ಖ್ಯಾತ ಮತಿಯನೆ ಕೊಟ್ಟು । ಸಲಹ ಬೇಕಿವಳಾ
ಮಾತುಮೂತಿಗೆ ನಿನ್ನ । ನಾಮ ಸಂಸ್ಮೃತಿಯಿತ್ತು
ಈ ತರಳೆನುದ್ದರಿಸು । ಮಾತಳಾಂತಕನೆ ೪

ಹಲವು ಮಾತೇಕೆ ಹರಿ । ಕಲಿಯುಗದಿ ತವನಾಮ
ಬಲುಮಂದಿ ಜಪಿಸುತ್ತ । ಭವವ ದಾಂಟಿಹರೊ
ಒಲಿಮೆಯಿಂದವಳನ್ನು । ಸಲಹಲ್ಕೆ ಪ್ರಾರ್ಥಿಸಿಹೆ
ಎಲರುಣಿ ಶಯ್ಯ ಗುರು । ಗೋವಿಂದ ವಿಠಲಾ ೫

೫೯೫

ಪ್ರಾಣಗುರು ಹರಿ ವಿಠಲ । ನೀನೇ ಪೊರೆಯಿವನ ಪ

ಕಾಣೆನಾ ಅನ್ಯರನು । ಕಾರುಣ್ಯಮೂರ್ತೇ ಅ.ಪ.

ಶ್ರೀ ಪತಿಯೆ ನೀನಾಗಿ । ತಾಪಸಿಗಳ್ವೊಂಶದಲಿ
ಪ್ರಾಪಿಸಿಹೆ ಜನ್ಮವನು । ಪಾಪಾತಿದೂರಾ ॥
ಕೋಪ ತಾಪಾದಿಗಳ । ನೀ ಪರಿಹರಿಸುತ್ತಾ
ಕೈಪಿಡಿವುದುಚಿತಲ್ಲೆ । ಗೋಪಾಲ ಹರಿಯೇ ೧

ಪ್ರಾಚೀನ ಬಹುಕರ್ಮ । ಮೋಚಕೇಚ್ಛೆಯಮಾಡಿ
ಖೇಚರೋತ್ತಮ ಪ್ರಾಣ । ಗೊಪ್ಪಿಸೋ ಇವನಾ
ನೀಚೋಚ್ಚ ತರತಮವ । ಸೂಚಿಸುತ ಸುಜ್ಞಾನ
ಗೋಚರನೇ ಹರಿ ಸವ್ಯ । ಸಾಚಿ ಗೊಲಿದವನೇ ೨

ಸೋದರೆರಾಜರ ಕರುಣ । ಐದಿಹನು ಈ ಭಕುತ
ಮೋದತೀರ್ಥಾನುಗನು । ಮೋದ ಕೊಡು ಇವಗೇ ।
ಹೇ ದಯಾಂಬುಧೆ ನಿನ್ನ । ಪಾದ ದಾಸ್ಯಕೆ ಅರ್ಹ
ಕಾದುಕೋ ಬಿಡದಿವನ । ಬಾದರಾಯಣನೇ ೩

ಕರ್ಮಾ ಅಕರ್ಮಗಳ । ಮರ್ಮಗಳ ತಿಳಿಸುತ್ತ
ಧರ್ಮ ಮಾರ್ಗದಲಿರಿಸು । ಪೇರ್ಮೆಯಲಿ ಇವನ ।
ನಿರ್ಮಮತೆ ವಿಷಯದಿಂ । ಕರ್ಮ ಬಿಂಬಾರ್ಪಣೆಯ
ಧರ್ಮಗೋಚರಿಸಿವಗೆ । ನಿರ್ಮಲಾತ್ಮಕನೇ ೪

ಸರ್ವ ವೇದೋದಿತನೆ । ದುರ್ವಿ ಭಾವ್ಯನೆ ನಿನ್ನ
ಸರ್ವ ಶುಭ ಸ್ಮರಣೆಯನು । ಇವಗೆ ಪಾಲಿಸುತಾ ।
ಶರ್ವ ವಂದ್ಯನೆ ಹೃದಯ । ಗಹ್ವರದಿ ನಿನಕಾಂಭ
ಹವಣೆ ಒದಗಿಸೊ ಗುರು । ಗೋವಿಂದ ವಿಠಲಾ ೫

೫೯೬

ಪ್ರಾಣಮತ ನರಸಿಂಹ । ವಿಠಲ ಪೊರೆ ಇವಳಾ ಪ

ಜ್ಞಾನಗಮ್ಯನೆ ದೇವ । ಅನ್ನಂತ ಮಹಿಮಾ ಅ.ಪ.

ಹಿಂದಿನದ ಸತ್ಸುಕೃತ । ದಿಂದ ವೈಷ್ಣವಪತಿಯ
ಪೊಂದಿಹಳೊ ದೇವೇಶ । ಮಂದರೋದ್ಧಾರಿ ।
ಚೆಂದುಳ್ಳ ಮಧ್ವಮತ । ಸಂಧಾನ ತಿಳಿಯಲ್ಕೆ ।
ಇಂದೀವರಾಕ್ಷ ಹರಿ । ಚೋದಿಸೋ ಇವಳಾ ೧

ಸಾಧನ ಸುಸಂಪತ್ತು । ಬೋಧ ಕಾರಣಜೀವಿ
ವೇದ ಸತ್ಪ್ರತಿ ಸಾಧ್ಯ । ನೀ ದಯವ ತೋರೀ ।
ಮೋದ ತೀರ್ಥರ ಮತದ । ಬೋಧ ದೊರಕಿಸುದೇವ
ಆದಿ ಮೂರುತಿ ಹರಿಯೆ । ಬಾದರಾಯಣನೆ ೨

ಪತಿಸುತರು ಹತರಲ್ಲಿ । ವ್ಯಾಪ್ತನಾಗಿಹ ನಿನ್ನ
ಸ್ಥಿತಿಗತಿಯನೇ ತಿಳಿದು । ಚಿಂತಿಸುವ ಪರಿಯಾ
ಹಿತದಿಂದ ತಿಳಿಸುತ್ತ । ಸಾಧನ ಸುಸತ್ವಥದಿ
ರತಿಯನೆ ಕೊಟ್ಟಿವಳ । ಉದ್ಧರಿಸೋ ದೇವಾ ೩

ಎಡರು ತೊಡರು ಬರಲಿ । ಅಡವಿಯಲಿ ತಾನಿರಲಿ
ಮೃಡನುತನೆ ನಿನ್ನ ಸ್ಮೃತಿ । ಬಿಡದಲೇ ಕೊಟ್ಟು
ಕಡು ಗುಂಭ ಸಂಸ್ಕೃತಿಯ । ಮಡುವಿನಿಂದಡಬಾಕಿ
ಬಿಡದಿವಳ ಪೊರೆಯುವುದು । ಕಡುದಯಾ ಪೂರ್ಣ ೪

ಗುರುಭಕ್ತಿ ಹರಿಭಕ್ತಿ । ವೈರಾಗ್ಯ ಭಾಗ್ಯದಲಿ
ಪರಮರತಿಯನೆ ಕೊಟ್ಟು । ಹರಿ ಸ್ಮರಣೆಯೆಂಬಾ
ವರವಜ್ರ ಕವಚವನೆ । ತೊಡಿಸೆಂದು ಪ್ರಾರ್ಥಿಸುವೆ
ಮರುತಾಂತರಾತ್ಮಗುರು । ಗೋವಿಂದ ವಿಠಲಾ ೫

೫೯೭

ಪ್ರಾಣನರಹರಿ ಮೋದ ವಿಠಲ । ಪೊರೆ ಇವಳಾ ಪ

ದಾನವಾಂತಕ ಕೃಷ್ಣ । ದೀನರುದ್ಧಾರೀ ಅ.ಪ.

ದುರಿತಗಳ ಅಟ್ಟುಳಿಯ । ಪರಿಹರಿಸಿ ಸಲಹಯ್ಯ
ಕರುಣಾಳು ನರಹರಿಯೆ । ಮರು ತಂತರಾತ್ಮ
ಶರಣಜನ ವತ್ಸಲನೆ । ಅರಿಗಳನೆ ಪರಿಹರಿಸಿ
ಪೊರೆಯ ಬೇಕೀ ಶಿಶುವೆ । ಕಾರುಣ್ಯ ನಿಧಿಯೇ ೧

ಮಧ್ವಮತ ತತ್ವಗಳ । ಪದ್ಧತಿಯ ತಿಳಿಸುತ್ತ
ಶ್ರದ್ಧೆಯಿಂದಾಚರಿಪ । ಶುದ್ಧಮತಿಯಿತ್ತೂ
ಉದ್ಧರಿಸ ಬೇಕಿವಳ । ಶ್ರದ್ಧೆ ಪತಿ ಪ್ರಿಯ ಹರಿಯೆ
ಹದ್ದುವಾಹನದೇವ । ಮಧ್ವಾಂತರಾತ್ಮ ೨

ಭಾವಶುದ್ದದಿ ನಾಮ । ಓವಿಭಜಿಸುವಂಥ
ಭಾವಭಕ್ತಿಯನಿತ್ತು । ಕಾಯೊ ಶ್ರೀ ಹರಿಯೇ
ಶ್ರೀ ವರನೆ ಸರ್ವತ್ರ । ತವಸ್ಮರಣೆ ಇತ್ತಿವಳ
ನೀವೊಲಿಯ ಬೇಕಯ್ಯ । ದೇವ ಹಯವದನಾ ೩

ಸಾಧು ಸಜ್ಜನ ಸಂಗ । ಸಾಧಿಸುತ ಇವಳಲ್ಲಿ
ಕಾದುಕೋ ಶ್ರೀ ಹರಿಯ । ಬೋಧ ಮೂರುತಿಯೇ
ಮಾಧವನೆ ಮನದಲ್ಲಿ । ಮೋದ ಬಡಿಸುತ ನಿತ್ಯ
ಆದರಿಸ ಬೇಕಿವಳ । ಮೋದ ನರಹರಿಯೇ ೪

ಸರ್ವಜ್ಞ ಸರ್ವೇಶ । ಸರ್ವಾಂತರಾತ್ಮಕನೆ
ಶರ್ವಾದಿ ಸುರವಂದ್ಯ । ಹರಿ ಸಾರ್ವಭೌಮ
ದರ್ವಿ ಜೀವಿಯ ಕಾವ । ಭಾರ ನಿನದಿಹುದಯ್ಯ
ಗುರ್ವಂತರಾತ್ಮ ಗುರು । ಗೋವಿಂದ ವಿಠಲಾ ೫

೫೯೮

ಪ್ರಾಣ ನರಹರಿವಿಠಲ । ಪಾಲಿಸೋ ಇವನಾ ಪ

ಕಾಣೆನೋ ನಿನ್ನೊರತು । ಅನ್ಯರನು ಹರಿಯೇ ಅ.ಪ.

ಮಧ್ವಮತದೀಕ್ಷೆಯಲಿ । ಶ್ರದ್ಧೆಯುಳ್ಳವನಿವನು
ಬುದ್ಧಿ ಪೂರ್ವಕ ಶಾಸ್ತ್ರ । ದಧ್ಯಯನದಾಶೇ ।
ವೃದ್ಧಿಗೈಸುತ ಅದಕೆ । ಅದ್ವಾನ ವೆಸಗುತಲಿ
ಹದ್ದುವಹ ಪೊರೆ ಇವನ । ಮಧ್ವಾಂತರಾತ್ಮ ೧

ವೇದಾಂತ ವೇದ್ಯಹರಿ । ಪಾದಭಜನೆಯ ನಿತ್ತು
ಮೋದಮುನಿ ಸನ್ಮತವ । ಭೋದ ಚಾತುರ್ಯ
ಆದರಿಸಿ ಇವಗಿತ್ತು । ಸಾಧನವಗೈಸೊ ಹರಿ
ಬಾದರಾಯಣ ದೇವ । ಪ್ರಾರ್ಥಿಸುವೆ ನಿನ್ನಾ ೨

ಸರ್ವಜ್ಞ ಸರ್ವೇಶ । ಸ್ವಾತಂತ್ರ ಪುರುಷನೆ
ಸರ್ವಾಂತರಾತ್ಮಕನೆ । ನಿರ್ವಿಕಾರಾಖ್ಯಾ
ಅದ್ವೈತತ್ರಯದಲ್ಲಿ । ಸರ್ವ ಸಾದನವಿರುವ
ಸದ್ವಾರ್ತೆ ತಿಳಿಸಿವಗೆ । ಶರ್ವ ಸುರವಂದ್ಯಾ ೩

ಧ್ಯಾನೊ ಪಾಸನೆ ತಿಳಿಸಿ । ಮೌನಿಗಳ ಸನ್ಮಾರ್ಗ
ಜ್ಞಾನಿಯೆಂದೆನಿಸಿವನ । ಹೇ ನಾರಸಿಂಹ ।
ಮಾನಾಭಿ ಮಾನಗಳ । ನಾನಾಸುದ್ವಂದ್ವಗಳ
ಶ್ರೀನಿವಾಸನೆ ತಾಳ್ವ । ಮನಧೈರ್ಯವೀಯೋ ೪

ಗುರ್ವಂತರಾತ್ಮಗುರು । ಗೋವಿಂದ ವಿಠಲನೆ
ದರ್ವಿಜೀವಿಯ ಹೃದಯ । ಗಹ್ವರದಿ ನಿನ್ನಾ ।
ಚೆಲ್ವರೂಪವ ಕಂಡು । ಭವವನುತ್ತರಿಪಂಥ
ಹವಣೆ ಒದಗಿಸೊ ಎಂದು । ಪ್ರಾರ್ಥಿಸುವೆ ದೇವಾ ೫

೫೯೯

ಪ್ರಿಯ ಪಾಂಡುರಂಗ ವಿಠಲ । ದಯದೋರೊ ಇವಗೆ ಪ

ನಯವಿನಯದಿಂ ಬೇಡ್ವ । ಹರಿದಾಸದೀಕ್ಷಾ ಅ.ಪ.

ಸದ್ವಂಶದಲಿ ಬಂದು । ಮಧ್ವಮತದೀಕ್ಷೆಯಲಿ
ವಿದ್ಯೆಯನು ತಾ ಕಲಿತು । ಹರಿದಾಸ್ಯದಿ ಮನವ
ಬುದ್ಧಿ ಮಾಡ್ಡವ ನೀನೆ । ಮಧ್ವಾಂತರಾತ್ಮಕನೆ
ಸದ್ವಿಧ್ಯೆತರತಮವ । ಬುದ್ದಿಗೆಟಕಿಸೊ ದೇವಾ ೧

ಪಂಚಬೇಧವನರುಹಿ । ಪಂಚಾತ್ಮ ನಿನಕಾಂಬ
ಸಂಚುಗಳ ತಿಳಿಸುತ್ತ । ಕಾಪಾಡೊ ಇವನಾ
ಅಂಚೆಗಮನನೆ ಪಿತನೆ । ನಿಷ್ಕಿಂಚನಾರಾಧ್ಯ
ಹೆಂಚು ಹಾಟಕದಿ ಸಮ । ಬುದ್ದಿಯನೆ ಈಯೋ ೨

ಭಕ್ತಿ ವೆಗ್ಗಳವಾಗಿ । ನಿತ್ಯತವ ಪದಮಹಿಮೆ
ಸತ್ಕೀರ್ತಿ ಪಾಡುತಲಿ । ಹರಿಗುರು ಸೇವಾ
ಕೃತ್ಯದಲಿ ಸನ್ಮೋದ । ಚಿತ್ತದಲಿ ಆನಂದ
ಬಿತ್ತುತಲಿ ಪೊರೆ ಇವನ । ಚಿತ್ತಜನಪಿತನೆ ೩

ಗುಣರೂಪ ಕ್ರಿಯೆಗಳಲಿ । ಅನಗುತನು ವ್ಯಾಪ್ತನೂ
ಎನುವ ಸುಜ್ಞಾನವನು । ಕರುಣಿಸೊ ಹರಿಯೇ
ಕನುಕರಣ ಮನಮೂಲ । ಗುಣಭೋಗದನುಭವನ
ಉಣಿಸಿ ಸಾಧನಗೈಸಿ । ಪೊರೆ ಇದನ ಹರಿಯೇ ೪

ನೋವು ಸುಖಗಳ ಸಮತೆ । ಭಾವವನೆ ಕರುಣಿಸುತ
ಶ್ರೀ ವರನೆ ಪೊರೆ ಇದನ । ಸರ್ವಾಂತರಾತ್ಮಾ
ಶ್ರೀ ವಲ್ಲಭನೆ ಗುರು । ಗೋವಿಂದ ವಿಠಲನೆ
ಓದಿಮಧ್ಭಿನಪವ । ಪಾಲಿಸೊ ಹರಿಯೇ ೫

೬೦೦

ಪ್ರಿಯ ಹಯಾಸ್ಯವಿಠಲ । ದಯದಿ ಪೊರೆ ಇವನಾ ಪ

ನಯವಿನಯದಿಂ ಬೇಡ್ವ । ದಾಸತ್ವ ದೀಕ್ಷಾ ಅ.ಪ.

ದಾಸರಾಯರ ಕರುಣ । ಪಾತ್ರ ನಿರುವನು ಈತ
ಸೂಸಿದತಿಭಕುತಿಯಿಂ । ಸೇವೆಯನು ಗೈವಾ ।
ಏಸೊ ಜನ್ಮದ ಪುಣ್ಯ । ರಾಶಿ ಬಂದೊದಗುತಲಿ
ಆಶಿಸುತ್ತಿರುವನೂ । ದಾಸದೀಕ್ಷೆಯನು ೧

ಅಂಕಿತವ ನಿತ್ತಿಹೆನೊ । ಪಂಕಜಸನ ವಂದ್ಯ
ಶಂಕೆಯಿಲ್ಲದೆ ಸ್ವಪ್ನ । ಸೂಚ್ಯದಂತೇ
ವೆಂಕಟೇಶನೆ ಇವನಾ । ಮಂಕುಮತಿಯನೆ ಕಳೆದು
ಬಿಂಕದಿಂ ಪೊರೆಯಲ್ಕೆ । ಪ್ರಾರ್ಥಿಸುವೆ ಹರಿಯೇ ೨

ಶ್ರದ್ಧೆಯಿಂದಲಿ ಇವನು । ಮಧ್ವಮತ ದೀಕ್ಷೆಯಲಿ
ಬದ್ಧವಾಗಲಿ ಹರಿಯೆ । ಸಿದ್ದ ಮುನಿವಂದ್ಯಾ
ಶುದ್ಧ ತತ್ವಗಳೆಲ್ಲ । ಬುದ್ಧಿಗೇ ನಿಲುಕಿಸುತ
ಶುದ್ಧೋದ ನೀನು ತವ । ಪ್ರಧ್ವಂಸಗೊಳಿಸೊ ೩

ಹರಿಯರಲಿ ಸದ್ಭಕ್ತಿ । ಕರುಣಿಸುತ ತೋಕನಿಗೆ
ಪರಿಪರಿಯಲಿಂ ಕೀರ್ತಿ । ಸಂಪನ್ನನೆನಿಸೋ
ಮರುತಂತರಾತ್ಮ ಹರಿ । ದುರಿತಾಳಿ ಪರಿಹರಿಸಿ
ಕರುಣದಿಂ ಕೈಪಿಡಿದು । ಉದ್ಧರಿಸೊ ಹರಿಯೇ ೪

ಕೈವಲ್ಯದರಸಾಗಿ । ಭಾವಮೈದುನಗೊಲಿದು
ಬೋವ ಬಂಡಿಗೆ ಆದೆ । ಶ್ರೀವರನೆ ಹರಿಯೇ
ಗೋವತ್ಸದನಿ ಕೇಳಿ । ಆವು ಧಾವಿಸುವಂತೆ
ನೀವೊಲಿದು ಪೊರೆಯೊ ಗುರು । ಗೋವಿಂದ ವಿಠಲಾ ೫

೬೦೧

ಬದರೀನಾಥ ವಿಠಲ । ಪೊರೆಯ ಬೇಕಿವನಾ ಪ

ಸದಯ ಹೃದಯನೆ ಇವಗೆ । ಮುದವನ್ನೆ ಬೀರತಲಿ
ಹದುಳದಲಿ ಕೈಪಿಡಿದು । ಕಾಪಾಡೊ ಹರಿಯೇ ಅ.ಪ.

ಮೇಶ ಮಧ್ವೇಶ ಮಹಿ । ದಾಸ ನಿನ್ನಡಿ ದಾಸ್ಯ
ಆಸಿಸುವ ಬಾಲಕನ । ಆಶೆಯನು ಸಲಿಸೀ ।
ಕ್ಲೇಶಗಳ ಪರಿಹರಿಸಿ । ನೀ ಸಲಹೆ ಭಿನ್ನವಿಪೆ
ಹೇಸದಾಗತಿ ವಂದ್ಯ । ವಾಸವಾನುಜನೇ ೧

ಲೌಕಿಕದ ಸಂಪತ್ತು । ಬೇಕಾದ ವರವಿತ್ತು
ಕಾಕು ಸಂಗವ ಕೊಡದೆ । ನೀಕಾಯ ಬೇಕೋ ॥
ತೋಕನಿಗೆ ನಿನ್ನಲ್ಲಿ । ಭಕುತಿ ಜ್ಞಾನಗಳಿತ್ತು
ಲೌಕಿಕವನೆಲ್ಲ ವೈ । ದೀಕ ವೆಂದೆನಿಸೋ ೨

ಸಾಧನದ ದೇಹವನು । ವೈದೇಹಿ ಪ್ರಿಯ ಹರಿಯೆ
ನೀದಯದಿ ಕೊಟ್ಟಿರುವೆ । ಸಾಧು ವಂದ್ಯಾ ।
ಸಾಧನ ಸುಮಾರ್ಗವೆನೆ । ಭೇದ ಪಂಚಕ ತಿಳಿಸಿ
ಮೋದ ತೀರ್ಥರ ಮತದಿ । ಮೋದ ಕೊಡು ಸತತಾ ೩

ಸ್ವಾಪದಲಿ ಮತ್ಸ್ಯಾದಿ । ರೂಪಗಳ ಸ್ತೋತ್ರವನೆ
ವ್ಯಾಪಾರ ಮಾಡಿಸುತ । ಕೃಪೆ ತೋರ್ದೆ ಹರಿಯೇ
ವೈಪರೀತ್ಯದ ಮನದ ಚಾಪಲ್ಯ ಕಳೆಯಲ್ಕೆ
ಸ್ವಾಪದಲಿ ಸೂಚಿಸುತ । ನೀಪೇಳ್ದೆ ಧೃಡವಾ ೪

ಭಾರತೀ ಪತಿ ವಿನುತ । ನಾರಾಯಣಾಖ್ಯ ಹರಿ
ಘೋರಭವ ಕೂಪಾರ । ಪಾರಗಾಣಿಸುವಾ
ಭಾರ ನಿನ್ನದು ಎಂದು । ಪೋರನ್ನ ಒಪ್ಪಿಸಿಹೆ
ಧೀರ ಗುರು ಗೋವಿಂದ । ವಿಠಲ ಪೊರೆ ಇವನಾ ೫

೬೦೨

ಬದರೀ ಪ್ರಸನ್ನವಿಠಲ । ಮುದದಿ ಪೊರೆ ಇವನಾ ಪ

ವಿಧಿ ಭವಾದೀ ವಂದ್ಯ । ಸಕಲ ಜಗತ್ರಾಣ ಅ.ಪ.

ಬುದ್ಧಿಯಲಿ ನೀ ಸ । ದ್ಬುದ್ಧಿ ಪ್ರೇರಕನಾಗಿ
ಮಧ್ವಮತ ದೀಕ್ಷೆಯಲಿ । ಬದ್ಧವೆನಿಸಿವನಾ
ಹೆದ್ದಾರಿ ಮೀರದಲೆ । ಶುದ್ಧ ಸಾಧನಗೈಸಿ
ಉದ್ಧಾರ ಮಾಡೋಹರಿ । ಬದರೀ ನಿವಾಸ ೧

ಗುರುಹಿರಿಯನುಸರಿಪ । ವರಮತಿಯ ಕರುಣಿಸುತ
ತರಳನನು ಕೈಪಿಡಿದು । ತೋರೋ ಸನ್ಮಾರ್ಗ
ಅರಹುಲೇನಿಹುದಿನ್ನು । ಸರ್ವಜ್ಞ ನೀನನ್ನು
ದರ್ವಿ ಜೀವನ ಕಾವ । ಹವಣೆ ನಿನದಲ್ಲೇ ೨

ಸತ್ಸಂಗ ಇವಗಿತ್ತು । ಕುತ್ಸಿತವ ಹೊರದೂಡಿ
ವತ್ಸಾರಿ ಶ್ರೀಹರಿಯೆ । ವತ್ಸನ್ನ ಪೊರೆಯೇ ।
ಮತ್ಸಕೇತನ ಜನಕ । ಉತ್ಸವದಿ ಮೆರೆವಂಥ
ಸತ್ಭಾವನೆ ದೇವ । ಭಿನ್ನವಿಪೆ ನಿನಗೆ ೩

ಜ್ಞಾನ ಭಕ್ತಾದಿಗಳ । ನೀನಾಗಿ ಕೊಟ್ಟವಗೆ
ಮಾನನಿಧಿ ಪೊರೆಇವನ । ಧೀನಜನಬಂಧೊ
ಕಾಣೆ ಮೂರ್ಲೋಕದೊಳು । ನಿನ್ನಂಥ ಕರುಣಿಗಳ
ಶ್ರೀನಿವಾಸನೆ ತೋರೋ । ಹೃದ್ಗುಹದಿ ಇವಗೇ ೪

ಸುಪ್ತೀಶ ನೀನಾಗಿ । ಗೊತ್ತು ಮಾಡ್ದಂಕಿತವ
ಇತ್ತಿಹೆನೊ ತರಳನಿಗೆ । ವ್ಯಾಪ್ತ ಮೂರುತಿಯೇ
ಇತ್ತು ಮನದಿಷ್ಟವನಾ । ಎತ್ತು ಭವದಿಂದೆಂದು
ಗೋಪ್ತ ಗುರು ಗೋವಿಂದ । ವಿಠಲ ಪ್ರಾರ್ಥಿಸುವೇ ೫

೬೦೩

ಬಾಲಕೃಷ್ಣವಿಠಲ । ಕಾಪಾಡೊ ಇವನಾ ಪ

ನೀಲ ನೀರದ ವರ್ಣ । ಕಾಳಿಂದಿ ರಮಣ ಅ.ಪ.

ಸಾದನ ಸುಜೀವಿ ಇವ । ಮೋದ ತೀರ್ಥರ ಮತದಿ
ಹಾದಿಯಲ್ಲಿರುವವನ । ಕಾದುಕೋ ಹರಿಯೇ
ವೇದಾಣಿ ಸನ್ನುತನೆ । ಭೇದ ಪಂಚಕ ತಿಳಿಸಿ
ಮೋದ ಪಡಿಸುವುದಿವನ । ವೇದಾಂತ ವೇದ್ಯ ೧

ವ್ಯಾಪ್ತೋಪಾಸಕ ಜೀವಿ । ಗಿತ್ತಿಹೆನೊ ಅಂಕಿತವ
ಸುಪ್ತೀಶ ಪೇಳ್ದಪರಿ । ಗೋಪ್ತ ಮಹಿಮಾ
ಆಪ್ತ ನಿವ ನೆಂದೆನುತ । ಗೊತ್ತು ಮಾಡಿಹೆ ದೇವ
ದೀಪ್ತ ಮೂರುತಿ ಹರಿಯೆ । ತೃಪ್ತಿ ಪಡಿಸಿವನಾ ೨

ಸ್ವಾಪದಲಿ ಸತ್ಪಂಚ । ಪುಷ್ಪ ಬಕುಳವನಿತ್ತು
ಶ್ರೀಪ ನಿನ್ನನುಗ್ರಹ । ಪ್ರಾಪಕದಸೂಚ್ಯಾ
ನೀ ಪಾಲಿಸುತ್ತಿವಗೆ । ಬಾಷ್ಪಾವಾನಂದುದರಿ
ಸೋಪಾನ ಮುಕ್ತಿಗೆನೆ । ವ್ಯಾಪಾರ ನಿನದೋ ೩

ಉಂಬುಡುವ ಕ್ರಿಯೆ ಸರ್ವ । ಬಿಂಬ ತಾಗೈಯ್ಯೆ ಪ್ರತಿ
ಬಿಂಬ ಕುಂಟೆಂಬುವಾ । ಸುಜ್ಞಾನವಿತ್ತು
ಗುಂಭ ಸಾದನದಿ ಹೃದ । ಯಾಂಬರದಿ ನೀತೋರಿ
ಸಂಭ್ರಮದಲಿರಿಸಿವನ । ಅಂಬುಜದಳಾಕ್ಷ ೪

ಎಲ್ಲೆಲ್ಲೂ ನಿನ್ನ ವ್ಯಾಪ್ತಿ । ಸೊಲ್ಲನುಣಿಸುತ ಹರಿಯೆ
ಬಲ್ಲಿದರ ಸಂಗವನು । ಸಲ್ಲಿಸುತ ಇವಗೇ
ಪಲ್ಲವಿಸೆ ಸುಜ್ಞಾನ । ಬೆಡ್ವೆ ನಿನ್ನನು ದೇವ
ಚೆಲ್ವ ಹಯಮುಖ ಗುರು । ಗೋವಿಂದ ವಿಠಲಾ ೫

೬೦೪

ಬಾಲಕೃಷ್ಣ ಹರಿ ವಿಠಲ । ಪಾಲಿಸೋ ಇವಳಾ ಪ

ಲೀಲಾ ಮನೋರೂಪ । ಕಾಳಿಂದಿ ರಮಣಾ ಅ.ಪ.

ಈ ದಾಸತ್ವ ದೀಕ್ಷಾ । ಸಾಧಿಸುವುದತಿ ಕಷ್ಟ
ಸಾಧು ಈ ಕನ್ಯೆ ಬಹು । ಭಕ್ತಿಯಲಪೇಕ್ಷೆ
ಗೈದು ಬೇಡಿಹಳಿವಳು । ಭೋಧಿಸಿಹೆ ಅಂಕಿತವ
ಕಾದುಕೋ ದಯವನಧಿ । ಬಾದರಾಯಣನೇ ೧

ಕಾಮಾದಿಗಳ ಕಳೆದು । ನೇಮದಲಿ ಸಾಧನವ
ನೀ ಮಾಡಿ ಮಾಡಿಸೋ । ಕಾಮ ಪಿತ ಹರಿಯೇ
ಸ್ವಾಮಿ ನೀನಲ್ಲದಲೆ । ಅನ್ಯರನು ನಾ ಕಾಣೆ
ಭೀಮ ಭವಾರ್ಣವವ । ದಾಟಿಸಲು ನಾಕಾಣೆ ೨

ಭವವನಧಿ ನವ ಪೋತ । ತವನಾಮ ಸ್ಮೃತಿಯಿತ್ತು
ಪವನ ಸದನದಿ ನಿನ್ನ । ನಂದನದಲ್ಲಿರಿಸೋ
ಅವರಿವರ ಮನೆ ವಾರ್ತೆ । ಕಿವಿಗೆ ಕೇಳಿಸಬೇಡ
ಭವನದಲಿ ಸಾಧನವ । ಗೈವಂತೆ ಮಾಡೋ ೩

ಸಾಧು ಸಂಗವ ಕೊಟ್ಟು । ನೀ ದಯದಿ ಕಾಪಾಡೋ
ಮೋದ ತೀರ್ಥರ ಮತವ । ಭೋದಿಸೋ ಮುದದೀ
ಮಾಧವನೆ ಕಾಮಿತವ । ಆದರದಿ ಪಾಲಿಸುತ
ಕಾದುಕೋ ಬಿಡದಿವಳ । ಶ್ರೀದ ನರಹರಿಯೇ ೪

ಭಾವ ಭಕ್ತಿಯಲಿಂದ ಹಿರಿಯರ ಸೇವಿಸುವ
ಭಾವುಕಳ ಕೈಪಿಡಿದು । ಕಾಪಾಡೊ ಹರಿಯೇ
ಗೋವು ಕರುವಿನ ಮೊರೆಗೇ । ಧಾವಿಸೀ ಬರುವಂತೆ
ನೀವೊಲಿದು ಪೊರೆಯೊ ಗುರು । ಗೋವಿಂದ ವಿಠಲಾ ೫

೬೦೫

ಭಕ್ತಾರ್ತಿ ಹರ ವಿಠಲ । ತೆತ್ತಿಗನ ಪಾಲಿಸೋ ಪ

ಮುಕ್ತೀಶ ಕರುಣಾಳು । ಪ್ರಾರ್ಥಿಸುವೆ ನಿನ್ನಾ ಅ.ಪ.

ತರಳನಿವ ವೈರಾಗ್ಯ । ಭರಣ ಭೂಷಿತನಾಗಿ
ಹರಿ ನಿನ್ನ ಚರಣಾಬ್ಜ । ವರದಾಸ್ಯ ಕಾಂಕ್ಷೀ
ಶಿರಿ ಹರಿಯೆ ನೀನಾಗಿ । ಪ್ರೇರಿಸಿದ ಅಂಕಿತವ
ತರಳಗುಪದೇಶಿಸಿಹೇ । ಕರ ಪಿಡಿದು ಸಲಹೋ ೧

ಮೂಮೂರ್ಥರು ಅರಿಗಳಿಂ । ಪರಿಹರಿಸಿ ನೀನಾಗಿ
ಮೂರೆರೆಡು ಭೇದಗಳ । ಅರಿವನೇ ಇತ್ತೂ
ತರತಮಾತ್ಮಕ ಜ್ಞಾನ । ಕರುಣಿಸುತ ಶ್ರೀಹರಿಯೆ
ಪರಿಹರಿಸೊ ಭವ ತಾಪ । ಕಾರುಣ್ಯನಿಧಿಯೇ ೨

ಯತಿಗಳ ಕಾರುಣ್ಯ । ಪಾತ್ರನಿರುವನುಯೀತ
ಅತಿಶಯದ ಸೇವೆಗೆ । ಕಾತುರನು ಇರುವಾ
ಮತಿಯಿತ್ತುಸತ್ಪಥಾ । ಪಥರಲ್ಲಿ ನಡಿಸಿವನ
ರತಿಯು ಶ್ರೀ ಹರಿದಾಸ । ಶತ ಪತ್ರದೊಳಗೆ ೩

ಮಧ್ವಗುರುಗಳ ಪಾದ । ಅದ್ದೂರಿಯಲಿ ಭಜಿಪ
ಶುದ್ಧ ಬುದ್ಧಿಯನಿತ್ತು । ಉದ್ಧರಿಸೊ ಹರಿಯೇ ।
ಅದ್ವೈತ ತ್ರಯದರಿಪು । ಬುದ್ಧಿಗೇ ಸಿಲುಕಲೀ
ಶ್ರದ್ಧಾಳುವಿನ ಸಲಹೋ । ಶಬ್ಧ ಗೋಚರನೇ ೪

ಕಾಮದಾನತಜನವ । ಶ್ರೀ ವರನೆ ಸರ್ವೇಶ
ನೀವೊಲಿಯದಿನ್ನಿಲ್ಲ । ಪಾವನ್ನ ಮೂರ್ತೇ
ಭಾವ ಕೋವಿಯುವ ದೇವ । ಭಾವದಲಿ ಮೈದೊಲೊ
ಗೋವಿಂದಾಂಪತಿ ಗುರೂ । ಗೋವಿಂದ ವಿಠಲಾ ೫

೬೦೬

ಭಾರತೀ ಪತಿನುತ ವಿಠಲ ನೀನಿವಳ
ಉದ್ಧಾರ ಮಾಡುವುದು ಹರಿಯೇ ಪ

ತಾರಕನು ನಿನಗನ್ಯ ಉಂಟೇ
ಈರೇಳು ಲೋಕದಲಿ ಧೊರೆಯೇ ಅ.ಪ.

ಜನ್ಮಜನ್ಮದಲಿ ಬಲುನೊಂದು ಸತ್ಪುಣ್ಯಗಳನೇ ಮಾಡಿ
ಜನ್ಮಪೊಂದುತಲಿ ಸತ್ಕುಲದಿ ಸನ್ಮತದವನ ಕೈಯ ಪಿಡಿದು ।
ಸನ್ಮಧ್ವಮತ ದೀಕ್ಷೆಗಳ – ಒಮ್ಮನದಿ ತಾಳುತ್ತ
ನಿಮ್ಮಡಿಯ ನಾಶ್ರಯಿಸಿ ಬಂದಿಹಳ ಸಲಹುವುದು ೧

ತರತಮ ಜ್ಞಾನದಲಿ – ಉರುತರೋತ್ಸುಕತೆಯನು
ನಿರತ ಹರಿಗುರುಗಳಲಿ ಉರುತರದ ಭಕ್ತಿಯನೂ ।
ಹಿರಿಯರನು ವಿನಯದಿಂ ಪರಿಚರಿಪ ಮತಿಯನ್ನು
ಕರುಣಿಸೀ ಸಲಹಯ್ಯ ಮರುತಾಂತರಾತ್ಮಾ ೨

ಪಂಚಭೇಧದ ಜ್ಞಾನ ಸಂಚಿಂತನೆಯನೇ ಕೊಟ್ಟು
ಮಿಂಚಿನಂದದಿ ತೋರೊ – ಹೃತ್ಪಂಕಜನಲೀ
ಅಂಚೆವಹಪಿತ ನಿನ್ನ ಪದಕಮಲ ಭಜಿಪಳಿಗೆ
ವಾಂಛಿತಾರ್ಥದನಾಗಿ – ಸಲಹ ಬೇಕಿವಳಾ ೩

ಪತಿಯೆ ಪರದೈವವೆಂಬತುಳ ಮಾರ್ಗದಲಿವಳ
ಪತಿಕರಿಸು ಶ್ರೀಹರಿಯೆ – ಭವಕರಿಗೆ ಹರಿಯೇ ।
ಹಿತವಹಿತವೆರಡಕ್ಕು ಪತಿ ನೀನೆ ಎಂಬಂಥ
ಮತಿಯಿತ್ತು ಭವಗಳನ ಉತ್ತರಿಸು ಹರಿಯೇ ೪

ನಿನ್ನ ಪದ ಕಮಲದಲಿ ಜ್ಞಾನಭಕುತಿಗಳಿತ್ತು
ನನ್ನೆ ಯಿಂದಿವಳ ಚೆನ್ನಾಗಿ ಸಲಹೊ ಹರಿಯೇ ।

ಸನ್ನುತಿಸಿ ಪ್ರಾರ್ಥಿಸುವೆ – ಮನ್ನಿಸೆನ ಬಿನ್ನಪವ
ಘನ್ನ ಮಹಿಮನೆ ಗುರು ಗೋವಿಂದ ವಿಠಲಾ ೫

೬೦೭

ಭಾರತೀಶ ಕಾಂತ ವಿಠಲ । ಪೊರೆಯ ಬೇಕಿವಳ ।
ಭೂರಿ ದೈವರ ಗಂಡ । ಮರುತಾಂತರಾತ್ಮಾ ಅ.ಪ.

ಯೇಸು ಜನ್ಮದ ಸುಕೃತ । ರಾಶಿ ಒದಗಲು ಈಗ
ದಾಸ ಪಂಥಕೆ ಮನವ । ಆಶಿಸುತ್ತಿಹಳೋ
ಆಶುಗತಿ ಮತ ಪೊಂದಿ । ದೋಷಗಳ ಕಳೆದಿಹಳ
ಕೇಶವನೆ ಪೊರೆಯೆಂದು । ಲೇಸು ಬಿನ್ನವಿಪೇ ೧

ಮೂರೆರಡು ಭೇದಗಳು । ತಾರತಮ್ಯವ ತಿಳುಹಿ
ಆರು ಮೂರೂಭಕ್ತಿ । ವೈರಾಗ್ಯ ಭಾಗ್ಯ
ಸಾರ ತತ್ವ ಜ್ಞಾನ । ದರಿವ ಇವಳಿಗೆ ಇತ್ತು
ಪಾರುಗೈ ಭವದ ಕೂ । ಪಾರ ಶ್ರೀ ಹರಿಯೇ ೨

ಲೌಕಿಕ ಸುಸಖ್ಯ । ವೈದೀಕವೆಂದೆನಿಸುತ್ತ
ಕಾಕು ಸಂಗವ ಕೊಡದೆ । ನೀ ಕೊಟ್ಟು ಸತ್ಸಂಗ
ಪ್ರಾಕ್ಕು ಕರ್ಮವ ಕಳೆದು । ಸಾಕ ಬೇಕೆಂದಿವಳ
ಮಾಕಳತ್ರನೆ ಹರಿಯೆ । ನಾಕೇಳ್ವೆ ವರವಾ ೩

ಪತಿಯೆ ಪರದೈವ ವೆಂ । ಬತಿ ಶಯದ ಮನೆಯಿತ್ತು
ಹಿತದಿ ಹರಿ ಗುರು ಸೇವೆ । ಸತತ ಒದಗಿಸುತ
ಗತಿಗೋತ್ರ ನೀನೆಂಬ । ಮತಿಯನೇ ಕರುಣಿಸುತ
ಕ್ಷಿತಿಯೊಳಿವಳನು ಮೆರೆಸೊ । ಪತಿತ ಪಾವನ್ನಾ ೪

ದೇವ ಹೂತಿಯ ಪೊರೆದ । ಆವ ಕಪಿಲಾತ್ಮಕನೆ
ಭಾವದಲಿ ಮೈದೋರಿ । ನೀವೊಲಿಯಲೆಂದೂ

ಭಾವದಲಿ ಬಿನ್ನವಿಪೆ । ಬಾವಜ್ಞ ಸಲಿಸುವುದು
ದೇವ ದೇವನೆ ಗುರೂ । ಗೋವಿಂದ ವಿಠಲಾ ೫

೬೦೮

ಭೀಮಾ ತಟಗ ವಿಠಲ । ಕಾಪಾಡೊ ಇವಳಾ ಪ

ಸಾಮ ಸನ್ನುತ ದೇವಾ । ಪ್ರಾರ್ಥಿಸುವೆ ಹರಿಯೇ ಅ.ಪ.

ಮರುತದಲ್ಲಿಹಳು । ತರುಣಿ ಬಹು ಭಕ್ತಿಯಲಿ
ಹರಿದಾಸ್ಯ ಕುಂಕ್ಷಿಪಳು । ಕರಿವರದ ದೇವಾ ।
ಗುರುಕರುಣ ಸ್ವಪ್ನದಲಿ । ಹರಿದಾಗಿ ಪಡೆದಿಹಳು
ತರಳೆಶ್ರಪತಿ ವರದ । ಪರಿಪಾಲಿಸಿವಳಾ ೧

ಪಂಚ ಪಂಚಿಕೆಯ ಪ್ರ । ಪಂಚ ಸತ್ಯತ್ವವನು
ಪಂಚ ಭೇದಗಳರುಹಿ । ಕಾಪಾಡೊ ಹರಿಯೇ ।
ಅಂಚೆ ವಹ ಪಿತನೆ ಸ । ತ್ತರತ ಮತ ತಿಳಿಸುತ್ತ
ಪಂಚರೂಪಾತ್ಮಕನೆ । ಕೈಪಿಡಿಯೊ ಇವಳಾ ೨

ಭೋಗಗಳ ಉಂಬಾಗ । ಭೋಗಿರಥೀ ಪಿತನ
ಜಾಗುಮಾಡದೆ ಸ್ಮರಿಪ । ಭಾಗ್ಯವನೆ ಕೊಟ್ಟೊ ।
ಆಗುಹೋಗುಗಳೆಂಬ । ದ್ವಂದ್ವ ಸಹನೆಯನಿತ್ತು
ನೀಗೊ ಭವಸಾಗರವ । ಕಾರುಣ್ಯಮೂರ್ತೇ ೩

ಪತಿಯೇ ಪರದೈವವೆಂ । ಬತುಳ ಶುಭಮತಿಯಿತ್ತು
ಗತಿಗೋತ್ರ ನೀನೆಂದು । ಸತತ ಚಿಂತಿಸುತಾ ।
ಮತಿವರಾಂ ವರರಂಘ್ರಿ । ಶತಪತ್ರಸೇವೆಯನು
ರತಿಯಿಂದ ಗೈವಂಥ । ಮತಿನೀಡೊ ಹರಿಯೇ ೪

ಸಂತಾನ ಸಂಪತ್ತು । ಶಾಂತಿಪತಿ ನೀನಿತ್ತು
ಕಾಂತುಪಿತ ಸೇವೆನ್ನೈ । ರಂತರದಿ ಗೈವಾ ।

ಪಂಥದಲಿ ಇರಿಸು ಗುರು । ಗೋವಿಂದ ವಿಠ್ಠಲನೆ
ಇಂತಪ್ಪ ಪ್ರಾರ್ಥನೆಯ । ಸಲಿಸೋ ಶ್ರೀ ಹರಿಯೇ ೫

೬೦೯

ಭೀಮಾತಟ ಹರಿ ವಿಠಲ । ಪೊರೆಯ ಬೇಕಿವಳಾ ಪ

ಸಾಮಸನ್ನುತ ಹರಿಯೆ । ನಿಸ್ಸೀಮ ಮಹಿಮಾ ಅ.ಪ.

ಗುರು ಕರುಣ ಇವಳಿಗಿದೆ । ಮರಳಿ ಹರಿ ಗುರುಭಕ್ತಿ
ನೆರೆ ವೃದ್ಧಿ ಗೈಸುತಲಿ । ಪೊರೆಯೊ ಇವಳಾ ।
ಕರುಣನಿಧಿ ನೀನೆಂದು । ಆರು ಮೊರೆಯ ನಿಡುವೆನಾ
ಪರಿ ಪರಿಯಲಿಂದಿವಳ । ಕೈ ಪಿಡಿಯೆ ಹರಿಯೇ ೧

ಸಜ್ಜನರ ಸಂಗ ಕೊಡು । ದುರ್ಜನರ ದೂರಿರಿಸು
ಅರ್ಜುನನ ಸಾರಥಿಯೆ । ಮೂರ್ಜಗಕೆ ಒಡೆಯಾ ।
ಬೊಜ್ಜೆಯಲಿ ಬ್ರಹ್ಮಾಂಡ । ಸಜ್ಜು ಗೊಳಿಸಿಹ ಹರಿಯೆ ।
ಅರ್ಜುನಾಗ್ರಜ ವಂದ್ಯ । ಸಜ್ಜನರ ಪಾಲಾ ೨

ತರತಮದ ಸುಜ್ಞಾನ । ಹರಿಯ ಸರ್ವೋತ್ತಮತೆ
ಕರುಣಿಸೋ ಇವಳೀಗೆ । ಪರಮ ಪಾವನ್ನಾ ।
ಗರುಡ ಗಮನನೆ ಗುರೂ । ಗೋವಿಂದ ವಿಠ್ಠಲನೆ
ಮೊರೆಯ ಲಾಲಿಸಿ ಇವಳ । ಪೊರೆಯೊ ಶ್ರೀ ಹರಿಯೇ ೩

೬೧೦

ಭೂತ ರಾಜನುತ ವಿಠಲ । ಕಾಪಾಡೊ ಇವನಾ ಪ

ದಾತ ನೀನಲ್ಲದಲೆ । ಕಾವರಾರಿಹರೋ ಅ.ಪ.

ಗುರು ರೂಪಿ ತೈಜಸನು । ನೆರವಾಗಿ ಸ್ವಾಪದಲಿ
ವರಸು ಉಪದೇಶವನು । ಇತ್ತು ಪೊರೆದಿಹನೋ ।
ಮರಳಿ ಇವ ಲಾತವ್ಯ । ಗುರುರಾಜ ಭಕ್ತನಿಹ
ಪೊರೆಯ ಬೇಕಿವನೆನುತ । ಪ್ರಾರ್ಥಿಸುವೆ ಹರಿಯೇ ೧

ನಿಷ್ಕಾಮ ಭಕ್ತನನ । ಮಾಡಿ ನೀ ಸಲಹಯ್ಯ
ಸತ್ಕಾಮಗಳ ಗರೆದು । ಸಾಧನೆಯ ಗೈಸೀ
ದುಷ್ಕಾಮಗಳಿಗೆಡೆಯ । ನೀ ಕೊಡದೆ ಪೊರೆಯಯ್ಯ
ಸತ್ಕರ್ಮ ಸತ್ಸಂಗ । ಸರ್ವದಾ ಕೊಡುತಾ ೨

ಸತಿಸುತರು ಹಿತರಲ್ಲಿ । ದುರ್ಮಮತೆ ಕಳೆಯುತ್ತ
ಮತಿಮತಾಂ ವರರಂಘ್ರಿ । ಶತ ಪತ್ರರತನಾ
ಹಿತದಿಂದ ನೀ ಸಲಹಿ । ಗತಿ ಪ್ರದನು ಆಗಯ್ಯ
ಕೃತಿ ರಮಣ ಪ್ರದ್ಯುಮ್ನ । ಪ್ರತಿ ರಹಿತ ದೇವಾ ೩

ಮಧ್ವಮತ ಪದ್ಧತ್ಯಭಿ । ವೃದ್ಧಿಗೈಸುತಲಿವಗೆ
ಸಿದ್ಧಾಂತ ಜ್ಞಾನದಲಿ । ಸಿದ್ಧ ನೆನಿಸಯ್ಯಾ
ವೃದ್ಧಿಯಾಗಲಿ ಜ್ಞಾನ । ವೈರಾಗ್ಯ ಭಕ್ತಿಗಳು
ಮಧ್ವರಮಣನೆ ದೇವ । ಬುದ್ಧಿ ಬೋದಕನೇ ೪

ಬದಿಗ ನೀನಾಗಿದ್ದು । ಹೃದಯದವಕಾಶದಲಿ
ಮುದದಿಂದ ತವರೂಪ । ತೋರಿ ಸಲಹಯ್ಯಾ ।
ಇದಕನ್ಯ ನಾ ಬೇಡೆ । ಯದು ವರೇಣ್ಯನೆ ಕೃಷ್ಣ
ಸದಯ ಗುರು ಗೋವಿಂದ । ವಿಠಲ ಪ್ರಾರ್ಥಿಸುವೇ ೫

೬೧೧

ಭೂತೇಶನುತ ವಿಠಲ । ಕಾಪಾಡೊ ಇವನಾ ಪ

ಓತ ಪ್ರೋತನು ಆಗಿ । ದಾತನೀನಿರುವೇ ಅ.ಪ.

ಶೀಲಗುಣಸಂಪನ್ನ । ಮೇಲಾಗಿ ವೈರಾಗ್ಯ
ಶಾಲಿ ಎನಿಸುತ ತನ್ನ । ಕಾಲಕಳೆಯುತಲೀ ।
ಶ್ರೀಲೋಲತವ ಪಾದ । ದಾಸ್ಯವನೆ ಕಾಂಕ್ಷಿಸುವ
ವಾಲಿಭಂಜನ ರಾಮ । ಪಾಲಿಸೋ ಇವನಾ ೧

ತೈಜಸನೆ ನೀನು ಗುರು । ರಾಜರೂಪಿಲಿ ತೋರಿ
ನೈಜೋಪದೇಶವನು । ಪೊಂದುವುದು ಎನುತಾ ।
ಮಾಜದಲೆ ಪೇಳಿರಲು । ವಾಜಿವದನನೆ ನಿನ್ನ
ಬ್ರಾಜಿಷ್ಣು ನಾಮದಲಿ । ಅಂಕನವ ಗೈದೇ ೨

ದಾಸ ದಾಸರ ಗುಣಾ । ದಾಸನೆಂದೆನಿಸುತ್ತ
ಕೇಶವನ ಗುಣನಾಮ । ಸೂಸಿಕೊಂಡಾಡಿ ।
ಲೇಸಾದ ಆನಂದ । ಭಾಸಿಸುತ್ತಲಿ ಗುಹಾ
ವಾಸನನು ಕಾಂಬಂಥ । ಮಾರ್ಗದನು ಆಗೋ ೩

ಮಧ್ವಮತ ತತ್ವಗಳು । ಬುದ್ಧಿಯಲ್ಲಿ ಸ್ಫುರಿಸುತ್ತ
ಶುದ್ಧಭಾವದಿ ಮನನ । ಸಿದ್ಧಿಸುತಲಿವಗೇ ।
ಅದ್ವೈತ ತ್ರಯಜ್ಞಾನ । ಶ್ರದ್ಧೆ ಭಕ್ತಿಯ ಉದಿಸೆ
ಮಧ್ವರಮಣನೆ ಹರಿಯೆ । ಉದ್ಧಾರ ಮಾಡೋ ೪

ಸರ್ವಜ್ಞಾ ಸರ್ವೇಶ । ಸರ್ವಾಂತರಾತ್ಮಕನೆ
ದರ್ವಿಜೀವಿಯ ಪೊರೆಯೆ । ಪ್ರಾರ್ಥಿಸುವೆ ಹರಿಯೇ ।
ದುರ್ವಿ ಭಾವ್ಯನೆ ಗುರು । ಗೋವಿಂದ ವಿಠಲನೆ
ಅವ್ಯಾಜ ಕರುಣನಿಧಿ । ಭಿನ್ನಪವ ಸಲಿಸೋ ೫

೬೧೨

ಭೂರಮಣ ರಘುರಾಮ ವಿಠಲನೆ ನೀನಿವಳ
ಭೂರಿ ಕರುಣದಲಿಂದ ಕಾಪಾಡಬೇಕೊ ಪ

ಆರು ಇಲ್ಲವೊ ಗತಿಯು ನಿನ್ಹೊರತು ಶ್ರೀಹರಿಯೆ
ಸಾರಿ ನಿನ್ನಯ ಪಾದವಾರಾಧಿಸುತ್ತಿಹಳಾ ಅ.ಪ.

ತಾರತಮ್ಯ ಜ್ಞಾನ ಪಂಚಭೇದವನರುಹಿ
ಪಾರು ಮಾಡೀಭವದ ಪರಿತಾಪವಾ
ನೀರೇರುಹಾನಯನ ಕಾರುಣ್ಯ ಮೂರುತಿಯೆ
ಪ್ರೇರಕನೆ ಜಗಕೆಲ್ಲ ಸರ್ವಾಂತರಾತ್ಮ ೧

ಪತಿ ಸೇವೆಯಲಿ ಭಕುತಿ ಅತಿಶಯದಿ ಹರಿ ಭಕುತಿ
ಮತಿಯು ತತ್ವಾರ್ಥಗಳ ಗ್ರಹಿಸುವಲಿ ರತಿಯೂ
ಸತತ ವಿಷಯಾದಿಗಳು ನಶ್ವರವು ಎಂದೆನುತ
ಮತಿಯಿತ್ತು ಇವಳೀಗೆ ಪಾಲಿಪುದು ವೀರಕುತಿ ೨

ಪ್ರಾಚೀನ ಕರ್ಮಗಳ ಯೋಚಿಸಲು ಎನ್ನಳವೆ
ಕೀಚಕಾರಿ ಪ್ರೀಯ ಮೋಚಕನು ನೀನೇ ।
ಚಾಚಿ ಶಿರ ನಿನ್ನಡಿಗೆ ಯಾಚಿಸುವೆ ಶ್ರೀಹರಿಯೆ
ಪಾಚ ಕಾಂತರ್ಯಾಮಿ ಕರ್ಮನಾಮಕನೆ ೩

ಸತತ ತವ ಸ್ಮೃತಿಯಿತ್ತು ವಿತತ ಕರ್ಮವ ಸುಟ್ಟು
ಪ್ರತಿರಹಿತ ನಿನ್ನಂಘ್ರಿ ಹೃತ್ಕರ್ಣಿಯಲಿಟ್ಟು
ಕೃತಕಾರ್ಯವೆಲ್ಲ ಶ್ರೀ ಪತಿಯೆ ನಿನ್ನಯ ಸೇವೆ
ಮತಿಯಿತ್ತು ಭವ ಬಂಧ ಕತ್ತರಿಸೊ ಹರಿಯೆ ೪

ಕೃತ್ತಿವಾಸನ ತಾತ ಉತ್ತಮೋತ್ತಮ ದೇವ
ಪುತ್ರಮಿತ್ರನು ನೀನೆ ಸರ್ವತ್ರ ಭಾಂಧವನೆ ।
ಪುತ್ರಿಯನು ಸಲಹೆಂದು ಪ್ರಾರ್ಥಿಸುವೆ ನಿನ್ನಡಿಗೆ
ಆಪ್ತ ಗುರುಗೋವಿಂದ ವಿಠಲ ಮಮ ಸ್ವಾಮೀ ೫

೬೧೩

ಭೂವರಾಹ ವಿಠಲನೆ । ಸೇವಕನ ಪೊರೆಯೊ ಪ

ಕಾವಕರುಣಿಗಳರಸ । ಭಾವಜಾನಯ್ಯ ಅ.ಪ.

ಏಸೆಸೊ ಜನ್ಮಗಳ । ಸೂಸಿದನುಭವದಿಂದ
ಲೇಸಾದ ಮಧ್ವಮತ । ಪೋಷಿಸುತ್ತಿಹನೊ
ವಾಸವಾದ್ಯಮರನುತ । ಶೇಷಾದ್ರಿವಾಸಹರಿ
ಪೋಷಿಸೊ ಬಿಡದಿವನ । ಆಶೆಪೂರಯಿಸಿ ೧

ತಾರತಮ್ಯಜ್ಞಾನ । ಮೂರೆರಡು ಭೇಧಗಳ
ವಾರವಾರಕೆ ತಿಳಿಸಿ । ಕಾರಣಾತ್ಮಕನೆ
ಸಾರತಮ ನೀನೆಂಬ । ಚಾರುಮತಿಯನೆ ಕೊಟ್ಟು
ನೀರಜಾಸನ ವಂದ್ಯ । ಪಾರುಗೈಭವವ ೨

ಅಧ್ಯಾತ್ಮ ಅಧಿಭೂತ । ಆದಿಭೌತಿಕತಾಪ
ಭೋದಿಸುತ ಸಾಧನದ । ಹಾದಿಯಲ್ಲಿರಿಸೋ
ಮಧ್ವಾಂತರಾತ್ಮಕನ । ಪಾದರತಿಯಲಿ ಶ್ರದ್ಧೆ
ಉದ್ಧರಿಸು ಇವನಲ್ಲಿ । ಹದ್ದುವಾಹನನೇ ೩

ಸಂಶಯರಹಿತಾಗಿ । ಅಂಶಾವ ತಾರಗಳ
ಶಂಸಿಸುವ ಪರಿಮಾಡಿ । ಕಂಸಾರಿ ಪೊರೆಯೊ
ಹಂಸ ವಾಹನನಾದಿ । ತೃಣಾಂತ ಚವರನ
ಹಂಸರೂಪಿಹರಿಯ । ಆಧೀನ ತಿಳಿಸೋ ೪

ಸರ್ವತ್ರ ವಾಪ್ತನಿಹ । ಸರ್ವ ದೋಷ ವಿದೂರ
ಸರ್ವಂತಾರಾತ್ಮಕನೆ । ಸರ್ವೋತ್ತಮ
ಸರ್ವಧಾತನ ಸ್ಮೃತಿಯ । ದರ್ವಿ ಜೀವಿಗೆಯಿತ್ತು
ಪೊರೆಯೊ ಸುಂದರ ಗುರು । ಗೋವಿಂದ ವಿಠಲ ೫

೬೧೪

ಮಧ್ವ ವರದ ವಿಠಲ ಕಾಯ ಬೇಕಿವಳಾ ಪ

ಪದುಮನಾಭನೆ ನಿನ್ನ ಸೇವೆ ಕಾತುರಳಾ ಅ.ಪ.

ಏಸುಜನ್ಮದ ಸುಕೃತ ರಾಶಿಗೇ ಫಲರೂಪ
ದಾಸದೀಕ್ಷೆಯ ವಹಿಸೆ ಆಶಿಸುತ್ತಿಹಳೊ ।
ಕೇಶವನೆ ಹೃದಯಾಬ್ಜವಾಸ ತವ ಸೇವೆಯನು
ಲೇಸಾಗಿ ಕೊಟ್ಟು ಮನದಾಶೆ ಪೂರೈಸೋ ೧

ನಯವಿನಯ ಗುಣಯುಕ್ತೆ ಕನ್ಯೆ ಬಹು ಭಕ್ತಿಯುತೆ
ವಯಸು ಕಾರಣವಲ್ಲ ಪ್ರಿಯ ನಿನ್ನ ಭಜಿಸೆ ।
ದಯತೋರಿ ಈ ಶಿಶುವ ಹಯಮೊಗನೆ ಉದ್ಧರಿಸೊ
ವಯನಗಮ್ಯನೆ ಹರಿಯೆ ಭಿನ್ನಯಿಪೆ ನಿನಗೇ ೨

ಮರುತ ಮತದಲಿ ದೀಕ್ಷೆ ಹರಿಗುರೂ ಸದ್ಭಕ್ತಿ
ನೆರೆ ಬಂಧು ಜನ ಪ್ರೇಮ ಮರಳಿ ಆಧಮರಲಿ
ಕರುಣೆಯನು ಮಾಳ್ಪಂಥ ವರಮತಿಯ ಕರುಣಿಪುದು
ಗರುಡವಾಹನದೇವ ಸರ್ವಾಂತರಾತ್ಮ ೩

ಘೋರಭವ ಶರನಿಧಿಗೆ ತಾರಕವು ತವನಾಮ
ವಾರವಾರಕೆ ನುಡಿಸು ಮರುತಾಂತರಾತ್ಮ
ತಾರತಮ್ಯ ಜ್ಞಾನ ಸಾರವನೆ ತಿಳಿಸುತ್ತ
ತೋರೋ ತವರೂಪವನೆ ಹೃದ್ಗುಹದಿ ಹರಿಯೇ ೪

ಶರ್ವಾದಿ ದಿವಿಜೇಡ್ಯ ದುರ್ವಿಭಾವ್ಯನೆ ಹರಿಯೆ
ಸರ್ವ ದೇಶವು ಕಾಲ ಸರ್ವಗುಣಪೂರ್ಣ
ಸರ್ವಜ್ಞ ಹರಿ ಎನ್ನ ಭಿನ್ನಪವ ಸಲಿಸೆಂದು
ಸರ್ವಗುರು ಗೋವಿಂದ ವಿಠಲ ಪ್ರಾರ್ಥಿಸುವೆ ೫

೬೧೫

ಮಧ್ವವರದಾ ಕೃಷ್ಣಾ ವಿಠಲ ಪೊರೆಯಿವಳ ಪ

ಅಧ್ವರೇಡ್ಯನೆ । ದೇವ ಕಾರುಣ್ಯ ಮೂರ್ತೇ ಅ.ಪ.

ಸುಸ್ತೇಶ ಸೂಚಿಸಿದ ಕ್ಲುಪ್ತಿಯನ್ನನುಸರಿಸಿ
ಇತ್ತಿಹೆನು ಉಪದೇಶ ಚಿತ್ತಜನಪಿತನೆ
ಅರ್ಥಿಯಲಿ ಮನ್ನಿಸುತ ಚಿತ್ತೈಸು ಬಿನ್ನಪವ
ಕೃತ್ತಿವಾಸನ ತಾತ ಸ್ತುತ್ಯ ಸರ್ವೇಶ ೧

ನಾಮಸ್ಮೃತಿ ಯೆಂಬಂಥ ಆ ಮಹಾ ಕವಚವನು
ಈ ಮಹಿಳೆಗೀಯುತ್ತ ಸಾಧನವ ಗೈಸೋ
ಸಾಮ ಸನ್ನುತ ಚರಣ ಸೀಮೆ ಮೀರಿದ ಮಹಿಮ
ಭಾಮಿನಿಯ ಪೊರೆಯೆಂದು ಪ್ರಾರ್ಥಿಸುವೆ ಹರಿಯೇ ೨

ತರತಮದ ಸುಜ್ಞಾನ ಎರಡು ಮೂರ್ಭೇದಗಳು
ಅರಿವನೇ ಇತ್ತಿವಳ ಪೊರೆವುದೈ ಹರಿಯೆ
ಮರುತ ಮತದಲ್ಲಿಹಳ ನಿರುತ ಕಾಯಲಿ ಬೇಕು
ಕರಿವರದ ಧೃವವರದ ತರಳೆಹಲ್ಯೆಯ ವರದ ೩

ಪತಿಸೇವೆ ಹಿತದಿಂದ ಕೃತನಾಗಿಯಿವಳಿಂದ
ಗತಿಗೆ ಸಾಧನವೆನಿಸೋ ಮರುತಾಂತರಾತ್ಮ
ಹಿತ ವಹಿತವೆರಡರಲಿ ರತಿ ಸಮತೆ ಪ್ರದನಾಗಿ
ಕೃತ ಕೃತ್ಯಳೆಂದೆನಿಸೊ । ಕೃತಿರಮಣದೇವ ೪

ಜೀವ ಅಸ್ವಾತಂತ್ರ ದೇವ ನಿಜ ಸ್ವಾತಂತ್ರ
ಜೀವ ಜಡರೂ ದೇವರಾಧೀನ ವೆಂಬ
ಭಾವನೆ ತಿಳಿಸು ಗುರುಗೋವಿಂದ ವಿಠಲಯ್ಯ
ಸಾವಧಾನದಿಯಿವಳ ಕೈಯನೇ ಪಿಡಿಯೋ ೫

೬೧೬

ಮಧ್ವವರದ ಹಯಾಸ್ಯ ವಿಠಲ ಸಲಹೊ ।
ಶುದ್ಧ ಭಕ್ತನ ಪೊರೆಯೆ ಭಿನ್ನವಿಪೆ ಸತತ ಪ

ಮಧ್ವವಿಜಯದಿ ಸದ್ಬುದ್ಧಿ ಪ್ರದನೀನೆನಿಸಿ
ಮಧ್ವಗುರು ಸತ್ಕರುಣ ಕವಚವನೆ ತೊಡಿಸೀ ।
ಸಿದ್ಧಾಂತ ಜ್ಞಾನದಲಿ ಶುದ್ಧ ಬುದ್ಧಿಯ ನಿತ್ತು
ಉದ್ಧರಿಸ ಬೇಕಿವನ ಉದ್ಧವನ ಪ್ರಿಯನೇ ೧

ಮೂಲರಾಮರ ಪಾದ ಆಶ್ರಿತರ ಸೇವೆಯಲಿ
ಕಾಲಕ್ರಮಿಸುತ್ತಿರುವ ಶೀಲ ಭಕ್ತನಿಗೇ ।
ಮೇಲಾಗಿ ಸತ್ಕಾಮ ಜಾಲಗಳ ಸಲ್ಲಿಸುತ
ಕಾಲಕೂಟಕೆ ಸಮದ ಕೀಳು ಭವ ಹರಿಸೋ ೨

ಗುಣರೂಪ ಕ್ರಿಯ ನಿನ್ನ ಧ್ಯಾನುಪಾಸಾನೆ ಇತ್ತು
ತನುಸದನ ಹೃದ್ಗಹದಿ ಕಾಣಿಸೀ ಕೊಳುತಾ ।
ಘನವೆನಿಪ ಸಂಚಿತಾಗಾಮಿಗಳ ಪರಿಹರಿಸಿ
ಅಣುಗನನ ಸಲಹೆಂಬ ಪ್ರಾರ್ಥನೆಯ ಸಲಿಸೋ ೩

ಸಂಸೃತಿಯ ಕ್ಲೇಶ ನಿಸ್ಸಂಶಯದಿ ಕಳೆಯುತಿಹ
ಕಂಸಾರಿ ತವಪಾದ ಪಾಂಸು ಭಜಿಪನಿಗೇ ।
ವಂಶ ಉದ್ಧರಿಸಿ ಸಂತೈಸು ಶ್ರೀ ಹರಿಯೆ
ಅಂಶುಮಾಲೀಕುಲಜ ಶ್ರೀರಾಮಚಂದ್ರಾ ೪

ದೀಕ್ಷೆದಾಸತ್ವದಲಿ ಕಾಂಕ್ಷಿತಗೆ ತೈಜಸನು
ಈಕ್ಷಿಸುತ ಕರುಣಾಕಟಾಕ್ಷದಲಿ ಪೇಳೇ ।
ಸಾಕ್ಷಿ ಮೂರುತಿ ಗುರು । ಗೋವಿಂದ ವಿಠಲ – ಅ
ಪೇಕ್ಷೆ ಪೂರ್ತಿಸಿಹೆ । ಋಕ್ಷ ಸನ್ನುತನೇ ೫

೬೧೭

ಮನುಜ ಮೃಗವೇಷ । ವಿಠಲ ಪೊರೆ ಇವಳಾ ಪ

ಅನಘ ಅನಿಲಾಂತಸ್ಥ । ಗುಣಪೂರ್ಣ ಹರಿಯೇ ಅ.ಪ.

ಗುರುಮಹಿಮೆ ಅರಿಯದಲೆ । ಚಿರಕಾಲ ಬಾಳಿಹಳೊ
ಮರುತಾಂತರಾತ್ಮಹರಿ । ವರಭೋಗಿ ಶಯನಾ
ತರತಮದ ಸುಜ್ಞಾನ । ಎರಡು ಮೂರ್ಭೇದಗಳ
ಅರುಹಿ ನೀ ಪೊರೆ ಇವಳ । ಸರ್ವ ಸುಲುಭಾಖ್ಯ ೧

ಬದಿಗ ನೀನಾಗಿದ್ದು । ಮುದುಡ ಜೀವಿಯ ಮನಕೆ
ವದಗಿ ಬಾರದಲೇವೆ । ಅಜ್ಞಾನ ಮುಸುಕೀ
ಸದಮಲಾಂತಃ ಕರಣ । ದುದಯವನೆ ಕಳಕೊಂಡು
ವಿಧವಿಧದಿ ಪರಿತಪಿಸಿ । ನೊಂದಿಹಳ ಪೊರೆಯೋ ೨

ಸರ್ವ ಬಗೆಯಲಿ ವಂದ್ಯ । ಸರ್ವಂತರಾತ್ಮಕನೆ
ನಿರ್ವಿಕಾರನೆ ನಿನ್ನ । ನಾಮ ಸುಧೆಯಾ
ಸರ್ವದಾ ಉಣಿಸಿ ಪೊರೆ । ಇವಳ ಎನೆ ಬಿನ್ನವಿಪೆ
ಸರ್ವಸುಂದರ ಗುರು । ಗೋವಿಂದ ವಿಠಲಾ ೩

೬೧೮

ಮನಸಿಜ ಪಿತ ವಿಠಲ । ನೀನಿವನ ಸಲಹೋ ಪ

ಅನುಮಾನ ವಿನ್ನಿಲ್ಲ । ಅಣುಗ ನಿನ್ನವನೋ ಅ.ಪ.

ನೊಂದು ಭವದಲಿ ಬಹಳ । ಇಂದಿರಾರಾಧ್ಯತವ
ದ್ವಂದ್ವಪದ ದಾಸ್ಯಮನ । ಮಂದಿರದಿ ಬೇಡ್ವಾ
ಕುಂದುಗಳ ನೆಣಿಸದಲೆ । ತಂದೆ ಕೈ ಪಿಡಿಯುತ್ತ
ಛಂದದಲಿ ಸಲಹೋ ಕೃಪೆ । ಸಿಂಧು ಮೂರುತಿಯೇ ೧

ಸ್ವಪ್ನ ಸೂಚನೆಯಂತೆ । ಒಪ್ಪಿದಂಕಿತವಿತ್ತು
ಅರ್ಪಿಸಿಹೆ ನಿನ್ನಡಿಗೆ । ಸರ್ಪ ಶಯನಾ ।
ಒಪ್ಪಿಡಿಯ ಅವಲಿಗ್ಯೆ । ಅಪ್ಪಾರವಿತ್ತಿರುವೆ
ಇಪ್ಪರಿಯ ಮಹಿಮೆಗಳು । ಇನ್ನಾರಿಗುಂಟೋ ೨

ವಿಷ ಅಮೃತವಾದಂತೆ । ದುಷ್ಕರ್ಮ ಫಲರಹಿತ
ಎಸೆಗುತ್ತ ಸಂತಾಪ । ನಶಿಸುವಂತೆಸಗೋ
ಅಸಮ ಮಹಿಮನೆ ಭಕ್ತಿ । ಪಾಶಕ್ಕಾವಶನಾಗಿ
ಮಿಸುಣಿ ಮೇಲ್ಮಣಿಯಂತೆ । ಭಾಸಿಸೋ ಹರಿಯೇ ೩

ಭೇದ ಪಂಚಕ ತಿಳಿಸು । ಮೋದ ಮುನಿಮತದೀಕ್ಷೆ
ಸಾಧಿಸಿವನಲಿ ಹರಿಯೆ । ಯಾದವೇಶಾ
ನೀದಯಾ ಪೂರ್ಣ ನೆಂ । ದಾದರದಿ ಪೊಗಳುವೆನೊ
ಖೇದ ಮೋದ ದ್ವಂದ್ವ । ಬುದ್ಧಿ ಸಮವೆನಿಸೋ ೪

ಆವದೇಶವು ಇರಲಿ । ಆವಕಾಲವು ಇರಲಿ
ನೀವೊದಗೊ ಸ್ಮೃತಿ ಪಥಕೆ । ಕೋವಿದರ ಒಡೆಯಾ
ಕಾವ ಕೊಲ್ಲುವ ಗುರೂ । ಗೋವಿಂದ ವಿಠ್ಠಲನೆ
ಭಾವದಲಿ ಮೈದೋರೇ । ಓವಿ ಪ್ರಾರ್ಥಿಸುವೆ ೫

೬೧೯

ಮನ್ಮಥಪಿತ ವಿಠಲ ನೀನಿವಳ ಸಲಹೊ ಹರಿಯೇ
ಮನ್ಮನೋರಥ ಭಿನ್ನಪವ ಸಲಿಸೋ ಪ

ಜನ್ಮಜನ್ಮಾಂತರದ ಪುಣ್ಯ ಸಂಚಯ ಫಲಿಸಿ
ನಿನ್ನ ದಾಸತ್ವದಲಿ ಕಾಂಕ್ಷೆ ಬಹುಯಿರಿಸೆ
ನನ್ನೆಯಿಂದಲಿ ಪೂಜೆ ಪರಿಕರಂಗಳ ಕೊಂಡು
ಸ್ವಪ್ನ ಸೂಚಕದಂತೆ ನಿನ್ನರ್ಚನೆಯ ಕಾತುರಳ ೧

ತರತಮದಿ ಸುಜ್ಞಾನ ಹರಿಗುರೂ ಸದ್ಭಕ್ತಿ
ಪರಮ ವೈರಾಗ್ಯವನು ವಿಷಯಾದಿಗಳಲೀ
ಪರತತ್ವ ಹರಿಯೆಂಬ ವರಮತಿಯ ನೀನಿತ್ತು
ಗುರುಮಧ್ವ ಮತದಲ್ಲಿ ಪರಮದೀಕ್ಷೆಯನೀಯೋ ೨

ಪತಿ ಸುತರು ಹಿತರಲ್ಲಿ । ಗತಿದಾತ ಗುರುವಿನೊಳು
ಕ್ಷಿತಿರಮಣ ತವವ್ಯಾಪ್ತಿ ಮತಿಯ ಪಾಲಿಸುತ
ಗತಿ ದೋರೊ ಸನ್ಮುಕುತಿ ಪಥವನೀ ಸಲಿಸುತ್ತ
ಹುತವಹಕ್ಷಾಂತರ್ಗತ ಮನದಿ ನೆಲಸುತಲೀ ೩

ಅಂಜನಿಯ ಸುತನೆನಿಸಿ ಸಂಜೆಚರ ಭಂಜನಧ
ಸಂಜಯ ನಿಕೇತನನು । ಸಂಜೀವ ಪಿತನೇ ।
ನಂಜು ಸಂಸ್ಕೃತಿ ಬಂಧ ಮೋಚಕೇಚ್ಛೆಯ ಮಾಡಿ
ಅಂಜಿಕೆಯನೆ ಕಳೆಯೊ । ಕಂಜಾಕ್ಷ ಹರಿಯೇ ೪

ಪಾವಮಾನಿಯ ಪ್ರೀಯ ಭಾವುಕಳ ಹೃದ್ಗತನೆ
ನೀವೊಲಿದು ತವಸ್ಮರಣೆ ಸರ್ವದಾ ಸರ್ವತ್ರ
ಈವುದಿವಳಿಗೆ ಎನ್ನ ಬಿನ್ನಪವ ಸಲ್ಲಿಪುದು
ಗೋವಿದಾಂಪತಿಯೆ ಗುರು ಗೋವಿಂದ ವಿಠಲಾ ೫

೬೨೦

ಮಾಧವ ವಿಠಲ ನೀದಯದಿ ಕಾಪಾಡೊ ಇವಳ ಪ

ಯಾದವೇಶನೆ ಸ್ವಾಮಿ । ಹೇಸದಾಗತಿವಂದ್ಯ
ಪಾದ ಸೇವಕಳ ಮನದಾಶೆ ಸಲಿಸುತ್ತ ಅ.ಪ.

ಏಸು ಜನ್ಮದ ಪುಣ್ಯ । ರಾಶಿಗಳು ಫಲಿಸುತಿರೆ
ದಾಸದೀಕ್ಷೆಯಲಿ ಮನ । ದಾಶೆ ತೋರಿಹಳ
ದೋಷರಾಶಿಯ ತೂಲ । ರಾಶಿಗಳನ ಪರಿಯು
ಗೈಸಿ ನೀನಾಗಿ ತವ । ದಾಸಿ ಎಂದೆನಿಸೋ ೧

ನೀಚೋಚ್ಚ ತರತಮದಿ । ಯೋಚನೆಯ ನೆಲೆಗೊಳಿಸಿ
ಪ್ರಾಚೀನ ಕರ್ಮಾಳಿ । ಮೋಚನೆಯ ಗೈಯ್ಯೋ ।
ಖೇಚರೊತ್ತಮ ವಾಹ । ಕೀಚಕಾರಿ ಪ್ರಿಯನೆ
ಯಾಚಿಸುವೆನೋ ಸವ್ಯ । ಸಾಚಿ ಸಖ ಕೃಷ್ಣ ೨

ಜ್ಞಾನಗಮ್ಯನೆ ದೇವ । ಜ್ಞಾನಿಜನ ಸುಪ್ರೀಯ
ಆನಂದ ತೀರ್ಥ ಮತ । ದಾನಂದ ಉಣಿಸೀ
ಗಾನಲೋಲನೆ ಇವಳ । ಗಾನಕೊಲಿಯುತ ನೀನು
ಧ್ಯಾನ ಗೋಚರನಾಗೊ । ಹೃತ್ಕಂಜದೊಳಗೇ ೩

ಸುಸ್ವತಂತ್ರನೆ ದೇವ । ಅಸ್ವತಂತ್ರಳ ಕಾವ
ಸರ್ವ ಭಾರವು ನಿಂದೆ । ಶರ್ವವಂದ್ಯಾ
ಸರ್ವವ್ಯಾಪಕನಾಗಿ । ಸರ್ವಜ್ಞ ನೀನಿರಲು
ಅಶ್ವಮೊಗನೇ ಕಾಯೊ । ವಿಶ್ವಸೃಜಿ ದೇವ ೪

ತೈಜಸನೆ ನೀನಾಗಿ । ಯೋಜಿಸಿದ ಪರಿಯಂತೆ
ಭ್ರಾಜಿಸುವ ಅಂಕಿತವ । ನೈಜ ಭಕ್ತಳಿಗೇ
ಯೋಜಿಸಿಹೆ ಮರುತನಿಂ । ಪೂಜ್ಯನೇ ಪರಿಪೂರ್ಣ
ತೇಜಾತ್ಮನಾದ ಗುರು ಗೋವಿಂದ ವಿಠಲಾ ೫

೬೨೧

ಮಾಧವ ಭೂ ವರಾಹ । ವಿಠಲ ಪೊರೆ ಇವನ ಪ

ಮೋದ ಮುನಿ ಸನ್ನುತನೆ । ಆದಿ ಮೂರುತಿಯೇ ಅ.ಪ.

ಸ್ವೋಚಿತಸು ಕರ್ಮದಲಿ । ಊಚ ದೀಕ್ಷೆಯನಿತ್ತು
ನೀಚೋಚ್ಚತರತಮವ । ವಾಚಿಸಿವನಲ್ಲೀ
ಪ್ರಾಚೀನ ದುಷ್ಕರ್ಮ । ಮೋಚನೆಯಗೈಸವ್ಯ
ಸಾಚೀ ಸಖನೆ ಹರಿಯೆ । ಕೀಚಕಾರಿ ಪ್ರೀಯಾ ೧

ಸತಿ ಸುತರು ಬಂಧುಗಳು । ಹಿತ ಅಹಿತರಿವರಲ್ಲಿ
ವ್ಯಾಪ್ತ ಶ್ರೀ ಹರಿಯೆಂಬ । ಮತಿಯ ಕೊಟ್ಟವಗೇ ॥
ಸತತ ತವನಾಮಾ । ಮೃತದ ಸವಿದೋರೋ
ವಿತತ ಮಹಿಮೋ ಪೇತ । ಪ್ರತಿ ರಹಿತ ದೇವಾ ೨

ಸಾರಶೃತಿ ಪ್ರತಿಪಾದ್ಯ । ವೀರ ರಾಮಾರ್ಚಕರು
ತೋರೆ ಪಥ ಸ್ವಪ್ನದಲಿ । ಸಾರಿ ಬಂದಿಹನೋ
ಹೇ ರಮಾಪತೆ ನಿನ್ನ । ಚಾರು ದಾಸ್ಯವನಿತ್ತು
ಘೋರ ಭವ ಕೂಪಾರ । ಪಾರು ಮಾಡಯ್ಯಾ ೩

ಹರಿಕಥಾಮೃತ ಸಾರ । ವಾರವಾರಕೆ ಉಣಿಸಿ
ದಾರಿ ದೀಪಕನಾಗೊ । ಮಾರಮಣನೆ ದೇವಾ
ತಾರಕನು ನಿನ್ಹೊರತು । ಆರು ಇಲ್ಲವುಯೆಂದು
ಪ್ರಾರ್ಥಿಸುವೆ ನಿನ್ನಡಿಗೆ । ವೀರರಘು ಪತೆಯೇ ೪

ಭೂವಿಬುದ ಸಂಪ್ರೀಯ । ಭೂವರಾಹಾತ್ಮಕನೆ
ಭಾವುಕಗೆ ಮೈದೋರಿ । ಕಾವುದೆಂದೆನುತಾ
ಈ ವಿಧದ ಭಿನ್ನಪವ । ನೀ ವೊಲಿದು ಸಲಿಸುವುದು
ಗೋವಿದಾಂ ಪತಿ ಗುರೂ । ಗೋವಿಂದ ವಿಠಲಾ ೫

೬೨೨

ಮಾಧವ ಸ್ವಾಮಿ ವಿಠಲ । ಪೊರೆಯ ಬೇಕಿವಳಾ ಪ

ಹೇ ದಯಾಂಬುದಿ ಹರಿಯೆ । ಆದಿ ಮೂರುತಿಯೆ ಅ.ಪ.

ಸಾದು ಸಂತರ ಸೇವೆ । ನೀ ದಯದಿಕೊಟ್ಟಿವಳ
ಮೋದಮುನಿನುತದೀಕ್ಷೆ । ಹಾದಿಯಲ್ಲಿರಿಸೋ
ಬೋಧವಾಗಲಿ ತತ್ವ । ತರತಮವು ಪಂಚಕೆಯು
ಸಾಧುವಂದಿತ ಹರಿಯೆ । ಬಾದರಾಯಣನೇ ೧

ದಾಸತ್ವ ದೀಕ್ಷೆ ಆ । ಯಾಸ ವಿಲ್ಲದೆ ಸಾಗಿ
ಕೇಶವನ ಒಲಿಮೆಗೇ । ಅವಕಾಶವಾಗೀ
ಹೇಸಿ ಸಂಸಾರದಿ ನಿ । ರಾಶಿಯಾಗಲಿ ಎಂದು
ಆಶಿಸುವೆ ಶ್ರೀ ಹರಿಯೆ । ವಾಸವಾನುಜನೇ ೨

ಇಂದ್ರಿಯವ್ಯಾಪಾರ । ಉಪೇಂದ್ರನದು ಎಂಬುವ
ಚೆಂದುಳ್ಳ ಸ್ಮೃತಿಯಿತ್ತು । ತಂದೆ ಕೈಪಿಡಿಯೋ
ವಂದ್ಯಳೆಂದೆನಿಸು ಸ್ತ್ರೀ । ವೃಂದದೊಳಗೆ ಹರಿಯೆ
ಮಂದಾಕಿನೀ ಜನಕ । ಇಂದಿರಾನಂದ ೩

ಜೀವ ಅಸ್ವಾತಂತ್ರ । ದೇವನಿಜ ಸ್ವತಂತ್ರ
ಜೀವ ಜಡರುಗಳೆಲ್ಲ । ದೇವರಾಧೀನಾ
ಭಾವ ವೃದ್ಧಿಯಗೈಸಿ । ಭವನಾವೆ ಎಂದೆನಿಸೊ
ದೇವದೇವೇಶಗುರು । ಗೋವಿಂದ ವಿಠಲಾ ೪

ದುರಿತ ದುಷ್ಕೃತಹಾರಿ । ಸರ್ವಜ್ಞ ಮೂರುತಿಯೆ
ಹರಿನಾಮ ಕವಚವನು । ತರಳಗೇ ತೊಡಿಸೀ
ಪರಿಹರಿಸೊ ಭವಬಂಧ । ಮರುತಾಂತರಾತ್ಮಕನೆ
ಕರುಣಾಳು ಕರಿವರದ । ಮೊರೆ ಕೇಳೊ ಹರಿಯೇ ೫

೬೨೩

ಮಾವಿನುತ ಹರಿ ವಿಠಲ ಸಲಹ ಬೇಕಿವನ ಪ

ನೀ ವೊಲಿಯದಿರಲ್ಯಾರುಗತಿ । ಜೀವಿಗಳಿಗಿರುತಿಹರೊ ದೇವ ಅ.ಪ.

ದುರುಳ ಕಶ್ಯಪು ತನ್ನ । ತರಳನನು ಪರಿಪರಿಯ
ಉರುತರದಿ ಬಾಧಿಸಲು । ಪೊರೆದ ತೆರದಂತೇ
ಶರಣಜನ ವತ್ಸಲಗೆ । ನರಹರಿಯೆ ಕುಲದೈವ
ಕರುಣದಿಂದಲಿ ನೀನೆ । ಪೊರೆಯ ಬೇಕಿವನ ೧

ಶ್ರೀಕರಾಂಬುಜ ಸೇವ್ಯ । ಪ್ರಾಕ್ಕು ಕರ್ಮವ ಕಳೆದು
ಲೌಕಿಕಗಳೆಲ್ಲ ವೈ । ದಿಕವು ಎಂದೆನಿಸುವ
ತೋಕನಿಗೆ ಸಾಧನವ । ನೀಕೊಟ್ಟು ಪಾಲಿಪುದು
ಆ ಕಮಲ ಭವ ಮುಖ್ಯ । ಸಕಲ ಜಗಕರ್ತಾ ೨

ಭಕ್ತಜನ ಸಂಘಕ್ಕೆ । ತೆತ್ತಿಗನು ನೀನೆನಿಪೆ
ಇತ್ತಿವಗೆ ವೈರಾಗ್ಯ । ಭಕ್ತಿ ಜ್ಞಾನಗಳ
ಬತ್ತಿಸಿ ಭವಾಂಬುಧಿಯ । ಎತ್ತು ಕರ ಪಿಡಿದಿವನ
ಮೃತ್ಯುಂಜಯಾರಾಧ್ಯ । ಉತ್ತಮೋತ್ತಮನೆ ೩

ತಾರತಮ್ಯ ಜ್ಞಾನ ಮೂರೆರಡು ಭೇಧಗಳ
ವಾರವಾರಕೆ ತಿಳಿಸಿ । ಮಾರ ಪಿತ ಹರಿಯೇ
ತೋರುತವರೂಪ ಹೃ । ದ್ವಾರಿಜದಲೆಂದೆನುತ
ಮಾರಾರಿ ಬಿಂಬನಿಗೆ । ಪ್ರಾರ್ಥಿಸುವೆ ಹರಿಯೆ ೪

ಪ್ರಿಯತಮನು ನೀನೆಂಬ ಸಥೆಯಿಂದ ಬೇಡುವೆನೊ
ವಯನ ಗಮ್ಯನೆ ಹರಿಯೆ । ವಾಯ್ವಂತರಾತ್ಮಾ
ಹಯಮೊಗಾಭಿಧ ಗುರು ಗೋವಿಂದ ವಿಠ್ಠಲನೆ
ದಯಬೀರಿ ಶರಣನ್ನ ಉದ್ಧರಿಸೊ ದೇವಾ ೫

೬೨೪

ಮುಕುಂದ ಹರಿ ವಿಠಲ । ಸಾಕ ಬೇಕಿವನಾ ಪ

ಅಕಳಂಕ ಚರಿತ ಹರಿ । ವಿಖನ ಸಾಂಡೊಡೆಯ ಅ.ಪ.

ಮೋದಮುನಿ ಸನ್ಮಾರ್ಗ । ಬೋದೆಯುಳ್ಳವನಿವನು
ವಾದಿರಾಜರ ಕರುಣ । ಪಾತ್ರನಿಹ ನೀತಾ
ಸಾಧು ಸನ್ಮಾರ್ಗದಲಿ । ಆದರಣೆಯುಳ್ಳವನು
ಕಾರುಕೊ ಬಿಡದಿವನ । ಬಾದರಾಯಣನೇ ೧

ಜ್ಞಾನಿಗಳ ವಂಶದಲಿ । ಜನುಮಪೊತ್ತಿಹನೀತ
ಜ್ಞಾನಾನು ಸಂಧಾನ । ಪಾಲಿಸೀ ಇವಗೇ
ಮೌನಿಗಳ ಸಹವಾಸ । ಸಾನುಕೂಲಿಸಿ ಹರಿಯೆ
ಧ್ಯಾನಗೋಚರನಾಗೊ । ವೇಣುಗೋಪಾಲ ೨

ಸಿದ್ಧಾಂತ ಪದ್ಧತಿಯ । ನುದ್ಧರಿಸು ಇವನಲ್ಲಿ
ಮಧ್ವರಾಯರ ಪಾದ । ಸದ್ಭಜಕ ನೆನಿಸೋ
ಅದ್ವೈತ ಪ್ರಕ್ರಿಯವ । ಪ್ರಧ್ವಂಸಗೈವಂಥ
ಶುದ್ಧ ಮತಿಯನೆ ಇತ್ತು । ಉದ್ಧರಿಸೊ ಇವನಾ ೩

ಅಚ್ಯುತಾನಂತ ಹರಿ । ಉಚ್ಚರೊಳು ಉಚ್ಚನಿಹ
ಉಚ್ಚ ನೀಚಗಳೆಂದು । ಸರ್ವ ಜೀವರೊಳು
ಸ್ವಚ್ಛ ತರತಮ ಬೇಧ । ಪಂಚಕವ ತಿಳಿಸಿವಗೆ
ಸಚ್ಚಿದಾನಂದಾತ್ಮ । ಮಚ್ಛಾದಿ ವಪುಷಾ ೪

ಭಾವುಕರ ಪರಿಪಾಲ । ದೇವರಾತನಿಗೊಲಿದೆ
ಜೀವರಂತರ್ಯಾಮಿ । ವಿವಿಧ ರೂಪಾತ್ಮಾ
ನೀವೊಲಿದು ಇವನೀಗೆ । ಸರ್ವದಾ ಪೊರೆಯಂದು
ದೇವ ಭಿನ್ನವಿಪೆ ಗುರು । ಗೋವಿಂದ ವಿಠಲಾ ೫

೬೨೫

ಮುಚುಕುಂದ ವರದ ವಿಠಲ । ಕಾಪಾಡೊ ಇವಳಾ ಪ

ಖಚರಾರಿವಹ ಸವ್ಯ । ಸಾಚಿಸಖ ದೇವ ಅ.ಪ.

ಪತಿಯೆ ಪರದೈವನೆಂಬತುಳ ಮತಿಯನೆ ಇತ್ತು
ಕೃತಕೃತ್ಯಳೆಂದೆನಿಸೊ । ಕೃತಿ ರಮಣದೇವಾ ।
ಮತಿಮತಾಂ ವರರಂಘ್ರಿ । ಹಿತ ಸೇವೆ ಕೈಕೊಂಡು
ಅತಿಶಯದ ಸಾಧನದಿ । ಸಂಪನ್ನಳೆನಿಸೊ ೧

ಗುರುವೆ ತಾರಕನೆಂಬ । ವರಮತಿಯ ಕರುಣಿಸುತ
ಹರಿಗುರು ಸೇವೆಯಲಿ । ಪರಮ ಸದ್ಭಕ್ತೀ
ಕರುಣಿಸಿ ಪೊರೆಯುವುದು । ಸರ್ವಾಂತರಾತ್ಮಕನೆ
ಸರ್ವಸುರ ಸಂಸೇವ್ಯ । ಮರುತಂತರಾತ್ಮ ೨

ಹರಿಯೆ ಸರ್ವೋತ್ತಮನು । ಶಿರಿವಾಯು ಮೊದಲಾದ
ಸುರರೆಲ್ಲ ಹರಿಯ ಕಿಂ । ಕರರೆಂಬ ಮತಿಯಾ
ಕರುಣಿಸುತ ಸಾಧನವ । ಪರಿಪೂರ್ತಿ ಗೈಸೊಹರಿ
ಸುರಮುನಿಯ ಸಂಸೇವ್ಯ । ಕಾರುಣ್ಯ ಮೂರ್ತೇ ೩

ಕರಿವರದ ಜಾಮಿಳನ । ವರದನೆಂದೆನುತ ಶ್ರುತಿ
ಓರಲುತಿವೆ ಹೇ ಸ್ವಾಮಿ । ಗರುಡ ಧ್ವಜಾತ್ಮಾ
ದುರಿತ ದುಷ್ಕೃತ ಕಳೆದು । ಪರಿಪರಿಯ ಸೌಖ್ಯಗಳ
ಕರುಣಿಸಿ ಪೊರೆಯುವುದು । ಸುರಸಾರ್ವಭೌಮ ೪

ಪಾವ ಮಾನಿಯ ಪ್ರೀಯ । ಗೋವರ್ಧನೊದ್ಧರನೆ
ಭಾವುಕರ ಪಾಲ ಭವ । ನೋವ ಕಳೆಯಲ್ಕೇ
ನೀವೊಲಿದು ಇವಳೀಗೆ । ಪಾವನ ಸ್ಮೃತಿಯಿತ್ತು
ಕಾವುದೆನೆ ಬೇಡ್ವೆ ಗುರು । ಗೋವಿಂದ ವಿಠಲಾ ೫

೬೨೬

ಮುದ್ದುಕೃಷ್ಣ ವಿಠಲ । ಕಾಪಾಡೋ ಇವನ ಪ

ಅಧ್ವರೇಡ್ಯನೆ ದೇವ । ಬುದ್ಧಿ ಪ್ರದನಾಗೀ ಅ.ಪ.

ತರಳನಿವ ಭಕ್ತಿಯುತ । ಕರಪಿಡಿದು ಸಲಹಯ್ಯ
ಮರುತಮತ ಪರಿಕರಪು । ತರತಮಸುತತ್ವಾಲ ।
ವರಪಂಚ ಭೇದಗಳ । ಅರಿಪಾಗುವಂತೆಸಗಿ
ಪೊರೆಯೊ ಕರುಣಾಮಯನೆ । ಕರಿವರದ ದೇವಾ ೧

ಕಾಕುಸಂಗವ ಕಳೆದು । ಲೌಕಿಕೋನ್ನತಿ ಕೊಟ್ಟು
ಶ್ರೀಕರಾರ್ಚಿತ ಪಾದ । ಭಕುತಿಭಾಗ್ಯಗಳಾ ।
ತೋಕನಿಗೆ ಒದಗಿಸುತ । ಬೇಕಾದ ವರವಿತ್ತು
ಮೊಕಳತ್ರನೆ ಸಲಹೊ । ಸಾಕಾರ ಮೂರ್ತೇ ೨

ಹರಿಸೇವೆ ಗುರುಸೇವೆ । ಹಿರೆಜನಂಗಳ ಸೇವೆ
ಸಾರುತಾ ಭಕುತಿಯಲಿಂದ । ಚರಿಪಮನವಿತ್ತೂ
ವಸಸು ಸಾಧನಗೈಸಿ । ಪೊರೆಯ ಬೇಕೆಂದೆನುತ
ಮರುತಾಂತರಾತ್ಮಕನೆ । ಕರಮುಗಿದು ಬೇಡ್ದೆ ೩

ಕಾಮಾದಿಷಡ್ರಿಪು । ಸ್ತೋಮಗಳ ಕಾಟವನು
ನೇಮದಾ ಕಡೆಗೊತ್ತಿ । ಪಾಮರನು ಇವನಾ
ಭೂಮಗುಣಿ ನೀನಾಗಿ । ಪ್ರೇಮದಿಂ ಸಲಹಲ್ಕೆ
ನಾಮಾಳ್ಪೆ ಭಿನ್ನಪವ । ಶ್ಯಾಮಸುಂದರನೇ ೪

ಗಾವಲ್ಗಣಿವರದ । ತಾವಕಗೆ ತವನಾಮ
ಸೇವೆಯನೆ ಕರುಣಿಸುತ । ಕಾಪಾಡೊ ಹರಿಯೇ ।
ಗೋವುಗಳ ಪಾಲಗುರು । ಗೋವಿಂದ ವಿಠ್ಠಲನೆ
ನೀವೊಲಿಯದಿನ್ನಿಲ್ಲ । ದೇವದೇವೇಶಾ ೫

೬೨೭

ಮುದ್ದು ವೆಂಕಟ ವಿಠಲ । ಬುದ್ಧಿ ಪ್ರೇರಕನೇ ಪ

ಉದ್ವೇಗ ಕಳೆದು ಸ । ದ್ವಿದ್ಯ ಪ್ರದನಾಗೋ ಅ.ಪ.

ದವಳಾಖ್ಯ ಗಂಗೆ ಸ । ದ್ದವಗಾಹನದಿ ದೇಹ
ಪವಿತಾರವ ಗೈಸುತ್ತ । ಅವ್ಯಾಜ ಕರುಣೀ ।
ಶ್ರೀ ಸ್ವಾದಿ ಗುರುರಾಜ । ಭವ ಕೂಪದಿಂದೆತ್ತಿ
ಓದಿ ಕರೆದ್ಯೊದುದನ । ಭಾವುಕಗೆ ತಿಳಿಪೇ ೧

ಅಂಕಿತವು ಇರದೆ ನಿ । ಷ್ವಂಕನಾಗದಲಿದ್ದ
ಮಂಕು ಮಾನವ ಮನದಿ । ಶಂಕಿಸುತ್ತಿರಲೂ
ಕೊಂಕುಗಳ ಪರಿಹರಿಪ । ವೆಂಕಟೇಶ ನಾನು
ಅಂಕನವ ದಯೆಗೈಸಿ । ಸಂಕಟವ ಕಳೆದಾ ೨

ಸೃಷ್ಟಿ ಸ್ಥಿತಿ ಸಂಹಾರ । ಅಷ್ಟ ಕರ್ತೃಕ ಹರಿಯೆ
ಪುಷ್ಕತವ ಮಹಿಮೆಗಳ । ಶಿಷ್ಟನಿಗೆ ತೋರೀ
ಕಷ್ಟಗಳ ಪರಿಹರಿಸಿ । ಸುಷ್ಠು ಪಾಲಿಪುದಿವನ
ಜಿಷ್ಣು ಸಖ ಭ್ರಾಜಿಷ್ಣು । ಕೃಷ್ಣ ಮೂರುತಿಯೇ 3

ಸ್ವವಿಹಿತವನೆ ಚರಿಸೀ । ಕವನ ರೂಪದಿ ನಿನ್ನ
ಸ್ತವನವನೆ ಗೈಸುತ್ತ । ಭವ ಬಂಧ ಕಳೆಯೋ
ಮಧ್ವಶಾಸ್ತ್ರದಿ ಮನವು । ಸುವಿಚಾರಗೈವ ಪರಿ
ಶ್ರೀ ವರನೆ ಕೃಪೆಗೈದು । ತತ್ವಗಳ ತಿಳಿಸೋ 4

ಪೂರ್ವ ಪುಣ್ಯದಿ ದಿಂಸ । ಭಾವವನೆ ಸ್ವೀಕರಿಸಿ
ಓದಿ ತವ ಪಾದಾಬ್ಜ । ಸೇವೆ ಗೈವಂಥ
ತಾವಕಗೆ ಹೃತ್ಸದನ । ತಾವೆರಲಿ ಮೈದೊರೊ
ಗೋವಿದಾಂ ಪತಿ ಗುರೂ । ಗೋವಿಂದ ವಿಠಲಾ 5

೬೨೮

ಮುರಳೀ ಮನೋಹರ ವಿಠಲ । ಪೊರೆ ಇವಳಾ ಪ

ಗುರು ರಾಘವೇಂದ್ರರ್ಗೆ । ತೋರ್ದ ಶಿರಿಕೃಷ್ಣಾ ಅ.ಪ.

ಇಂದಿರಾರಾಧ್ಯ ಸಿರಿ । ನರಸಿಂಹ ಮೂರುತಿಯೆ
ಚಂದದಲಿ ಸುಜ್ಞಾನ । ದೊಂದು ಅಂಕುರವಾ ।
ಸಂದೇಹ ವಿಲ್ಲದಲೆ । ಅಂದು ಸ್ವಪ್ನದಿ ತೋರಿ
ಮಂದಳನ ಉದ್ಧಾರ । ವೆಂದು ಸೂಚಿಸಿದೇ 1

ಭಯ ಕೃತುವು ಭಯನಾಶ । ವಿಯದಧಿಪ ಗೊಲಿದವನೆ
ನಯ ವಿನಯದಿಂ ಬೇಡ್ವ । ಹಯಮೊಗನ ದಾಸ್ಯ
ದಯದಿ ಕೊಟ್ಟವಳೀಗೇ । ಭಾಗ್ಯ ವೈರಾಗ್ಯವನು
ದಯೆಗೈದು ಹೇಯೊ ಸಾ । ದೇಯಗಳ ತಿಳಿಸೋ 2

ಹರಿಯು ನೀ ನಿತ್ತುದಕೆ । ಉರುತರದ ತೃಪ್ತಿಯನು
ಅರಿತಿಹಳು ಈ ಗೃಹಿಣಿ । ಪರಿಸರೇಡ್ಯಾ ।
ದುರಿತ ರಾಶಿಗಳಳಿದು । ಹರುಷವನೆ ಸುಡಿಸುವುದು
ಶರಣ ಜನ ಮಂದಾರ । ಕರುಣಾಬ್ಧಿ ಹರಿಯೇ ೩

ಮಧ್ವಮತ ಪದ್ಧತಿಗ । ಉದ್ಧರಿಸ ಇವಳಲ್ಲಿ
ಶ್ರದ್ಧೆ ಭಕುತಿಯು ಜ್ಞಾನ । ಮಧ್ವಮತದೀಕ್ಷಾ
ವೃದ್ಧಿಗೈಸಿವಳಲ್ಲಿ । ಶುದ್ಧ ಆನಂದಾತ್ಮ
ಅಧ್ವರೇಡ್ಯನೆ ಅನಿ । ರುದ್ಧ ಮೂರುತಿಯೇ ೪

ಸಾಧನ ಸುಜೀವಿಗಳ । ಮೋದ ಬಡಿಸುವ ಧರ್ಮ
ಸಾಧು ವಂದ್ಯನೆ ದೇವ । ಸಾದರದಿ ತೋರೋ
ವೇದ ವೇದ್ಯನೆ ಗುರೂ । ಗೋವಿಂದ ವಿಠ್ಠಲನೆ
ಪಾದ ಯುಗಳವ ತೋರಿ । ಮೋದ ಬಡಿಸಿವಳಾ ೫

೬೨೯

ಮುರಳಿ ವಿನೋದ ವಿಠಲ । ಪೊರೆಯ ಬೇಕಿವನಾ ಪ

ದುರಿತ ದುಷ್ಕೃತವೆಲ್ಲ । ದೂರ ಸಾಗಿಸುತಾ ಅ.ಪ.

ಚಾರು ಯೌವನದಲ್ಲಿ । ಪರಿಪರಿಯ ಲೌಕಿಕದಿ
ಮಾರಮಣ ಸ್ಮೃತಿ ರಹಿತ । ಕರ್ಮವೆಸಗೀ
ಜಾರಿ ಪೋಗಲು ಆಯು । ಆರಾಧ್ಯ ದೇವತೆಯ
ಚಾರುತರ ಪೂಜಿಸಲು । ಸಾರಿ ಬಂದಿಹನಾ ೧

ಹಿಂದೆ ಮಾಡಿರುವ ಬಹು । ಮಂದಿ ಜನಗಳ ಸೇವೆ
ಇಂದಿರೇಶನೆ ನಿನ್ನ । ಸೇವೆ ಎಂದೆನಿಸೀ
ಇಂದಿರಾರಾಧ್ಯ ಪದ । ಚೆಂದದಿಂ ಪೊರೆ ಇವನ
ಮಂದರೋದ್ಧಾರಿ ಹರಿ । ಕಂದರ್ಪಪಿತನೇ ೨

ಧ್ಯಾನ ಯೋಗದಿ ಮನವ । ಸಾನುಕೂಲಿಸು ಇವಗೆ
ಮಾನನಿಧಿ ಮಧ್ವಪದ । ರೇಣುನಾಶ್ರಯಿಸೀ
ಗಾನದಲಿ ತವ ಮಹಿಮೆ । ಪೊಗಳಿಕೆಯನೆ ಇತ್ತು
ಪ್ರಾಣಾಂತರಾತ್ಮಕನೆ । ಪಾಲಿಸೈ ಹರಿಯೆ ೩

ದೇವಧನ್ವಂತರಿಯೆ । ಪಾವನಾತ್ಮಕ ನಿನ್ನ
ಸೇವೆ ಗಯ್ಯುವವಗಿ । ನ್ನಾವ ದುರಿತಗಳೋ
ಭಾವದಲಿ ಮೈದೋರಿ । ನೀವೊಲಿದು ತೋದರಂತೆ
ದೇವ ತವ ದಾಸ್ಯವನು । ಇತ್ತಿಹೆನು ಹರಿಯೇ ೪

ನಾರಸಿಂಹಾತ್ಮಕನೆ । ಕಾರುಣ್ಯದಲಿ ಹೃದಯ
ವಾರಿರುಹ ಮಧ್ಯದಲಿ । ತೋರಿ ತವ ರೂಪ ।
ಪಾರುಗೈ ಭವವ ಗುರು । ಗೋವಿಂದ ವಿಠಲನೆ
ಸಾರಿ ತವ ಪಾದವನು । ಪ್ರಾರ್ಥಿಸುವೆ ಹರಿಯೇ ೫

೬೩೦

ಮುರಳೀ ವಿಹಾರಿ ವಿಠಲ । ಪೊರೆಯ ಬೇಕಿವಳಾ ಪ

ಕರುಣಿ ಕಂಜಾಕ್ಷ ಹರಿ । ಮೊರೆ ಇಡುವೆ ನಿನಗೇ ಅ.ಪ.

ಸ್ವಾಪದಲಿ ಗುರುದರ್ಶ । ಸುಫಲ ಮಂತ್ರಾಕ್ಷತೆಯ
ನೀ ಪಾಲಿಸಿಹೆ ದೇವ । ಹೇ ಪರಮಾತ್ಮನೇ
ಆ ಪಯೋಜ ಭವನುತ । ಗೋಪಾಲ ಕೃಷ್ಣನೇ
ಈ ಪರಿಯ ಕಾರುಣ್ಯ । ನಾ ಪೊಗಳಲಳವೇ ೧

ಕನ್ಯೆ ಬಹು ಭಕ್ತಿಯುತೆ । ಮಾನ್ಯ ಮಾಡುತ ಅವಳ
ಸನ್ಮನೋಭೀಷ್ಟಗಳ । ವಕ್ಷಿಸೋ ಹರಿಯೇ
ಅನ್ಯಳಲ್ಲವೊ ಅವಳು । ನಿನ್ನ ದಾಸಿಯೆ ಇಹಳು
ಮಾನ್ಯ ಮಾನದ ಹರಿಯೆ । ಚೆನ್ನಾಗಿ ಸಲಹೋ ೨

ಮತ್ಸರಿಗಳಿಂ ಸರಿದು । ಉತ್ಸಾಹ ಪೆಚ್ಚಿಸುತ
ಸತ್ಸಂಗದಲಿ ಪೊರೆಯೋ । ವತ್ಸಾರಿ ಕೃಷ್ಣಾ
ಕುತ್ಸಿತವು ಪಾಪಾಳಿ । ಕೊಚ್ಚಿ ಸವರುತ ಹರಿಯೆ
ಸತ್ಸಿದ್ಧಾಂತ ತಿಳಿಸೊ । ಸಿರಿ ವತ್ಸ ಲಾಂಛನ ೩

ಕರ್ಮ ಮರ್ಮವ ತಿಳಿಸಿ । ಪೇರ್ಮೆಯಿಂ ಪಿಡಿದೆತ್ತಿ
ಧರ್ಮ ಮಾರ್ಗದಿ ನಡೆಸೊ । ಕರ್ಮ ನಾಮಕನೇ
ಭರ್ಮಗರ್ಭನ ಪಿತನೆ । ನಂಬಿ ಬಂದಿಹಳೀಕೆ
ಹರ್ಮ್ಯದಲಿ ನಿನಕಾಂಬ । ಸಾಧನವ ಗೈಸೋ ೪

ಪಾವಮಾನಿಯ ಪ್ರೀಯ । ಕೋವಿದೋತ್ತಂಸ ಹರಿ
ನೀ ವೊಲಿಯದಿನ್ನಿಲ್ಲ । ಭಾವ ಜಾನಯ್ಯಾ
ದೇವ ದೇವೇಶ ಗುರು । ಗೋವಿಂದ ವಿಠ್ಠಲನೆ
ಗೋವತ್ಸದನಿಗಾವು । ಧಾವಿಸಿ ಪೊರೆವಂತೆ ೫

೬೩೧

ಮೂಲ ಕಾರಣ ವಿಠಲ । ಪಾಲಿಸಿವಳಾ ಪ

ಲೀಲಾ ಮನೋರೂಪ । ಬಾಲಗೋಪಾಲಾ ಅ.ಪ.

ಕರ್ಮಕರ್ಮಗಳ । ಮರ್ಮಗಳ ತಿಳಿಸುತ್ತ
ಕರ್ಮ ನಾಮಕ ಕಾಯೊ । ಪೇರ್ಮೆಯಲಿ ಇವಳಾ
ದುರ್ಮತಧ್ವಾಂತಾಕ । ಸಮೀರ ಮತ ತಿಳಿಸಿ
ನಿರ್ಮಲಾತ್ಮನೆ ಸಲಹೊ । ಭರ್ಮ ಗರ್ಭಾತ್ಮ ೧

ಸುಖ ದುಃಖ ದ್ವಂದಗಳು । ಸಕಲಕ್ಕು ಶ್ರೀ ಹರಿಯೆ
ಮುಖ್ಯ ಕಾರುಣಾನೆಂಬ । ಸುಖತೀರ್ಥ ಭಾವಾ ।
ಕಕುಲಾತಿಯಿಲ್ಲದೆ । ತ್ರೈಕರಣ ಪೂರ್ವಕದಿ
ನಿಖಿಲಾತ್ಮ ಕೃತವೆಂಬ । ಯುಕುತಿಯನೆ ತಿಳಿಸೋ ೨

ಪತಿಸುತರು ಹಿತರಲ್ಲಿ । ವ್ಯಾಪ್ತನಾಗಿಹ ಹರಿಯ
ಹಿತದಿಂದ ಸೇವೆಯಲಿ । ಕೃತಕೃತ್ಯಳೆನಿಸಿ
ಮತಿಮತಾಂವರರಂಘ್ರಿ । ಶತಪತ್ರ ನಮಿಪ ಸ–
ನ್ಮತಿಯನ್ನೆ ಪಾಲಿಸೋ । ಕೃತಿರಮಣದೇವ ೩

ಕರಿವರದ ಪ್ರಹ್ಲಾದ । ತರಳ ದ್ರೌಪದಿವರದ
ಹರಿಯೆ ತವ ನಾಮಸ್ಮೃತಿ । ನಿರುತ ಕರುಣಿಸುತಾ
ದುರಿತ ಗಜ ಪಂಚಾಸ್ಯ । ಪರಿಹರಿಸಿ ಇವಳ ಘವ
ಸರ್ವದ ಪೊರೆಯಲ್ಕೆ । ಹರಿಯೆ ಬಿನ್ನವಿಪೇ ೪

ಸೃಷ್ಟಿ ಸ್ಥಿತಿ ಸಂಹಾರ । ಅಷ್ಟ ಕರ್ತೃತ್ವಗಳ
ಸುಷ್ಠು ಚಿಂತನೆಯಲ್ಲಿ । ನೆಟ್ಟ ಮನವಿರಿಸೀ
ಕೃಷ್ಣ ಗುರು ಗೋವಿಂದ । ವಿಠಲನೇ ಗತಿಯೆಂಬ
ಶ್ರೇಷ್ಠ ಮತಿಯಲಿ ಭವದ । ಕಟ್ಟನೇ ಬಿಡಿಸೋ ೫

೬೩೨

ಮೋದ ಪ್ರದ ನರಹರಿ । ವಿಠಲ ಪೊರೆ ಇವಳಾ ಪ

ವೇದ ಪ್ರತಿ ಪಾದ್ಯ ಪ್ರ । ಹ್ಲಾದ ರಕ್ಷಕನೇ ಅ.ಪ.

ನೀನೇವೆ ಗತಿಯೆಂದು । ಆನೇಕ ವಿಧ ನಿನ್ನ
ಸಾನುರಾಗದಿ ಪೊಗಳ್ವ । ಮಾನುನೀ ಮಣಿಗೇ
ಜ್ಞಾನೋದಯವ ಗೈದು । ಕಾಣಿಸೋ ಸದ್ಗತಿಯ
ಮಾನ ಮಾನ್ಯದ ಹರಿಯೆ । ಆನತೇಷ್ಟದನೇ ೧

ಜೀವ ಅಸ್ವಾಂತಂತ್ರ । ದೇವ ನಿಜ ಸ್ವಾತಂತ್ರ
ಈ ವಿಧದ ಸುಜ್ಞಾನ । ಓದಿ ಪಾಲಿಸುತಾ ।
ಕೇವಲಾನಂದ ಮಯ । ದೇವ ತವ ಸೇವೆಯನು
ಭಾವ ಭಕ್ತಿಯಲಿಂದ । ಗೈದ ಮನನೀಯೋ ೨

ನೆರೆಹೊರೆಯ ಜನರೇನು । ಮರಳಿ ಬಹು ಬಾಂಧವರು
ಹರಿ ನಿನ್ನ ಪರಿವಾರ । ಸರಿಯೆಂಬ ಮತಿಯಾ
ಕರುಣಿಸುತ ತರಳೆಗೇ । ಪುರುಷಾರ್ಥ ಸಾಧನದ
ಪರಿಯನರುಹುತ ಪೊರೆಯೊ । ವರಲಕ್ಷ್ಮಿ ಪತಿಯೇ ೩

ಸಾಧನ ಸುಜೀವಿಗಳ । ಕಾದು ಬಾಯ್ದೆರೆಯುತಿರೆ
ಮೋದ ಬಡಿಸುವುದು ಚಿತ್ । ಸಾಧು ಜನವಂದ್ಯಾ
ಮೋದ ಮುನಿ ಪಾದಾಬ್ಜ । ಆದರದಿ ವಂದಿಪಳೋ
ಹೇ ದಯಾಂಬುಧೆ ಮನದಿ । ಮೈದೋರೊ ಹರಿಯೇ ೪

ದೇವಕೀ ವಸುದೇವ । ಭಾವ ಕೊಲಿಯುತ ಬಂದು
ಭಾವ ಮೈದುನ ಬಂಡಿ । ಬೋವ ನೀನಾದೇ
ನೀ ವೊಲಿಯಲಿನ್ನೇನು । ಆವುದಾಸಾಧ್ಯವೋ
ಪೂವಿಲ್ಲನಯ್ಯ ಗುರು । ಗೋವಿಂದ ವಿಠಲಾ ೫

೬೩೩

ಮೋಹನ ಕೃಷ್ಣವಿಠಲ । ಸಲಹ ಬೇಕಿವಳಾ ಪ

ದೇಹ ಮಮತೆಯ ಕಳೆದು । ವೈರಾಗ್ಯವಿತ್ತೂ ಅ.ಪ.

ಕವನರೂಪದಲಿರುವ । ಇವಳ ಪ್ರಾರ್ಥನೆ ಕಂಡು
ಭವ ವನಧಿ ಉತ್ತರಿಪ । ನವಪೋತ ಹರಿಯಾ ।
ಸ್ತವನ ಗೈಯುವ ಭಕ್ತಿ । ಪ್ರವಹ ಕೊಟ್ಟಿವಳಿಗೆ
ಹವಣಿಸೋ ಸಾಧನವ । ಶ್ರೀವರನೆ ಕೃಷ್ಣಾ ೧

ಭಾರತೀ ಪತಿಯಾದ । ಮಾರುತದ ಮತದಲ್ಲಿ
ಸಾರತತ್ವವ ತಿಳಿಸಿ । ತೋರೋ ಸುಜ್ಞಾನ ।
ಮಾರುತಾಂತಾರ್ಗತನೆ । ಧೀರ ಸುಜನರ ಸಂಘ
ಸಾರುವಂತೆಸಗೊ ಹರಿ । ಕಾರುಣ್ಯ ಮೂರ್ತೇ ೨

ಪತಿಸುತರು ಹಿತರಲ್ಲಿ । ವ್ಯಾಪ್ತ ಶ್ರೀ ಹರಿಯೆಂಬ
ಗುಪ್ತ ಮಹಿಮೆಯ ತಿಳಿದು । ಸೇವೆ ಸಲ್ಲಿಸುತಾ ।
ಅತಿಶಯದ ಆನಂದ । ಗತಿಯ ಸೇರುವ ಹವಣೆ
ಕೃತಿಪತಿಯ ತೋರೆಂದು । ಪ್ರಾರ್ಥಿಸುವೆ ಹರಿಯೇ ೩

ಗುರುಕರುಣವಿಲ್ಲದಲೆ । ಹರಿಯೊಲಿಯನೆಂದೆಂಬ
ವರತತ್ವ ಸಾರವನೆ । ಕರುಣಿಸುತ ಹರಿಯೇ ।
ಹರಿಗುರು ಸೇವೆಯನು । ಕರಣತ್ರಯದಲಿ ಮಾಳ್ದ
ವರಮತಿಯ ಪಾಲಿಸುತ । ಪೊರೆಯ ಬೇಕಿವಳಾ ೪

ಸೃಷ್ಟಿ ಸ್ಥಿತಿ ಲಯ ಕರ್ತ । ವಿಷ್ಣು ಲೀಲಾಮೃತವ
ಸುಷ್ಟುಸಂತತ ಸವಿವ । ಶ್ರೇಷ್ಠ ಸಾಧನವಾ
ಕೊಟ್ಟು ಪಾಲಿಪುದೆಂಬ । ಇಷ್ಟವನೆ ಸಲಿಸೆಂದು
ಕೃಷ್ಣ ಗುರು ಗೋವಿಂದ । ವಿಠಲ ಪ್ರಾರ್ಥಿಸುವೇ ೫

೬೩೪

ಯೋಗಿ ಸನ್ನುತ ವಿಠಲ । ಭಾರ್ಗವಿಯ ರಮಣಾ ಪ

ಯೋಗ ಮಾರ್ಗದಲಿ ಹೃ । ದ್ರೋಗ ಹರಿಸಿವಗೇ ಅ.ಪ.

ಮುಗ್ದ ತರಳನು ಇವಗೆ । ದಗ್ಧ ಪಾಪವ ಮಾಡಿ
ಮದ್ವ ಸಿದ್ಧಾಂತಗಳ । ಪಥತಿಯ ತಿಳಿಸೋ ।
ಕೃದ್ಧಖಳ ದುರ್ಯೋಗ । ವದ್ದು ಕಳೆದೂರಕ್ಕೆ
ಬುದ್ಧಿ ಜನ ಸಂಯೋಗ । ಬದ್ಧವಾಗಲಿ ಇವಗೇ ೧

ಚಿತ್ರ ಚಾರಿತ್ರ ವೈ । ಚಿತ್ರ ಈ ತೋಕನಿಹ
ಚಿತ್ತದಲಿ ಉದ್ವೇಗ । ಸತ್ತರ್ಕದಲಿ ತಿದ್ದಿ
ಉತ್ತಮನ ಮಾಡೆಂದು । ಚಿತ್ತ ಜನ ಪಿತ ನಿನ್ನ
ವತ್ತಿ ಪ್ರಾರ್ಥಿಪೆನಯ್ಯ । ನಿತ್ಯ ಮಂಗಳನೇ ೨

ಭಾವಿ ಬೊಮ್ಮರು ಹಾಗು । ಭಾವಿ ಮರುತರ ಕರುಣ
ಭಾವುಕಗೆ ಇರುವುದನು । ಭಾವಿತವು ಅವಗೇ
ಭಾವ ಉದ್ರೇಕ ಸ । ದ್ಭಾವ ಭಾವಿತ ನನ್ನ
ನೀವೊಲಿದು ಕಾಯೊ । ಕೃಪಾವಲೋಕನದಿ ೩

ಹರಿ ನಿನ್ನ ವಾರ್ತೆಯಲಿ । ಇರಲಿ ರತಿ ಇವಗಿನ್ನು
ಗುರು ಹಿರಿಯರಾ ಸೇವೆ । ಪರಮ ಭಕುತಿಂದಾ
ವಿರಚಿಸುವ ಸೌಭಾಗ್ಯ । ಕರುಣಿಪುದೊ ಶ್ರೀ ಹರಿಯೆ
ಮರುತಾಂತರಾತ್ಮ ತವ । ಸ್ಮರಣೆ ಸುಖ ಕೊಡುತಾ ೪

ನಾಗಕಟಿಸೂತ್ರ ಪಿತಾ । ನಾಗ ಭೂಷಣ ವಂದ್ಯ
ನಾಗಾರಿ ವರವಹನ । ನಾಗಮದ ಹಾರೀ ।
ಯೋಗದಿಂದಿವನ ಭವ । ರೋಗವನೆ ಪರಿಹರಿಸೋ
ನಾಗೇಶ ಶಯ್ಯ ಗುರು ಗೋವಿಂದ ವಿಠಲಾ ೫

೬೩೫

ಯತಿ ಸನ್ನುತ ವಿಠಲಾ । ಹಿತದಿ ಪೊರೆ ಇವಳಾ ಪ

ಮತಿವಂತಳೆಂದೆನಿಸಿ । ಅತಿಶಯದಿ ಹರಿಯೇ ಅ.ಪ.

ಹರಿ ಗುರು ಸದ್ಭಕ್ತಿ । ನಿರುತ ಹಿರಿಯರ ಸೇವೆ
ಗೆರಗಲೀಕೆಯ ಮನಸು । ಪರಮ ಪೂರುಷನೇ ।
ಪರಮಾತ್ಮ ಪರತತ್ವ । ದರಿವು ಆಗುತ ಭವದ
ಪರಿಹರಕೆ ಮಾರ್ಗವನೆ । ತೋರೋ ಗುಣಪೂರ್ಣ ೧

ಮರುತ ಮತ ಪ್ರಕ್ರಿಯವ । ನರುಹಿ ಪೊರೆವುದು ಇವಳಾ
ದುರಿತ ಗಜ ಪಂಚಾಸ್ಯ । ಪರಮ ದಯ ಪೂರ್ಣ
ಹರಿನಾಮ ನಿರುತದಲಿ । ಸ್ಮರಿಪ ಸೌಭಾಗ್ಯವನು
ಕರುಣಿಸುತ ಪೊರೆ ಇವಳಾ । ಮರುತಾಂತರಾತ್ಮ ೨

ದೇವ ದೇವೇಶ ತವ । ಭವ್ಯ ರೂಪವ ಮನದಿ
ಭಾವಿಸುವ ಪರಿ ಮಾಡೊ । ಶ್ರೀವರನೆ ದೇವಾ
ಗೋವುಗಳ ಪಾಲ ಗುರು । ಗೋವಿಂದ ವಿಠಲನೆ
ಪಾವಿನಾಮದ ಹರ್ತ । ಪರಿ ಪೋಷಿಸಿವಳಾ ೩

೬೩೬

ರುಕ್ಮಿಣೀಶ ವಿಠಲ । ಕಾಪಾಡೊ ಇವನಾ ಪ

ವಿಖನ ಸಾಂಡದ ದೊರೆಯೆ । ಅಖಳಂಕ ಮಹಿಮಾ ಅ.ಪ.

ಸುಪಥದಲಿ ನಡೆವಂತ । ನಿಪುಣತರ ನಿವನೀಗೆ
ಉಪದೇಶವಿತ್ತಿಹೆನೊ । ಅಪವರ್ಗದಾತಾ ।
ಕೃಪಣ ವತ್ಸಲ ನಿನ್ನ । ಕೃಪೆ ದೃಷ್ಟಿಯಲಿ ನೋಡಿ
ಅಪೇಕ್ಷಿತವನಿತ್ತು । ನೀ ಪೋಷಿಸಿವನಾ ೧

ಜ್ಞಾನವಿಜ್ಞಾನದಲಿ । ನೀನಿರುವ ತತ್ವವನು
ನೀನಾಗಿ ತಿಳಿಸುತ್ತ । ಕಾಪಾಡೊ ಹರಿಯೇ ।
ಶ್ರೀನಿವಾಸನೆ ದಯಾ । ಪೂರ್ಣ ನೀನಾಗುತ್ತ
ಜ್ಞಾನಭಕ್ತಿಯನಿತ್ತು । ಕಾಪಾಡೊ ಹರಿಯೆ ೨

ಎಲ್ಲೆಲ್ಲು ನೀನಿರುವೆ । ಸೊಲ್ಲನ್ನು ಅನುಭವಕೆ
ಉಲ್ಲಾಸದಲಿ ಇತ್ತು । ಬಿಲ್ಲಾಳು ಎನಿಸೋ
ಬಲ್ಲಿದರ ಕೂಟದಲಿ । ಬಿಲ್ಲಿ ನಂತರಿಸುತ್ತ
ಮಲ್ಲಮರ್ದನಕೃಷ್ಣ । ಕಾಪಾಡೊ ಇವನ ೩

ಸತಿಸುತರು ಹಿತರಲ್ಲಿ । ವ್ಯಾಪ್ತ ನೀನೆಂದೆಂಬ
ಮತಿಯನೇ ಕರುಣಿಸುತ । ಅತಿಶಯವ ತೋರೀ
ಮತಿಮತಾಂವರರಂಘ್ರಿ । ರತಿಯನ್ನೆ ಕರುಣಿಸುತ
ಮತಿವಂತ ನೆನಸಿವನ । ಮಾರುತನ ಮತದೀ ೪

ದೇವತವ ಮಹಿಮೆಗಳು । ಭಾವದಲಿ ಪೊಳೆಯಲ್ಕೆ
ಕೋವಿದರ ಸಂಗವನು । ನೀ ವೊಲಿದು ಈಯೋ ।
ನೀ ವೊಲಿಯದಿನ್ನಿಲ್ಲ । ಗೋವುಗಳ ಪರಿಪಾಲ
ದೇವ ದೇವೇಶ ಗುರು । ಗೋವಿಂದ ವಿಠಲಾ ೫

೬೩೭

ರಾಘವ ಹರಿ ವಿಠಲ । ಕಾಪಾಡೊ ಇವಳಾ ಪ

ಅಘದೂರ ಶ್ರೀ ಹರಿಯೇ । ಪಾಪಘಗಳ ಕಳೆದೂ ಅ.ಪ.

ಮುಕ್ತಿಗೇ ಸೋಪಾನ । ತಾರತಮ್ಯ ಜ್ಞಾನ
ಮತ್ತೈದು ಭೇದಗಳ । ಅರಿವನೆ ಇತ್ತೂ
ಪ್ರತ್ಯಹರ ತವನಾಮ । ಚಿತ್ತದಲಿ ನೆನೆವಂಥ
ಉತ್ತಮದ ಸಂಸ್ಕೃತಿಯ । ಕೊಟ್ಟು ಕಾಪಾಡೋ ೧

ಸುಪ್ತೀಶ ತೋರ್ದ ಪರಿ । ಇತ್ತಿಹೆನೊ ಅಂಕಿತವ
ಚಿತ್ತದೊಲ್ಲಭ ಹರಿಯೆ । ಕರ್ತೃ ಕರ್ಮದಲೀ
ವ್ಯಾಪ್ತ ನೀನಾಗಿದ್ದು । ಸತ್ಸಾಧನೆಯ ಗೈಸೀ
ಎತ್ತು ಭವದಿಂದಿವಳ । ಉತ್ತಮೋತ್ತಮನೆ ೨

ಇತ್ತು ವೈರಾಗ್ಯವನು । ಮತ್ತೆ ಜ್ಞಾನ ಸಂಪದ
ಇತ್ತು ಕಾಪಾಡಿವಳ । ಕರ್ತೃ ರಾಮಚಂದ್ರಾ ।
ಉಕ್ತಿ ಎನ್ನದು ಇದೂ । ಮತ್ತನ್ಯ ನಾನೊಲ್ಲೆ
ಮುಕ್ತಿ ದಾಯಕ ಗುರೂ । ಗೋವಿಂದ ವಿಠಲಾ ೩

೬೩೮

ರಾಘವೇಂದ್ರ ವಿಠಲ । ಪೊರೆಯ ಬೇಕಿವನ ಪ

ಯೋಗಿಯನೆಗೈಯುತ್ತ । ಯೋಗಮಾರ್ಗದಲಿ ಅ.ಪ.

ಬುದ್ಧಿ ಪೂರ್ವಕನಾಗಿ । ಮಧ್ವ ಮತ ಪೊಂದಿಹನು
ಶ್ರದ್ಧೆಯಿಂ ಸೇವಿಸುವ । ಶುದ್ಧ ಪರಿವಾರ
ಪೊದ್ದಿಹಗೆ ಸಾಧನದ । ಅಧ್ಯಾನ ತೋರುತಲಿ
ಉದ್ಧರಿಸ ಬೇಕಯ್ಯ । ಶ್ರದ್ಧೆ ಪತಿ ಪ್ರಿಯನೇ ೧

ಉತ್ತಮ ಸುಸಂಸ್ಕತಿಯ । ಪೊತ್ತು ಶ್ರಮಿಸುತ್ತಿಹಗೆ
ಭಕ್ತಿ ಜ್ಞಾನಗಳನ್ನೆ । ಇತ್ತಿವನ ಸಲಹೋ ।
ಕರ್ತ ನೀನೆಂಬಮತಿ । ವ್ಯಕ್ತಿಗೈ ಇವನಲ್ಲಿ
ಭಕ್ತಪರಿಪಾಲಕನೆ । ಅವ್ಯಕ್ತಮಹಿಮಾ ೨

ಕರ್ಮಾಕರ್ಮಗಳ । ಮರ್ಮಗಳ ತಿಳಿಸುತ್ತ
ಭರ್ಮಗರ್ಭನ ಪಿತನೆ । ಪೇರ್ಮೆಯಲಿ ಪೊರೆಯೋ
ಕರ್ಮಗಳ ಮಾಳ್ಪಲ್ಲಿ । ನಿರ್ಮಮತೆ ನೀಡಯ್ಯ
ನಿರ್ಮಲಾತ್ಮನೆ ಹರಿಯೆ । ಧರ್ಮಗಳ ಗೋಪ್ತಾ ೩

ಜ್ಞಾನಾಯುರೂಪಕನು । ಪ್ರಾಣಾಂತರಾತ್ಮ ಹರಿ
ಜ್ಞಾನ ಜ್ಞೇಯ ಜ್ಞಾತೃ । ನೀನೇವೆ ಎಂಬಾ
ಜ್ಞಾನಾನು ಸಂಧಾನ । ನೀನಾಗಿ ಈಯುತ್ತ
ಮಾನಮೇಯದ ಸಾರ । ಉಣಿಸಿವಗೆ ಹರಿಯೆ ೪

ಸರ್ವಜ್ಞ ಸರ್ವೇಶ । ಸರ್ವವ್ಯಾಪ್ತನೆ ದೇವ
ಸರ್ವ ಪ್ರೇರಕ ಹರಿಯೆ । ಸರ್ವಾಂತರಾತ್ಮಾ
ದುರ್ನಿಭಾವ್ಯನೆ ಗುರು । ಗೋವಿಂದ ವಿಠಲನೆ
ದರ್ವಿ ಜೀವಿಯ ಪೊರೆಯೆ । ಬಿನ್ನವಿಪೆ ಹರಿಯೇ ೫

೬೩೯

ರಾಘವೇಂದ್ರ ಹರಿ ವಿಠಲ । ಕಾಪಾಡೊ ಇವಳಾ ಪ

ಭೋಗಿ ಶಯನನೆ ಹರಿಯೆ । ನಾಗಾರಿವಾಹಾ ಅ.ಪ.

ಮಂತ್ರಮಂದಿರ ಧೊರೆಯ ಅಂತರಂಗದಿ ಭಜಿಪ
ಸತತದಿ ವಿಜಯಾರ್ಯ । ಚಿಂತೆಯಲ್ಲಿಹಳಾ ।
ಅಯೆ ಸತ್ಸುಕೃತದಿಂ ಹರಿದಾಸ್ಯ ಕಾಂಕ್ಷಿಪಳ
ಮಾತೆ ಕೈ ಪಿಡಿ ಹರಿಯೇ । ಸಂತರುದ್ಧರಣಾ ೧

ಭಾವದಲಿ ತವ ಮಹಿಮೆ । ಸ್ತವನಗೈಯ್ಯುವ ಕಾರ್ಯ
ದಿವಸ ದಿವಸದಿ ವೃದ್ಧಿ । ಭಾವವನೆ ಪೊಂದೀ
ಕವನ ರೂಪದಿ ಪ್ರವಹ । ಭುವಿಯೊಳಗೆ ಹರಿವಂತೆ
ಹವಣಿಸೋ ಶ್ರೀಹರಿಯೇ । ಪವನ ವಂದಿತನೆ ೨

ಹರಿಗುರೂ ಸದ್ಭಕ್ತಿ । ವರಜ್ಞಾನ ವೈರಾಗ್ಯ
ಕರುಣಿಸುತ ಪೊರೆಯಿವಳ । ಮರುತಾಂತರಾತ್ಮ
ದೊರಕಿಸುತ ಸತ್ಸಂಗ । ಪರಮ ಸಾಧನಗೈಸಿ
ಪರಿಹರಿಸೊ ಭವ ಭಂಗ । ಕಾರುಣ್ಯಪಾಂಗ ೩

ಗಾನ ಕಲೆಯನ ಧರಿಸಿ । ಕ್ಷೋಣಿಶಿ ನಿನಕಾಂಬ
ಶಾಣತನ ಇತ್ತಿವಳ । ಉದ್ಧರಿಸೊ ಹರಿಯೇ ।
ಮೌನಿ ವರದನೆ ಹೃದಯ । ಗಹ್ವರದಿ ತವರೂಪ
ಕಾಣಿಸುತ ಭವ ಶರಧಿ । ದಾಟಿಸೋ ಹರಿಯೇ ೪

ಕೈವಲ್ಯಪ್ರದ ಪುರುಷ । ದೇವದೇವೇಶ ಹರಿ
ಗೊವತ್ಸನದಿಗಾವು । ಧಾವಿಸುವ ತೆರದೀ
ನೀವೊಲಿಯು ತಿವಳಿಗೆ । ಭಾವದಲಿ ಮೈದೋರೊ
ಭಾವಜನಯ್ಯ ಗುರು । ಗೋವಿಂದ ವಿಠಲಾ ೫

೬೪೦

ರಘುಕುಲ ತಿಲಕ ವಿಠಲ ಇವಳ ಘಾವಳಿಗಳನು
ಬಗೆಹರಿಸಿ ಕಾಪಾಡ ಬೇಕೋ ಹರಿಯೇ ಪ

ಭೃಗುವರದ ನಿನ್ನಂಘ್ರಿ ಸೇವೆಯಲಿ ಮಹಭಕ್ತಿ
ಮಿಗೆ ಜ್ಞಾನ ಕೊಟ್ಟಿವಳ ಕಾಪಾಡ ಬೇಕೋ ಅ.ಪ.

ಶಬರಿ ಎಂಜಲನುಂಡ । ಕಾರುಣ್ಯ ಮೂರುತಿಯೆ
ಅಭಯದನು ನೀನಾಗಿ ವಂಶ ಉದ್ಧರಿಸೋ ।
ಕುಭವ ಪರಿಹರಕಾಗಿ ಸಾಧನವು ಎಂದೆನಿಪ
ಶುಭ ಸದಾಗತಿ ಮತದಿ ದೀಕ್ಷೆಯನೆ ಈಯೋ ೧

ಆದಿವಿರಹಿತ ಕಾಮ ಕರ್ಮಾದ್ಯ ವಿದ್ಯೆಗಳ
ನೀದಯದಿ ಪರಿಹರಿಸೊ ರಾಮಚಂದ್ರಾ ।
ವೇದವೇದ್ಯನೆ ನಿನ್ನ ಪಾದ ಸೇವಕಳೀಗೆ
ಭೇದ ಪಂಚಕ ತಿಳಿಸಿ ಸಾಧನವಗೈಸೋ ೨

ಸರ್ವಜ್ಞ ಸರ್ವೇಶ ಹಯಮೊಗಾತ್ಮಕನಾದ
ಸರ್ವ ಸುಂದರ ಗುರುಗೋವಿಂದ ವಿಠಲ ।
ಸರ್ವದಾ ಸರ್ವತ್ರ ನಿನ್ನ ಸ್ಮೃತಿಯನೆ ಕೊಟ್ಟು
ದರ್ವಿಜೀವಿಯ ಸಲಹೆ ಬಿನ್ನವಿಪೆ ನಿನಗೇ ೩

೬೪೧

ರಾಮಕೃಷ್ಣವಿಠಲ । ಪೊರೆಯ ಬೇಕಿವಳಾ ಪ

ಸಾಮ ಸನ್ನುತ ಹರಿಯೆ । ಪ್ರಾರ್ಥಿಸುವೆ ಧೊರೆಯೇ ಅ.ಪ.

ಮೋದ ತೀರ್ಥರ ಮತದಿ । ಉದುಭವಿಸಿ ಇರುತಿರ್ಪ
ಸಾಧು ಕನ್ನಿಕೆ ಇವಳಾ । ವೇದಾಂತ ವೇದ್ಯಾ ।
ಮೋದದಾಯಕನಾಗಿ । ಶ್ರೀಧರನೆ ತರತಮವ
ಭೇಧ ಪಂಚಕ ತಿಳಿಸಿ । ಕಾದುಕೋ ಬಿಡದೆ ೧

ಅಹಿಕ ಪಾರತ್ರಿಕದಿ । ಬಹುಸಖ್ಯಗಳ ಕೊಟ್ಟು
ಮಹಿತ ನಿನ್ನಯ ನಾಮ । ರೂಪಕ್ರಿಯ ಗುತಾಮ

ವಿಹಿತ ಮಾರ್ಗದಿ ತುತಿಸಿ । ತವಚರಣಕರ್ಪಿಸುವ
ಮಹಭಾಗ್ಯ ಇವಳೀಗೆ । ಓದಗಿಸೋ ಹರಿಯೇ ೨

ಅಡಿಗಡಿಗೆ ಬರುತಿರ್ಪ । ಕಡುವಿಘ್ನ ಪರಿಹರಿಸೊ
ಕಡುದಯಾ ಪರಿಪೂರ್ಣ । ಕರಿವರದ ಕೃಷ್ಣಾ
ಬಡವಿಪ್ರಗೊಲಿದಂತೆ । ಭಕುತ ಜನ ಪರಿಪಾಲ
ಪಿಡಿಯುವುದು ಕೈ ಇವಳ । ಬಾಲ ಗೋಪಾಲ ೩

ಕಲಿಯುಗದಿ ಸಾಧನವು । ಬಲುಕಷ್ಟವೆನಿಸಿಹುದು
ಕಲಿಮಲಾಪಹಗಂಗೆ । ಪಿತನ ಚರಣಾಬ್ಜಾ
ಓಲುಮೆಯಿಂ ಭಜಿಪರ್ಗೆ । ಭವಭಂಧ ಪರಿಹಾರ
ಅಳವಡಿಸೊ ಇವಳೀಗೆ । ತವನಾಮಕವಚಾ ೪

ಕೋವಿದರ ಪರಿಪಾಲ । ಪಾವಮಾನಿಯ ಪ್ರೀಯ
ನೋವು ಸುಖ ದ್ವಂದ್ವಗಳ । ಸಮತೆಯಲಿಯುಂಬಾ
ಭಾವವನೆ ಕರುಣಿಸುತ । ಭವವ ನುತ್ತರಿಸೆಂದು
ದೇವ ಗುರು ಗೋವಿಂದ । ವಿಠಲ ಪ್ರಾರ್ಥಿಸುವೇ ೫

೬೪೨

ರಾಮಚಂದ್ರವಿಠ್ಠಲನೆ ನೀನಿವನ
ಕಾಮಿತಾರ್ಥಗಳಿತ್ತು ಕಾಪಾಡೊ ಹರಿಯೇ ಪ

ಭೂಮಿಜೆಯ ರಮಣ ಸುರಸಾರ್ವಭೌಮನೆ ದೇವ
ಪ್ರೇಮ ಈಕ್ಷಣದಿಂದ ನೋಡೊ ದಯಾಸಾಂದ್ರ ಅ.ಪ.

ಗುರುದ್ವಾರವಿಲ್ಲದಲೆ । ಗರುಡವಾಹನ ಕರುಣ
ದೊರಕಲಾರದು ಎಂಬ । ಸ್ಥಿರಮತಿಯನಿತ್ತೂ
ಗುರುಭಕ್ತಿ ಹರಿ ಭಕ್ತಿ । ಕರುಣಿಸುತ ವೈರಾಗ್ಯ
ಸ್ಥಿರಮಾಡಿ ಪಾಲಿಪುದು । ತರತಮದ ಜ್ಞಾನಾ ೧

ಲೌಕಿಕಗಳೆಲ್ಲ ವೈದೀಕವೆನಿಸುತಲಿನ್ನು
ನಾಕನದಿ ಜನಕ ನಿನ್ನಾನೇಕ ಮಹಿಮೆಗಳಾ
ತೋಕನಿವನಿಗೆ ತೋರಿ ಮೈನಾಕಿ ಪತಿ ಪ್ರೀಯ
ಪ್ರಾಕ್ಕುಕರ್ಮವ ಕಳೆದು ಕಾಪಾಡಬೇಕೋ ೨

ಮಧ್ವಮತ ಸಿದ್ಧಾಂತ ಪದ್ಧತಿಯ ತಿಳಿಸುತ್ತ
ಬುದ್ಧಿಪೂರ್ವಕ ನಿನ್ನ ಗುಣರೂಪ ಕ್ರಿಯೆಗಳಾ
ಶ್ರದ್ಧೆಯಿಂದಲಿ ಭಜಿಪ ಸದ್ಬುದ್ಧಿ ಪಾಲಿಸುತ
ಮಧ್ವೇಶ ಇವನ ಹೃನ್ಮಧ್ಯದಲಿ ಪೊಳೆಯೋ ೩

ಶರ್ವಾದಿ ದಿವಿಜೇಡ್ಯ ದುರ್ವಿಭಾವ್ಯನೆ ದೇವ
ಸರ್ವತ್ರ ಸರ್ವದಾ ತವಸ್ಮೃತಿಯನಿತ್ತೂ
ನಿರ್ವಿಘ್ನತೆಯಲಿವನ ಸಾಧನವ ಪೂರೈಸಿ
ಅಸ್ವತಂತ್ರನ ಬಂಧ ಪರಿಹರಿಸಿ ಕಾಯೋ ೪

ಭಕ್ತವತ್ಸಲನೆಂಬೊ ಬಿರಿದುಳ್ಳ ಶ್ರೀಹರಿಯೆ
ಭೃತ್ಯನಿಗೆ ಬಪ್ಪ ಅಪಮೃತ್ಯು ಪರಿಹರಿಸೀ
ಸತ್ಯ ಗುರು ಗೋವಿಂದ ವಿಠ್ಠಲನೆ ನೀನಿವಗೆ
ನಿತ್ಯಾಯು ಪ್ರದನಾಗು ಎಂದು ಪ್ರಾರ್ಥಿಸುವೆ ೫

೬೪೩

ರಾಮಚಂದ್ರ ಹರಿ ವಿಠಲ । ನೀನಿವನ ಸಲಹೋ ಪ

ಪ್ರೇಮದಲಿ ಕರ ಪಿಡಿದು । ಕಾಮಿತವನಿತ್ತು ಅ.ಪ.

ನರಹರಿಯೆ ತವದಾಸ್ಯ । ಕರುಣದಲಿ ನೀ ಕೊಟ್ಟು
ಭರದಿ ಕರ ಪಿಡಿಯಯ್ಯ । ಪ್ರಹ್ಲಾದ ವರದಾ
ಮರುತ ಮತ ದೀಕ್ಷೆಯಲಿ । ದೃಢವಾದ ಮತಿಯಿತ್ತು
ವರಗಳನೆ ನೀಡುವುದು । ಮರುತಾಂತರಾತ್ಮಾ ೧

ತಾರತಮ್ಯವ ತಿಳಿಸೊ । ಪಂಚ ಭೇಧವ ತಿಳಿಸೋ
ಕಾರ್ಯ ಕಾರಣ ನೀನೇ । ಬೇಡುವೆನು ನಿನ್ನಾ
ಹರಿಯು ಸರ್ವೋತ್ತಮನು । ಮರುತ ಜೀವೋತ್ತಮನು
ನಿರುತ ನೀ ಸುಜ್ಞಾನ । ಅರಿವನೀಯುತ ಸ್ವಾಮೀ ೨

ನಾನು ನನ್ನದು ಎಂಬ । ಸಂಸ್ಕಾರವನೆ ಕಳೆದು
ನೀನು ನೀನೇ ಎಂಬ । ಉಪಾಯ ಒಲಿಸೇ
ಕಾಣಿಸೋ ಹೃದ್ಗುಹದಿ । ಗಾನಲೋಲನೆ ದೇವ
ಕೊನೇರಿ ವಾಸ ಹರಿ । ಪ್ರಾರ್ಥಿಸುವೆ ನಿನ್ನಾ ೩

ಶ್ರದ್ಧೆ ಪತಿ ಸನ್ನುತನೆ । ಬುದ್ಧಿಯೊಳು ನೆಲಸಿದ್ದು
ಅದ್ವೈತ ತ್ರಯದರಿವ । ನಿಲುಕಿಸೋ ಇವಗೇ
ಸಾಧ್ಯಸಾಧನವಾಗಿ । ಸಾಧನವಗೈಸುತ್ತ
ಉದ್ಧಾರ ಮಾಡುವುದೊ । ಸಿರಿ ಜಾನಕೀ ಪತಿಯೇ ೪

ಕರವ ಪಿಡಿದಾದರಿಸೊ । ಎನ್ನ ನಿಜ ಸ್ವಪ್ನದಲಿ
ತರಳ ಸುಂದರಿನಾಥ । ಗುರುವಿಗೊಪ್ಪಿಸಿಹನೋ
ಹರಿಯೆ ನೀನಿವನ ಕರ । ಪಿಡಿದು ಉದ್ಧರಿಸುತಲಿ
ಪೊರೆಯೊ ಗುರು ಗೋವಿಂದ । ವಿಠಲ ಕಾರುಣ್ಯ ೫

೬೪೪

ರಮಾ ನಿವಾಸ ವಿಠಲ । ಪೊರೆಯ ಬೇಕಿವಳಾ ಪ

ಮಮಕಾರಗಳ ಕಳೆದು । ಹರಿಸೊ ಭವ ತಾಪ ಅ.ಪ.

ಪತಿಸುತರು ಹಿತರಲ್ಲಿ । ವ್ಯಾಪ್ತ ನಿನ್ನಯ ರೂಪ
ಸತತ ಚಿಂತಿಸುವಂಥ । ಮತಿಯನ್ನೆ ಇತ್ತೂ ।
ಮತಿಮತಾಂವರರಂಘ್ರಿ । ಶತ ಪತ್ರ ಭಜಿಪಂಥ
ಹಿತ ಸೇವೆ ಕರುಣಿಸುತ । ಕಾಪಾಡೊ ಹರಿಯೇ ೧

ಮಂಗಳಾಂಗನೆ ದೇವ । ಶೃಂಗಾರ ಮೂರುತಿಯೆ
ಅಂಗನೆಯಭೀಷ್ಟಗಳ । ಸಂಘಟನೆ ಮಾಡೀ ।
ಭಂಗ ಬಡಿಸುವ ರೋಗ । ಅಂಗಾಂಗ ಕಳೆದು
ಪದ ಭೃಂಗ ವೆಂದೆನಿಸೊ ಹರಿ । ರಂಗ ಭವ ಹಾರಿ ೨

ಹರಿಯೇ ಸರ್ವೋತ್ತಮನು । ಮರುತ ಜೀವೋತ್ತಮನು
ವರ ಪಂಚ ಬೇಧಗಳು । ತರತಮವು ಸತ್ಯಾ
ಇರುವುದೆಂಬರಿವಿತ್ತು । ಸಾಧನವಗೈಸುವುದು
ಗರುಡ ವಾಹನ ಗುರೂ । ಗೋವಿಂದ ವಿಠಲಾ ೩

೬೪೫

ರಮಾವಿನುತ ವಿಠಲ ಪೊರೆಯಬೇಕೊ ಇವಳ ಪ

ಕ್ರಮಾನುಸಾರ ತವದಾಸ್ಯ ಕಾಂಕ್ಷಿಪಳ ಅ.ಪ.

ಪತಿಸುತರು ಹಿತರಲ್ಲಿ ವ್ಯತಿರೇಕ ಮತಿ ಕೊಡದೆ
ಅತುಳ ಪ್ರೀತಿಯಲಿ ಅವರಂತರಾತ್ಮಕನಾ ।
ಹಿತ ಸೇವೆಯೆಂಬ ಸನ್ಮತಿಯನೇ ಕರುಣಿಸುತ
ಕೃತ ಕಾರ್ಯಳೆಂದೆನಿಸೊ ಕ್ಷಿತಿರಮಣ ಹರಿಯೇ ೧

ಭವಶರಧಿ ದಾಟಿಸುವ ಪ್ಲವವೆನಿಪ ತವನಾಮ
ಸ್ತವನಗಳ ಸರ್ವತ್ರ ಸರ್ವಕಾರ್ಯದಲಿ
ಹವಣಿಸುತ ನೀನಾಗಿ ಪ್ರವರ ಸಾಧನಗೈಸೊ
ಪವಮಾನ ಸನ್ನಿಹಿತ ಭುವನ ಮೋಹನನೇ ೨

ಪ್ರಾಚೀನ ಕರ್ಮಗಳ ಯೋಚಿಸಲು ಎನ್ನಳವೇ
ಕೀಚಕಾರಿಪ್ರಿಯ ಮೋಚಕೇಚ್ಛೆಯನು
ಸೂಚಿಸುವುದೋ ಸವ್ಯಸಾಚಿಸಖ ಶ್ರೀಹರಿಯೆ
ನೀಚೋಚ್ಚ ತರತಮವ ತಿಳಿಸಿ ಪೊರೆ ಇವಳಾ ೩

ನಂದ ಗೋಪನ ಕಂದ ಇಂದಿರೇಶನೆ ಹೃದಯ
ಮಂದಿರದಿ ತವರೂಪ ಸಂದರುಶನಾ ।
ನಂದವನೆ ಇತ್ತಿವಳ ಅಂದದಲಿ ಸಲಹೆಂದು
ಕಂದರ್ಪಪಿತ ನಿನ್ನ ವಂದಿಸುತ ಬೇಡ್ವೆ ೪

ಶ್ರದ್ಧೆಯಿಂದಲಿ ಗುರು ಸೇವೆಯನೆ ಗೈವಂಥ
ಶುದ್ಧ ಭಕ್ತಿ ಜ್ಞಾನ ವೃದ್ಧಿಯನೆಗೈಸೀ
ಉದ್ಧರಿಸೆ ಇವಳ ಅನಿರುದ್ಧ ರೂಪಾತ್ಮ
ಮಧ್ವಗುರು ಗೋವಿಂದ ವಿಠಲ ಪ್ರಾರ್ಥಿಸುವೆ ೫

೬೪೬

ರಾಧಾರಮಣ ವಿಠಲ ನೀನಿವಳ
ಸಾದರದಿ ಕಾಪಾಡೊ ಹರಿಯೇ ಪ

ವೇದವೇದ್ಯನೆ ಪೂರ್ಣ ಬೋಧಸನ್ನುತ ನಿನ್ನ
ಪಾದ ಭಜಕಳ ಬಿಡದೆ ಕಾಪಾಡೊ ಹರಿಯೇ ಅ.ಪ.

ದಾಸದೀಕ್ಷೆಯಲಿ ಅಭಿಲಾಷೆ ಪೊಂದಿಹಳಿವಳು
ಶ್ರೀತ ತವ ಪಾದಾಬ್ಜ ದಾಸ್ಯವನೆ ಇತ್ತೂ
ನೀಸಲಹೊ ಸುಜ್ಞಾನ ಭಕುತಿ ಭಾಗ್ಯವನಿತ್ತು
ಶೇಷಾದಿ ದಿವಿಜೇಡ್ಯ ವಾಸುದೇವಾಖ್ಯಾ ೧

ಭಕ್ತವತ್ಸಲ ಕೃಷ್ಣ ಇತ್ತು ಸಕಲಾಭೀಷ್ಟ
ಭೃತ್ಯಳನು ಸಂತೈಸು ನಿತ್ಯ ಮಂಗಳ ಮೂರ್ತೇ
ಸತ್ಯಭಾಮಾ ಪತಿಯೆ ಪ್ರತ್ಯಹರ ನಿನ್ನ ಸ್ಮೃತಿ
ಇತ್ತು ಪಾಲಿಸು ಎಂದು ಪ್ರಾರ್ಥಿಸುವೆ ನಿನ್ನಾ ೨

ಗೋಪ ಗೋಪಿಯ ಪತಿಯೆ ಗೋಪಾಲಸಿರಿಕೃಷ್ಣ
ದ್ರೌಪದಿಯ ಪರಿಪಾಲ ಸರ್ವಾಂತರಾತ್ಮ

ಪಾಪಾಟವಿಗೆ ಪವಿ ಆಪನ್ನ ಪರಿಪಾಲ
ಕಾಪಾಡ ಬೇಕಿವಳ ಗೋಪಾಲ ಬಾಲಾ ೩

ಪತಿಯೆ ಪರದೈವವೆಂಬುನ್ನತದ ಮತಿಯಿತ್ತು
ಹಿತದಿಂದ ಮಧ್ವಮತ ತತ್ವಾಮೃತವನುಣಿಸೀ
ಕೃತ ಕಾರ್ಯಳೆಂದೆನಿಸಿ ಹೃತ್ಸರೋಜದಿ ಚರಣ
ಶತ ಪತ್ರ ತೋರಯ್ಯ ಶ್ರುತಿವಿನುತ ಹರಿಯೆ ೪

ಘೋರ ದುರಿತಾಬ್ಧಿಯನು ಪಾರಗೈಸುವ ನಿನ್ನ
ಕಾರುಣ್ಯಕೆಣೆಯುಂಟೆ ನೀರಜಾಕ್ಷಾ
ಚಾರುಗುಣವಂತೆ ಬಾಲೆಯನು ಉದ್ಧರಿಸು
ಮಾರಾರಿ ಸಖ ಗುರು ಗೋವಿಂದ ವಿಠಲಾ ೫

೬೪೭

ರಾಮಾನಂದ ವಿಠಲ । ಪ್ರೇಮದಲಿ ಪೊರೆಯೋ ಪ

ಭಾಮಿನಿಯ ಮೊರೆ ಕೇಳಿ । ಪ್ರಾರ್ಥಿಸುವೆ ಹರಿಯೇ ಅ.ಪ.

ಅನುವಂಶಿಕವಾಗಿ । ಗಾನಕಲೆಯುಳ್ಳವಳು
ಮೇಣು ಸಂಸ್ಕಾರಗಳು । ಹೊಂದಿಕೊಳ್ಳುತಲೀ
ಈ ನಾರಿ ಯಂಕಿತವ । ಕಾಂಕ್ಷಿಸುತ್ತಿಹಳಯ್ಯ
ಶ್ರೀನಿವಾಸನೆ ಇವಳ । ಬಿನ್ನಪವ ಸಲಿಸೋ ೧

ಪತಿಸುತರು ಹಿತರಲ್ಲಿ । ವ್ಯಾಪ್ತ ನೀನೆಂಬ ಸ–
ನ್ಮತಿಯನೇ ಕರುಣಿಸುತ । ಕಾಪಾಡೊ ಹರಿಯೆ
ಗತಶೋಕ ಗತಿಪ್ರದನೆ । ಹತಮಾಡಿ ಗರ್ವಗಳ
ಸ್ಮೃತಿಗೆ ವಿಷಯನು ಆಗಿ । ಸತತ ಪೊರೆ ಇವಳಾ ೨

ಮೋದ ಮುನಿಮತಕೆ ಬು । ನಾದಿ ಎಂದೆನಿಪ ಸ–
ದ್ಭೇದ ಪಂಚಕ ತಿಳಿಸಿ । ಬೋಧಿಸೊ ತರತಮ

ಹೇ ದಯಾ ವಾರಿನಿಧೆ । ಆದಿ ಜಗಕರ್ತನೇ
ಸಾದು ಸಂಗದಿ ಸತತ । ಮೋದ ಕೊಡು ದೇವಾ ೩

ಭವವೆನಿಪ ಅಂಬುಧಿಗೆ । ಪ್ಲವವೆನಿಪ ತವನಾಮ
ಸ್ತವನ ಸಂತತಗೈವ । ಹವಣೆಯಲಿ ವಜ್ರಾ
ಕವಚವನೆ ತೊಡಿಸುತ್ತ । ಭವತಾರ ಕೆಂದಿನಿಸೋ
ಧ್ರುವವರದ ಕರಿವರದ । ಕಾರುಣ್ಯಮೂರ್ತೇ ೪

ಛಲದ ಮುನಿ ಅನುಸರಿಸಿ । ಶಿಲೆಯ ಸತಿಯಳ ಮಾಡಿ
ಜಲಜಾಕ್ಷಿ ಜನಕಜೆಯ । ಕೈಯನೇ ಪಿಡಿದೂ
ಇಳೆಯ ಭಾದಕ ಕಳೆದ । ಚೆಲುವಂಗದವ ಸೂರ್ಯ
ಕುಲ ತಿಲಕನೇ ಗುರು । ಗೋವಿಂದ ವಿಠಲಾ ೫

೬೪೮

ರುದ್ರ ವಂದಿತ ವಿಠಲ । ಪರಿ ಪಾಲಿಸಿವಳಾ ಪ

ಬುದ್ಧಿಯಲಿ ನೆಲಸಿದ್ದು । ವಿದ್ಯೆ ಪಾಲಿಸುತಾ ಅ.ಪ.

ಏಸೊ ಜನ್ಮದ ಪುಣ್ಯಾ । ರಾಶಿವದಗಿತೊ ಕಾಣೆ
ಆಶಿಸುತ್ತಿಹಳಿವಳು । ದಾಸದೀಕ್ಷೆಯನು
ಆಸು ಸ್ವಪ್ನದಲಿ ಕೈ । ಲಾಸ ವಾಸನಿಂದಲಿ
ಲೇಸು ವರ ಪಡೆದಿಹಳು । ಮೇಶ ಮಧ್ವೇಶಾ ೧

ಮಧ್ವ ರಮಣನೆ ಕೇಳೊ । ಮಧ್ವಮತ ಪದ್ಧತಿಯು
ಬುದ್ಧಿಯಲಿ ನಿಲ್ವಪರಿ । ತಿದ್ದಿ ಹೇಳುವುದೋ ।
ಶ್ರದ್ಧೆಯಲಿ ಹರಿ ಗುರೂ । ಶುದ್ಧ ಸೇವೆಲಿ ಭವದ
ಅಬ್ಧಿಯನೆ ದಾಟಿಸೋ । ಸಿದ್ಧ ಮುನಿವಂದ್ಯಾ ೨

ಸುಪ್ತಿಯಲಿ ಗುರು ಸಾರ್ವ । ಭೌಮರಿಂದುಪದೇಶ
ಪೊತ್ತು ಸಂತಸಗೊಂಡು । ತೃಪ್ತಿಯಲ್ಲಿಹಳೋ ।
ಮೃತ್ಯುಂಜಯಾರಾಧ್ಯ । ಕರ್ತೃ ಶ್ರೀ ನರಹರಿಯೆ
ಉತ್ತಮೋತ್ತವ ದೇವ । ನಿತ್ಯ ಮಂಗಳನೇ ೩

ಮಾವಿನೋದಿಯೆ ಹರಿಯೆ । ಕಾವ ಕರುಣೀ ಎಂದು
ಓದಿ ನಿನ್ನಡಿಗಳಿಗೆ । ಧಾವಿಸುತ್ತಿಹೆನೋ ।
ನೀವೊಲಿದು ಕನ್ಯೆಯನು । ಕೈ ಪಿಡಿದು ಪಾಲಿಪುದು
ದೇವ ದೇವೋತ್ತಮನೆ । ಲಕ್ಷ್ಮಿ ನರಹರಿಯೆ ೪

ಲೌಕಿಕದಲಿದ್ದರೂ । ಕಾಕು ಜನಗಳ ಸಂಗ
ನೀ ಕೊಡದೆ ಕಾಯೊ ಹರಿ । ಲೋಕೇಶ ವಂದ್ಯಾ ।
ಲೋಕ ಗುರು ಗೋವಿಂದ । ವಿಠಲ ಮದ್ಭಿನ್ನಪವ
ನೀ ಕೊಟ್ಟು ಕನ್ಯೆಯನು । ಉದ್ಧರಿಸೊ ಹರಿಯೇ ೫

೬೪೯

ರುದ್ರ ಸನ್ನುತ ವಿಠಲ । ಕಾಪಾಡೊ ಇವನಾ ಪ

ಭದ್ರಮೂರುತಿ ದೇವ । ಪ್ರಾರ್ಥಿಸುವೆ ಹರಿಯೇ ಅ.ಪ.

ಸುವಿನೀತ ನಿಹನಿವನು । ಸುವಿವೇಕ ಕೊಟ್ಟಿವಗೆ
ವಿವಿಧ ಭೋಗಗಳಿತ್ತು । ಕಾಪಾಡೊ ಹರಿಯೇ ।
ಅವನಿಸುರರಾ ಸೇವೆ । ಅವಿರತದಿ ದೊರಕಿಸುತ
ಪವನಮತದಲಿ ಚರಿಪ । ಭಾಗ್ಯ ಕರುಣಿಸುತಾ ೧

ತಂದೆ ತಾಯ್ಗಳಸೇವೆ । ಬಂದುರದಿ ಗೈವಂಥ
ಬಂದೆ ಮನವನು ಇತ್ತು । ಕಾಪಾಡೊ ಹರಿಯೇ
ಇಂದಿರಾ ರಮಣ ನೀ । ನಂಘ್ರಿ ಭಕ್ತಿಯನಿತ್ತು
ಛಂದದಲಿ ಸಾಧನವ । ನೀಗೈಸಬೇಕೊ ೨

ಗುರುವಂತರಾತ್ಮ ಗುರು । ಗೋವಿಂದ ವಿಠಲನೆ
ಶರಣು ಬಂದವ ನನ್ನ । ಕೈಯ ಬಿಡದೇ
ತರತಮಜ್ಞಾನಾದಿ । ಅರಿವ ನೀ ಇತ್ತಿವಗೆ
ಕರುಣದಿಂದುದ್ಧರಿಸೆ । ಪ್ರಾರ್ಥಿಸುವೆ ಹರಿಯೇ ೩

೬೫೦

ಲಕ್ಷ್ಮೀಶ ಗೋವಿಂದ ವಿಠಲ ಪೊರೆ ಇವಳಾ ಪ

ಪಕ್ಷ್ಮಗಳು ಅಕ್ಷಿಗಳ ಅಗಲದಿಪ್ಪಂತೇ ಅ.ಪ.

ಕುಕ್ಷಿಯಲಿ ಜಗಧರಿಪ ಪಕ್ಷಿವಾಹನ ದೇವ
ಅಕ್ಷರೇಡ್ಯನೆ ಕರುಣದೀಕ್ಷಿಸುತ ಇವಳ ।
ರಕ್ಷಿಪುದು ಸುಜ್ಞಾನ ಭಕ್ತಿದಾಯಕನಾಗಿ
ಕಕ್ಷೆತರತಮ ಜ್ಞಾನ ಭೇದಪಂಚಕನರುಹಿ ೧

ಪತಿಯೆ ಪರದೈವವೆಂಬುನ್ನತದ ಮತಿಯಿತ್ತು
ಪಥತೋರೊ ಸದ್ಗತಿಗೆ ಸರ್ವವ್ಯಾಪಕನೇ ।
ಹಿತದಿಂದ ಬಯಸುವಳು ತವಪಾದ ದಾಸ್ಯವನು
ಕೃತಿ ಪತಿಯೆ ನೀನಿತ್ತು ಸಲಹ ಬೇಕಿವಳಾ ೨

ಅಪರೋಕ್ಷ ಮಾನಿ ಎನೆ ವಾಗ್ದೇವಿ ಪತಿ ಪ್ರೀಯ
ಕೃಪೆಗೈದು । ತವಪಾದ ಹೃದುಹದಿ ನೋಳ್ಪ ।
ಸುಪಥವೆನೆ ಹರಿಗುರೂ ಸದ್ಭಕ್ತಿ ಕರುಣಿಪುದು
ವಿಪಗಮನ ಹಯವದನ ಶ್ರೀ ಲಕ್ಷ್ಮೀ ಸದನಾ ೩

ಅಂಕಿತಿಲ್ಲದ ದೇಹ ಸಾಧನಕೆ ಸಲ್ಲದೆನೆ
ಅಂಕಿತವ ವಿತ್ತಿಹೆನು ಗುರುಕರುಣದೀ ।
ನಿಂತು ನೀನಿವಳಲ್ಲಿ ತೋರು ತವ ಮಹಿಮೆಗಳ
ಸಂತತದಿ ನಿನ್ನಂಘ್ರಿ ಸ್ಮರಣೆ ಕರುಣಿಸುತ ೪

ಸರ್ವ ಶ್ರುತಿ ಸಮ್ಮತದ ಪವನಮತ ದೀಕ್ಷೆಯನು
ಸರ್ವ ಕಾರ್ಯದಿ ನಿನ್ನ ಸೇವೆ ಮತಿಯ ।
ಸರ್ವದಾ ಕರುಣಿಸುತ ಪೊರೆ ಎಂದು ಭಿನ್ನೈಪೆ
ಪವನಾಂತರಾತ್ಮ ಗುರು ಗೋವಿಂದ ವಿಠಲಾ ೫

೬೫೧

ಲಕ್ಷ್ಮಿ ನರಹರಿ ವಿಠಲ । ರಕ್ಷಿಸೋ ಇವಳ ಪ

ತ್ರ್ಯಕ್ಷ ಬಿಂಬನೆ ಸ್ವಾಮಿ । ಪಕ್ಷಿವಹ ಕರುಣಾಕ
ಟಾಕ್ಷ ದಿಂದೀಕ್ಷಿಸುತ । ಕಾಪಾಡೊ ಹರಿಯೇ ಅ.ಪ.

ಅಕ್ಷಿ ಮೂರುಳ್ಳ ನಿಟಿ । ಲಾಕ್ಷನೈ ರೂಪದಲಿ
ಅಕ್ಷಿ ಗೋಚರನಾಗಿ । ಸ್ವಚ್ಛ ತೈಜಸನೇ
ದೀಕ್ಷೆ ದಾಸತ್ವದಲಿ । ಲಕ್ಷ್ಯವಿಟ್ಟಿಹಳ ಉ–
ಪೇಕ್ಷಿಸದೆ ದಯತೋರ್ದೆ । ಲಕ್ಷ್ಮಿ ನರಸಿಂಹಾ ೧

ಮನ್ಯು ಸೂಕ್ತದಿಂ ಬ । ಹ್ವನ್ನ ಭೋಕ್ತೃವಿನಿಂದ
ಚೆನ್ನಾಗಿ ಸೇವಿತನೆ । ಅನ್ನಂತ ಮಹಿಮಾ
ಬಿನ್ನವಿಪೆ ನಿನಗೆ ಕಾ । ರುಣ್ಯ ಮೂರುತಿ ಹರಿಯೆ
ಕನ್ಯೆಗಭಯದನೆ ಆ । ಪನ್ನ ಪರಿಪಾಲಾ ೨

ಲೌಕಿಕದಿ ಬಹುಪರಿಯ । ಸೌಖ್ಯಗಳ ನೀನಿತ್ತು
ಪ್ರಾಕ್ಕು ಕರ್ಮವ ಕಳೆದು । ಕಾಪಾಡೊ ಹರಿಯೇ ।
ಚೊಕ್ಕ ಭಕ್ತಿ ಜ್ಞಾನ । ಅಕ್ಕರದಿ ತವಪದದಿ
ಉಕ್ಕುವ ಪರಿಮಾಡು । ರಕ್ಕಸಾಂತಕನೇ ೩

ನೀಚೋಚ್ಚ ತರತಮವು । ಪಂಚ ಬೇದವನರುಹಿ
ಸಂಚಿತವ ದಹಿಸೂವ । ಹಂಚಿಕೆಯನಿತ್ತೂ

ಅಂಚೆವಹಪಿತನೆ ಹೃ । ತ್ಪಂಕಜದಿ ನಿನಕಾಂಬ
ಸಂಚಿಂತನೆಯ ನೀಯೊ । ಪಂಚ ಪ್ರಾಣಾತ್ಮಾ ೪

ಪಾವಮಾನಿಯ ಪ್ರೀಯ । ಸಾರ್ವಕಾಲದಿ ನಿನ್ನ
ಪಾವನ ಸ್ಮೃತಿಯಿತ್ತು । ಭಾವದಲಿ ತೋರೋ ।
ನೀವೊಲಿಯುತಿವಳಿನ್ನ । ಕಾವುದೆನೆ ಬಿನ್ನೈಪೆ
ಗೋವಿದಾಂಪತಿಯೆ ಗುರು । ಗೋವಿಂದ ವಿಠಲಾ ೫

೬೫೨

ಲಕ್ಷ್ಮೀಶ ನರಹರಿ ವಿಠ್ಠಲನೆ ಸಲಹೊ ಪ

ಪಕ್ಷೀಂದ್ರ ವಾಹನನೆ ಈಕ್ಷಿಸುತ ಕರುಣದಿಂ
ರಕ್ಷಿಸಲಿ ಬೇಕಿವಳ ಲಕ್ಷ್ಮಣಾಗ್ರಜನೇ ಅ.ಪ.

ದೀನಜನ ಮಂದಾರ ಜ್ಞಾನದಾಯಕನೆ ಸುರ–
ಧೇನು ಭಕ್ತರಿಗೆ ಕಾಮಿತವ ಕೊಡುವಲ್ಲಿ ।
ನೀನಿವಳಿಗೇ ಮೋಕ್ಷಜ್ಞಾನವನೇ ಪಾಲಿಸುತ
ಸಾನುರಾಗದಿ ಸಲಹೊ ಪ್ರಾಣಾಂತರಾತ್ಮ ೧

ಸೃಷ್ಟಿ ಸ್ಥಿತಿ ಸಂಹಾರ ಕರ್ತನೀನೆಂದೆನಿಪೆ
ವೃಷ್ಟಿಕುಲ ಸಂಪನ್ನ ಜಿಷ್ಣು ಸಖ ಹರಿಯೇ ।
ಕಷ್ಟನಿಷ್ಠೂರಗಳ ಸಹಿಸುವಡೆ ಧೈರ್ಯವನು
ಕೊಟ್ಟು ಕೈ ಪಿಡಿಯುವುದು ಕೃಷ್ಣ ಮೂರುತಿಯೇ ೨

ಪತಿಯೆ ಪರದೈವ ವೆಂಬುನ್ನತದ ಮತಿಯಿತ್ತು
ಹಿತದಿಂದ ಹರಿಗುರು ಸೇವೆಯಲಿ ರತಿಯ
ಸತತ ನಿನ್ನಯ ನಾಮ ಸ್ಮೃತಿಯನ್ನೇ ವದಗಿಸುತ
ಕೃತಿಪತಿಯೆ ನೀನಿವಳ ಉದ್ಧರಿಸು ಹರಿಯೇ ೩

ತಾರತಮ್ಯ ಜ್ಞಾನ ವೈರಾಗ್ಯ ಭಕುತಿ ಕೊಡು
ಮೂರೆರಡು ಭೇಧಗಳ ಅರಿವಿತ್ತು ಹರಿಯೇ
ಮಾರಪಿತ ಇವಳ ಹೃದ್ವಾರಿಜದಿ ತವ ರೂಪ
ತೋರುತಲಿ ಸನ್ಮುದವ ಬೀರುವುದು ಹರಿಯೇ ೪

ಸರ್ವಾಂತರಾತ್ಮನೆ ಗುರುಡವಾಹನ ದೇವ
ಸರ್ವಜ್ಞ ಸರ್ವೇಶ ಮಮ ಕುಲ ಸ್ವಾಮೀ ।
ನಿರ್ವಿಘ್ನದಿಂದೆನ್ನ ಪ್ರಾರ್ಥನೆಯ ಪೂರೈಸೊ
ಸರ್ವಸುಂದರ ಗುರು ಗೋವಿಂದ ವಿಠಲಾ ೫

೬೫೩

ಲಕ್ಷ್ಮೀ ಮನೋಹರ ವಿಠಲ । ರಕ್ಷಿಸೋ ಹರಿಯೇ ಪ

ಲಕ್ಷಿಸದಲೇ ಇವಳ । ಲಕ್ಷಾಪರಾಧಾ ಅ.ಪ.

ವರಲಕ್ಷ್ಮಿ ರೂಪದಿಂ । ಹರಿಯು ತೈಜಸ ಮೂರ್ತಿ
ದರುಶನವ ತಾನಿತ್ತು । ಹರುಷ ಪಡೆಸಿಹನೋ
ಹರಿದಾಸ್ಯಕೇ ಮಾರ್ಗ । ವರಸೂಚಿ ಎಂಬಂತೆ
ಪರಮ ಸಿದ್ಧತೆ ತೋರ್ದೆ । ವರಸತೀ ಮಣಿಗೇ ೧

ಹರಿ ಗುರೂ ಸದ್ಭಕ್ತಿ । ಪರಮ ವೈರಾಗ್ಯಗಳ
ಕರುಣಿಸುತ ಕಾಪಾಡೊ । ಕರಿವರದ ದೇವಾ
ಪರಮ ಕಾರುಣಿಕ ನೆಂ । ದರಿತು ಬೇಡುವೆ ಹರಿಯೆ
ಸರುವ ಕಾರ್ಯದಿ ನಿನ್ನ । ಸ್ಮರಣೆ ಸುಖವೀಯೋ ೨

ಎರಡು ಮೂರ್ಭೇಧಗಳ । ಅರಿವನೀಕೆಗೆ ಇತ್ತು
ಎರಡು ನಾಲ್ಕರ ವರ್ಗ । ದೂರಗೈಸೋ
ಮರುತಾಂತರಾತ್ಮ ನಿ । ನ್ನೊರತು ಕಾಯುವರಾರೊ
ಎರಡೇಳು ಭುವನಗಳ । ಅರಸಿಯೂ ಕಾಣೇ ೩

ನಶ್ವರವು ಈ ಅಷ್ಟ । ಐಶ್ವರ್ಯ ಸೌಭಾಗ್ಯ
ಈಶ್ವರೇಚ್ಚಾಧೀನ । ವಿಶ್ವ ಕಾರ್ಯಗಳೂ
ಅಶ್ವಮೊಗ ನೀನಾಗಿ । ವಿಶ್ವಾಸ ಮಾಡುತ್ತ
ಹ್ರಸ್ವಗೈವುದು ಕರ್ಮ । ಸತ್ತ್ವವಣ ಕೊಡುತಾ ೪

ಭೂವಿ ಬುಧ ಹೆದ್ದೈವ । ಮಾವಿನೋದಿಯೆ ಹರಿಯೆ
ನೀವೊಲಿಯ ದಿನ್ನಿಲ್ಲ । ಮಾವ ಕಂಸಾರೀ
ದೇವ ದೇವೇಶ ಗುರು । ಗೋವಿಂದ ವಿಠ್ಠಲ್ಲ
ಭಾವದೊಳು ಮೈದೋರಿ । ಕಾವುದೀಕೆಯನೂ ೫

೬೫೪

ಲಕ್ಷ್ಮೀ ಮನೋಜ್ಞ ವಿಠಲ । ಕಾಪಾಡೊ ಇವಳಾ ಪ

ಪಕ್ಷೀಂದ್ರವಹ ಹರಿಯೆ । ಇಕ್ಷುಶರ ಪಿತನೇ ಅ.ಪ.

ಹಿಂದೆ ಬಹು ಜನುಮದಲಿ । ನೊಂದು ನೊಂದು ಬಹಳ
ಇಂದಿರೇಶನ ದಾಸ್ಯ । ಕಾಂಕ್ಷಿಸುತ್ತಿಹಳೋ
ಅಂದರ್ಜಿತೆನೆ ಸುಕೃತ । ದಿಂದ ಫಲ ತೊರೆತಿಹುದು
ಮಂದಾಕೀನಿ ಜನಕ । ಇಂದಿವಳ ಪೊರೆಯೆ ೧

ಹರಿಯೆ ಪರತರನೆಂಬ । ಸುರರ ಮನೊ ಭಾವದಲಿ
ಹರಿ ಗುರು ಹಿರಿಯರಲಿ । ವರಭಕ್ತಿಯುತಳೂ
ತರತಮದ ಸುಜ್ಞಾನ । ವರಭೇದ ಪಂಚಕದ
ಅರಿವಿತ್ತು ಪೊರೆ ಇವಳ । ಮರುತಾಂತರಾತ್ಮ ೨

ಸಂಸಾರ ಕಾರ್ಯಗಳು । ಕಂಸಾರಿ ಪೂಜೆ ಎ
ಬಂಶವನು ತಿಳಿಸುತ್ತ । ಕಾಪಾಡೊ ಹರಿಯೇ
ಸಂಶಯವುರಹಿತ ತ । ತ್ವಾಂಶ ದರಿವಿತ್ತು ವಿ
ಪಾಂಸಗನು ಹರಿಯಪದ । ಪಾಂಸುವನೆ ತೊಡಿಸೋ ೩

ಲಕ್ಷ್ಮೀ ನರಹರಿಯೆ ಹೃ । ತ್ಕುಕ್ಷಿಯಲಿ ತವರೂಪ
ಈಕ್ಷಿಸುವ ಸುಯೋಗ । ಕರುಣಿಸೋ ಹರಿಯೇ
ಅಕ್ಷಾರಿ ವಂದ್ಯ ಹರಿ । ಅಕ್ಷಯ ಫಲದಾತ
ಈಕ್ಷಿಸೋ ಇವಳ ಕರು । ಣೇಕ್ಷಣದಿ ಹರಿಯೇ ೪

ಗೋವತ್ಸ ದನಿಕೇಳಿ । ಧಾವಿಸುವ ಪರಿಯಂತೆ
ಶ್ರೀವರನೆ ನೀನಾಗಿ । ಓವಿ ಪೊರೆ ಎಂಬಾ
ಆವ ಈ ಬಿನ್ನಪವ । ನೀವೊಲಿದು ಸಲಿಸುವುದು
ಗೋವಿದಾಂಪತಿ ಗುರು । ಗೋವಿಂದ ವಿಠಲಾ ೫

೬೫೫

ಲಕ್ಷ್ಮೀನಾಥ ವಿಠಲ । ರಕ್ಷಿಸೊ ಇವನಾ ಪ

ಇಕ್ಷುಚಾಪನ ಪಿತನೆ । ಅಕ್ಷರನೆ ದೇವಾ ಅ.ಪ.

ಭಕ್ತಿಯುತ ಇವನಿರುವ । ಶಕ್ತಿಯಿಂ ಸಾಧಿಸುವ
ಮುಕ್ತರೊಡೆಯನೆ ಹರಿಯ । ನಿತ್ಯ ತೃಪ್ತಾತ್ಮಾ
ಅರ್ಥಿಯಲಿ ಲಕ್ಷ್ಮಿಯನು । ಭಕ್ತಿಯಿಂ ಸೇವಿಸುತ
ಪ್ರಾರ್ಥಿಸುವ ತವಪ್ರೀತಿ । ಲಕ್ಷ್ಮಿವಲ್ಲಭನೇ ೧

ಅಪ್ರಮೇಯನ ಪತ್ನಿ । ಲಕ್ಷ್ಮಿಯನೆ ತುತಿಸುತ್ತ
ಸುಪ್ರಸಾದವ ಕೊಂಡು । ಗೃಹಕಾಗಿ ತೆರಳೀ
ಅಪ್ರತಿಮ ಸಂತಸದಿ । ಹರಿಯ ಕೊಂಡಾಡುತ್ತ
ಅಪ್ಪವೆಂಕಟನನ್ನು । ಹಾಡಿ ಹೊಗಳಿದನಾ ೨

ವೇದಾಂತ ವೇದ್ಯ ಹರಿ । ವೇದ್ಯವಾಗಲಿ ಇವಗೆ
ಮೋದ ತೀರ್ಥರ ಮತದ । ಸಾದು ತತ್ವಗಳು
ಹಾದಿಯಾಗಲಿ ಮುಕುತಿ । ಸಾಧನ ಸುಮಾರ್ಗಕ್ಕೆ
ಬಾದರಾಯಣ ದೇವ । ಮಾಧವನೆ ಹರಿಯೆ ೩

ಕರ್ಮಮರ್ಮವ ತಿಳಿಸಿ । ದುಷ್ಕರ್ಮ ಪರಿಹರಿಸಿ
ನಿರ್ಮಮನ ಮಾಡಯ್ಯ । ಬ್ರಹ್ಮಾದಿ ವಂದ್ಯ
ಪ್ರಮ್ಮೆಯಂಗಳ ಬೋದ । ಸಲ್ಲಲಿತವಾಗಿರಲಿ
ಅಮ್ಮಹಾ ಪರದೈವ । ಹರಿಯೆಂದು ತಿಳಿಸೊ ೪

ಅದೈತ ತ್ರಯದರಿವು । ಬುದ್ದಿಗೇ ನಿಲುಕಿಸುತ
ಸಿದ್ಧಾಂತ ಪಥವೆಂಬ । ಹೆದ್ದಾರಿ ನಡಸೋ
ಕೃದ್ಧಬಳಮರ್ದನನೆ । ಮುದ್ದು ನರಹರಿದೇವ
ಅದ್ವಿತೀಯನೆ ಗುರು । ಗೋವಿಂದ ವಿಠಲಾ ೫

೬೫೬

ಲಕ್ಷ್ಮೀ ನಾರಾಯಣ ವಿಠಲ । ಪೊರೆಯ ಬೇಕಿವಳಾ ಪ

ಪಕ್ಷಿ ವಾಹನ ದೇವ । ಲಕ್ಷುಮಿಯ ರಮಣಾ ಅ.ಪ.

ಸೃಷ್ಟಿ ಸ್ಥಿತಿ ಸಂಹಾರ । ಅಷ್ಟಕ್ಕು ಕಾರಣನೆ
ಕಷ್ಟಗಳ ಪರಿಹರಿಸಿ । ಕಾಪಾಡೊ ಹರಿಯೇ ।
ಶಿಷ್ಟ ಸದಾಚಾರ । ನಿಷ್ಠೆಯಲಿ ಗೈಯ್ಯುವಳು
ಶಿಷ್ಟೇಷ್ಟ ಹರಿಯೆ ಸದ । ಭೀಷ್ಟಗಳಗರೆಯೋ ೧

ಮೊಸಲೆಂದೆನಿಸಿರುವ । ದಾಸತ್ವದಾಕಾಂಕ್ಷೆ
ಸಾಸಿರಕ್ಕೋರ್ವರಿಗೆ । ಲೇಸು ಪುಟ್ಟವುದೋ
ಈ ಸಮಯದಲ್ಲೀಕೆ । ಆಶಿಸುತ್ತಿಹಳಯ್ಯ
ಕೇಶವನೆ ಒಲಿದಿವಳ । ದಾಸ್ಯ ಸ್ವೀಕರಿಸೋ ೨

ಶುದ್ಧ ತರತಮ ಜ್ಞಾನ । ಮದ್ವೇಶನಲಿ ಭಕುತಿ
ಇದ್ದವದಕೆ ತೃಪ್ತಿಯಿಂ । ಬದ್ಧ ವೈರಾಗ್ಯಾ
ಸಿದ್ಧಿಸುತ ಸಾಧನದಿ । ಬದ್ಧ ಕಂಕಣಳೆನಿಸೊ
ಅದ್ವಿತೀಯನೆ ಹರಿಯೆ । ಮಧ್ವಾಂತರಾತ್ಮಾ ೩

ಮುಪ್ಪುರದ ವೈರಿನುತ । ಸರ್ಪಶಯನನೆ ದೇವಾ
ಸ್ವಪ್ನ ಸೂಚನೆಯಂತೆ । ಗೋಪ್ಯದಂಕಿತವಾ
ಸುಪ್ತೀಶ ಇತ್ತಿಹೆನೊ । ಒಪ್ಪಿ ಕೈಪಿಡಿ ಇವಳ
ಗುಪ್ತ ಮಹಿಮನೆ ದೇವ । ಅಪ್ರಕಟ ಹರಿಯೇ ೪

ಶರ್ವಾದಿ ದಿವಿಜೇಡ್ಯ ಶಾರ್ವರೀಕರ ಪಾಲ
ದುರ್ವಾದಿ ತಿಮಿರಕ್ಕೆ ಮಾರ್ತಾಂಡ ರೂಪೀ
ದರ್ವಿ ಜೀವಿಯ ಕಾವ । ನಿರ್ವಹಣೆ ನಿನ್ನದೋ
ಗುರ್ವಂತರಾತ್ಮ ಗುರು । ಗೋವಿಂದ ವಿಠಲಾ ೫

೬೫೭

ಶ್ರೀ

ಲಕ್ಷ್ಮೀಶ ವಿಠಲಾ । ರಕ್ಷಿಸೋ ಇವನಾ ಪ

ಕುಕ್ಷಿಯೊಳಗನ್ಯರನೆ । ರಕ್ಷಕರ ಕಾಣೇ ಅ.ಪ.

ಮಧ್ವ ಮತದಲ್ಲಿವನು । ಶ್ರದ್ಧೆ ಭಕ್ತಿಯುತನು
ಪದ್ಧತಿಗಳಳವಡಿಸಿ । ಶುದ್ಧ ಸಾಧನದಾ ।
ಅಧ್ಯಯನಕೆಳೆ ತಂದು । ಬದ್ಧನನ । ಮಾಡುತ್ತಾ
ಉದ್ಧರಿಸೋ ಶ್ರೀ ಹರಿಯೇ ಪದ್ಮನಾಭಾಖ್ಯಾ ೧

ಭಂಗವಿಲ್ಲದೆ ಇವಗೆ । ಮಂಗಳವು ಎಂದೆನಿಪ
ಶ್ರೀ ಶೃಂಗಾರ ನಾಮಸ್ಮೃತಿ । ಶ್ರೀ ರಂಗನಾಥಾ
ಸಂಘಟಿಸಿ ಉದ್ಧರಿಸೋ । ಸ್ವಾಂಗಾಯ ನಾಮಕನೆ
ಸಂಗೀತ ಲೋಲ ಹರಿ । ರಂಗ ಭವ ಹಾರೀ ೨

ಆರೋಗ್ಯ ಭಾಗ್ಯವನು ಕರುಣಿಸುತ ಇವನೀಗೆ
ದ್ವಾರವಾಗಲಿ ಅದುವೇ । ಸಾರ ಸಾಧನಕೇ

ಚಾರು ನಿನ್ನಯ ನಾಮ । ಸಾರ ಸವಿ ಸವಿದುಂಬ
ಭಾರಣಯಲಿರಿಸಯ್ಯ । ಮಾರಪಿತ ಹರಿಯೇ ೩

ಕರ್ಮಗಳ ಮಾಳ್ಪುವಲಿ । ಮರ್ಮಗಳ ತಿಳಿಸಯ್ಯ
ನಿರ್ಮಮತೆ ನೀಡುತ್ತ । ಧರ್ಮ ಸಾಧಕನೇ
ಕರ್ಮನಾಮಕ ಹರಿಯೇ । ಪೇರ್ಮಣಿಯಲಿ ಇವನನ್ನು
ಕ್ರಮ್ಮಿಸೋ ಕರುಣದಲಿ । ಧರ್ಮಗುಪಾಧರ್ಮಿ ೪

ಧಾವಿಸಿ ಬಂದಿಹನು । ದೇವ ತವ ದಾಸ್ಯಕೆನೆ
ಭಾವಕನಿಗಿತ್ತಿಹೆನೊ । ಓವಿ ಉಪದೇಶಾ
ಗೋವಳರ ಪ್ರಿಯ ಗುರು । ಗೋವಿಂದ ವಿಠಲನೆ
ನೀ ವೊಲಿದು ಪೊರೆ ಇವನ । ದೇವ ದೇವೇಶಾ ೫

೬೫೮

ಲಕ್ಷ್ಮೀ ಪತಿ ವಿಠಲ । ರಕ್ಷಿಸೊ ಇವಳಾ ಪ

ಪಕ್ಷೀಂದ್ರ ವಹ ಹರಿಯೆ । ಅಕ್ಷಯ್ಯ ಫಲದಾ ಅ.ಪ.

ಸಾಧನ ಸುಜೀವಿ ಇಹ । ಮೋದದಿಂದಲಿ ನಿನ್ನ
ಪಾದ ಸ್ಮರಿಸುವಳನ್ನ । ಕಾದುಕೋ ಬಿಡದೇ
ವೇದಾಂತ ವೇದ್ಯ ಹರಿ । ಮೋದ ತೀರ್ಥರ ಪ್ರೀಯ
ಬೋಧಿಸೀ ತತ್ವ ಸಂ । ಧಾನವನೆ ಈಯೋ ೧

ಕಾಳಿ ರಮಣನೆ ನಿನ್ನ । ಶೀಲ ಸ್ಮರಣೆಗಳನ್ನ
ಕಾಲ ಕಾಲಕೆ ಕೊಟ್ಟು । ಕಾಪಾಡೊ ಹರಿಯೇ ।
ಕಾಲ ಕಲಿಯುಗದಿ ತವ । ನಾಮ ಕವಚವ ತೊಡಿಸಿ
ಪಾಲಿಸೊ ಫಣಿ ಶಾಯಿ । ಪ್ರಹ್ಲಾದ ವರದಾ ೨

ಅಂಗನಾ ಮಣಿಗೆ ಭವ । ಭಂಗ ಕಳೆಯಲು ಸುಜನ
ಸಂಗವನೆ ಕೊಟ್ಟು ಹರಿ । ಕಾಪಾಡ ಬೇಕೋ

ಸಂಗರದಿ ಮೈದುನನ । ಭಂಗವಿಲ್ಲದೆ ಕಾಯ್ದೆ
ಸಂಗೀತ ಲೋಲ ಸುಖ । ಶೃಂಗಾರ ಮೂರ್ತೇ ೩

ಜ್ಞಾನಾನು ಸಂಧಾನ । ಸಾನು ಕೂಲಿಸಿ ಇವಳ
ಪ್ರಾಣ ಪ್ರಾಣನು ನಿನ್ನ । ಧ್ಯಾನ ಮಾಳ್ಪಂತೇ
ಮಾನಸಾದಲಿ ನಿಂತು । ಚೊದನೆಯ ಗೈಯ್ಯುತ್ತ
ಗಾನ ಮಾಡಿಸೊ ದೇವ । ನಿನ್ನ ಮಹಿಮೆಗಳು ೪

ಪಾವನಾತ್ಮಕ ದೇವ । ಪಾವನ್ನ ತವ ಮಹಿಮೆ
ಆವಾಗಲೂ ತುತಿಪ । ಭಾವವನೆ ಇತ್ತೂ ।
ಶ್ರೀವರ ಶ್ರೀ ಗುರೂ । ಗೋವಿಂದ ವಿಠ್ಠಲನೆ
ಕಾವುದಿವಳನು ಎಂದು । ಪ್ರಾರ್ಥಿಸುವೆ ನಿನ್ನಾ ೫

೬೫೯

ಲಕ್ಷ್ಮೀಲೋಲ ವಿಠಲ ರಕ್ಷಿಸಲಿ ಬೇಕು ಹರಿಯೇ
ಪಕ್ಷ್ಮಗಳು ಅಕ್ಷಿಗಳ ಅಗಲದಿಪ್ಪಂತಿವನಾ ಪ

ದಾಸತ್ವ ದೀಕ್ಷೆಯಲಿ ಕಾಂಕ್ಷೆಯನು ತೋರ್ದವಗೆ
ಮೀಸಲಿಂದಿದ್ದೆನ್ನ ಮನದಿ ತೈಜಸನೇ
ಲೇಸು ಹರಿಕಥೆ ಸುಧೆಯ ಸಾರವನು ನೋಡೆಂದು
ಶ್ರೀಶತವ ಕ್ರೀಡಾ ವಿಲಾಸದಿ ಮಾರ್ಗ ತೋರೋ ೧

ಕಂಕಣಾಕಾರೇಶ ಅಂಕಿತವ ನಿತ್ತಿಹೆನು
ಕೊಂಕುಗಳ ತಿದ್ದುತಲಿ ಕಿಂಕರನ ಸಲಹೊ ।
ಪಂಕಜ ಸುರರೆಲ್ಲ ಕಿಂಕರನು ನಿನಗೆಂಬ
ಶಂಕೆ ವಿರಹಿತ ಜ್ಞಾನ ತರತಮವ ತಿಳಿಸೊ ೨

ಹಿಂದಿನ ಸುಸಂಸ್ಕಾರದಿಂದಿವನ ಸಂದೋಹ
ಬಂದುದನೆ ರಕ್ಷಿಸ್ಯಾನಂದಕರ ಮತದಲೀ ।

ಬಂಧು ಬಳಗವು ನೀನೆ । ತಂದೆ ತಾಯಿಯು ನೀನೆ
ಎಂದೆಂಬ ಸುಜ್ಞಾನ ಕರುಣಿಸೈ ಹರಿಯೇ ೩

ಹರಿಗುರೂ ಸದ್ಭಕ್ತಿ ವೈರಾಗ್ಯ ವಿಷಯದಲಿ
ಕರುಣಿಸುತಲದ್ವೈತ ಚರ್ಯ ವೆರಡೊಂದರಾ
ಸರುವ ಲೌಕಿಕ ಕರ್ಮ ವೈದೀಕ ವೆನಿಸುತ್ತ
ಕರುಣಿಸೋ ತವರೂಪ ಹೃತ್ಕಂಜದೊಳಗೇ ೪

ಸರ್ವಜ್ಞ ಸರ್ವೇಶ ಸರ್ವಾಂತರಾತ್ಮಕನೆ
ಶರ್ವವಂದ್ಯನೆ ಹರಿಯೆ ನಾಪೇಳ್ವುದೇನೋ
ದುರ್ವಿಭಾವ್ಯನೆ ಗುರು ಗೋವಿಂದ ವಿಠ್ಠಲನೆ
ದರ್ವಿಜೀವನು ಗೈವ ಭಿನ್ನಪವ ಸಲಿಸೋ ೫

೬೬೦

ಲಕ್ಷ್ಮೀವಲ್ಲಭ ವಿಠಲ । ಪೊರೆಯ ಬೇಕಿವಳಾ ಪ

ಅಕ್ಷಯ್ಯ ಫಲದ ಕೃ । ಪೇಕ್ಷಣದಿ ನೋಡಿ ಅ.ಪ.

ಸಂಸಾರ ವಿರಸತರ । ಅಂಶವನೆ ತಿಳಿಸೊ ಹರಿ
ಕಂಸಾರಿ ನಿನ್ನ ಪದ । ಪಾಂಸು ಭಜಿಸುತ್ತಾ
ಸಂಶಯ ರಹಿತ ಹರಿ । ಹಂಸನಾಮಕ ಸೇವೆ
ಶಂಸಾರ್ಯ ಸರ್ವಧಿಕ । ಸರ್ವೋತ್ತಮೆನುತಾ ೧

ಹರಿನಾಮ ಕವಚವನು । ಸರ್ವದಾ ಧರಿಸುತ್ತಾ
ದುರಿತನಾಳುಟ್ವಳಿಯ । ಪರಿಹಾರ ಮಾರ್ಗ
ಅರಿವಿನಿಂದಲಿ ಹರಿಯ । ವರನಾಮ ಸ್ಮರಿಸುತ್ತ
ಕರಗತವು ಆಗಲಿಯೊ । ವರಮುಕ್ತಿಪಥವು ೨

ಎರಡು ಮಾರ್ಭೇದಗಳು । ಅರಿವಾಗಲೀಕೆಗೇ
ತರತಮಂಗಳು ಮನಕೆ । ಬರುತಿರಲಿ ಸರ್ವದಾ

ಸಿರಿವಾಯು ಮತ ದೀಕ್ಷೆ । ಗೆರಗಲೀಕೆಯ ಮನಸು
ಹರಿಯ ಮಮ ಕುಲದೈವ । ಉದ್ಧರಿಸೊ ಇವಳಾ ೩

ಸಾಧನಕೆ ಸತ್ಸಂಗ । ನೀದಯದಿ ಕೊಟ್ಟಿವಳ
ಮೋದ ಬಡಿಪದು ದೇವ । ಆದಿ ಮೂರುತಿಯೇ ।
ಮಾಧವನೆ ಬಿನ್ನೈಸೆ । ಆದರಿಸುತಿವಳೀಗೆ
ಕಾದುಕೊ ಬಿಡದಲೆ । ಹೇ ದಯಾ ಪೂರ್ಣ ೪

ದೇವದೇವೊತ್ತಮನೆ । ಕಾವದೇವನೆ ಹರಿಯ
ಭಾವದಲಿ ಮೈದೋರಿ । ಪೊರೆಯೊ ಇವಳಾ
ಕಾವ ಕರುಣೆಯ ಗುರು । ಗೋವಿಂದ ವಿಠಲನೆ
ನೀವೊಲಿಯದಿನ್ನಿಲ್ಲ । ಈ ವಾಣಿ ಬಲುಸತ್ಯ ೫

೬೬೧

ಲಕ್ಷ್ಮೀ ವೆಂಕಟೇಶ ವಿಠಲ । ರಕ್ಷಿಸೋ ಇವಳಾ ಪ

ಕುಕ್ಷಿಯೊಳು ಜಗಧರಿಪ । ವಿಶ್ವ ವ್ಯಾಪಕನೇ ಅ.ಪ.

ಪುಟ್ಟಿ ಸತ್ಕುಲದಲ್ಲಿ । ತೊಟ್ಟು ಸತ್ಸಿದ್ಧಾಂತ
ಇಷ್ಟ ಪಡುತಿಹಳಯ್ಯ । ಕಷ್ಟದಾಸತ್ವಾ
ಇಷ್ಟ ಮೂರುತಿ ನೀನು । ತೈಜಸೀ ರೂಪದಲಿ
ಸ್ಪಷ್ಟ ತೋರಿದ ಹರಿಯೆ । ಇತ್ತೆ ಉಪದೇಶಾ ೧

ಮರುತ ಮತದಲಿ ದೀಕ್ಷೆ । ಹಿರಿಯರನು ಸರಣೆಯಲಿ
ನಿರುತ ಆಸಕ್ತಿಯನು । ಕರುಣಿಸುತ ಭವದಾ
ಶರಧಿಯನೆ ದಾಟಿಸುವ । ಮಾರ್ಗವನೆ ತೋರೊ ಹರಿ
ಕರುಣಾಂಬುನಿಧಿಯೆಂದು । ಮೊರೆ ನಿನಗೆ ಇಡುವೇ ೨

ಕಷ್ಟ ನಿಷ್ಠೂರಗಳ । ಸುಷ್ಠುಸಮತೆಲಿ ಉಂಬ
ಶ್ರೇಷ್ಠ ಮತಿಯನೆ ಇತ್ತು । ರಕ್ಷಿಸೋ ಇವಳಾ ।

ಅಷ್ಟ ಸೌಭಾಗ್ಯಗಳ । ಕೊಟ್ಟು ಕಾಯಲಿ ಬೇಕೊ
ಕೃಷ್ಣ ಮೂರುತಿ ಹರಿಯೆ । ಭಕ್ತ ವತ್ಸಲ್ಲಾ ೩

ಪರಮಾರ್ಥ ಸಾಧನಕೆ । ಗುರು ಕರುಣಬೇಕೆಂಬ
ವರಮತಿಯ ಕರುಣಿಸುತ । ಪೊರೆಯ ಬೇಕಿವಳಾ
ಗರುಡ ಗಮನನೆ ದೇವ । ಸರ್ವಾಂತರಾತ್ಮಕನೆ
ಕರುಣದಿಂ ಕೈ ಪಿಡಿದು । ಉದ್ಧರಿಸೋ ಇವಳಾ ೪

ಪಾವಮಾನಿಯ ಪ್ರೀಯ । ಭಾವದಲಿ ಮೈದೋರಿ
ಜೀವಿಯನು ಉದ್ಧರಿಸೋ । ದೇವ ದೇವೇಶಾ
ಗೋವತ್ಸದನಿ ಕೇಳಿ । ಆಪು ಪೊರೆವಂತೆ ತೋರಿ
ಗೋವಿದಾಂಪತಿ ಗುರೂ । ಗೋವಿಂದ ವಿಠಲಾ ೫

೬೬೨

ಲಕ್ಷ್ಮೀಶ ಹರಿ ವಿಠಲ । ಸಲಹ ಬೇಕಿವಳಾ ಪ

ಪಕ್ಷೀಂದ್ರವಹ ಹರಿಯೆ । ತ್ರ್ಯಕ್ಷಪಿತಸೇವ್ಯಾ ಅ.ಪ.

ಕನ್ಯೆ ಬಹು ವಿನಯವತಿ । ಅನ್ಯಸಹವಾಸವನು
ಮನ್ನಿಸಳು ಎಂಬುವದೆ । ಸ್ವಪ್ನದಲಿ ಸೂಚ್ಯ
ಪನ್ನಂಗ ಶಯನ ಹರಿ । ನನ್ನೆಯಂ ಕೈ ಪಿಡಿದು
ಮನ್ನಿಸೋ ತರಳೆಯನು । ಮದ್ವಂತರಾತ್ಮ ೧

ಉಚ್ಚ ನೀಚದ ಭಾವ । ಜಗವೆಲ್ಲ ತುಂಬಿಹದು
ಅಚ್ಯುತನೆ ಸರ್ವರೊಳು । ಉತ್ತಮನೆಂಬಾ
ಸ್ವಚ್ಛ ಪಂಚಕ ಭೇದ । ನಿಚ್ಚ ಮನದಲಿ ಪೊಳೆದು
ಉಚ್ಚ ಪದವಿಗೆ ದಾರಿ । ನೀನಾಗಿ ತೋರೋ ೨

ಹರಿಗುರು ಸದ್ಭಕ್ತಿ । ನಿರುತ ಹಿರಿಯರ ಸೇವೆ
ಮರುತ ಮತ ತತ್ವದಲಿ । ಪರಮ ಅಭಿಲಾಷೆ

ವರಸುನಾಮಮೃತವೆ । ಸರ್ವದಾ ಸವಿವಂತೆ
ಕರುಣಿಸುತ । ಪೊರ ಗುರು । ಗೋವಿಂದ ವಿಠಲಾ ೩

೬೬೩

ಲಕ್ಷ್ಮೀಶ ಹರಿ ವಿಠಲ ರಕ್ಷಿಸೋ ಇವಳಾ ಪ

ಕುಕ್ಷಿಯೊಳಗನ್ಯರೆನೆ । ರಕ್ಷಕರ ಕಾಣೇ ಅ.ಪ.

ಮಧ್ವ ಮತದಲ್ಲಿಹಳು । ಶ್ರದ್ಧೆ ಭಕ್ತೇಯುತಳು
ಪದ್ಧತಿಗಳಲವಡಿಸಿ । ಶುದ್ಧ ಸಾಧನದಾ ।
ಅಧ್ಯಾನ ಕಳೆ ತಂದು । ಬದ್ಧಳನ ಮಾಡುತ್ತ
ಉದ್ಧರಿಸೋ ಶ್ರೀ ಹರಿಯೆ । ಪದ್ಮನಾಭಾಖ್ಯಾ ೧

ಅಂಗನಾಮಣಿಗೆ ತವ । ಮಂಗಳವು ಎಂದೆನಿಪ
ಶೃಂಗಾರ ನಾಮ ಸ್ಮೃತಿ । ಭಂಗವಿಲ್ಲದಲೇ
ಸಂಘಟಿಸಿ ಉದ್ಧರಿಸೋ । ಸ್ವಾಂಗಾಯನಾಮಕನೇ
ಸಂಗೀತ ಸಿರಿ ಲೋಲ ರಂಗ ಭವ ಹಾರೀ ೨

ಆರೋಗ್ಯ ಭಾಗ್ಯಗಳ । ಕರುಣಿಸುತ ಇವಳೀಗೆ
ದ್ವಾರವಾಗಲಿ ಅದುವೆ । ಸಾರ ಸಾಧನಕೇ ।
ಚಾರು ನಿನ್ನಯ ನಾಮ । ಸಾರಸದಿ ಸವಿದುಂಬ
ಭರಣಿಯಲಿರಿಸಯ್ಯ । ಮಾರಪಿತ ಹರಿಯೇ ೩

ಕರ್ಮಗಳ ಮಾಳ್ಪವಲಿ । ಮರ್ಮಗಳ ತಿಳಿಸಯ್ಯ
ನಿರ್ಮಮತೆ ನೀಡುತ್ತ । ಧರ್ಮ ಸಾಧನಕೇ ।
ಕರ್ಮ ನಾಮಕ ಹರಿಯೆ । ಪೇರ್ಮೆಯಲಿ ಇವಳನ್ನ
ಕ್ರಮ್ಮಿಸೋ ಕರ್ಮದಲಿ । ಧರ್ಮಗುಪ್‌ಧರ್ಮೀ ೪

ಧಾವಿಸೀ ಬಂದಿಹಳು । ದೇವ ತವ ದಾಸ್ಯವನೆ
ಭಾವುಕಳಿಗಿತ್ತಿಹೆನೋ । ಓವಿ ಉಪದೇಶಾ

ಗೋವಳರ ಪ್ರೀಯ ಗುರು । ಗೋವಿಂದ ವಿಠ್ಠಲನೆ
ನೀವೊಲಿದು ಪೊರೆ ಇವಳ । ದೇವ ದೇವೇಶಾ ೫

೬೬೪

ಲೀಲಾ ಮನೋಹರ ವಿಠಲ । ಪಾಲಿಸೊ ಇವಳಾ ಪ

ನೀಲ ಮೇಘ ಶ್ಯಾಮ । ಕಾಳಿಂದಿ ರಮಣಾ ಅ.ಪ.

ಕನ್ಯೆ ಬಹು ಭಕ್ತಿಯುತೆ । ನನ್ನೆಯಿಂ ಸಲಹುವುದು
ಪನ್ನಗಾಚಲ ವಾಸ । ಆಪನ್ನ ಪಾಲಾ ।
ನಿನ್ನವಾಳೆಂದೆನುತ । ಮನ್ನಿಸೀ ತಪ್ಪುಗಳ
ಘನ್ನ ಮಹಿಮನೆ ಕಾಯೊ । ಕಾರುಣ್ಯ ಮೂರ್ತೇ ೧

ಸತ್ಸಂಗದಲಿ ಇಟ್ಟು । ಸತ್ಸಾಧನೆಯಗೈಸಿ
ಮತ್ಸರಾದ್ಸರಿಗಳನ । ಕತ್ತರಿಸಿ ಹಾಕೀ
ಉತ್ಸಹದಿ ಸಂಸಾರ । ಯಾತ್ರೆಗಳ ಚರಿಸಯ್ಯ
ಮತ್ಸ್ಯ ಮೂರುತಿ ಹರಿ । ಸತ್ಯವ್ರತ ಪಾಲಾ ೨

ತರತಮಾತ್ಮಕ ಜ್ಞಾನ । ಸದನದಲಿ ತಿಳಿ ಪಡಿಸಿ
ಹರಿ ಭಕ್ತಿ ವೈರಾಗ್ಯ । ಎರಡು ಅನುಸರಿಸೀ ।
ಬರುವಂತೆ ಗೈದು ಉ । ದ್ಧರಿಸೊ ಹರಿ ಇವಳನ್ನ
ನರಹರೀ ಮಾಧವನೆ । ಪರಿಪೂರ್ಣ ಕಾಮಾ ೩

ಕಾಮ ಜನಕನೆ ದೇವ । ಕಾಮಿನಿಯ ಮನ ಬಯಕೆ
ಪ್ರೇಮದಲಿ ನೀನಿತ್ತು । ಭೂಮ ಗುಣಧಾಮಾ ।
ಈ ಮಹಾ ಕಲಿಯುಗದಿ । ನಾಮ ಸ್ಮರಣೆಯ ಸುಖವಾ
ನೇಮದಲಿ ನೀನಿತ್ತು । ಪಾಮರಳ ಉದ್ಧರಿಸೋ ೪

ಕೋವಿದೋತ್ತಂಸ ಹರಿ । ಕೈವಲ್ಯ ಪದದಾತ
ಭಾವುಕಳ ಪೊರೆಯೆಂದು । ಭಾವದಲಿ ಬೇಡ್ವೇ ।

ಭಾವ ಜನಯ್ಯ ಗುರು । ಗೋವಿಂದ ವಿಠ್ಠಲನೆ
ಭಾವದಲಿ ನೀ ತೋರಿ । ಹರುಷವನೆ ಪಡಿಸೋ ೫

೬೬೫

ವರಗಡದಿನ್ನೀಶೇಷ ವಿಠಲ ಪೊರೆ ಇವನ ಪ

ನಿರುತ ತವ ಚರಿತೆಗಳ । ಸ್ಮರಿಸುತ್ತ ಭಕ್ತಿಯಲಿ
ಮರುತಾಂತರಾತ್ಮ ತವ । ಚರಣಕರ್ಪಿಪನ ಅ.ಪ.

ಕಂದರ್ಪ ಜನಕ ಭವ । ಬಂಧದೊಳು ಸಿಲ್ಕಿ ಬಹು
ನೊಂದವಗೆ ಕರುಣದಲಿ । ಕುಂದನೆಣಿಸದಲೇ
ಮಂದ ಹಾಸವ ಬೀರಿ । ಸಂಧಿಸೋ ಸಂತೋಷ
ಇಂದಿರಾರಾಧ್ಯ ಪದ । ಮಂದರೋದ್ಧಾರೀ ೧

ಉತ್ತಮ ಸುಸಂಸ್ಕೃತಿಯ । ಪೊತ್ತು ಜನಿಸಿಹನಿವನು
ಮತ್ತೆ ದಾಸರ ಕರುಣ । ಪಾತ್ರನಿರುವಾ
ಅರ್ಥಿಯಲಿ ದಾಸತ್ವ । ಪ್ರಾರ್ಥಿಸುತ್ತಿಹಗೆ ನಾ–
ನಿತ್ತಿಹೆನೊ ಅಂಕಿತವ । ಸುಪ್ತೀಶನಾಜ್ಞಾ ೨

ಮೋದ ತೀರ್ಥರ ತತ್ವ । ವಾದಾನುವರ್ತಿ ಇವ
ಭೋಧಿಸೀ ಪರತಮವ । ಭೇದ ಪಂಚಕನ
ಆದರದಿ ಕೈ ಪಿಡಿದು । ಉದ್ಧರಿಸ ಬೇಕೆಂದು
ವೇದ ವೇದ್ಯನೆ ನಿನ್ನ । ಪ್ರಾರ್ಥಿಸುವೆ ಹರಿಯೇ ೩

ಶ್ರವಣ ಮನಕಾನಂದ । ಭುವನ ಪಾವನವೆನಿಪ
ತವಮಹಿಮೆ ಪೊಗಳಲ್ಕೆ । ಕವನ ಶಕ್ತಿಯನೂ
ನೀವೊಲಿದು ಅಭಿವೃದ್ಧಿ । ಗೈವುದಿವನಲಿಯೆಂದು
ಪವನಾಂತರಾತ್ಮ ಬಿ । ನ್ನವಿಪೆನೋ ದೇವಾ ೪

ಭಾವಕ್ರಿಯೆ ದ್ರವ್ಯದೊಳು । ಅದ್ವಿತಿಯ ನೀನೆಂಬ
ಭಾವದನುಭವವಿತ್ತು । ನೀ ಪೊಲಿಯೊ ಇವಗೇ
ಕಾವರನ್ಯರ ಕಾಣೆ । ಗೋವರ್ಧನೋದ್ಧರನೆ
ಕೋವಿದರ ಒಡೆಯ ಗುರು । ಗೋವಿಂದ ವಿಠಲಾ ೫

೬೬೬

ವರದ ಗುರು ಗೋವಿಂದ ವಿಠಲ ಪೊರೆ ಇವನಾ ಪ

ತರಳನನು ಒಪ್ಪಿಸಿಹೆ । ಕರಪಿಡಿಯೊ ಹರಿಯೆ ಅ.ಪ.

ಮರುತ ಮತದಲಿ ಭಾವಿ । ಮರುತರೆಂದೆನಿಸುತಿಹ
ಗುರುರಾಜ ಸಚ್ಚರಣ । ಕರುಣ ಪಾತ್ರಾ
ಇರುವ ಈ ಶಿಶುವ ತವ । ಚರಣ ಕಮಲಂಗಳಿಗೆ
ಅರ್ಪಿಸುತ ಭಿನ್ನವಿಪೆ । ನಿರುತ ಪೊರೆಯೆಂದು ೧

ಗುರು ಹಿರಿಯರ ಸೇವೆ । ನಿರುತ ಗೈಯ್ಯುವ ಮನವ
ಕರುಣಿಸುತ ಧರೆಯೊಳಗೆ । ಮೆರೆಸೊ ಕೀರ್ತಿಯಲೀ
ಬರ ಬರುತ ವೈರಾಗ್ಯ । ಹರಿ ಗುರೂ ಸದ್ಭಕ್ತಿ
ಉರುತರದ ಸುಜ್ಞಾನ । ಪರಿಪಾಲಿಸಿವಗೇ ೨

ತತ್ವರಿವನಲಿ ನಿಂತು । ಪ್ರತ್ಯಹರ್ನಡಿಸುತಿಹ
ಕೃತ್ಯವೆಲ್ಲವು ನಿನ್ನ । ಸ್ತುತ್ಯ ಸೇವೆ ಎನೇ
ಪ್ರತ್ಯಯವನಿತ್ತು ಕೃತ । ಕೃತ್ಯ ನೆಂದೆನಿಸೊ ಹರಿ
ಸತ್ವಾತ್ಮ ಸತ್ತತ್ವ । ಭೃತ್ಯ ವತ್ಸಲನೇ ೩

ಸರ್ವಗುಣ ಸಂಪೂರ್ಣ । ಸರ್ವವ್ಯಾಪ್ತ ಸ್ವಾಮಿ
ನಿರ್ವಿಕಾರನೆ ದೇವ । ಶರ್ವ ವಂದ್ಯಾ
ಸರ್ವದಾ ಸರ್ವತ್ರ । ದುರ್ವಿಭಾವ್ಯನೆ ಹರಿಯೆ
ಪ್ರವರ ತವ ಸಂಸ್ಮರಣೆ । ಸರ್ವದಾ ಈಯೋ ೪

ಜೀವ ಪರತಂತ್ರತೆಯ । ಭಾವುಕಗೆ ಅರಿವಿತ್ತು
ಭಾವದೊಳು ಮೈದೋರೊ । ದೇವದೇವೇಶಾ
ಈ ವಿಧದ ಭಿನ್ನಪವ । ನೀ ವೊಲಿದು ಸಲಿಸುವುದು
ಮಾವಿನೋದಿಯೆ ಗುರು । ಗೋವಿಂದ ವಿಠಲಾ ೫

೬೬೭

ವರದ ನರಹರಿ ವಿಠಲ । ಪೊರೆಯ ಬೇಕಿವಳ ಪ

ಕರಿವರದ ಶ್ರೀ ಹರಿಯೆ । ಕರುಣಿ ನೀನೆಂದರಿತು
ಮೊರೆಯಿಡುವೆ ನಿನ್ನಡಿಗೆ । ಮರುತಾಂತರಾತ್ಮಾ ಅ.ಪ.

ದಾಸದೀಕ್ಷೆಯಲಿ ಮಹ । ದಾಶೆಯನು ಉಳ್ಳವಳ
ಲೇಸಾಗಿ ಕೈಪಿಡಿದು । ನೀ ಸಲಹ ಬೇಕೋ
ವಾಸವಾನುಜ ದಾಸ । ವೇಷದಿಂ ಸ್ವಪ್ನದಲಿ
ಸೂಸಿ ಸೂಚಿಸಿದ ಉಪ । ದೇಶವಿತ್ತಿಹೆನೋ ೧

ಮಧ್ವಮತ ಪದ್ಧತಿಗ । ಉದ್ಧರಿಸಿ ಇವಳಲ್ಲಿ
ಶ್ರದ್ಧೆಯಿಂ ತವಪಾದ । ಪದ್ಮಗಳ ಭಜಿಸೇ
ಶುದ್ಧ ತತ್ವ ಜ್ಞಾನ । ಸದ್ಭಕ್ತಿ ವೈರಾಗ್ಯ
ಮಧ್ವಾಂತರಾತ್ಮ ಅನಿ । ರುದ್ಧ ಪಾಲಿಪುದೋ ೨

ಪತಿಯ ಕೈಂಕರ್ಯವನು । ಹಿತದಿಂದ ಮಾಳ್ಪಂಥ
ಮತಿಯ ನೀ ಕರುಣಿಸುತ । ಕೃತ ಕೃತ್ಯಳೆನಿಸೋ
ಕ್ಷಿತಿಭಾರಹರಣ ಶ್ರೀ । ಪತಿಯೆ ನೀ ಒಲಿದಿವಳ
ಅತುಳ ವಿಭವದಿ ಮೆರೆಸಿ । ಗತಿಪ್ರದನು ಆಗೋ ೩

ಸಂತತದಿ ತವನಾಮ । ಚಿಂತಿಸುವ ಸೌಭಾಗ್ಯ
ವಂತೆಯೆಂದೆನಿಸಿವಳ । ಕಾಂತೆಯ ಸಖನೇ

ಅಂತರಾತ್ಮಕ ನೀನೆ । ಅಂತರಂಗದಿ ತೋರಿ
ಸಂತಸವ ನೀಡಯ್ಯ । ಪಂಥಭಿಧ ಹರಿಯೇ ೪

ಸರ್ವಜ್ಞ ಸರ್ವೇಶ । ಸರ್ವವ್ಯಾಪಕ ದೇವ
ನಿರ್ವಿಕಾರನೆ ಹರಿಯೆ । ದುರ್ವಿ ಭಾವ್ಯಾ
ಸರ್ವವಿಧ ಪರತಂತ್ರ । ದರ್ವಿ ಜೀವಿಯ ಕಾಯೋ
ಸರ್ವಸುಂದರ ಗುರೂ ಗೋವಿಂದ ವಿಠಲಾ ೫

೬೬೮

ವರದರಾಜ ವಿಠಲ । ಪೊರೆಯ ಬೇಕಿವನಾ
ತರಳತವದಾಸ್ಯಕ್ಕೆ । ಮೊರೆಯನಿಡುತಿಹನಾ ಪ

ಜ್ಞಾನಿ ಸಂತತಿ ಜನಿತ । ಅನುಮಾನವಿಲ್ಲದಕೆ
ಮೇಣವನು ಪ್ರಾರ್ಥಿಸುವ । ವಿನಯ ಪೂರ್ವಕದೀ ।
ಆನೇಕ ದುರ್ಯೋನಿ । ಜನಿತ ಸಂಸ್ಕಾರಗಳ
ನೀನಾಗಿ ಕಳೆಯುತಲಿ ಮಾನನಿಧಿ ಸಲಹೋ ೧

ತೈಜಸನೆ ಓಲೆಯಲಿ । ಯೋಜಿಸಿದ ಅಂಕಿತವಾ
ಮಾಜದಲೆ ಇತ್ತಿಹೆನೊ । ವಾಜವರ ವದನಾ
ಮಜಗಜ್ಜನ್ಮಾದಿ । ಬ್ರಾಜಿಷ್ಣುಕರಿವರದ
ಓಜಸವನಿತ್ತಿವಗೆ । ನೀ ಜಯನ ಬೀರೋ ೨

ಲೌಕಿಕದಿ ಅಭಿಮಾನ । ತೋಕನಿಗೆ ನೀ ಬಿಡಿಸಿ
ಏಕಮೇವನೆ ನಿನ್ನ । ಏಕಮಾನಸದೀ ।
ಪ್ರಾಕೃತಸುಗೀತೆಯಲಿ । ಝೇಂಕರಿಪ ಸುಕೃಪವ
ಮಾಕಳತ್ರನೆ ಈಯೋ । ಲೋಕೈಕ ಮೂರ್ತೇ ೩

ಸಾಮ ಸನ್ನುತನೆ ತವ । ನಾಮಾಬ್ಜವಜಾಂಗ್ರಿ
ನೇಮದಿಂ ತೊಡಿಸೊ ಪತಿ । ಭೂಮಗುಣಪೂರ್ಣ

ಸೋಮಧರ ಮಧ್ಯ ಸತ್ । ಶ್ರೀ ಮಧ್ವ ಮತದೀಕ್ಷೆ
ಕಾಮನಕೆ ತವದಾಸ್ಯ । ಸ್ವಾಮಿ ಕರುಣಿವುದೋ ೪

ಪಾವಮಾನಿಗೆ ಪ್ರೀತ । ಭಾವಜಾರಿಯ ತಾತ
ದಾವಗ್ನಿ ಬಹು ಪೀತ । ಗೋವಗಳರತ್ರಾತ
ಗೋವತ್ಸದನಿಗೆ ಹಸು । ಧಾವಿಸೀ ಪೊರೆವಂತೆ
ತಾವಕನ ಪೊರೆಯೊ ಗುರು । ಗೋವಿಂದ ವಿಠಲಾ ೫

೬೬೯

ವಸುಮತೀಶ ವಿಠ್ಠಲನೇ ನೀನಿವಗೆ । ಎಸೆವ ಜ್ಞಾನವನಿತ್ತು
ಹಸನಾಗಿ ಕಾಪಾಡಬೇಕೊ ಹರಿಯೆ ಪ

ಕುಸುಮ ಸಂಭವ ಪಿತನೆ । ವಾಸುದೇವನೆ ಕೃಷ್ಣ
ನಸು ನಗೆಯಲೀ ನಿನ್ನ ಉಪಾಸನವ ಕೊಡೊ ಹರಿಯೆ ಅ.ಪ.

ತರತಮವು ಪಂಚಭೇದದ ಜ್ಞಾನ । ನಿರತಿಶಯ ಹರಿಭಕ್ತಿ
ಗುರುಭಕ್ತಿಗಳ ಕರುಣಿಸೀ ಕಾಪಾಡಬೇಕೊ ಹರಿಯೇ ।
ವರ ಪ್ರದಾಯಕ ಸ್ವಾಮಿ ವೈರಾಗ್ಯ ಭಾಗ್ಯಗಳ ನೀನಿವರಿಗಿತ್ತು
ಕರುಣದಿಂ ಕಾಪಾಡಬೇಕೊ ಹರಿಯೇ ೧

ನಿನ್ನ ಮೊರೆ ಹೊಕ್ಕವನ । ಇನ್ನು ಕೈ ಪಿಡಿಯುವುದು
ನಿನ್ನ ಧರ್ಮವಲ್ಲವೆ ಸ್ವಾಮಿ ರಾಮಚಂದ್ರ ।
ನನ್ನೆಯಿಂದಲಿ ಇವನ ಪಾಪಗಳ ಪರಿಹರಿಸಿ
ನಿನ್ನ ಪದ ಸೇವಕನ ಮಾಡೊ ವೈಕುಂಠ ಪತಿಯೇ ೨

ಖಗವರಧ್ವಜ ದೇವ ಜಗಜ್ಜನ್ಮಾದಿ ಕಾರಣನೆ
ಬಗೆಬಗೆಯ ಮಹಿಮೆಗಳ ತೋರಿ ಕಾಪಾಡೊ ಹರಿಯೇ ।
ಸುಗುಣ ಮೂರುತಿ ದೇವ ತ್ರಿಗುಣ ವರ್ಜಿತ ಸ್ವಾಮಿ
ಹಗರಣಗಳೀಯದಲೆ ಕಾಪಾಡೊ ಹರಿಯೇ ೩

ಇಷ್ಟಮೂರುತಿ ದೇವ ಸೃಷ್ಟ್ಯಾದಿ ಕಾರ್ಯಗಳ
ದೃಷ್ಟಿಯಿಂದಲಿ ಮಾಳ್ಪ ಮಹಮಹಿಮ ಹರಿಯೇ ।
ಕೃಷ್ಣಮೂರುತಿ ಹೃದಯ ಅಷ್ಟದಳ ಮಧ್ಯದಲಿ
ದೃಷ್ಟಿಗೋಚರನಾಗಿ ಕಾಪಾಡೊ ಹರಿಯೇ ೪

ವೇದೈಕ ವೇದ್ಯನೇ ದೇವ ಮುನಿವಂದ್ಯ ಶ್ರೀ
ಬಾದರಾಯಣ ಮೂರ್ತಿ ಹಯ ಮೊಗಾತ್ಮಕನೇ ।
ವೇದಾಣಿ ವಂದ್ಯ ಗುರುಗೋವಿಂದ ವಿಠ್ಠಲನೇ
ನೀ ದಯದಿ ಕೈ ಪಿಡಿದು ಕಾಪಾಡೊ ಹರಿಯೇ ೫

೬೭೦

ವರಾಹ ಹರಿ ವಿಠಲ । ಕಾಪಾಡೊ ಇವನಾ ಪ

ನಿರುತ ತವನಾಮ ಸ್ಮೃತಿ । ಕರುಣಿಸುತ ಕಾಯೋ ಅ.ಪ.

ತಾರಕವು ತವನಾಮ । ಸ್ಮರಣೆ ಮಾತ್ರದಿ ಎಂದು
ಒರಲುತಿದೆ ವೇದಗಳು । ಕರಿವರದ ಹರಿಯೇ
ತರುಳ ಸಾಧ್ವೀ ಯುವಕ । ಮೊರೆಯಿಡುವನಂಕಿತಕೆ
ಒರೆದಿಹೆನು ಅದರಿಂದ । ಕರೆದು ಕೈ ಪಿಡಿಯೋ ೧

ಕಾಮವರದನೆ ದೇವ । ಕಾಮಿತಾರ್ಥಗಳಿತ್ತು
ನೇಮದಿಂ ಪೊರೆಯುವುದು । ಕಾಮಪಿತ ಹರಿಯೇ ।
ನೇಮ ನಿಷ್ಠೆಯಲಿಂದ । ಧೀಮಂತ ಪದಕೆರಗಿ
ಸೌಮನಸ್ಯದಿ ಸೇವೆ । ಸಲ್ಲಿಸುವನಯ್ಯಾ ೨

ಹರಿಯೆ ಸರ್ವೋತ್ತಮನು । ಸಿರಿವಾಯು ಮೊದಲಾದ
ಸುರರೆಲ್ಲ ಕಿಂಕರೆಂಬ ಮತಿಯ ಕೊಟ್ಟು
ವರಜ್ಞಾನ ಭಕುತಿಯನೆ ಕರುಣಿಸುತ ಪೊರೆಯಯ್ಯಾ
ವರದ ಗುರು ಗೋವಿಂದ ವಿಠಲ ಶ್ರೀ ಹರಿಯೇ ೩

೬೭೧

ವರಾಹ ಹರಿ ವಿಠಲ । ಪೊರೆಯ ಬೇಕಿವಳ ಪ

ದುರಿತ ರಾಶಿಗಳಳಿದು । ಕರ ಪಿಡಿಯ ಬೇಕೋ ಅ.ಪ.

ಆನುವಂಶಿಕ ಕರ್ಮ । ಹೀನ ಫಲ ಬೆನ್ಬಿಡಿಸು
ಮಾನಿನೀ ಮಣಿಯ ಬಹು । ಬೇನೆ ಪಡಿಸುವುದೋ ।
ಕೋನೇರಿ ವಾಸ ಅಘ । ಕಾನನಗೆ ದಾವಾಗ್ನಿ
ನೀನೆ ಕೃಪೆ ನೋಟದಲಿ । ಮಾನಿನಿಯ ಸಲಹೋ ೧

ತೀರ್ಥ ಪದ ನಿನ್ನ ಗುಣ । ಕೀರ್ತನೆಯ ನೊದಗಿಸುತ
ಆರ್ತಳುದ್ಧರ ಕಾರ್ಯ । ಪ್ರಾರ್ಥಿಸುವೆ ಹರಿಯೇ ।
ಮೂರ್ತಿ ನಿನ್ನದು ಹೃದಯ । ಪಾತ್ರದಲಿ ಕಾಣಿಸುತ
ಗೋತ್ರ ಉದ್ಧರಿಸಯ್ಯ । ಪೃಥ್ವಿ ಧರ ದೇವಾ ೨

ಪತಿ ಸೇವೆಯಿಂದಿವಳ । ಕೃತ ಕೃತ್ಯಳೆಂದಿನಿಸೊ
ಮತಿ ಮತಾಂವರರಂಘ್ರಿ । ತುತಿಪ ಸನ್ಮತಿಯಾ ।
ಹಿತದಿಂದ ಕರುಣಿಸುತ । ಸತತ ತವಗುಣ ನಾಮ
ಸ್ಮೃತಿಗೊದಗಿ ಭವ ಶರಧಿ । ಪೋತನೀನೆನಿಸೋ ೩

ಅರ್ಥಿಯಲಿ ತವದಾಸ್ಯ । ಪ್ರಾರ್ಥಿಪಳಿಗಿತ್ತಿಹೆನೊ
ಸುಪ್ತೀಶ ನಿನ್ನಾಜ್ಞೆ । ಪೊತ್ತು ಮತ್ತಿರದೀ ।
ಅತ್ಯಧಿಕ ಗುಣ ಪೂರ್ಣ । ಉತ್ತಮೋತ್ತಮ ದೇವ
ಮುತ್ತೈದೆಗೀಯೊ ಹರಿ । ನಿತ್ಯ ಮಂಗಳವಾ ೪

ಸೃಷ್ಟೀಶ ಕ್ರೋಡೇಂದ್ರ । ಅಷ್ಟ ಸೌಭಾಗ್ಯದನೆ
ಪ್ರೇಷ್ಟ ನೀನಾಗಿರಲು । ಕಷ್ಟವೆಲ್ಲಿಹುದೋ
ವಿಷ್ಟರಶ್ರವ ಇವಳ । ಸುಷ್ಟು ಪೊರೆವುದು ಎನುತ
ದಿಟ್ಟ ಗುರು ಗೋವಿಂದ । ವಿಠಲ ಪ್ರಾರ್ಥಿಸುವೇ ೫

೬೭೨

ವಾಜಿ ವದನ ವಿಠಲ ಕಾಪಾಡೊ ಇವಳಾ ಪ

ತೈಜಸೀ ರೂಪದಲಿ । ಆಶಿಷವನಿತ್ತೇ ಅ.ಪ.

ಕಾಮಿತಾರ್ಥದನೆ ಸ । ತ್ಕಾಮ ಫಲಿಸುತಲಿವಳ
ಕಾಮ ಜನಕನೆ ದೇವ । ಕಾಪಾಡೊ ಹರಿಯೇ ।
ಕಾಮ ಮದ ಮಾತ್ಸರ್ಯ । ಶತ್ರು ವರ್ಗವ ಕಡಿದು
ಕಾಮಿನಿಯ ಕೈ ಪಿಡಿದು । ಕಾಪಾಡೊ ಹರಿಯೇ ೧

ಜ್ಞಾನಾನು ಸಂಧಾನ । ಪಾಲಿಸುತಲಿವಳೀಗೆ
ಪ್ರಾಣೇಶ ತವನಾಮ । ಸತತ ಸ್ಮರಿಸೂವಾ ।
ಜಾಣೆ ಎಂದೆನಿಸಿ ಸಂ । ಧಾನ ಸುಖವೀಯೊ ಹರಿ
ಮಾನನಿಧಿ ಮಧ್ವಾಖ್ಯ । ಪ್ರಾಣಸನ್ನುತನೇ ೨

ನೀವೊಲಿಯದಿನ್ನಿಲ್ಲ । ದೇವ ದೇವನೆ ಹರಿಯೆ
ಗೋವತ್ಸದನಿ ಕೇಳಿ । ಆವು ಬರುವಂತೇ ।
ಧಾವಿಸೀ ಬಾರೋ ಗುರು । ಗೋವಿಂದ ವಿಠ್ಠಲನೆ
ಭಾವುಕಳ ಪೊರೆಯಲ್ಕೆ । ದೇವ ಹಯವದನಾ ೩

೬೭೩

ವಾಣಿ ಪತಿಸುತ ವಿಠಲ । ದಿನೆಯನು ಪೊರೆಯೊ ಪ

ಮಾನನಿಧಿ ತವದಾಸ್ಯ । ಕಾನಮಸಿ ಬೇಡುವಳ
ನೀನಾಗಿ ಕೈ ಪಿಡಿದು । ಕಾಪಾಡೊ ಹರಿಯೇ ಅ.ಪ.

ಶುದ್ಧ ಭಾವದ ವೃದ್ಧೆ ಶ್ರದ್ಧೆಯಲಿ ಸೇವಿಪಳು
ಮಧ್ವ ರಮಣನೆ ದೇವ ಉದ್ಧರಿಸೊ ಇವಳಾ ।

ಕೃದ್ಧಿಸುವ ಖಳರನ್ನು ಗೆದ್ದು ಸಂಸ್ಕೃತಿಯೆಂಬ
ಅಬ್ಧಿಯನೆ ದಾಟಿಸೋ । ಹದ್ದು ವಾಹನನೇ ೧

ನೊಂದು ಭವ ಸಿಂದುವಿಲಿ । ಮಂದಳಾಗಿಹಳನ್ನು
ಕಂದರ್ಪಪಿತ ಹರಿಯ । ಕುಂದನೆಣಿಸದಲೇ
ನಂದ ಮುನಿ ಮತ ತತ್ವ । ಸಂಧಿಸುತ ಇವಳೀಗೆ
ಅಂದ ವೈರಾಗ್ಯವೆಂಬಾಭರಣ । ತೊಡಿಸೊ ೨

ದೇವಾದಿ ದೇವ ಭವದಾವಾಗ್ನಿ ಪರಿಹರಿಸೆ
ತೀವ್ರ ತವನಾಮ ಸ್ಮೃತಿ । ಸರ್ವದಾ ಕರುಣಿಸೋ ।
ಈ ವಿಧದ ಭಿನ್ನಪವ । ನೀವೊಲಿದು ಸಲಿಸೆಂದು
ಭಾವದಲಿ ಬೇಡ್ವೆ ಗುರು । ಗೋವಿಂದ ವಿಠ್ಠಲಾ ೩

೬೭೪

ವಾನರ ವಂದ್ಯ ವಿಠಲ । ನೀನೆ ಪೊರೆ ಇವಳಾ ಪ

ಗಾನ ಲೋಲನೆ ದೇವ । ಮೌನಿ ಕುಲ ಪೂಜ್ಯಾ ಅ.ಪ.

ದಾಸತ್ವ ದೀಕ್ಷೆಯನು । ಆಶಿಸುವಳೀ ಕನ್ಯೆ
ವಾಸವ ವಂದಿತನೇ । ವಾಸುದೇವಾಖ್ಯಾ
ವಾಸನೆಯ ತೆರದಿ ಉಪ । ದೇಶವಿತ್ತಿಹೆನಯ್ಯ
ಪೋಷಿಸೋ ಬಿಡದಿವಳ । ಹೃಷಿಕೇಶ ಹರಿಯೇ ೧

ಕಲಿಯುಗದಿ ಸಾಧನವು । ಸುಲಭವೆಂಬುದು ಬಲ್ಲೆ
ಕಲಿಯ ಕಲ್ಮಷ ಕಳೆಯೆ । ಸತಿ ನಿನ್ನ ಸ್ಮೃತಿಯಾ ।
ಒಲಿಸಿ ಸರ್ವದ ನಿನ್ನ । ಪೊಳೆವ ಮಹಿಮೆಗಳನ್ನ
ಒಲಿಸುವಂದದಿ ಮಾಡೊ । ಬಲ ಭೀಮ ವಂದ್ಯಾ ೨

ಭಕುತಿ ಸುಜ್ಞಾನಗಳ । ಪ್ರಕಟಿಸೋ ಇವಳಲ್ಲಿ
ಯುಕುತಿ ಸಂ ಪರಿ ಪೂರ್ಣ । ಅಕುಟಿಲಾತ್ಮಕನೇ

ಮುಕುತಿದಾಯಕ ಹರಿಯೆ । ಭಕುತ ವತ್ಸಲ ದೇವ
ನಿಖಿಲ ಜಗವ್ಯಾಪಿ ಗುರು । ಗೋವಿಂದ ವಿಠಲಾ ೩

೬೭೫

ವಾದಿರಾಜ ಹರಿ ವಿಠಲ । ಪರಿ ಪಾಲಿಸಿವಳಾ ಪ

ಪರಿ ಪರಿಯ ವಿಧದಿಂದ । ಹರಿ ದಾಸ್ಯ ಬೇಡ್ವಾ ಅ.ಪ.

ಹರಿಗುರೂ ಹಿರಿಯರಲಿ । ಉರುತರ ಭಕ್ತಿಯುತೆ
ಮರುತ ಮತದಲಿ ದೀಕ್ಷೆ । ಪರಿ ಪಾಲಿಸಾ ।
ತರುಣಿ ಮಣಿಗಿತ್ತಿಹೆನು । ವರಸು ಉಪದೇಶವನು
ಮರುತಾಂತರಾತ್ಮ ಹರಿ । ಪರಿ ಪಾಲಿಸಿವಳಾ ೧

ಸಂಸಾರ ವೈರಾಗ್ಯ । ಕರುಣಿಸುತ ಇವಳೀಗೆ
ಕಂಸಾರಿ ತವಪಾದ । ಗುಣರೂಪ ಕರ್ಮಾ
ಶಂಸನಕೆ ಮನವಿತ್ತೂ । ಸಂಸ್ಕೃತಿಯ ಕಳೆವಂಥ
ಸಂಶಯ ರಹಿತ ಪಥ । ಹಂಸಾಖ್ಯ ತೋರೋ ೨

ಆಶೆಪಾಶವ ಕಿತ್ತು । ಶ್ರೀಶನುತ್ಕರ್ಷಗಳ
ಲೇಸಾಗಿ ಭಜಿಪಂಥ । ಮೀಸಲದ ಮನವಾ ।
ಮೇಶ ಗುರು ಗೋವಿಂದ । ವಿಠಲ ನೀ ನಿತ್ತಿವಳ
ಪೋಷಿಸುವುದು ಬಿಡದೆ । ವಾಸುದೇವಾಖ್ಯಾ ೩

೬೭೬

ವಾಯುವಂದಿತ ವಿಠಲ । ಪೊರೆಯ ಬೇಕಿವನಾ ಪ

ಜೀಯ ನಿನ್ನಯ ಪಾದ । ಭಜಕನಾದವನಾ ಅ.ಪ.

ಗುರುಹಿರಿಯರಾ ಸೇವೆ । ನಿರುತ ಗೈಯುವ ಮನವ
ಕರುಣಿಸುವುದಿವ ನೀಗೆ । ಮರುತಾಂತರಾತ್ಮ
ಗರುಡ ಗಮನನೆ ದೇವ । ಗರ್ವಗಳ ಪರಿಹರಿಸಿ
ಸರ್ವಾಂತರಾತ್ಮಕನೆ । ಕಾಪಾಡೊ ಇವನಾ ೧

ಹರಿಯೆ ಪರನೆಂಬಂಥ । ವರಸುಜ್ಞಾನವ ಕೊಟ್ಟು
ತರತಮಂಗಳು ಅಂತೆ । ಎರಡು ಮೂರುಭೇದಾ
ಪರಮ ಸತ್ಯವು ಎಂಬ । ವರಜ್ಞಾನ ಪಾಲಿಸುತ
ಪರಿಪರಿಯ ಭವಭಂದ । ಪರಿಹರಿಸೊ ಹರಿಯೇ ೨

ಬೇಕಾದ ವರಗಳನೆ । ತೋಕನಿಗೆ ನೀನಿತ್ತು
ಲೌಕೀಕ ಸುಖಗಳು । ನಶ್ವರವು ಎಂಬಾ
ವಾಕು ಪಲ್ಲವಿಸುತ್ತ । ಕಾಕು ಸಂಗಮಕೆಡಿಸೊ
ಪ್ರಾಕ್ಕುಕರ್ಮವ ಕಳೆಯೊ । ಶ್ರೀ ಕರಾರ್ಚಿತನೆ ೩

ದುರಿತವನ ಕುಠಾರ । ಶರಣಜನ ವತ್ಸಲನೆ
ದುರಿತಾಳಿ ದೂರೈಸಿ । ಪೊರೆಯೊ ಹರಿಯೇ
ಕರುಣ ನಿಧಿ ನೀನೆಂದು । ಮರೆಹೊಕ್ಕೆ ತವಪಾದ
ಚರಣ ದಾಸನ ಪೊರೆಯೊ । ಹರಿಯೆ ಪರಮಾಪ್ತ ೪

ಶ್ರೀವರನೆ ಸರ್ವೇಶ । ಭಾವದಲಿ ಮೈದೋರಿ
ಭಾವುಕನ ಪೊರೆ ಎಂದು । ದೇವ ಪ್ರಾರ್ಥಿಸುವೇ
ಈ ವಿಧದ ಬಿನ್ನಪವ । ನೀವೊಲಿದು ಸಲಿಸುವುದು
ದೇವ ದೇವೇಶ ಗುರು । ಗೋವಿಂದ ವಿಠಲಾ ೫

೬೭೭

ವಾಸಿಷ್ಠ ಕೃಷ್ಣ ವಿಠಲ । ನೀ ಸಲಹೊ ಇವನಾ ಪ

ಮೇಶ ಮಧ್ವೇಶ ನಿನ್ನಡಿಯ । ದಾಸ್ಯವನು
ಆಶಿಸುವ ಭಕ್ತಗೆ ಪ । ರಾಶರಾತ್ಮಜ ಒಲಿದೂ ಅ.ಪ.

ವೇದವ್ಯಾಸನೆ ನಿನ್ನ ಆದರದಿ ಧಾನಿಸುತ
ಮೋದದಲಿ ಶ್ರುತತತ್ವ । ಪಾದಾರ್ಪಣೆನ್ನೇ ।
ನೀದಯದಿ ಮರೆಯಾಗಿ । ತೋರ್ದೆ ಗುರು ಬಿಂಬವನು
ವೇದಾಂತ ವೇದ್ಯ ಹರಿ । ಹೃದಯ ಗಹ್ವರದೀ ೧

ಕ್ಲೇಶಗಳ ದಹಿಸಿ ಸ । ರ್ವೇಶ ಸದ್ಬೋಧಗಳ
ಲೇಸಾಗಿ ಅರುಹುತಲಿ । ಶ್ರೀತ ಕೈ ಪಿಡಿಯೋ ।
ತೋಷ ಕ್ಲೇಶಂಗಳು ರ । ಮೇಶ ನಿನ್ನಿಂದೆಂಬ
ಭಾಸುರದ ಜ್ಞಾನ ಪ್ರ । ಕಾಶ ಕೊಡು ಇವಗೆ ೨

ಭೇದ ಪಂಚಕ ವರುಹು । ಮೋದ ಮುನಿ ಮತ ದೀಕ್ಷೆ
ಸಾಧಿಸಿವನಲಿ ಬಹಳ । ಸಾಧು ವಂದ್ಯಾ ।
ಭೊಧವಾಗಲಿ ಇವಗೆ । ಅದ್ವೈತ ತ್ರಯದರಿವು
ಆದಿಮೂರುತಿ ನಿನ್ನ । ಪಾದ ನಂಬಿಹನೋ ೩

ಹರಿಗುರು ಹಿರಿಯರಲಿ । ವರಭಕ್ತಿ ಕರುಣಿಸುತ
ಪರಿ ಪರಿ ಲೀಲೆಗಳ ತೋರಿ ಇವನಲ್ಲೀ
ಪರಿಹರಿಸೊ ಭವಬಂಧ । ಮರುತಾಂತರಾತ್ಮಕನೆ
ಎರಗಿ ತವ ಪದದಲ್ಲಿ । ಮೊರೆಯ ಬಿದ್ದವಗೇ ೪

ಸಾವಧಾನದಿ ಧ್ಯಾನ । ಭಾವ ವೃದ್ಧಿಯಗೈಸಿ
ದೇವ ತವ ರೂಪವನು । ಆವ ಹೃದ್ಗುಹಡೀ
ಓವಿ ಕಾಂಬುವ ಹದನ । ನೀವೊಲಿದು ಪಾಲಿಪುದು
ಗೋವುಗಳ ಪಾಲ ಗುರು ಗೋವಿಂದ ವಿಠಲಾ ೫

೬೭೮

ವಾಸುಕೀಶಯನ ವಿಠಲ ನೀನಿವಳ
ಕಾಪಾಡಬೇಕೋ ಹರಿಯೇ ಪ

ಭಾಸುರಾಂಗನೆ ದೇವ ಸರ್ವೇಶ
ಸರ್ವವಿಧದಲಿ ಕಾಯೊ ಹರಿಯೇ ಅ.ಪ.

ಜಗದೀಶ ಜಗಜನ್ಮಾದಿಕಾರಣನೆ ಶ್ರೀಹರಿಯೆ
ಹಗರಣಗಳಾ ಕಳೆದು ಮಿಗೆ ಭಕುತಿ ಸುಜ್ಞಾನವಿತ್ತು ।
ಬಗೆಬಗೆಯ ಮಹಿಮೆಗಳ ನೀತೋರಿ ನಿನವ್ಯಾಪ್ತಿ
ಮಿಗಿಲಾಗಿ ತಿಳಿಸುತ್ತ ಸಲಹ ಬೇಕಿವಳಾ ೧

ಮಧ್ವಮತ ದೀಕ್ಷೆಯನು ಉದ್ಧರಿಸಿ ಇವಳಲ್ಲಿ
ಸದ್ಧರ್ಮ ಪದ್ಧತಿಯ ಶ್ರದ್ಧೆಗಳ ನಿತ್ತೂ ।
ಮಧ್ವೇಶ ಶ್ರೀಹರಿಯೆ । ಸರ್ವೋತ್ತುಮನೆಂಬ
ಶುದ್ಧ ಬುದ್ಧಿಯನಿತ್ತು ಸಲಹ ಬೇಕಿವಳಾ ೨

ತಾರತಮ್ಯ ಜ್ಞಾನ ಪಂಚಭೇದವನರುಹಿ
ವಾರವಾರಕೆ ನಿನ್ನ ಚಾರು ಮೂರುತಿಯ ।
ಬಾರಿಬಾರಿಗೆ ಹೃದಯ ವಾರಿಜದಿ ಕಾಂಬಂಥ
ಚಾರು ಮಾರ್ಗವ ತೋರಿ ಕಾಪಾಡೊ ಹರಿಯೇ ೩

ಲೌಕೀಕ ಮಾರ್ಗಗಳು ವೈದೀಕ ವಾಗ್ವಪರಿ
ನೀ ಕರುಣಿಸಿ ಕಾಯೊ ಕಮಲಾಯ ತಾಕ್ಷ ।
ನೀ ಕಾಯದಿರಲಿನ್ನು ಕಾಯ್ವರ್‍ಯಾರಿಹರಯ್ಯ
ಮಾಕಾಂತ ಸಲಹಯ್ಯ ಗೋಕುಲಾನಂದ ೪

ಕಂದರ್ಪ ಜನಕ ಮನ ಮಂದಿರದಿ ನೀತೋರಿ
ನಂದವನೇ ನೀನಿತ್ತು ಇಂದಿರೇಶನೆ ಕಾಯೊ
ತಂದೆ ಎನ ಬಿನ್ನಪವ ಛಂದದಲಿ ಮನ್ನಿಪುದು
ನಂದ ನಂದನ ಗುರು ಗೋವಿಂದ ವಿಠಲಾ ೫

೬೭೯

ವಾಸುದೇವ ಕೃಷ್ಣ ವಿಠಲನೇ । ಪಾಲಿಸಿವಳಾ
ದೇಶಕಾಲ ಗುಣ ಅತೀತನೇ ಪ

ಬಾಸುರಾಂಗ ನಿನ್ನಪಾದ । ಸೂಸಿ ಭಜಿಪ ಮತಿಯು ಇಹುದು
ಲೇಸು ನಿನ್ನ ಅಂಕಿತೋಪ । ದೇಶದಿಂದ ಸಲಹೊ ಇವಳ ಅ.ಪ.

ಅಂಚೆಗಮನ ಪದಕೆ ಯೋಗ್ಯರಾ । ದೃಶ್ಯತೋರ್ದೆ
ಸಂಚಿತಾದಿ ಕಳೆವ ಮಾರ್ಗದಾ ।
ಪಂಚಬೇಧ ತಾರತಮ್ಯ । ಮುಂಚೆ ತಿಳಿವ ಮತಿಯನಿತ್ತು
ಮಿಂಚಿನಂತೆ ಮನದಿಕಾಂಬ । ಪಂಚರೂಪಿ ನೀನೆ ವಲಿಯೊ ೧

ಪತಿಯು ಸುತರು ಮಿತ್ರರ್ಗೆ ಸೂಸುವಾ । ಶ್ರೀಶ ಶ್ರೀ
ಪತಿಯ ಸೇವೆ ಎಂದು ಕರೆಸುವಾ । ಮತಿಯನಿತ್ತು
ಪೊರೆಯೊ ಹರಿಯೆ । ಗತಿಯು ಇದಕೆ ಅನ್ಯಕಾಣೆ ಪತಿಯ
ಪರಮದೈವವೆಂಬ । ಪಥವ ತೋರಿ ಪೊರೆಯೊ ಇವಳಾ ೨

ಮುಕ್ತಿಯೋಗ್ಯ ದಾರಿ ಎನಿಸುವಾ । ಮಧ್ವ ಶಾಸ್ತ್ರ
ವೃತ್ತಿಯಲ್ಲಿ ಭಕ್ತಿ ಪೂರ್ಣವಾ ।
ಇತ್ತು ಜ್ಞಾನ ವೃದ್ಧಿಯ ಪ್ರ । ವೃತ್ತಿ ಮನ ವಿರಕ್ತಿಯಲ್ಲಿ
ಶಕ್ತಿ ಕೊಡುವುದೆಂದು ತುತಿಪೆ । ಪ್ರಾರ್ಥನೆಯ ಸಲ್ಲಿಸಯ್ಯ ೩

ಅಂಬುಜಾಕ್ಷ ಭವಸಮುದ್ರವಾ । ದಾಟಿಸೂವ
ಅಂಬಿಗಾನೆ ನಿನ್ನ ನಾಮವಾ ।
ನಂಬಿಹೇನೊ ದೃಢದಿ ಮನದಿ । ಇಂಬಿನಿಂದ ನಾಮ ಮಂತ್ರ
ಉಂಬ ಸುಖವ ನಿವಳಿಗಿತ್ತು । ಸಂಭ್ರಮವ ತೋರಿ ಸಲಹೋ ೪

ಗೋವ್ಗಳೇಶ್ಯುಪೇಂದ್ರ ಹಯಮುಖ । ಶರ್ವ ಗುರು -
ಗೋವಿಂದ ವಿಠಲ ಸರ್ವ ಪ್ರೇರಕಾ ।

ಭಾವದಿಂದ ಭಜಿಪ ನಿನ್ನ ಸೇವಕಾಳ ಸಲಹೊ ಎಂಬ
ದೇವದೇವ ಭಿನ್ನಪಾವ । ಓವಿ ಸಲಿಸು ಎಂದು ಬೇಡ್ವೆ ೫

೬೮೦

ವಾಸುದೇವ ಹರಿ ವಿಠಲಾ । ಪೋಷಿಸುವುದಿವನಾ ಪ

ನೀಸಲಹದಿರೆ ಅನ್ಯ । ಆಶ್ರಯಗಳುಂಟೇ ಅ.ಪ.

ದಾಸವೃತ್ತಿಯಲಿದ್ದು । ಮೀಸಲಳಿಯದೆ ಇರುವ
ದಾಸದೀಕ್ಷಾಂಕಿತವು । ಲೇಸು ದೊರೆಯದಲೇ ।
ಘಾಸಿ ಪಡುತಲಿ ಮನದಿ । ಆಶ್ರಯಿಸಿ ಎನ್ನ ಸು
ಪ್ರೀಶ ಸೂಚ್ಯಪರಿ ಉಪ । ದೇಶವಿತ್ತಿಹೆನೋ ೧

ಒಂದೊಮ್ಮೆ ಇವನಮ್ಮ । ಬಂಧುವೆಂದೆಣಿಸಿಹನೊ
ಇಂದಿರಾಪತಿ ಹರಿಯೆ । ಕಂದರ್ಪಜನಕಾ
ತಂದೆತಾಯಿಯು ನೀನೆ । ಕುಂದುನೆಣಿಸದೆ ಇವನಾ
ಛಂದದಲಿ ಸಲಹೊ ಹರಿ । ನಂದ ಮುನಿವಂದ್ಯಾ ೨

ತಾರತಮ್ಯಜ್ಞಾನ ಮೂರೆರಡು ಭೇದಗಳ
ವಾರವಾರಕೆ ತಿಳಿಸಿ । ಕಾಪಾಡೊ ಹರಿಯೇ ।
ಮಾರಪಿತಮುರವ್ಮೈರಿ । ವೈರಾಗ್ಯ ಭಾಗ್ಯಕ್ಕೆ
ದಾರಿತೋರುತ ಪೊರೆಯೊ । ವಾರಿಜಾಂಬಕನೇ ೩

ಉತ್ತಮಾನುಷ್ಠಾನ । ಇತ್ತು ಈತಗೆ ನೀನು
ಚಿತ್ತದೊಳು ವ್ಯಾಪ್ತ ಸ । ರ್ವತ್ರ ಸ್ಮೃತಿಯಿತ್ತು ।
ಎತ್ತು ಭವವನಧಿಯಿಂ । ಕೃತ್ತಿವಾಸನ ತಾತ
ಮತ್ತನ್ಯ ಬೇಡೆ ನಿನ । ಚಿತ್ತದೊಲ್ಲಭನೇ ೪

ದೇವ ದೈತ್ಯರು ದೇಹ । ಆವಾಶಿವಿಹರೆಂಬ
ಭಾವಗಳ ತಿಳಿಸುತ್ತ । ತೀವ್ರುಪಾಸನವಾ ।

ದೇವ ಇವಗಿತ್ತು ಸಂ । ಭಾವಿಪುದು ಶ್ರೀಹರಿಯೆ
ಗೋವಿಂದಾಪತಿಯೆ ಗುರು । ಗೋವಿಂದ ವಿಠಲಾ ೫

೬೮೧

ವಿಘ್ನೇಶ ಪ್ರಿಯ ವಿಠಲ । ಸದ್ಗುಣಾರ್ಣವನೇ ಪ

ಭಗ್ನ ಗೈಯ್ಯುತ ದುರಿತ । ಉದ್ಧರಿಸೊ ಇವನಾ ಅ.ಪ.

ಮೂಲ ಕಾರಣ ಜಗಕೆ । ಪಾಲಾಬ್ಧಿಶಯ ನಿನ್ನ
ಲೀಲೆಗಳ ತೋರುತ್ತ । ಸಲಹೊ ಇವನಾ
ಕೀಲಾಲ ಜಾಸನುತ । ಮಾಲೋಲ ಶ್ರೀ ಹರಿಯೆ
ವ್ಯಾಳ್ಯ ವ್ಯಾಳ್ಯಕೆ ಪಾಪ । ಜಾಲಗಳ ಹರಿಸೋ ೧

ಆಪ್ತ ಸತಿಸುತರಲ್ಲಿ । ವ್ಯಾಪ್ತ ನಿಹ ಹರಿಯೆಂದು
ಸೂಕ್ತೋಪಚಾರಗಳ । ಪ್ರಾಪ್ತಿಗೈಸುತಲೀ ।
ಮೌಕ್ತಿಕೋ । ಪಾಯವೇ । ದೋಕ್ತಸಮನಿಸುತ
ಕೀರ್ತಿಕೊಡಿಸಿವಗೆ ಶ್ರೀ । ಕಾಂತ ಮೂರುತಿಯೇ ೨

ಪಾಂಚ ಭೌತಿಕ ದೇಹ । ಪಂಚತ್ವ ಪಡೆವುದನೆ
ಸಂಚಿಂತನೆಯ ಕೊಟ್ಟು । ಪಂಚ ಪಂಚಾತ್ಮಾ
ಮುಂಚೆ ತಿಳಿಸಿವಗೆ ಸ । ತ್ವಂಚ ಭೇದ ಜ್ಞಾನ
ವಾಂಛಿತಾರ್ಥದನಾಗೊ । ಅಂಚೆವಹಪಿತನೇ ೩

ನಂದ ಮುನಿ ಮತದ ಮಕ । ರಂದ ಉಣಿಸುತ ಇವಗೆ
ಸಂದೇಹ ಕಳೆದು ಆ । ನಂದಗಳ ನೀಯೋ
ಇಂದಿರಾರಾಧ್ಯ ಪದ । ಮಂದಾಕಿನೀ ಜನಕ
ಕಂದನನು ಕಾಪಾಡು । ಯೆಂದು ಪ್ರಾರ್ಥಿಸುವೇ ೪

ಆವದೇಶವು ಕಾಲ । ಯಾವ ಸಮಯದಲಿರಲಿ
ದೇವತವ ಸಂಸ್ಮರಣೆ । ಭಾವದಲಿ ಮಾಳ್ಪಾ

ಭಾವ ಪಾಲಿಸುತಿವಗೆ । ನೀವೊಲಿಯ ಬೇಕೆಂದು
ದೇವ ಪ್ರಾರ್ಥಿಪೆ ಗುರೂ । ಗೋವಿಂದ ವಿಠಲಾ ೫

೬೮೨

ವಿಬುಧ ಪ್ರಿಯ ವಿಠಲ । ಶುಭದ ಪೊರೆ ಇವನಾ ಪ

ಅಬುಜ ಜಾಂಡೋದರನೆ । ಕುಬುಜೆ ಸದ್ ವರದಾ ಅ.ಪ.

ದಾಸನಾಗಲು ಇವಗೆ । ಆಶೆ ಪ್ರೇರಕನಾಗಿ
ವಾಸು ದೇವಾಖ್ಯ ತೈ । ಜಸನೆ ಕಾರ್ಯರೂಪಿ
ಸೂಸಿತವ ರೂಪವನು । ಲೇಸಾಗಿ ತೋರಿಸೆಹೆ
ಕೇಶವನೆ ಅದನೆ ಉಪ । ದೇಶಿಸಿಹೆ ಹರಿಯೆ ೧

ಪ್ರೀಯ ಅಪ್ರೀಯ ಉ । ಭಾಯಾನು ಭವದಲ್ಲಿ
ಆಯುತನು ನೀನಾಗಿ । ಉದ್ವೇಗ ಕೊಡದೇ
ನಿಯುತಕರ್ಮದಿ ರತನ । ದಯದಿಂದ ನೀಮಾಡಿ
ಹಯಮೊಗಾಖ್ಯ ಹರಿಯೆ । ಕೈಯಪಿಡಿ ಇವನಾ ೨

ಲೋಕವಾಕ್ಯದಿ ವಿರಸ । ಲೋಕೈಕನಾಥನು
ವಾಕ್ಯದೊಳು ರತಿಯನ್ನೆ । ನೀ ಕೊಟ್ಟಿ ಕಾಯೋ ।
ಮಾಕಳತ್ರನದಾಸ । ಸಂಕುಲದಿ ಸದ್‌ಭಕ್ತಿ
ಶ್ರೀಕರನೆ ನೀನಿತ್ತು । ಸಾಕ ಬೇಕಿವನಾ ೩

ಮಧ್ವಮತದಲಿ ದೀಕ್ಷೆ । ಶುದ್ಧ ಹರಿ ಗುರುಭಕ್ತಿ
ಅದ್ವೈತ ತ್ರಯವರಿಯೆ । ವಿದ್ಯೆ ಸಂಘಟಿಸೀ
ಕೃದ್ಧಖಳ ನಿವಹಗಳ । ಪ್ರಧ್ವಂಸಗೈಯುತಲೀ
ಉದ್ಧರಿಸೋ ಇವನನ್ನು । ಮಧ್ವಾಂತರಾತ್ಮ ೪

ವೇದ ಕದ್ದೊಯ್ದವನ । ಬಾಧೆ ನೀ ಪರಿಹರಿಸಿ
ಸಾಧುಗಳ ಪೊರೆದಂತೆ । ಆದರಿಸಲಿವನಾ

ಮೋದಿ ಗುರು ಗೋವಿಂದ । ವಿಠಲನೆ ಬಿನ್ನಪಿಪೆ
ಮೈದೊರಿ ಸಲಹುವುದು । ಸಾಧುವಂದಿತನೇ ೫

೬೮೩

ವಿಧಿಮಾತೆ ಪತಿ ವಿಠಲ । ಬುಧಜನೇಡ್ಯಾ
ಮುದದಿಂದ ಲೀಕೆಯನು । ಸಲಹೊ ಶ್ರೀ ಹರಿಯೇ ಪ

ನೊಂದು ಭವದಲಿ ಬಹಳ । ಇಂದಿರಾರಮಣ ತವ
ಅಂದ ಪದದಾಸ್ಯ ಮನ । ಮಂದಿರದಿ ಬಯಸೀ ।
ಬಂದು ಬೇಡ್ದಳಿಗೆ ನಾ । ನೊಂದು ಅಂಕಿತವಿತ್ತೆ
ತಂದೆ ತೈಜಸನೆ ನೀ । ನಂದೆ ಪೇಳ್ದಂತೇ ೧

ಬಹಳ ಭಕ್ತಿಯಲಿಂದ । ವಿಹಿತ ಕರ್ಮಾಸಕ್ತೆ
ಅಹಿಶಯ್ಯ ಕೃಪೆಯಿಂದ । ಮಹಿಮೆ ತೋರೀ ।
ಅಹಿತ ವಿಹಿತಗಳೆರಡ । ಸಹನೆ ದಯಪಾಲಿಸುತ
ಮಹಮಹಿಮ ಪೊರೆ ಇವಳ ಸುಹೃತ ಜನರ ಬಂಧೋ ೨

ಜ್ಞಾನಾಯು ರೂಪನಿಗೆ । ನೀನಿವಳನೊಪ್ಪಿಸುತ
ಸಾನುಕೂಲಿಸು ಮುಕುತಿ । ಜ್ಞಾನ ಭಕುತಿಗಳಾ ।
ಕಾಣೆ ತವ ಕಾರುಣ್ಯ । ಕೆಣೆಯು ತ್ರೈಭುವನದಲಿ
ಮಾಣದಲೆ ಪೊರೆ ಇವಳ । ದೀನ ಜನ ಪಾಲಾ ೩

ಕಾಳೀಯನ್ಹೆಡೆಯಲ್ಲಿ । ತಾಳ ಮೇಳಕೆ ಕುಣಿದು
ಕಾಳ ಸರ್ಪದ ಮದವ । ಮೇಲಾಗಿ ಕಳೆದ
ಕಾಳಿಂದಿ ಪತಿ ಕೃಷ್ಣ । ಕಾಳಿಪತಿನುತ ಹರಿಯೆ
ಕಾಳಘಾವಳಿಗಳನು । ಕಳೆದು ಪೊರೆ ಇವಳಾ ೪

ಪಾವನಾತ್ಮಕ ದೇವ । ಪಾವಮಾನಿಯ ಪ್ರೀಯ
ಜೀವ ಪರತಂತ್ರತೆಯ । ಭಾವ ಅನುಭವದೀ

ದೇವ ಸಾಧನಗೈಸಿ । ಜೀವಿ ಇವಳನು ಪೊರೆ
ಗೋವಿಂದಾಂಪತಿ ಗುರು । ಗೋವಿಂದ ವಿಠಲಾ ೫

೬೮೪

ವಿದುರ ವಂದ್ಯ ವಿಠಲನೆ ಕಾಯ ಬೇಕಿವನಾ ।
ವಿಧಿ ಪಿತನೆ ತವ ಪಾದ ಪದುಮ ದಾಸ್ಯವನಿತ್ತು ಪ

ಸಂಸಾರದಲಿ ನೊಂದು । ಕಂಸಾರಿ ತವ ಪಾದ
ಪಾಲಿಸುವನೆ ಶಿರದೊಳಗಸಂಶಯದಿ ಧರಿಸೀ ।
ವಿಂಶತಿಯ ಮತ್ತೊಂದು ಭಾಷ್ಯ ದೂಷಕ ಮರು–
ತ್ತಂಶ ಸಂಭೂತ ಶ್ರೀ ಮಧ್ವ ಮತದವನಾ ೧

ಆವ ಭವರೋಗ ಹ । ಭಾವ ಕ್ರಿಯ ದ್ರವ್ಯಾಖ್ಯ
ಅದ್ವೈತ ತ್ರಯಗಳನು ಸಂಧಾನವಿತ್ತೂ ।
ದೇವ ದತ್ತದಿ ತೃಪ್ತಿ ಭಾವವನೆ ನೀನಿತ್ತು
ಭಾವದಲಿ ತವರೂಪ ಓವಿ ತೋರುವುದೂ ೨

ಆಗಮಸುವೇದ್ಯ ಭವರೋಗ ವೈದ್ಯನೆ ದೇವ
ನಾಗಾರಿ ವಾಹನನೆ । ಯೋಗಿಧ್ಯೇಯಾ
ಆಗು ಹೋಗುಗಳೆರಡು । ನೀನಿತ್ತುದೆಂಬಂಥ
ಜಾಗ್ರತೆಯ ನೀನಿತ್ತು ಕಾಪಾಡು ಹರಿಯೇ ೩

ಕುಡುತೆ ಪಾಲನು ಭಕ್ತ ಕೊಡಲದನು ಕುಡಿಯುತ್ತ
ಕಡಲಂತೆ ಹಾಯಿಸಿದೆ ಬಡವರಾಧಾರೀ ।
ಧೃಡಭಕ್ತಿ ಸುಜ್ಞಾನ ವೈರಾಗ್ಯ ಭಾಗ್ಯಗಳ
ಕಡು ಕರುಣಿ ನೀನಿತ್ತು ಕಡೆಹಾಯ್ಸು ಭವವಾ ೪

ಸರ್ವಜ್ಞ ಸರ್ವೇಶ ಸರ್ವಾಂತರಾತ್ಮಕನೆ
ದರ್ವಿಜೀವನ ಕಾಯೊ ದುರ್ವಿಭಾವ್ಯಾ ।

ಗುರ್ವಂತರಾತ್ಮ ಮತ್ಪ್ರಾರ್ಥನೆಯ ಸಲಿಸಯ್ಯ
ಶರ್ವವಂದ್ಯನೆ ಗುರು ಗೋವಿಂದ ವಿಠಲಾ ೫

೬೮೫

ವೆಂಕಟ ಕೃಷ್ಣವಿಠಲ । ಲೆಂಕನನ ಸಲಹೋ ಪ

ಪಂಕಜೋದ್ಭವ ಪಿತನೆ । ವೆಂಕಟೇಶಾ ಅ.ಪ.

ಅಬುಜ ಜಾಂಡೋದರನೆ । ಶಬರಿ ಎಂಜಲನುಂಡೆ
ಕುಬುಜೆಗಂಧಕೆ ಒಲಿದು । ಸದ್ಗತಿಯನಿತ್ತೆ
ಇಭವರದ ನೀನಾದೆ । ಕುಲಶೀಲನೆಣಿಸದಲೆ
ವಿಭುವೆ ಈ ಭಕುತಂಗೆ । ವೈಭವವ ತೋರೋ ೧

ಮಧ್ವಮತ ತತ್ವದಲಿ । ಶುದ್ಧ ಭಕುತಿಯ ತೋರ್ಪ
ಶ್ರದ್ಧಾಳು ಎನಿಸಿಹನು । ಬುದ್ಧಿ ಪೂರ್ವಾ
ಸಿದ್ಧಾಂತ ತಾತ್ಪರ್ಯ । ಬುದ್ಧಿಗೆಟಕೂವಂತೆ
ಉದ್ಧರಿಸ ಬೇಕಿವನ । ಅಬ್ಧಿಜೆಯ ರಮಣ ೨

ನೀಚೋಚ್ಚ ತರತಮದ । ಸ್ವಚ್ಛ ಜ್ಞಾನವ ನೀಯೊ
ಮತ್ಸ್ಯಕಚ್ಛಪರೂಪಿ । ಸಚ್ಚಿದಾನಂದಾ
ನಿಚ್ಚ ನಾಮಸ್ಮರಣೆ । ಸ್ವಚ್ಛ ಪೇರ್ಮೆಲಿ ಗೈವ
ಉತ್ಸಾಹ ಇವಗಿತ್ತು । ಉದ್ಧರಿಸೊ ಹರಿಯೇ ೩

ತೈಜಸನೆ ನೀನಾಗಿ । ತೇಜೊರೂಪವ ತೋರಿ
ಸೋಜಿಗದಿ ಗುರುರೂಪ । ಮಾಜದಲೆ ತೋರ್ದೇ
ಈ ಜೀವಿಗುನ್ನತದ । ಉಪದೇಶವಿತ್ತಿಹೆನೊ
ಜಗತ್ಪತಿಯೆ ಅ । ವ್ಯಾಜ ಕರುಣೀ ೪

ಪಾಕ್ಕು ಕರ್ಮವ ಕಳೆದು । ಲೋಕದಲಿ ಸತ್ಕೀರ್ತಿ
ಬೇಕಾದ ವರಗಳನೆ । ತೋಕನಿಗೆ ಈಯೋ

ನಾಗನದಿ ಪಿತ ಗುರೂ । ಗೋವಿಂದ ವಿಠ್ಠಲನೆ
ವಾಕು ಮನ್ನಿಸಿ ಕಾಯೋ । ಶ್ರೀ ಕರಾರ್ಜಿತನೇ ೫

೬೮೬

ವೆಂಕಟ ಗಿರಿ ವಿಠಲ । ಲೆಂಕಳನ ಪೊರೆಯೋ ಪ
ಪಂಕಜಾಸನ ವಂದ್ಯ । ಆಕಳಂಕ ಮಹಿಮಾ ಅ.ಪ.

ಸಾಧ್ವಿಮಣಿ ತವದಾಸ್ಯ । ಬುದ್ಧಿಯಲಿ ಮೊರೆಯಿಟ್ಟು
ಉದ್ಧರಕೆ ಕಾದಿಹಳೊ । ಅಧ್ವರೇಡ್ಯ ಹರೀ ।
ಮಧ್ವಮತ ಪೊತ್ತಿರುವ । ಶುದ್ಧಕಾರಣದಿಂದ
ಉದ್ಧಾರ ಗೈಯ್ಯುವುದೊ । ಶ್ರದ್ಧ ಪತಿನುತನೇ ೧

ಖೇಚರೋತ್ತಮ ದೇವ । ವಾಚಾಮ ಗೋಚರನೆ
ಪ್ರಾಚೀನದುಷ್ಕರ್ಮ । ಮೋಚನವಗೈಸೇ
ಯಾಚಿಸುವೆ ನಿನ್ನಲ್ಲಿ । ಕೀಚಕಾರಿ ಪ್ರಿಯನೇ
ಮೋಚಕೇಚ್ಛೆಯ ಮಾಡಿ । ಸೂಚಿಸೋ ಕರುಣಾ ೨

ತರತಮದ ಸುಜ್ಞಾನ । ವರಭಕ್ತಿ ವೈರಾಗ್ಯ
ಸ್ಥಿರ ಪಡಿಸೊ ಇವಳಲ್ಲಿ । ವರ ವೆಂಕಟೇಶಾ ।
ಗುರು ಕರುಣವಿಲ್ಲದಲೆ । ಹರಿಯೊಲಿಯನೆಂದೆಂಬ
ಸ್ಥಿರ ಮತಿಯನೇ ಕೊಟ್ಟು । ಕರ್ಮ ಪಥಸವೆಸೋ ೩

ಹರಿನಾಮ ಸ್ಮೃತಿಗಿಂತ । ಪರಮ ಸಾಧನ ಕಾಣೆ
ವರಕಲೀಯಲಿಯೆಂದು । ಸಾರತಿವೆ ಶಾಸ್ತ್ರಾ
ತುಣಿಗಂತೆಯೆ ಮತ್ತೆ । ವರ ಸ್ವಪ್ನವನುಸರಿಸಿ
ಬರೆದಿಹೆನೊ ಅಂಕಿತವ । ಕರುಣ ರಸ ಪೂರ್ಣಾ ೪

ಗೋವರ್ಧನೋದ್ಧರನೆ । ಕೈವಲ್ಯ ಫಲದಾತ
ಸೇವಕಳ ಕೈಪಿಡಿಯೆ । ಓವಿ ಪ್ರಾರ್ಥಿಸುವೇ ।

ಭಾವುಕರ ಪಾಲ ಸಂ । ಭಾವಿಸೀಕೆಯ ಕಾಯೊ
ಗೋವಿದಾಂ ಪತಿಯೆ ಗುರು । ಗೋವಿಂದ ವಿಠಲಾ ೫

೬೮೭

ವೆಂಕಟ ನರಹರಿ ವಿಠಲ । ಪಂಕಕಳೆದಿವಳಾ ಪ

ಸಂಕಟವ ಪರಿಹರಿಸಿ । ಕಾಪಾಡ ಬೇಕೋ ಅ.ಪ.

ಸಾರವಿರಹಿತವು ಸಂ । ಸಾರ ಶರಧಿಯು ಎಂಬ
ವೀರವೈರಾಗ್ಯ ಕಂ । ಸಾರಿ ಕೊಡುತಿವಳಾ
ಪಾರುಗೈ ಭವದಕೂ । ಸಾರವನು ಎಂದೆನುತ
ಮಾರಾರಿಸ್ವದ್ವಿನುತ । ಪ್ರಾರ್ಥಿಪೆನೊ ಹರಿಯೆ ೧

ಪತಿಸುತರು ಭ್ರಾತೃ ಶ್ರೀ । ಪತಿಯೆ ನೀನಾಗಿ ಹರಿ
ಮತಿ ಮತಾಂವರರಂಘ್ರಿ । ಹಿತಸೇವಕಳೆನಿಸಿ
ಪಥವು ಸಾಗಲಿ ದೇಹ । ಯಾತ್ರೆಯ ಸುಮಾರ್ಗದಲಿ
ಗತಿಗೋತ್ರ ನೀನೆಂಬ । ಮತ್ತಿಯಿತ್ತು ಪೊರೆಯೊ ೨

ನಾಮಸ್ಮರಣೆಯೆಂಬ । ವಜ್ರಕವಚವ ತೊಡಿಸಿ
ಈ ಮಹಾಕಲಿಯುಗದಿ । ಸಾದನೆಯ ಗೈಸೀ
ರಾಮ ಗುರುಗೋವಿಂದ । ವಿಠಲ ತವ ಪಾದ ಕಮಲ
ನೇಮ ಸೇವೆಯನಿತ್ತು । ಉದ್ಧರಿಸೊ ಹರಿಯೇ ೩

೬೮೮

ವೆಂಕಟೇಶ ವಿಠ್ಠಲನೆ ಉದ್ಧರಿಸೊ ಇವಳಾ
ಪಂಕಜಾಸನ ವಂದ್ಯ ಪಂಕೇರು ಹಾಕ್ಷ ಪ

ಪತಿ ವಿಯೋಗದ ದುಃಖ । ಅತಿಯಾಗಿ ತವಪಾದ
ಗತಿಗಾಗಿ ಗಿರಿಯೇರಿ । ತುತಿಸುತಿರೆ ನಿನ್ನಾ
ಗತಿಗೋತ್ರ ತೈಜಸನೆ ಪತಿರೂಪ ನಿನ್ನನು
ಪತಿಕರಿಸ ನಿನ್ನ ಮೃತ ಹಸ್ತ ನೆತ್ತಿಲಿ ಇಟ್ಟೇ ೧

ಇಂದಿವಳ ಪ್ರಾರ್ಥನೆಯ ಛಂದದಲಿ ಮನ್ನಿಸುತ
ಅಂದು ನೀನಾಗಿತ್ತ । ನಂದದಂಕಿತವಾ
ಇಂದು ಊರ್ಜಿತ ಪಡಿಸಿ । ವಂದಿಸಿಹೆ ತವಪಾದ
ವೃಂದಾರ ಕೇಂದ್ರ ಗುರು ನಂದ ಮುನಿ ವಂದ್ಯಾ ೨

ಪಕ್ಷಿವಾಹನ ದೇವ । ದಕ್ಷಾರಿ ಪ್ರಿಯ ಸಖನೆ
ದೀಕ್ಷಿತಳ ದಾಸಪಥ । ಲಕ್ಷಿಸುತಲಿದನಾ
ಈಕ್ಷಿಪುದು ಕರುಣಾಕ । ಟಾಕ್ಷದಲೆಂದನುತ
ಅಕ್ಷಾರಿ ವಂದ್ಯ ಹರಿ ಪಾರ್ಥಿಸುವೆ ನಿನ್ನಾ ೩

ದೇಶ ದೇಶದ ಜನರ । ಆಶೆಗಳ ಪೂರೈಪ
ಕೇಶವನೆ ಶ್ರೀ ವೆಂಕಟೇಶಾಖ್ಯ ಹರಿಯೇ ।
ದಾಸಿಯಳ ಹೃದಯಾ । ಕಾಶದೊಳು ತೋರೆಂದು
ಲೇಸು ಭಿನ್ನಪ ಸಲಿಸೊ । ಮೇಶ ಮಧ್ವೇಶಾ ೪

ಊರ್ವಿಯೊಳು ನಿನ್ನೊರತು ಕಾವರನು ನಾಕಾಣೇ
ಸರ್ವೋತ್ತಮೋತ್ತಮನೆ । ಶರ್ವ ವಂದ್ಯಾ
ದರ್ವಿ ಜೀವಿಯ ಕಾವ । ಹವಣೆ ನಿನ್ನದಲ್ಲೇನೊ
ಗುರ್ವಂತರಾತ್ಮ ಗುರು । ಗೋವಿಂದಾ ವಿಠಲಾ ೫

೬೮೯

ವೆಂಕಟಾ ಹರಿವಿಠಲ । ಪಂಕಕಳೆದಿವನಾ ಪ

ಪಂಕಜಾಕ್ಷನೆ ದೇವ । ಕಾಪಾಡ ಬೇಕೋ ಅ.ಪ.

ಅಂಧಕಾರದಲಿಪ್ಪ । ಮಂದಮತಿಯುದ್ಧರವ
ಮಂದರೋದ್ಧಾರಿ ಹರಿ । ಮಾಡಿ ಪೊರೆಯಿವನಾ ।
ನಂದಮುನಿ ಮತ ತಿಳಿಸಿ । ಸಂದೇಹಗಳ ಕಳೆದು
ಸಂದೋಹ ಸಂಸ್ಥಿತನ । ಉದ್ಧರಿಸೊ ಬೇಕೋ ೧

ಸೃಷ್ಟ್ಯಾದಿ ತವ ಮಹಿಮೆ । ನಿಷ್ಠೆಯಿಂದಲಿ ಭಜಿಪ
ಸುಷ್ಟುಮನವನೆಯಿತ್ತು । ಕಾಪಾಡೊ ಹರಿಯೇ
ಕೃಷ್ಣಮಾರುತಿ ಇವನ । ಕಷ್ಟ ಸಂಚಯ ಕಳೆದು
ಶ್ರೇಷ್ಠ ತವದಾಸ್ಯದಲಿ । ಇಟ್ಟು ಪೊರೆ ಇವನಾ ೨

ಸತ್ಸಂಗ ಸದ್ವ್ಯಸನ । ಸನ್ಮಾರ್ಗದಲಿ ಇಟ್ಟು
ಕುತ್ಸಿತರ ಸಂಗವನು । ದೊರಗೈ ಹರಿಯೇ
ಮತ್ಸ ಕೇತನ ಜನಕ । ಭಕ್ತವತ್ಸಲನಾಗಿ
ವತ್ಸನ್ನ ಪೊರೆವವರು । ಮತ್ತಾರು ಇಹರೋ ೩

ಹರಿಗುರುಗಳಾ ಸೇವಾ । ಪರಮ ಪ್ರೀತಿಲಿ ಮಾಳ್ಪ
ವರಮತಿಯನೇ ಕೊಟ್ಟು । ಪೊರೆಯ ಬೇಕಿವನಾ ।
ಹರಿಯ ನಾಮಾಮೃತವ । ನಿರುತದಲಿ ಸವಿದುಂಬ
ಪರಮ ಸೌಭಾಗ್ಯವನೆ । ಕರುಣಿಸೋ ಹರಿಯೇ ೪

ಸರ್ವಜ್ಞ ಸರ್ವೇಶ । ಸರ್ವ ಸ್ವಾತಂತ್ರನೇ
ಭವವನದಿ ಉತ್ತರಿಸಿ । ಪೊರೆಯ ಬೇಕಿವನಾ ।
ದುರ್ವಿಭಾವ್ಯನೆ ಗುರು । ಗೋವಿಂದ ವಿಠಲನೇ
ದರ್ವಿಜೀವಿಯ ಪೊರೆಯೆ । ಪ್ರಾರ್ಥಿಸುವೆ ಹರಿಯೆ ೫

೬೯೦

ವೇಣುಧರ ವಿಠಲಾ । ನೀನೆ ಪೊರೆ ಇವಳಾ ಪ

ಕಾಣೆ ನಿನ್ನೊರತು ಕಾ । ರುಣ್ಯ ಮೂರುತಿಯೆ ಅ.ಪ.

ಸ್ವಾಪದಲಿ ಗುರುರೂಪ । ರೂಪ ಸಮ್ಮುಖದಲ್ಲಿ
ಗೋಪಕೃಷ್ಣಾಕೃತಿಯ । ಪಡೆದಿಹಳು ಇವಳು
ಶ್ರೀಪತಿಯೆ ನಿನ್ನೊಲಿಮೆ । ಆಪಾರವಿರುತಿರಲು
ಪ್ರಾಪಿಸುತ ಅಂಕಿತವ । ಒಪ್ಪಿಸಿಹೆ ನಿನಗೇ ೧

ಪತಿ ಸೇವೆ ದೊರಕಿಸುತ । ಕೃತ ಕಾರ್ಯಳೆಂದೆನಿಸೊ
ಹಿತ ಹಿತ ದ್ವಂದ್ವಗಳ । ಧೃತಿಗೆಡದೆ ಸಹಿಸೀ
ಮತಿಮತಾಂ ವರರಂಘ್ರಿ । ಶತಪತ್ರ ಸೇವಿಪಭಾಗ್ಯ
ಕೃತಿಪತಿಯೆ ಪಾಲಿಸುತ । ಪಥ ತೋರೋ ಹರಿಯೇ ೨

ಭಾಗತಿ ಪತಿ ಸುತನೆ । ಕಾರುಣ್ಯ ತೋರಿ ಆ–
ಪಾರ ದುಷ್ಕರ್ಮಗಳ । ಪಾರಗಾಣಿಪುದೋ ।
ಮಾರುತನ ಮತದಲ್ಲಿ । ಧೀರೆ ಎಂದೆನಿಸಿ ಸಂ–
ಸಾರ ಸಾಗರವನ್ನು । ದಾಟಿಸೋ ಹರಿಯೇ ೩

ಸೃಷ್ಟಿ ಸ್ಥಿತಿ ಲಯ ಕರ್ತ । ಕೃಷ್ಣಮಾರುತಿ ದೇವ
ಅಷ್ಟಸೌಭಾಗ್ಯಗಳ । ಕೊಟ್ಟು ಕಾಪಾಡೋ
ವಿಷ್ಟರಶ್ರವ ಹರಿಯೆ । ನಿಷ್ಠೆ ಆಚಾರದಲಿ
ಕೊಟ್ಟು ಕೈಪಿಡಿ ಇವಳ । ಜಿಷ್ಣುಸಖ ಹರಿಯೇ ೪

ಸರ್ವದಾ ತವ ಮಹಿಮೆ । ಶ್ರವಣ ಸುಖ ಸಾಧನವ
ಹವಣೀಸಿ ತವನಾಮ । ವಜ್ರಾಂಗಿ ತೊಡಿಸೀ
ಭವವನುತ್ತರಿಸಕ್ತಿ । ಬಿನ್ನೈಪೆ ಶ್ರೀ ಹರಿಯೆ
ಸರ್ವ ಸುಂದರ ಗುರು । ಗೋವಿಂದ ವಿಠಲಾ ೫

೬೯೧

ವೇಣು ವಿನೋದ ವಿಠಲ । ನೀನೆ ಪೊರೆ ಇವನಾ ಪ

ದೈನ್ಯದಲಿ ತವ ದಾಸ್ಯ । ಕಾಂಕ್ಷೆಯಲಿ ಹಯಮೊಗನೆ
ಗಾನ ಮಾಡಲು ನಿನ್ನ । ಪಾಸು ಕೂಲಿಸಿದೇ ಅ.ಪ.

ಖಂಡೀ ಭವದ್ ಬಹುಲ । ಡಿಂಡೀರ ಜ್ರ್ಯಂಬಣಸು
ಚಂಡೀ ಕೃತೋ ಎಂಬ । ಶೌಂಡಪದಯತಿಯಿಂ
ಗೊಂಡು ಸುಸ್ವಪ್ನದಲಿ । ದಂಡವತ್ತರಗಿ ಮುದ–
ಗೊಂಡು ತವ ಪಾಪಗಳ । ಖಂಡಿಸೀದವನಾ ೧

ತೀರ್ಥಾಭಿಷೇಕದಿ ಪು । ನೀತನಾದಗೆ ಭಾವಿ
ವಾತಾತ್ಮ ಮಹಿಮೆಗಳ । ದ್ಯೋತಕ ಸುಗ್ರಂಥಾ
ಪ್ರೀತಿಯಿಂ ಪಡೆದಿಹನೊ । ಮಾತುಳಾಂತಕ ಹರಿಯೆ
ಆತು ಕೈಪಿಡಿ ಇವನ । ಧಾತಾಂಡದೊಡೆಯಾ ೨

ಲೌಕೀಕವನ್ನೆಲ್ಲ ವೈಧೀಕವೆಂದೆನಿಸಿ ಈ
ತೋಕನಿಗೆ ಸುಜ್ಞಾನ । ಭಕುತಿ ಸಂಪದನಾ
ನೀ ಕರುಣದಿಂ ಕೊಟ್ಟು । ಪ್ರಾಕ್ಕುಕರ್ಮಾವಳಿಯ
ನೀ ಕಳೆಯೊ ಕರುಣಾಳು । ನಾಕನದಿ ಪಿತನೆ ೩

ಮೋದಮುನಿ ಸಮ್ಮತವು । ವೇದೋಪನಿಷದರ್ಥ
ಸಾದರದಿ ಪ್ರಾಕೃತದಿ । ಬೋಧ ಸತ್ಕೃತೀ ।
ನೀ ದಯದಿ ಕರುಣಿಸುತ । ಬುಧರ ಮಧ್ಯದಿ ಮೆರೆಸೊ
ವೇದಾಂತ ವೇದ್ಯ । ಹರಿ । ಬೋಧ ಮೂರುತಿಯೇ ೪

ಭಾವ ಕ್ರಿಯವೂ ದ್ರವ್ಯ । ಅದ್ವೈತ ತ್ರಯ ಜ್ಞಾನ
ಕೈವಲ್ಯ ಪಡೆವುದಕೆ । ಕೇವಲಾವಶ್ಯಾ
ಭಾವುಕಗೆ ತಿಳಿಸಿ ಭವ । ನೋವ ಪರಿಹರಿಸಯ್ಯ
ಗೋವಳ ಪ್ರೀಯ ಗುರು । ಗೋವಿಂದ ವಿಠಲಾ ೫

೬೯೨

ವೇದನಿಧಿ ಹರಿ ವಿಠಲ । ಕಾದುಕೋ ಇವಳಾ ಪ

ಮೋದತೀರ್ಥರ ಮತದಿ । ರಾಜಿಸುತ್ತಿಹಳಾ ಅ.ಪ.

ವಾದೀಭ ಕೇಸರಿಯು । ವಾದಿರಾಜರು ಮತ್ತೆ
ವೇದವೇದ್ಯರ ಕಂಡು । ಶುಭಸ್ವಪ್ನದೊಳಗೇ
ಭೋದವಗದೆ ಸಾಗಿ । ವೇದನಿಧಿಗಳ ಹಸ್ತ
ಸಾದರದಿ ಅಕ್ಷತೆಯು । ಪುಷ್ಪ ಸ್ವೀಕಾರವು ೧

ಯತಿವರೇಣ್ಯರ ಕರುಣಾ । ಸತತವಿರಲೀಕೇಗೇ
ಪತಿಸುತರು ಹಿರಿಯಾ । ಹಿತಸೇವೆಯಲ್ಲೀ
ಮತಿಯ ಕರುಣಿಸಿ ನಿನ್ನ । ವ್ಯಾಪ್ತತ್ವ ತಿಳಿಸೀ
ಅತಿಶಯದ ಸೇವೆಯಿಂ । ಉದ್ದಿರಿಸೊ ಇವಳಾ ೨

ಸುರರು ನರರೊಳಗೆಲ್ಲ । ತರತಮಾತ್ಮಕರೆಂಬ
ವರಸುಜ್ಞಾನವ ಕೊಟ್ಟುಕಾಪಾಡೊ ಹರಿಯೇ
ಗುರು ಭಕ್ತಿ ಹರಿಭಕ್ತಿ । ಪರಮ ಸಾದನವೆಂಬ
ಅರಿವನೇ ನೀಡುವುದು । ಗರುಡ ಧ್ವಜಾತ್ಮ ೩

ಧರ್ಮಮಾರ್ಗದಲಿರಿಸಿ । ಪೇರ್ಮೆಯಲಿ ಪೊರೆ ಇವಳಾ
ಭರ್ಮಗರ್ಭನ ಪಿತನೆ । ನಿರ್ಮಾತೃ ಜಗಕೇ
ನಿರ್ಮಮದ ಸಾದನೆಯ । ಮರ್ಮವನೆ ಅರುಹುತ್ತ
ಕರ್ಮನಾಮಕ ಹರಿಯೆ । ಕಾಪಾಡೊ ಇವಳಾ ೪

ಕೋವಿದೋತ್ತಂಸ ಭವ । ನೋವುಗಳ ಪರಿಹರಿಕೆ
ಪಾವನಾತ್ಮಕ ನಿನ್ನ । ನಾಮ ಸುಧೆ ಉಣಿಸೀ
ಭಾವದಲಿ ಮೈದೋರಿ । ಪೊರೆಯಲ್ಕೆ ಬಿನ್ನವಿಪೆ
ಭಾವುಕರ ಪತಿ ಗುರು । ಗೋವಿಂದ ವಿಠಲಾ ೫

೬೯೩

ವೇದವತಿ ಪತಿ ವಿಠಲ । ಉದ್ಧರಿಸೊ ಇವಳ ಪ

ಮೋದದಾಯಕನಾಗಿ । ಶ್ರೀದ ಶ್ರೀಹರಿಯೇ ಅ.ಪ.

ದಾಸರಾಯರ ಕರುಣ । ವಾಶ್ರಯಿಸಿ ದಿನದಿನದಿ
ಲೇಸು ಕೊಂಡಾಡುತಲಿ । ಮೇಶ ದಾಸರನೂ
ಭಾಸುರ ಸುಗಾನ ಉ । ಲ್ಲಾಸದಲಿ ಮೈಮರೆದು
ಕೇಶವನ ಗುಣವನಧಿ । ಈಸುವಂತೆಸಗೋ ೧

ತೇಜೊರೂಪಿಯು ಪ್ರಾಣ । ತೇಜವನು ಸ್ವಪ್ನದಲಿ
ತೈಜಸನು ತೋರೆ ಅ । ವ್ಯಾಜ ಕರುಣೀ
ಮಾಜದಲೆ ವೆಂಕಟನ । ನೈಜ ರೂಪವ ಕಂಡ
ವ್ಯಾಜದಲ್ಲಿಂಕಿತಳು । ವಾಜಿ ಮುಖ ಹರಿಯೇ ೨

ವಲ್ಲಭೆಯು ಶ್ರೀ ತುಳಸಿ । ಚೆಲ್ವಶಿಲೆ ಸುತ್ತುತಲಿ
ನಲ್ಲ ಹರಿಪರಿ ಪೂರ್ಣ । ಎಲ್ಲೆಡೆಯಲೆಂಬಾ
ಸೊಲ್ಲನಿವಳಿಗೆ ತೋರಿ । ಸಲ್ಲಿಸಿಹ ಹರಿಸೇವೆ
ಬಲ್ಲವರ ಬಲ್ಲರೋ । ಫುಲ್ಲಕರಿಗಲ್ಲಾ ೩

ಹರಿಗುರೂ ಸದ್ಭಕ್ತಿ । ಗುರು ಹಿರಿಯರ ಸೇವೆ
ಕರುಣಿಸುತ ಕನ್ಯೆಯನು । ಪೊರೆಯುವುದು ಸತತ
ಗಿರಿಜೆ ದರ್ಶನ ಫಲಕೆ । ಸರುವ ಮಂಗಳವಿತ್ತು
ನಿರುತ ಸಲಹೆಂದಿವಳ । ಪ್ರಾರ್ಥಿಸುವೆ ಹರಿಯೇ ೪

ಮಧ್ವರಾಯರ ಮತದಿ । ಶುದ್ಧ ಬುಧಿಯನಿತ್ತು
ಮಧ್ವೇಶ ಹರಿಪಾದ । ಹೃದ್ಗುಹದಿಕಾಂಬ
ಅಧ್ಯಾನಲ್ಲಿವಳ । ಬದ್ಧಳನೆ ಮಾಡಿ ಪೊರೆ
ಮಧ್ವಾಂರಾತ್ಮ ಗುರು । ಗೋವಿಂದ ವಿಠಲಾ ೫

೬೯೪

ವೈಕುಂಠ ವಿಠ್ಠಲನೆ ನೀನಿವನ ಸಾಕಬೇಕಯ್ಯ ಶ್ರೀ ಹರಿಯೆ ಪ

ನಾಕಪತಿಯೆ ನಿನ್ನ ತೋಕನೆಂದೆನಿಸಿ ಕೃಪಾ
ಕರುಣೆ ಕಾಪಾಡ ಬೇಕೊ ಹರಿಯೆ ಅ.ಪ.

ಪುಂಡಲೀಕ ವರದ ಪಾಂಡುರಂಗನೆ ನಿನ್ನ
ತೊಂಡನಾಗಿಹನ ಕೈಗೊಂಡು ಕಾಪಾಡೊ ಹರಿಯೆ ।
ಅಂಡಜಸುವಾಹನನೆ ಮಾರ್ತಾಂಡ ಶತತೇಜ
ಭಾಂಡ ಕಾರಕ ಭೀಮ ಗೊಲಿದಂತೆ ಒಲಿಯಬೇಕು ೧

ಇಹಪರಗಳೆರಡಕ್ಕೂ ಅಹಿಶಯ್ಯ ನಿನ ಪಾದ
ವಹಿಸೆ ಸೇವಿಪನಯ್ಯ ಸಹಜ ಭಕ್ತಿಯಲಿ
ವಿಹಗೇಂದ್ರ ವಾಹನನೆ ಐಹಿಕದ ಭಯಹರಿಸಿ
ವಿಹಿತ (ಕರುಣ)ದಿಂದಿವನ ಕಾಪಾಡು ಬೇಕು ಹರಿಯೇ ೨

ವಿಘ್ನಹರ ನಿನ್ನಲ್ಲಿ । ಲಗ್ನ ಗೈಸಿಹಮನವ ನಿ-
ರ್ವಿಘ್ನತೆಯ ನೀಡಯ್ಯ ಸರ್ವಕಾಲದಲಿ
ಯಜ್ಞೇಶ ಯಜ್ಞ ಭುಗ್ ಯಜ್ಞಸಾಧನ ಯಜ್ಞ
ಯಜ್ಞಾನು ಸಂಧಾನ ಸರ್ವಕಾರ್ಯದಲೀಯೊ ೩

ವೃಂದಾರ ಕೇಂದ್ರ ರಿಂ । ವಂದ್ಯ ಹಯಮುಖ ಪಾದ
ಭೃಂಗರೆಂದೆನಿಸುವ ಭಾವಿ ಮರುತರ ಚರಣದೀ
ಸಂಧಿಸುತ ಧೃಡಭಕ್ತಿ ವೃಂದಾವನಾಖ್ಯಾನ
ಸಂದೋಹ ಸುಜ್ಞಾನ ನೀನಿತ್ತು ಸಲಹೊ ಹರಿಯೇ ೪

ಅಂಭ್ರಣೀ ಪತಿ ನಿನ್ನ ಹಂಬಲಿಸಿ ಬೇಡುವೆನು
ಇಂಬಿಟ್ಟು ತವ ಪಾದದ್ವಂಬಲವ ನೀಯೋ
ಉಂಬುಡುವ ಕ್ರಿಯೆಗಳಲಿ ಬಿಂಬ ಕ್ರಿಯೆಗಳ ತಿಳಿಸಿ
ಬಿಂಬ ತವರೂಪ ಹೃದಯಾಂಬರದಿ ತೋರಿ ಸಲಹೋ ೫

ಪಂಚಪಂಚಸುತತ್ವ । ಪಂಚ ಭೇದದಜ್ಞಾನ
ಸಂಚಿಂತೆಯ ನೀಯೋ ವಾಂಛಿತಾರ್ಥದನೇ
ಪಂಚ ಅವಿದ್ಯೆಯ ಕಳೆದು ಪಂಚಸು ಪರ್ವದಲಿ
ಪಂಚಾಸ್ಯನಲಿ ನಿನ್ನ ಪಂಚರೂಪವ ತೋರಿಸೋ ೬

ಸರ್ವ ಸ್ವಾತಂತ್ರನೇ ಸಾರ್ವಭೌಮನೆ ಸ್ವಾಮಿ
ಸರ್ವಾಂತರಾತ್ಮಕನೆ ಶರ್ವಾದಿ ದಿವಿಜ ವಂದ್ಯ
ಮಧ್ವಾಂತರಾತ್ಮ ಗುರು ಗೋವಿಂದ ವಿಠಲ ತವ
ದಿವ್ಯ ರೂಪವ ತೋರಿ ಕಾಪಾಡೊ ಹರಿಯೆ ೭

೬೯೫

ಶರ್ವೇಡ್ಯ ಮೋಹನ ವಿಠಲ ಪೊರೆ ಇವನ ಪ

ಸರ್ವತ್ರ ಸರ್ವದಾ । ಸರ್ವ ಮಂಗಳನೇ ಅ.ಪ.

ಏಸೊ ಜನ್ಮದ ಸುಕೃತ । ರಾಶಿ ಫಲಿಸಿತೋ ಇವಗೆ
ದಾಸ ದೀಕ್ಷೆಯಲಿ ಮನ । ಲೇಸುಗೈದಿಹನೋ ।
ವಾಸವಾದೀ ವಂದ್ಯ । ಭಾಸುರಾಂಗನೆ ದೇವ
ದೋಷಾಗಳನಳಿದು ಸಂ । ತೋಷವನೆ ಪಡಿಸೋ ೧

ಹರಿದಾಸ ರೊಲಿದಿವಗೆ । ದರುಶನವನಿತ್ತಿಹರು
ಗುರು ರಘೋತ್ತಮರಂತೆ । ಬೃಂದಾವನಸ್ಥಾ
ನರಹರಿಯು ಸ್ವಪ್ನದಲಿ । ಹರಿಹಯಾಸ್ಯವ ತೆರದಿ
ದರುಶನಕೆ ಕಾರಣವು । ಪರಮ ಪ್ರಿಯದರ್ಯವೂ ೨

ರುದ್ರ ಗೀತೋಕ್ತ ಹರಿ । ಭದ್ರ ಮೂರುತಿ ಸ್ತೋತ್ರ
ಉದ್ಧರಿಸಿ ಇವನಲ್ಲಿ । ಶ್ರದ್ಧಾಳು ಎನಿಸೋ
ಅದ್ವೈತ ತ್ರಯಜ್ಞಾನ । ಸಿದ್ಧಿಸುತ ಸಂಸಾರ
ಅಬ್ಧಿಯನೆ ಉತ್ತರಿಸೊ । ಮಧ್ವಾಂತರಾತ್ಮಾ ೩

ಕಿಂಕಿಣಿಯ ಶೋಭಿತನೆ । ಶಂಕರೇಡ್ಯನೆ ನಿನ್ನ
ಅಂಕಿತವ ನಿತ್ತಿಹೆನೊ । ಲೆಂಕತನದವಗೇ
ವೆಂಕಟ ಕೃಷ್ಣ ಹೃತ್ । ಪಂಕಜದಿ ತವರೂಪ
ಕಿಂಕರಗೆ ತೋರೆಂದು । ಶಂಕಿಸದೆ ಬೇಡ್ವೇ ೪

ಸರ್ವಜ್ಞ ಸರ್ವೇಶ । ದುರ್ವಿಭಾವ್ಯನೆ ಹರಿಯೆ
ದರ್ವಿಜೀವನ ಕಾವ । ಹವಣೆ ನಿನದಲ್ಲೇ ।
ಪರ್ವ ಪರ್ವದಿ ಇವಗೆ । ನಿರ್ವಿಘ್ನ ನೀಡಯ್ಯ
ಗುರ್ವಂತರಾತ್ಮ ಗುರು । ಗೋವಿಂದ ವಿಠಲಾ ೫

೬೯೬

ಶ್ರವಣಾನಂದ ವಿಠಲ । ಭುವನ ಪಾವನನೇ ಪ

ಪವಿತರಗೈ ಇವಳ । ತವಗುಣ ಗಾನದೀ ಅ.ಪ.

ಸುಪ್ತಿಯಲಿ ಗುರುದತ್ತ । ಉತ್ತುಮಾಂಕಿತ ಕೇಳಿ
ಇತ್ತಿಹೆನೊ ಉಪದೇಶ । ಭಕ್ತವತ್ಸಲನೇ
ಎತ್ತಿ ಭವದಿಂದವಳಾ । ಉತ್ತರಿಸ ಬೇಕಯ್ಯ
ಚಿತ್ತಜಾಪಿತ ಸರ್ವ । ಕರ್ತೃಕಾರಕನೇ ೧

ಪತಿಸುತರು ಹಿತರಲ್ಲಿ । ವ್ಯಾಪ್ತ ನಿನ್ನನು ತಿಳಿದು
ಹಿತದಿಂದ ಸೇವಿಸುತ । ಮತಿಯ ಕರುಣಿಸುತಾ ।

ಗತಿ ಗೋತ್ರ ನೀನಾಗಿ । ಮತಿ ಮತಾಂವರರಂಘ್ರಿ
ಶತ ಪತ್ರ ಪೂಜಿಸುವ । ಪಥದಲ್ಲಿ ಇರಿಸೋ ೨

ಹರಿಗುರೂ ಸದ್ಭಕ್ತಿ । ನಿರುತ ವೃದ್ಧಿಸುತಿವಳ
ಪರಿಪರಿಯ ಸತ್ಕಾಮ । ಪರಿಪೂರ್ಣಗೊಳಿಸೀ
ನೆರೆಯವರಿಗಾಶ್ಚರ್ಯ । ತೆರೆದಂತೆ ನೀ ಮಾಡಿ
ಮೆರೆಸೊ ಈ ಭುವದಲ್ಲಿ । ಪರಮ ಕೃಪೆ ಸಾಂದ್ರ ೩

ವೇಣುಗೋಪನೆ ನಿನ್ನ । ಗಾನಕಲೆ ವೃದ್ಧಿಸುತ
ಸಾನುರಾಗದಿ ಕಾಯೊ । ಜ್ಞಾನಿ ಜನ ವಂದ್ಯಾ ।
ಮಾನಾಭಿ ಮಾನಗಳು । ನಿನ್ನದೆಂದೆನಿವಮತಿ
ನೀನಾಗಿ ಕರುಣಿಪುದು । ಮಾನನಿಧಿ ದೇವಾ ೪

ದುರಿತ ದೂರನೆ ಹರಿಯೆ । ವರಜ್ಞಾನ ಭಕ್ತಿಗಳ
ಕರುಣಿಸುತ ತರಳೆಯನು । ಪೊರೆಯ ಬೇಕಯ್ಯ
ಗುರುವಂತರಾತ್ಮ ಗುರು । ಗೋವಿಂದ ವಿಠ್ಠಲನೆ
ಅರಿಕೆ ಎನ್ನದು ಸಲಿಸಿ । ಪರಿ ಪಾಲಿಸಿವಳಾ ೫

೬೯೭

ಶಿರಿಪ್ರಾಣ ಪತಿ ವಿಠಲ ನೀನಿವಳ ಕಾಯಬೇಕೊ ಪ

ಕರುಣಾರ್ದ್ರ ಹೃದಯ ನಿನ್ನಡಿಗೆ ಮೊರೆಯಿಡುವೇ ಅ.ಪ.

ಮಾನವ ಸುಜನ್ಮದಲಿ ನೀನಿವಳ ತಂದಿರುವೆ
ಜ್ಞಾನಸಾಧನವ ಮಾರ್ಗ ಕಾಣದಲೆ ಬರಿದೇ ।
ಮಾನಿನಿಯ ಆಯುಷ್ಯ ಬರಿದೆ ಪೋಯಿತು ಹರಿಯೆ
ನೀನಾಗಿ ಸಲಹಿವಳ ದೀನಜನ ಬಂಧೋ ೧

ಪಂಚಭೂತಾತ್ಮಕದ ಈ ದೇಹ ಸ್ಥಿರವಲ್ಲ
ಕೊಂಚಮತಿಯನು ಕಳೆದು ಸರ್ವಾಂತರಾತ್ಮ ।
ಪಂಚಭೇದವನರುಹಿ ಮುಂಚೆ ತರತಮ ತಿಳಿಸಿ
ಪಂಚ ಪಂಚಾತ್ಮಕನೆ ಸಲಹ ಬೇಕಿವಳಾ ೨

ಹರಿಗುರೂ ಸದ್ಭಕ್ತಿ ಮರಳಿ ವೈರಾಗ್ಯವನೆ
ಕರುಣಿಸೂವುದು ಹರಿಯೆ ದುರಿತಾಂಧ ರವಿಯೆ
ಹರಿಗೋಲುಭವನಿಧಿಗೆ ಎಂದೆನಿಪ ತವನಾಮ
ಸ್ಮರಣೆ ಸಂತತವಿತ್ತು ಪೊರೆಯ ಬೇಕಿವಳಾ ೩

ಜೇನು ಸವಿಯಂತಿಪ್ಪ ಆನಂದಕರ ಶಾಸ್ತ್ರ
ಮಾನನಿಧಿ ಮಧ್ವಾಖ್ಯ ಸಾನುರಾಗದಲೀ ।
ಕ್ಷೋಣಿಸುರರುದ್ಧಾರ ಕಿತ್ತಿಹುದ ನೀನರುಹಿ
ಜ್ಞಾನಗಮ್ಯನೆ ಕಾಯೊ ಪ್ರಾಣಾಂತರಾತ್ಮ ೪

ಇಂದೀವರಾಕ್ಷಹರಿ ದ್ವಂದ್ವಗಳ ಸಹನೆಯನು
ತಂದೆ ಕರುಣಿಸಿ ಕಾಯೊ ಕಂಜದಳ ನೇತ್ರ
ಅಂದು ಇಂದಿಗು ಮುಂದೆ ಎಂದೆಂದು ಗತಿ ನೀನೆ
ಎಂದು ನಂಬಿಹೆ ಗುರು ಗೋವಿಂದ ವಿಠಲಾ ೫

೬೯೮

ಶಿರಿ ಮಾಧವ ವಿಠಲ । ಪೊರೆಯ ಬೇಕಿವನ
ನಿರುತ ನಿನ್ನಯ ಪಾದ । ದಾಸ್ಯ ಬೇಡುವನ ಪ

ಭೂಮಿಜೆಯ ರಮಣ ತವ । ನಾಮಸ್ಮೃತಿ ಸರ್ವತ್ರ
ನೇಮದಿಂ ಪಾಲಿಪುದು ಕಾಮಜನಕಾ
ಈ ಮಹಾ ಕಲಿಯುಗದಿ । ಅನ್ಯ ಸಾಧನ ಕಾಣೆ
ಸಾಮ ಸನ್ನುತ ಹರಿಯೆ । ಭೂಮಗುಣ ಪೂರ್ಣಾ ೧

ಮೂರೆರಡು ಭೇದಗಳ । ಸಾರವನೆ ತಿಳಿಸಿವಗೆ
ತಾರತಮ್ಯ ಜ್ಞಾನ । ದರಿವನಿತ್ತೂ
ಪಾರಗೈಭವದ ಕೂಪಾರವನು ಶ್ರೀ ಹರಿಯೇ
ಮಾರುತಾಂತರ್ಯಾಮಿ । ಮಾರಮಣ ದೇವಾ ೨

ಕಾಲನಾಮಕ ಸ್ವಾಮಿ । ವ್ಯಾಳ ವ್ಯಾಳಕೆ ಬರುವ
ಭಾಳ ವಿಘ್ನಗಳ್ಹರಿಸಿ । ಲಾಲಿಸೋ ಇವನ
ಕೀಲಿಸುತ ಬಲು ಕರ್ಮ । ಜಾಲಗಳ ತವಪಾದ
ಓತ್ಯೆಪ ಭಾಗ್ಯವನೆ । ಪಾಲಿಸೋ ಹರಿಯೇ ೩

ಬುದ್ಧಿಯೊಳು ನೀನಿಂತು ಮದ್ವ ಸಿದ್ಧಾಂತಗಳ
ವೃದ್ಧಿಗೈಸುತ ಹರಿಯೆ । ಸಿದ್ಧನೆನಿಸೋ
ಅದ್ವಾನ ಇದ ಹೊರತು ಶುದ್ಧ ಸಾಧನ ಕಾಣೆ
ಕೃದ್ಧಖಳ ಹರನೆ ಅನಿ । ರುದ್ಧ ಒಲಿ ಇವಗೇ ೪

ಜೀವ ಅಸ್ವಾತಂತ್ರ । ದೇವ ನಿಜ ಸ್ವಾತಂತ್ರ
ಈ ವಿಧದ ಸುಜ್ಞಾನ । ನೀ ವೊಲಿದು ಇತ್ತೂ ।
ಭಾವುಕರ ಪರಿಪಾಲ । ಮಾವಿನೋದಿಯೇ ಗುರು
ಗೋವಿಂದ ವಿಠಲನೆ । ಭಾವದೊಳು ತೋರೋ ೫

೬೯

ಶಿರಿ ಮುದ್ದು ಕೃಷ್ಣವಿಠಲ । ಪೊರೆಯ ಬೇಕಿವಳಾ ಪ

ನಿರುತ ನಿನ್ನಯ ಪಾದ । ಸಾರಿ ಭಜಿಸುವಳಾ ಅ.ಪ.

ಪರಿಪರಿಯ ವಿಧದಿಂದ । ತೈಜಸನೆ ನೀನಾಗಿ
ವರಸೂ ರೂಪಗಳಿಂದ । ವಸುದೇವ ಸುತನೇ
ತರಳೆಗತಿ ಆಶ್ಚರ್ಯ । ತೋರಿ ಅಡಗಿದೆ ದೇವ
ಶಿರಿಮುದ್ದು ಕೃಷ್ಣನೇ । ಮರುತಂತರಾತ್ಮ ೧

ಸುಪ್ತಿಯಲಿ ಗುರುಪಾದ । ಭಕ್ತಿಯಲಿ ನಮಿಸುತ್ತ
ತೀರ್ಥವನೆ ತಕ್ಕೊಂಡು । ಧನ್ಯನಾನೆಂದು
ಅತ್ಯಂತ ಹರ್ಷದಲಿ । ಸ್ತೋತ್ರವನೆ ಮಾಡುತ್ತ
ಸಕ್ತಿಯನೆ ತೋರಿಹಳು । ದಾಸಪಂಥದಲೀ ೨

ಭುವನ ಪಾವನವೆನಿಪ । ಮಧ್ವಮತದಾಸಕ್ತಿ
ಶ್ರವಣಕಾನಂದವೆನೆ । ಕವನ ಸಂಸ್ಫೂರ್ತೀ
ಜೀವೊತ್ತಮರ ಭಕುತಿ । ವಿಷಯದಲಿ ವಿರಕ್ತಿ
ಹವಣಿಸೋ ಶ್ರೀಹರಿಯೆ । ಭವಕರಿಗೆ ಹರಿಯ ೩

ಪತಿಸುತರು ಹಿತರಲ್ಲಿ । ಮತಿಮತಾಂವರರಲ್ಲಿ
ರತನು ಶ್ರೀಹರಿಯೆಂಬ । ಸುಜ್ಞಾನವನ್ನು
ಕೃತಿಪತಿಯ ಕರುಣಿಸುತ । ಸಾಧನವ ಗೈಸುವುದು
ಚತುರಾಸ್ಯಪಿತ ಹರಿಯೆ । ದುರಿತವನ ದಾವಾ ೪

ಮಾನನಿಧಿ ಶ್ರೀಹರಿಯೆ । ಧ್ಯಾನಾನುಕೂಲಿಸುತ
ಸಾನುರಾಗದಿ ನಿನ್ನ । ರೂಪಹೃದ್ಗುಹದೀ
ಕಾಣಿಪಂತಸಗೊ ಗುರು । ಗೋವಿಂದ ವಿಠಲನೆ
ಆವಾದದನ್ಯವನು । ಬೇಡ ಬಂದಿಲ್ಲ ೫

೭೦೦

ಶ್ರೀಕರಾರ್ಚಿತ ವಿಠಲ । ಸಾಕ ಬೇಕಿವಳಾ ಪ

ನೋಕನೀಯನೆ ಎನ್ನ । ವಾಕು ಮನ್ನಿಸುತಾ ಅ.ಪ.

ಸಂಸಾರದಲಿ ನೊಂದು । ಕಂಸಾರಿ ತವಪಾದ
ಪಾಂಸು ಸೇವಾ ಸಕ್ತೆ । ಸಂಶಯ ನಿರಹಿತಾ
ಅಂಶ ಆವೇಶ ಅವ । ತಾರಗಳ ತಿಳಿಸುತಲಿ
ಶಂಸನದಿ ತವನಾಮ । ಸಂಪ್ರೀತನಾಗೊ ೧

ದುಷ್ಕರ್ಮಗಳ ಭಾದೆ । ದೂರಾಗುವಂತೆಸಗೊ
ನಿಷ್ಕಾಮ ಕರ್ಮಕ್ಕೆ । ಮಾರ್ಗವನೆ ತೊರೋ ।
ಶುಷ್ಕ ಆಚಾರಗಳ । ತ್ಯಜಿಸುತ್ತ ತವನಾಮ
ಅಕ್ಕರದಿ ಭಜಿಪಂಥ । ಚೊಕ್ಕಮನವೀಯೊ ೨

ಶರ್ವವಂದ್ಯನೆ ದೇವ । ತವನಾಮ ಸಂಸ್ಮೃತಿಯ
ಸರ್ವದಾ ಸರ್ವತ್ರ । ಇವಳಿಗೊದಗಿಸುತಾ
ಭವವನದಿ ಉತ್ತರಿಸೊ । ಭವರೋಗ ಭೇಷಜನೆ
ದರ್ವಿಜೀವಿಯ ಕಾಯೊ । ಪವನಂತರಾತ್ಮ ೩

ಸೃಷ್ಟ್ಯಾದಿಕರ್ತನೇ । ಸುಗುಣಮೂರುತಿ ದೇವ
ಕಷ್ಟಂಗಳ ಪರಿಹರಿಸಿ । ಕಾಪಾಡೊ ಹರಿಯೇ
ಕೃಷ್ಣಮೂರುತಿ ದೇವ । ಕಾರುಣ್ಯ ಸಾಗರನೆ
ಸುಷ್ಟುಮನ ನಿಲಿಸೊ ತವ । ಚರಣದೊಳು ಹರಿಯೆ ೪

ಸೂಚಿಸಲು ತೈಜಸನು । ಯೋಚನೆಯ ಕೈಕೊಂಡು
ವಾಚಿಸಿಹೆ ಅಂಕಿತದಿ । ದಾಸ ಸದ್ದೀಕ್ಷಾ ।
ಮೋಚ ಕೇಚ್ಚೆಯ ಮಾಡಿ । ಕೈಪಿಡಿಯೊ ಈಕೆಯನು
ಖೇಚರಾಂತಕ ಗುರು । ಗೋವಿಂದ ವಿಠಲಾ ೫

೭೦೧

ಶ್ರೀಕೃಷ್ಣ ಹರಿ ವಿಠಲ । ಕಾಪಾಡೊ ಇವಳಾ ಪ

ಹೇ ಕೃಪಾಕರ ಮೂರ್ತೆ । ಪ್ರಾರ್ಥಿಸುವೆ ಇದನಾ ಅ.ಪ.

ಪತಿತ ಪಾವನರಂಗ । ಮತಿಮತಾಂವರರಂಘ್ರಿ
ಶತಪತ್ರ ಸೇವೆಗಳ । ಸತತ ದೊರಕಿಸುತಾ
ಸತತ ತವ ಸ್ಮರಣೆ ಸುಖ । ರತಿ ಪಾಲಿಸಿವಳೀಗೆ
ಗತಿಗೋತ್ರ ನೀನೆಂದು । ಪ್ರಾರ್ಥಿಸುವೆ ಹರಿಯೇ ೧

ಪತಿಸೇವೆ ದೊರಕಿಸುತ । ಕನನಗಭಯದನಾಗಿ
ಪಥತೋರೋ ಸದ್ಗತಿಗೆ । ಕೃತಿರಮಣ ದೇವಾ
ಹಿತವಹಿತ ದ್ವಂದ್ವಗಳ । ಸಮತೆಯಲಿ ಕಾಂಬಂಥ
ಮತಿಯ ನೀ ಕರುಣಿಸುತ । ಕಾಪಾಡೊ ಹರಿಯೇ ೨

ಪವನ ಮತ ಸುಜ್ಞಾನ । ಧ್ರುವ ವರದ ಭಕ್ತಿಯನು
ದಿವಸ ದಿವಸದಿ ಕೊಟ್ಟೆ । ಉದ್ಧರಿಸೊ ಇವಳಾ
ಪವನಂತರಾತ್ಮ ಗುರು । ಗೋವಿಂದ ವಿಠಲನೆ
ಇವಳ ಕೈಯನೆ ಪಿಡಿಯೆ । ಭಿನ್ನವಿಪೆ ಹರಿಯೇ ೩

೭೦೨

ಶ್ರೀ ಗೋವಿಂದ ವಿಠಲನೆ । ಕಾಪಾಡ ಬೇಕಿವಳಾ ಪ

ಹೇ ಗರುಡ ಧ್ವಜನೆ ಹರಿ । ನಿನ್ನ ಮೊರೆ ಹೊಕ್ಕವಳಾ ಅ.ಪ.

ಸ್ವಾಪದಲಿ ಸೂಚಿಸಿದ ಪರಿ । ಶ್ರೀ ಪತಿಯೆ ನಿನ್ನಂಕಿತವ
ಉಪದೇಶಿಸಿರುವೆನೋ । ಮನ್ನಿಸಿ ಕಾಯೋ
ಕಾಪಟ್ಯ ರಹಿತಳೂ । ಹರಿ ದರ್ಶನಾಕಾಂಕ್ಷೆ
ಕೈಪಿಡಿದು ಕಾಪಾಡೊ । ಆಪನ್ನ ಪರಿಪಾಲಾ ೧

ಲೌಕಿಕದ ಮಮತೆಗಳ । ನೀ ಕಡಿದು ಕಾಪಾಡೊ
ಏಕಮೇವನ ದೇವ । ಪ್ರಾಕ್ಕು ಕರ್ಮವ ಕಳೆದು
ಭಕುತಿ ಜ್ಞಾನವನಿತ್ತು । ಕಾಪಾಡೊ ಹರಿಯೇ
ಯುಕುತಿಯಲಿ ನಿನ್ನಂಥ । ದೇವರನ ಕಾಣಿಸಯ್ಯ ೨

ಪಾಂಚ ಭೌತಿಕ ದೇಹ । ಅಸ್ಥಿರತೆ ತಿಳಿಸುತ್ತ
ಪಂಚಾತ್ಮ ನಿನ ಧ್ಯಾನ । ಮಗ್ನಳೆಂದೆನಿಸೊ ।
ಸಂಚಿತಾಗಾಮಿಗಳ । ನಾಶ ಗೈಸುತಲಿತ್ತ
ಕೊಂಚಮಾಡೊ ಪ್ರಾರಬ್ಧ । ಗುರು ಗೋವಿಂದ ವಿಠಲ ೩

೭೦೩

ಶ್ರೀ ನರಸಿಂಹ ವಿಠಲ । ಕಾಪಾಡೊ ಇವಳಾ ಪ

ದೀನ ಜನ ಮಂದಾರ । ಕಾರುಣ್ಯ ಮೂರ್ತೆ ಅ.ಪ.

ತೈಜಸನೆ ನೀನಾಗಿ ಯೋಜಿಸಿದ ರೂಪವನು
ಮಾಜದಲೆ ಇತಿಹೆನೊ । ವಾಜಿ ವದನಾಖ್ಯ
ಮೂಜಗಕ್ಕೊಡೆಯ ಹರಿ । ಗೋಜುಗಳ ಬಿಡಿಸುತ್ತ
ವ್ಯಾಜ ರಹಿತನೆ ಕಾಯೊ । ಭ್ರಾಜಿಷ್ಣು ಮೂರ್ತೇ ೧

ಹರಿ ಗುರೂ ಸದ್ಭಕುತಿ । ವರಜ್ಞಾನ ಕರುಣಿಸುತ
ನಿರುತ ಪೊರೆ ಇವಳನ್ನ । ವೈರಾಗ್ಯವಿತ್ತೂ ।

ದುರಿತ ರಾಶಿಗಳಳಿದೂ । ಕರುಣಿಸೋ ನರಹರಿಯೇ
ಮರುತಾಂತರಾತ್ಮಕನೆ । ಶರಣ ವತ್ಸಲನೇ ೨

ನಾಮ ಸುಧೆ ಉಣಿಸುತ್ತ । ಈ ಮಹಾಕಲಿಯುಗದಿ
ಪಾಮರಗಳ ಉದ್ಧರಿಸೋ । ಶ್ರೀ ಮನೋರಮನೇ
ಯಾಮ ಯಾಮಕೆ ಪಾದ । ಕಮಲ ರತಿಯನೆ ಈಯೋ
ಸಾಮ ಸನ್ನುತ ಗುರೂ । ಗೋವಿಂದ ವಿಠಲಾ ೩

೭೦೪

ಶ್ರೀದ ನರಹರಿ ವಿಠಲ । ಕಾದುಕೊ ಇವಳಾ ಪ

ಸಾಧು ವಂದಿಯ ಹರಿಯೆ । ವೇದಗೋಚರನೆ ಅ.ಪ.

ವೃದ್ಧನಿಹ ಪತಿಸೇವೆ । ಶ್ರದ್ಧೆಯಿಂಗೈದು ಪರಿ
ಶುದ್ಧಳಿವಳಿಗೆ ದಾಸ । ಸದ್ಧರ್ಮ ಬೋಧಾ ।
ಹದ್ದು ವಾಹನ ಹರಿಯ । ನಿರ್ಧಾರವನು ಸರಿಸಿ
ಬದ್ಧಳೆನಿಸಿಹೆ ದಾಸ । ಪದ್ಧತಿಯ ಅವಳಾ ೧

ಕರ್ಮನಿಷ್ಕಾಮನದಿ । ಪೇರ್ಮೆಯಲಿ ಗೈಯುತ್ತ
ಭರ್ಮಗರ್ಭನ ಪಿತನ । ನಾಮ ಸುಧೆಯುಣುತಾ
ಕರ್ಮಕ್ಷಯವನು ಪೊಂದಿ । ನಿರ್ಮಲಾತ್ಮಕಳಾಗಿ
ಧರ್ಮಾಖ್ಯ ತವಪಾದ । ಪದ್ಮರತಳೆನಿಸೋ ೨

ಪತಿಸೇವೆ ಮಾಡುವುದೆ । ವಿತತ ಮಹಿಮನ ಸೇವೆ
ಇತರ ಕರ್ಮಗಳೆಲ್ಲ । ಪತಿ ಸೇವೆ ಹಿಂದೇ
ಈತರದ ಸುಜ್ಞಾನ । ಮತಿಯಿತ್ತು ಪಾಲಿಸುತ
ಕೃತಕಾರ್ಯಳೆಂದೆನಿಸೊ । ನತಜನ ಸುಪಾಲ ೩

ಗುರು ಕರುಣವಿಲ್ಲದಲೆ । ಹರಿಯೊಲಿಯ ನೆಂದೆಂಬ
ಪರಮತತ್ವಾರ್ಥಗಳ । ಅರಿವ ಕರುಣಿಸುತಾ

ಹರಿಸ್ಮರಣೆ ಎಂದೆಂಬ । ವರ ವಜ್ರ ಕವಚವನೆ
ಕರುಣಾದಿಂ ತೊಡಿಸೊ ಹರಿ । ಮರುತಂತರಾತ್ಮ ೪

ನಡು ಪುರೀಶನ ಭಕ್ತ । ಮಡದಿಯುದ್ಧರಕಾಗಿ
ಅಡಿಗಡಿಗೆ ಬೇಡುವೆನೊ । ಮೃಡ ವಂದ್ಯ ಹರಿಯೇ
ಕಡು ಕರುಣಿಮನ್ನಾತ । ಬಿಡದೆ ನೀ ಸಲಹಯ್ಯ
ಬಡವಿಪ್ರಗೊಲಿದ ಗುರು । ಗೋವಿಂದ ವಿಠಲಾ ೫

೭೦೫

ಶ್ರೀನಾಥ ವಿಠಲ ಹರಿ । ನೀನೆ ಪೊರೆ ಇವನಾ ಪ

ಮಾನನಿಧಿ ಮಧ್ವಾಖ್ಯ । ವಂದಿತ ಸಂಚರಣಾ ಅ.ಪ.

ಯೋನಿ ಅನೇಕದಲಿ । ಜನುಮಗಳ ತಾಪೊತ್ತು
ಮೌನಿ ಜನ ಸಂಯೋಗ । ಸತ್ಸಂಗಗಳ ಪಡೆದೂ
ಧ್ಯಾನ ಸಾಧನಕಾಗಿ । ಮೌನಿರಾಯರ ಸೇವೆ
ಸಾನುರಾಗದಿ ಗೈಯ್ಯೆ । ಶ್ರೀನಾಥ ಒಲಿದೇ ೧

ದಾಸ ಸತ್ಪಂಥಾನು । ವಾಸಿಪೆನು ಎಂದೆನುತ
ಮೋಸಲದ ಸನ್ಮನದಿ । ಪ್ರಾರ್ಥಿಸುತ್ತಿಹಗೇ
ಲೇಸು ತೈಜಸನಾಜ್ಞೆ । ಪೋಷಿಸುತ ವಿಠಲನ ಸ
ಸೂಸಿ ಸೇವಿಸಿ ಇತ್ತೆ । ಅಂಕಿತವನಿವಗೇ ೨

ಮಾರಾರಿ ಸದ್ವಿನುತ । ತಾರತಮ್ಯವ ತಿಳಿಸಿ
ಮಾರೆರಡು ಭೇಧಗಳ । ಅರಹುತಲಿ ಇವಗೇ
ಪಾರಗಾಣಿಸು ಭವವ । ನೀರೋಜೋದ್ಭವನಯ್ಯ
ಕಾರುಣಿಕ ಶ್ರೀಹರಿಯೆ । ಕಾರುಣ್ಯ ಮೂರ್ತೇ ೩

ಸಖನಾಗಿ ಇವನಲ್ಲಿ । ಸುಖ ಕವನ ಪೇಳಿಸುತ
ಪ್ರಕಟ ಗೈ ತವರೂಪ । ನಿಕಟ ಹೃದ್ಗುಹದೀ

ವಿಖನಸಾಂಡದ ಓಡೆಯ । ಸಕಲ ಪ್ರೇರಕ ನಿನ್ನ
ಅಕುಟಿಲದೆ ಮನದಿಂದ । ಪ್ರಾರ್ಥಿಸುವೆ ಹರಿಯೇ ೪

ಗರುಡವಾಹನ ದೇವ ಸಿರಿ ಭೂಮಿ ರಮಣನೇ
ಅರಹಲೇನಿಹುದಿನ್ನು । ಸರ್ವಜ್ಞಮಾರ್ತೇ
ಕರುಣ ದೃಷ್ಟಿಲಿ ನೋಡಿ । ಪರಿಹರಿಸೊ ದುಷ್ಕರ್ಮ
ಹರಿಯೆ ಗುರು ಗೋವಿಂದ । ವಿಠಲ ಮಾರುತಿಯೆ ೫

೭೦೬

ಶ್ರೀನಿವಾಸಾದ್ರಿ ವಿಠಲ । ನೀನೆ ಪೊರೆ ಇವಳಾ ಪ

ಗಾನಲೋಲನೆ ಕೃಷ್ಣ । ದೀನಮಂದಾರ ಅ.ಪ.

ಕಲುಷ ಕರ್ಮದಿನೊಂದು ಇಳೆಯೊಳಗೆ ಮಧ್ವಮತ
ಜಲಧಿಯಲ್ಲುದಿಸಿಹಳೊ । ಜಲಜಾಕ್ಷ ಹರಿಯೇ
ಒಲವಿನಿಂದಿವಳನ್ನು । ಸಲಹಲ್ಕೆ ಪ್ರಾರ್ಥಿಸುವೆ
ಕಲಿಮಲಾಪಹ ಕೃಷ್ಣ । ಚೆಲುವ ಮಾರುತಿಯೇ ೧

ಸುಪ್ತೀಶ ತೋರ್ದಪರಿ । ಇತ್ತಿಹೆನೆ ಅಂಕಿತವ
ಆಪ್ತ ಲಕ್ಷ್ಮೀಕಾಂತ । ದೀಪ್ತಿಮಾರುತಿಯೇ
ಭಕ್ತಿವೈರಾಗ್ಯಗಳ । ಪ್ರಾಪ್ತಿಗೈಸಲಿ ಬೇಕೊ
ನಿತ್ಯ ಮಂಗಳ ಮೂರ್ತಿ । ಪಾರ್ಥ ಸಾರಥಿಯೇ ೨

ಹರಿ ಗುರು ಸದ್ಭಕ್ತಿ । ಗುರು ಧರ್ಮರತಿಯಿತ್ತು
ಮರಳಿ ಪತಿ ಸೇವೆಯಲಿ । ಎರಗಲೀಕೆಯ ಮನಸು
ದುರಿತ ದುಷ್ಕೃತ ಹರವು । ಗುರು ಸೇವೆ ಎಂದೆಂಬ
ಅರಿವಿತ್ತು ಈಕೆಯನು । ಸಾಧನದಲಿರಿಸೋ ೩

ಸರ್ವಕಾರ್ಯಗಳಲ್ಲಿ । ಹರಿನಾಮ ನುಡಿಯಲ್ಕೆ
ಎರಕವಾಗಲಿ ಜಿಹ್ವೆ । ಶ್ರೀ ಪುರುಷೋತ್ತಮಾ

ನಿರುಪಾದಿಕ ಹಿರಿಯರ । ಚರಣ ಸೇವೆಗೆ ಮನವು
ತ್ವರೆಗೊಳ್ಳುವಂತೆಸಗೂ । ಶಿರಿ ವೆಂಕಟೇಶಾ ೪

ಕರಿವರದ ಧ್ರುವವರದ । ತರಳೆ ದ್ರೌಪದಿವರದ
ಕರುಣಾಳು ನೀನೆಂದು । ಮೊರೆ ಬಿದ್ದು ಪೇಳ್ವೆ
ಕರುಣೆಯನು ಪೊರೆ ಎಂಬ । ಬಿನ್ನಪವ ಸಲಿಸಯ್ಯ
ಶಿರಿಯಿಂದ ವಂದ್ಯ ಗುರು । ಗೋವಿಂದ ವಿಠಲಾ ೫

೭೦೭

ಶ್ರೀ ಶ್ರೀನಿವಾಸ ಹರಿ ವಿಠಲ । ಜ್ಞಾನ ರೂಪೀ ಪ

ದಾಸನನ ಮಾಡಿವನ । ಪೋಷಿಸಲಿ ಬೇಕೋ ಅ.ಪ.

ಸಾಧನಜೀವಿಗಳ । ಕಾದು ಕೊಳ್ಳುವ ಭಾರ
ಮಾಧವನೆ ನಿನದಲ್ಲೆ । ಯಾದವೇಶಾ ।
ಆದರದಿ ಕೈಪಿಡಿದು ಭೋಧಿಸು ಸುಜ್ಞಾನ
ಮೋದ ಮುನಿ ಸದ್ವಂದ್ಯ । ಬಾದರಾಯಣನೇ ೧

ಪರಮಾತ್ಮ ನರಹರಿಯ । ದರುಶನಕೆ ಮುಮ್ಮೊದಲು
ಪರಿಸರನು ಪ್ರಾಣನ್ನ । ಪರಮಗುರುದ್ವಾರಾ
ದರುಶನನ ಗೈಸುತ್ತ । ಹರುಷವನೆ ನೀಡಿರುವೆ
ಕರುಣಾ ಪಯೋನಿಧಿಯೆ । ಸರ್ವಾಂತರಾತ್ಮ ೨

ಕಾಕು ಜನ ಸಂಗವನು । ಸೋಕಿಸದೆ ಸತ್ಸಂಗ
ನೀ ಕೊಟ್ಟು ಲೌಕೀಕದಿ । ಸತ್ಕೀರ್ತಿಲಿರಿಸೋ
ಮಾಕಳತ್ರನೆ ಸಕಲ । ಪ್ರಾಕ್ಕು ಕರ್ಮವ ಕಳೆದು
ಲೌಕೀಕಗಳೆಲ್ಲ ವೈ । ದೀಕ ವೆಂದೆನಿಸೋ ೩

ಮಧ್ವಮತ ಪದ್ಧತಿಗ । ಳುದ್ಧರಿಸಿ ಇವನಲ್ಲಿ
ಹೃದ್ಗುಹದಿ ತವರೂಪ । ಉದ್ಭವವ ಗೈಯ್ಯೋ ।

ಉದ್ಧವ ಪ್ರಿಯನೆ ಸಿರಿ । ಪದ್ಮನಾಭನೆ ದೇವ
ಶ್ರದ್ಧೆಯಿಂದರುತಿಹನ । ಉದ್ಧರಿಸೊ ಹರಿಯೇ ೪

ಸರ್ವವ್ಯಾಪ್ತಸ್ವಾಮಿ । ನಿರ್ವಿಕಾರನೆ ದೇವ
ದರ್ವಿ ಜೀವಿಯ ಮೊರೆಯ । ಶರ್ವಾದಿ ವಂದ್ಯಾ
ನಿರ್ವಿಘ್ನ ಪೂರೈಸೆ । ಪ್ರಾರ್ಥಿಸುವೆ ಶ್ರೀ ಹರಿಯೆ
ಸರ್ವ ಸುಂದರ ಗುರೂ । ಗೋವಿಂದ ವಿಠಲಾ ೫

೭೦೮

ಶ್ರೀ ಮುದ್ದು ಮೋಹನ್ನ । ವಿಠಲ ಪೊರೆ ಇವನಾ ಪ

ನಾಮ ಸಂಸ್ಕೃತಿ ಇವಗೆ । ಸತತ ನೀನಿತ್ತು ಅ.ಪ.

ವೇಣುಲೋಲನ ಮಹಿಮೆ । ಗಾನಮಾಡಲು ಇವಗೆ
ಜ್ಞಾನವಂಕುರಿಸಲ್ಕೆ । ಜ್ಞಾನಿಸಂಗವಕೊಡೊ ।
ಮಾನನಿಧಿ ಮಧ್ವಾಖ್ಯ । ಸನ್ಮತದಲುದಿಸಿಹನೊ
ಮೌನಿಜನ ವೃಂದ ಸ । ನ್ಮಾನ ಮಾಳ್ಪವನಾ ೧

ಭವವನದಿ ನವಪೋತ । ಶ್ರವಣ ಸಾಧನವಿತ್ತು
ನವನವ ಸುವಿಶೇಷ । ಮಹಿಮಯುತ ಹರಿಯಾ
ಪ್ರವರ ಗುಣರೂಪಗಳ । ಸ್ತವನ ಮಾಳ್ಪಂತೆಸಗಿ
ಪವನಾಂತರಾತ್ಮಕನೆ । ಪಾಲಿಸೊ ಇವನಾ ೨

ಲೌಕಿಕೋನ್ನತಿಯಿತ್ತು । ಕಾಕು ಸಂಗವಕೊಡದೆ
ಮಾಕಳತ್ರನದಾಸ । ಸಂಕುಲದಲಿರಿಸೋ
ವ್ಯಾಕುಲಾರ್ಥಿಕ ಕಳೆಯೆ । ಬೇಕಾದ ವರಗಳನೆ
ನೀ ಕೊಟ್ಟುಕಾಯೊ ಕೃ । ಪಾಕರನೆ ಹರಿಯೇ ೩

ತೈಜಸನೆ ನೀನಾಗಿ । ಯೋಜಿಸಿದ ಅಂಕಿತವ
ಮಾಜದಲೆ ಇತ್ತಿಹೆನೊ । ನೈಜ ಮಾರ್ಗದಲೀ

ಮಾಜಗಜನ್ಮಾದಿ ನಿ । ವ್ಯಾಕಜ್ಯ ಕಾರುಣಿಕ
ವಾಜಿವದನನೆ ಪೊರೆಯೊ । ವೃಜನಾರ್ಘನೆನಸೀ ೪

ಸಂತ ಸಂಗವನಿತ್ತು । ಅಂತರಾತ್ಮಕ ನಿನ್ನ
ಚಿಂತೆಯಲ್ಲಿರುಸುತಲಿ । ಭ್ರಾಂತಿಯಿರದೊಂದು
ಅಂತ ಗೈಯುವಮಾರ್ಗ । ಕಂತುಪಿತ ನೀನಿತ್ತು
ಕಾಂತ ಗುರು ಗೋವಿಂದ । ವಿಠಲಾ ಪೊರೆ ಇವನಾ ೫

೭೦೯

ಶ್ರೀರಂಗಶಾಯಿ ವಿಠಲ ಪೊರೆಯ ಬೇಕಿವಳ ಪ

ವಾರಿಜೋದ್ಭವ ವಂದ್ಯ । ನೀರ ಜಾಕ್ಷನೆ ಸ್ವಾಮಿ
ಪಾರು ಮಾಡಿವಳ ಭವ । ಶರಧಿ ದಾಂಟಿಸುತ ಅ.ಪ.

ಕಾರಾಣಾತ್ಮಕ ನಿನ್ನ । ಗುಣರೂಪ ಕ್ರಿಯೆಗಳ
ಧಾರಣೆಗಳಿಲ್ಲದಲೆ । ಧ್ಯಾನರತಳಾಗಿ
ಮೂರಾರು ದ್ವಾರಗಳ । ಬಂಧಿಸುತ ಯೋಗದಲಿ
ಆರಾಧ್ಯ ಮೂರ್ತಿಯನೆ । ಮರೆತ ಯೋಗಿಣಿಯ ೧

ಉತ್ತಮ ಸು ಸಂಸ್ಕೃತಿಯ । ಪೊತ್ತು ಜನಿಸಿಹಳೀಕೆ
ಪೊತ್ತನ್ಯ ಉಪದೇಶ । ಸದ್ಗುರುವು ದೊರಕದಲೆ
ಸಕ್ತಳಾಗಿಹಳು ಸ್ಥಿರ । ಚಿತ್ತ ನಿನ್ನಲ್ಲಿಡಲು
ಇತ್ತಿಹೆನು ತೈಜಸ ಸು । ವ್ಯಕ್ತ ಅಂಕಿತವಾ ೨

ತಾರತಮ್ಯ ಜ್ಞಾನ । ಮೂರೆರಡು ಭೇದಗಳ
ಸಾರತತ್ವಗಳರುಹಿ । ಪೊರೆಯ ಬೇಕಿವಳ ।
ಕಾರುಣಿಕ ಕಂಕಣಾ । ಕಾರ ಚಕ್ರಾಕೃತಿಯ
ತೋರಿರುವೆ ತನ್ಮಹಿಮೆ । ಅರಿಯ ಕಾತುರಳಾ ೩

ಗುರುವಂತರಾತ್ಮಕನೆ । ಸಿರಿ ಸತ್ಯ ನರೆಯಣನೆ
ಪರಿಪರಿಯಲಿಂದಿವಳ । ಪೊರೆಯ ಬೇಕೋ
ಗರುಡಗಮನನೆ ದೇವ । ಸರ್ವಜ್ಞ ನೀನಿರಲು
ಒರೆವೆನೆಂಬಪರಾಧ । ಮರೆದು ಪಾಲಿಪುದೋ ೪

ಅದ್ವೈತ ಉಪದೇಶ । ತಿದ್ದಿನಿನ ಪದದಲ್ಲಿ
ಶುದ್ಧ ಭಕ್ತಿಜ್ಞಾನ । ವೃದ್ಧಿಯನೆ ಗೈಸೀ
ಮಧ್ವಾಂತರಾತ್ಮ ಗುರು । ಗೋವಿಂದ ವಿಠ್ಠಲನೆ
ಅದ್ವಿತೀಯನು ಯೆಂಬ । ಬುದ್ಧಿ ಸ್ಥಿರ ಮಾಡೋ ೫

೭೧೦

ಶ್ರೀವರ ಹರಿ ವಿಠಲ । ಕಾಪಾಡೋ ಇವಳಾ ಪ

ಭಾವುಕರ ಪಾಲ ನೆಂ । ದೇವೆ ಶ್ರುತಿ ಸಿದ್ಧ ಅ.ಪ.

ಹರಿಸೇವೆ ಕೈಕಂರ್ಯ । ನಿರತಳಾಗಿ ಹಳೀಕೆ
ಹರಿಗುರು ದಾಸ್ಯದಲಿ । ದೀಕ್ಷೆಕಾಂಕ್ಷಿಪಳೋ ।
ಹರಿಯ ತೈಜಸರೂಪಿ । ವರಮಾರ್ಗ ತೋರ್ವಪರಿ
ಹರಿಯ ನಿನ್ನಂಕಿತವ । ಇತ್ತಿಹೆನೊ ದೇವಾ ೧

ಸಾರತಮ ಹರಿಯ ಜಗ । ನಿಸ್ಸಾರವೆಂದು ಸಂ ।
ಸಾರ ಶರಧಿಯ ಹಾಯೋ । ವಾರಿಜ ಸುನಾಭಾ ।
ಆರು ಮಾರ್ಭಕುತಿಗಳ । ವೈರಾಗ್ಯ ಸುಜ್ಞಾನ
ಧೀರ ನೀ ಕರುಣಿಸುತ । ಕಡೆ ಹಾಯ್ಸೊ ಇವಳಾ ೨

ಮೋದ ತೀರ್ಥರ ಮತದಿ । ಸಾಧನ ಸುಮಾರ್ಗದಲಿ
ಹಾದಿ ಕ್ರಮಿಸುತ್ತಿಹಳೂ । ವೇದಾಂತ ವೇದ್ಯಾ
ಹೇ ದಯಾ ಪೂರ್ಣಹರಿ । ಸ್ವಾದ್ವಿಗೆ ತವನಾಮ
ಸುಧೆಯನೆ ಉಣಿಸೊ ಸ । ರ್ಪಾದ್ರಿಗೇ ಓಡೆಯ ೩

ಶಮದ ಮಾದಿಯನಿತ್ತು । ಭ್ರಮಮಾರ ಪರಿಹರಿಸೊ
ಅಮಿತ ಮಹಿಮೋಪೇತ । ಸುಮನಸಾರಾಧ್ಯ
ಕರ್ಮನಿಷ್ಕಾಮನದಿ । ರಮೆಯರಸಗರ್ಪಿಸುವ
ಸುಮನೊಭಾವದಲಿ । ಕ್ರಮಿಪ ತೆರಮಾಡೋ ೪

ನಿತ್ಯ ನಿಗಮಾತೀತ । ದೈತ್ಯ ಜನ ಸಂಹರ್ತ
ಭೃತ್ಯಳಿಗೆ ಮೈದೋರಿ । ಹೃತ್ಕಕ್ಷಿಯೊಳಗೇ
ಪ್ರತ್ಯಕ್ಷನಾಗೆಂಬ । ಪ್ರಾರ್ಥನೆಯ ಸಲಿಸೋಹರಿ
ಕರ್ತೃ ಕರ್ಮಾಖ್ಯ ಗುರು । ಗೋವಿಂದ ವಿಠಲಾ ೫

೭೧೧

ಶ್ರೀ ವರದ ಗೋಪಾಲ । ವಿಠಲ ಪ್ರಾರ್ಥಿಪೆ ನಿನ್ನ
ದೇವ ತವ ದಾಸ್ಯವನು । ಬಯಕಾಂಕ್ಷಿಪನ ಪ

ನೀವೊಲೀದಿವನ । ಸ್ವೀಕರಿಸುವುದಯ್ಯ
ಪಾವಮಾನಿ ಪ್ರಿಯ ಶು । ಭಾವಹ ಪ್ರದನೇ ಅ.ಪ.

ವಿಶ್ವ ವ್ಯಾಪಕ ಹರಿಯೆ । ಅಶ್ವಮೊಗ ನಿನ್ನಂಘ್ರಿ
ಸುಸ್ವರದಿ ಕೀರ್ತಿಸುವೆ । ಶಾಶ್ವತಾನಂದಾ
ನಶ್ವರ ಜಿಹಾಸೆಯನು । ವಿಶ್ವಾಸದಿಂದಿತ್ತು
ವಿಶ್ವಕುಟುಂಬಿಕನೆ । ಹ್ರಸ್ವಗೈ ಕರ್ಮಾ ೧

ಅನುವಂಶಿಕವಾಗಿ । ಗಾನಕಲೆ ಇವನೀಗೆ
ನೀನೇವೆ ಕರುಣಿಸಿಹೆ । ವೇಣುಗೋಪಾಲ
ಮಾನನಿಧಿ ಮಧ್ವ ಕಾ । ರುಣ್ಯ ಪಾತ್ರನು ಎನಿಸಿ
ಜ್ಞಾನ ಭಕ್ತ್ಯಭಿವೃದ್ಧಿ । ಮಾಣದಲೆ ಗೈಯ್ಯೋ ೨

ಏಸೇಸೋ ಜನುಮಗಳ । ರಾಶಿ ಪುಣ್ಯದ ಫಲವು
ಕೈಸೇರಿ ಆಶಿಸುವ । ದಾಸದೀಕ್ಷೆಯನು

ಲೇಸಾಗಿ ತೈಜಸನ । ಆಶಿಷವ ಕೈಕೊಂಡು
ಮೀಸಲ ಮನದಿ ಉಪ । ದೇಶವಿತ್ತಿಹನೋ ೩

ತ್ರ್ಯಕ್ಷಾದಿ ದಿವಿಜೇಡ್ಯ । ಪಕ್ಷಿವಹ ಕೃಷ್ಣ ಹೃ–
ತ್ಕುಕ್ಷಿಯೊಳು ತವರೂಪ । ಈಕ್ಷಿಸುವ ಭಾಗ್ಯ
ಭಿಕ್ಷೆಯನು ಇತ್ತು ಉ । ಪೇಕ್ಷಿಸದೆ ಪೊರೆ ಇವನ
ಅಕ್ಷೀಣ ದಯಸಾಂದ್ರ । ಲಕ್ಷುಮಿಯ ರಮಣ ೪

ಭಾವದ್ರವ್ಯ ಕ್ರಿಯವು । ಈ ವಿಧಾದ್ವೈತತ್ರಯ
ಆವ ಸುಜ್ಞಾನವನು । ಈವುದಿವನೀಗೆ ।
ದೇವದೇವೇಶ ಗುರು । ಗೋವಿಂದ ವಿಠಲನೆ
ಈ ವಿದಧ ಭಿನ್ನಪವ । ನೀ ಪೊಲಿದು ಸಲಿಸೋ ೫

೭೧೨

ಶ್ರೀದೇವಿ ಪ್ರಿಯ ವಿಠಲ । ಮೋದವಿತ್ತಿವನೀಗೆ ॥
ಕಾದುಕೋ ನೀ ದಯದಿ । ವೇದಾಂತ ವೇದ್ಯಾ ಪ

ಮಾಧವನೆ ಬೇಡುತಿಹ । ಆದರದಿ ತವದಾಸ್ಯ
ಸಾಧಿಸೋ ಇವನಲ್ಲಿ । ತದ್ಧರ್ಮ ಬಿಡದೇ ಅ.ಪ.

ಗುರು ಧರ್ಮ ಗುರುಸೇವೆ । ಗುರು ಭಕುತಿ ಸುಜ್ಞಾನ
ನಿರುತ ನಿನ್ನಯ ಸ್ಮರಣೆ । ಕರುಣಿಸೋ ಹರಿಯೇ ।
ಮರುತ ಮತ ತತ್ವಗಳ । ನರುಹಿ ಭವದಿಂದೆತ್ತು
ಸರುವಾಂತರಾತ್ಮಕನೆ । ದುರಿತ ಗಜ ಸಿಂಹಾ ೧

ಪ್ರಾಚೀನ ಕರ್ಮಾಳಿ । ಯೋಚಿಸಲು ಅಳವಲ್ಲ
ವಾಚಾಮ ಗೋಚರನೆ । ಮೋಚ ಕೇಚ್ಛೆಯನೂ
ಯಾಚಿಸುವೆ ಇವಗಾಗಿ । ಖೇಚರೋತ್ತಮ ಸವ್ಯ
ಸಾಚಿ ಸಖನೇ ಹರಿಯೇ । ಸಚ್ಚಿದಾನಂದಾ ೨

ಜಡಜ ಸಂಭವ ಜನಕ । ಎಡರು ತೊಡರುಗಳಿಂದ
ಹುಡುಗನನು ದಣಿಸದಲೆ । ಮೃಡ ಮತನೆ ದೇವಾ
ಕಡೆ ಹಾಯ್ಸು ನೀನೆಂದು । ಅಡಿಗೆರಗಿ ಬೇಡ್ವೆ ಕಂ–
ಗೆಡುತ ಮೊರೆ ಇಟ್ಟ ಕರಿ । ಎಡರ ಪರಿಹರ್ತಾ ೩

ಮೃತ್ಯುವಿಗೆ ಮೃತ್ಯು ಅಪ । ಮೃತ್ಯು ಪರಿಹರವರಿದೆ
ಸತ್ಯಭಾಮೆಯ ಲೋಲ । ನಿತ್ಯ ಮಂಗಳನೇ ।
ಅತ್ಯರ್ಥ ಫಲದಾತ । ನಿತ್ಯ ನಿಗಮಾತೀತ
ಭೃತ್ಯರೊಳು ವಾತ್ಸಲ್ಯ । ಪೊತ್ತ ನಗಧೀಶ ೪

ದೇವಕಿಯ ಸುತ ಬಂಡಿ । ಬೋವ ನೀನಾಗುತಲಿ
ಭಾವ ಮೈದುನಗೊಲಿದೆ । ದೇವ ದೇವೇಶಾ ।
ಭಾವುಕರ ಪಾಲಗುರು । ಗೋವಿಂದ ವಿಠ್ಠಲನೆ
ತಾವಕನ ಮೊರೆಯೆಂಬ । ಭಾವ ಸಲಿಸುವುದೋ ೫

೭೧೩

ಶ್ರೀಹರಿ ಪ್ರಿಯ ವಿಠಲ । ಸಲಹ ಬೇಕಿವನಾ ಪ

ಸ್ನೇಹ ಸದ್ಭಕ್ತರಲಿ । ಸಾಹಸದಿ ಕೊಡಿಸಿ ಅ.ಪ.

ಪಾಪಾಟವಿಗೆ ಪವಿಯು । ಶ್ರೀಪತಿಯ ನಾಮವನು
ಲೇಪಿಸುವುದೋ ಸ್ವಾಮಿ । ಗೋಪಾಲ ಮೂರ್ತೇ
ವ್ಯಾಪಕನು ನೀನಾಗಿ । ಪ್ರಾಪಕಾಭಿಷ್ಟಗಳ
ಪಾವನಕೆ ಮನ ಮಾಡಿ । ಎರ್ಷಿಸೋ ಹರಿಯೇ ೧

ಸೃಷ್ಟಾದಿಕರ್ತನೇ । ಕೃಷ್ಣ ಮೂರುತಿ ದೇವ
ಕಷ್ಟಗಳ ಪರಿಹರಿಸಿ । ಕಾಪಾಡೊ ಹರಿಯೆ
ಇಷ್ಟಮೂರುತಿ ದೇವ । ಸುಷ್ಠು ಭಜನೆಯ ನೀಡಿ
ಹೃಷ್ಟನ್ನ ಮಾಡಿವನ । ಜಿಷ್ಣು ಸಖ ಹರಿಯೆ ೨

ಪಂಚಭೇದ ಜ್ಞಾನ । ಸಂಚಿಂತನೆಯ ಕೊಟ್ಟು
ವಾಂಚಿತಾರ್ಥದನಾಗೊ । ಪಂಚ ಪಾಂಚಾತ್ಮ
ಕಾಂಚನವು ಲೋಷ್ಠವು । ಸಮವೆಂಬ ಮತಿಯಿತ್ತು
ಅಂಚೆ ವಹ ಸದ್ವಂದ್ಯ । ಮಿಂಚಿ ನಂದದಿ ಪೊಳೆದು ೩

ಭವ ಬಂಧದಲಿ ಸಿಲ್ಕಿ । ಬಲು ನೊಂದಿಹನು ಅಯ್ಯ
ಭವರೋಗ ವೈದ್ಯನೇ । ಕೈ ಪಿಡಿದು ಕಾಯೋ
ಅವನಿಯೊಳು ಶ್ರೀ ಹರಿಯೆ ಪ್ರಿಯನಾಗಿ ಮೆರೆಯಲಿಂ–
ದಿವನ ಸ್ವಪದಿ ಪೇಳ್ದೆ । ಗುರು ಮೂರ್ತಿಯಾಗೀ ೪

ಸುಪ್ತೀಶ ಪೇಳ್ದಪರಿ । ಇತ್ತಿಹೆನೊ ಅಂಕಿತವ
ಆಪ್ತ ನೀನಿದ್ದವಗೆ । ದಾಸ್ಯ ಸದ್ಧರ್ಮ
ಪ್ರಾಪ್ತಿ ಗೈಸುತ ಭವವ । ಉತ್ತರಿಸ ಬೇಕೆಂದು
ಗೋಪ್ತ ಗುರು ಗೋವಿಂದ । ವಿಠಲ ಪ್ರಾರ್ಥಿಸುವೆ ೫

೭೧೪

ಶ್ರೀ ಹಯಗ್ರೀವ ವಿಠಲ । ಮೋಹ ಕಳೆದಿವನಾ ಪ

ಸಾಹಸಿಗಗಾಭೀಷ್ಟ । ದೋಹನನು ಆಗೋ ಅ.ಪ.

ಮಾಣವಕ ಭಕ್ತಿಯಲಿ । ಮಾನ್ಯರನು ಸೇವಿಸುವ
ಜ್ಞಾನವಂತನ ಮಾಡಿ । ಪ್ರಾಜ್ಞನೆಂದೆನಿಸೋ
ಜ್ಞಾನ ನಿಧಿ ನಿನ್ನೊಲಿಮೆ । ಕಾಣದಲೆ ಪರಿತಪಿಸಿ
ಜ್ಞಾನದಂಕುರಕಾಗಿ । ಬಿನ್ನೈಸುತಿಹೆನೋ ೧

ಸುಜನ ಸಂಗದಿ ಹರಿಯ । ಭಜನೆಯೊದಗಲಿ ಇವಗೆ
ಋಜು ವಾದಿರಾಜರಲಿ । ನಿಜ ಭಕ್ತಿ ಬರಲೀ
ಗಜ ವರದನಂಘ್ರಿಗಳ । ನಿಜ ಮನದಿ ಕಾಂಬಂಥ
ಯಜನ ಭಜನೆಗಳೊದಗಿ । ಪ್ರಜೆಗಳಲಿ ಮೆರೆಸೋ ೨

ಮತ್ಸ್ಯ ಸಾಲಿಗ್ರಾಮ । ಮತ್ತೆ ಶ್ರೀ ಹಯಗ್ರೀವ
ಉತ್ತಮ ಸ್ವಯಂ ವ್ಯಕ್ತ । ವ್ಯಕ್ತ ಸ್ವಪ್ನದಲೀ
ಉತ್ತಹದಿ ತವದಾಸ್ಯ । ಪ್ರಾರ್ಥಿಸುತ್ತಿಹವಟುಗೆ
ಇತ್ತಿಹೆನೊ ಅಂಕಿತವ । ಭೃತ್ಯ ವತ್ಸಲನೇ ೩

ನಾನು ನನ್ನದು ಎಂಬ । ಹೀನ ಭಾವವ ಕಳೆದು
ಏನೇನು ತಾ ಮಾಳ್ಪ । ಮಾನಸಾದಿಗಳಾ
ಪ್ರಾಣಾಂತರಾತ್ಮಕಗೆ । ದಾನ ಮಾಳ್ಪಂತೆಸಗಿ
ಜ್ಞಾನಾಯು ರೂಪಕನ । ಮಾನ್ಯಮತ ತಿಳಿಸೋ ೪

ಜೀವ ಜಡ ಭಿನ್ನ ತಾಂ । ಡವ ಕೃಷ್ಣ ಶ್ರೀ ಹರಿಯೆ
ಮಾವಿನುತ ನೀನಾಗಿ । ಕೈವಲ್ಯ ಪ್ರದನೇ
ತಾವಕನ ಸಲಹೆಂಬ । ಆವ ಭಿನ್ನಪ ಸಲಿಸೆ
ಓವಿ ಪ್ರಾರ್ಥಿಪೆ ಗುರೂ । ಗೋವಿಂದ ವಿಠಲಾ ೫

೭೧೫

ಶ್ರೀಶ ಕೇಶವ ವಿಠಲ ಸಲಹೊ ಇವನಾ ಪ

ದೋಷದೂರನೆ ದೇವ । ರಾಶಿಪಾಪಂಗಳನು
ನಾಶಗೊಳಿಸುತ್ತ ನಿರ್ದೋಷನ್ನ ಗೈಯ್ಯೋ ಅ.ಪ.

ಮೋದತೀರ್ಥರ ಮತದಿ । ಮೋದವನೆ ಪಡುತಿಪ್ಪ
ಸಾಧುಜೀವಿಯು ನಿನ್ನ । ಪಾದಾಬ್ಜ ನಮಿಪ
ವೇದೋದಿತವು ಎನ್ನೆ । ಬೋಧಗಳ ತಿಳಿಸುತ್ತ
ಸಾಧನದಲ್ಲಿರಿಸಿವನ । ಕಾದುಕೋ ಹರಿಯೇ ೧

ದಾಸದೀಕ್ಷೆಯಲಿ ಮಹ । ದಾಸೆ ಉಳ್ಳಂಥವಗೆ
ಲೇಸಾಗಿ ತೈಜಸನು । ಸೂಸಿ ತೋರ್ದಂತೆ
ದಾಶರಥೆ ಹರಿ ನಿನ್ನುಪಾಸನಕೆ ಮೂರ್ತಿ ಉಪ–
ದೇಶಿಸಿಹೆನೋ ಸ್ವಾಮಿ । ಶ್ರೀಶ ನರಹರಿಯೇ ೨

ಸರ್ವಜ್ಞ ಸರ್ವೇಶ । ದುರ್ವಿಭಾವ್ಯನೆ ಹರಿಯೆ
ದರ್ವಿಜೀವನ ಕಾಯೋ । ಶರ್ವವಂದ್ಯ
ನಿರ್ವಿಘ್ನತೆಯಲಿವಗೆ । ಸರ್ವಶಾಸ್ತ್ರಾರ್ಥಗಳ
ಸರ್ವಸಾರವ ತಿಳಿಸೊ । ಸರ್ವಾಂತರಾತ್ಮ ೩

ಸತ್ಯ ಸತ್ಸಂಕಲ್ಪ । ಸತ್ಯನಾರಾಯಣನೆ
ಹೃತ್ಕಂಜದಲಿ ಇವಗೆ । ಚಿತ್ಸ್ವರೂಪವನೂ
ಅರ್ಥಿಯಿಂದಲಿ ತೋರಿ । ಸಾರ್ಥಕವಗೈಜನ್ಮ
ಆರ್ತಜನರುದ್ಧರಣ । ನಿತ್ಯ ಮಂಗಳನೇ ೪

ಆವ ಸಂಸ್ಕೃತಿಯೆಂಬ । ದಾವಾಗ್ನಿ ಪರಿಹರಿಸೆ
ಶ್ರೀವರನೆ ನಿನ್ನ ಸ್ಮೃತಿ । ಸರ್ವಕಾಲದಲಿ
ದೇವ ಹಯ ಮುಖ ಗುರು । ಗೋವಿಂದ ವಿಠ್ಠಲನೆ
ಈವುದೆನೆ ಬಿನ್ನಪವ । ಮಾವಿನುತ ಸಲಿಸೋ ೫

೭೧೬

ಶೇಷ ಗಿರೀಶ ವಿಠಲ । ಪೋಷಿಸೊ ಇವಳಾ ಪ

ಕಾಸು ವೀಸಕ್ಕೆ ಮನ । ಕ್ಲೇಶಗೊಳಿಸದಂತೆ ಅ.ಪ.

ಸುಪ್ತಿಯಲಿ ಅಭಯದಾ । ಹಸ್ತವನೆ ಗುರುದೈವ
ಎತ್ತಿ ಹಿಡಿದು ತವರೂಪ । ದರ್ಶನವ ಗೈಸೀ
ಮುಕ್ತಿ ಪಥ ಮಾರ್ಗಕ್ಕೆ । ಸದ್ಗುರು ಕಟಾಕ್ಷವೆ
ಉತ್ತಮೋತ್ತಮ ಹಾದಿ । ಎಂದು ಪೇಳಿದರೂ ೧

ಹರಿಗುರೂ ಸದ್ಭಕ್ತಿ । ತರತಮ ಜ್ಞಾನವನು
ಕರುಣಿಸೀ ಕಾಪಾಡೊ । ಕರಿವರದ ಹರಿಯೇ
ಕರುಣಾಳು ನಿನ್ನೊರತು । ಆರಿಯೆ ನಾ ಅನ್ಯರನು
ಮರುತಾಂತರಾತ್ಮಕನೆ । ಆನಂದ ನಿಲಯಾ ೨

ಎರಡು ಮೂರರಿಗಳನು । ಪರಿಹರಿಸಿ ವೈರಾಗ್ಯ
ವರಜ್ಞಾನ ಸಂಪದವ । ಕರುಣಿಸುತ ಹರಿಯೇ
ಕರಪಿಡಿದು ಉದ್ಧರಿಸೊ । ಶರಣ ಜನ ಕಾರುಣ್ಯ
ಮರುತಾಂತರಾತ್ಮ ಗುರು । ಗೋವಿಂದ ವಿಠಲಾ ೩

೭೧೭

ಶೇಷ ಪರ್ಯಂಕ ಶಯನ ವಿಠಲ ಪೊರೆ ಇವಳ ಪ

ವಾಸುದೇವನೆ ನಿನ್ನ । ದಾಸಿ ಎಂದೆನಿಸಿ ಭವ
ಪಾಶವನೆ ಕಳೆಯೊ ಸುವಿ । ಶೇಷ ಹರಿಯೇ ಅ.ಪ.

ಪತಿಸುತರು ಹಿತರಲ್ಲಿ । ವಿತತವಾಗಿರುವಂಥ
ಅತಿಶಯದ ತವರೂಪ । ಸತತ ಚಿಂತಸುವಾ ।
ಮತಿಯನೇ ಕರುಣಿಸುತ । ಕೃತ ಕಾರ್ಯಳೆಂದೆನಿಸೊ
ಕ್ಷಿತಿರಮಣ ಭಿನ್ನವಿಪೆ । ಪತಿಕರಿಸೊ ಇದನಾ ೧

ಬುದ್ಧಿಯಲಿ ಸನ್ನಿಹಿತ । ವೃದ್ಧಿಗೈಸಿವಳಲ್ಲಿ
ಮಧ್ವಮತ ಸಿದ್ಧಾಂತ । ಪದ್ಧತಿಗಳಾ
ಅಧ್ವರೇಡ್ಯನೆ ಅನಿ । ರುದ್ಧ ಮೂರುತಿ ಹರಿಯೇ
ಕೃದ್ಧಖಳ ಸಂಹಾರಿ । ಪದ್ಮನಾಭಾ ೨

ಕೀಚಕಾರಿ ಪ್ರಿಯನೆ । ಮೋಚಕೇಚ್ಛೆಯ ಮಾಡಿ
ಪ್ರಾಚೀನ ಕರ್ಮದಿಂ । ಮೋಚನವ ಗೈಸೋ ।
ಯಾಚಿಸುವೆನೋ ಸವ್ಯ । ಸಾಚಿಸಖ ನೀನೆಂದು
ಈಕ್ಷಿಪುದು ಕರುಣ ಕಟಾಕ್ಷದಲಿ ಹರಿಯೇ ೩

ತಾರತಮ್ಯ ಜ್ಞಾನ । ಮೂರೆರಡು ಭೇದಗಳ
ಸಾರತತ್ವಗಳರುಹಿ । ಆರು ಅರಿವರ್ಗಾ

ದೂರಗೈತ್ರೈತಾಪ । ಪಾರು ಮಾಡೋ ಹರಿಯೆ
ಮಾರಾರಿ ಮಿತ್ರನೇ । ಸಾರ ಸುಖಸಾಂದ್ರಾ ೪

ಕಾವ ಕರುಣಿಗಳರಸ । ಭಾಮಕರ ಪರಿಪಾಲಾ
ಓವಿತವ ಸಂಸ್ಮರಣೆ । ಸಾರ್ವಕಾಲಿದಲೀ
ಈವುದಿವಳಿಗೆ ಎಂದು । ಭಾವದಲಿ ಭಿನ್ನವಿಪೆ
ಗೋವಿದಾಂ ಪತಿಯೆ ಗುರು । ಗೋವಿಂದ ವಿಠಲಾ ೫

೭೧೮

ಶೇಷವಂದ್ಯ ಹರಿ ವಿಠಲ । ನೀ ಸಲಹೊ ಇವಳಾ ಪ

ವಾಸುದೇವನೆ ಕೃಷ್ಣ । ಶ್ರೀಶ ಪುರುಷೋತ್ತಮ ಅ.ಪ.

ಶ್ವಾನ ಸೂಕರ ನೀಚ । ಯೋನಿಗಳಲಿ ಜನಿಸಿ
ಜ್ಞಾನಾನು ಸಂಧಾನ । ಕಾಣದಿದ್ದಾಗ್ಯೂ
ಅನೇಕ ಪೂರ್ವವೆನೆ । ಪುಣ್ಯ ಸಂಚಿತದಿಂದ
ಮಾನವ ಸುಜನ್ಮದೊಳು । ಜನುಮ ಪೊತ್ರಿಹಳೊ ೧

ಪರಿಸರ ಕುಲೋತ್ಪನ್ನೆ । ನರರಲನುರಾಗಿಣಿಯು
ಹರಿದಾಸ್ಯ ಕಾಂಕ್ಷಿಪಳೊ । ದುರಿತವನ ಕುಠಾರೀ
ಕರುಣೆ ತೈಜಸ ಸೂಚಿ । ವರ ಅಂಕಿತವನಿತ್ತೆ
ಮರುತಾಂತರಾತ್ಮಕನೆ । ಮದ್ವಿಂಜ ಪೊರೆಯಿವಳಾ ೨

ವರಸು ಸೌಭಾಗ್ಯವನೆ । ಪರಿಹರಿಸಿ ದುಷ್ಕರ್ಮ
ನಿರುತ ನಿನ್ನಯ ನಾಮ । ಸ್ಮರಣೆ ಸುಖವಿತ್ತೂ
ಮರುತ ಮತ ತತ್ವಗಳ । ಅರಿವಾಗುವಂತೆಸಗೋ
ಕರಿವರದ ಕಮಲಾಕ್ಷ । ಕಾರುಣ್ಯ ಮಾರ್ತೇ ೩

ಪತಿಸುತರು ಹಿತರಲ್ಲಿ । ಕೃತಿರಮಣ ಸುವ್ಯಾಪ್ತ
ಮತಿಇತ್ತು ಪೊರೆ ಇವಳ । ಕ್ಷಿತಿರಮಣ ದೇವಾ

ಮತಿಮತಾಂ ವರರಂಘ್ರಿ । ಹಿತಸೇವೆ ದೊರಕಿಸುತ
ಕೃತ ಕೃತ್ಯಳೆಂದೆನಿಸೊ । ಅತಿ ಚಿತ್ರ ಚರಿತಾ ೪

ಕಾವ ಕರುಣಿಯೆ ದೇವ । ಭಾವುಕರ ಪರಿಪಾಲ
ನೀವೊಲಿಯ ದಿನ್ನಿಲ್ಲ । ಆವತ್ರೈ ಜಗದೀ
ನೋವುಸುಖ ದ್ವಂದ್ವಗಳ । ಸಮತೆಯು ಉಂಬಂತೆ
ನಿವೊಲಿಯೊ ದೇವ ಗುರು । ಗೋವಿಂದ ವಿಠಲಾ ೫

೭೧೯

ಶೇಷ ವಂದ್ಯ ಶಿರಿನಾರಾಯಣ ವಿಠಲ
ದಾಸನೆನಿಸೋ ಇವನಾ ಪ

ದೋಷ ದೂರ ಸುವಿಶೇಷ ಮಹಿಮ
ಬ್ರಹ್ಮೇಶ ವಂದ್ಯ ಚರಣ ಅ.ಪ.

ಸಾಧಕ ಜೀವ ಸಮೂಹವ ಸೃಜಿಸುತ್ತ
ಸಾಧನ ಬಗೆ ಬಗೆ ನಿರ್ಮಿಸುತಾ ।
ಭೋದಕ ವೇದ ವಿಭಾಗವ ಗೈದಾ ಅ–
ಗಾಧ ಮಹಿಮ ಪೊರೆಯೊ ೧

ಕಾರುಣ್ಯಾಂಬುಧಿ ತಾರತಮ್ಯ ಜ್ಞಾನ
ಮೂರೆರಡಿಹ ಭೇದವನೆ ತಿಳಿಸೊ
ಸಾರಾಸಾರದಿ ಸಾರತಮನು ನೀನೆಂ–
ದಾರಧಿಪ ಮತಿ ತಿಳಿಸೋ ೨

ಸೇವ್ಯಸೇವಕ ಭಾವ ತಿಳಿಸುತ
ನಿರ್ವ್ಯಲೀಕ ನೆನಿಸೊ ।
ಪೂಜ್ಯ ಪೂಜಕನೆ ಮಾಳ್ಪುದೆಲ್ಲ ತವ
ಭವ್ಯ ಪೂಜೆ ಎನಿಸೋ ೩

ಗುರ್ವನುಗ್ರಹವೆ ಬಲವೆಂದೆನಿಸುತ
ಸರ್ವಕಾರ್ಯ ನಡೆಸೊ ।
ದುರ್ವಿಭಾವ್ಯ ಸರ್ವೋತ್ತಮ ಹರಿ
ಸರ್ವೇಷ್ಟ ಪ್ರದ ನೆನಿಸೊ ೪

ತಂದೆ ತಾಯಿಯೋಳ್ಬಂಧು ಮಿತ್ರರಲಿ
ಸಂದುಗೊಂದು ತವವ್ಯಾಪ್ತಿ ।
ಛಂದದರಹಿ ಪೊರೆನಂದ
ಕಂದ ಗುರು ಗೋವಿಂದ ವಿಠಲ ೫

೭೨೦

ಶೇಷ ವಿನುತ ಸಿರಿ । ರಾಮ ವಿಠಲ ಕಾಯೋ ಪ

ಈ ಸತೀ ಮಣಿಯ ನೀ । ಸಲಹಬೇಕೆಂದು
ಶೇಷ ಸಂಜ್ಞಿತ ಹರಿಯೆ । ಪ್ರಾರ್ಥಿಸುವೆ ಧೊರೆಯೇ ಅ.ಪ.

ಉಪದೇಶ ಅಮೃತ ಸ । ಮೀಪ ವಿಹುದೆಂತೆಂದು
ಕೃಪಣ ವತ್ಸಲ ಕೂರ್ಮ । ರೂಪದಿಂದರುಹೀ
ಉಪದೇಶ ನೀಡ್ವಗುರು । ರೂಪವನೆ ತೋರಿಸುತ
ಅಪರಿಮಿತ ಕಾರುಣ್ಯ । ರೂಪನಾಗಿರುವೆ ೧

ಪರಮ ಗುರು ನಿಜ ರೂಪ । ಎರಡು ಬಾರಿಯು ತೋರಿ
ಸರಸನಾಬ್ಯಾದಿ ಹರುಷ । ಬೀರ್ದೆ ಭಯಹಾರೀ
ಕರುಣವೆಂತುಟೊ ನಿನಗೆ । ಸುರಸಿದ್ಧ ಸಂಸೇವ್ಯ
ಶಿರಿ ರಮಣ ಶ್ರೀರಾಮ । ಪರಮ ಪುರುಷನೆ ೨

ಈ ಸತೀಮಣಿ ಬಯಕೆ । ನೀ ಸಲಿಸಿ ಲೌಕಿಕದಿ
ಲೇಸು ಹೊಲ್ಲೆಗಳೆಂಬ । ಪಾಶಗಳ ಬಿಡಿಸೀ
ದೋಷ ದೂರನೆ ಹರಿಯೆ । ನೀ ಸಲಹೆ ಪ್ರಾರ್ಥಿಸುವೆ
ದಾಶರಥೆ ಪೊರೆ ಇವಳ । ಮೇಶ ಮದ್ವೇಶಾ ೩

ಮಧ್ವಮಾರ್ಗದಿ ಇಹಳು । ಶುದ್ಧ ಭಕ್ತಿಜ್ಞಾನ
ಸಿದ್ಧಿಸುತ ಇವಳಲ್ಲಿ । ಉದ್ಧರಿಸೊ ಹರಿಯೇ ।
ಕೃದ್ಧ ಖಳ ಸಂಹಾರಿ । ಸದ್ಧರ್ಮ ಪಥತೋರಿ
ಅಧ್ವಯನೆ ತವ ನಾಮ । ಶುದ್ಧ ಸುಧೆ ಉಣಿಸೋ ೪

ಸರ್ವವ್ಯಾಪ್ತನೆ ದೇವ । ಪವನಾಂತರಾತ್ಮಕನೆ
ದರ್ವಿ ಜೀವಿಯ ಕಾಯೊ । ಶರ್ವವಂದ್ಯಾ ।
ಸರ್ವ ಸುಂದರ ಗುರು । ಗೋವಿಂದ ವಿಠ್ಠಲನೆ
ಈ ವಿಧದ ಬಿನ್ನಪವ । ನೀವೊಲಿದು ಸಲಿಸೋ ೫

೭೨೧

ಶೇಷನುತ ಗೋಪ ವಿಠ್ಠಲ । ನೀ ಸಲಹೊ ಇವಳಾ ಪ

ವಾಸದೇವನೆ ನಿನ್ನ । ಪ್ರಾರ್ಥಿಸುವೆ ಹರಿಯೇ ಅ.ಪ.

ಕನ್ಯೆ ಬಹು ಭಾವುಕಳು । ನಿನ್ನೆಯಿಂ ಪ್ರಾರ್ಥಿಪಳು
ಘನ್ನ ಹರಿದಾಸ್ಯದಲಿ । ಮುನ್ನಮನವಿರಿಸೀ ।
ಇನ್ನು ತೈಜಸರೂಪ । ಚೆನ್ನ ಶೇಷನು ಆಗೆ
ಮಾನ್ಯರೂ ಪರಮಗುರೂ । ವನ್ನೆ ಕಂಡಿಹಳೋ ೧

ಗುರುತರೂಪಿ ತೈಜಸನು । ವ್ಯಾಸಪೀಠದ ಮುಂದೆ
ಇರುತ ಗುರು ರಾಜರ । ಮಹಿಮೆ ಪೇಳುತಲೀ ।
ಹರಿಸುತಲಿ ಕನ್ಯೆಗೇ । ಫಲಪುಷ್ಪ ತಾಂಬೂಲ
ದೊರಕಿಸಿಹ ಅದರಿಂದೆ । ಉಪದೇಶವಿತ್ತೇ ೨

ಪತಿಸೇವೆ ದೊರಕಿಸುತ । ಕೃತ ಕಾರ್ಯಳೆಂದೆನಿಸೊ
ಹಿತವಹಿತವೆರಡರಲಿ । ರತಿ ಇಡದೆ ಉಂಬಾ ।
ಮತಿಯನ್ನೇ ಕರುಣಿಸುತಾ । ಮತಿಮತಾಂವರರಂಘ್ರಿ
ಶತಪತ್ರ ಸೇವೆಯಲಿ । ರತಳು ಎಂದೆನಿಸೊ ೩

ಮರುತ ಮತ ತತ್ವಗಳು । ಅರಿವಾಗುತಿವಳೀಗೆ
ಪರಮ ಸಾಧನ ಮಾರ್ಗ । ಭಕುತಿ ಜ್ಞಾನಗಳೂ ।
ನೆರವಾಗುತಿವಳ ಭವ । ಸಾಗರದ ಬತ್ತಿಪುದು
ಮರುತಾಂತರಾತ್ಮ ಹರಿ । ವೇಣುಗೋಪಾಲಾ ೪

ಭಾವ ಮೈದುನಗೊಲಿದ । ಶ್ರೀವರನೆ ಮೈದೋರಿ
ಭಾವುಕಳೆ ಪೊರೆಯೆಂದು । ಪ್ರಾರ್ಥಿಸುವೆ ಹರಿಯೇ ।
ಸಾರ್ವಭೌಮನೆ ಹರಿಯೆ । ಕೋವಿದೋತ್ತಂಸ ಗುರು
ಗೋವಿಂದ ವಿಠ್ಠಲನೆ । ನೀವೊಲಿಯ ಬೇಕೋ ೫

೭೨೨

ಸತ್ಯನಾರಾಯಣ ವಿಠಲ । ನಿತ್ಯ ನೂತನ ಮಹಿಮ
ಭೃತ್ಯನನು ಪೊರೆಯೆಂದು । ಪ್ರಾರ್ಥಿಸುವೆ ಹರಿಯೇ ಅ.ಪ.

ನಿತ್ಯ ಜೀವನಕಾಗಿ । ವಿತ್ತ ಪತಿವೊಲಿಮೆಯನು
ಅರ್ಥಿಸುತ್ತಿಹ ನೀಗ । ಸತ್ಯ ಮೂರುತಿಯೇ
ಭರ್ತು ನೀ ಜಗಕಿದ್ದು । ಕರ್ತು ನೀನಾಗಿರಲು
ಆರ್ತರುದ್ಧರ ಕಾರ್ಯ । ಪೂರ್ತಿಗೊಳಿಸೋ ೧

ಪದುನೆ ರಮಣನ ಭಕ್ತ । ಉದರಕಳುವುದು ಒಳಿತೆ
ಇದು ನಿನಗೆ ಸರಿಯೇನೊ । ಉದಧಿ ಶಯನಾ
ವಿಧಿ ಜನಕ ವಿಶ್ವೇಶ । ಮುದ ಮುನಿಯ ಸದ್ವಂದ್ಯ
ವದಗಿ ವರಪ್ರದನಾಗಿ । ಮುದವನ್ನೆ ಬೀರೋ ೨

ಯೇಸೊ ಜನ್ಮದ ಪುಣ್ಯ । ರಾಶಿ ವದಗಿತೊ ಇವಗೆ
ಆಶಿಸುವ ಹರಿದಾಸ್ಯ । ವಾಸವಾನುಜನೇ
ಆಸುರೀ ಭಾವಗಳ । ನಾಶನವ ಗೈಯ್ಯುತ್ತ
ಪೋಷಿಸುವುದಿವನ ಹರಿ । ದಾಸ್ಯ ಕರುಣಿಸುತಾ ೩

ನಾನು ನನ್ನದು ಎಂಬ । ಹೀನ ಮತಿಯನೆ ಕಡಿದು
ದಾಸವಾಂತಕ ಸಲಹೊ । ಜ್ಞಾನ ಪ್ರದನಾಗೀ
ಮೌನಿ ಮಧ್ವರ ಮತದಿ । ಸಾನು ಕೂಲಿಸಿ ದೀಕ್ಷೆ
ಮಾನನಿಧಿ ಗುಣಪೂರ್ಣ । ನೀನಾಗಿ ಪೊರೆಯೋ ೪

ಸರ್ವವ್ಯಾಪ್ತ ಸ್ವಾಮಿ । ನಿರ್ವಿಕಾರನೆ ದೇವ
ಸರ್ವಜ್ಞ ಸರ್ವೇಶ । ಸರ್ವಸಮ ಮೂರ್ತೇ
ಗುರ್ವಂತರಾತ್ಮಕನೆ । ದರ್ವಿಜೀವಿಯ ಕಾಯೊ
ದುರ್ವಿ ಭಾವ್ಯನೆ ಗುರು । ಗೋವಿಂದ ವಿಠಲಾ ೫

೭೨೩

ಸರ್ಪಾದ್ರಿ ವಾಸ ವಿಠಲ । ಅರ್ಪಿಸುವೆನಿವಳಾ ಪ

ಶೂರ್ಪಕರ್ಣನ ಪಿತಗೆ । ಸಖ ನೆನಿಪ ಹರಿಯೇ ಅ.ಪ.

ನೊಂದು ಸಂಸಾರದಲಿ । ಬಂಧನವ ಕಳೆಯಲ್ಕೆ
ನಂದ ನಂದನನನ್ನು । ವಂದಿಸುತ ಬಹಳಾ
ಕಂದರ್ಪನುಪಟಳವೇ । ಛಂದದಿಂ ದೂರಿರಿಸಿ
ನಂದಾದ್ರಿ ನಿಯಲ ತವ । ಪಾದಕಾಂಕ್ಷಿಪಳಾ ೧

ಚಿತ್ರಕಲೆ ಸದ್ ಜ್ಞಾನ । ಸತ್ರದಲಿ ಬಹುಕಾಂಕ್ಷಿ
ಪುತ್ರ ಪೌತ್ರರು ಇದ್ದು । ಅತಿ ಮಮತೆ ಪೊರೇ
ಮತ್ತೆ ಅಧ್ಯಾತ್ಮಗಳ । ಚಿತ್ರಿಸುತ ಪತ್ರದಲಿ
ಚಿತ್ರ ಚರಿತನ ಪಾದ । ಶತಪತ್ರಕೀವಾ ೨

ಮಧ್ವಮತ ತತ್ವಗಳ । ಬುದ್ಧಿಗೇ ನಿಲುಕಿಸುತ
ಅಧ್ಯಾತ್ಮ ಸದ್‌ಜ್ಞಾನ । ವೃದ್ಧಿಗೈ ಹರಿಯೇ
ಶುದ್ಧ ವೈರಾಗ್ಯದಲಿ । ಶ್ರದ್ಧೆಯಿತ್ತಿವಳನ್ನು
ಉದ್ಧರಿಸ ಬೇಕಿವಳಾ । ಶ್ರದ್ಧೆ ಪತಿ ಪ್ರೀಯಾ ೩

ಬಿಂಬ ಪ್ರತಿಬಿಂಬಾದಿ । ಹಂಬಲಿಸುತಿಹಳೀಗೆ
ಅಂಭ್ರಣಿ ಪತಿ ನಿನ್ನ । ಸಂಭ್ರಮದಿ ಕಾಂಬ
ಬಿಂಬೊ ಪಾಸನ ಕರ್ಮ । ತುಂಬಿಸೆಂದಿವಳಲ್ಲಿ
ಪೊಂಬಸಿರ ವಂದ್ಯ ಮ । ಧ್ಬಿಂಭ ಪ್ರಾರ್ಥಿಸುವೆ ೪

ಭಾವದ್ರವ್ಯ ಕ್ರಿಯವು । ಈ ವಿಧಾದ್ವೈತತ್ರಯ
ತೀವ್ರುಪಾಸನೆ ಪಲಿಸಿ । ಹೃದ್ಗುಹದಿ ನಿನ್ನಾ
ಆವ ತವ ಭವ್ಯ ಸ । ದ್ರೂಪ ತೋರಿಸು ಎಂದು
ಓವಿ ಪ್ರಾರ್ಥಿಪೆ ಗುರು । ಗೋವಿಂದ ವಿಠಲಾ ೫

೭೨೪

ಸರ್ವಾಮಯ ಹರ ವಿಠಲನೇ । ಸರ್ವದಾ
ನೀನಿವರ ಸಲಹ ಬೇಕೊ ಪ

ಶರ್ವಾದಿ ಸುರವಂದ್ಯ ಸಾರ್ವಭೌಮ ಸ್ವಾಮೀ ಅ.ಪ.

ಭವಜನಿತ ಕ್ಲೇಶಗಳನನುಭವಿಸಿ ಅನುಭವಿಸೀ
ಭವದಿ ಬಲು ಬಳಲಿರುವನಿವಗಮೃತ ವೀಕ್ಷಣವಾ ।
ತವಕೃಪೆಯ ಧಾರೆಯಲಿ ತ್ರಿವಿಧ ತಾಪವ ಕಳೆದು
ತವಪಾದ ಪದುಮದಲ್ಲಿರಿಸೋ ಭವ ಹಾರೀ ೧

ಸರ್ವಸೃಷ್ಟೀಶನೇ ಸರ್ವಪಾಲಕ ಹರಿಯೇ
ಸರ್ವ ಸಂಹಾರಕನೇ ಸರ್ವೋತ್ತಮಾ
ಸರ್ವಾಂತರಾತ್ಮ ಶ್ರೀ ವೆಂಕಟೇಶನೆ ನಿನ್ನ
ಸರ್ವದಾ ಭಜಿಸುವಗೆ ಸರ್ವಮಂಗಳವೀಯೋ ೨

ಭಾವಿಮರುತಲೀತ । ಭಾವ ಭಕುತಿಗಳಿಂದ
ಸೇವಿಸುವ ಹಯಮೊಗನ । ತವ ದಿವ್ಯ ರೂಪಾ
ಆವ ತನುಕರಣ ಮನ । ಸರ್ವಾರ್ಪಣೆಂಬ ಮತಿ
ಓವಿನೀನಿವಗಿತ್ತು । ಪಾವನವಗೈಯ್ಯೊ ೩

ಪಂಚಬೇಧದ ಜ್ಞಾನ । ಸಂಚಿಂತನೇ ಇತ್ತು
ಅಂಚೆವಹ ಮತ್ತೆ ಹರಿ । ಮಂಚವಿಪಗೇಂದ್ರಾ ।
ಮುಂಚೆ ತರತಮ ತಿಳಿಸಿ । ವಾಂಛಿತಾರ್ಥದ ನಿನ್ನ
ಸಂಚಿಂತನೆಯಲೇ ಇರಿಸೊ ಪಂಚಾಸ್ಯ ಪ್ರಿಯನೆ ೪

ಭಾವಕ್ರಿಯ ದ್ರವ್ಯೆಂಬ । ಅದ್ವೈತ ಚಿಂತನೆಯ
ನೀವೊಲಿದು ಇವಗಿತ್ತು । ಭಾವದಲಿ ತೋರೊ ತವರೂಪ ।
ಈ ವಿಧದಿ ಬಿನ್ನೈಪೆ ಪವನಾಂತರಾತ್ಮ ಗುರು
ಗೋವಿಂದ ವಿಠಲಯ್ಯ ಪಾಲಿಸೋ ಜೀಯಾ ೫

೭೨೫

ಸರ್ವಾಧಾರ ವಿಠಲ । ಶರ್ವ ನೊಡೆಯ ಪ

ಸರ್ವವಿಧದಲ್ಲಿವನ । ಪೊರೆಯ ಬೇಕಯ್ಯ ಅ.ಪ.

ಮಧ್ವಸಿದ್ದಾಂತದಲಿ । ಅಂಕುರವ ಪುಟ್ಟಿಹುದು
ಶುದ್ಧಭಾವದಲದನ । ವೃದ್ಧಿಗೈಸುತಲೀ
ಮಧ್ವಸನ್ಮಾರ್ಗದಲಿ । ಪದ್ಮನಾಭನ ಪಾದ
ಪದ್ಮವನೆ ಭಜಿಪಂಥ । ಅಧ್ಯಾನ ತೋರೋ ೧

ಲೇಸು ಸಾಧನ ಹರಿಯ । ದಾಸ್ಯದಲಿ ಮನವಿರಿಸಿ
ಆಶೆ ಪೂರೈಸಲ್ಕೆ । ಆಶಿಸುತ್ತಿಹನೋ ।
ವಸುದೇವಭಿದ ತೈ । ಜಸನ ರೂಪದಲಿ ಉಪ
ದೇಶವಿತ್ತಂತೆ ಉಪ । ದೇಶವಿತ್ತಿಹೆನೋ ೨

ಹರಿಗುರು ಸದ್ಭಕ್ತಿ । ವೈರಾಗ್ಯ ವಿಷಯದಲಿ
ಕರುಣಿಸಿ ಪೊರೆಯೊ ಹರಿ । ಮರುತಂತರಾತ್ಮ
ನಿರುತ ಸಜ್ಜನ ಸೇವೆ । ದೊರಕಿಸುತ ಸಾಧನವ
ಪರಿಪರಿಯಲಿಂಗೈಸಿ । ಪೊರೆಯೊ ಸರ್ವೇಶಾ ೩

ಅಂಶಾಂಶಿ ತೇಚ್ಛೆಯಲಿ । ಕಂಸಾರಿ ಮನಮಾಡಿ
ವಂಶ ಉದ್ಧರಿಸಿವಗೆ । ಹಂಸಜನ ವಂದ್ಯ
ಹಂಸೋಪಸನೆ ಮಾಳ್ವ । ಶ್ವಾಸ ಮಾನೀ ವಾಯು
ಶಂಸನವ ಕೈಗೊಂಡು । ಜೀವರೋದ್ಧಾರೀ ೪

ಕ್ಲೇಶಮೋದದಿ ಸಮತೆ । ಲೇಸಾಗಿ ಕೊಟ್ಟಿವಗೆ
ಪೋಷಿಸೋ ಹಯವದನ । ಬಾಸುರಾಂಗ ಹರೀ
ಮೇಶ ಮಧ್ವೇಶ ಉಪ । ದೇಶ ಸಾರ್ಥಕ್ಯವನು
ಆಶಿಸುವೆ ಕರುಣಿ ಗುರು । ಗೋವಿಂದ ವಿಠಲಾ ೫

೭೨೬

ಸಾಮಗಾಯನ ಲೋಲ ವಿಠ್ಠಲನೆ ಸಲಹೋ ಪ

ಕಾಮಿತಾರ್ಥಗಳಿವಗೆ ಪ್ರೇಮದಲಿ ಕೊಡುತಲಿ
ಶ್ರೀ ಮನೋಹರ ಹರಿಯೆ ಕಾಪಾಡೊ ಇವನಾ ಅ.ಪ.

ಹರಿಗುರೂ ಸದ್ಭಕ್ತಿ । ತರತಮದ ಸುಜ್ಞಾನ
ನಿರುತ ಕರುಣಿಸಿ ಅರಿಪು । ಮೂರೆರಡು ಭೇದಾ
ಹರುಷ ಕ್ಲೇಶಾದಿಗಳು । ಹರಿಯಧೀನಗಳೆಂಬ
ಅರಿವಿನಿಂದಲಿ ದ್ವಂದ್ವ । ಸಹನೆಗಳನೀಯೊ ೧

ಲೌಕಿಕದಿ ನಿನ್ನಾನೇಕ ಬಗೆ ವ್ಯಾಪ್ತಿಗಳ
ತೋಕನಿಗೆ ತಿಳಿಸುತ್ತ ಸಾಕಬೇಕಿವನಾ
ಪ್ರಾಕ್ಕು ಕರ್ಮವ ಕಳೆದು ಗೋಕುಲಾನಂದ ಹರಿ
ನೀಕೊಡು ಸತ್ಸಂಗ । ಏಕಾಂತಿಕರ ಪ್ರಿಯನೆ ೨

ಎಲ್ಲ ಬಲ್ಲವಗಿನ್ನು ಸೊಲ್ಲುಂಟೆ ನಾಪೇಳಿ
ಮಲ್ಲ ಮರ್ಧನ ದೇವ । ಪ್ರಹ್ಲಾದ ವರದಾ

ಕ್ಷುಲ್ಲಕನ ಕರಪಿಡಿದು । ಬಲ್ಲಿದನ ಮಾಡೆಂದು
ಚೆಲ್ವ ಗುರು ಗೋವಿಂದ ವಿಠಲ ಪ್ರಾರ್ಥಿಸುವೇ ೩

೭೨೭

ಸ್ವಾಮಿ ಗುರು ಗೋವಿಂದ ವಿಠಲ ಪೊರೆ ಇವನಾ ಪ

ಶ್ರೀಮನೋಹರನಂಘ್ರಿ । ಕಮಲಕಾಂಕ್ಷಿಪನಾ ಅ.ಪ.

ಏಸೋ ಜನ್ಮದ ಪುಣ್ಯ । ರಾಶಿವದಗಿತೋ ಇವಗೆ
ದಾಸನಾಗಲು ಹರಿಗೆ । ಸೂಸಿ ಬೇಡುವನೊ ।
ವಾಸುದೇವನೆ ನಿನ್ನ । ದಾಸತ್ವ ಪಾ ಅಸುತ
ಶೊಷಿಸೋಭವ ಶರಧಿ । ಮೇಶ ಮಧ್ವೇಶಾ ೧

ತುಂಗೆ ತೀರದಿ ಧವಳ । ಗಂಗೆ ತಟವಾಸಯತಿ
ಪುಂಗವರ ಕರುಣಾ । ಪಾಂಗ ವೀಕ್ಷಣವಾ
ಮಂಗಳ ಸ್ವಪ್ನದಲಿ । ಕಂಗಳಿಂದಲಿ ಕಂಡು
ಸಂಗ ಸಾಧುಗಳ ಉ । ತ್ತುಂಗ ಬಯಸುವನೋ ೨

ಜಲಜನಾಭನ ಭಜಿಸೆ । ಕುಲವು ಪ್ರಾಧಾನ್ಯಲ್ಲ
ಹಲವಾರು ದೃಷ್ಟಾಂತ । ಕೇಳಿ ಬರುತಿಹುದೋ
ಸುಲಭ ನೀನೆಂತೆಂದು । ಬಲವಿನಿಂ ಪ್ರಾರ್ಥಿಸುವೆ
ತಿಳಿಪುವುದು ಮರುತಮತ । ಹಲವು ತತ್ವಗಳಾ ೩

ವೇಣುಗಾನ ಪ್ರಿಯನೆ । ಗಾನಕಲೆ ಇವನಲ್ಲಿ
ಜ್ಞಾನಯುತವಾಗಲೆನೆ । ವೇಣುಪ್ರಾರ್ಥಿಸುವೇ
ಅರ್ಣಸಂಪ್ರತಿ ಪಾದ್ಯ । ಚೀರ್ಣ ಸತ್ಕತಿಯವನು
ಪೂರ್ಣಗೈಸಿವನ ಪ್ರಾಚೀನ ಕರ್ಮಗಳಾ ೪

ನಾಮಾಧಿಕಾರಿ ಇವ । ನಾಮಸ್ಮೃತಿ ಸರ್ವದಾ
ನೇಮದಿಂ ಫಲಿಸಿವಗೆ । ಸೋಮಧರನುತನೇ

ಕಾಮಜನಕನೆ ಗುರೂ । ಗೋವಿಂದ ವಿಠಲಯ್ಯ
ಈ ಮಾತು ಸಲಿಸೆಂದು । ಸ್ವಾಮಿ ಪ್ರಾರ್ಥಿಸುವೇ ೫

೭೨೮

ಸಿರಿಕೃಷ್ಣ ವಿಠಲನೆ । ಪೊರೆಯ ಬೇಕಿವಳಾ ಪ

ಮರುತಾಂತರಾತ್ಮಕನೆ । ಶರಣ ಸುರಧೇನೂ ಅ.ಪ.

ಹರಿಗುರೂ ಸತ್ಕರುಣ । ವರಪಾತ್ರಳೆಂದೆನಿಸಿ
ಪರಿಪಾಲಿಸಿವಳ ಭವ । ಕರಿಗೆ ಕೇಸರಿಯೇ ।
ಮರುತ ಮತ ತತ್ವಗಳ । ಅರಿವು ಕೊಡುತಲಿ ಇವಳ
ಕರುಣನೋಟದಿ ನೋಡೊ । ಸರ್ವದೇವೇಡ್ಯಾ ೧

ಕಂಸಾರಿ ತವದಾಸ್ಯ । ಶಂಸನಾರ್ಹತೆಯರಿತು
ಸಂಶಯವುರಹಿತೆಪದ । ಪಾಂಸು ಬಯಸುವಳೋ ।
ಹಂಸವಹ ವಂದ್ಯ ವೀ । ಪಾಂಸಗನೆ ಸಿರಿಲೋಲ
ವಂಶವೃದ್ಧಭಿಲಾಷೆ । ಹಂಸಪೂರೈಸೋ ೨

ಕಾಕುಸಂಗವೆ ತೊರೆದು । ಏಕಾದಶೇಂದ್ರಿಯದಿ
ಏಕಮೇವನ ಭಜಿಸಿ । ನೂಕಿ ಸಂತಾಪಾ ।
ಶ್ರೀಕರನೆ ನಿನ್ನಯ ಅ । ಲೌಕಿಕಸು ಮಹಿಮೆಗಳ
ವಾಕು ಸ್ಫುರಿಸುತ ಇವಳ । ನೀ ಕಾಯ ಬೇಕೋ ೩

ಪವನ ವಂದಿತ ದೇವಾ । ಭವವನಧಿ ನವಪೋತ
ತವನಾಮ ಸಂಸ್ಮೃತಿಯ । ಪವನ ಮೂರರಲೀ ।
ಅವಶದಲಿ ಕೀರ್ತಿಸುವ । ದಿವ್ಯಭಕ್ತಿಯ ಜ್ಞಾನ
ಹವಣಿಸುತ ಶ್ರೀಹರಿಯೆ । ತಾವಕಳ ಪೊರೆಯೇ ೪

ಕಟುವು ಸವಿಗಳನುಂಬ । ದಿಟತವಿದಿ ಮರೆಸಿವಳ
ಪಟುತರಾಂಗನೆ ದೇವ । ಕುಟಿಲಾತಿ ದೂರಾ ।

ನಿಟಿಲಾಕ್ಷಸಖನೆ ಕರ । ಪುಟವ ಜೋಡಿಸಿ ಬೇಡ್ವೆ
ಧಿಟಗುರೂ ಗೋವಿಂದ । ವಿಠಲ ಪೊರೆ ಇವಳಾ ೫

೭೨೯

ಸಿರಿಜಾನಕೀಪತಿ ವಿಠಲ ನೀನಿವನ ಕಾಯೋ
ಗರುಡ ಶೇಷಾದಿ ಮನೋ ಮಾನಿ ಪ್ರೇರಕನೆ ಹರಿಯೇ ಪ

ಮಂದ ಜನರುದ್ಧಾರಿ । ತಂದೆ ಮುದ್ದು ಮೋಹನ್ನ
ನಂದನರ ದ್ವಾರದಿಂ । ಪೊಂದಿ ಅಂಕಿತವಾ ।
ಅಂದ ಸತ್ಸಾಧನವ । ಮುಂದುವರಿಪಲಿಕಾಂಕ್ಷೆ
ಯಿಂದ ಸತ್ಕಾರ್ಯ ಪ್ರತಿ । ಬಂಧ ಪರಿಹರಿಸೋ ೧

ಮನಸಿನ ಮೈಲಿಗೆಯ ಅನುನಯದಿ ಪರಿಹರಿಸಿ
ಗುಣರೂಪ ಕಾರ್ಯತವ । ದಿನಪ್ರತಿದಿನ ಚಿಂತಿಪ ।
ಮನವನಿತ್ತಾದರಿಸೊ । ಗುಣ ನಿಧಿಯೆ ಪ್ರಾರ್ಥಿಸುವೆ
ಅನಘ ನಿನ್ನಯ ಪಾದ । ವನಜ ಆಶ್ರಿತಗೇ ೨

ಭಾವಜಾರಿಯ ಮಿತ್ರ । ಭಾವುಕರ ಪರಿಪಾಲ
ಗೋವಿದಾಂ ಪತಿಯೆ ಗುರು । ಗೋವಿಂದ ವಿಠಲಾ ।
ಪಾವಮಾನಿಯ ಪ್ರೀಯ । ನೀವೊಲಿದು ಭಕ್ತನ್ನ
ತೀವರುದ್ಧರಿಸೆಂದು । ದೇವ ಭಿನ್ನವಿಪೇ ೩

೭೩೦

ಸೀತಾಪತಿ ಹರಿ ವಿಠಲಾ । ಪ್ರೀತ ನಾಗೊ ಇವಗೇ ಪ

ಮಾತಿಗೆ ಗತಿ ಪ್ರದ । ಖ್ಯಾತಿ ಉಳ್ಳವನೇ ಅ.ಪ.

ಉಚ್ಚ ಸಂಸ್ಕೃತಿ ಪೊತ್ತು । ಮೆಚ್ಚಿ ಹರಿಪಾದ ದಾಸ್ಯ
ದೀಕ್ಷೆ ಕಾಂಕ್ಷಿಸುತಿಹನು । ಅಚ್ಯುತಾನಂತಾ

ಕುಚ್ಛಿತನು ಇವನಲ್ಲ । ಅಚ್ಚ ಭಕುತನು ಇವಗೆ
ಮೆಚ್ಚಿ ತವದಾಸ್ಯ ಕೊಡು । ಸಚ್ಚಿದಾನಂದಾ ೧

ಸಾಧನ ಸುಜೀವಿ ಇವ । ಉದುಭವಿಸಿ ಬಂದಿಹನು
ಮೋದ ತೀರ್ಥರ ಮತದಿ । ಹೇ ದಯಾಕರನೇ
ಬೋಧಾನುಸಾರಿ ಸಿರಿ । ತೈಜಸಾಭಿಧನಿಂದ
ಬೋದಿಸಿಹೆ ಅಂಕಿತವ । ಶ್ರೀದ ಶ್ರೀ ರಾಮ ೨

ಮಧ್ವಮತ ಪದ್ದತಿಯ । ವೃದ್ಧಿಗೈಸಿವನಲ್ಲಿ
ಬುದ್ಧಿ ಚತುರತೆ ಇತ್ತು । ಉದ್ದರಿಸೊ ಇವನಾ
ಕೃದ್ಧ ಖಳ ಜನರಿವನ । ಸ್ಪರ್ಧಿಸದ ತೆರಮಾಡೊ
ಮಧ್ವಾಂತರಾತ್ಮಕನೆ । ಅದ್ವಯನೆ ದೇವಾ ೩

ಬಿಂಬೈಕ್ಯ ಚಿಂತನೆಯ । ಹಂಬಲವನೇ ಹಚ್ಚಿ
ತುಂಬಿಸೋ ಸಾಧನವ । ಅಂಬುಜಾಂಬುಕನೇ
ಉಂಬುಡುವ ಕ್ರಿಯೆಗಳನು । ಬಿಂಬ ಮಾಡಿಸೆ ಪ್ರತಿ
ಬಿಂಬ ಮಾಳ್ಪನು ಎಂಬ । ನಂಬುಗೆಯ ನೀಯೋ ೪

ಶ್ರೀವರನೆ ತವನಾಮ । ಸರ್ವದಾಸ್ಮರಿಪಂಥ
ಭಾವವೀಯುತ ಹೃದಯ । ಗಹ್ವರದಿ ತೋರೀ
ತಾವಕಗೆ ಭವವನಧಿ । ದಾಂಟಿಸಲು ಪ್ರಾರ್ಥಿಸುವೆ
ಪಾವು ಮದ ಹರ್ತ ಗುರು । ಗೋವಿಂದ ವಿಠಲಾ ೫

೭೩೧

ಸೀತಾಮನೋಹರ ವಿಠಲಾ । ಕಾಪಾಡೊ ಇವಳಾ ಪ

ಮಾತುಮಾತಿಗೆ ನಿನ್ನ । ಸ್ಮರಣೆ ಸುಖ ಕೊಟ್ಟು ಅ.ಪ.

ಮಂಗಳಾಂಗನೇ ಹರಿಯೇ । ಶೃಂಗಾರ ಮೂರುತಿಯೇ
ಭಂಗಗೈ ಅಜ್ಞಾನ । ಸತ್ಸಂಗವನೆ ಕೊಟ್ಟು

ಸ್ವಾಂಗಾಯ ನಾಮ । ನೀಲಾಂಗ ಶ್ರೀ ಹರಿಯೆ
ಕಂಗಳಿಂದಲಿ ಕಾಂಬ । ಹವಣೆಯನು ತಿಳಿಸೋ ೧

ತರತಮಾತ್ಮಕ ಜ್ಞಾನ । ಹರಿಗುರು ಸದ್ಭಕ್ತಿ
ಮರುತ ಮತ ದೀಕ್ಷೆಯನು । ಕರುಣಿಸೋ ಹರಿಯೇ
ದುರಿತಾಳಿ ದುಷ್ಕರ್ಮ । ಪರಿಹರಿಸಲೀವಳಿಗೆ
ಪರಮ ಆನಂದವನೆ । ಕರುಣಿಸೊ ಹರಿಯೇ ೨

ಪೇಳ್ವುದೆನಿಹುದೆನಗೆ । ಸರ್ವಜ್ಞ ನೀನಿರುವೆ
ಭವದಿಂದ ಕಡೆಗಿತ್ತು । ಪವನಂತರಾತ್ಮ
ಈ ವಿಧದಭಿನಿಪವ । ನೀವೊಲಿದು ಸಲಿಸೆಂದು
ದೇವ ಪ್ರಾರ್ಥಿಪೆ ಗುರು । ಗೋವಿಂದ ವಿಠಲಾ ೩

೭೩೨

ಸುಖ ಪೂರ್ಣ ವಿಠಲನೆ । ಸಲಹ ಬೇಕಿವಳಾ ಪ

ವಿಖನ ಸಾಂಡವ ಬಾಹ್ಯ । ಒಳಗೆಲ್ಲಾ ವ್ಯಾಪ್ತ ಅ.ಪ.

ನಾರಿಮಣಿ ಪತಿಸೇವೆ । ಸಾರತರದಲಿಗೈದು
ಭೂರಿಭಕ್ತಿಯಲಿಂದ । ಸಂತಾನಕಾಗೀ
ಶ್ರೀ ರಮಣ ತವಪಾದ । ದಾರಾಧನೆಯಗೈದು
ಭೋರಿಟ್ಟು ಪ್ರಾರ್ಥಿಪಳು ಕಾರುಣ್ಯ ಮೂರ್ತೇ ೧

ಭಕುತರ್ಗಭೀಷ್ಟಗಳ । ನೀ ಕೊಡುವಿ ಎಂತೆಂಬ
ಉಕುತಿಯನೆ ನಾ ಕೇಳಿ । ಅರಿಕೆಯನೆ ಮಾಳ್ವೇ
ಈಕೆಯ ಮನೋರಥವ । ನೀ ಕೊಟ್ಟು ಸಾಧನವ
ವೈಖರಿಯಲಿಂದೆಸಗೊ । ರುಕುಮಿಣೀ ಪತಿಯೇ ೨

ಉಚ್ಚನೀಚಾದಿಗಳು । ಸ್ವಚ್ಛ ತಿಳಿಸಿವಳೀಗೆ
ಅಚ್ಚ ಕನ್ನಿಕೆ ರಮಣ । ಅಚ್ಯುತಾನಂತಾ

ಮುಚ್ಚು ಕಾಣಿಕೆಗೊಂಡು । ಇಚ್ಛೆ ಪೂರೈಸುವುದು
ಸಚ್ಚಿದಾನಂದಾತ್ಮ । ಚಿತ್ಸುಖಪ್ರದನೇ ೩

ಹರಿಗುರು ಸದ್ಭಕ್ತಿ । ದುರ್ವಿಷಯ ವೀರಕ್ತಿ
ಹರಿಯ ವಿಷಯಕ ಜ್ಞಾನ । ಕರೋಣಿಸೋ ದೇವಾ
ನಿರುತನಾಮ ಸ್ಮರಣೆ । ಇರಲಿವಳ ಮುಖದಲ್ಲಿ
ಮರುತಾಂತರಾತ್ಮಕನೆ । ಶಿರಿ ರಮಣ ಹರಿಯೇ ೪

ಶ್ರೀವತ್ಸಲಾಂಚನನೇ । ಭಾವುಕರ ಪರಿಪಾಲ
ಗೋವತ್ಸದನಿ ನಾವು । ತೀವ್ರ ಬರುವಂತೇ
ಶ್ರೀವರ ಶ್ರೀಗುರೂ । ಗೋವಿಂದ ವಿಠಲನೆ
ನೀವೊಲಿಯ ಬೇಕೆಂದು ಬೇಡ್ವೆ ಗೋಪಾಲ ೫

೭೩೩

ಸುಂದರಾಂಗ ವಿಠಲ । ತಂದೆ ಪೊರೆ ಇವಳಾ ಪ

ಕಂದರ್ಪನಯ್ಯ ಭವ । ಸಿಂಧು ಉತ್ತರಿಸೀ ಅ.ಪ.

ಕಾರುಣ್ಯ ನಿಧಿಯೆ ಭವ । ವಾರಿಧಿಗೆ ನವ ಪೋತ
ಚಾರುತವನಾಮ ಸ್ಮೃತಿ । ಆರೈಸುವಂತೇ
ಮೂರೆರೆಡು ಭೇದಗಳು । ತಾರತಮ್ಯದ ಬಗೆಯ
ತೋರಿಪೊರೆ ಕನ್ಯೆಯನು । ಮಾ ರಮಣ ದೇವಾ ೧

ಆವ ಸ್ವಪ್ನದಿ ವೃದ್ಧ । ಭಾವದ್ಯುತಿಗಳ ಕಂಡು
ಭಾವಿ ಮರುತರು ಎಂಬ ಭಾವದಲಿ ನಮಿಸೀ
ಭಾವ ಭಕುತಿಲಿ ಭೀತಿ । ಭಾವವನೆ ತೋರುತ್ತ
ತೀವರದಿ ಸಂಸ್ತಬ್ಧ । ಭಾವದಿರುತಿಹಳಾ ೨

ಪತಿತ ಪಾವನ ರಂಗ । ಕೃತ ಪೂರ್ವ ಪುಣ್ಯದಿಂ
ಮತಿಮಾಡಿ ಹರಿದಾಸ್ಯ । ಹಿತದಿಕಾಂಕ್ಷಿಪಳೋ ।

ಪತಿಸೇವೆ ದೊರಕಿಸುತ । ಕೃತಕಾರ್ಯಳೆಂದೆನಿಸೊ
ಕ್ಷಿತಿಯೊಳಿವಳನು ಮೆರೆಸೊ । ಪ್ರತಿರಹಿತ ದೇವಾ ೩

ಕರ್ಮಪ್ರಾಚೀನಗಳ । ನಿರ್ಮಲಿನ ಮಾಡುತ್ತ
ಧರ್ಮ ಸಾಧನ ಮಾರ್ಗ । ಪೇರ್ಮೆಯಿಂಕೆಡಿಸೋ ।
ಭರ್ಮಗರ್ಭನನಯ್ಯ । ಹಮ್ಮು ಕಳೆದಿವಳ ತವ
ಸೊಮ್ಮು ನಾಮಾಮೃತದ । ಉಮ್ಮು ನೀ ಕೊಡಿಸೋ ೪

ಗಾಮಲ್ಲಗಣಿಗೊಲಿದು । ಧೀವರಗೆ ದೂರಸ್ಥ
ಆವಸಂಗದ ವಿವರ । ಕಾಣ್ವ ಬಲವಿತ್ತಾ
ಮಾವಾರಿಯಾದ ಗುರು । ಗೋವಿಂದ ವಿಠ್ಠಲನೆ
ನೀವೊಲಿಯ ದಿನ್ನಾರ । ಕಾವರನಕಾಣೇ ೫

೭೩೪

ಸುಧಾಮ ಪ್ರಿಯ ವಿಠಲ । ಬದಿಗ ಪೊರೆ ಇವಳಾ ಪ

ವಿಧಿ ಭವಾದ್ಯರ ಜನಕ । ಮುದ ಪ್ರದನೆ ದೇವಾ ಅ.ಪ.

ಹೀನ ಸಂಸ್ಕೃತಿ ದೋಷ । ನೀನಾಗಿ ಕಳೆ ಇವಳ
ದಾನವಾಂತಕ ಕೃಷ್ಣ । ಧೀನ ಜನ ಬಂಧೋ ।
ಹೀನಾಯ ಕಳೆದು ಮುನಿ । ಮಾನಿನಿಯ ಸಲಹಿದೆಯೋ
ಜ್ಞಾನಿಜನ ನಿನ್ನ ಕಾ । ರುಣ್ಯ ಸ್ಮರಿಸುವರೋ ೧

ಜ್ಞಾನ ಸದ್ವಾರ್ಜನೆಗೆ । ಮೌನಿ ಪ್ರಹ್ಲಾದಾಂಶ
ಸಾನು ಕೂಲಿಪರೆಂದು । ಸ್ವಪ್ನ ಸೂಚಿಸುತಾ ।
ಮಾನಿನಿಗೆ ವಿಠಲಾಭಿ । ಧಾನ ಪತ್ರವ ತೋರಿ
ಜ್ಞಾನದಂಕುರಕೆ ಪಥ । ನೀನೆ ತೋರಿರುವೆ ೨

ಸಾಧುಜನ ಸಂಗವನು । ನೀದಯದಿ ಕೊಟ್ಟಿವಳ
ಆದಿ ವಿರಹಿತ ಭವದ । ಬಾಧೆ ಪರಿಹರಿಸೋ

ಮೋದ ತೀರ್ಥರ ಮತದಿ । ಉದಿಸಿಹಸುಕಾರಣದಿ
ಭೇದ ಪಂಚಕ ತಿಳಿಸಿ । ಸಾಧನವಗೈಸೋ ೩

ಪತಿಸೇವೆ ಶತಳೆನಿಸೊ । ಹಿತವಹಿತಸಮವೆನಿಸೊ
ಮತಿ ಮತಾಂವರರಂಘ್ರಿ । ನುತಿಪ ಮನವಿತ್ತೊ ।
ಸತತ ತವ ನಾಮ ಸಂ । ಸ್ಮೃತಿಯನೇ ಕರುಣಿಸುತ
ಕೃತ ಕೃತ್ಯಳೆಂದೆನಿಸೊ । ಕೃತಿ ರಮಣ ದೇವಾ ೪

ಆರ್ತಳಾಗಿಹ ಸ । ತ್ಪಾರ್ಥನೆಯ ಕೈಕೊಂಡು
ಪೂರ್ತಿಗೈ ಆಭೀಷ್ಟ । ಪಾರ್ಥಸಖ ದೇವಾ ।
ಗೋಪ್ತ ಗುರು ಗೋವಿಂದ । ವಿಠಲ ಮದ್ಬಿನ್ನಪನ
ಸಾರ್ಥಕವ ಮಾಡೆಂದು । ಪ್ರಾರ್ಥಿಸುವೆ ಹರಿಯೇ ೫

೭೩೫

ಸುಮನಪ್ರಿಯ ಗೋಪ ವಿಠಲ । ಕಾಪಾಡೊ ಇವಳಾ ಪ

ವಿಮಲ ಗೋಪಿ ವೃಂದ । ಆಲ್ಹಾದಕರನೇ ಅ.ಪ.

ಅಕುಟಿಲಾತ್ಮಕನೆ ಹರಿ । ತೈಜಸೀ ರೂಪದಲಿ
ಸಖನಂತೆ ಪ್ರಿಯನಂತೆ । ಮೋಹವನೆ ಗೊಳಿಸೀ
ಪ್ರಕರಣವ ರಚಿಸುತ್ತ । ವ್ಯಾಕುಲಂಗಳ ಕಳೆದೆ
ರುಕುಮಣಿ ಪತಿ ಹರಿಯ । ವ್ಯಕುತ ಲೀಲಾತ್ಮ ೧

ನೀಕೂಗಿದಂಕಿತವ । ನಾಕೊಟ್ಟು ಹರಿಸಿಹೆನೊ
ಶ್ರೀಕಾಂತ ಪತಿಕರಿಸಿ । ಕಾಪಾಡೊ ಇವಳಾ
ಬೇಕಾದಭಿಷ್ಟಗಳ । ಸಾಕೆನಿಸಿ ನೀಡುವುದು
ಕಾಕುಮತಿಗಳ ಕಳೆಯೊ । ಶ್ರೀ ಕರಾರ್ಚಿತನೇ ೨

ಮಧ್ವಮತದೊಳು ರತಿಯ । ವೃದ್ಧಿಗೈಸಿವಳಲ್ಲಿ
ಪ್ರಧ್ವಂಸ ಗೈಯುವುದೊ । ಅವಿದ್ಯೆಗಳ ನಿವಹಾ

ಕೃದ್ಧಬಳ ಸಂಹಾರಿ । ಶ್ರದ್ಧೆ ಪತಿ ಸುಪ್ರೀಯ
ಶ್ರದ್ಧೆ ಭಕುತಿಯನಿತ್ತು । ಉದ್ಧರಿಸೊ ಇವಳಾ ೩

ಕಲಿಯುಗದಿ ಹರಿನಾಮ । ಒಲಿಸೆ ಭಕುತೀಯಿಂದ
ಕಳೆವುದು ಭವರೋಗ । ವೆಂಬ ಸನ್ಮತಿಯೂ
ನಿಲುಕಲೀಕೆಯ ಮನಕೆ । ಅಕಳಂಕ ಸುಚರಿತ್ರ
ವಿಖನ ಸಾಂಡದ ಪತಿಯೆ । ಗೋಕುಲ ಸುದೀಪ್ತಾ ೪

ಭೂ ವಿಬುಧ ಸದ್ವಂದ್ಯ । ಭಾವಜ್ಞ ನೀನಿರುವೆ
ಒವಿನಾ ಪೇಳಲ್ಕೆ । ಆವನೊ ನಾನು
ನೀವೊಲಿದು ಇವಳಿಗೆ । ಕೈಪಿಡಿದು ಸಲಹುವುದು
ದೇವ ಬಿನ್ನವಿಸೆ । ಗುರು ಗೋವಿಂದ ವಿಠಲಾ ೫

೭೩೬

ಹರಿಕೃಷ್ಣ ವಿಠಲಾ । ಕರುಣಿಸಿವಳೀಗೆ ಪ

ಕರುಣಾನಿಧಿ ಎಂದೆನುತ । ಮರೆಹೊಕ್ಕೆ ದೇವಾ ಅ.ಪ.

ಜ್ಞಾನವರ್ಜಿತಳಾಗಿ । ಅಜ್ಞಳೆಂದೆನಿಸಿಹಳು
ಮಾನನಿಧಿ ನೀನಾಗಿ । ಜ್ಞಾನ ಸಾಧನವಾ
ಸಾನುಕೂಲಿಸೆ ಕಾಯೊ । ಮೌನಿಜನ ಸದ್ವಂದ್ವ
ನೀನೆಗತಿ ಎಂದೆನುತಾ । ತನುವನರ್ಪಿಪಳೊ ೧

ಭಕ್ತಿಭರಿತಳು ಆಗಿ । ಅರ್ಥಿಪಳು ಸದ್ಗತಿಯಾ
ನಿತ್ಯ ನಿಗಮಾತೀತ । ಭಕ್ತವತ್ಸಲನೇ
ಕೃತ್ಯ ಸರ್ವಕ್ಕೆಲ್ಲ । ಕರ್ತೃ ನೀನೆಂಬಂಥಾ
ಉತ್ತಮದ ಮತಿಯಿತ್ತು । ಬೃತ್ಯಳನು ಪೊರೆಯೋ ೨

ಕ್ಲೇಶಮೋದಗಳು ಸಮ । ಭಾಸವಾಗಲಿ ದೇವ
ವಾಸವಾದ್ಯಮರನುತ । ವಾಸುದೇವಾ ಖ್ಯ

ಏಸೇಸು ಜನ್ಮಗಳ । ರಾಶಿ ಪುಣ್ಯದ ಫಲದಿ
ದಾಸ ದೀಕ್ಷೆಗೆ ಮನವ । ಆಶಿಸಿಹಳಯ್ಯಾ ೩

ತೈಜಸನ ಸೂಚನೆಯ । ವ್ಯಾಜದಲಿ ಹರಿದಾಸ್ಯ
ಮಾಜದಲೆ ಇತ್ತಿಹೆನೊ । ಅವ್ಯಾಜಮೂರ್ತೇ
ಮಾಜಗಜ್ಜನಕನೆ । ರಾಜೀವ ನಯನ ಹರಿ
ಓಜಸ್ಸುಗಳ ಕೊಟ್ಟು ಕಾಪಾಡೊ ಇವಳಾ ೪

ಸರ್ವಜ್ಞ ಸರ್ವೇಶ । ಸರ್ವಕಾರಣ ಮೂರ್ತಿ
ಊರ್ವಿಯಾಳಿವಳೊಬ್ಬ । ದರ್ವಿಯಂತಿಹಳೋ
ಸರ್ವದಾ ತವಸ್ಮರಣೆ । ಕೃಪೆಗೈದು ಪೊರೆ ಇವಳಾ
ಗುರ್ವಂತರಾತ್ಮ ಗುರು । ಗೋವಿಂದ ವಿಠಲಾ ೫

೭೩೭

ಹರಿಗುರು ಪ್ರಸನ್ನ ವಿಠಲ । ಪೊರೆಯ ಬೇಕಿವಳಾ ಪ

ದುರಿತ ರಾಶಿಯ ಕಳೆದು । ಕಾಪಾಡೋ ಇವಳಾ ಅ.ಪ.

ಕಾಮಪಿತ ನಿನ್ನ । ನಿಷ್ಕಾಮ ಪೂಜೆಯಲಿ
ಸಾಮರಸ್ಯವನಿತ್ತು । ಕಾಪಾಡೋ ಹರಿಯೇ
ತಾವರಸ ಭವ ವಂದ್ಯ । ಕೋಮಲಾಂಗನೆ ದೇವ
ಕಾಮಿತಾರ್ಥದವನಾಗಿ । ಕಾಪಾಡ ಬೇಕೋ ೧

ಸಾಧನದ ಹಾದಿಯನು । ನೀ ದಯದಿ ತಿಳಿಸುತ್ತ
ಮೋದ ತೀರ್ಥರ ತತ್ವ । ಬೋಧ ತಿಳಿಸುತಲೀ
ಸಾಧನವ ಗೈಸಿ ಸ । ಮ್ಮೋದ ಕೊಡು ಇವಳೀಗೆ
ಹೇ ದಯಾನಿಧಿ ಹರಿಯೇ । ಬಾದರಾಯಣನೇ ೨

ಪತಿಸುತರೊಳು ಹರಿಯೇ । ವ್ಯಾಪ್ತಿಯನೆ ತಿಳಿಸುತ್ತ
ಹಿತದಾದ ಸೇವೆಯಲಿ । ರತಳೆನಿಸೊ ಹರಿಯೇ

ಹಿತವಹಿತವೆರಡನ್ನು । ಸಮತೆಯಲಿ ಉಂಬಂಥ
ಮತಿಯ ನೀ ಕರುಣಿಸುತ । ಅತಿಹಿತದಿ ಪೊರೆಯೋ ౩

ಭವವನದಿ ನವಪೋತ । ತವದಿವ್ಯಸ್ಮೃತಿ ಇತ್ತು
ಶ್ರವಣ ಸುಖ ವದಗಿಸುತ । ಸಾಧನವ ಗೈಸೋ
ಭುವನ ಪಾವನ ದೇವ । ತವನಾಮ ಜಪಗಳನು
ಸರ್ವದಾ ಕರುಣಿಸುತ । ಉದ್ಧರಿಸೋ ಇವಳಾ ೪

ಕೋವಿದೋತ್ತಂಸ ಹರಿ । ಗೋವರ್ಧನೋದ್ಧರನೆ
ಕಾವ ಕೊಲ್ಲುವ ನೀನೆ । ಶರ್ವಾದಿ ವಂದ್ಯಾ
ನೀ ಒಲಿದು ಪೊರೆಯೆಂಬ । ಬಿನ್ನಪವ ಸಲಿಸಯ್ಯ
ಗೋವಿಂದ ಪತಿ ಗುರು । ಗೋವಿಂದ ವಿಠಲಾ ೫

೭೩೮

ಹರಿ ಗೋಪಾಲ ವಿಠಲ । ಪೊರೆಯ ಬೇಕಿವಳಾ ಪ

ದುರಿತ ದುಷ್ಕೃತವೆಲ್ಲ । ದೂರ ಓಡಿಸುತಾ ಅ.ಪ.

ತರಳೆ ದ್ರೌಪದಿ ವರದ । ಮರಳ್ಯಹಲ್ಯಯ ಪೊರೆದ
ತರಳ ಪ್ರಹ್ಲಾದನನ । ಪೊರೆದ ನರಹರಿಯೇ ।
ವರುಷ ಐದರ ಧೃವಗೆ । ವರದನಾಗೀ । ತೋರ್ದೆ
ಕರುಣಾಳು ನಿನ್ನೊರತು । ಬೇರನ್ಯಕಾಣೇ ೧

ಸಂಸಾರದಲಿ ನೊಂದು । ಕಂಸಾರಿ ನಿನ್ನ ಪದ
ಪಾಂಸುವನೆ ಶಿರದಿ ನಿ । ಸ್ಸಂಶಯದಿ ಧರಿಸೀ
ಶಂಸಿಸಲು ಮಹಿಮೆ ತವ । ದಾಸ್ಯ ಪಾಲಿಸುತಿನ್ನು
ಹಂಸವಾಹನ ಪಿತನೆ । ವಂಶ ಉದ್ಧರಿಸೋ ೨

ಕರ್ಮ ಪ್ರಾಚೀನಗಳ । ಮರ್ಮ ತಿಳಿದವರ್ಯಾರೊ
ಕರ್ಮನಾಮಕನೆ ದು । ಷ್ಕರ್ಮ ಪರಿಹರಿಸೀ ।

ಪೇರ್ಮೆಯಿಂದಿವಳ ಪೊರೆ । ನಿರ್ಮಲಾತ್ಮಕ ದೇವ
ಧರ್ಮ ಗೋಪ್ತ ಸ್ವಾಮಿ । ಬ್ರಹ್ಮಾಂಡದೊಡೆಯಾ ೩

ಮಧ್ವಮತ ಸಿದ್ಧಾಂತ । ಪದ್ಧತಿಗಳರುಹ್ಯತ್ತ
ಶುದ್ಧಸಾಧನ ಗೈಸೊ । ಮಧ್ವಾಂತರಾತ್ಮಾ
ಅಧ್ವಯನು ನೀನೆಂಬ । ಶುದ್ಧ ಬುದ್ಧಿಯನಿತ್ತು
ಉದ್ಧರಿಸೊ ಈಕೆಯನು । ಪ್ರದ್ಯುಮ್ನ ದೇವಾ ೪

ಸರ್ವಜ್ಞ ಸರ್ವೇಶ । ನಿರ್ವಿಕಾರನೆ ದೇವ
ಸರ್ವದ ತವನಾಮ । ಸ್ಮರಿಪ ಸುಖವಿತ್ತು
ದುರ್ವಿ ಭಾವ್ಯನೆ ದೇವ । ಅಸ್ವತಂತ್ರಳ ಕಾಯೊ
ಗುರ್ವಂತರಾತ್ಮ ಗುರು । ಗೋವಿಂದ ವಿಠಲಾ ೫

೭೩೯

ಹರಿ ಗೋವಿಂದ ವಿಠಲ । ಪೊರೆಯ ಬೇಕಿವಳಾ ಪ

ನಿರುತ ಹರಿ ಗುರುದಾಸ್ಯ । ಅರ್ಥಿಸುತ್ತಿಹಳಾ ಅ.ಪ.

ಸುಪ್ತೀಶತೋರ್ದಪರಿ । ಪ್ರಾಪ್ತಿ ಪ್ರಾಣನ ವಶವು
ಕ್ಲಪ್ತವಾಯ್ತಿವಳೀಗೆ । ಮುಕ್ತಿ ಸಾಧನಕೆ ।
ಎತ್ತ ನೋಡಿದರತ್ತ । ಆಪ್ತಮುಖ್ಯ ಪ್ರಾಣ
ಪೊತ್ತಿಹನು ಸರ್ವತ್ರ । ವ್ಯಾಪ್ತಿ ಮೂರುತಿಯೇ ೧

ಮಂಗಳಾಂಗನೆ ಹರಿಯೆ । ಶೃಂಗಾರ ಮೂರುತಿಯೆ
ಅಂಗನೆಯ ಕೈಪಿಡಿದು । ಕಾಪಾಡೊ ಹರಿಯೇ ।
ಸ್ವಾಂಗಾಯ ನಾಮ ನಿ । ನ್ನಂಗ ವೈಭವ ತಿಳಿಸಿ
ಲಿಂಗಾಂಗ ಕಳೆಯಿವಳ । ರಂಗ ಭವ ಹಾರೀ ೨

ಭುವನ ಪಾವನ ನಿನ್ನ । ಸ್ತವನ ವೈಭವ ಕೇಳೆ
ಸರ್ವದಾ ಸರ್ವತ್ರ । ಶ್ರವಣ ಸುಖದಲ್ಲೀ

ನಿರ್ವಿಕಾರದ ತಿರಗಲೀಕೆಯ ಮನಸು
ಸರ್ವಾಂತರಾತ್ಮಕನೆ । ಸಾರ್ವಭೌಮ ೩

ಅಧಿಭೂತ ಅಧ್ಯಾತ್ಮ । ಅಧಿ ದೈವ ತಾಪ ಭಯ
ಅಧ್ಯಕ್ಷ ಶ್ರೀಹರಿಯೆ ನೀನಾಗಿ ಕಳೆದೂ ।
ಮಧ್ವಾಂತರಾತ್ಮಕನ । ಹೃದ್ಗುಹದಿ ತೋರೆಂದು
ಬುದ್ಧಿ ಪೂರ್ವಕ ಬೇಡ್ವೆ । ಪದ್ಮನಾಭಾ ೪

ಸಾಧನದ ಜೀವಿಗಳ । ಸಾಧನದ ಪ್ರತಿಭಂಧ
ಸಾದರದಿ ವಾರಿಸುತ । ಮೋದಮನ ನೀಯೋ ।
ಮೋದಮುನಿ ವಂದ್ಯ ಗುರು । ಗೋವಿಂದ ವಿಠಲನೆ
ನೀದಯದಿ ಪೊರೆ ಇವಳ । ಪ್ರಹ್ಲಾದ ವರದಾ ೫

೭೪೦

ಹರಿತ್ರಿವಿಕ್ರಮ ವ್ಯಾಸವಿಠಲ । ಪೊರೆ ಇವಳಾ ಪ

ದುರಿತ ದುಷ್ಕೃತವೆಲ್ಲ । ದೂರಮಾಡುತಲೀ ಅ.ಪ.

ಗುರುವನುಗ್ರಹ ಸೂಚಿ । ವರಸು ತೈಜಸವೇಲ್ದ
ಎರಡೇಳು ಮತ್ತೇಳು । ವರುಷ ಪೂರ್ವದಲೀ
ಗುರು ರೂಪಿ ನಿಂ ತೋರಿ । ಪರಮ ವೇದದ ಸಾರ
ಹರಿಕಥಾಮೃತ ಸಾರ । ಪಠಿಸೆಂದು ಪೇಳ್ದಾ ೧

ವರುಷ ಪೈಂಗಳ ಪುಷ್ಯ । ಆರಾಧನೆಯದಿನದಿ
ಗುರುಗಳನು ಕಂಡೀಕೆ । ಅವರೆ ಇವರೆಂದು
ಭರದಿ ನಿಶ್ಚಯಿಸುತಲಿ । ಹರಿದಾಸ್ಯ ಕಾಂಕ್ಷಿಸುತ
ಗುರುವೆಂದು ಎನ್ನ ಬಳಿ । ಪ್ರಾರ್ಥಿಸುತ್ತಿಹಳಾ ೨

ಸಂಸಾರ ಕ್ಲೇಶಗಳ । ಕಂಸಾರಿ ಕಳೆದು ಭವ
ಸಂಸಕ್ತಳಾಗಿಸದೆ । ಉದ್ಧರಿಸೊ ಇವಳಾ

ಶಂಸಿಸೀ ತವಪಾದ । ಪಾಂಸುವನೆ ಧರಿಸಿ ನಿ–
ಸಂಶಯದಿ ತವದಾಸ್ಯ । ಸಿದ್ದಿಸೊ ಹರಿಯೇ ೩

ಪತಿತ ಪಾವನ ರಂಗ । ಪತಿವ್ರತೆಗೆ ಸುಜ್ಞಾನ
ಭಕ್ತಿ ಹರಿಗುರುಗಳಲಿ । ಇತ್ತು ಅಧಿಕಧಿಕಾ
ವತ್ತಿ ಬಹ ವಿಘ್ನಗಳ । ಹತ್ತಿಕ್ಕಿ ಪೊರೆಯೆಂದು
ಅರ್ಥಿಯಲಿ ಬಿನ್ನೈಪೆ । ಮರುತಂತರಾತ್ಮ ೪

ದರ್ವಿ ಜೀವಿಯ ಪೊರೆಯೊ । ದುರ್ವಿಭಾವ್ಯನೆ ಹೃದಯ
ಗಹ್ವರದಿ ತವರೂಪ । ತೋರ್ವ ಮನಮಾಡೀ
ಸರ್ವತ್ರ ತವನಾಮ । ದಿವ್ಯ ಸಂಸ್ಮೃತಿ ಈಯೊ
ಸರ್ವೋತ್ತಮನೆ ಗುರು । ಗೋವಿಂದ ವಿಠಲಾ ೫

೭೪೧

ಹನುಮಂತ ವಿಠ್ಠಲಾ । ಪೊರೆಯ ಬೇಕಿವಳಾ ಪ

ಘನ ಮಹಿಮ ನಿನ್ಹೊರತು । ಅನ್ಯರನು ಕಾಣೇ ಅ.ಪ.

ಸ್ವಾಪದಲಿ ಗುರುದರ್ಶ । ಅಂತೆ ಅಂಕಿತ ಪತ್ರ
ತಾ ಪಿಡಿದು ನಿಂತಿಹಳೊ । ಶ್ರೀಪ ಸೀತಾಪತೇ ।
ಕಾಪಟ್ಯರಹಿತಳನು । ಕೈಪಿಡಿದು ಸಲಹೆಂದು
ನಾ ಪ್ರಾರ್ಥಿಪೆನೊ ನಿನ್ನಾ । ತಾಪಸ ಸುವಂದ್ಯಾ ೧

ಕನ್ಯೆಯಗಭಯದನಾಗಿ । ಮುನ್ನಪತಿ ಸೇವೆಯನು
ಚೆನ್ನಾಗಿ ದೊರಕಿಸುತ । ಕಾಪಾಡೊ ಹರಿಯೇ ।
ಅನ್ನಂತ ಮಹಿಮ ಕಾರುಣ್ಯ । ಸಾಗರನೆ ಹರಿ
ನಿನ್ನನೇ ನಂಬಿಹಳೊ । ಭಾವಜ್ಞಮೂರ್ತೇ ೨

ಕಾಮಜನಕನೆ ನಿನ್ನ । ನಾಮ ಸಂಸ್ಮರಣೆಯನು
ನೇಮದಲಿ ಗೈವಂಥಾ । ಮನವ ನೀನಿತ್ತೂ ।

ಈ ಮಹಾ ಭವ ಶರಧಿ । ಪಾಲಿಸೋ ಶ್ರೀ ಹರಿಯೆ
ಸಾಮ ಸನ್ನುತ ಸ್ವಾಮಿ । ಭೂಮಗುಣ ಧಾಮಾ ೩

ಮರುತ ಮತ ತತ್ವಗಳು । ಸ್ಫುರಿಸಲಿವಳಿಗೆ ಹರಿಯೇ
ತರತಮಾತ್ಮಕ ಜ್ಞಾನ । ದರಿವು ವೃದ್ಧಿಸಲೀ ।
ಹರಿಯ ಸರ್ವೋತ್ತಮತೆ । ಸ್ಥಿರವಾಗಿ ಇವಳೀಗೆ
ಪರಮಸಾಧನ ಮಾರ್ಗ । ಕ್ರಮಿಸುವಂತೆಸಗೋ ೪

ಕಾಮಿತಪ್ರದ ದುಷ್ಟ । ಆಮಯವ ಪರಿಹರಿಸಿ
ಈ ಮಹಿಳೆಯುದ್ಧರಿಸೊ । ಸ್ವಾಮಿ ರಾಮಚಂದ್ರಾ ।
ನಾಮಾಂತ ಇತ್ತುದಕೆ । ಸಾರ್ಥಕವ ಮಾಡೆಂದು
ಸ್ವಾಮಿ ಗುರು ಗೋವಿಂದ । ವಿಠಲ ಭಿನ್ನವಿಪೆ ೫

೭೪೨

ಹನುಮವಂದಿತ ವಿಠಲ । ಅಣುಗನನ ಪೊರೆಯೋ
ಮಣಿದು ಪ್ರಾರ್ಥಿಪೆನಯ್ಯ । ಪಿಡಿ ಇವನ ಕೈಯ ಪ

ಯೇಸೋ ಜನ್ಮದ ಪುಣ್ಯ । ರಾಶಿವದಗುತ ನಿನ್ನ
ದಾಸತ್ವ ಪ್ರಾರ್ಥಿಸುವ । ಯೆನ್ನೊಳಗೆ ಹರಿಯೇ ।
ಕೇಶವನೆ ಸ್ವಪ್ನದೊಳು । ಸೂಸಿಸೂಚಿಸಿದ ಉಪ-
ದೇಶವಿತ್ತಿಹೆ ಇವಗೆ । ಶ್ರೀಶಉದ್ಧರಿಸೋ ೧

ತೀರ್ಥಕ್ಷೇತ್ರವ ಚರಿಸಿ । ಗಾತ್ರಪಾವಿತ್ರತೆಲಿ
ಅರ್ಥನಾಗಿಹ ಭಕ್ತ । ಪ್ರಾರ್ಥನೆಯ ಸಲಿಸೇ ।
ಕೀರ್ತಿಸಿಹೆ ರಾಮತವ । ಮೂರ್ತಿಜಪಿಸಲು ನಿತ್ಯ
ಗೋತ್ರಾರಿಸುಪ್ರಿಯ । ಸೂತ್ರಾಂತರಾತ್ಮಾ ೨

ಶ್ರವಣಸಾಧನವಿತ್ತು । ಭವವನದಿ ಉದ್ಧರಿಸು
ಪವನ ಮೂರಲಿ ನಿನ್ನ । ಪಾವನಸ್ಮೃತಿಯಾ ।

ಹವಣಿಸುತ ತ್ರೈತಾಪ । ಬವಣೆಗಳ ಕಳೆಯೊತ್ರೈ
ಭುವನಗಳ ಒಡೆಯ ಮಾಧವನೆ ಭಿನ್ನವಿಪೇ ೩

ಸುಪ್ತಿಜಾಗರತ್ರಯಾ । ವಸ್ಥೆಗಳ ಪ್ರೇರಕನೆ
ಉತ್ತಮನು ಸಾಧನದಿ । ಯುಕ್ತನೆನಿಸಿವನಾ ।
ಕರ್ತೃಕರ್ಮವುಕರಣ । ಎತ್ತನೋಡಿದರುತವಾ
ವ್ಯಾಪ್ತಿಯನೂ ತಿಳಿಸೂ । ಸರ್ವೋತ್ತಮನೆ ಹರಿಯೇ ೪

ಶರ್ವಾದಿ ದಿನಿ ಜೇಡ್ಯ । ನಿರ್ವಿಕಾರನೆ ದೇವ
ಗುರ್ವಂತರಾತ್ಮಗುರು । ಗೋವಿಂದ ವಿಠಲಾ ।
ಸರ್ವಜ್ಞ ನೀನಿರಲು । ಪೇಳ್ವುದೇನಿಹುದಿನ್ನು
ದುರ್ವಿಜೀವಿಯ ಕಾವ ಹವಣೆನಿನದಲ್ಲೇ ೫

೭೪೩

ಹರಿನಾರಾಯಣ ವಿಠಲ ಸಲಹೊ ಇವನಾ
ದುರಿತ ರಾಶಿಗಳಳಿದು । ಕರ ಪಿಡಿಯೊ ಬೇಗಾ ಪ

ಸಾಧನ ಸುಜೀವಿಗಳ । ಕಾದುಕೊಳ್ಳುವ ಭಾರ
ಆದಿ ಮೂರುತಿ ಹರಿಯೆ । ನಿನ್ನದಲ್ಲೇ
ವೇದಾಂತವೇದ್ಯ ಸಿರಿ । ಮಾಧವನೆ ಭಿನ್ನವಿಪೆ
ಕಾದುಕೊ ಬಿಡದಿವನ । ಹೇ ದಯಾಪೂರ್ಣ ೧

ಪ್ರಾಚೀನ ಕರ್ಮಗಳ । ಯೋಚಿಸಲು ಯನ್ನಳವೆ
ಮೋಚ ಕೇಚ್ಛೆಯ ತೋರೊ । ಕೀಚಕಾರಿ ಪ್ರೀಯ
ನೀಚೋಚ್ಚ ತರತಮವ । ವಾಚಿಸಿವನಲಿ ನಿಂತು
ವಾಚಾಮ ಗೋಚರನೆ ಸಾಕ್ಷಿ ವೇದ್ಯಾ ೨

ಭಾಗವತ ಪೀಯೂಷ । ವೇಗ ಉಣಿಸುತಲಿವನ
ನೀಗೊ ಭವರೋಗವನು । ನಾಗಾರಿವಾಹಾ

ಜಾಗರ ಸ್ವಪ್ನದಲಿ । ನೀಗಿ ಭ್ರಮವೆರಡನ್ನು
ಜಾಗು ಮಾಡದೆ ಸಲಹೋ ಭೋಗಿಶಯನಾ ೩

ಪೊಂಬಸಿರ ವಂದ್ಯ ಭವ । ಅಂಬುಧಿಯ ದಾಂಟಿ ನೀ-
ಲಾಂಬು ದಾಭ ಹರಿ ಹೃದಯಾಂಬರದಿ ತೋರಿ
ಇಂಬಿಟ್ಟು ಭಕ್ತನ್ನ । ಸಲಹೆ ಬಿನ್ನವಿಪೆ ಕೃ-
ಪಾಂಬುಧಿಯೆ ತವ ಪಾ । ದಾಂಬುಜದಲಿಡುವೆ ೪

ಭಾವ ಕ್ರಿಯ ದ್ರವ್ಯದೊಳು । ಅದ್ವಯನು ನೀನೆಂಬ
ಭಾವದನುಭವವಿತ್ತು । ಇವನ ಪಾಲಿಪುದು
ಕಾವ ಕರುಣಿಯೆ ಗುರು । ಗೋವಿಂದ ವಿಠ್ಠಲನೆ
ಗೋವತ್ಸಧ್ವನಿದಾವು । ಧಾವಿಸೂವಂತೆ ೫

೭೪೪

ಹನುಮ ವರದ ವಿಠಲ । ಪೊರೆಯ ಬೇಕಿವಳಾ ಪ

ಗುಣಪೂರ್ಣ ಶ್ರೀ ಹರಿಯ । ದಾಸ್ಯಕಾಂಕ್ಷಿಪಳಾ ಅ.ಪ.

ವಿನಯ ಸದ್ಗುಣ ಭರಿತೆ । ಸುಜನಾಳಿಸೇವೇಷ್ಟೆ
ಅನಿಲಮತ ಸದ್ಬೋಧೆ । ಗಾನಂದ ಜಾತೇ
ಅನಲಾಕ್ಷಾ ಸಖ ಹರಿಯ । ಗಾನಕಲೆ ಚತುರೆ ಎಂ
ದೆನಿಸಿರುವ ಈ ಕನ್ಯೆ । ಮಣಿಯ ನೀ ಪೊರೆಯೋ ೧

ಬೇಕಾದ ವರಗಳನು । ನೀ ಕರುಣಿಸೀಕೆಯನು
ಲೋಕ ಸಜ್ಜನರಲ್ಲಿ । ವಿಖ್ಯಾತಳೆನಿಸೋ
ಕಾಕು ಮಾಯ್ಮತವ ನಿ । ರಾಕರಿಸುವಂತೆಸಗೊ
ಶ್ರೀ ಕರಾರ್ಚಿತ ಪಾದ । ವೈಕುಂಠ ರಮಣ ೨

ಸಲ್ಲಲಿತ ಸನ್ಮಾರ್ಗ । ದಲ್ಲಿ ವಿಹರಿಸುವಂಥ
ವಲ್ಲಭನ ದೊರಕಿಸುತ । ನಲ್ಮೆಯಿಂದಿವಳಾ

ಸಲ್ಲಿಸೊ ಮನದಾಶೆ । ಮಲ್ಲಮರ್ಧನ ಕೃಷ್ಣಾ
ಚೆಲ್ವ ಹಯಮುಖಹರಿಯೆ । ಪ್ರಾರ್ಥಿಸುವೆ ದೇವಾ ೩

ಮಧ್ವಮತ ಸಿದ್ದಾಂತ । ಪದ್ಧತಿಯ ತಿಳಿಸುತ್ತ
ವಿದ್ಯವಂತಳು ಎನಿಸೊ । ಶ್ರದ್ಧೆ ಪತಿ ಗೊಡೆಯಾ
ಶೌದ್ಧೋದನೀಯ ಮತ । ಪ್ರಧ್ವಂಸಗೈದವನೆ
ಬುದ್ಧಾವತಾರಿ ಹರಿ । ಉದ್ಧರಿಸೊ ಇವಳಾ ೪

ಜೀವ ಅಸ್ವಾತಂತ್ರ್ಯ । ಭಾವದಲಿ ನಿಲ್ಲಪರಿ
ದೇವ ನೀ ಗೈಯುತ್ತ । ಭಾವುಕಳ ಪೊರೆಯೊ

೭೪೫

ಹನುಮೇಶ ವಿಠ್ಠಲನೆ ಸಲಹ ಬೇಕಿವಳಾ
ಗುಣಪೂರ್ಣ ನಿರ್ದೋಷ ಚಿದ್ಭವನೆ ಹರಿಯೇ ಪ

ನಾಗಕಾಳೀಯ ಮದ ಭಂಜನನೆ ಶಿರಿಕೃಷ್ಣ
ನೀಗಿ ಹೃದ್ರೋಗವನು ಆಗು ಹೋಗುಗಳಾ ।
ನಾಗಶಯನನೆ ನೀನೆ ಮಾಳ್ಪುದನೆ ತಿಳಿಸುತ್ತಾ
ಭೋಗ ವಿಹ ಪರಧ್ವಂಸ ಭೋಗ ತಿಳಿಸುವುದೋ ೧

ಮಧ್ವ ಶಾಸ್ತ್ರಜ್ಞಾನ ಉದ್ಬೋಧ ಕೊಟ್ಟಿವಳ
ಶುಧ್ಧ ತರತಮ ಭೇದ ಪಂಚಕವ ತಿಳಿಸಿ ।
ಅದ್ವಿತೀಯನೆ ಭಾವ ದ್ರವ್ಯ ಕ್ರಿಯಗಳು ಎಂಬ
ಅದ್ವೈತ ತ್ರಯಜ್ಞಾನವಿತ್ತು ಪಾಲಿಪುದು ೨

ಖಗವರಧ್ವಜದೇವ ಗೋವಿಂದ ಮೂರುತಿಯೆ
ಬಗೆಬಗೆಯ ತವಲೀಲೆ ಮಿಗಿಲು ಸ್ಮೃತಿಯಿತ್ತು ।
ಹಗರಣದ ಸಂಸಾರ ಸಾಗರವ ದಾಟಿಸುತ
ನಿಗಮ ವೇದ್ಯನೆ ತೋರೊ ಹೃದ್ಗುಹದಿ ಹರಿಯೇ ೩

ಪತಿಸೇವೆಯಿತ್ತಿವಳ ಕೃತಕಾರ್ಯಳೆಂದೆನಿಸೊ
ಪಿತೃ ಮಾತೃ ಬಂಧುಗಳು ಹಿತ ಜನಾಂತಸ್ಥ
ಕೃತಿ ಪತಿಯೆ ನಿನವ್ಯಾಪ್ತಿ ಮತಿಯಿತ್ತು ಪಾಲಿಸುತ
ಹಿತದಿ ಸಾಧನಗೈಸೊ ವಾತಾತ್ಮ ಹರಿಯೇ ೪

ನಿರುತ ತವ ದಾಸತ್ವ ಅರ್ಥಿಯಲಿ ಇರುವಂಥ
ತರಳೆಯನು ಸ್ವೀಕರಿಸಿ ದಾಸಳೆಂದೆನಿಸೊ
ಶರಣ ಜನ ವತ್ಸಲನೆ ಕರುಣಿ ಭಿನ್ನಪ ಸಲಿಸೊ
ಮರುತಾಂತರಾತ್ಮ ಗುರು ಗೋವಿಂದ ವಿಠಲಾ ೫

೭೪೬

ಹಯಗ್ರೀವ ವಿಠಲ । ಪೊರೆಯ ಬೇಕಿವನಾ ಪ

ಭಯ ಭರಿತ ಭಕ್ತಿಯಿಂ । ಪ್ರಾರ್ಥಿಸುತ್ತಿಹನು ಅ.ಪ.

ಗುರುತಂದೆ ಮುದ್ದು ಮೋಹ । ನರಿತ್ತಂಕಿತ ಪದ
ಮರೆಯಾಗಿ ಕಾಣದಲೆ । ಪೋದುದಕ್ಕಾಗೀ
ಪರಿತಪಿಸಿ ಬಹುವಾಗಿ । ಮೊರೆಯನಿಡುತಿಹ ಹರಿಯೆ
ಕರುಣೆಗಳು ಗುರು ಪರವು । ಪದರಚಿಸಿ ಇತ್ತೇ ೧

ಪ್ರಾಚೀನ ಕರ್ಮಗಳ । ಮೋಚಿಸುತ ಪರಿ ಪರಿಯ
ಸೂಚಿಸೋ ಸನ್ಮಾರ್ಗ । ಸಾಧನಕೆ ಹರಿಯೇ
ವಾಚಾಮ ಗೋಚರನೆ । ನೀಚೋಚ್ಚ ತರತಮವ
ವಾಚಿಸುತ ಇವನಲ್ಲಿ । ಮೋಚಕನು ಆಗೋ ೨

ಪವಮಾನ ಸನ್ನುತನೆ । ಭವ ಶರಧಿ ದಾಟಿಸಲು
ತವನಾಮ ಸಂಸ್ಮೃತಿಯ । ಶ್ರವಣ ಸುಖವಿತ್ತೂ
ಭವರೋಗ ವೈದ್ಯ ಗುರು । ಗೋವಿಂದ ವಿಠ್ಠಲನೆ
ಹವಣದಲಿ ಪೊರೆಯಲ್ಕೆ । ಪ್ರಾರ್ಥಿಸುವೆ ಹರಿಯೇ ೩

೭೪೭

ಹಯಾನನ ವಿಠಲಾ ನೀ ದಯದಿ ಸಲಹೊ ಇವಳಾ ।
ದಯಾಪಯೋನಿಧಿ ಎಂದು ನಿನಗೆ ಭಿನ್ನೈಪೇ ಪ

ಕುಕ್ಷಿಯೊಳು ಜಗಧರಿಪ ಪಕ್ಷಿವಾಹನದೇವ
ಲಕ್ಷಿಸದಲೇ ದೋಷ । ಲಕ್ಷವನು ಇವಳಾ
ಈಕ್ಷಿಪುದು ಕರುಣಾಕಟಾಕ್ಷದಲ್ಲೆಂದೆನುತ
ಲಕ್ಷ್ಮೀರಮಣನೆ ಹರಿಯೆ ಪ್ರಾರ್ಥಿಸುವೆ ನಿನಗೇ ೧

ಯೋಗಿಜನ ವಂದ್ಯಭವ । ರೋಗಾಹಿವಿಪ ಹರಿಯೆ
ಭೋಗಿ ಭೂಷಣ ವಿನುತ । ಬಾಗಿ ಬೇಡುವೆನೋ ।
ಜಾಗುಮಾಡದೆಲೆ ವೈ । ರಾಗ್ಯ ಭಕ್ತಿಜ್ಞಾನ
ಯೋಗ ಕೊಟ್ಟುದ್ಧರಿಸು । ಸಾಗರಜೆ ರಮಣಾ ೨

ವಾಚಾಮ ಗೋಚರನೆ । ನೀಚೋಚ್ಚಕ್ರಮ ತಿಳಿಸಿ
ಮೋಚ ಕೇಚ್ಛೆಯ ಮಾಡೊ । ಪಾಚಕಸುವಂದ್ಯಾ
ಪ್ರಾಚೀನ ಕರ್ಮಾಳಿ ಯೋಚಿಸಲು ಅಳವಲ್ಲ
ಆಚರಿತ ಸಂಚಿತವ । ಮೋಚಿಸಾಗಾಮೀ ೩

ಎಲ್ಲವನು ಬಲ್ಲ ಸಿರಿ । ನಲ್ಲ ನಿನಗೀಪರಿಯ
ಸೊಲ್ಲ ಪೇಳುವುದುಚಿತೆ । ಚೆಲ್ವ ಹಯವದನಾ
ಬಲ್ಲಿದನೆ ನೀನಾಗಿ । ಚೆಲ್ವ ರೂಪವ ತೋರೆ
ಸಲ್ಲಲಿತ ಅಂಕಿತವ । ಸಲ್ಲಿಸಿಹೆ ದೇವಾ ೪

ಭಾವುಕಾರ್ಜುನ ಬಂಡಿ । ಬೋವನಾಗುತ್ತ ಭವ
ನೋವಕಳೆವೋಪಾಯ । ನೀವಲಿದು ಪೇಳೀ
ತಾವಕರ ಪೊರೆದಂತೆ । ಭಾವುಕರ ಪೊರೆ ಬೇಡ್ವೆ
ಗೋವುಗಳ ಪಾಲ ಗುರು ಗೋವಿಂದ ವಿಠಲ ೫

૨೪೮

ಹರಿವಿಠಲಾ ನೀನಿವಳ ಸಲಹಬೇಕೊ ।
ಪರಿಪರಿಯ ಸೌಖ್ಯಗಳ ಇಹಪರಂಗಳಲಿತ್ತು ಪ

ಕಿಂಕರಿಗೆ ತವಪಾದ ಪಂಕಜಗಳೆರಡಕ್ಕೆ
ವೆಂಕಟೇಶ್ವನೆ ನಿನ್ನ ದಿವ್ಯ ರೂಪವನು ।
ಶಂಕೆಯಿಲ್ಲದೆ ಇವಳ ಸ್ವಪ್ನದಲಿ ತೋರಿತವ
ಕಿಂಕರಳು ಎನಿಪುದಕೆ ಅಭಯ ಸೂಚಿಸಿದೇ ೧

ಪ್ರಾಚೀನ ಕರ್ಮಗಳ ಯೋಚಿಸಲು ಅಳವಿಲ್ಲ
ಕೀಚಕಾರಿ ಪ್ರಿಯನೆ ಮೋಚಕೇಚ್ಛೆಯನು
ಸೂಚಿಸುತ ಸಂಸಾರ ಕೂಪಾರ ದಾಟಿಪುದು
ಖೇಚರ ಸುವಾಹಕನೆ ಯಾಚಿಸುವೆ ನಿಂತು ೨

ತಾರತಮ್ಯ ಜ್ಞಾನ ಮೂರೆರಡು ವಿಧಭೇದ
ಈರ ಮುಖ ಸುರ ಸರ್ವ ಶ್ರೀ ಹರಿಯ ಕಿಂಕರನು
ಮಾರಾರಿ ಸಖ ಹರಿಯೆ ಸರ್ವೋತ್ತಮಾನೆಂಬ
ಚಾರುಮತಿಯನು ಕೊಟ್ಟು ಕಾಪಾಡು ಹರಿಯೇ ೩

ಪಂಚರೂಪಾತ್ಮಕ ಪ್ರಪಂಚ ವ್ಯವಹಾರದಲಿ
ಹೆಂಚು ಹಾಟಕ ರೂಪ ಸರ್ವ ದ್ರವ್ಯದಲೀ ।
ಅಂಚೆವಹ ಮುಖ್ಯಾಲ್ಪ ಸರ್ವ ಜೀವರುಗಳಲಿ
ಸಂಚಿಂತನೆಯು ತವ ಅದ್ವೈತ ತಿಳಿಸೋ ೪

ಮೋದ ಮುನಿ ಸುಪ್ರೀಯ ಮಾಧವನೆ ಪತಿಸೇವೆ
ನೀದಯದಿ ಕೊಟ್ಟಿವಳ ಸಾಧನವ ಗೈಸೀ ।
ವೇದೇಶನಾದ ಗುರು ಗೋವಿಂದ ವಿಠ್ಠಲನೆ
ಸಾದರದಿ ಹೃದ್ಗುಹದಿ ತೋರೆಂದು ಭಿನ್ನೈಪೆ ೫

ಅನುಬಂಧಗಳು

೧. ಕಠಿಣ ಶಬ್ದಗಳ ಅರ್ಥ

೨. ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

೩. ಸಹಾಯಕ ಸಾಹಿತ್ಯ

೪. ಕೀರ್ತನೆಗಳ ಅಕಾರಾದಿ

ಅನುಬಂಧ – ೧

ಕಠಿಣ ಶಬ್ದಗಳ ಅರ್ಥ

ಅಘಾವಳಿ – ಪಾಪ ಸಮೂಹ

ಅಹಿ – ಸರ್ಪ, ಶೇಷ

ಅಶ್ರೂ – ಆನಂದಭಾಷ್ಪ

ಅನಿಷ – ಹಗಲು, ರಾತ್ರಿ

ಅರ್ಕ – ಸೂರ್ಯ

ಆಗಮ – ವೇದ

ಇಕ್ಷುಶರ – ಕಬ್ಬನ್ನು ಬಿಲ್ಲಾಗಿ ಉಳ್ಳವ ಮನ್ಮಥ

ಈಡು – ಸರಿ

ಉದಧಿ– ಶಯನ – ಸಮುದ್ರಶಯನ

ಎಲರುಣಿ – ಸರ್ಪ

ಕಂಬು – ಶಂಖ

ಕಂದುಕ – ಚೆಂಡು

ಕಸರುಕರ್ಮ – ಪ್ರಾರಬ್ಧಕರ್ಮ

ಕರಿಗಿರಿ – ದೇವರಾಯನ ದುರ್ಗ

ಕೀಲಾಲಜ – ಕಮಲ

ಕುಂಡ– ಗೋಳಕರು – ಪಾಂಡವರು

ಕುಂಡಲಿ – ಸರ್ಪ

ಕೋಲಾ – ವರಾಹ

ಖಗವರ – ಪಕ್ಷಿಗಳಲ್ಲಿ ಶ್ರೇಷ್ಠ, ಗರುಡ

ಖತಿ – ದೋಷ

ಗರ – ವಿಷ

ಗಾತ್ರ – ಶರೀರ

ಗೋ – ವೇದ, ಬ್ರಹ್ಮಾಂಡ, ವೈಕುಂಠ

ಗೋಜು – ವೇದಗಳನ್ನು ಪಾಲನೆ ಮಾಡುವ

ಝಷಕೇತು – ಮೀನಲ್ಲಿ ಧ್ವಜ ವಾಗಿ ಉಳ್ಳವ, ಮತ್ಸ್ಯ, ಮನ್ಮಥ

ತರು – ವೃಕ್ಷ

ತುರಗ – ಕುದುರೆ

ಧರ್ವಿ – ಸೌಟು, ಜಡ

ದಿವೌಕಸರು – ದೇವತೆಗಳು

ಧ್ವಾಂತ – ಕತ್ತಲೆ

ನಿಟಿಲನೇತ್ರ – ಹಣೆಯಲ್ಲಿ ಕಣ್ಣುಳ್ಳವ

ನೆಗಳೆ – ಮೊಸಳೆ

ಪನ್ನಗ – ಶೇಷ

ಪ್ರಾಗ್ಜ್ಯೋತಿಷ – ಭೂತ ಭವಿಷ್ಯ ಗಳನ್ನು ತಿಳಿದವ

ಪಂಚಮೋಕ್ಷ – ಸಾರೋಪ್ಯ, ಸಾಲೋಕ್ಯ, ಸಾನ್ನಿಧ್ಯ, ಸಾಯುಜ್ಯ, ಸಾರಿಷ್ಟಿ

ಬಂಡುಣಿ – ದುಂಬಿ

ಬದಿರ – ಕಿವುಡ

ಭಾಂಡಕಾರ – ಕುಂಬಾರ

ಭ್ರಮಾಮೂರು – ಅಜ್ಞಾನ, ಮಿಥ್ಯಾಜ್ಞಾನ, ವಿಪರೀತಜ್ಞಾನ

ಭೋಗಿಶಯನ – ಸರ್ಪಶಯನ

ಮೊರನೂರು – ಶೂರ್ಪಾಲಾಯ

ಮನ್ಯು – ಕೋಪ

ಯಾತುಧಾನರು– ರಾಕ್ಷಸರು

ವನ – ನೀರು, ಕಾಡು, ಸಜ್ಜನರು

ವಪುಷ – ದೇಹ

ವಾರಾಶಿ – ಸಮುದ್ರ

ವ್ಯಾಳ – ಸರ್ಪ

ವಿಹಗ – ಗರುಡ

ಶಂಪಲಿಯಪುರ– ಕೈಲಾಸ

ಶೀತಾಂಶು–

ಮಂಡಲ – ಚಂದ್ರಮಂಡಲ

ಶೂರ್ಪಕರ್ಣ – ಮೊರದಂತೆ ಕಿವಿಯುಳ್ಳವ, ಗಣಪತಿ

ಸಿತಗಿರಿ – ಬಿಳಿಗಿರಿ

ಸಿಂಧುಪತಿ – ವರುಣ

ಸುರಪ – ಇಂದ್ರ

ಸೂರಿಗಮ್ಯ – ಜ್ಞಾನಗಮ್ಯ

ಹರಣ – ಪ್ರಾಣ

ಹಾಟಕ – ಬಂಗಾರ

ಕ್ಷಮೆ – ಭೂದೇವಿ

ಕ್ಷಿತಿಪ – ರಾಜ

ಕ್ಷಿತಿ ಅಮರರು – ಬ್ರಾಹ್ಮಣ

ಅನುಬಂಧ - ೨

ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

ಕೀರ್ತನೆ ೩೩೮ ರಿಂದ ೩೪೧

ಎಲ್ಲ ಯತಿಗಳಿಗೂ ಮಾರ್ಗದರ್ಶಕರಾಗಿರುವ ಬೋಧಕರಾಗಿರುವ ವೇದ ವ್ಯಾಸರನ್ನು ಕುರಿತು ಹಾಡಿರುವ ಕೃತಿಗಳು. ದ್ವೀಪದಲ್ಲಿ ಜನಿಸಿ ದ್ವೈಪಾಯನ ಎಂದು ಕರೆಸಿ ವೇದಗಳನ್ನು ವಿಭಾಗ ಮಾಡುವ ಮೂಲಕ ವೇದವ್ಯಾಸರಾಗಿ ಬದರಿ ಕ್ಷೇತ್ರದಲ್ಲಿ ನೆಲೆಸಿ ಬಾದರಾಯಣರು ಎಂಬುದಾಗಿ ಕರೆಸಿಕೊಂಡಿರುವವರು ಇವರು. ಬದರಿಕ್ಷೇತ್ರದ ವರ್ಣನೆಯು ಈ ಕೃತಿಗಳಲ್ಲಿದೆ.

ಕೀರ್ತನೆ ೩೪೨ ರಿಂದ ೩೪೪

ಯತಿ ಪರಂಪರೆಗೆ ಅಗ್ರೇಸರರಾದ ಮಧ್ವಾಚಾರ್ಯರನ್ನು ಕುರಿತು ಮಾಡಿರುವ ಕೃತಿಗಳು. ವಾಯುದೇವರ ಅಂಶದಿಂದ ಬಂದಿರುವವರು. ಇವರ ಜೀವನ, ರೂಪ, ಗುಣ, ಮಹಿಮೆ, ಕೃತಿ ಪರಿಚಯ ಎಲ್ಲವೂ ಅಷ್ಟೋತ್ತರ ನಾಮಾವಳಿ ಇದರಲ್ಲಿದೆ. ನಿಂದಾಸ್ತುತಿಯಿಂದಲೂ ಸಹ ಆಚಾರ್ಯರನ್ನು ಸ್ತುತಿಸಿದ್ದಾರೆ.

ಕೀರ್ತನೆ ೩೪೫

ಇದು ಆಚಾರ್ಯರ ನೇರ ಶಿಷ್ಯರಾದ ಶ್ರೀ ಮಾಧವತೀರ್ಥರನ್ನು ಕುರಿತ ಸ್ತೋತ್ರ. ಮಣೂರು ಭೀಮಾನದಿ ತೀರದಲ್ಲಿ ಇವರ ಬೃಂದಾವನ ಇದೆ.

೩೪೬ ರಿಂದ ೩೫೪

ಇಂದ್ರಾಂಶ ಸಂಭೂತರಾಗಿ ಕಾಗಿಣೆ ತೀರದಲ್ಲಿ ನೆಲೆಸಿರುವ ಶ್ರೀ ಜಯ ತೀರ್ಥರ ಸ್ತುತಿ. ಧೋಂಡೋ ರಘುನಾಥ ಭೂಪಾಲ ಎಂಬ ಶಸ್ತ್ರ ಪ್ರವೀಣ ಅಕ್ಷೋಭ್ಯತೀರ್ಥರಿಂದ ಸನ್ಯಾಸ ಸ್ವೀಕರಿಸಿ ಶಾಸ್ತ್ರಪ್ರವೀಣನೂ ಆದ ಆಚಾರ್ಯರ ಗ್ರಂಥಗಳಿಗೆ ಟೀಕೆಯನ್ನು ಬರೆದು ಟೀಕಾಚಾರ್ಯರೆಂದು ಪ್ರಸಿದ್ಧಿ ಹೊಂದಿದವರು ಇವರು.

ಕೀರ್ತನೆ ೩೫೫

ಬ್ರಹ್ಮಣ್ಯತೀರ್ಥರ ಗುರುಗಳಾದ ಪುರುಷೋತ್ತಮ ತೀರ್ಥರನ್ನು ಕುರಿತು ಮಾಡಿರುವ ಕೃತಿ ಇದಾಗಿದೆ. ಇವರು ಗೃಹಾಪ್ರವೇಶವನ್ನು ಮಾಡಿ ಇಂದಿಗೂ ತಪಸ್ಸು ಮಾಡುತ್ತಿದ್ದಾರೆ ಎಂದು ಪ್ರತೀತಿ. ಇವರಿಗೆ ಬೃಂದಾವನವಿಲ್ಲ.

ಕೀರ್ತನೆ ೩೫೬ ರಿಂದ ೩೫೯

ಶ್ರೀ ಪಾದರಾಜರ ಗುರುಗಳೆನಿಸಿ ಸೂರ್ಯಾಂಶ ಸಂಭೂತರಾಗಿ ಅಬ್ಬೂರಿ ನಲ್ಲಿ ನೆಲೆಸಿರುವ ಬ್ರಹ್ಮಣ್ಯ ತೀರ್ಥರನ್ನು ಕುರಿತು ಮಾಡಿರುವ ಕೃತಿಗಳು. ಕಾಳೀಯರಮಣ = ಭಾರತೀರಮಣ

ಜ್ಞಾನಮಂಟಪ – ಅಬ್ಬೂರಿನ ಇನ್ನೊಂದು ಹೆಸರು.

ಕೀರ್ತನೆ ೩೬೦ ರಿಂದ ೩೬೨

ಮುಳಬಾಗಿಲಿನಲ್ಲಿ ನೆಲೆಸಿರುವ ಶ್ರೀ ಶ್ರೀಪಾದರಾಯರನ್ನು ಕುರಿತು ಮಾಡಿರುವ ಕೃತಿ. ('ಉದರ ಪಾದದ ಶೈಲ ಸದನಕ್ಕ ಪುರಿ ಮೂಡಲ ಕದವಾಗಿ ಮೆರೆವ ಎಂದು ದಾಸರು ಪ್ರಯೋಗ ಮಾಡಿದ್ದಾರೆ. ಎಂದರೆ ಹೊಟ್ಟೆಯನ್ನು ಪಾದವಾಗಿ ಮಾಡಿಕೊಂಡು ಸರಿಯುವ ಶೇಷ, ಶೈಲ. ಎಂದರೆ ಗಿರಿ ಶೇಷಗಿರಿ ಎಂದರೆ ತಿರುಪತಿಗೆ ಪೂರ್ವದಿಕ್ಕಿನ ಬಾಗಿಲು ಮೂಡಲ ಬಾಗಿಲು ಎಂಬ ಪ್ರಯೋಗ ತುಂಬಾ ಅಪೂರ್ವವಾಗಿದೆ. ರಂಗ ವಿಠಲನ ಉಪಾಸನೆಯನ್ನು ಮಾಡಿ ಸುಖ ಪ್ರಾರಬ್ಧದಲ್ಲಿ ಜೀವನವನ್ನು ಕಳೆದು ವಾಗ್ವಜ್ರ ಗ್ರಂಥ ವಿರಚಿಸಿ ಮೆರೆದಿರುವವರು ಇವರು.

ಕೀರ್ತನೆ ೩೬೩ ರಿಂದ ೩೭೧

ಪ್ರಹ್ಲಾದ ರಾಜರ ಅಂಶ ಸಂಭೂತರೆಂದೆನಿಸಿ ಬನ್ನೂರಿನಲ್ಲಿ ರಾಮಾಚಾರ್ಯರ ಪತ್ನಿಯಲ್ಲಿ ಬ್ರಹ್ಮಣ್ಯತೀರ್ಥರ ಅನುಗ್ರಹದಿಂದ ಭೂಸ್ಪರ್ಶವಿಲ್ಲದೆ ಜನಿಸಿ ಪುರುಷೋತ್ತಮ ತೀರ್ಥರ ಕರಗಳಿಂದ ಪೋಷಿತರಾಗಿ ವ್ಯಾಸತೀರ್ಥರು ಎಂದು ಸನ್ಯಸ್ಥರಾಗಿ ಶ್ರೀ ಶ್ರೀಪಾದರಾಜರ ಬಳಿ ವ್ಯಾಸಂಗ ಮಾಡಿದವರು ಇವರು. ಶ್ರೀ ಕೃಷ್ಣನ ನರ್ತನವನ್ನು ನೋಡಿ ಕೃಷ್ಣದೇವ ರಾಯನ ಕುಹುಯೋಗವನ್ನು ಪರಿಹಾರ ಮಾಡಿ ರಾಜಗುರುಗಳಾಗಿ ಮೆರೆದವರು. ಸಿಂಹಾಸನವನ್ನೇರಿ ವ್ಯಾಸರಾಜರೆಂದೆನಿಸಿದವರು ಇವರು. ತಿರುಪತಿ ತಿಮ್ಮಪ್ಪನನ್ನು ಹನ್ನೆರಡು ವರ್ಷಗಳ ಕಾಲ ಅರ್ಚಿಸಿ ಪುರಂದರದಾಸರಿಗೆ 'ಪುರಂದರ ವಿಠಲ' ಎಂಬ ಅಂಕಿತೋಪದೇಶ ಮಾಡುವ ಮೂಲಕ ದಾಸ ಕೂಟ ಸ್ಥಾಪಿಸಿದವರು. ೭೩೨ ಪ್ರಾಣದೇವರನ್ನು ಪ್ರತಿಷ್ಠಾಪಿಸಿ ಪೂಜಿಸಿ ನವ ವೃಂದಾವನದಲ್ಲಿ

ಬೃಂದಾವನಸ್ಥರಾಗಿರುವರು ಇವರು. ಈ ಎಲ್ಲ ಅಂಶಗಳು ದಾಸರಾಯರ ಈ ಕೃತಿಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಲ್ಪಟ್ಟಿದೆ.

ಕೀರ್ತನೆ ೩೭೨ ರಿಂದ ೩೮೬

ಸೋದಾ ಕ್ಷೇತ್ರದಲ್ಲಿ ವಿರಾಜ ಮಾನರಾಗಿರುವ ಶ್ರೀವಾದಿರಾಜ ತೀರ್ಥ ಶ್ರೀ ಪಾದಂಗಳವರನ್ನು ಸುಮಾರು ೧೫ ಕೀರ್ತನೆಯಲ್ಲಿ ಸ್ತುತಿಸಿದ್ದಾರೆ. ಋಜು ಗಣಸ್ಥರಲ್ಲಿ ೩ನೇಯವರಾದ ಲಾತವ್ಯರು ಇವರು. ರುಕ್ಮಿಣಿ ದೇವಿಯ ಕರದಿಂದ ಪತ್ರವನ್ನು ತೆಗೆದುಕೊಂಡು ಹೋಗಿ ಶ್ರೀ ಕೃಷ್ಣನಿಗೆ ಅರ್ಪಿಸಿದವರು, ಮುಂದಿನ ವಾಯುದೇವರ ಪದವಿಗೆ ಬರುವವರು. ಇವರ ಜೀವನ, ಮಹಿಮೆ, ಕೃತಿ ಪರಿಚಯ ಇವುಗಳನ್ನು ಈ ಕೃತಿಗಳಲ್ಲಿ ಕಾಣ ಬಹುದಾಗಿದೆ.

ಕೀರ್ತನೆ ೩೮೭ ರಿಂದ ೩೮೮

ಭಾವಬೋಧಕಾರರು ಎಂದು ಪ್ರಸಿದ್ಧರಾದ ಶ್ರೀ ರಘೋತ್ತಮ ತೀರ್ಥರನ್ನು ಕುರಿತು ಮಾಡಿರುವ ಸ್ತೋತ್ರ. ತಿರಕೊಯಿಲ್ಲೂರಿನಲ್ಲಿ ಇವರ ಬೃಂದಾವನವಿದೆ. ರಘುವರ್ಯ ತೀರ್ಥರ ಕರ ಕಮಲ ಸಂಜಾತರು.

ಕೀರ್ತನೆ ೩೮೯

ಪೆನುಗೊಂಡೆಯಲ್ಲಿರುವ ಶ್ರೀ ವೇದವ್ಯಾಸ ತೀರ್ಥರನ್ನು ಕುರಿತು ಮಾಡಿರುವ ಸ್ತುತಿ. ವಾಮನ ನದಿ ತೀರದಲ್ಲಿ ನೆಲೆಸಿರುವವರು. ಇವರಾಗಿರುವುದರಿಂದ ಇಂದ್ರಗ ವರಜ ನಾಮ ಮಂದ ವಾಹಿನಿ ತಟದಿ ಎಂದು ಅಪೂರ್ವ ಪ್ರಯೋಗವನ್ನು ಮಾಡಿರುತ್ತಾರೆ. ಇವರ ಬ್ರಹ್ಮಚರ್ಯವನ್ನು ಪರೀಕ್ಷಿಸಲು ಇವರು ಹಾಕಿ ಕೊಂಡಿದ್ದ ಕೌಪೀನವನ್ನು ಬೆಂಕಿಗೆ ಹಾಕಿದರೂ ಸುಡಲಿಲ್ಲ.

ಕೀರ್ತನೆ ೩೯೦ ರಿಂದ ೪೦೩

ಮಂತ್ರಾಲಯ ಪ್ರಭುಗಳಾದ ಶ್ರೀ ಶ್ರೀ ರಾಘವೇಂದ್ರ ಗುರುಸಾರ್ವಭೌಮರನ್ನು ಕುರಿತು ಮಾಡಿರುವ ಕೃತಿಗಳು. ಶ್ರೀ ರಾಯರನ್ನು ಬಾರೋ ಬಾರೋ ಎಂದು ಕರೆದೊಯ್ಯುವುದರಿಂದ ಮೊದಲ್ಗೊಂಡು ಅವರ ಮಹಿಮೆಗಳು, ಕೃತಿಗಳು, ಇವುಗಳನ್ನೂ ತಿಳಿಸುವುದರ ಜೊತೆಗೆ ಅವರ ಗುಣಗಳನ್ನು ಕೊಂಡಾಡುತ, ಕ್ಷಮಾಸಮುದ್ರನೆಂದು ಕರೆದಿದ್ದಾರೆ. ರಾಘವೇಂದ್ರಸ್ವಾಮಿಗಳು ನೆಲೆಸಿರುವ ತುಂಗಾನದಿಯನ್ನು ವರಹಜೆ ಎಂದು ಕರೆದಿದ್ದಾರೆ. ಶ್ರೀ ರಾಘವೇಂದ್ರರ ಪೂರ್ವ ಅವತಾರಗಳಾದ ಪ್ರಹ್ಲಾದ, ವಿಭೀಷಣ, ಬಾಹ್ಲೀಕ, ವ್ಯಾಸರಾಜ ಇವರುಗಳನ್ನೂ ಕುರಿತು ಸಹ ಸ್ತೋತ್ರ ಮಾಡಿರುತ್ತಾರೆ.

ಕೀರ್ತನೆ ೪೦೪

ತಿರುಮಕೂಡಲಿನಲ್ಲಿ ವಿರಾಜಮಾನರಾಗಿರುವ ವ್ಯಾಸರಾಜರ ಮಠದ ಪೀಳಿಗೆಯಲ್ಲಿ ವ್ಯಾಸರಾಜರ ನಂತರ ಹತ್ತನೆಯವರಾಗಿ ಬಂದ ರಘುನಾಥ ತೀರ್ಥರ ಜೀವನ ಕುರಿತ ಕೃತಿ ಇದಾಗಿದೆ. ಚಂದ್ರಿಕಾಚಾರ್ಯರು ರಚಿಸಿದ ಚಂದ್ರಿಕೆ ಗ್ರಂಥದ ಎರಡು ಅಧ್ಯಾಯಗಳನ್ನು ಇವರು ಪೂರ್ಣ ಮಾಡಿದ ಕಾರಣ ಶೇಷ ಚಂದ್ರಿಕಾಚಾರ್ಯರೆಂದು ಪ್ರಸಿದ್ಧರಾಗಿದ್ದಾರೆ.

ಕೀರ್ತನೆ ೪೦೫ ರಿಂದ ೪೧೦

ಉತ್ತರಾದಿ ಮಠದ ಪರಂಪರೆಯಲ್ಲಿ ಬಂದ ಅಪರೋಕ್ಷ ಜ್ಞಾನಿಗಳ ಜೀವನ, ಮಹಿಮೆ, ಕೃತಿ ಇವುಗಳನ್ನೂ ತಿಳಿಸುವ ಕೃತಿಗಳು.

ಕೀರ್ತನೆ ೪೧೧ ರಿಂದ ೪೧೨

ಶ್ರೀ ಮಧ್ಭಾಗವತ ಸಾರೋದ್ಧಾರ ಕರ್ತರು ಎಂದು ಪ್ರಸಿದ್ಧರಾಗಿ ಅಡವಿ ಆಚಾರ್ಯರು ಎಂಬುದಾಗಿ ಜನಜನಿತರಾದ ಶ್ರೀ ಶ್ರೀ ೧೦೮ ವಿಷ್ಣು ತೀರ್ಥರ ಜೀವನ ಕಥನ.

ಕೀರ್ತನೆ ೪೧೩ ರಿಂದ ೪೧೪

ಸೋದೆ ಮಠದ ಯತಿವರೇಣ್ಯ ಶ್ರೀ ಶ್ರೀ ೧೦೮ ವಿಶ್ವಪ್ರಿಯತೀರ್ಥರನ್ನು ಕುರಿತು ಹಾಡಿರುವ ಸ್ತುತಿ. ಸೋದೆಯಲ್ಲಿ ವಾದಿರಾಜರ ಬೃಂದಾವನದ ಬಳಿ ಬಂದು ಸರ್ವಮೂಲ ಗ್ರಂಥಗಳ ಪಠನೆ ಮಾಡಿ ಸೇವೆ ಮಾಡಿದ ಇವರಿಗೆ ಬೃಂದಾವನದಿಂದ ಮಂತ್ರಾಕ್ಷತೆ ತಲೆಯ ಮೇಲೆ ಬಿತ್ತು. ಬೃಂದಾವನದಿಂದ ಜ್ಞಾನಬಂದಿತಾದ ಕಾರಣ ವೃಂದಾವನಾಚಾರ್ಯ ಎಂಬ ಹೆಸರು ಬಂದಿತು. ಸ್ವಪ್ನ ವೃಂದಾವನಾಖ್ಯಾನವನ್ನು ೨೨ ಅಧ್ಯಾಯಗಳನ್ನಾಗಿ ವಿಂಗಡಿಸಿರುವರು ಇವರು.

ಕೀರ್ತನೆ ೪೧೫

ಉತ್ತರಾದಿ ಮಠದ ಶ್ರೀ ಶ್ರೀ ೧೦೮ ಸತ್ಯಧರ್ಮ ಶ್ರೀ ಪಾದಂಗಳವರು ಇವರು ರುದ್ರದೇವರ ´ಅಂಶ – ಇವರ ವೃಂದಾವನ ಹೊಳೆಹೊನ್ನೂರಿನಲ್ಲಿ ಭದ್ರಾನದಿಯ ದಂಡೆಯ ಮೇಲಿದೆ. ಕಾದ್ರವೆ ಎನ್ನ ಪದ = ಶೇಷದೇವರ ಪದವಿ. ಮಾದ್ರವೇಯಾಗ್ರಜ = ಅರ್ಜುನ.

ಕೀರ್ತನೆ ೪೧೬

ಅಬ್ಬೂರು ವ್ಯಾಸರಾಜ ಮಠದ ಶ್ರೀ ಶ್ರೀ ೧೦೮ ಲಕ್ಷ್ಮೀಪ್ರಿಯ ತೀರ್ಥ

ಶ್ರೀ ಪಾದಂಗಳವರು ಜೀವನ ಕಥನ. ವಾರ್ಧಿಕ ಷಟ್ಪದಿಯಲ್ಲಿ ೧೯ ನುಡಿಗಳಲ್ಲಿ ಮೂಡಿಬಂದಿದೆ.

ಕೀರ್ತನೆ ೪೧೭ ರಿಂದ ೪೨೦

ಉತ್ತರಾದಿ ಮಠದ ಯತಿಗಳಾದ ಸತ್ಯ ಪ್ರಮೋದ ತೀರ್ಥರು ಹಾಗೂ ಶ್ರೀ ಶ್ರೀ ೧೦೮ ಸತ್ಯಧ್ಯಾನ ತೀರ್ಥರು ಇವರುಗಳನ್ನು ಕುರಿತು ಮಾಡಿರುವ ಸ್ತುತಿ. ಈ ಕೃತಿಗಳನ್ನೆ ಆಯಾಯ ಯತಿಗಳು ಜೀವನ, ಅವರು ಮಾಡಿದ ಸಮಾಜ ಸೇವೆ ಪ್ರತಿಬಿಂಬಿಸಿವೆ.

ಕೀರ್ತನೆ ೪೨೧

ಉತ್ತರಾದಿ ಮಠದ ಗುರು ಪರಂಪರೆಯನ್ನು ಉದಯರಾಗದ ಧಾಟಿಯಲ್ಲಿ ಚಿತ್ರಿಸಿರುವ ಅಪೂರ್ವ ಕೃತಿ.

ಕೀರ್ತನೆ ೪೨೨ ರಿಂದ ೪೨೩

ಪ್ರೊದಟೂರಿನಲ್ಲಿ ಶ್ರೀ ಲಕ್ಷ್ಮೀವೇಣುಗೋಪಾಲ ಪ್ರತಿಷ್ಠಾಪನೆ ಸಂದರ್ಭದಲ್ಲಿ ಪಲಿಮಾರು ಮಠದ ಶ್ರೀ ವಿದ್ಯಮಾನ್ಯ ತೀರ್ಥರು ಪೇಜಾವರ ಮಠದ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಭಾಗವಹಿಸಲು ಆಗಮಿಸಿದಾಗ ಹಾಡಿದ ಸ್ವಾಗತ ಗೀತೆ.

ಕೀರ್ತನೆ ೪೨೪

ಅಷ್ಟಮಠದ ಯತಿಗಳಲ್ಲಿ ಒಬ್ಬರಾದ ಸೋದೆ ವಾದಿರಾಜ ಮಠದ ಈಗಿನ ಯತಿಗಳಾದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರನ್ನು ಸ್ವಾಗತ ಮಾಡುವಾಗ ಹಾಡಿದ ಕವನಗಳು. ಶ್ರೀ ವಿಶ್ವೋತ್ತಮ ತೀರ್ಥರು ಬಂದಿರುವ ಪರಂಪರೆ ಆಚಾರ್ಯರ ತಮ್ಮಂದಿರಿಂದ ಬಂದ ಪರಂಪರೆ. ಆದ್ದರಿಂದ ದಶಮತಿ ಭ್ರಾತೃ ವಂಶ ಸಂಭೂತ ಎಂದಿದ್ದಾರೆ. ಕಾಣಿಯೂರು ಮಠದ ಯತಿಗಳ ಬಳಿ ನ್ಯಾಯ ಸುಧಾ ಮಂಗಳದಲ್ಲಿ ಉಡುಪಿಯಲ್ಲಿ ನೆಲೆಸಿದಾಗ ದಾಸರು ಭಾಗವಹಿಸಿದ್ದರು. ಅದರ ಸೂಚನೆಯನ್ನು ಇಲ್ಲಿ ಕೊಟ್ಟಿರುತ್ತಾರೆ.

ಕೀರ್ತನೆ ೪೨೬ ರಿಂದ ೪೩೪

ಕರ್ಣಾಟಕ ಸಂಗೀತ ಪಿತಾಮಹರು ಎಂಬುದಾಗಿ ಖ್ಯಾತರಾದ ನಾರದಾಂಶ ಸಂಭೂತರಾದ ಶ್ರೀ ಪುರಂದರದಾಸರನ್ನು ಕುರಿತು ಮಾಡಿರುವ ಕೃತಿಗಳು. ದಾಸರಾಯರ ಜೀವನವನ್ನ ಚಿತ್ರಿಸುವ "ದಾಸರಾಯ ಪಾದ ವನಜ ಸೂಸಿ ಭಜಿಸಿರೋ" ಎಂಬ

ಭಜನೆಯು ಇದರಲ್ಲಿದೆ. "ವಾಸವಾನಾಮಕ ದಾಸರು" ಎಂದು ಹೇಳುವಲ್ಲಿ ವಾಸವ ಎಂದರೆ ಇಂದ್ರ - ಪುರಂದರ ಎಂಬ ಅಪೂರ್ವ ಪ್ರಯೋಗಗಳು ಈ ಕೃತಿಗಳಲ್ಲಿವೆ.

ಕೀರ್ತನೆ ೪೩೫ ರಿಂದ ೪೪೫

ಚೀಕಲಪರಿವಿಯಲ್ಲಿ ಜನಿಸಿ ಕೂಸಿ ಮಗ ದಾಸನೆಂದೆನಿಸಿ ಬಡತನದ ಬವಣೆಯಲ್ಲಿ ಬೆಂದು ಮುಂದೆ ವಿಜಯ ದಾಸರಾಗಿ ಕವನ ಕೀರ್ತನೆ ಬರೆಯುತ್ತ ಪುರಂದರೋಪನಿಷತ್ ಟೀಕಾರಾಯರೆಂದೆನಿಸಿದ ಸುಳಾದಿ ದಾಸರು ಇವರು. ಇವರ ಜೀವನ, ಮಹಿಮೆ, ಸ್ವರೂಪ ಇವೆಲ್ಲವನ್ನೂ ಈ ಕೃತಿಗಳಲ್ಲಿ ಅರುಹಿದ್ದಾರೆ.

ಕೀರ್ತನೆ ೪೪೬ ರಿಂದ ೪೫೨

ರಾಯಚೂರು ಜಿಲ್ಲೆಯ ಮೊದಲಕಲ್ಲು ಗ್ರಾಮದಲ್ಲಿ ಜನಿಸಿ ಭಾಗಣ್ಣನೆಂದು ಕರೆಸಿ ಗಾಯಿತ್ರೀ ಮಂತ್ರ ಜಪ ಸಿದ್ಧರಾಗಿ ಮುಂದೆ ವಿಜಯದಾಸರಿಂದ ಗೋಪಾಲವಿಠ್ಠಲ ಎಂಬ ಅಂಕಿತ ಪೊಂದಿದವರು. ಇವರ ಜೀವನ, ಕೃತಿ, ಮಹಿಮೆ ಇವುಗಳನ್ನು ಕುರಿತು ಮಾಡಿರುವ ವಿಶೇಷ ಕೃತಿಗಳು ಇವಾಗಿದೆ.

ಕೀರ್ತನೆ ೪೫೩ ರಿಂದ ೪೫೮

ಶ್ರೀ ವಿಜಯ ದಾಸರ ಸಾಕು ಮಗನಾಗಿ ಮೋಹನ ವಿಠ್ಠಲ ಎಂಬ ಅಂಕಿತ ಪಡೆದು ಕೋಲು ಹಾಡು ಎಂಬ ಅಪೂರ್ವ ಕೃತಿಯನ್ನು ರಚಿಸಿರುವವರಿವರು. ಮಾಂಡವ್ಯ ಋಷಿಗಳ ಅಂಶ ಸಂಭೂತರು. ವಿಜಯರಾಯರಿಂದ ಮತ್ತೆ ಬದುಕಿ ಬಂದವರು ಎಂಬ ವಿಚಾರಗಳು ಈ ಕೃತಿಗಳಲ್ಲಿದೆ.

ಕೀರ್ತನೆ ೪೫೯ ರಿಂದ ೪೬೪

ರಂಗವಲ್ಲಿ ದಾಸರು ಎಂದು ಪ್ರಸಿದ್ಧರಾದ ಹರಿ ಕಥಾಮೃತಸಾರ ವಕ್ತಾರ ಶ್ರೀ ಜಗನ್ನಾಥ ದಾಸರನ್ನು ಕುರಿತು ಮಾಡಿರುವ ಕೃತಿಗಳು.

ಕೀರ್ತನೆ ೪೬೫ ರಿಂದ ೪೭೩

ಶ್ರೀ ವಿಜಯದಾಸರ ಸತ್ ಪರಂಪರೆಯಲ್ಲಿ ಬಂದ ಶ್ರೀವರ ವಿಠಲದಾಸರು, ಮುದ್ದುಮೋಹನವಿಠಲದಾಸರು, ತಂದೆ ಮುದ್ದುಮೋಹನವಿಠಲದಾಸರು ಇವರುಗಳನ್ನು ಕುರಿತು ಮಾಡಿರುವ ಸ್ತೋತ್ರಗಳು. ತಂದೆ ಮುದ್ದುಮೋಹನ ದಾಸರು, ಗುರುಗೋವಿಂದ ದಾಸರ ಗುರುಗಳಾಗಿದ್ದವರು. ಅವರನ್ನು ಕುರಿತು, ಶ್ರೀಮದ್ಭಾಗವತದ ಗೋಪಿಗೀತ ಧಾಟಿಯಲ್ಲಿ ಮಾಡಿರುವ ಕೃತಿ "ನಮಾಮಿ ತಂದೆಯೆ" ತುಂಬ ಅಪೂರ್ವವಾದದ್ದು.

ಕೀರ್ತನೆ ೪೯೪ ರಿಂದ ೪೯೫

ಯತಿಕಕ್ಷೆ ಮತ್ತು ದಾಸಕಕ್ಷೆಯಲ್ಲಿ ಬರುವ ಎಲ್ಲ ಜ್ಞಾನಿಗಳಿಗೆ ಮಾಡಿರುವ ನಮಸ್ಕಾರ, ಸ್ಮರಣೆ ಇದಾಗಿದೆ.

ಕೀರ್ತನೆ ೪೯೪ ರಿಂದ ೭೪೮

ಅಂಕಿತನಾಮಗಳು : ಅಂಕಿತವಿಲ್ಲದ ದೇಹ ನಿಷಿದ್ಧ ಅಂಕಿತವಿಲ್ಲದ ಕಾಯ ಶೋಭಿಸದು ಎಂದು ದಾಸ ಶ್ರೇಷ್ಠರಾದ ಪುರಂದರದಾಸರು ಹೇಳಿದ್ದಾರೆ. ಯತ್ಯಾಶ್ರಮ ಸ್ವೀಕಾರ ಮಾಡಿದವರಿಗೆ ಗುರುಗಳಿಂದ ದತ್ತವಾಗುವ ನಾಮವು ಅಂಕಿತವೆಂದು ಎನಿಸುತ್ತದೆ. ಕೆಲವು ಯತಿಗಳು ತಮ್ಮ ಆರಾಧ್ಯ ಮೂರ್ತಿಯ ನಾಮದಲ್ಲಿ ದೇವರ ನಾಮಗಳನ್ನು ರಚಿಸಿದ್ದಾರೆ. ಶ್ರೀ ಪಾದರಾಜರು ರಂಗವಿಠಲ ಎಂಬುದಾಗಿ, ವಾದಿರಾಜರು ಹಯವದನ ಎಂಬುದಾಗಿ, ವ್ಯಾಸರಾಜರು ಶ್ರೀ ಕೃಷ್ಣ ಎಂಬುದಾಗಿ ತಮ್ಮ ಎಲ್ಲ ಕೃತಿಗಳನ್ನು ಅರ್ಪಣೆ ಮಾಡಿದ್ದಾರೆ. ನಮ್ಮ ಎಲ್ಲ ರೂಪ ಕ್ರಿಯೆಗಳನ್ನು ಪರಮಾತ್ಮನ ಅಧೀನ ಎಂದು ತಿಳಿದು ಮಮಕಾರ ರಹಿತರಾಗಿ ನಿಜದಾಸರಾಗಿ ಹರಿಯಲ್ಲಿ ಆತ್ಮ ಸಮರ್ಪಣವನ್ನು ತ್ರಿಕರಣ ಶುದ್ಧರಾಗಿ ಮಾಡುವುದೆ ಅಂಕಿತ, ವ್ಯಾಸರಾಜರು ಶ್ರೀನಿವಾಸನಾಯಕರಿಗೆ ಪುರಂದರ ವಿಠಲ ಎಂಬ ಅಂಕಿತವನ್ನು ನೀಡುವ ಮೂಲಕ ಅಂಕಿತ ಪ್ರಧಾನಕ್ಕೆ ಅಂಕುರಾರ್ಪಣ ಮಾಡಿದರು. ಗುರುಗಳು ಶಿಷ್ಯರ ಪರವಾಗಿ ಮಾಡುವ ಪ್ರಾರ್ಥನೆಯೂ ಹೌದು, ಸ್ತೋತ್ರವು ಹೌದು.

"The Ankitha is, the filterded essense of ಜನ್ಮಾಂತರ ಪುಣ್ಯ and is, an indication of the high stage of sadhana which the soul has attained. It is the passport to ಆಂತರಂಗಿಕ ಸಾಧನ is the souls persuit of ಪರಮಾತ್ಮ ತತ್ವ. It is the measure of ತಪಃ ಫಲ with guruji has endowed you it is the emblem of ಗುರ್ವನುಗ್ರಹ ಎಂದು ತಂದೆ ವೆಂಕಟೇಶ ವಿಠಲ ದಾಸರು ಹೇಳಿದ್ದಾರೆ.

ಗುರು ಗೋವಿಂದ ದಾಸರು ೨೫೬ ಜನರಿಗೆ ಅಂಕಿತ ಪ್ರದಾನವನ್ನು ಮಾಡಿ ಅಂಕಿತ ನಾಮಗಳನ್ನು ಉಪದೇಶಿಸಿದ್ದಾರೆ. ಪ್ರತಿಯೊಂದು ಅಂಕಿತ ನಾಮವು ವಿಠಲ ಎಂಬುದಾಗಿ ಕೊನೆಗೊಳ್ಳುವ ಭಗವಂತನ ಹೆಸರಾಗಿದೆ. ಎಲ್ಲವೂ ಪರಮಾತ್ಮನ ಮಹಿಮೆಗಳನ್ನು ವ್ಯಕ್ತಪಡಿಸುವುದಲ್ಲದೆ ಶಿಷ್ಯರ ಪರವಾಗಿ ಮಾಡಿರುವ ಸ್ತೋತ್ರವು ಆಗಿದೆ. ಶಿಷ್ಯರಲ್ಲದವರೂ ಸಹ ಈ ಅಂಕಿತನಾಮಗಳನ್ನು ಹೇಳಿಕೊಂಡಲ್ಲಿ ವಿಶೇಷ ಫಲವುಂಟು, ಕಾರಣ ಇವು ದೇವತಾ ಸ್ತುತಿಗಳು.

ಅನುಬಂಧ - ೩

ಸಹಾಯಕ ಸಾಹಿತ್ಯ

೧. ಶ್ರೀ ಗುರು ಗೋವಿಂದದಾಸರು, ಪರಿಮಳ ಗೆಳೆಯರ ಬಳಗ

೨. ಶ್ರೀ ಗುರು ಗೋವಿಂದ ವಿಠಲದಾಸರಿಂದ ಪ್ರಕಟಿತ ಸಮಗ್ರ ಕೃತಿಗಳು

೩. ಭಜನ ಕೌಸ್ತುಭ, ಹೆಚ್. ಎಸ್. ಶ್ರೀನಿವಾಸಮೂರ್ತಿ

೪. ಅಖಿಲಭಾರತ ಹರಿದಾಸ ಸಮ್ಮೇಳನದ ಸ್ಮರಣ ಸಂಚಿಕೆಗಳಲ್ಲಿ ಬಂದ ವಿವಿಧ ಲೇಖನಗಳು.

ಅನುಬಂಧ - ೪

ಕೀರ್ತನೆಗಳ ಅಕಾರಾದಿ

ಕ್ರಮ ಸಂಖ್ಯೆ.	ಕೀರ್ತನೆಯ ಮೊದಲ ಸಾಲು	ಕೀರ್ತನೆ ಸಂಖ್ಯೆ
ಅ		
೧.	ಅಂಜನಾಸುತವರದ ವಿಠಲ	೪೯೭
೨.	ಅಂತರಾತ್ಮಕವಿಠಲ	೪೯೮
೩.	ಅಕ್ರೂರವರದ ವಿಠಲ	೪೯೯
೪.	ಅಚ್ಯುತಾನಂತ ವಿಠಲ	೪೯೬
೫.	ಅನಂತ ಗಿರಿ ವಿಠಲ	೫೦೦
೬.	ಅನಂತ ಗುಣ ಪೂರ್ಣ ವಿಠಲ	೫೦೧
೭.	ಅನಂತಪದ್ಮನಾಭ ವಿಠಲ	೫೦೨
೮.	ಅಮಿತ ಮಹಿಮೋಪೇತ ವಿಠಲ	೫೦೫
೯.	ಅನಂತ ಶಯನ ವಿಠಲ	೫೦೩
೧೦.	ಅನಂತ ಹರಿ ವಿಠಲ	೫೦೪
೧೧.	ಅನಿಲ ಹೃತ್ಕುಮುದೇಂದು	೩೩೮
೧೨.	ಅಸಾಧಾರಣ ವಿಠಲ	೫೦೬
ಆ		
೧೩.	ಆನಂದ ಗಿರಿ ವಿಠಲ	೫೦೭
೧೪.	ಆನಂದ ಗಿರಿ ಪತಿ ವಿಠಲ	೫೦೮

ಕ್ರಮ ಸಂಖ್ಯೆ.	ಕೀರ್ತನೆಯ ಮೊದಲ ಸಾಲು	ಕೀರ್ತನೆ ಸಂಖ್ಯೆ
ದ		
೧೦೭.	ದಧಿ ವಾಮನ ವಿಠಲ	೫೫೯
೧೦೮.	ದಯದಿ ಎಮ್ಮನು ಸಲಹ ಬೇಕಯ್ಯ	೩೫೧
೧೦೯.	ದಯದಿ ಪಾಲಿಸೋ ವಾದಿರಾಜ ಗುರುವೇ	೩೭೪
೧೧೦.	ದಾಮೋದರ ವಿಠಲ	೫೬೧
೧೧೧.	ದಾಸ ಜನರ ಹೃತ್ತೋಷಿಪನೆ	೪೨೭
೧೧೨.	ದಾಸರ ಭಾಗ್ಯವಿದು ಮಾನವಿ	೪೫೮
೧೧೩.	ದಾಸರ ಭಾಗ್ಯವಿದು ತಂದೆ ಮುದ್ದು ಮೋಹನ	೪೮೫
೧೧೪.	ದಾಸರಾಯ ತಂದೆ ಮುದ್ದು ಮೋಹನ	೪೮೬
೧೧೫.	ದಾಸರಾಯರ ಪಾಡಿರೋ	~~೪೬೦~~ ೪೫೯
೧೧೫.	ದಾಸರಾಯ ಪಾದವನಜ	೪೨೮
೧೧೬.	ದಾಸರಿವರ ನೋಡಿರೋ	೪೩೬
೧೧೭.	ದಾಸವರದ ವಿಠಲ	೫೬೩
೧೧೮.	ದ್ವಾರಕನಾಥ ವಿಠಲ	೫೬೨
ಧ		
೧೧೯.	ಧಾಮ ಶೋಭಿತ ವಿಠಲ	೫೬೦
೧೨೦.	ಧೇನು ಪಾಲ ದಾಸಾರ್ಯ	೪೪೭
ನ		
೧೨೧.	ನಂಬಿದೆ ನಿನ್ನ ಪಾದ	೪೫೩
೧೨೨.	ನಮಾಮಿ ತಂದೆಯ	೪೮೭
೧೨೩.	ನಮಿಸುವೆನು ಜಗದ್ಗುರುಗಳ	೩೪೨

ಪ

ಶ

ಕ್ರಮ ಸಂಖ್ಯೆ.	ಕೀರ್ತನೆಯ ಮೊದಲ ಸಾಲು	ಕೀರ್ತನೆ ಸಂಖ್ಯೆ
೪೦೨.	ಹರಿ ಗೋವಿಂದ ವಿಠಲ	೭೩೯
೪೦೩.	ಹರಿ ನಾರಾಯಣ ವಿಠಲ	೭೪೩
೪೦೪.	ಹರಿ ವಿಠಲ	೭೪೮
೪೦೫.	ಹರಿ ತ್ರಿವಿಕ್ರಮ ವ್ಯಾಸ ವಿಠಲ	೭೪೦
೪೦೬.	ಹನುಮಂತ ವಿಠಲ	೭೪೧
೪೦೭.	ಹನುಮ ವಂದಿತ ವಿಠಲ	೭೪೨

ಕ್ಷ

೪೦೮.	ಕ್ಷಮಾಸಮುದ್ರನೆ ನಮಾಮಿ	೪೦೩

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು